
ಲೋಹಿಯಾ
ವ್ಯಕ್ತಿ-ವಿಚಾರ-ವಿಮರ್ಶೆ

ಸಂಪಾದಕರು
ಡಿ.ಎಸ್. ನಾಗಭೂಷಣ





ಲೋಹಿಯಾ ಶತಮಾನೋತ್ಸವ ಮಾಲಿಕೆ - ೧೪

ಲೋಹಿಯಾ

ವ್ಯಕ್ತಿ–ವಿಚಾರ–ವಿಮರ್ಶೆ

(ಶತಮಾನೋತ್ಸವ ವಿಶೇಷ ಸಂಪುಟ)

ಸಂಪಾದಕರು

ಡಿ.ಎಸ್. ನಾಗಭೂಷಣ

ಲೋಹಿಯಾ ಪ್ರಕಾಶನ
ಬಳ್ಳಾರಿ

LOHIA: ***VYAKTHI-VICHARA- VIMARSHE,***

A Centenary special Volume on Dr. Ram Manohar Lohia,

Edited by: D.S. Nagabhushana, HIG-5
'NUDI', Kallalli Extention, Vinobanagara
SHIVAMOGGA-577204, Ph: 08182-248574, Mob: 94492 42284

Published by: **LOHIA PRAKASHANA**
'Kshithija', Kappagallu Road, Gandhinagara, Bellary-583103
Ph. : 08392-257412

First impression: 1980, Revised Edition: 2010,

ISBN: 978-81-87731-08-5

Pages : 288 Price Rs. 150/-

ಲೋಹಿಯಾ: ವ್ಯಕ್ತಿ–ವಿಚಾರ–ವಿಮರ್ಶೆ

ಮೊದಲನೇ ಮುದ್ರಣ : ೧೯೮೦, ಪರಿಷ್ಕೃತ ಆವೃತ್ತಿ: ೨೦೧೦
ಪುಟಗಳು : ೨೮೮, ಬೆಲೆ : ರೂ. ೧೫೦

ಮುಖಪುಟ, ಪುಸ್ತಕ ವಿನ್ಯಾಸ : ಮಂಜುನಾಥ್‌ಲತಾ
ಪ್ರಕಾಶನ: ಲೋಹಿಯಾ ಪ್ರಕಾಶನ
'ಕ್ಷಿತಿಜ', ಕಪ್ಪಗಲ್ಲು ರಸ್ತೆ,
ಗಾಂಧೀನಗರ, ಬಳ್ಳಾರಿ–೫೮೩೧೦೩
ಮುದ್ರಕರು, ವಿಶ್ವಾಸ್ ಪ್ರಿಂಟ್ಸ್, ಬೆಂಗಳೂರು

ತಮ್ಮ ಸ್ನೇಹಪೂರ್ಣ ಸಹಯೋಗ
ಹಾಗೂ ನಿಸ್ಸಂಕೋಚ ಹತೋಟಿಯ ಮೂಲಕ
ಲೋಹಿಯಾರ ಬಾಳನ್ನು ಹಸನುಗೊಳಿಸಿದ
ರಮಾಮಿತ್ರ
ಅವರಿಗೆ ಈ ವಿಶೇಷಾಂಕ ಅರ್ಪಿತ

Truth is Known from an aspect or an angle. that is not to say that truth is partial. Infact, partial truth is, strictly speaking an error of expression. Truth is either whole or not all

-Dr. RamManohar Lohia

(Preface to Gandhi, Marx and Socialism)

ಸಂಪಾದಕರ ಮಾತುಗಳು

ಮೂರು ದಶಕಗಳ ನಂತರ ಈ ಪುಸ್ತಕ ಮತ್ತಷ್ಟು ಮೈದುಂಬಿಕೊಂಡು ಹೊರ ಬರುತ್ತಿದೆ. ಇದು ಮೂಲತಃ 'ಸಂಕ್ರಮಣ' ಪತ್ರಿಕೆಗಾಗಿ ೧೯೮೦ರಲ್ಲಿ ನಾನು ಸಂಪಾದಿಸಿಕೊಟ್ಟಿದ್ದ 'ಲೋಹಿಯಾ ವಿಶೇಷಾಂಕ'ದ ಪರಿಷ್ಕೃತ ಮತ್ತು ವಿಸ್ತೃತ ರೂಪವೇ ಆಗಿದೆ. ಸಮಾಜವಾದ, ಸಮಾಜವಾದಿ ರಾಜಕಾರಣ ಜನರಲ್ಲಿ ಇನ್ನೂ ಉತ್ಸಾಹವನ್ನು ಹುಟ್ಟಿಸುವಂತಿದ್ದ, ಅವುಗಳ ಸಾಧ್ಯತೆಗಳು ಇನ್ನೂ ಜೀವಂತವಾಗಿದ್ದ ಕಾಲವದು. ಲೋಹಿಯಾ ನಿಧನರಾಗಿ ಹತ್ತು–ಹನ್ನೆರಡು ವರ್ಷಗಳಷ್ಟೇ ಕಳೆದಿದ್ದವು. ಅವರ ವ್ಯಕ್ತಿತ್ವದ, ರಾಜಕಾರಣದ ಛಾಪು ಇನ್ನೂ ದೇಶದ ಮೇಲಿತ್ತು. ಆಗ ತಾನೇ, ಹೊಸ ಭರವಸೆ, ಸಂಭ್ರಮ ಮತ್ತು ಹುರುಪುಗಳೊಡನೆ ಕಾರ್ಯಾರಂಭ ಮಾಡಿದ್ದ ಲೋಹಿಯಾ ಕನಸಿನ ಮೊದಲ ಕಾಂಗ್ರೇಸ್ಸೇತರ ಸರ್ಕಾರ ಅಷ್ಟೇ ಹಠಾತ್ತನೆ ಕುಸಿದು ಬಿದ್ದಿತ್ತು. ಈ ಕುಸಿತದ ಹಿಂದೆ ಸಮಾಜವಾದಿಗಳ ತಾತ್ವಿಕ ರಾಜಕಾರಣದ ಆವೇಶವಿತ್ತು. ತಮ್ಮ ತಾತ್ವಿಕ ವಿಶಿಷ್ಟತೆ, ಅನನ್ಯತೆ ಮತ್ತು ಕಸುವುಗಳು ಜನತಾ ಪಕ್ಷವೆಂಬ ಸಡಿಲ ರಾಜಕೀಯ ಹೊಂದಾಣಿಕೆಯ ಒಕ್ಕೂಟದಲ್ಲಿ ಕಳೆದು ಹೋಗುವುದೆಂಬ ಆತಂಕವಿತ್ತು. ಹಾಗಾಗಿ ಅವರಲ್ಲಿ ಅವನ್ನು ಮತ್ತೆ ಪುನರ್‌ಸ್ಥಾಪಿಸಿಕೊಳ್ಳುವ ತವಕವಿತ್ತು.

ಈ ಹಿನ್ನೆಲೆಯಲ್ಲೇ ನಾವು ಕೆಲವು ಜನ ೧೯೮೦ರ ಜೂನ್‌ನಲ್ಲಿ ಬೆಂಗಳೂರಿನಲ್ಲಿ ಕಿಷನ್ ಪಟ್ನಾಯಕ್ ಅವರ ಮಾರ್ಗದರ್ಶನದಲ್ಲಿ ಅಂದಿನ ಪಕ್ಷ ರಾಜಕಾರಣದಲ್ಲಿರದ ಭಾರತದ ಎಲ್ಲ ಸಮಾಜವಾದಿಗಳ ಸಮಾವೇಶವೊಂದನ್ನು ಕರೆದಿದ್ದೆವು. ಆ ಸಂದರ್ಭದಲ್ಲಿ, ಆ ಹೊತ್ತಿಗೆ ರಾಜಕೀಯ ಪ್ರಗತಿಪರತೆಯ ಧ್ವನಿಯಾಗಿ ಮಾರ್ಪಟ್ಟಿದ್ದ 'ಸಂಕ್ರಮಣ' ಪತ್ರಿಕೆಯ ಸಂಪಾದಕರಾದ ಚಂದ್ರಶೇಖರ ಪಾಟೀಲರು ಈ ವಿಶೇಷಾಂಕದ ಮೊದಲ ಭಾಗವನ್ನು ಪುಸ್ತಕ ರೂಪದಲ್ಲಿ ಮಾರಾಟಕ್ಕೆ ಬಿಡುಗಡೆ ಮಾಡಿದ್ದರು. ಬಹುಶಃ ಅದು, ಲೋಹಿಯಾ ಅವರ ವ್ಯಕ್ತಿತ್ವ, ರಾಜಕೀಯ ವಿಚಾರಧಾರೆ ಮತ್ತು ರಾಜಕಾರಣ ಕುರಿತಂತೆ ಕನ್ನಡದಲ್ಲಿ ಬಂದ ಮೊದಲ ಪುಸ್ತಕ. ಆನಂತರ ಅದು ಪೂರ್ಣ ವಿಶೇಷಾಂಕವಾಗಿ ಹಾಗೂ ಪೂರ್ಣ ಪುಸ್ತಕ ರೂಪದಲ್ಲೂ ಹೊರಬಂತು. ಇದನ್ನೆಲ್ಲ ಇಲ್ಲಿ ಹೇಳುತ್ತಿರುವುದು, ಈ ಪುಸ್ತಕದ ಮೊದಲ ಆವೃತ್ತಿಗೆ ಒಂದು ಐತಿಹಾಸಿಕ ಮಹತ್ವ ಹೇಗೆ ತಾನೇ ತಾನಾಗಿ ಒದಗಿ ಬಂದಿತ್ತು ಎಂದು ಸೂಚಿಸಲು ಮಾತ್ರ.

ಈಗ ಈ ಪುಸ್ತಕ, ಪರಿಷ್ಕೃತ ಆವೃತ್ತಿಯಾಗಿ–ಮೊದಲ ಆವೃತ್ತಿಯ ಎರಡು ಪಟ್ಟಿಗೂ ಮೀರಿದ ಗಾತ್ರದಲ್ಲಿ–ಹೊರ ಬರುತ್ತಿರುವ ಸಂದರ್ಭವೂ ಐತಿಹಾಸಿಕವಾದುದು

ಎಂದು ನಾನು ಭಾವಿಸಿದ್ದೇನೆ. ಇದು ಲೋಹಿಯಾರ ನೂರನೇ ಹುಟ್ಟು ಹಬ್ಬದ ಸಂದರ್ಭ. ಹಾಗೇ ಲೋಹಿಯಾ ಪ್ರತಿಪಾದಿಸಿದ್ದ ಸಮಾಜವಾದವೂ ಸೇರಿದಂತೆ ಎಲ್ಲ ರೀತಿಯ ಸಮಾಜವಾದಿ ರಾಜಕಾರಣವೂ ವಿಫಲಗೊಂಡು, ಅಪ್ರಸ್ತುತವಾಗಿದೆ ಎಂದು ಘೋಷಿಸುತ್ತಾ ಈ ದೇಶದಲ್ಲಿ ಜಾರಿಗೆ ಬಂದ ಮುಕ್ತ ಮಾರುಕಟ್ಟೆ ನೀತಿ ಆಧಾರಿತ ಜಾಗತೀಕರಣದ ಭೊಮ್ಮಡಾ ಬಜಾವಣೆಯ ಬಣ್ಣವೆಲ್ಲಾ ಬಯಲಾಗುತ್ತಿರುವ ಸಂದರ್ಭ ಕೂಡಾ. ಆರಂಭದಲ್ಲಿ ಸಮೃದ್ಧಿಯ ಕನಸುಗಳನ್ನು ಬಿತ್ತುತ್ತಾ, ಅರಳಿಸುತ್ತಾ ಬಂದ ಈ ವಿದ್ಯಮಾನವು ಈಗ ಭೀಕರ ಅಸಮಾನತೆಗಳ, ಅದರಿಂದ ಹುಟ್ಟಲಾರಂಭಿಸಿರುವ ವೈವಿಧ್ಯಮಯ ಸಾಮಾಜಿಕ ಅಶ್ಲೀಲತೆ, ಅಶಾಂತಿ ಹಾಗೂ ಹಿಂಸಾಚಾರಗಳ ದಿಡ್ಡಿ ಬಾಗಿಲುಗಳನ್ನು ತೆರೆಯುತ್ತಿರುವುದನ್ನು ಕಂಡು ನಾಗರಿಕ ಸಮಾಜ ತಲ್ಲಣಗೊಳ್ಳತೊಡಗಿದೆ. ಬರೀ ವ್ಯಾವಹಾರಿಕ ಯಶಸ್ಸನ್ನು ನಂಬಿದ ಈ ತತ್ವಹೀನ ರಾಜಕಾರಣ, ಜಾಗತಿಕ ಮಟ್ಟದಲ್ಲಿ ಬಂಡವಾಳಶಾಹಿಗೆ ಸಂಬಂಧಿಸಿದಂತೆ ದೊಡ್ಡ ಬಿಕ್ಕಟ್ಟೊಂದನ್ನು ಸೃಷ್ಟಿಸಿದ್ದು, ಇದು ಕಳೆದ ಶತಮಾನದ ಮುವ್ವತ್ತರ ದಶಕದಲ್ಲಿ ಅದು ಎದುರಿಸಿದ ಬಿಕ್ಕಟ್ಟಿಗಿಂತ ಆಳದ ಬಿಕ್ಕಟ್ಟಾಗಿದ್ದು, ಮಾನವ ನಾಗರೀಕತೆ-ಸಂಸ್ಕೃತಿಗಳಿಗೆ ಮತ್ತು ನಿರ್ದಿಷ್ಟವಾಗಿ ಮಾನವನ ಮೂಲಗುಣಕ್ಕೆ ಸಂಬಂಧಿಸಿದಂತೆ ಅನೇಕ ನೈತಿಕ ಪ್ರಶ್ನೆಗಳನ್ನು ಎತ್ತಿದೆ ಎಂದು ಹೇಳಲಾಗುತ್ತಿದೆ.

ಇವು ಐವತ್ತು ವರ್ಷಗಳ ಹಿಂದೆಯೇ ಲೋಹಿಯಾ ಅವರು ಬಂಡವಾಳಶಾಹಿ, ಕಮ್ಯೂನಿಸಂ ಮತ್ತು ಐರೋಪ್ಯ ಸಮಾಜವಾದಿ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಎತ್ತಿದ್ದ ಆರ್ಥಿಕ-ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ಪ್ರಶ್ನೆಗಳ ಮರು ನಿರೂಪಣೆಗಳೇ ಆಗಿವೆ. ಬಂಡವಾಳಶಾಹಿಯು ಕಾರ್ಪೋರೇಟ್‌ಶಾಹಿ ವೇಷದಲ್ಲಿ ರಾಷ್ಟ್ರೀಯ ಗಡಿಗಳನ್ನು ದಾಟಿ, ನವವಸಾಹತುಶಾಹಿಯನ್ನು ಸೃಷ್ಟಿಸುವ ಸಾಧ್ಯತೆಗಳನ್ನು ಲೋಹಿಯಾ ತಮ್ಮ 'ಮಾರ್ಕ್ಸ್ ನಂತರದ ಅರ್ಥಶಾಸ್ತ್ರ'ದ ವಿಶ್ಲೇಷಣೆಯಲ್ಲಿಯೇ ಮುನ್ನೋಡಿದ್ದರು. ನಂತರ 'ಮ್ಯಾನ್‌ಕೈಂಡ್' ನಲ್ಲಿ ಬರೆದ ತಮ್ಮ ಅನೇಕ 'ಟೀಕೆ ಟಿಪ್ಪಣಿ'ಗಳಲ್ಲಿ ಅದನ್ನು ವಿಷದೀಕರಿಸಿದ್ದರು. ಬದುಕನ್ನು, ಭೌತಿಕ ಹಾಗೂ ಆಧ್ಯಾತ್ಮಿಕ ಎಂದು ವಿಭಜಿಸಿ ನೋಡಿ ಪುನಾರಚಿಸಬಯಸುವ ಆಧುನಿಕ ನಾಗರೀಕತೆಯನ್ನು ಕುರಿತಂತೆ ಗಾಂಧಿಯವರಿಂದ ಪಡೆದ ಒಳನೋಟದ ಪರಿಣಾಮವಾಗಿ, ಲೋಹಿಯಾ ಪಶ್ಚಿಮದ ಮನಸ್ಸಿನ ಸೃಷ್ಟಿಗಳನ್ನು ಅನುಮಾನದಿಂದ ನೋಡಲಾರಂಭಿಸಿದ ವಿಶಿಷ್ಟ ಕ್ರಮವೇ ಇದೆಲ್ಲದರ ಹಿಂದೆ ಕೆಲಸ ಮಾಡಿದ್ದುದು ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಹಾಗಾಗಿ ಇಂದು ಜಾಗತೀಕರಣದ ದೂರಗಾಮಿ ಪರಿಣಾಮಗಳನ್ನು ಪರಿಭಾವಿಸಿ ಆತಂಕಿತರಾಗುತ್ತಿರುವವರಿಗೆ, ಲೋಹಿಯಾ ಮತ್ತೆ ಹೊಸ (ಸಮಾಜವಾದಿ) ರಾಜಕಾರಣದ ಆಸೆ ಹುಟ್ಟಿಸಬಲ್ಲವರಾಗಿದ್ದಾರೆ. ಹಾಗೆ ನೋಡಿದರೆ, ಬಂಡವಾಳಶಾಹಿ ಸಮಾಜಗಳ ಮುಖ್ಯ ಅರ್ಥಶಾಸ್ತ್ರಜ್ಞರೇ ಈಗ ಸಮಾಜವಾದಿ ರಾಜಕಾರಣದತ್ತ ಒಮ್ಮೆ ಹೊರಳಿ ನೋಡಬೇಕಾದ ಅಗತ್ಯವನ್ನು ಸೂಚಿಸಲಾರಂಭಿಸಿದ್ದಾರೆ. ಹಾಗಾಗಿಯೇ ಲೋಹಿಯಾ

ಕುರಿತು, ಅವರು ಪ್ರತಿಪಾದಿಸಿದ ಸಮಾಜವಾದಿ ತತ್ವಗಳ ಕುರಿತು ಭಾರತದ ಮಟ್ಟಿಗಾದರೂ ಹೊಸ ಉತ್ಸಾಹ ಕಂಡು ಬರುತ್ತಿದೆ. ಇದಕ್ಕೆ ಸಾಕ್ಷಿಯಂತಿದೆ ಈ ಸಂಪುಟ.

ವಿವಿಧ ಕ್ಷೇತ್ರಗಳಲ್ಲಿನ ಹೊಸ ತಲೆಮಾರುಗಳ ಅನೇಕರು ಇಲ್ಲಿ ಲೋಹಿಯಾ ಬಗ್ಗೆ ಬರೆದಿದ್ದಾರೆ. ಲೋಹಿಯಾ ವಿಚಾರಗಳು ಸಾಹಿತ್ಯ-ಸಂಸ್ಕೃತಿ ಕ್ಷೇತ್ರಗಳೂ ಸೇರಿದಂತೆ ಹೇಗೆ ನಮ್ಮ ಬದುಕಿನ ವಿವಿಧ ಮಗ್ಗಲುಗಳನ್ನು ತೀವ್ರವಾಗಿ ತಟ್ಟಿದೆ, ತಟ್ಟಬಲ್ಲುದು ಎಂಬುದನ್ನು ಇವರು ವಿಶ್ಲೇಷಿಸಿದ್ದಾರೆ. ಲೋಹಿಯಾ, ಕಾಲದಲ್ಲಿ ಕಳೆದುಹೋಗದೆ ಹೇಗೆ ಇನ್ನೂ, ಇನ್ನಷ್ಟು ಕ್ರಿಯಾಶೀಲ ರೂಪಗಳಲ್ಲಿ ನಮ್ಮ ಮಧ್ಯೆ ಜೀವಂತವಾಗಿದ್ದಾರೆ ಎಂಬುದನ್ನು ವಿವರಿಸಿದ್ದಾರೆ. ತಮ್ಮ ರಾಜಕೀಯ ತತ್ವ-ಸಿದ್ಧಾಂತಗಳ ಮೂಲಕ ಮಾತ್ರವಲ್ಲ, ಬದುಕನ್ನು ವೈಯುಕ್ತಿಕ ನೆಲೆಯಲ್ಲಿ ಗ್ರಹಿಸುವ ವಿಶಿಷ್ಟ ಲವಲವಿಕೆಯ ಮತ್ತು ಅನನ್ಯ ನಾವೀನ್ಯತೆಯ ಕ್ರಮಗಳ ಮೂಲಕ ಕೂಡಾ. ಅಲ್ಲದೆ, ಇಂದು ರಾಜಕೀಯ-ಸಾಮಾಜಿಕ-ಸಾಂಸ್ಕೃತಿಕ ಅಧ್ಯಯನಗಳಲ್ಲಿ ವಿಶ್ಲೇಷಣೆಯ ಬೌದ್ಧಿಕ ಪರಿಕರಗಳಾಗಿ ಚಾಲ್ತಿಗೆ ಬಂದಿರುವ ಬಹುತ್ವ, ಬಹು ಶಿಸ್ತೀಯತೆ, ವಸಾಹತೋತ್ತರತೆ ಮತ್ತು ಸುಪ್ತ ನೆಲೆಗಳ ಅಧ್ಯಯನ(Sub-altern studies) ಇತ್ಯಾದಿಗಳು, ಆ ಪಂಡಿತ ಹೆಸರುಗಳಿಲ್ಲದೆ ಲೋಹಿಯಾರ ಚಿಂತನಾ ವಿನ್ಯಾಸದಲ್ಲೇ ಅಂತರ್ಗತವಾಗಿರುವುದನ್ನು ನಾವು ಕಾಣಬಹುದು. ಆದರೆ ನೆಹರೂ ಮತ್ತು ನೆಹರೋತ್ತರ ಭಂಡ ರಾಜಕಾರಣದಿಂದಾಗಿ ಮತ್ತು ಬಹುಶಃ ತಮ್ಮ ಸೂಕ್ಷ್ಮ ಸಂವೇದನಾಶೀಲ ಮನಸ್ಸನ್ನು ಮರೆ ಮಾಡಿದ ತೀವ್ರ ಪ್ರತಿಭಟನಾ ರಾಜಕಾರಣದಿಂದಾಗಿ ನಮ್ಮ ಬಹಳಷ್ಟು ಬುದ್ಧಿಜೀವಿಗಳ ಮತ್ತು ಶಾಸ್ತ್ರ ಪರಿಣತರ ಅಧ್ಯಯನಗಳಿಂದ ವಂಚಿತರಾಗಿದ್ದ ಲೋಹಿಯಾ, ಈಗ ಹೊಸ ತಲೆಮಾರಿನ ಚಿಂತಕರ, ಕಾರ್ಯೋತ್ಸಾಹಿಗಳ ಗಂಭೀರ ಗಮನ ಸೆಳೆಯಲಾರಂಭಿಸಿದ್ದಾರೆ. ಇಲ್ಲಿರುವ ಅನೇಕ-ಹೊಸ(ಅಂದರೆ ಮೊದಲ ಆವೃತ್ತಿಯಲ್ಲಿಲ್ಲದ)-ಲೇಖನಗಳೇ ಇದಕ್ಕೆ ಸಾಕ್ಷಿಯಾಗಿವೆ. ವಿಶೇಷವಾಗಿ ನಾನು ಹೆಸರಿಸಬೇಕಾದದ್ದು, ಜೆನ್ನಿ, ಆಶಾದೇವಿ, ಕೆವಿಎನ್, ತೋಳ್ಪಾಡಿ, ತಾರಿಣಿ, ಕೆ.ಪಿ.ನಟರಾಜ, ಅಪೂರ್ವ ಮತ್ತು ರವಿಚಂದ್ರ ಅವರ ಬರಹಗಳನ್ನು. ಇವರಿಗೆ ಲೋಹಿಯಾ ದಕ್ಕಿರುವ, ಕಾಣಿಸಿಕೊಳ್ಳಲಾರಂಭಿಸಿರುವ ರೀತಿ, ಹೊಸ(ಸಮಾಜವಾದಿ)ರಾಜಕಾರಣದ ಬಗ್ಗೆ ಆಸೆ ಹುಟ್ಟಿಸುವಂತಿದೆ.

ಹೊಸ ಸಮಾಜವಾದಿ ರಾಜಕಾರಣ ಎಂದೆ. ಲೋಹಿಯಾ ಎಂಬ ಅರಿವನ್ನು ಸದಾ ಹೊಸದನ್ನಾಗಿ ಮಾಡಲು ಯತ್ನಿಸುತ್ತಿರುವ ನಮ್ಮ ಹಳೆಯ ಲೋಹಿಯಾವಾದಿ ದೇವನೂರ ಮಹಾದೇವ ಅವರ ಇಲ್ಲಿನ ಲೇಖನ, ಈ ದೃಷ್ಟಿಯಿಂದ ಕುತೂಹಲಕಾರಿಯಾಗಿದೆ. ಅವರು ಹೊಸ ಸಮಾಜವಾದಿ ತತ್ವ ಮಾದರಿಯನ್ನು ರೂಪಿಸುವ ಶಕ್ತಿಯನ್ನು, ಹೋಗಿ ಹೋಗಿ ಈ ಸಂಪಾದಕನಲ್ಲಿ ಕಂಡಿದ್ದಾರೆ! ಆ ಶಕ್ತಿ ನನ್ನಲ್ಲಿರುವ ಬಗ್ಗೆ ನನಗೇ ಗಂಭೀರ ಅನುಮಾನಗಳಿವೆ ಎಂಬುದು ಇಲ್ಲಿ ನನ್ನ ಮೊದಲ ಮಾತು. ನಂತರದ ಮಾತೆಂದರೆ, ಅಂತಹ ಶಕ್ತಿಯನ್ನು ಅವರು

ನನ್ನಲ್ಲೇನಾದರೂ ಕಂಡಿದ್ದರೆ, ಅದಕ್ಕೆ ಎಲ್ಲ ರೀತಿಯಲ್ಲೂ ಅವರೇ ಜವಾಬ್ದಾರರೂ ಮತ್ತು ಕಾರಣರೂ ಎಂದು ಸ್ವಲ್ಪ ವಿನಯ ಮತ್ತು ಸ್ವಲ್ಪ ವ್ಯಂಗ್ಯದಿಂದ ಹೇಳಬಯಸುವೆ. ಹಾಗೇ ಇದು, ಕಳೆದ ಮುವ್ವತ್ತು ವರ್ಷಗಳ ವಿವಿಧ ರೂಪಗಳ ಸಮಾಜವಾದಿ ಚಳುವಳಿಗಳ ಇತಿಹಾಸದಲ್ಲಿನ ಮಹಾ ಜಾಣ ಪಲಾಯನವಾದಿ ಎಂದೇ ಪ್ರಸಿದ್ಧರಾಗಿರುವ ಈ ದೇವನೂರ ಮಹಾದೇವರ ಇನ್ನೊಂದು ಪಲಾಯನವಾದಿ ಪ್ರಯತ್ನವಿರಬಹುದೇ ಎಂಬ ಗುಮಾನಿಯೂ ನನಗಿದೆ! ಅವರ 'ಸರ್ವೋದಯ ಕರ್ನಾಟಕ'ದ ರಾಜಕಾರಣದ ಪರಿ ಇದಕ್ಕೆ ಜ್ವಲಂತ ಸಾಕ್ಷಿಯಂತಿದೆ. ಅದೇನೇ ಇರಲಿ, ಈ ಸಂದರ್ಭದಲ್ಲಿ ಲೋಹಿಯಾ ಮಹಾಶಯರು ಇವರಿಗೆ ಸಾಕಷ್ಟು ಸದ್ಬುದ್ಧಿಯನ್ನೂ, ಕ್ರಿಯಾಶೀಲತೆಯನ್ನೂ ದಯಪಾಲಿಸಿ, ಇವರ ನೇತೃತ್ವದಲ್ಲೇ ಕರ್ನಾಟಕ ಇಂದಿನ ಪಾಪಕೂಪದ ರಾಜಕಾರಣದಿಂದ ಪಾರಾಗುವಂತಾಗಲಿ ಎಂದು ಆಶಿಸುತ್ತೇನೆ. ಹಾಗೇ ಇವರು ಸೂಚಿಸುವಂತಹ 'ಅಯ್ಯಯ್ಯಪ್ಪ' ಅನ್ನಿಸುವಂತಹ ಗೆಳೆಯರು, ಸಮಾಜವಾದವನ್ನು ಕೇವಲ ಸಾಮಾಜಿಕ ನ್ಯಾಯದ ಮಟ್ಟಕ್ಕೆ ಮತ್ತು ಸಾಮಾಜಿಕ ನ್ಯಾಯವನ್ನು ಬರಡು ಬ್ರಾಹ್ಮಣ ವಿರೋಧ ಹಾಗೂ ಜಾತಿ ಮೀಸಲಾತಿ ಕಾರ್ಯಕ್ರಮದ ಮಟ್ಟಕ್ಕೆ ಇಳಿಸುವುದನ್ನು ನಿಲ್ಲಿಸಿ; ಅದೊಂದು ಮಾನವ ಜನಾಂಗದ ಹೊಸ ಸಮಗ್ರತೆಯ; ಹೊಸ ಬದುಕಿನ ಶೈಲಿಯ ಹೊಸ ಮನುಷ್ಯನನ್ನು ಗುರಿಯಾಗಿರಿಸಿಕೊಂಡ, ಹೊಸ ನಾಗರೀಕತೆಯೊಂದನ್ನು ಕಟ್ಟುವ ರಾಜಕಾರಣವೂ ಆಗಿದೆ ಎಂದು ಅರಿಯುವಂತಾಗಲಿ ಎಂದೂ ಹಾರೈಸುವೆ.

ಇನ್ನು ಈ ಪುಸ್ತಕ ಲೋಹಿಯಾರನ್ನು ವಿಮರ್ಶಾತ್ಮಕವಾಗಿ ನೋಡುವ ಪ್ರಯತ್ನ ಮಾಡಿರುವುದನ್ನೂ ಓದುಗರು ಗಮನಿಸುವರೆಂದು ನಾನು ಭಾವಿಸುತ್ತೇನೆ. ಸಂಸ್ಮರಣೆಯ ರೂಪದ ಕೆಲವು ಲೇಖನಗಳ ಹೊರತಾಗಿ, 'ನಾ ಕಂಡ ಲೋಹಿಯಾ' ವಿಭಾಗದ ಕೆಲವು ಲೇಖನಗಳೂ ಸೇರಿದಂತೆ, ಇಲ್ಲಿ ಲೋಹಿಯಾರನ್ನು ಈ ಕಾಲಕ್ಕೂ ಪ್ರಸ್ತುತಪಡಿಸುವ ವಿಮರ್ಶಾತ್ಮಕ ಪ್ರಯತ್ನಗಳನ್ನು ನಾವು ಕಾಣಬಹುದು. ಇದರ ಭಾಗವಾಗಿಯೇ ಲೋಹಿಯಾ ಅವರ ಕೆಲ ರಾಜಕೀಯ ವರ್ತನೆಗಳು ಮತ್ತು ಲೋಹಿಯಾವಾದಿಗಳ ತತ್ವ ನಿಷ್ಠೆ ಕುರಿತ ಟೀಕಾತ್ಮಕವಾದ ಹಿನ್ನೋಟವನ್ನೂ ಇಲ್ಲಿ ಕಾಣಬಹುದು. ಹಾಗೇ, ಮುವ್ವತ್ತು ವರ್ಷಗಳ ಹಿಂದೆ ಈ ಸಂಪುಟವನ್ನು ಆಯೋಜಿಸಿದಾಗ ಬರೆಸಿದ ಇಲ್ಲಿನ ಕೆಲವು ಲೇಖನಗಳು, ಒಂದು ಕರಪತ್ರ ಹಾಗೂ ಒಂದು ಪುಸ್ತಕ ವಿಮರ್ಶೆ ಇಂದಿನ ಚರ್ಚೆಯ ಸಂದರ್ಭದಲ್ಲಿ ಸ್ವಲ್ಪ ಹಳೆಯವೂ, ಆವೇಶಪೂರ್ಣವೂ ಆಗಿ ಕಾಣಬರುತ್ತವೆಂಬುದು ನಿಜ. ಆದರೆ ಇವು ಸಮಾಜವಾದಿ ಸಂದರ್ಭದ ಚರ್ಚೆಗಳು ಬೆಳೆದು ಬಂದ ಹಾದಿಯನ್ನು, ಅದರ ಐತಿಹಾಸಿಕತೆಯನ್ನು ಪರಿಚಯಿಸುತ್ತವೆ ಎಂಬ ಕಾರಣಕ್ಕಾದರೂ ಪ್ರಸ್ತುತವಾಗುತ್ತವೆ ಅಲ್ಲವೆ?. ಹೀಗಾಗಿ, ಈ ಸಂಪುಟ ಒಂದು ನೆಲೆಯಲ್ಲಿ ಜಾಗತಿಕ ಮತ್ತು ಮತ್ತೊಂದು ನೆಲೆಯಲ್ಲಿ ಭಾರತೀಯ ಸಮಾಜವಾದಿ ಚಳುವಳಿಗಳ ಬಗ್ಗೆ ಒಂದು ಪರಿಪ್ರೇಕ್ಷ್ಯವನ್ನು ಒದಗಿಸುವ ಪ್ರಯತ್ನವನ್ನೂ ಮಾಡಿದೆ ಎಂದೂ ನಾನು ಭಾವಿಸಿದ್ದೇನೆ.

ನನ್ನ ಈ ಪ್ರಯತ್ನದಲ್ಲಿ ನೆರವಾದವರು ಹಲವಾರು ಜನ. 'ಅಯ್ಯಯ್ಯಪ್ಪ' ಗೆಳೆಯರೂ ಸೇರಿದಂತೆ, ನಾನು ಕೋರಿದ ಎಲ್ಲರೂ ಲೇಖನಗಳನ್ನು ಒದಗಿಸಲಿಲ್ಲವಾದರೂ, ಬಹಳಷ್ಟು ಜನ ತಡವಾಗಿಯಾದರೂ-ಪುಸ್ತಕ ಮುದ್ರಣ ಹಂತ ತಲುಪಿದ ಸಮಯದಲ್ಲೂ-ಲೇಖನ ನೀಡಿ ಸಹಕರಿಸಿದ್ದಾರೆ. ಇನ್ನು ಕೆಲವರು ಕೊನೇ ಘಳಿಗೆಯಲ್ಲೂ ವಿವಿಧ ಮೂಲಗಳಿಂದ ಲೇಖನ ಸಂಗ್ರಹಿಸಿ, ಲಿಪೀಕರಿಸಿ, ಇ-ಅಂಚೆ ಮೂಲಕ ಕಳಿಸಿ ಕೊಟ್ಟಿದ್ದಾರೆ. ಮತ್ತೆ ಕೆಲವರು ತಮ್ಮ ಹಳೆಯ ಲೇಖನ, ಲೇಖನ ಭಾಗಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ್ದಾರೆ. ಹಾಗೇ ಈ ಪುಸ್ತಕದ ಮೊದಲ ಪ್ರಕಾಶಕರಾದ ಚಂದ್ರಶೇಖರ ಪಾಟೀಲರು ಲೋಹಿಯಾ ಶತಮಾನೋತ್ಸವ ಸಂದರ್ಭದಲ್ಲಿ ಇದರ ಪರಿಷ್ಕೃತ ಆವೃತ್ತಿಯನ್ನು ಹೊರ ತರುತ್ತಿರುವುದಾಗಿ ತಿಳಿಸಿದಾಗ ತಮ್ಮ ಸಂತೋಷ ವ್ಯಕ್ತಪಡಿಸಿದ್ದಾರೆ. ಇವರೆಲ್ಲರಿಗೆ ನನ್ನ ಕೃತಜ್ಞತೆಗಳು.

ಈ ಪರಿಷ್ಕೃತ ಆವೃತ್ತಿಯನ್ನು ಹೊರತರುವ ಸಲಹೆಯನ್ನು ಮುಂದಿಟ್ಟಾಗ ಲೋಹಿಯಾ ಪ್ರಕಾಶನದ ಚನ್ನಬಸವಣ್ಣ ಮೊದ ಮೊದಲು ಎರಡು ಮನಸ್ಸಿನಿಂದಲೇ ಅದನ್ನು ಕೈಗೆತ್ತಿಕೊಂಡಂತೆ ಕಂಡರೂ, ಪುಸ್ತಕದ ತಯಾರಿಯ ಗತಿ ಚುರುಕು ಗೊಳ್ಳುತ್ತಿದ್ದಂತೆ ಅವರ ಉತ್ಸಾಹ, ಸಲಹೆ ನೀಡಿದ ನಾನೂ ತಡಕೊಳ್ಳಲಾಗದಷ್ಟು ತೀವ್ರಗೊಂಡಿತು! ಅದು ಚನ್ನಬಸವಣ್ಣ ಅವರ ಸ್ವಭಾವ. ಅವರು ಈವರೆಗೆ ಕನ್ನಡ ಸಾಹಿತ್ಯ ಪ್ರಕಾಶನಕ್ಕೆ ನೀಡಿರುವ ಕೊಡುಗೆಗಳ ಮಾತು ಅಂತಿರಲಿ, ಈ ಲೋಹಿಯಾ ಶತಮಾನೋತ್ಸವ ವರ್ಷದಲ್ಲಿ ಕನ್ನಡ ಜನತೆಗೆ ಲೋಹಿಯಾ ಅವರನ್ನು ವಿವಿಧ ರೀತಿಯ ಪುಸ್ತಕಗಳ ಮೂಲಕ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪರಿಚಯಿಸಲು ಅವರು ಮಾಡಿರುವ ಸಾಂಸ್ಕೃತಿಕ ಪ್ರಯತ್ನ ನಿಜವಾಗಿಯೂ ಐತಿಹಾಸಿಕ ಮಹತ್ವ ಪಡೆದಿದೆ ಎಂದು ನಾನು ಭಾವಿಸಿದ್ದೇನೆ. ಅವರ ಸಮಾಜವಾದಿ ಬದ್ಧತೆ, ಶ್ರದ್ಧೆ, ಪ್ರೀತಿಗಳಿಗೆ ನಾನು ಋಣಿಯಾಗಿದ್ದೇನೆ.

ಇನ್ನು, ಕೇವಲ ಹದಿನೈದು ದಿನಗಳ ಕಾಲಾವಧಿಯಲ್ಲಿ, ನನ್ನ ಮತ್ತು ಚನ್ನಬಸವಣ್ಣ ಅವರ ಸಕಾಲಿಕವೋ ಅಕಾಲಿಕವೋ ಆದ ವೈವಿಧ್ಯಮಯ ಸಲಹೆ-ಸೂಚನೆಗಳನ್ನು ಸಹಿಸಿಕೊಂಡು ಮಾತ್ರವಲ್ಲದೆ, ಪಾಲಿಸಿಕೊಂಡು ಕೂಡಾ; ಈ ಪುಸ್ತಕದ ಇಡೀ ವಿನ್ಯಾಸವನ್ನು ನನ್ನ ಕಿರಿಯ ಗೆಳೆಯ, ಕವಿ-ಕಥೆಗಾರ ಮಂಜುನಾಥ್‌ಲತಾ ಅಚ್ಚುಕಟ್ಟಾಗಿ ಮಾಡಿಕೊಟ್ಟಿದ್ದಾರೆ. ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಎಂದಿನಂತೆ ವಿಶ್ವಾಸ್ ಪ್ರಿಂಟ್ಸ್‌ನವರು ಎಂದಿನ ವಿಶ್ವಾಸದಿಂದ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ. ಅವರಿಗೂ ನನ್ನ ವಂದನೆಗಳು.

೧೨. ೦೩. ೨೦೧೦

ಡಿ.ಎಸ್. ನಾಗಭೂಷಣ
ಶಿವಮೊಗ್ಗ

ಸಂಪಾದಕರ ಮಾತುಗಳು
(ಮೊದಲ ಮುದ್ರಣಕ್ಕೆ)

ಲೋಹಿಯಾ ಎಂಬ ಹೆಸರು ನನಗೆ ಪರಿಚಿತವಾದದ್ದು ಲೋಹಿಯಾ ಅವರು ಅಕಾಲಿಕ ಮರಣಕ್ಕೆ ತುತ್ತಾದ ಸುಮಾರು ಎರಡು ವರ್ಷಗಳ ನಂತರ; ಪುಸ್ತಕವೊಂದರ ಮೂಲಕ. ಅವರ 'ರಾಜಕೀಯದ ಮಧ್ಯೆ ಬಿಡುವು' ನನ್ನ ಹದಿಹರೆಯದ ಸಾಮಾಜಿಕ ಕುತೂಹಲಗಳು ಕುತೂಹಲಗಳಾಗಷ್ಟೇ ಕರಗಿ ಹೋಗದೆ, ಅನ್ವೇಷಣೆಯ ವೇದಿಕೆಗಳಾಗಿ ಮಾರ್ಪಡುವಷ್ಟು ನನ್ನನ್ನು ಪ್ರಭಾವಿತಗೊಳಿಸಿತು. ಬರೀ ಪೆದ್ದ, ಖೂಳ ಇಲ್ಲವೇ ಚತುರ, ಭೋಳೆ, ಇಲ್ಲವೇ ಶುಷ್ಕ ಗಂಭೀರ ರಾಜಕಾರಣಿಗಳನ್ನೇ ಕಂಡು ಇಡೀ ರಾಜಕಾರಣದ ಬಗ್ಗೆಯೇ ತಾತ್ಸಾರ ತಾಳುತ್ತಿದ್ದ ನನ್ನಲ್ಲಿ, ರಾಜಕಾರಣಕ್ಕೂ ತನ್ನದೇ ಆದ ಬೌದ್ಧಿಕ ಹಾಗೂ ಭಾವನಾತ್ಮಕ ತೇಜಸ್ಸಿದೆ ಎಂಬ ಸತ್ಯವನ್ನು ನನ್ನ ಮುಖಕ್ಕೆ ಹಿಡಿದ ಪುಸ್ತಕವಿದು. ಇಂಡಿಯಾದ ಆಧುನಿಕ ರಾಜಕಾರಣಿಯೊಬ್ಬ ಮೊದಲ ಬಾರಿಗೆ ಸ್ವಾತಂತ್ರ್ಯ ಮತ್ತು ಸಮತೆಗಳೊಂದಿಗೆ 'ಸೌಂದರ್ಯ'ವನ್ನೂ ಬೆಸೆದು ಹೊಸದೊಂದು ರಾಜಕೀಯ ಸಂಶ್ಲೇಷಣೆಗೆ ತೊಡಗಿರುವ ಸೃಜನಶೀಲ ಪ್ರಯತ್ನವೊಂದು ಈ ಪುಸ್ತಕದಲ್ಲಿ ಎದ್ದು ಕಾಣುತ್ತದೆ. ರಾಜಕಾರಣಿಯೊಬ್ಬನದು ಎಂದು ತುಸು ಉದಾಸೀನತೆಯಿಂದಲೇ ಎತ್ತಿಕೊಂಡ ಈ ಪುಸ್ತಕವನ್ನು ನಾನು ಓದಿ ಮುಗಿಸುವ ವೇಳೆಗೆ ಲೋಹಿಯಾ ನನ್ನ ಒಡಲ ತುಂಬಾ ತುಂಬಿಕೊಂಡಿದ್ದರು. ನಾನು ನನ್ನೊಳಕ್ಕೇ ಕೇಳಿಕೊಳ್ಳಲಾರಂಭಿಸಿದ್ದ ಅಸಂಖ್ಯಾತ ಪ್ರಶ್ನೆಗಳನ್ನೇ ಈ ವ್ಯಕ್ತಿತ್ವ ಕೂಡಾ ಇನ್ನಷ್ಟು ಆಳ ಹಾಗೂ ವಿಸ್ತಾರಗಳೊಂದಿಗೆ ಹರಡಿಕೊಂಡು ವಿಶ್ಲೇಷಿಸುವ ಪ್ರಯತ್ನದಲ್ಲಿದ್ದಂತಿತ್ತು. ಅಲ್ಲಿಂದ ಆರಂಭವಾಯಿತು, ಈ ವ್ಯಕ್ತಿತ್ವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳುವ ನನ್ನ ಪ್ರಯತ್ನ. ಈ ಪುಸ್ತಕ ಕೂಡಾ ಈ ಪ್ರಯತ್ನದ ಒಂದು ಭಾಗವೆಂದೇ ಹೇಳಬೇಕು.

ನನ್ನ ಈ ಪ್ರಯತ್ನದ ಹಾದಿಯಲ್ಲಿ ನಾನು ಲೋಹಿಯಾ ಅವರ ಲಭ್ಯವಿರುವ ಎಲ್ಲ ಬರಹಗಳನ್ನೂ ನನ್ನ ವಿಶ್ಲೇಷಣಾ ಸಾಮರ್ಥ್ಯದ ಸೀಮೆಯಲ್ಲೇ ಅಧ್ಯಯನ ಮಾಡಿದ್ದೇನೆ. ನಾನು ಕಂಡ ವಾಸ್ತವಗಳೊಂದಿಗೆ ಲೋಹಿಯಾರ ವಿಶ್ಲೇಷಣೆ ಹಾಗೂ ಪ್ರತಿಪಾದನೆಗಳನ್ನು ತೂಗಿ ನೋಡಿದ್ದೇನೆ. ನನ್ನೆಲ್ಲಾ ಹುಡುಗುತನವನ್ನು ಸಹಿಸಿಕೊಂಡೂ ನನ್ನೊಡನೆ ಮಾತನಾಡಲು ಮುಂದೆ ಬಂದ, ಲೋಹಿಯಾರನ್ನು ಹತ್ತಿರದಿಂದ ಕಂಡ ಹಲವಾರು ಜನರೊಡನೆ ಚರ್ಚಿಸಿದ್ದೇನೆ. ಇಷ್ಟಾದರೂ ಈ ವ್ಯಕ್ತಿತ್ವ ಇಂತಹುದಿದ್ದರೂ ಇರಬಹುದೇನೋ ಎಂದು ಒಂದು ಗುಣವಾಚಕದೊಡನೆ ಗುರುತಿಸುವ ಪ್ರಯತ್ನ ಕೂಡ ಅಸಾಧ್ಯವಾಗಿ ಕಾಣುತ್ತದೆ ನನಗೆ. ರಾಮಮನೋಹರ ಲೋಹಿಯಾ ಎಂಬಾತ

ಬರೀ ರಾಜಕಾರಣಿಯೆ? ಕವಿ 'ಆಗಲು' ನಿರಾಕರಿಸಿದ ಮಹಾಕವಿಯೆ? ತನ್ನ ಸುತ್ತಲಿನ ಜಡವಾದ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ರೂಪಗಳನ್ನು ಛಿದ್ರಗೊಳಿಸಹೊರಟ ಬಂಡುಕೋರನೆ? ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕಗಳೆಂದು ಪ್ರತ್ಯೇಕಗೊಳಿಸಲಾರದಂತಹ ಬದುಕಿನ ಒಂದು ಅಖಂಡ ಹೊಸ ರೂಪವನ್ನು ಕಲ್ಪಿಸಿಕೊಳ್ಳಲೆತ್ನಿಸಿದ ಕಲಾವಿದನ ಮನಸ್ಸುಳ್ಳ ದಾರ್ಶನಿಕನೆ? ಅಥವಾ ಕೆಲವರು ಈಗಾಗಲೇ ಅವರ ವಿರುದ್ಧ ಹೊರಿಸಿರುವ ಆಪಾದನೆ ಸೂಚಿಸುವಂತೆ, ಅರೆಹುಚ್ಚನೆ? ಆದರೆ ಒಂದು ಮಟ್ಟದ ಬಂಡಾಯ, ಕಲ್ಪನಾಶೀಲತೆ ಹಾಗೂ ಹುಚ್ಚುತನ ಇಲ್ಲದೇ ಯಾರಾದರೂ ಏನಾದರೂ 'ಹೊಸ'ದನ್ನು ಮಾಡಿರುವರಾ? ಎಂಬ ಪ್ರಶ್ನೆಯನ್ನು ಇಲ್ಲಿ ನಮಗೆ ನಾವೇ ಕೇಳಿಕೊಳ್ಳಬೇಕಾಗುತ್ತದೆ.

ನನಗನ್ನಿಸುತ್ತದೆ, ಲೋಹಿಯಾರದ್ದು ಒಂದರೊಡನೊಂದು ಹಾಸು ಹೊಕ್ಕಿಕೊಂಡ ಹಲವು ಸುತ್ತುಗಳ ವ್ಯಕ್ತಿತ್ವವೆಂದು. ಅತ್ಯಂತ ಒಳಗಿನದು ಸೃಜನಶೀಲ ಕಲಾವಿದನದ್ದಾಗಿದ್ದರೆ, ಅತ್ಯಂತ ಹೊರಗಿನದ್ದು ಅಧಿಕಾರದ ಬಾಗಿಲು ತಟ್ಟುತ್ತಿದ್ದ ರಾಜಕಾರಣಿಯದ್ದು. ಇವುಗಳ ಮಧ್ಯೆ ಬರುತ್ತವೆ ಚರಿತ್ರಕಾರನ, ಅರ್ಥಶಾಸ್ತ್ರಜ್ಞನ, ಭಾಷಾವಿಜ್ಞಾನಿಯ, ಸಮಾಜವಿಜ್ಞಾನಿಯ, ಮಾನವಶಾಸ್ತ್ರಜ್ಞನ, ಸೌಂದರ್ಯಮೀಮಾಸಂಕನ, ತತ್ವಜ್ಞಾನಿಯ ಹಾಗೂ ಹೋರಾಟಗಾರನ ಸುತ್ತುಗಳು. ಇದು ಅಪರೂಪದ ಸಮೃದ್ಧ ವ್ಯಕ್ತಿತ್ವ. ಹಾಗೇ, ಸನಾತನ ಜಾತಿ ವ್ಯವಸ್ಥೆಯಿಂದಾಗಿ ಬದುಕಿನ ಆಸಕ್ತಿಗಳನ್ನು ವಿಂಗಡಿಸಿಕೊಂಡು ಸೃಜನಶೀಲತೆಯನ್ನೇ ಛಿದ್ರವಿಚ್ಛಿದ್ರಗೊಳಿಸಿಕೊಂಡಿರುವ ಇಂಡಿಯಾದ ಕೋಣೆ ಕೋಣೆಯಾದ ಮನಸ್ಸು ಇಡಿಯಾಗಿ ಅರ್ಥ ಮಾಡಿಕೊಳ್ಳಲು ಹೆಣಗಬೇಕಾದಂತಹ ಸಂಕೀರ್ಣ ವ್ಯಕ್ತಿತ್ವವಿದು. ಈ ದೇಶದ 'ಬುದ್ಧಿಜೀವಿ' ಎಂದು ಕರೆಸಿಕೊಳ್ಳಲಾಗುವ ಸಕಲಶಾಸ್ತ್ರಜ್ಞ ಕೂಡಾ ಈ ಸಂಕೀರ್ಣತೆಯ ಸವಾಲನ್ನು ಸ್ವೀಕರಿಸುವಲ್ಲಿ ವಿಫಲಗೊಂಡಿದ್ದಾನೆ ಎಂದೇ ಹೇಳಬೇಕು. ಬದಲಾಗಿ ಆತ ಏರುಹುಬ್ಬಿನ ನಿರ್ಲಕ್ಷ್ಯದ ಸುಲಭ ಹಾಗೂ ಸರ್ವಜ್ಞ ಗರ್ವದ ದಾರಿ ಆರಿಸಿಕೊಂಡಿದ್ದಾನೆ. ಇಂಡಿಯಾದ ಬೌದ್ಧಿಕತೆಯು ಪ್ರಮುಖವಾಗಿ ಮೇಲ್ಜಾತೀ ಪಾಂಡಿತ್ಯಶೀಲ ಧೋರಣೆಗಳ ಚೌಕಟ್ಟಿನೊಳಗೇ ಕೆಲಸ ಮಾಡುತ್ತಾ ಬಂದಿದೆ ಎಂಬ ಸಂಗತಿಯ ಹಿನ್ನೆಲೆಯಲ್ಲಿ ಇದು ಸಹಜವೇ ಆಗಿದೆ. ಪ್ರಸಕ್ತ ಪುಸ್ತಕದ ತಮ್ಮ ಲೇಖನದಲ್ಲಿ ಭೋಲಾ ಚಟರ್ಜಿ ಅವರು ಈ ಬಗ್ಗೆ ಸಮರ್ಪಕವಾದ ಪ್ರತಿಕ್ರಿಯೆಯನ್ನೇ ವ್ಯಕ್ತಪಡಿಸಿದ್ದಾರೆ: "ಈ ಬಗೆಯ ನಿರ್ಲಕ್ಷ್ಯದ ಬಗ್ಗೆ ಯಾರಾದರೂ ಆಕ್ಷೇಪವನ್ನಾದರೂ ಎತ್ತಬೇಕೇಕೆ? ಶಂಕರಾಚಾರ್ಯರು ಮನೆಮಾತಾಗಿ ರಾರಾಜಿಸುತ್ತಿರುವಾಗ, ಬುದ್ಧನನ್ನು ಕೇವಲ ವರ್ಷಕ್ಕೊಮ್ಮೆ ಉತ್ಸವರೂಪದಲ್ಲಷ್ಟೇ ನೆನಪು ಮಾಡಿಕೊಳ್ಳಲಾಗುತ್ತಿಲ್ಲವೇ?".

ಲೋಹಿಯಾ ಬುದ್ಧನಿಗೆ ಬಹುಶಃ ಸಮಾನರಲ್ಲದಿರಬಹುದು. ಅಥವಾ ಬೇರೊಂದು ಮಟ್ಟದಲ್ಲಿ ಆತನಿಗಿಂತ ಹೆಚ್ಚು ಬಂಡುಕೋರರಾಗಿದ್ದಿರಲೂಬಹುದು. ಆದರೆ ಬುದ್ಧನ ವ್ಯಕ್ತಿತ್ವ ಮೂಲಭೂತವಾಗಿ ಪ್ರತಿಪಾದಾತ್ಮಕವಾದುದಾಗಿದ್ದರೆ ಲೋಹಿಯಾರದ್ದು

ಹೋರಾಟಾತ್ಮಕವಾದದ್ದು. ಲೋಹಿಯಾ ತಮ್ಮನ್ನು 'ಉದಾರತತ್ವ ತೀವ್ರ ಕಾರ್ಯಕ್ರಮವಾದಿ' ಎಂದು ಗುರುತಿಸಿಕೊಳ್ಳುತ್ತಿದ್ದರು. ರಾಜಕಾರಣ ಅವರಿಗೆ ಧರ್ಮದಂತೆ ಸತ್ಯಾನ್ವೇಷಣೆಯ ಮಾರ್ಗವಾಗಿತ್ತು. ಅವರು ಧರ್ಮವನ್ನು ದೀರ್ಘಾವಧಿ ರಾಜಕಾರಣವೆಂದೂ ರಾಜಕಾರಣವನ್ನು ಅಲ್ಪಾವಧಿ ಧರ್ಮವೆಂದೂ ವರ್ಣಿಸಿದ್ದರು. ಸತ್ಯವೆಂಬುದು ಅವರಿಗೆ ಅಧ್ಯಾತ್ಮಿಕ ಮೌಲ್ಯ ಹೇಗೋ ಲೌಕಿಕ ಮೌಲ್ಯವೂ ಆಗಿತ್ತು. ಸತ್ಯವು ಅಮೂರ್ತ ಮೂರ್ತಗಳ ನಡುವೆ ತುಯ್ಯುತ್ತಾ (ತಾತ್ವಿಕ ರೂಪ ಹಾಗೂ ಕಾರ್ಯಕ್ರಮಗಳ ರೂಪಗಳ ನಡುವೆ) ತನ್ನ ಪೂರ್ಣರೂಪವನ್ನು ತೆರೆದುಕೊಳ್ಳುತ್ತಾ ಹೋಗುವಂತಾದಾಗ ಮಾತ್ರ ಅದು ಮನುಷ್ಯನ ನೋವುಗಳನ್ನು ಮಾಯಿಸಬಲ್ಲ ಶಕ್ತಿ ಗಳಿಸಿಕೊಳ್ಳುತ್ತದೆ ಎಂದು ಅವರು ತಿಳಿದಿದ್ದರು. ಇಂಡಿಯಾದ ಮಟ್ಟಿಗೆ, ಈ ಸತ್ಯಾನ್ವೇಷಣೆಯ ಮೂರು ಪ್ರಮುಖ ಪ್ರಯತ್ನಗಳಾದ 'ಉದಾರತತ್ವ ಉದಾರ ಕಾರ್ಯಕ್ರಮ'ದ ಬುದ್ಧವಾದ(ಬೌದ್ಧ ಧರ್ಮ), 'ತೀವ್ರ ತತ್ವ ಉದಾರ ಕಾರ್ಯಕ್ರಮ'ದ ಶಾಂಕರ ಭಾಷ್ಯ ಹಾಗೂ 'ತೀವ್ರ ತತ್ವ ತೀವ್ರ ಕಾರ್ಯಕ್ರಮ'ದ ಮಾರ್ಕ್ಸ್‌ವಾದ(ಕಮ್ಯುನಿಸಂ)ಗಳ ದೌರ್ಬಲ್ಯಗಳನ್ನು ಲೋಹಿಯಾ ವಿಶ್ಲೇಷಿಸಿದ್ದರು.

ಮೊದಲನೆಯದರಲ್ಲಿ ಹಲವು ಮುಖಗಳಲ್ಲಿ ಕಾಣಿಸಿಕೊಳ್ಳುವ ಸತ್ಯ, ಕಾರ್ಯಕ್ರಮದ ಉದಾರತೆಗೆ ಸಿಕ್ಕಿ ಚದುರಿಹೋಗುವ ಸಾಧ್ಯತೆ ಇದೆ; ಆದದ್ದೂ ಹಾಗೆಯೇ. ಎರಡನೆಯದರಲ್ಲಿ; ಸತ್ಯವೆಂಬುದು ನಿರ್ದಿಷ್ಟ ನಿರಪೇಕ್ಷವೂ, ವಾಸ್ತವದಾಚೆಯ ಅತಿವಾಸ್ತವ ವಲಯಗಳಲ್ಲಿ ಗೂಡು ಕಟ್ಟಿಕೊಂಡಿರುವುದೂ ಆಗಿದ್ದು, ವಾಸ್ತವ ಪ್ರಪಂಚದಲ್ಲಿ ಒಂದು ಮೌಲ್ಯವೇ ಆಗದೆ ವಾಸ್ತವವನ್ನು ಅಲ್ಲಾಡಿಸಬಯಸದ ಜಡರೂಪವಾಗಿ ಬಿಟ್ಟಿದೆ. ಇದರ ಪರಿಣಾಮವೆಂದರೆ ಇಂಡಿಯಾದ ವಾಸ್ತವ ಬದುಕು ಎಲ್ಲ ಕೊಳಕು–ಅಸಹ್ಯ ಸಂಕಟಗಳೊಂದಿಗೆ ಪ್ರತಿಭಟನೆಯ ಸೊಲ್ಲಿಲ್ಲದೆ ಹೊಂದಿಕೊಂಡು ಹೋಗುವ ಕ್ರಿಯಾವಿಹೀನತೆಗೆ ಈಡಾಗಿದೆ. ಮೂರನೆಯದರಲ್ಲಿ ಸತ್ಯ ಇಡಿಯಾಗಿ ಒಂದು ಕ್ರಿಯಾರೂಪದೊಡನೆ (ಆಸ್ತಿ ಸಂಬಂಧಗಳ ಮಾರ್ಪಾಡು) ಗುರುತಿಸಲ್ಪಟ್ಟು ಸತ್ಯಾನ್ವೇಷಣೆಯ ಬಾಗಿಲು ಅಲ್ಲಿಗೇ ಮುಚ್ಚಲ್ಪಟ್ಟಿದೆ. ಇಲ್ಲಿ, ಸತ್ಯವು ಸಂಪೂರ್ಣ ರೂಪದಲ್ಲಿ ಹಿಡಿದಿಡಲ್ಪಟ್ಟಿದೆ ಎಂದು ಭಾವಿಸಲಾಗಿರುವುದರಿಂದ ಒಂದು ಘಟ್ಟದಾಚೆ ಚಲನೆಯೇ ಇಲ್ಲವಾಗಿ ವಾಸ್ತವವನ್ನೇ ಅಂತಿಮ ಆದರ್ಶವೆಂದು ಅನಿವಾರ್ಯವಾಗಿ ಭ್ರಮಿಸಬೇಕಾದ, ಭ್ರಮಿಸುವಂತೆ ಮಾಡಬೇಕಾದ ನೋವು ಹಾಗೂ ಕ್ರೌರ್ಯ ಸುರುವಾಗುತ್ತದೆ. ಆದರೆ ಸತ್ಯದ ವಿಚ್ಛಿದ್ರೀಕರಣ, ಕ್ರಿಯಾವಿಹೀನತೆ, ಭ್ರಮೆ, ನೋವು, ಕ್ರೌರ್ಯಗಳಲ್ಲೇ ಮುಳುಗೆದ್ದು ತೇಲುವ ಮೂರನೇ ಜಗತ್ತಿನ ದೇಶಗಳು, ಸತ್ಯಾನ್ವೇಷಣೆಯ ಈ ಮೂರು ಮಾರ್ಗಗಳನ್ನು ತೊರೆದು ಉದಾರ ತತ್ವ–ತೀವ್ರ ಕಾರ್ಯಕ್ರಮದ ಮಾರ್ಗದ ಪ್ರಯೋಗ ಮಾಡುವುದೊಂದೇ ಅದಕ್ಕೆ ಉಳಿದಿರುವ ದಾರಿ ಎಂಬುದು ಲೋಹಿಯಾ ಅವರ ತೀರ್ಮಾನವಾಗಿತ್ತು. ಗಾಂಧೀಜಿ ಆ ಹೊತ್ತಿಗಾಗಲೇ ಈ ಮಾರ್ಗದ ಪ್ರಯೋಗದಲ್ಲಿ ತೊಡಗಿದ್ದರು. ಸತ್ಯವನ್ನು ಅದರ ಹಲವು ಅಸಂಖ್ಯಾತ ರೂಪಗಳಲ್ಲಿ ಕಾಣುವುದಷ್ಟೇ ಅಲ್ಲ, ಅವು ಚದುರಿಹೋಗದಂತೆ ತೀವ್ರ(ಖಚಿತ)

ಕಾರ್ಯಕ್ರಮಗಳ ಮೂಲಕ ಸತ್ಯದ ಸಂಕೀರ್ಣವನ್ನು ಸಾಕ್ಷಾತ್ಕಾರಗೊಳಿಸುತ್ತಾ ಹೋಗುವ ಈ ನಿರಂತರ ಪ್ರಯೋಗದ ಮೂಲಕ ಮಾತ್ರ ಇಂಡಿಯಾ ತನ್ನ ಕೂಪದೊಳಗಿಂದ ಮೇಲೆದ್ದು ಮತ್ತೆ ಕೂಪಕ್ಕೆ ಜಾರುವ ಭಯವಿಲ್ಲದೆ ಮುನ್ನಡೆಯಬಲ್ಲುದೆಂಬುದು ಲೋಹಿಯಾ ಅವರ ಕಾಣ್ಕೆಯಾಗಿತ್ತು.

ಆದರೆ ಸ್ವಾತಂತ್ರ್ಯಾಂದೋಲನದ ಸಮಯದಲ್ಲಿ ತನ್ನ ಕ್ರಿಯಾಶೀಲತೆಯ ಉತ್ಕಟ ಘಟ್ಟಗಳನ್ನು ಮುಟ್ಟಿದ್ದ ಈ ಪ್ರಯೋಗ, ಗಾಂಧೀಜಿ ಕಣ್ಮರೆಯಾದ ಕೂಡಲೇ ಸರ್ಕಾರಿ ಗಾಂಧೀವಾದ(ನೆಹ್ರೂ) ಮತ್ತು ಆಶ್ರಮ ಗಾಂಧೀವಾದ(ವಿನೋಬಾ)ಗಳಾಗಿ ಟಿಸಿಲೊಡೆದು ಶಕ್ತಿಪತನಕ್ಕೊಳಗಾದಾಗ ದಿಗ್ಭ್ರಮೆಗೀಡಾದಾಗ ಲೋಹಿಯಾ, ಪಾಖಂಡೀ (heretical) ಗಾಂಧೀವಾದದ ಪ್ರತಿಪಾದನೆ ಮಾಡಿದರು. ಗಾಂಧೀ ಪ್ರಯೋಗದ ಭಾವವನ್ನಷ್ಟೇ ಉಳಿಸಿಕೊಂಡು ಕಾಲ–ವಿವೇಚನೆಗಳಿಗನುಗುಣವಾಗಿ ಆಧುನಿಕಗೊಳ್ಳುವ ಪರಿಷ್ಕಾರದ ಪ್ರಯತ್ನ ಇದಾಗಿತ್ತು. ಪೊರೆ ಬಿಟ್ಟ ಗಾಂಧೀವಾದವೆಂದು ಇದನ್ನು ಕರೆಯಬಹುದೇನೋ! ಇದಕ್ಕೆ ಚರಕಾ ಎಂಬುದು ಸಂಕೇತ–ಸ್ವಾವಲಂಬನೆಯ ಮತ್ತು ವಿಕೇಂದ್ರೀಕರಣದ–ಮಾತ್ರ. ಈ ಗುರಿಗಳ ಸಾಧನೆಗಾಗಿ ಅವರು ಪ್ರತಿಪಾದಿಸಿದ್ದು ಓಟು (ಸಂಸದೀಯ ರಾಜಕಾರಣ) ಗುದ್ದಲಿ (ರಚನಾತ್ಮಕ ಕಾರ್ಯಕ್ರಮ) ಹಾಗೂ ಸೆರೆಮನೆ (ಅನ್ಯಾಯದ ವಿರುದ್ಧ ಪ್ರತಿಭಟನೆ) ತಾತ್ವಿಕ ಮಟ್ಟದಲ್ಲಿ ಕ್ರಾಂತಿಕಾರಿಯಾಗಿ ಕಾಣುವ ಈ ಕಾರ್ಯಕ್ರಮ ವಾಸ್ತವ ಮಟ್ಟದಲ್ಲಿ ತನ್ನ ಸಮತೋಲನವನ್ನು ಕಳೆದುಕೊಳ್ಳಲಾರಂಭಿಸಿದ್ದೇ ಲೋಹಿಯಾ ಸಮಾಜವಾದದ ದುರಂತವಾಯಿತು. ಸ್ವಾತಂತ್ರ್ಯಾಂದೋಲನದ ಆದರ್ಶ ಆಶಯಗಳನ್ನೆಲ್ಲಾ ನುಚ್ಚುನೂರು ಮಾಡತೊಡಗಿದ್ದ ನೆಹ್ರೂ ಅವರ ಪರಾವಲಂಬನಶೀಲವಾದ ಹಾಗೂ ಕೇಂದ್ರೀಕರಣದ ರಾಜಕಾರಣ ಅವರನ್ನು ಎಷ್ಟು ಕೋಪಾವಿಷ್ಟರನ್ನಾಗಿ ಮಾಡುತ್ತಿತ್ತೆಂದರೆ, ಅವರು ಪ್ರತಿಭಟನೆಯಲ್ಲೇ ತಮ್ಮೆಲ್ಲ ಶಕ್ತಿ ವ್ಯಯ ಮಾಡುವಂತಾಯಿತು. ಓಟು–ಗುದ್ದಲಿ–ಸೆರೆಮನೆಗಳ ಪೈಕಿ ಸೆರೆಮನೆ ಮಾತ್ರ ಪ್ರಾಮುಖ್ಯತೆ ಪಡೆಯುವಂತಾಯಿತು. ಲೋಹಿಯಾ ಅವರ ಇಡೀ ದರ್ಶನ ವಾಸ್ತವ ಮಟ್ಟದಲ್ಲಿ ಬರೀ ಪ್ರತಿಭಟನೆಯಾಗಿ ಮೂರ್ತರೂಪ ಪಡೆದುಕೊಳ್ಳತೊಡಗಿತು. ಆದರೆ 'ಸ್ಥಿರತೆ ಬೇಕಾದುದು ಮರಗಳಿಗೆ, ಬಂಡೆಗಳಿಗೆ. ಅನ್ಯಾಯಗಳ ವಿರುದ್ಧ ಆಸ್ಫೋಟಿಸಬೇಕಾದ ರಾಷ್ಟ್ರಕ್ಕಲ್ಲ' ಎಂದು ಅಬ್ಬರಿಸುತ್ತಿದ್ದ ಈತನ ಪ್ರತಿಭಟನೆಯ ಹಿಂದಿನ ನೋವು, ಕಳಕಳಿ, ಆಶಯಗಳನ್ನು, ಯಾವಾಗಲೂ ಸ್ಥಿರತೆಯತ್ತಲೇ ತುಯ್ಯುವ (ಶಂಕರಾಚಾರ್ಯರ) ಈ ರಾಷ್ಟ್ರ ಗ್ರಹಿಸುವ ಪ್ರಯತ್ನವನ್ನೇ ಮಾಡಲಿಲ್ಲ. ಎಲ್ಲ ರೀತಿಯ ಅನ್ಯಾಯ, ಅಸಮಾನತೆ ಹಾಗೂ ಅನಭಿಜ್ಞತೆಗಳನ್ನು ಸಹಿಸಲೆಳಸುವ ಸ್ಥಿರತೆಯ ವಿರುದ್ಧ ಸಮರ ಸಾರಿದ ಈ ಬಂಡುಕೋರ ಕೇವಲ ಅರಾಜಕನೆಂದು ಪ್ರತಿಬಿಂಬಿತವಾಗುತ್ತಿರುವುದು ಇತ್ತೀಚಿನ ಚರಿತ್ರೆಯ ದುರಂತ. ಇದರಲ್ಲಿ ಸ್ವತಃ ಲೋಹಿಯಾ ಅವರ ಸಂಯಮಹೀನತೆಯ ಪಾಲೆಷ್ಟಿದೆಯೋ ಅಷ್ಟೇ ಪಾಲು ಡೊಗ್ಗು ಸಲಾಮಿನ ಆಧುನಿಕ ಚರಿತ್ರೆಕಾರರದ್ದೂ ಇದೆ.

ಈ ವಿಚಿತ್ರ, ಅನನ್ಯ ಹಾಗೂ ಉಜ್ವಲ ಪ್ರತಿಭೆಯ ಬಂಡುಕೋರನ ಪ್ರತಿಭಟನೆಯ ಹಿಂದಿನ ನಿರ್ಲಕ್ಷಿತ ನೋವು, ಕಳಕಳಿ ಹಾಗೂ ಆಶಯಗಳನ್ನು ಅರ್ಥ ಮಾಡಿಕೊಳ್ಳುವ ಒಂದು ನಮ್ರ ಹಾಗೂ ಪ್ರಾಥಮಿಕ ಪ್ರಯತ್ನವಾಗಿ ಈ ವಿಶೇಷಾಂಕವನ್ನು ಯೋಜಿಸಲಾಗಿದೆ. ಈ ಯೋಜನೆಯ ನಂತರ ಬರಹಗಳನ್ನು ಸಂಗ್ರಹಿಸಹೊರಟ ನನ್ನ ಪಾಡನ್ನು ಇಲ್ಲಿ ವಿವರಿಸಹೋಗದಿರುವುದೇ ಕ್ಷೇಮವೆಂದು ಕಾಣುತ್ತದೆ. ಲೋಹಿಯಾ ಕುರಿತು ನಮ್ಮಲ್ಲಿ ಅಭಿಮಾನ ಅಥವಾ ಧಿಕ್ಕಾರದೊಡನೆ ಮಾತನಾಡುವವರೇ ಹೆಚ್ಚಿದ್ದು ಆ ಬಗ್ಗೆ ಜವಾಬ್ದಾರಿಯಿಂದ ಬರೆಯಬಲ್ಲವರೇಕೋ ಕಾಣದೇ ಹೋಗುತ್ತಿದ್ದಾರೆ. ಈ ವಿಶೇಷಾಂಕಕ್ಕೆ ಏನೂ ಬರೆಯಬಾರದೆಂದಿದ್ದ ನಾನು ಕೊನೇ ನಿಮಿಷದಲ್ಲಿ ಬೇರೆ ದಾರಿಯಿಲ್ಲದೆ ಸೇತು ಲೇಖನವೊಂದನ್ನು (Bridge article) ಬರೆಯಲೇಬೇಕಾಗಿ ಬಂದುದು ಹಾಗೂ ಎರಡು ಹಳೆಯ ಇಂಗ್ಲಿಷ್ ಲೇಖನಗಳಿಗೆ ಮೊರೆಹೋಗಬೇಕಾದುದು, ಮುಂದೆ ಕನ್ನಡದಲ್ಲಿ ಲೋಹಿಯಾ ಕುರಿತ ಸಾಹಿತ್ಯ ಪ್ರಕಟಿಸುವುದರಲ್ಲಿ ಎದುರಾಗುವ ಕಷ್ಟಗಳಿಗೆ ಮುನ್ಸೂಚನೆಗಳಾಗಿರಬಹುದು. ಲೋಹಿಯಾ ಅವರನ್ನು, ಘೋಷಣೆಗಳ ಮಟ್ಟವನ್ನು ಮೀರಿ ಇಂಡಿಯಾದ ಅಧ್ಯಯನದ ಮೂಲಕ ಅರ್ಥ ಮಾಡಿಕೊಳ್ಳುವ, ವಿಮರ್ಶಿಸುವ ಪ್ರವೃತ್ತಿ ಬೆಳೆಯದೇ ಹೋದಲ್ಲಿ ಅವರ ಚಿತ್ರ ಇನ್ನಷ್ಟು ಮಂಕಾಗುವ ಹಾಗೂ ವಕ್ರಗೊಳ್ಳುವ ಅಪಾಯವಿದೆ ಎಂಬುದನ್ನು ಲೋಹಿಯಾ ಅಭಿಮಾನಿಗಳು ಬೇಗನೆ ಮನದಟ್ಟು ಮಾಡಿಕೊಳ್ಳಬೇಕಾಗಿದೆ ಎಂಬುದನ್ನು ಇಲ್ಲಿ ಸೂಚಿಸಿದರೆ ತಪ್ಪಲ್ಲ ಎಂದು ಭಾವಿಸಿರುವೆ.

ವಿಶ್ವಾಸದೊಡನೆ ಈ ವಿಶೇಷಾಂಕದ ಜವಾಬ್ದಾರಿಯನ್ನು ನನ್ನ ಮೇಲೆ ಹೊರಿಸುವ ಮೂಲಕ ಲೋಹಿಯಾರವರನ್ನು ಇನ್ನಷ್ಟು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವಲ್ಲಿ ನೆರವಾದ ಪ್ರಿಯ ಚಂದ್ರಶೇಖರ ಪಾಟೀಲರಿಗೆ ನಾನು ಕೃತಜ್ಞತೆ ಸಲ್ಲಿಸದಿರಲಾರೆ. ಹಾಗೆಯೇ ಸಕಾಲದಲ್ಲಿ, ತುಸು ತಡವಾಗಿ ಹಾಗೂ ತೀರ ತಡವಾಗಿ ಅಂತೂ ಹೇಗೋ ಲೇಖನಗಳನ್ನು ಒದಗಿಸಿ ಸಹಕರಿಸಿದ ಹಾಗೂ ಕೆಲವು ಇಂಗ್ಲಿಷ್ ಲೇಖನಗಳ ಅನುವಾದಗಳನ್ನು ಮಾಡಿಕೊಟ್ಟ ಸ್ನೇಹಿತರಿಗೆ (ಅದರಲ್ಲೂ ಶ್ರೀ ಅಬ್ಬಿಗೇರಿ ವಿರೂಪಾಕ್ಷಪ್ಪ ಅವರ ಲೇಖನವನ್ನು ಸೂಚಿಸಿದ ಗೆಳೆಯ ಕಾಳೇಗೌಡ ನಾಗವಾರ ಹಾಗೂ ಕೆಲವು ಲೇಖನಗಳ ಅಚ್ಚುಕಟ್ಟು ಪ್ರತಿ ಮಾಡಿಕೊಟ್ಟ ಗೆಳೆಯ ಚಾಮರಾಜರಿಗೆ) ನಾನು ಆಭಾರಿಯಾಗಿರುವೆ. ಅಲ್ಲದೇ ಲೋಹಿಯಾ ಕುರಿತ ನನ್ನೊಳಗಿನ ಕಲ್ಪನೆ ಸಮತೋಲದೆಡೆಗೆ ಸರಿಯುವಂತೆ ಮಾಡಿದ, ಲೋಹಿಯಾರನ್ನು ಹತ್ತಿರದಿಂದ ಕಂಡವರಾದ ಶ್ರೀ ಕಿಷನ್ ಪಟ್ನಾಯಕ್, ಪ್ರೊ.ಕೇಶವರಾವ್ ಜಾಧವ್, ಶ್ರೀ ಸಚ್ಚಿದಾನಂದ ಸಿನ್ಹಾ, ಶ್ರೀಮತಿ ಇಂದುಮತಿ ಕೇಲ್ಕರ್ ಹಾಗೂ ಪ್ರೊ. ರಮಾ ಮಿತ್ರ ಅವರಿಗೂ ನಾನು ಋಣಿಯಾಗಿರುವೆ.

೨೫. ೦೭. ೧೯೮೦ **ಡಿ.ಎಸ್. ನಾಗಭೂಷಣ**
ಹೊಸದೆಹಲಿ

ಲೋಹಿಯಾ ಶತಮಾನೋತ್ಸವ ವರ್ಷ

ಇಂದು ಲೋಹಿಯಾ ನಮ್ಮೊಂದಿಗಿದ್ದಿದ್ದರೆ ಅವರು ನೂರನೇ ವರ್ಷಕ್ಕೆ ಕಾಲಿಡುತ್ತಿದ್ದರು. ಆದರೆ ಅವರು ಗತಿಸಿಯೇ ನಾಲ್ಕು ದಶಕಗಳು ಉರುಳಿದರೂ ರಾಜಕೀಯ, ಹೋರಾಟ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಅವರ ಚಿಂತನೆಗಳು ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವಾಗಿವೆ.

ಬಹುಮುಖೀ ವ್ಯಕ್ತಿತ್ವದ ಲೋಹಿಯಾರ ನೆನಪುಗಳು ಪ್ರಸಕ್ತ ಸಂದರ್ಭದಲ್ಲಿ ನಮ್ಮನ್ನು ಚಿಂತೆಗೀಡು ಮಾಡುತ್ತಿವೆ, ಚಿಂತನೆಗೂ ಹಚ್ಚುತ್ತವೆ. ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಲೋಹಿಯಾ ಮಹಾನ್ ದೇಶಪ್ರೇಮಿಯಾಗಿದ್ದರು. ಆದಾಗ್ಯೂ ಅವರ ವಿಶ್ವ ಮಾನವನ ಪರಿಕಲ್ಪನೆಗೆ ಅವರ ದೇಶಪ್ರೇಮ ಅಡ್ಡಿಯಾಗುವಂಥದ್ದಾಗಿರಲಿಲ್ಲ.

ಪೊಲೀಸ್ ಮತ್ತು ಸೇನೆರಹಿತ ಜಗತ್ತಿನ ಕನಸು ಕಂಡಿದ್ದ ಲೋಹಿಯಾ ಅಸಾಧಾರಣ ಮಾನವಪ್ರೇಮಿಯಾಗಿದ್ದರು. ಅವರು ಹುಟ್ಟಾ ಬಂಡುಕೋರರಾಗಿದ್ದರು. ಸ್ವಾತಂತ್ರ್ಯ ಬಯಸುವ ಸ್ವಭಾವ ಅವರದಾಗಿತ್ತು. ಅಂತೆಯೇ ಅವರು ಸ್ವತಂತ್ರ ಭಾರತದಲ್ಲೂ ಸ್ವಾತಂತ್ರ್ಯಕ್ಕಾಗಿ, ಪ್ರತಿಭಟನೆಯ ಹಕ್ಕಿಗಾಗಿ ಹೋರಾಟ ಮುಂದುವರಿಸಿದರು.

ಲೋಹಿಯಾರ ಮನುಷ್ಯಪ್ರೀತಿ ಅದೆಷ್ಟು ಗಾಢವಾಗಿತ್ತೆಂದರೆ ಜಾತಿ, ಲಿಂಗ ಕುರಿತ ಪ್ರತ್ಯೇಕತೆಯಿಂದ ಮುಕ್ತಾಗದ ಒಂದು ಸುಂದರ ಸಮಾಜದ ಕನಸನ್ನು ಅವರು ಕಂಡಿದ್ದರು. ಹೋರಾಟದ ರಾಜಕೀಯದಿಂದ ಬಸವಳಿದ ಆ ಜೀವಕ್ಕೆ ಸಾಹಿತ್ಯ ಹಾಗೂ ಸಾಹಿತಿಗಳ ಸಂಗ ಕಾಯಕಲ್ಪ ನೀಡುತ್ತಿತ್ತು.

ಸಮಾನತೆಯನ್ನಾಧರಿಸಿದ ಸಮಾಜದಲ್ಲೇ ಮನುಷ್ಯ ಘನತೆಯಿಂದ ಬದುಕಬಲ್ಲ ಎಂದು ಸಾರಿದ ಬಸವಣ್ಣನವರ ವೈಚಾರಿಕ ಕ್ರಾಂತಿಯ ಹಿನ್ನೆಲೆಯುಳ್ಳ ಕನ್ನಡಿಗರಿಗೆ ಲೋಹಿಯಾ ಚಿಂತನೆಗಳು ಅಪ್ಯಾಯಮಾನವೆನಿಸಿದವು.

ಕರ್ನಾಟಕದ ಮೊದಲ ರೈತ ಹೋರಾಟದಲ್ಲಿ ಪಾಲ್ಗೊಂಡ ಲೋಹಿಯಾ ಬಂಧನಕ್ಕೊಳಗಾದರು. ಅವರಿಂದಾಗಿ ಕಾಗೋಡು ರೈತ ಸತ್ಯಾಗ್ರಹ ರಾಷ್ಟ್ರದ ಗಮನ ಸೆಳೆಯಿತು. **ಹಿರಿಯ ಲೋಹಿಯಾವಾದಿ ನೀಲಗಂಗಯ್ಯ ಪೂಜಾರ ಹುಟ್ಟು ಹಾಕಿದ ಹೆಬ್ಬಳ್ಳಿ ರೈತ ಹೋರಾಟ ಕಾಗೋಡು ಸತ್ಯಾಗ್ರಹಕ್ಕಿಂತ ಕಡಿಮೆ ಮಹತ್ವದ್ದಲ್ಲ.** ಸಮಾಜವಾದಿ ಯುವಜನ ಸಭಾ, ಬರಹಗಾರರು ಮತ್ತು ಕಲಾವಿದರ ಒಕ್ಕೂಟ ಮತ್ತು ನವನಿರ್ಮಾಣ ಸಮಿತಿ ಇತ್ಯಾದಿ ಚಳವಳಿಗಳಿಗೆ ಲೋಹಿಯಾ ಸ್ಫೂರ್ತಿಯ ಸೆಲೆಯಾಗಿದ್ದರು.

ಪಿ. ಲಂಕೇಶ್, ಯು.ಆರ್. ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ, ಡಿ.ಎಸ್. ನಾಗಭೂಷಣ ಮೊದಲಾದ ಅನೇಕ ಹಿರಿ ಕಿರಿಯ ಸಾಹಿತಿಗಳು ಲೋಹಿಯಾ ವಿಚಾರಧಾರೆಯಿಂದ ಗಾಢವಾಗಿ ಪ್ರಭಾವಿತರಾಗಿದ್ದಾರೆ.

"ನನ್ನ ಜೀವನ ವಿಧಾನವನ್ನು, ಗ್ರಹಿಸುವ ಕ್ರಮವನ್ನು, ಆಲೋಚನೆಯನ್ನು, ಅಭಿವ್ಯಕ್ತಿ ಮಾಧ್ಯಮವನ್ನು, ಒಟ್ಟನಲ್ಲಿ ಸಮಗ್ರ ವ್ಯಕ್ತಿತ್ವವನ್ನು ಸಂಪೂರ್ಣ ಬದಲಿಸಿ ಹಾಕಿದ್ದು ಲೋಹಿಯಾರವರ ತತ್ವಚಿಂತನೆ. ಸದ್ಯದ ಭಾರತೀಯ ಸಂದರ್ಭದಲ್ಲಿ ಲೋಹಿಯಾ ಒಬ್ಬರೇ ಒರಿಜಿನಲ್ ಎನ್ನಿಸುವ ತತ್ವ ಮೀಮಾಂಸಕರು", ಎಂದಿದ್ದರು ಪೂರ್ಣಚಂದ್ರ ತೇಜಸ್ವಿ.

ಇಂಥ ಮಹಾನ್ ಚೇತನ ನಮ್ಮ ಪ್ರಕಾಶನ ಸಂಸ್ಥೆಗೆ ಒತ್ತಾಸೆಯಾಗಿರುವುದರಿಂದಲೇ ಪ್ರತಿಭೆಗಳನ್ನು ಗುರುತಿಸುವುದಷ್ಟೇ ಅಲ್ಲ ಅಂಥ ಪ್ರತಿಭೆಗಳು ಅರಳಿ ನಳನಳಿಸಲು ಸಾಹಿತ್ಯಕ ಸಾಂಸ್ಕೃತಿಕ ಪರಿಸರ ನಿರ್ಮಿಸುವುದು ನಮ್ಮ ಮುಖ್ಯ ಕಾಳಜಿಯಾಗಿದೆ. ನಮ್ಮ ಪ್ರಕಾಶನ ಈಗಾಗಲೇ ಕಾವ್ಯ, ಕತೆ, ಕಾದಂಬರಿ ಹಾಗೂ ವೈಚಾರಿಕ–ಹೀಗೆ ವಿವಿಧ ಪ್ರಕಾರಗಳಲ್ಲಿ ನೂರಕ್ಕೂ ಹೆಚ್ಚು ಕೃತಿಗಳನ್ನು ಹೊರತಂದಿದೆ.

ಸಾಹಿತ್ಯಕ ಬದ್ಧತೆ, ಸಾಂಸ್ಕೃತಿಕ ಕಾಳಜಿ ಹಾಗೂ ಸಾಮಾಜಿಕ ನ್ಯಾಯಕ್ಕೆ ಸದಾ ಒತ್ತು ಕೊಡುತ್ತಾ ಬಂದಿರುವ ನಮ್ಮ ಪ್ರಕಾಶನ ಸಂಸ್ಥೆ ಲೋಹಿಯಾ ಶತಮಾನೋತ್ಸವ ವರ್ಷದಲ್ಲಿ ಲೋಹಿಯಾರ ಆಶಯಗಳಿಗೆ ಇಂಬುಗೊಡುವ ಸೃಜನಶೀಲ ಹಾಗೂ ವೈಚಾರಿಕ ಕೃತಿಗಳನ್ನು ಹೊರತರಲು ಉದ್ದೇಶಿಸಿದೆ. ಆ ಮೂಲಕ ನಮ್ಮ ಪ್ರಕಾಶನ ತನ್ನ ಮಿತಿಯಲ್ಲೇ ಲೋಹಿಯಾ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಮುಂದಾಗಿದೆ. ಲೋಹಿಯಾ ಶತಮಾನೋತ್ಸವ ಮಾಲಿಕೆಯಲ್ಲಿ ಈಗಾಗಲೇ ೧೩ ಕೃತಿಗಳು ಹೊರಬಂದಿದ್ದು, ಇದೇ ಮಾರ್ಚ್ ೨೩ ರಂದು ಲೋಹಿಯಾ ಜನ್ಮದಿನೋತ್ಸವದಂದು ೧೪ನೇ ಕೃತಿಯಾಗಿ 'ಲೋಹಿಯಾ : ವ್ಯಕ್ತಿ–ವಿಚಾರ–ವಿಮರ್ಶೆ' ಪುಸ್ತಕವು ಹೊರಬರುತ್ತಿರುವುದು ಪ್ರಕಾಶನಕ್ಕೆ ಅತ್ಯಂತ ಹೆಮ್ಮೆಯ ವಿಷಯ. ಏಕೆಂದರೆ ಮೂರು ದಶಕಗಳ ಹಿಂದೆ ಗೆಳೆಯ ಡಿ.ಎಸ್. ನಾಗಭೂಷಣ ಅವರು ಸಂಕ್ರಮಣ ಪತ್ರಿಕೆಯ ಸಂಪಾದಕರಾದ ಪ್ರೊ. ಚಂದ್ರಶೇಖರ ಪಾಟೀಲರ ಮನವಿಯ ಮೇರೆಗೆ ಸಂಕ್ರಮಣ ಸಂಚಿಕೆಯನ್ನು ಲೋಹಿಯಾ ವಿಶೇಷಾಂಕವಾಗಿ ಸಂಪಾದಿಸಿದ್ದು ಹಲವರಿಗಾದರೂ ಗೊತ್ತಿರುವ ವಿಷಯವೇ. ನಂತರ ಚಂಪಾ ಅವರು ಅದನ್ನು ಪುಸ್ತಕವನ್ನಾಗಿ ಪ್ರಕಟಿಸಿ ಓದುಗರಿಗೆ ತಲುಪಿಸಿದರು. ಈಗ ಡಿ.ಎಸ್. ನಾಗಭೂಷಣ ಅವರು ಅದನ್ನು ಪರಿಷ್ಕೃತ ಆವೃತ್ತಿಯಾಗಿ ಪ್ರಕಾಶನಕ್ಕಾಗಿ ಸಂಪಾದಿಸಿ ಕೊಟ್ಟಿದ್ದಾರೆ. ಈ ಆವೃತ್ತಿಗೆ ಮತ್ತೆ ಕೆಲವು ವಿದ್ವಾಂಸರು, ಗೆಳೆಯರು ಲೇಖನಗಳನ್ನು ಬರೆದುಕೊಟ್ಟು ಸಹಕರಿಸಿದ್ದಾರೆ. ಪರಿಷ್ಕೃತ ಆವೃತ್ತಿಯನ್ನು ರಚಿಸಿಕೊಟ್ಟ ನಾಗಭೂಷಣ ಅವರಿಗೂ, ಲೇಖನಗಳನ್ನು ಬರೆದು ಕೊಟ್ಟ ಎಲ್ಲಾ ಲೇಖಕರಿಗೂ ಮತ್ತು ಪರಿಷ್ಕೃತ ಆವೃತ್ತಿಯನ್ನು ಪ್ರಕಟಿಸಲು ತಮ್ಮ ಒಪ್ಪಿಗೆಯನ್ನು ಕೊಟ್ಟ ಹಿರಿಯರಾದ ಪ್ರೊ. ಚಂದ್ರಶೇಖರ ಪಾಟೀಲರಿಗೂ ಪ್ರಕಾಶನ ಕೃತಜ್ಞವಾಗಿದೆ.

ಈ ಕೃತಿಯನ್ನು ಪ್ರಕಟಿಸಲು ಅನುವು ಮಾಡಿಕೊಟ್ಟ ಗೆಳೆಯ ಡಿ.ಎಸ್. ನಾಗಭೂಷಣ ಅವರಿಗೆ, ಅಚ್ಚುಕಟ್ಟಾಗಿ ಪುಸ್ತಕವನ್ನು ವಿನ್ಯಾಸ ಮಾಡಿ, ಸುಂದರ ಮುಖಪುಟ ರಚಿಸಿಕೊಟ್ಟ ಮಂಜುನಾಥ್ ಲತಾ ಅವರಿಗೆ, ಎಂದಿನಂತೆ ಸುಂದರವಾಗಿ ಮುದ್ರಿಸಿಕೊಟ್ಟ ವಿಶ್ವಾಸ್ ಪ್ರಿಂಟ್ಸ್‌ನ ಎಲ್ಲಾ ಸಿಬ್ಬಂದಿವರ್ಗಕ್ಕೆ, ಎಲ್ಲಕ್ಕಿಂತ ಮಿಗಿಲಾಗಿ ಕೊಂಡು ಓದಿ ಪ್ರಕಾಶನವನ್ನು ಬೆಂಬಲಿಸುತ್ತಿರುವ ಕನ್ನಡದ ಪ್ರೀತಿಯ ಓದುಗರಿಗೆ ಪ್ರಕಾಶನ ಕೃತಜ್ಞವಾಗಿದೆ.

ಸಿ. ಚನ್ನಬಸವಣ್ಣ
ಪ್ರಕಾಶನದ ಪರವಾಗಿ

ಪರಿವಿಡಿ

ಲೋಹಿಯಾ: ನಾ ಕಂಡಂತೆ

ಲೋಹಿಯಾ: ಒಂದು ನೆನಪು

■ ಅಬ್ಬಿಗೇರಿ ವಿರೂಪಾಕ್ಷಪ್ಪ

ಸರಿಯಾಗಿ ಮೂವತ್ತು ವರ್ಷಗಳ ಹಿಂದೆ, ಒಂದು ಸೊಗಸಾದ ಮುಂಜಾವು. ಹನ್ನೊಂದು ಘಂಟೆ. ಸಮಾಜವಾದಿ ಸಾಥಿಯೊಬ್ಬನ ಪುಟ್ಟ ಮನೆ. ಅದರ ಪಕ್ಕದಲ್ಲೊಂದು ಹಜಾರ. ತೆಂಗಿನ ಗರಿಗಳನ್ನೋ ತಾಳೆಗರಿಗಳನ್ನೋ ಹೊದಿಸಿದ ಚಪ್ಪರ. ಅದರ ಉದ್ದಕ್ಕೂ ಅಗಲಕ್ಕೆ ಸಮಾಂತರವಾಗಿ ಬಿಗಿದ ಬಿದಿರುಗಳು. ಅಲ್ಲಿಯ ಚೌಕುಚೌಕಾದ ಕಿಂಡಿಗಳಿಂದ ತಂತಾನೆ ರಚಿತವಾದ ಜಾಳಾಂದ್ರಗಳು. ಅವುಗಳಿಂದ ಇಳಿದು ಬರುವ ನೆಳಲು ಬೆಳಕಿನ ಸುಸಿಲಾಟ. ಹಜಾರದ ನೆಲಕ್ಕೆ ನೇಸರಿನ ಕಿರಣಗಳು ನಕ್ಷೆ ಬರೆದು ಚುಂಬಿಸುತ್ತಿವೆ. ಇದೇ ಹಜಾರದ ಒಂದು ಕಡೆಗೆ ಹಲವರು ಕೂತುಕೊಂಡಿದ್ದಾರೆ. ಹೆಚ್ಚಿನ ಯಾವ ಠೀವಿಯೂ ಇಲ್ಲ. ಹತ್ತಾರ ಗೆಳೆಯರು ಬಳಗವಾಗಿ ಸೇರಿ ಆತ್ಮೀಯವಾಗಿ ಸರಸ-ಸಲ್ಲಾಪವಾಡುತ್ತಿರುವಂತೆ ತೋರುತ್ತಿದೆ ಆ ದೃಶ್ಯ.

ನಾವು ನಾಲ್ವರು ಕಾರ್ಯಕರ್ತರು ಇದೀಗ ಅಲ್ಲಿಗೆ ತಲುಪಿದ್ದೆವು. ಅವರೆದುರಿಗೆ ಕುಳಿತು ಐದು ನಿಮಿಷವಾಗಿರಬೇಕು. ಅಲ್ಲಿಯ ಸ್ಥಳೀಯ ಕಾರ್ಯಕರ್ತರಾರು ಅವರಿಗೆ ನಮ್ಮ ಪರಿಚಯವನ್ನು ಮಾಡಿ ಕೊಡಲಿಲ್ಲ. ಬಹುಶಃ ಪರಿಚಯ ಮಾಡಿಕೊಡುವ ಶಿಷ್ಟತೆಯು ಅವರಿಗೆ ಗೊತ್ತಿರಲಿಕ್ಕಿಲ್ಲ. ಒಂದು ವೇಳೆ ಗೊತ್ತಿದ್ದರೂ ಅವರಿಗೆ ಆತಂಕವೊಂದಿರಬೇಕು. ಹೌದು, ಅವರಿಗೆ ಕನ್ನಡ ವಿನಾ ಬೇರೆ ಭಾಷೆಯೇ ಗೊತ್ತಿಲ್ಲ. ಅದೂ ಕಾರಣವಾಗಿರಬೇಕು. ಅಲ್ಲಿ ಅತಿಥಿಯಾಗಿ ಬಂದವರಲ್ಲಿ ನನಗೆ ಎಲ್ಲರೂ ಹೊಸಬರು. ನಾನು ಕಾಣಲು ಬಹುವಾಗಿ ಹಂಬಲಿಸಿದ ಆ ವ್ಯಕ್ತಿಯನ್ನು ಮಾತ್ರ ಅವರಲ್ಲಿ ಗುರುತಿಸಿದೆ. ನನ್ನ ಎದೆಯಲ್ಲಿ ಅತೀವ ಕಾತರ, ಕಂಗಳಲ್ಲಿ ಅಮಿತ ಆತುರ. ಆ ವ್ಯಕ್ತಿಯೊಡನೆ ಮಾತನಾಡಬೇಕೆಂಬ

ಒತ್ತಾಸೆಯನ್ನು ಎದೆಯಲ್ಲಿ ಹೊತ್ತ ನಾನು ಅವರ ಮುಖವನ್ನು ಎವೆಯಿಕ್ಕದೆ ಕಣ್ಣರಳಿಸಿ ನಿಟ್ಟಿಸುತ್ತಿದ್ದೆ. ನನ್ನ ಅಂತರಂಗದ ಕಾತರ ಭಾವವನ್ನು ಅರಿತುಕೊಂಡರೋ, ನನ್ನ ಮುಖವನ್ನು ಓದಿಕೊಂಡರೋ ಎನ್ನುವಂತೆ ಆ ವ್ಯಕ್ತಿ ತಾವೇ ಪ್ರಶ್ನಿಸಿದರು.

"ಕೌನ್ ಹೋ? ಕಹಾಂಸೆ ಆಯೆ?". ಅವರ ಬಾಯಿಂದ ಮಾತು ಹೊರಡುವುದೇ ತಡ ನನ್ನ ಹಸಿದ ಹೊಟ್ಟೆಗೆ ರಸಕವಳ ದೊರೆತಂತಾಯಿತು. ಯಾವ ಪಳಗಿದ ಪರಿಚಯಕನೂ ಮಾಡಿಕೊಡುವ ರೀತಿಯಲ್ಲಿ ನನ್ನ ಪರಿಚಯವನ್ನು ನಾನು ಅವರಿಗೆ ಮಾಡಿಕೊಟ್ಟೆ. ಹೌದು, ನನಗೆ ಗೊತ್ತು; ಬಹಳ ಮಾತುಗುಳಿತನದಿಂದ ಒಮ್ಮೊಮ್ಮೆ ಅಹಂಮನ್ಯತೆಯೇ ವ್ಯಕ್ತವಾಗುತ್ತದೆ. ಪ್ರೌಢಿಮೆ ದರ್ಪಗಳ ಠೀವಿಯಿಂದ ಶಿಷ್ಟತೆಯ ಸೀಮಾರೇಖೆಗಳನ್ನು ದಾಟಿ ಹೋದಂತಾಗುತ್ತದೆ. ಆದರೆ ಉತ್ಸಾಹದ ಭರದಲ್ಲಿ, ಭಾವನಾಮಯತೆಯ ಅತಿರೇಕದಲ್ಲಿ ನಯ ನಾಜೂಕುಗಳ ಅಂಶಗಳು ಗಮನಕ್ಕೆ ಬರುವುದೇ ಇಲ್ಲ. ಅಂದ ಹಾಗೆ, ನನ್ನ ಬಾಯಿ ಅಸ್ಖಲಿತವಾಗಿ ಹಿಂದಿ ಭಾಷೆಯ ಶಬ್ದಗಳನ್ನು ಪುಟುಪುಟಿಸಿತು.

"ನೇಕ್ ಬೂತ್ ಶಾನ್‌ದಾರ್ ಜಬಾನ್, ತುಮ್‌ತೋ ಹಿಂದಿ ಖೂಬ್ ಬೋಲತೆ ಹೊ." ಆ ವ್ಯಕ್ತಿಯ ಬಾಯಿಂದ ಮೆಚ್ಚುಗೆಯ ನುಡಿ.

ಮಾತುಕತೆಗಳ ಮೊದಲಲ್ಲಿಯೇ ಅಚ್ಚುಮೆಚ್ಚುಗಳು ಎರಕುಗೊಂಡಿದ್ದ ಈ ಒಲುಮೆಯ ನುಡಿಗಳನ್ನು ಒಡನುಡಿದ ವ್ಯಕ್ತಿ ಯಾರು? ಅವರೇ ಡಾಕ್ಟರ್ ರಾಮಮನೋಹರ ಲೋಹಿಯಾ, ವಿಶ್ವದ ವೈಚಾರಿಕ ಕ್ಷೇತ್ರದಲ್ಲಿ ಮೂರ್ತಿಭಂಜಕ ವಿದ್ರೋಹಿಯೆಂದು ವಿಖ್ಯಾತರಾದ ಮಹಾನ್ ವಿಚಾರವಾದಿ!

ಹಾಳತ ಮೈಕಟ್ಟಿನ, ಕುಳ್ಳ ನಿಲುವಿನ, ಚುರುಕು ಸ್ವಭಾವದ ಆ ವ್ಯಕ್ತಿ, ಹಿತವಾದ ಕಪ್ಪು ಬಣ್ಣ, ಗುಂಡುಮುಖ, ದೊಣ್ಣೆ ಮೂಗು, ದಪ್ಪನೆಯ ಕನ್ನಡಕ, ಅದರ ಹಿಂದೆ ಹೊಳೆಯುವ ಪಿಳಿಪಿಳಿ ಕಣ್ಣುಗಳು, ಮುಖದ ಮೇಲೆ ಒಮ್ಮೊಮ್ಮೆ ಅಶಾಂತ ಜೀವನ ವಿದ್ರೋಹದ ಭಾವಮುದ್ರೆ. ಒಮ್ಮೊಮ್ಮೆ ಹಸುಳೆಯ ಹೂನಗೆ. ಮತ್ತೊಮ್ಮೆ ಎಳೆ ಹುಡುಗನ ತುಂಟ ನಗೆ...

ಲೋಹಿಯಾರವರನ್ನು ನೆನೆದುಕೊಳ್ಳುತ್ತಿದ್ದಂತೆಯೆ ನಾನು ಅವರ ಈ ಚಿತ್ರವನ್ನು ಕಣ್ಮುಂದೆ ಎತ್ತಿಕೊಳ್ಳುತ್ತೇನೆ. ಮತ್ತು ಅದೊಂದು ದಿನ ಅವರ ಸಹವಾಸದಲ್ಲಿ ಕಳೆದ ಒಂಭತ್ತು ಗಂಟೆಗಳ ಅವಧಿಯಲ್ಲಿಯ ರಸನಿಮಿಷಗಳನ್ನು ಅಕ್ಷರದಲ್ಲಿ ರೇಖಿಸಲು ಚಪಲಿಸುತ್ತೇನೆ.

ಐವತ್ತರ ದಶಕದ ಆರಂಭ. ರೋಣ ತಾಲೂಕಿನಲ್ಲಿ ಸಮಾಜವಾದಿ ಆಂದೋಲನದ ಮೊದಲ ಮಜಲು. ಧಾರವಾಡ ಜಿಲ್ಲೆಯಲ್ಲಿ ಧಾರವಾಡ ನಗರ ಮತ್ತು ಬ್ಯಾಡಗಿ ತಾಲೂಕಿನ ಮೋಟೆಬೆನ್ನೂರು ಭಾಗವೊಂದನ್ನು ಬಿಟ್ಟರೆ ರೋಣ ತಾಲೂಕಿನದೇ

ಸ್ಥಾನ. ತಾಲೂಕಿನ ನಿಟ್ಟುಗಳಲ್ಲಿ ನಾವು ಸಮಾಜವಾದಿ ಪಕ್ಷದ ಸಂದೇಶವನ್ನು ಬಿತ್ತರಿಸಿದೆವು. ತಾಲೂಕಿನ ಮುಖ್ಯ ಮುಖ್ಯ ಊರುಗಳಲ್ಲಿ ಪಕ್ಷವನ್ನು ಸಂಘಟಿಸಿದ್ದೆವಲ್ಲದೆ ಗ್ರಾಮಾಂತರಗಳಲ್ಲಿಯೂ ಪಕ್ಷದ ಶಾಖೆಗಳನ್ನು ಸ್ಥಾಪಿಸಿದ್ದೆವು. ಈ ಕಾರ್ಯಕ್ಕೆ ಪೂರಕವಾಗಿ ಕಿಸಾನ ಪಂಚಾಯತ ಸಂಘಟನೆಯ ಚಟುವಟಿಕೆಯೂ ಜೋರಾಗಿ ಸಾಗಿತು. ತಾಲೂಕಿನಲ್ಲಿ ಮೈವೆತ್ತ ಈ ಅಪೂರ್ವ ಜಾಗೃತಿಯ ಚಿತ್ರವನ್ನು ಸಮಾಜವಾದಿ ಪಕ್ಷದ ನೇತಾರರೊಬ್ಬರಿಗೆ ತೋರಿಸಿ ಅವರಿಂದ ಮಾರ್ಗದರ್ಶನ ಪಡೆಯಬೇಕೆಂದು ನಮ್ಮದು ಹಲವಾರು ಕಾರ್ಯಕರ್ತರ ಹಂಬಲ. ಅದರ ಫಲವೇ ನಮ್ಮ ತಾಲೂಕಿಗೆ ಲೋಹಿಯಾರವರ ಆಗಮನ. ಅಂದು ತಾಲೂಕಿನ ಮೂರು ಮುಖ್ಯ ಊರುಗಳಲ್ಲಿ ಲೋಹಿಯಾರವರ ಭಾಷಣ ಕಾರ್ಯಕ್ರಮ, ಮೊದಲು ಗಜೇಂದ್ರಗಡದಿಂದಲೇ ಕಾರ್ಯಕ್ರಮದ ಆರಂಭ.

ಪರಿಚಯದ ಆರಂಭದಿಂದಲೇ ಲೋಹಿಯಾ ನಮಗೆ ಆತ್ಮೀಯವಾಗಿ ಕಂಡರು. ಸಾಮಾನ್ಯವಾಗಿ ಮುಖಂಡರಲ್ಲಿ ಒಂದು ತರವಾದ ಠೀವಿಯೂ ಇರುತ್ತದೆ. ಲೋಹಿಯಾ ಹಾಗಲ್ಲ. ಅವರೊಬ್ಬ ಸೀದಾ ಸಾದಾ ಸಾಚಾ ಮನುಷ್ಯ. ಕಂಗಳಲ್ಲಿ ಸದಾ ಮಾನವೀಯತೆಯ ಅನುಕಂಪ ಕಾಂತಿ ಮೊಳಗುತ್ತಿತ್ತು. ನಡೆ ನುಡಿಗಳಲ್ಲಿ ಆತ್ಮೀಯವಾದ ಸ್ನೇಹ–ಬಾಂಧವ್ಯ ತುಂಬಿ ತುಳುಕುತ್ತಿತ್ತು. ಗಜೇಂದ್ರಗಡದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ನಮ್ಮ ಸಾಥಿಯೊಬ್ಬ ಹಿಂದಿ ಭಾಷೆಯಲ್ಲಿ ಸ್ವಾಗತ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿದ. ಆಗಲೇ ಲೋಹಿಯಾ ಆ ಯುವಕನ ಬಗೆಗೆ, ಅವನ ಗಾಯನ ಕಲೆಯ ಬಗೆಗೆ 'ಭಲೆ' ಎಂದು ಮೆಚ್ಚುಗೆ ವ್ಯಕ್ತ ಮಾಡಿದರು. ಯುವಕ ವಜೂರಸಾಹೇಬ ಇಂದಿಲ್ಲ. ಎರಡು ವರ್ಷಗಳ ಹಿಂದೆ ಅಕಾಲ ಸಾವಿಗೀಡಾದ. ಸಾರ್ವಜನಿಕ ಸಭೆಯ ನಂತರ ಚಂಗಳಿಯವರ ಮನೆಯಲ್ಲಿ ಸೇರಿದ ಕಾರ್ಯಕರ್ತ ಮಧ್ಯೆಯೂ ಅದೇ ಆತ್ಮೀಯ ಒಡನಾಟ. ಒಂದೆರಡು ಘಂಟೆಗಳಲ್ಲಿಯೇ ಲೋಹಿಯಾ ನಮ್ಮವರಾಗಿಬಿಟ್ಟಿದ್ದರು.

ಗಜೇಂದ್ರಗಡದ ನಂತರ ಸೂಡಿಯಲ್ಲಿ ಕಾರ್ಯಕ್ರಮ. ಬಜಾರದ ಬಸವಣ್ಣ ದೇವರಗುಡಿಯ ಮುಂದಿನ ವಿಶಾಲ ಮೈದಾನದಲ್ಲಿ ಸಭೆ. ಮಧ್ಯಾಹ್ನ ಫಾಲ್ಗುಣದ ಬಿರುಬಿಸಿಲು. ಬಿಸಿಲಿನ ಬೇಗೆಯನ್ನು ಲೆಕ್ಕಿಸದೆ ಜನ ಕಿಕ್ಕಿರಿದು ಸೇರಿದ್ದಾರೆ. ಹಳ್ಳಿಪಳ್ಳಿಗಳ ಜನರೂ ಕೂಡ ಲೋಹಿಯಾ ಸಂದೇಶ ಕೇಳಲು ಕಾತರಗೊಂಡಿದ್ದಾರೆ. ಗುಡಿಯ ಮುಂಭಾಗದ ಕಟ್ಟೆಯ ಮೇಲೆಯೇ ಮಾಟವಾದ ಮಂಟಪ. ಹೊರಗೆ ಮರದ ತಪ್ಪಲು ಹಾಕಿದ ಚಪ್ಪರ. ಬಿಸಿಲಿನಿಂದಾದ ಆಯಾಸವನ್ನು ಲೆಕ್ಕಿಸದೆ ಲೋಹಿಯಾ ಲಗುಬಗೆಯಿಂದ ಪೆಂಡಾಲಿನ ಕಡೆಗೆ ಧಾವಿಸಿದರು. ಅವರಿಗೆ ವಿರಾಮವೇ ಬೇಡ, ಸರಭರನೇ ಸಭೆಗೆ ಸುರುವು. ಲೋಹಿಯಾ ಪಕ್ಕನೇ ಜಿಗಿದು ಧ್ವನಿವರ್ಧಕದ ಎದುರು ಬಂದರು; ಒಂದು ಘಂಟೆ ಕಾಲ ಅವರ ಓಜಸ್ವಿ ಶೈಲಿಯ ಭಾಷಣ. ಧೀಂಕಿಡುವ ವಾಣಿಯ ನಿರರ್ಗಳ ಗಂಗಾಪ್ರವಾಹ. 'ಚೌಖಂಬಾ ರಾಜ್'ದಿಂದ ಆರಂಭಿಸಿ ಸಮಾಜವಾದ–ಜನತಂತ್ರಗಳ ತಾರ್ಕಿಕ ವಿವೇಚನೆ ಮಾಡುತ್ತ, ದಿಲ್ಲೀಶ್ವರರು ದೇಶವನ್ನು

ಆಳುತ್ತಿರುವ ಶಾಸನ ವೈಖರಿಯನ್ನು ಮಾರ್ಮಿಕವಾಗಿ ವಿವರಿಸಿ ಅವರು ಮಾಡಿದ ಅಂದಿನ ಭಾಷಣವು ಅವರ ಪ್ರತಿಭಾ ವಿಲಾಸದ ವಾಗ್ಮಿತೆಯ ಅಪ್ರತಿಮ ನಿದರ್ಶನ.

ಸಭೆ ಮುಗಿಸಿಕೊಂಡು ನಮ್ಮ ಮನೆಗೆ ಬಂದೆವು. ಊಟದ ವ್ಯವಸ್ಥೆ ನಮ್ಮಲ್ಲಿಯೇ. ಪೂರ್ಣ ಸಿದ್ಧತೆಯಾಗಲು ಸ್ವಲ್ಪ ವಿಳಂಬ. ಹಾಗೆಂದು ಬಂಕದ ಕೊಠಡಿಯಲ್ಲಿ ತುಸು ಹೊತ್ತು ಕೂತಿರಬೇಕಾಯಿತು. ಆಗಲೇ ಅವರಿಗೆ ಅಲ್ಪ ವೇಳೆಯ ವಿಶ್ರಾಂತಿ. ಲೋಹಿಯಾ ಕೊಠಡಿಯ ಗೋಡೆಗೆ ಬೆನ್ನು ಹಚ್ಚಿ ಕೂತಿದ್ದಾರೆ. ಎದುರಿಗೆ ಗೋಡೆಯ ಮೇಲೊಂದು ಚಿತ್ರ. ಅದನ್ನವರು ತುಸು ದಿಟ್ಟಿಸಿ ನೋಡುತ್ತಿದ್ದಾರೆ. ಏನದು? ಯಾವ ಚಿತ್ರ? ನೆಹರೂ ಚಿತ್ರ, ಪಂಡಿತ ನೆಹರೂರವರಿಗೆ ಆಗ ಅರವತ್ತು ವರ್ಷ ತುಂಬಿದ್ದವು. ಅವರ ಅರವತ್ತರ ವರುಷದ ನೆನಪಿಗಾಗಿ 'ಬ್ಲಿಜ಼್' ಪತ್ರಿಕೆಯು ಒಂದು ವಿಶೇಷ ಸಂಚಿಕೆ ಪ್ರಕಟಿಸಿತ್ತು. ಅದರ ಮುಖಪುಟದ ಮೇಲೊಂದು ರೇಖಾಚಿತ್ರ. ಅದು ಅಷ್ಟು ಆಕರ್ಷಕ. ಅದನ್ನು ಕತ್ತರಿಸಿ ತೆಗೆದು ನಾನು ಆ ಗೋಡೆಗೆ ಅಂಟಿಸಿದ್ದೆ. ನೆಹರೂರವರ ಆ ರೇಖಾಚಿತ್ರವನ್ನು ನೋಡುತ್ತ ಲೋಹಿಯಾ ಹೇಳಿದರು. 'ಯಹ್ಞಾ ಭೀ ಆಯೆ ನೆಹರೂ? ಜಹ್ಞಾ ದೇಖೋ ವಹ್ಞಾ ನೆಹರೂ. ದೇಶಕೆ ಕೋನೆ ಕೋನೆ ಮೆ ನೆಹರೂ. ನಿರಾಲಾ ಆದಮಿ, ನಿರಾಲಿ ಬಾತ್'. ಈ ಮಾತುಗಳನ್ನು ಕೇಳಿ ನನ್ನ ನೆಹರೂ ವ್ಯಾಮೋಹ ಇಳಿದು ಹೋಯಿತು. ಊಟೋಪಚಾರದಲ್ಲಿಯೂ ಅವರು ಬಹಳ ಸಾದಾ. ಎರಡೇ ಎರಡು ಚಪಾತಿ. ಅಕ್ಕಿಯ ಅನ್ನವನ್ನು ಉಣಲೇ ಇಲ್ಲ. ಹಾಲು ಮೊಸರು ಏನೂ ಬೇಡ. ಬಟ್ಟಲು ಮಜ್ಜಿಗೆ ಸೇವಿಸಿ ಅಮೃತಪಾನ ಮಾಡಿದವರೆ ತಣಿವಿನ ತೇಗು ಬಿಟ್ಟರು.

ಮುಂದಿನ ಕಾರ್ಯಕ್ರಮ ರೋಣದಲ್ಲಿ. ಜೀಪು ಚಲಿಸಿತು. ಊರ ದಂಡೆ ಇದೀಗ ದಾಟುತ್ತಿದ್ದೆವು. ಹಠಾತ್ತನೆ ಜೀಪಿನಿಂದ ಇಣುಕುತ್ತ ದೇವಾಲಯವೊಂದರ ಕಡೆಗೆ ಬೆರಳೆತ್ತಿ ತೋರಿಸುತ್ತ ಲೋಹಿಯಾ ಕೇಳಿದರು. 'ಓ ಕ್ಯಾ ಹೈ?'. ಅದು ಕರ್ನಾಟಕದ ವಾಸ್ತುಶಿಲ್ಪ ಸ್ಮಾರಕವಾದ ಒಂದು ದೇವಾಲಯ. ಅದರ ಹೊರಮೈಯ ವಾಸ್ತುವೈಭವ ಅವರ ದೃಷ್ಟಿಯನ್ನು ಸೆಳೆದಿತ್ತು. ಅದೇನೆಂಬುದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ಅವರಿಗೆ. 'ಎ ಟೆಂಪಲ್ ದ್ಯಾಟ್ ಈಜ್ ಎ ಮಾನ್ಯೂಮೆಂಟ್ ಆಫ್ ಕರ್ನಾಟಕ ಆರ್ಕಿಟೆಕ್ಚರ್' ಎಂದು ನಾನು ಹೆಮ್ಮೆಯಿಂದ ನುಡಿದೆ. "ಹೌ ಬ್ಯೂಟಿಫುಲ್!" ಅವರು ಉದ್ಗರಿಸಿದರು. ಸಾಮಾನ್ಯವಾಗಿ ರಾಜಕೀಯದಲ್ಲಿರುವವರಿಗೆ ಸಾಹಿತ್ಯ ಕಲೆಗಳ ವಿಚಾರವೆಂದರೆ ಯಾವುದೊ ಯಕ್ಷಲೋಕದ ಮಾತು ಮಾತ್ರ. ಲೋಹಿಯಾ ಇದಕ್ಕೊಂದು ಅಪವಾದ. ಅವರು ತುಂಬಾ ಕಲಾಭಿಜ್ಞರು. ಕೋಣಾರ್ಕ ಮತ್ತು ಬೇರೆ ದೇವಾಲಯಗಳಲ್ಲಿನ ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪದ ಬಗೆಗೆ ಹಾಗೂ ಹಿಂದಿ ಕವಿ ಮುಕ್ತಿಬೋಧರ ಕಾವ್ಯದ ಬಗೆಗೆ ಅವರು ವ್ಯಕ್ತ ಮಾಡಿದ ವಿಚಾರಗಳು ಕಲಾಭಿಜ್ಞನೊಬ್ಬನ ಉಚ್ಚಶ್ರೇಣಿಯ ವಿಮರ್ಶೆಗೊಂದು ಸುಂದರ ನಿದರ್ಶನವೆಂಬುದನ್ನು

ಕಲಾರಸಿಕ ಲೋಹಿಯಾರವರನ್ನು ಬಲ್ಲವರಿಗೆ ಬೇರೆ ಹೇಳುವುದೇ ಬೇಡ.

ಸಂಜೆಯ ಆರೂವರೆ ಘಂಟೆ. ರೋಣದ ವೀರಭದ್ರ ದೇವರಗುಡಿಯ ಮುಂದೆ ಲೋಹಿಯಾರ ಜಾಹೀರ ಭಾಷಣ. ಪ್ರಚಂಡ ಜನಸಮ್ಮರ್ದ. ಭಾರಿ ಸಭೆ. ಒಂದೂವರೆ ಘಂಟೆ ಕಾಲ ಅವರ ಅಮೋಘ ಭಾಷಣ. ಜನ ಮಂತ್ರಮುಗ್ಧರಾಗಿ ಕುಳಿತಿದ್ದರು. ಸೂಜಿ ಬಿದ್ದರೂ ಸದ್ದಾಗುವಷ್ಟು ಸ್ತಬ್ಧತೆ. ಪ್ರವಾದಿಯೊಬ್ಬನ ದರ್ಶನಕ್ಕೆ ಬರುವಂತೆ ಸಹಸ್ರ ಸಹಸ್ರ ಜನ ಬಂದು ನೆರೆದಿದ್ದರು. ಲೋಹಿಯಾರವರದು ವಿಚಾರವಾದಿಯ ವಸ್ತುನಿಷ್ಠ ಜೀವನ ದರ್ಶನ. ಈ ವಿಚಾರವಾದಿಯ ವಿಚಾರಧಾರೆಯು ಮುಂಗಾರು ಮಳೆಯಂತೆ ಧೋ ಧೋ ದಂಡಿಯಾಗಿ ಜನರ ಮನೋಭೂಮಿಗೆ ಸುರಿದಿತ್ತು. ಇಂಥ ಭಾಷಣವನ್ನು ನಾವೆಂದೂ ಕೇಳಿರಲಿಲ್ಲ. ಅದ್ಭುತ, ಅಗಾಧ! ಎಲ್ಲರ ಬಾಯಲ್ಲೂ ಇದೇ ಉದ್ಗಾರ.

ರಾತ್ರಿ ಎಂಟು ಘಂಟೆ. ಲೋಹಿಯಾ ಮುಂದಿನ ಪಯಣಕ್ಕೆ ಸಿದ್ಧರಾಗಿದ್ದರು. ನನ್ನ ಭುಜದ ಮೇಲೆ ತಮ್ಮ ಹಸ್ತವನ್ನಿಟ್ಟು ನುಡಿದರು. "ವಿರೂಪಾಕ್ಷಪ್ಪ ತುಮ್ ಧೀರ್ ಹೋ, ತೇಜಸ್ವಿ ಹೋ, ತುಮ್ ಅಪನಿ ಮಂಜಿಲ್ ಕೆ ಓರ್ ಸದಾ ಬಢತೆ ರಹೋ!'

ನನ್ನ ಅಂತರಂಗಕ್ಕೆ ಅಮೃತ ಸ್ಪರ್ಶವಾದಂತಾಯಿತು. ನೇತಾರರ ನುಡಿಗಳು ನನ್ನ ಕಿವಿಗಳಲ್ಲಿ ಗುಂಜರಿಸಹತ್ತಿದವು.

ಆ ಚಿತ್ರ ಆ ದೃಶ್ಯ, ಆ ವಾಣಿ, ಆ ರಸನಿಮಿಷಗಳು...

ವರುಷಗಳ ನಂತರ ನಾನೀಗ ಅದನ್ನೆಲ್ಲ ನೆನೆದುಕೊಳ್ಳುತ್ತಿದ್ದೇನೆ. ಮುಚ್ಚಂಜೆಯ ಮುಸುಕಿನಂತೆ ಒಂದು ಬಗೆಯ ಮಬ್ಬು ಮನಸ್ಸಿಗೆ ಕವಿದಂತಾಗಿ ನಾನು ಚಿತ್ರಸ್ಥನಾಗಿ ಕೂಡುತ್ತೇನೆ. ಲೋಹಿಯಾ ನೆನಪಿನ ಅಲೆಗಳು ಹೊನ್ನಿನ ಹುಳುಗಳಂತೆ ಮಿಂಚುತ್ತ ಚಿತ್ತದಲ್ಲಿ ತೂರಿಕೊಂಡು ಬರುತ್ತಿವೆ. ಆ ವಾಣಿ ಈಗಲೂ ಅಂತರಂಗದಲ್ಲಿ ಅನುರಣಿತವಾಗುತ್ತಿದೆ. ಮತ್ತು ಒಡಲಾಳದೊಳಗಿಂದ ಯಾರೋ ಒಡನುಡಿದಂತಾಗುತ್ತದೆ. ಪಥಿಕನಿನ್ನೂ ದಣಿದಿಲ್ಲ. ದಾರಿಯಲ್ಲಿ ನಿಂತೂ ಇಲ್ಲ. ಅವನು ಎಚ್ಚರದಿಂದ ಮುನ್ನಡೆಯುತ್ತಲೇ ಇದ್ದಾನೆ. ಆದರೆ ದಾರಿ ತೋರಿಸುವವನೇ ದೂರವಾದ. ಗಂತವ್ಯವೂ ದೂರ, ದೂರ, ಬಲು ದೂರ...

■

" ಜನ ನನ್ನನ್ನು ಅರ್ಥ ಮಾಡಿಕೊಳ್ಳುವರು, ಬಹುಶಃ ನಾನು ಸತ್ತ ಮೇಲಾದರೂ; ಆದರೆ ಅವರು ಒಂದಲ್ಲ ಒಂದು ದಿನ ಅರ್ಥ ಮಾಡಿಕೊಳ್ಳಲೇಬೇಕು...ನನಗೆ ಒಮ್ಮೊಮ್ಮೆ ಅನಿಸುತ್ತದೆ–ಕಾಲದ ಜೊತೆ ಹೆಜ್ಜೆ ಹಾಕುವಾಗ ನಾನು ಒಂದೆರಡು ಹೆಜ್ಜೆ ಮುಂದೆ ಹೋಗಿಬಿಟ್ಟಿದ್ದೇನೇನೋ ಅಂತ"

–ಲೋಹಿಯಾ

ಲೋಹಿಯಾ; ಒಂದು ಬೌದ್ಧಿಕ ಒಡಲು

■ ಕೇಶವರಾವ್ ಜಾಧವ್

ಇಂಡಿಯಾದ ರಾಜಕಾರಣಿಗಳ ಪೈಕಿ ಲೋಹಿಯಾವೊಬ್ಬರೇ ತುಂಬು ಹೃದಯ ಹಾಗೂ ವಿಚಾರಶೀಲ ಮನಸ್ಸು ಎರಡನ್ನೂ ಹೊಂದಿದ್ದರೆಂದು ಕಾಣುತ್ತದೆ. ಹೆಂಗಸರ ಬಗೆಗಿನ ಅವರ ಮನೋಭಾವ ಹಾಗೂ ರಾಜಕಾರಣದಲ್ಲಿನ ಅವರ ಉಜ್ವಲ ಒಂಟಿತನ, ಇದಕ್ಕೆ ಎರಡು ದೃಷ್ಟಾಂತಗಳಷ್ಟೆ. ಅಂತೆಯೇ ಅವರದ್ದು ಪ್ರಶಾಂತ ವ್ಯಕ್ತಿತ್ವವೆಂದು ನಾನು ತಪ್ಪಾಗಿ ಅಂದಾಜು ಮಾಡಿದ್ದೆ. ದಿಟ್ಟ ಹೃದಯ ಮತ್ತು ವಿಚಕ್ಷಣ ಮನಸ್ಸು ಎಂದೂ ಪ್ರಶಾಂತತೆಗೆ ಮಾರ್ಗ ಮಾಡಲಾರವು. ಇದಕ್ಕೆ ಒಳಗೆ ನೀರವತೆಯ ಅಗತ್ಯವಿದೆ–ಹೆಚ್ಚೂ ಕಡಿಮೆ ಸಂತನಂತಹದ್ದು–ಗಾಂಧೀಜಿಯಲ್ಲಿ ಕಂಡಂತಹದ್ದು. ಪ್ರಶಾಂತತೆಯನ್ನು ನಿರೀಕ್ಷಿಸಿ ಅವರ ಬಳಿಗೆ ಹೋದವರು, ಅವರ ಸಿಟ್ಟಿನ ಆಸ್ಫೋಟಗಳಿಂದ ದಿಗ್ಭ್ರಾಂತರಾಗುತ್ತಿದ್ದರು. ಅವರ ಸಿಟ್ಟಿನ ಮೂಲ, ಬಹಳಷ್ಟು ಸಮಾಜವಾದಿಗಳಲ್ಲಿ ದೃಢ ತತ್ವನಿಷ್ಠೆ ಹಾಗೂ ಶಿಸ್ತಿನ ಕೊರತೆ ಇದ್ದಂತೆ ತೋರುತ್ತಿದ್ದುದೇ ಆಗಿತ್ತು.

ಅವರ ಭಾವನಾಶೀಲತೆಯ ಬೇರುಗಳನ್ನು ಬಹುಶಃ ಅವರ ಬಾಲ್ಯದಲ್ಲಿ ಗುರುತಿಸಬಹುದೆಂದು ಕಾಣುತ್ತದೆ. ಕೇವಲ ಆರು ತಿಂಗಳಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡ ರಾಮ ಮನೋಹರ, ತಾಯಿಯೊಬ್ಬಳ ವಂಚಿತ ಪ್ರೇಮವನ್ನು ಪ್ಯಾರಿಸ್ ಮತ್ತು ಗಂಗೋತ್ರಿಗಳಲ್ಲಿ ಕಂಡುಕೊಳ್ಳುವ ಪ್ರಯತ್ನ ಮಾಡಿದ. ಅಣ್ಣ–ತಮ್ಮ, ಅಕ್ಕ–ತಂಗಿಯರೊಡನೆಯ ಬದುಕಿನ ಶಿಸ್ತನ್ನು ಪಡೆಯದೇ ಹೋದ ಆತ ತನ್ನ ಸುತ್ತಲಿನವರ ಹುಂಬತನಗಳಿಂದ ಚಡಪಡಿಸಿ ಹೋಗುತ್ತಿದ್ದ.

* * *

ಅಯೋಧ್ಯಾ, ಕಲ್ಕತ್ತಾ, ಮುಂಬೈ, ಬರ್ಲಿನ್, ಪ್ಯಾರಿಸ್ ಮತ್ತು ಗಂಗೋತ್ರಿ ಆತನ ಬದುಕಿನ ತೋರುದೀಪಗಳು. ಮುಂಬೈ ಮತ್ತು ಕಲ್ಕತ್ತಾದ ಬೇರಿಲ್ಲದ ಬುದ್ಧಿಜೀವಿಗಳು ಒಂದು ಕಾಲಕ್ಕೆ ಈತನಲ್ಲಿ, ಎಂದೋ ತಳಕ್ಕೆ ಸೇರಿ ಹೋಗಿದ್ದ ತಮ್ಮ ಆಶಯಗಳ ಈಡೇರಿಕೆಯನ್ನು ಕಂಡಿದ್ದರು. ಅವರು ಅಂಜುಕುಳಿಗಳಾಗಿದ್ದರೆ ಈತ ದಿಟ್ಟನಾಗಿದ್ದ; ಅವರು ಬರೀ ಹುಂಬರೇನೊ ಎನ್ನುವಂತಿದ್ದರೆ ಈತ ಉಜ್ವಲನಾಗಿದ್ದ. ಬೇರಿಲ್ಲದಿದ್ದ ಅವರು, ಈತನೂ ತಮ್ಮ ಜಾತಿಗೆ ಸೇರಿದವನೇ ಎಂದು ಭಾವಿಸಿದರು. ನಿರ್ಬಾಧಿತ ಮತ್ತು ಅದಮ್ಯ ಬದುಕು ಸಾಗಿಸುತ್ತಿದ್ದ ಅವರು, ಭಯಾನಕ ಲಾಹೋರ್ ಕೋಟೆಯ ಸೆರೆಮನೆಯಿಂದ ಆಗ ತಾನೇ ಹೊರಟುಬಂದಿದ್ದ ಈ ಮೋಹಕ ವ್ಯಕ್ತಿಯಿಂದ ಆಕರ್ಷಿತರಾಗಿದ್ದರು. ಅವರು ನೆಹರೂ ಸಂತುಷ್ಟಿಗಾಗಿ ಈತನನ್ನು ಬೈಯುತ್ತಿದ್ದರಾದರೂ, ತಮ್ಮ ಅತ್ಯಂತ ಕಟು ವಿಮರ್ಶಾತ್ಮಕ ಲೇಖನಗಳಲ್ಲೂ ಕೂಡ "ಲೋಹಿಯಾ ಓರ್ವ ಪ್ರಜ್ವಲ ಬುದ್ಧಿಜೀವಿ" ಎಂಬುದನ್ನು ಸೂಚಿಸಲು ಮರೆಯುತ್ತಿರಲಿಲ್ಲ. ಆದರೆ ಹೆಚ್ಚು ಕಾಲವಲ್ಲ. ನಂತರ ಅವರು ಈತನನ್ನು ಬೈಯುತ್ತಿದ್ದರು ಮಾತ್ರ; "ಪ್ರಜ್ವಲ" ಎಂಬುದನ್ನು ಇನ್ನೆಂದೂ ಬಳಸಲಿಲ್ಲ. ಮೋಹಕತೆಯನ್ನು ಅವರು ಬಯಸುತ್ತಿದ್ದಾರಾದರೂ ಈತ ಗೌರವಾನ್ವಿತನೂ ಆಗಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಸ್ವತಃ ಬೇರಿಲ್ಲದಿದ್ದ ಅವರು ಈತನೂ ಬೇರಿಲ್ಲದವನಾಗಬೇಕು ಎಂದು ಬಯಸಿದರು. ಹಾಗೆ ನೋಡಿದರೆ, ಬೇರಿಲ್ಲದಿರುವಿಕೆ ಹಾಗೂ ಪಾಶ್ಚಿಮಾತ್ಯೀಕರಣ ಒಂದು ಜೊತೆ ಇದ್ದಂತೆ ತಾನೇ. ಈತನೂ, ಅವರಂತೆಯೇ, ಹೊಸ ದಿನಗಳೊಳಕ್ಕೆ ಕಾಲಿಡುತ್ತಿರಲಿಲ್ಲವೆ? ಗೌರವಾನ್ವಿತತೆ, ಬೇರಿಲ್ಲದಿರುವಿಕೆ ಮತ್ತು ಪಾಶ್ಚಿಮಾತ್ಯೀಕರಣ ಇಂಡಿಯಾದಲ್ಲಿ ಹತ್ತಿರದ ಸೋದರ ಸಂಬಂಧಿಗಳಿದ್ದಂತೆ. ಮೊಘಲರನ್ನು ಅನುಕರಿಸಿ, ಇಂಗ್ಲಿಷರನ್ನು ಅನುಕರಿಸಿ–ಅನುಕರಿಸಿ ಯಾವಾಗಲೂ ಆಳುವವರನ್ನು. ಈತ ಪೂರ್ಣ ಹೊಸ ದೃಷ್ಟಿಕೋನವೊಂದರೊಡನೆ ಇಂಡಿಯಾದ ಪುರಾಣಗಳು ಹಾಗೂ ಚರಿತ್ರೆಯ ಬಗ್ಗೆ ಬರೆದಾಗ ಅವರು ಸಿಟ್ಟಾಗಿ ಎದ್ದೆದ್ದು ಬಿದ್ದರು. ಈತ ಅವರ ಕನಸುಗಳ ಲೋಹಿಯಾ ಆಗಿರಲಿಲ್ಲ. ತನ್ನ ದೇಶವನ್ನು ಹೊಸದಾಗಿ ಕಂಡುಕೊಳ್ಳುವ ಹಾಗೂ ತನ್ನ ವ್ಯಕ್ತಿತ್ವದ ಬೇರುಗಳನ್ನು ಹೊಸದಾಗಿ ಹುಡುಕಿಕೊಳ್ಳುವ ಈತನ ಪ್ರಯತ್ನ ಅವರ ಕನಸುಗಳನ್ನು ನುಚ್ಚುನೂರು ಮಾಡಿತ್ತು–ಅವರು ಹಾರಾಡಲಾರಂಭಿಸಿದರು.

* * *

ಗಂಗೋತ್ರಿಗೋ ಅಥವಾ ಪ್ಯಾರಿಸ್ಸಿಗೋ ಹೋಗಿ ನೆಲೆಸಿ ತಮ್ಮ ಕಾಲ ಹಾಗೂ ಸಾಮರ್ಥ್ಯವನ್ನು ಪರಿಶುದ್ಧ ಬೌದ್ಧಿಕ ಅನ್ವೇಷಣೆಗಳಿಗಾಗಿ ವಿನಿಯೋಗಿಸುವ ಬಗ್ಗೆ ಅವರಾಡುತ್ತಿದ್ದ ಮಾತು ಸರಿಯಲ್ಲ. ಗಂಗೋತ್ರಿಯ ಪ್ರಶಾಂತತೆ ಅಥವಾ ಪ್ಯಾರಿಸ್ಸಿನ ಅರಾಜಕತೆ ಅವರಂತಹವರಿಗಲ್ಲ. ಅವರ ವಿಧಿ ಇದ್ದುದು ಇಂಡಿಯಾದ ಮಣ್ಣಿನಲ್ಲಿ. ರಾಜಕೀಯ ಸ್ಥಿತ್ಯಂತರಗಳ ಏಳುಬೀಳುಗಳ ಧೂಳಿನಲ್ಲಿ. ಇಂಡಿಯಾದ ಕೋಟ್ಯಾಂತರ

ವಂಚಿತರ ಹೋರಾಟದ ದುಃಖ ವಿಷಾದಗಳಲ್ಲಿ. ಹೇಗೂ ಅವರು ಇಂಡಿಯಾದ ಮೇಲ್ಜಾತಿಗಳಿಗೆ ಸೇರಿದವರಲ್ಲವೆ? ತಮ್ಮ ನೋವು ಸಂಕಷ್ಟಗಳ ಮೂಲಕ ಅವರು ಶತಶತಮಾನಗಳ ಈ ಪಾಪವನ್ನು ತೊಳೆದುಹಾಕಲು ಯತ್ನಿಸಿದರು. ತಮ್ಮೆಲ್ಲಾ ಸಿಟ್ಟಿನ ಹೊರತಾಗಿಯೂ ಅವರು ಪ್ರೀತಿಪೂರ್ವಕ ಹೃದಯ ಹೊಂದಿದ್ದರು. ಆದರೆ ಗಾಂಧೀಜಿಗೆ ವ್ಯತಿರಿಕ್ತವಾಗಿ, ಪ್ರೀತಿ ಒಂದು ದೌರ್ಬಲ್ಯ, ಒಂದು ಅಪಾಯಕಾರಿ ಭಾವಾತಿರೇಕವೆಂದು ಅವರು ಬಹುಶಃ ಭಾವಿಸಿದ್ದರೇನೋ. ಕೆಲ ವೇಳೆ ಬಹಳ ಉದಾರವಾಗಿ ಅವರು ರಾಜಗೋಪಾಲಚಾರಿ ಅವರಂತಹವರನ್ನೂ ಮಹಾನ್ ಎಂದು ಕರೆದುಬಿಡುತ್ತಿದ್ದರು. ರಾಜಗೋಪಾಲಚಾರಿ ಜಾಣ, ಶಬ್ದಜಾಲದ ಓರ್ವ ಮಾಂತ್ರಿಕ ಆಗಿದ್ದರೇನೋ ನಿಜ; ಆದರೆ ಖಂಡಿತ ಓರ್ವ ಬೌದ್ಧಿಕ ಮಹಾನ್ ಆಗಿರಲಿಲ್ಲ. ಆದ್ದರಿಂದಲೇ ಅವರು ತಮ್ಮನ್ನು ಸಂಯುಕ್ತ ವಿರೋಧಪಕ್ಷಗಳ ರಂಗದ ನಾಯಕತ್ವ ವಹಿಸಿಕೊಳ್ಳುವಂತೆ ಲೋಹಿಯಾ ಆಹ್ವಾನಿಸಿದಾಗ ಲೋಹಿಯಾ ಬಗ್ಗೆ ನಗೆಯಾಡಿದರು, ಛೇಡಿಸಿದರು. ಲೋಹಿಯಾರನ್ನು ಅರ್ಥ ಮಾಡಿಕೊಳ್ಳುವ ಹೃದಯ ರಾಜಾಜಿಗೆ ಎಲ್ಲಿಂದ ಬರಬೇಕು? ನಿಜವಾಗಿಯೂ ಅಚ್ಚರಿಯಾಗುತ್ತದೆ. ನೆಹರೂ ಮತ್ತು ಲೋಹಿಯಾ ಹೇಗೆ ಅಷ್ಟು ಕಾಲ ಪರಸ್ಪರ ಸಹಿಸುತ್ತಾ ಇದ್ದರೆಂದು. ಯಾವ ಇಬ್ಬರು ಮನುನಷ್ಯರೂ ಅಷ್ಟು ವಿಭಿನ್ನವಾಗಿರಲಿಕ್ಕಿಲ್ಲ. ಪಬ್ಲಿಕ್ ಸ್ಕೂಲ್‌ನ, ಕೋಟಿನ ಗುಂಡಿರಂಧ್ರದಲ್ಲಿನ ಗುಲಾಬಿಯ ನೆಹರೂ ಮತ್ತು ಬರ್ಲಿನ್‌ನಿಂದ ಬಂದ ಬಂಡುಕೋರ ಡಾಕ್ಟರ್! ಒಬ್ಬರಿಗೆ ಬಂಡಾಯ ಒಂದು ಚಾಳಿ ಮಾತ್ರವಾಗಿದ್ದರೆ, ಇನ್ನೊಬ್ಬನಿಗೆ ಅದು ಸತ್ಯದ ಪರಿಧಿಯೊಳಗೆ ಒಯ್ಯುವ ಒಂದು ಭಾವಮಾರ್ಗವಾಗಿತ್ತು. ಬಹುಶಃ ಇದು, ಎಲ್ಲ ಮನುಷ್ಯರ ಬಗೆಗಿನ ಲೋಹಿಯಾ ಅವರ ಅಸೀಮಿತ ಆತ್ಮೀಯತೆಯ, ಅಥವಾ ಬಹುಶಃ ಪ್ರೌಢಜನ ತಾವು ಬಹಳಷ್ಟು ಆಶಿಸುವ ತೃಪ್ತಿಯನ್ನು ಖಾಲಿ ವ್ಯಕ್ತಿತ್ವಗಳಲ್ಲಿ ಕಾಣುವುದರ ಮತ್ತೊಂದು ಉದಾಹರಣೆಯಾಗಿತ್ತು. ಇಲ್ಲಿ ಪ್ರೌಢ ಮನುಷ್ಯ ಉದಾಸೀನತೆಯನ್ನೇ ತೃಪ್ತಿಯೆಂದು ತಪ್ಪಾಗಿ ತಿಳಿದಿದ್ದ...

* * *

ಸಮಾಜವಾದೀ ಚಟುವಟಿಕೆಯಲ್ಲಿ ಅವರನ್ನು ಪ್ರೀತಿಸುತ್ತಿದ್ದ ಮತ್ತು ಅವರನ್ನು ಬರೀ "ಗೌರವಿಸುತ್ತಿದ್ದ" ಜನ ಜೊತೆಜೊತೆಗೇ ಇದ್ದರು. ಅಲ್ಲದೆ ಅವರನ್ನು ತಮ್ಮ ಸ್ವಂತ ಉದ್ದೇಶಗಳಿಗಾಗಿ ಬಳಸಿದ ಇತರರೂ ಇದ್ದರು. ವಿಚಿತ್ರವೆಂದರೆ ಕೆಲವರು, ಲೋಹಿಯಾ ಮಾರ್ವಾಡಿಯಾಗಿದ್ದರು ಎಂಬೊಂದು ಕಾರಣದಿಂದಷ್ಟೇ ಅವರನ್ನು ಮೆಚ್ಚುತ್ತಿದ್ದರು. ಈ ಜನರಿಗೆ ಲೋಹಿಯಾ ಮೀರಾ ನಂತರದ ಅತ್ಯಂತ ಮಹಾನ್ ಮಾರವಾಡಿ ವ್ಯಕ್ತಿತ್ವವಾಗಿದ್ದರು. ಆದರೆ, ಹುಟ್ಟಿನ ಹೊರತಾಗಿ ಅವರು ಮಾರ್ವಾಡಿಯಾಗಲೀ ಬನಿಯಾ ಸಹಿತ ಆಗಿರಲಿಲ್ಲ. ಅವರಿಗೆ ಸಂಪತ್ತಿನ, ಅದೂ ತಾತ ಮುತ್ತಾತಂದಿರು ಬಿಟ್ಟು ಹೋಗಿದ್ದ ಸಂಪತ್ತಿನ ಸೊಕ್ಕೆಂಬುದೇ ಗೊತ್ತಿರಲಿಲ್ಲ.

ತನ್ನದೆಂದು ಕರೆದುಕೊಳ್ಳಬಹುದಾದ ಯಾವುದೇ ಜೋಪಡಿಯನ್ನು ಹೊಂದಿಲ್ಲದಿದ್ದ ಈ ಮನುಷ್ಯ, ಮೇಲ್ಜಾತೀ ಮಾನಸಿಕಾವಸ್ಥೆಯ ಹಾಗೂ ಜೀವನ ವಿಧಾನದ ಒಂದು ತಿರಸ್ಕಾರ ರೂಪವಾಗಿದ್ದ.

* * *

ಮೂರನೆ ಜಗತ್ತಿನ ಸಮಾಜವಾದಿಗಳ ಪೈಕಿ ಒಂಟಿಯಾಗಿ ನಿಂತು ಇವರು ಸಮಾಜವಾದಿ ತತ್ವದರ್ಶನಕ್ಕೆ ಹೊಸದೊಂದು ದಿಕ್ಕು ನೀಡಿದರು. ಪ್ರಜಾಪ್ರಭುತ್ವದಲ್ಲಿನ ನಂಬಿಕೆಯೊಂದೇ ಸಮಾಜವಾದಿಗಳನ್ನು ಕಮ್ಯುನಿಸ್ಟರಿಂದ ಭಿನ್ನವಾಗಿಸುವುದು ಎಂದು ಅವರು ನಂಬಲಿಲ್ಲ. ಕಮ್ಯುನಿಸ್ಟರು ಅನುಸರಿಸಿದ ಬಂಡವಾಳಶಾಹಿ ಉತ್ಪಾದನಾ ರೀತಿ ನೀತಿಗಳು ಮೂರನೇ ಜಗತ್ತನ್ನು ಇನ್ನಷ್ಟು ದಾರಿದ್ರ್ಯಕ್ಕೇ ಈಡು ಮಾಡುತ್ತದೆಂದು ಅವರು ಗುರುತಿಸಿದರು. ತಾವು ಸಣ್ಣಯಂತ್ರ ತಂತ್ರಜ್ಞಾನವೆಂದು ಕರೆದ ಒಂದು ಹೊಸ ತಂತ್ರಜ್ಞಾನ ಮೂರನೇ ಜಗತ್ತಿನ ಸಮಸ್ಯೆಗಳಿಗೆ ಕೈಗಾರಿಕೀಕರಣದ ಉತ್ತರವಾಗಲ್ಲುದೆಂದು ಅವರು ಪ್ರತಿಪಾದಿಸಿದರು. ಆದರೆ ಇದಿಷ್ಟೇ ಸಾಲದು, ಆರ್ಥಿಕ ವಿಕೇಂದ್ರೀಕರಣ ರಾಜಕೀಯ ವಿಕೇಂದ್ರೀಕರಣದೊಂದಿಗೆ–ಚತುಸ್ತಂಭ ರಾಜ್ಯ ವ್ಯವಸ್ಥೆಯ ನಿರ್ಮಾಣದವರೆಗೆ–ಕೈ ಕೈ ಹಿಡಿದು ಸಾಗಬೇಕೆಂದು ಅವರು ಸೂಚಿಸಿದರು.

* * *

ರಾಷ್ಟ್ರರಾಷ್ಟ್ರಗಳ ನಡುವೆ, ಎದ್ದು ರಾಚುವ ಅಗಾಧ ಪ್ರಮಾಣದಷ್ಟು ಅಸಮಾನತೆ ಇರುವವರೆಗೂ ಶಾಂತಿಯ ಘೋಷಣೆ ಅರ್ಥವಿಲ್ಲದ್ದೆಂದು ಅವರು ಹೇಳಿದರು. ಆದರಿಂದಲೇ ಅವರು, ಸಮಾಜವಾದಿಗಳು ದೇಶವೊಂದರೊಳಗಿನ ಸಮಾನತೆಗಾಗಿ ಮಾತ್ರವಲ್ಲ, ರಾಷ್ಟ್ರಗಳ ನಡುವಣ ಸಮಾನತೆಗಾಗಿಯೂ ಹೋರಾಡಬೇಕೆಂದು ಬಯಸಿದ್ದರು.

ಕನ್ನಡಕ್ಕೆ: ಡಿಎಸ್ಸೆನ್

■

"ಓ ಇಂಡಿಯಾ ತಾಯಿ, ನಮಗೆ ಶಿವನ ಮನಸ್ಸು, ಕೃಷ್ಣನ ಹೃದಯ ಮತ್ತು ರಾಮನ ವಚನ ಹಾಗೂ ಕೃತಿಶಕ್ತಿಯನ್ನು ನೀಡು; ನಮ್ಮನ್ನು ಆಯಾಮವಿಲ್ಲದ ಮನಸ್ಸು ಮತ್ತು ತುಂಬು ಹೃದಯ, ಆದರೆ ಮಿತಿಗಳಿರುವ ಬದುಕಿನೊಂದಿಗೆ ಸೃಷ್ಟಿಸು"

–ಲೋಹಿಯಾ(ರಾಮ, ಕೃಷ್ಣ, ಶಿವ)

ಲೋಹಿಯಾ: ಸೃಜನಶೀಲ ಬಂಡಾಯಗಾರ

■ ಡಾ. ಯು.ಆರ್. ಅನಂತಮೂರ್ತಿ

"ವ್ಯಾಕುಲವಾಗಿದ್ದಾಗ ಈತ ಹುಡುಗಾಟಿಕೆಯಲ್ಲಿದ್ದ ಹಾಗೆ ಕಾಣುತ್ತಾರೆ ; ಸಂಕಟದಲ್ಲಿದ್ದಾಗ ಉಲ್ಲಾಸ ತುಳುಕುವ ಹಾಗೆ ಕಾಣುತ್ತಾರೆ; ಗಂಭೀರವಾಗಿರುವಾಗ ಚೇಷ್ಟೆ ಮಾಡುವ ಹಾಗೆ ಕಾಣುತ್ತಾರೆ."

– ಹೀಗೆ ದೆಹಲಿಯ ಒಬ್ಬ ಪತ್ರಿಕೋದ್ಯಮಿ ಲೋಹಿಯಾ ಬಗ್ಗೆ ಹೇಳಿದಾಗ, ಆ ಲೇಖನದ ಸಂದರ್ಭದಲ್ಲಿ ಅದು ಅಪಾರ್ಥಕ್ಕೆ ಹಾದಿ ಮಾಡಿಕೊಡುತ್ತಿತ್ತು. ಆದರೆ ನಿಜವಾಗಿ ಅದು ಮಾರ್ಮಿಕವಾದ ಪರಾಮರ್ಶೆಯೇ ಆಗಿತ್ತು. ಲೋಹಿಯಾರ ಸಾಂಕೇತಿಕ ಭಾಷೆಯಲ್ಲೇ ಹೇಳುವುದಾದರೆ ರಾಮ ಮತ್ತು ಕೃಷ್ಣ ಈ ಇಬ್ಬರ ಸತ್ವವನ್ನೂ ತನ್ನ ವ್ಯಕ್ತಿತ್ವದಲ್ಲಿ ಒಗ್ಗೂಡಿಸಿಕೊಳ್ಳುವುದಕ್ಕೆ ಲೋಹಿಯಾ ಹೆಣಗಿದರು ಎನ್ನಬಹುದು: ರಾಮನದು, ಪ್ರಜಾಪ್ರಭುತ್ವ ನಿಶ್ಚಿತ ಸೀಮೆಯಲ್ಲಿ ಅಸಂದಿಗ್ಧ ಕ್ರಿಯೆಗಳ ಮೂಲಕ ತನ್ನನ್ನು ವ್ಯಕ್ತಗೊಳಿಸಿಕೊಳ್ಳುವ ಸೀಮಿತ ವ್ಯಕ್ತಿತ್ವ ; ಕೃಷ್ಣನದು, ಸೃಷ್ಟ್ಯಾತ್ಮಕ ಕಲಾವಿದನ ಅಸೀಮಿತ ವ್ಯಕ್ತಿತ್ವ. ಲೋಹಿಯಾರಲ್ಲಿ ಕೆಲವರಿಗೆ ಕಂಡ ಹುಡುಗಾಟಿಕೆ-ಚೇಷ್ಟೆಗಳು ಅವರ ವ್ಯಕ್ತಿತ್ವವನ್ನು ಕುಬ್ಜಗೊಳಿಸಿವೆ ಎಂದು ಭಾವಿಸಬಾರದು. ಬದಲು ಅದು ಕ್ರಿಯಾಶೀಲವೂ, ಹಾಗೇ ಸೃಜನಾತ್ಮಕವಾಗಿ ಯಾವುದಕ್ಕೂ ಮೈಗೊಡಬಲ್ಲದೂ ಆದ ಅವರ ವ್ಯಕ್ತಿತ್ವದ ಮೂಲದ್ರವ್ಯಗಳಲ್ಲಿ ಒಂದು ಎಂದು ತಿಳಿಯಬೇಕು. ಬದುಕಿನ ಬಹುಮುಖದ ಸವಾಲುಗಳ ದ್ವಂದ್ವ ಸಮೃದ್ಧಿಯಲ್ಲಿ ಸಮಸ್ತಕ್ಕೂ ಎಚ್ಚರಾಗಿ, ಚುರುಕಾಗಿ ಉಳಿದಿರಲು ಕಲಾವಿದನಂತೆ ಪ್ರಯತ್ನಿಸುತ್ತ ಮತ್ತು ಅದೇ ಸಮಯದಲ್ಲಿ ಇಂಡಿಯಾದ ಬದುಕು ಮೂಲತಃ ಬದಲಾಗತಕ್ಕದ್ದೆಂದು ತಿಳಿದು ಅದಕ್ಕಾಗಿ ಕ್ರಾಂತಿಕಾರನ ಏಕೋದೃಢ ಮನಸ್ಸಿನಿಂದ ಹೋರಾಡಿದ ವಿಶಿಷ್ಟ ವ್ಯಕ್ತಿತ್ವ ಅದು.

ಸತ್ಯದ ಅನೇಕ ಮುಖಗಳಿಗೆ ಕುರುಡಾಗಿಬಿಟ್ಟಿರುವ – ಅರ್ಥಾತ್ ಹಾಸ್ಯ, ಲವಲವಿಕೆಗಳಿಲ್ಲದಿರುವ – ಮನಸ್ಸು ಮಾವೋನಂಥ ವ್ಯಕ್ತಿತ್ವವನ್ನು ಸೃಷ್ಟಿಸುತ್ತದೆ. ಅದು ಮನುಷ್ಯ ವ್ಯಕ್ತಿತ್ವವನ್ನು ಏಕೋದ್ದೇಶ ಏಕತತ್ವಕ್ಕೆ ಇಳಿಸಿಬಿಡಬಲ್ಲ ರಾಕ್ಷಸೀ ಸಂಕೋಚವಾಗಿಬಿಡುತ್ತದೆ. ಇದಕ್ಕೆ ವಿರುದ್ಧವಾದ್ದು ಕಲಾವಿದ ಅಥವಾ ರಸಿಕ ಎಂದು ಹೇಳಿಕೊಳ್ಳುವವನ ಗೋಸುಂಬೆಯಂಥ ಚಂಚಲವಾದ ಬೇಜವಾಬ್ದಾರಿ ವ್ಯಕ್ತಿತ್ವ. ಲೋಹಿಯಾ ಸೃಜನಾತ್ಮಕ ಕಲಾವಿದನ ಹಾಗೆ ಕಾಲದ ಒಂದೊಂದು ಕ್ಷಣವನ್ನೂ ಇತಿಹಾಸದ ಹೊರಗೆ ನಿಲ್ಲಬಲ್ಲ ಅನಂತವನ್ನಾಗಿ ಕಂಡವರಾಗಿದ್ದರು ; ಹಾಗೇ, ರಾಜಕೀಯ ಕ್ರಾಂತಿಕಾರಕನಾಗಿ, ಇತಿಹಾಸದ ಪ್ರಜ್ಞೆ ಉಳ್ಳವರಾಗಿ, ಕಾಲವೆಂಬುದು ಪ್ರವಾಹ, ಬದಲಾಗಬಹುದಾದ್ದು, ಬದಲಾಯಿಸಬೇಕಾದದ್ದು ಎಂಬುದನ್ನೂ ಕಂಡವರಾಗಿದ್ದರು. ತನ್ನ ಕಾಣ್ಕೆಗೆ, ತನ್ನ ಅನುಭವ ಅನ್ನಿಸಿಕೆಗಳಿಗೆ, ಪ್ರಾಮಾಣಿಕವಾಗಿ ಬದುಕುತ್ತೇನೆ ಎಂದು ಹೊರಟಿದ್ದರಿಂದ ಅವರು ಪ್ರಜಾಸತ್ತಾವಾದಿ ಮತ್ತು ಕ್ರಾಂತಿಕಾರಿ ಎರಡೂ ಆಗಬೇಕಾಯಿತು ; ಒಮ್ಮೆ ತುಂಟನ ಹಾಗೆ, ಮತ್ತೊಮ್ಮೆ ದುಃಖಿಯ ಹಾಗೆ, ಮಗದೊಮ್ಮೆ ಗಂಭೀರವಾಗಿ ಹಲವು ಮುಖಗಳಲ್ಲಿ ಕಾಣಿಸಿಕೊಳ್ಳುವಂತಾಯಿತು. ಬೇರೆ ಮಾತಲ್ಲಿ ಹೇಳುವುದಾದರೆ, ಮೂರ್ತವೂ ಅಸಂದಿಗ್ಧವೂ ಆದ ಕರ್ತವ್ಯಗಳ ಮೂಲಕ ಇಂಡಿಯಾದ ಬದುಕನ್ನು ಬದಲಿಸಲು ಆತ ತನ್ನ ಚೇತನವನ್ನು ಸದಾ ಸಿದ್ಧಗೊಳಿಸಿಕೊಳ್ಳುತ್ತಲೇ ಇರಬೇಕಾಯಿತು. ಆದರೆ ಈ ಮಧ್ಯೆ ಅವರು ಬದುಕಿನ ಹಾಗೂ ಅದರ ವೈವಿಧ್ಯಗಳ ಸಂದಿಗ್ಧವನ್ನು ಮಾತ್ರ ಎಂದೂ ಮರೆಯಲಿಲ್ಲ. ಸತ್ವಹೀನ ಉದಾರವಾದಿಯ ಮೋಸದ ಸಹನೆಯನ್ನು ಹೇಗೋ ಹಾಗೆಯೇ ಒಂದೇ ಉದ್ದೇಶಕ್ಕೆ ಬದ್ಧವಾದ ರಾಕ್ಷಸತನವನ್ನೂ ಒಲ್ಲದ ಲೋಹಿಯಾ, ರಾಜಕೀಯ ಜೀವನದ ಹೊಸ ಶೈಲಿಯೊಂದನ್ನು – ಅತ್ಯಂತ ಕ್ರಿಯಾಶೀಲವೂ, ಅಪೇಕ್ಷಣೀಯವೂ ಆದ ಹೊಸ ಜೀವನ ಕ್ರಮವನ್ನು – ತೋರಿಸಿಕೊಟ್ಟವರಾಗಿದ್ದಾರೆ. ಆದ್ದರಿಂದಲೇ ಆತ ನೆಹರೂಗೆ ಹೇಗೋ ಹಾಗೆ ಮಾವೋನ ರೆಡ್‌ಗಾರ್ಡ್ ಚಳುವಳಿಗೂ ತೀವ್ರ ವಿರೋಧಿಯಾಗಿದ್ದುದು. ಕಪಟ ಭೋಳೆತನವಾಗದಂತಹ ಉದಾರವಾದಿಯ ಸಹನೆ ಮತ್ತು ಒಂದೇ ಉದ್ದೇಶಕ್ಕೆ ಎಲ್ಲವನ್ನೂ ಅಹುತಿಕೊಡದಂತಹ ಕ್ರಾಂತಿಕಾರಿಯ ಏಕೋದ್ದೃಢ ಕಾರ್ಯವೃತ್ತಿ ಇವುಗಳ ಹೊಸ ಸಾಮರಸ್ಯ ಸಾಧಿಸುವ ಲೋಹಿಯಾರ ಪ್ರಯತ್ನ ನಮ್ಮ ಪ್ರಪಂಚಕ್ಕೆ ಮಹತ್ವಪೂರ್ಣವಾದುದು. ಇದನ್ನು ವೈಯಕ್ತಿಕವಾಗಿಯಲ್ಲದೆ ಸಾಮೂಹಿಕ ಕಾರ್ಯಕ್ರಮಗಳಲ್ಲೂ ಹೇಗೆ ಸಾಧಿಸಬೇಕೆಂಬುದೇ ಲೋಹಿಯಾರ ಇಡೀ ಜೀವನದ ಹುಡುಕಾಟವಾಗಿತ್ತು. ಒಂದೇ ಗುರಿ ಒಂದೇ ತತ್ವ ಎಂದು ಬದುಕಿನ ಉದ್ದವೂ ಅದಕ್ಕೆ ತನ್ನನ್ನು ತೆತ್ತುಕೊಂಡ ತಾತ್ವಿಕ ಮನುಷ್ಯನ ಬಗ್ಗೆ ಯೇಟ್ಸ್ ಕವಿಯ **Easter 1916** ಕವನದಲ್ಲಿ ಆಳವಾದ ಪರಾಮರ್ಶೆ ಇದೆ:

Hearts with one Purpose one Purpose alone
Through Summer and Winter seem

Enchanted to a stone

To Trouble the living stream.

ಯಾವೊಂದು ತತ್ವಕ್ಕೇ ತೆತ್ತು ಹೋದ ಬದುಕಿನ 'ಅತಿ ದೀರ್ಘ ತ್ಯಾಗ' ಹೃದಯವನ್ನು ಕಲ್ಲು ಮಾಡಿಬಿಡುತ್ತದೆ. ಲೋಹಿಯಾರಿಗೆ ಕೂಡ ಇಂಥದೇ ಭಯವಿದ್ದಿರಬಹುದು. 'ಮಾರ್ಕ್ಸ್ , ಗಾಂಧಿ ಮತ್ತು ಸೋಶಲಿಸಂ' ಎಂಬ ಪುಸ್ತಕದ ಮುನ್ನುಡಿಯಲ್ಲಿ ಅವರು ಹೀಗೆಂದಿದ್ದಾರೆ:

"ಕಾರ್ಯಕ್ರಮಗಳಿಗೆ ಅಂಟಿಕೊಂಡು 'ಸಮತ್ವ' ತಪ್ಪಿದ ನನ್ನ ಅತಿರೇಕಗಳು ಎಷ್ಟೋ ಸಲ ನನ್ನನ್ನೇ ಅಸ್ವಸ್ಥಗೊಳಿಸಿರುವುದುಂಟು. ಇದರಿಂದ ನನ್ನ ವಿಚಾರಗಳು ಒಪ್ಪಿತವಾಗದೆ ಹೋದಾವು ಎಂದಲ್ಲ. ಆದರೆ ಅದಕ್ಕಿಂತ ಹೆಚ್ಚಾಗಿ, ನನ್ನ ವಿಚಾರಗಳು ಸತ್ಯದ ಅನೇಕ ಮುಖಗಳೊಡನೆ ಹೊಂದಾಣಿಕೆಯಿಲ್ಲದೆ ನಿಂತುಬಿಡುತ್ತವೋ ಎಂಬ ಸಂದೇಹ ನನ್ನನ್ನು ಕಾಡಿಸುತ್ತದೆ. ನನಗೆ ಅತ್ಯಂತ ಅಸಹ್ಯವಾದ್ದೆಂದರೆ ಅಸಹನೆಯೇ."

"ದೇಶದಲ್ಲಿ ಹಬ್ಬಿದ ಸರ್ವತೋಮುಖವಾದ ಅಸತ್ಯವಂತಿಕೆಯ ಸನ್ನಿವೇಶ" ಇಂಥ ಅತಿರೇಕವನ್ನು ತನ್ನ ಮೇಲೆ ಹೇರಿತು ಎಂದು ಅವರು ಒಪ್ಪಿಕೊಳ್ಳುತ್ತಾರೆ. "ಈ ದೇಶದ ರಾಜಕಾರಣದ ಕೆಸರು ಜವುಗಿನಲ್ಲಿ ಯಾವುದಕ್ಕೂ ನೆಲೆಯಿಲ್ಲ, ಯಾವುದೂ ಗಟ್ಟಿ ಹುಗಿದು ತಲೆಯೆತ್ತಿ ನಿಲ್ಲುವ ಹಾಗಿಲ್ಲ." ಅದಕ್ಕಾಗಿಯೇ "ಮೋಸದ ಈ ಕೆಸರಲ್ಲಿ ಗಟ್ಟಿ ನೆಲವನ್ನು ಹಿಡಿಯುವುದಕ್ಕಾಗಿಯೇ" ನೀತಿ ಮತ್ತು ತತ್ವಗಳ ದೃಢಸ್ತಂಭವನ್ನು ಊರಿ ನಿಲ್ಲಬೇಕಾಯಿತು ಎನ್ನುತ್ತಾರೆ ಲೋಹಿಯಾ.

ಬುದ್ಧಿಜೀವಿಗಳಿಗೂ ಲೇಖಕರಿಗೂ ಲೋಹಿಯಾರ ವ್ಯಕ್ತಿತ್ವ ಆಕರ್ಷಣೀಯವಾಗಿರುವುದಕ್ಕೆ ಕಾರಣ ಇದು: ಆತ ದೇಶದ ರಾಜಕೀಯ ಕ್ಷೇತ್ರದಲ್ಲಿ ಮುಳುಗಿ ಹೋಗಿದ್ದರೂ, ತನ್ನ ಪಕ್ಷದ ಕೈಯಲ್ಲೇ ಮೇಲೆ ಮೇಲೆ ಆಘಾತಗಳನ್ನು ಎದುರಿಸಬೇಕಾಗಿ ಬಂದಿರಬಹುದಾಗಿದ್ದರೂ, ಅದರ ಮಧ್ಯೆ ಕೂಡ ಅವರು ಅವನ್ನೆಲ್ಲ ಮೀರಿ ತನ್ನ ವ್ಯಕ್ತಿತ್ವದ ಕಲಾತ್ಮಕ ಭಾಗಕ್ಕೂ ಎಚ್ಚರಿದ್ದು ಮೈಗೊಡಬಲ್ಲವರಾಗಿದ್ದರು. ಅಂತರರಾಷ್ಟ್ರೀಯ ರಾಜಕಾರಣಕ್ಕೆ ಹೆದರಿ ಸ್ವೆಟ್ಲಾನಾಳಂಥ ವ್ಯಕ್ತಿಯನ್ನು ನಾಚಿಕೆಯಿಲ್ಲದೆ ಭಾರತ ಸರ್ಕಾರ ಬಲಿಗೊಟ್ಟ ವಿಷಯವಾಗಲಿ; ಆಹಾರ, ಭಾಷೆ ಆದಾಯ ಮುಂತಾದ ರಾಷ್ಟ್ರೀಯ ತುರ್ತಿನ ವಿಚಾರಗಳಾಗಲಿ, ಸಾಹಿತ್ಯ ಅಕಾಡೆಮಿಯಲ್ಲಿ ರಾಜಕಾರಣಿಗಳು ಕಲೆಗಳ ವಿಚಾರವನ್ನು ಹೊಲೆಗೆಡಿಸುವುದಾಗಲಿ – ಎಲ್ಲದರ ಬಗ್ಗೆ ಅದೇ ತೀವ್ರ ನಿಷ್ಠೆಯಿಂದ, ಅದೇ ತ್ವರಿತದಿಂದ ಮಾತಾಡುತ್ತಿದ್ದದ್ದು ಇಲ್ಲಿನ ರಾಜಕಾರಣಿಗಳಲ್ಲೆಲ್ಲ ಅವರೊಬ್ಬರೇ. ಹೆಣ್ಣೊಬ್ಬಳ ಸಮಸ್ಯೆಗಿಂತ ವಿದೇಶಾಂಗ ನೀತಿಯ ಸಮಸ್ಯೆಗಳು ಹೆಚ್ಚು ಎಂದೆನ್ನಿಸಿದ್ದಿಲ್ಲ ಅವರಿಗೆ.

ಸುಮಾರು ಐದು ವರ್ಷಗಳ ಹಿಂದೆ ನಾನು ಲೋಹಿಯಾರನ್ನು ಮೊದಲ

ಸಲ ಭೇಟಿ ಮಾಡಿದಾಗ ಅವರು ನನ್ನ ಜೊತೆ ಹೆಚ್ಚಾಗಿ ಸಾಹಿತ್ಯದ ಬಗ್ಗೆ ಮಾತಾಡಿದರು. ನನ್ನ ವಿಶೇಷ ಆಸಕ್ತಿ ಯಾವುದೋ ಅದನ್ನೇ ಮಾತಾಡುವಂತೆ ತಾಕೀತು ಮಾಡಿದರು. ಡಿ.ಎಚ್. ಲಾರೆನ್ಸ್ ಬಗ್ಗೆ ಅವರು ನನ್ನನ್ನು ಮತ್ತೆ ಮತ್ತೆ ಪ್ರಶ್ನಿಸಿದರು ; ಹನ್ನೆರಡನೆ ಶತಮಾನದ ಕನ್ನಡದ ವೀರಶೈವ ಅನುಭಾವಿಗಳ ಬಗ್ಗೆ, ಅವರಲ್ಲಿ ಮುಖ್ಯನಾದ ಬಸವಣ್ಣನ ಬಗ್ಗೆ ತುಂಬ ಪ್ರಶ್ನೆ ಮಾಡಿದರು. ಬತ್ತಲೆ ತಿರುಗುವುದರ ಮೂಲಕ ಗಂಡಸರ ಜೊತೆ ಆಧ್ಯಾತ್ಮಿಕ ಸಮಾನತೆಯನ್ನು ಸ್ಥಾಪಿಸಿಕೊಂಡಿದ್ದ ಅಕ್ಕಮಹಾದೇವಿಯ ಬದುಕಂತೂ ಲೋಹಿಯಾರನ್ನು ತುಂಬ ಆಕರ್ಷಿಸಿತ್ತು. ನಾನು ಅವರ ರಾಜಕೀಯ ಮತ್ತು ತಾತ್ವಿಕ ಚಿಂತನೆಗಳಿಗೆ ಸಮರ್ಥನೆ ಕೊಡಬಹುದಾಗಿದ್ದ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದಾಗ ಅಂಥವನ್ನು ಅವರು ಅತಿ ಸಂದೇಹದಿಂದ ಪರೀಕ್ಷಿಸಿದರು ; ಅವರ ಮನಸ್ಸು ಯಾವ ತತ್ವಕ್ಕೂ ಗಂಟುಬಿದ್ದು ಮುಚ್ಚಿಕೊಂಡಿಲ್ಲವೆಂಬುದು ನನಗೆ ಅವತ್ತು ಮತ್ತೆ ಮತ್ತೆ ಅನುಭವಕ್ಕೆ ಬಂದಿತು.

ನನಗೆ ತಿಳಿದಂತೆ ರಾಜಕಾರಣಿಗಳ ನಡುವೆ ಅತ್ಯಂತ ನಿರ್ಲಿಪ್ತ ಶೋಧಕರೆಂದರೆ ಅವರೊಬ್ಬರೇ: ಸಾಮಾನ್ಯವಾಗಿ ತುಂಬ ಪಾಶ್ಚಾತ್ಯೀಕೃತರಾದ ಭಾರತೀಯರು ಪರಿಹಾರ ರೂಪವಾಗಿ ರೂಢಿಸಿಕೊಳ್ಳುವಂಥ ಭಾವುಕ 'ಭಾರತೀಯತೆ'ಯಾಗಲಿ, ಪಶ್ಚಿಮದ ಬಗ್ಗೆ ಆತ್ಮವಿಶ್ವಾಸವಿಲ್ಲದ ಅದೃಢರು ಬೆಳೆಸಿಕೊಳ್ಳುವಂಥ ಭಾವುಕ ವೈರವಾಗಲಿ ಅವರಿಗಿರಲಿಲ್ಲ. ತೀರ ವಿರುದ್ಧವೆಂದು ಕಾಣಿಸಬಹುದಾದರೂ, ಅವರು ಇಂಡಿಯಾಕ್ಕೆ ಹೇಗೋ ಹಾಗೆ ಪ್ರಪಂಚದ ಪ್ರಜ್ಞೆತನಕ್ಕೂ ಅತಿನಿಷ್ಠೆಯಿಂದ ತಮ್ಮನ್ನು ದತ್ತಕೊಟ್ಟುಕೊಂಡಿದ್ದರು;ಎರಡನ್ನೂ ಮೂರ್ತ ರೂಪದಲ್ಲಿ ಏಕತ್ರ ಸಾಧಿಸಬಹುದೆಂಬುದನ್ನು ಅವರು ಸ್ವತಃ ಕಂಡುಕೊಂಡಿದ್ದರು. ಆತ ಅಸಾಮಾನ್ಯ ಧೈರ್ಯದಿಂದ ರಿಸ್ಕ್ ತೆಗೆದುಕೊಳ್ಳಲು ಹೆದರದೆ ಯೋಚಿಸಬಲ್ಲ ಸಾಹಸಿಯಾಗಿದ್ದರು; ತಾನೆಲ್ಲಾದರೂ ತಪ್ಪಿ ಸಿಕ್ಕಿಕೊಂಡುಬಿಟ್ಟೇನು ಎಂಬಥ ಅಳುಕು ಅವರ ವಿಚಾರಸರಣಿಯಲ್ಲಿ ಇರುತ್ತಿರಲಿಲ್ಲ. ಮನುಷ್ಯನ ಲೈಂಗಿಕತೆಯ ಬಗ್ಗೆ ಲಾರೆನ್ಸ್ ತೋರಿಸುತ್ತಿದ್ದ ಮುಕ್ತ ಭಾವನೆ, ಮಧ್ಯಮವರ್ಗದ ಟೊಳ್ಳು ಗೌರವದ ಬಗ್ಗೆ ಅವನ ತಿರಸ್ಕಾರ ಲೋಹಿಯಾರಿಗೆ ಮೆಚ್ಚುಗೆಯಾದ್ದು ಕಂಡು ನನಗೆ ಆಶ್ಚರ್ಯವಾಗಲಿಲ್ಲ. ಆದರೆ ಆ ಕಲ್ಲಿದ್ದಲು ಗಣಿ ಕಾರ್ಮಿಕನ ಮಗ ತನ್ನ ರಾಜಕೀಯ ವಿಚಾರಗಳಲ್ಲಿ ಸೋಶಲಿಸ್ಟರಿಗೆ ಅನುಕೂಲನಾಗಿಲ್ಲ ಎಂಬ ಸಂಗತಿ ಅವರನ್ನು ದೊಡ್ಡದಾಗಿ ಬಾಧಿಸಲಿಲ್ಲ ಎಂಬುದರಿಂದ ನನಗೆ ಸಂತೋಷವಾಯಿತು. ಕಮ್ಯುನಿಸ್ಟ್ ವಿಮರ್ಶಕರಲ್ಲಿ ಕಾಣದ ಗುಣ ಇದು.

ನಾನು ಅಲ್ಲಿಂದ ಹೊರಡುವಾಗ ಲೋಹಿಯಾ ಮತ್ತು ಲಾರೆನ್ಸ್ ಇವರಿಬ್ಬರ ಚೇತನಗಳ ಮಧ್ಯೆ ಏನೋ ಒಂದು ನಂಟು ಇದೆ ಎಂಬ ಭಾವನೆ ತಾಳಿ ಬಂದೆ: ಸಾಮಾಜಿಕ ಮರ್ಯಾದೆಗೆ ಬದ್ಧರಾಗದ ಲಾರೆನ್ಸ್‌ನ ಕೆಲವು ಪಾತ್ರಗಳ ಜೀವೋತ್ಕರ್ಷವನ್ನು ಲೋಹಿಯಾ ನನಗೆ ನೆನಪಿಸುವಂತೆ ಕಂಡರು. ಆಗ ನಾನು ಲಾರೆನ್ಸ್ ಬಗ್ಗೆ ವಸ್ತುನಿಷ್ಠನಾಗಿ

ಚರ್ಚಿಸುವುದು ಸಾಧ್ಯವಿರಲಿಲ್ಲ – ಕಾರಣ ತುಂಬ ಉತ್ತೇಜಿತನಾಗಿದ್ದೆ. ನನ್ನ ಕಲ್ಪನೆಯನ್ನೆಲ್ಲ ಲಾರೆನ್ಸ್ ಮತ್ತು ಲೋಹಿಯಾ ಅಕ್ರಮಿಸಿಬಿಟ್ಟಿದ್ದರು. ನನಗಿನ್ನೂ ನೆನಪಿದೆ: ಚಾಟರ್ಲಿಯ ಜೊತೆ ಗೇಮ್‌ಕೀಪರ್‌ನ ಸಂಬಂಧವನ್ನು ಚರ್ಚಿಸುವಾಗ 'ಅಶ್ಲೀಲ' ಪದ ಬಳಸುವುದಕ್ಕೆ ನಾನು ಹಿಂಜರಿದದ್ದು ಕಂಡು ಅವರು ನನ್ನ ಸಭ್ಯತೆಯನ್ನು ನಯವಾಗಿ ಛೇಡಿಸಿದ್ದರು. ನಾನು ಅವರ ಜೊತೆ ಸುಮಾರು ಐದು ಗಂಟೆಗಳ ಕಾಲ ಕಳೆದಿದ್ದೆ ; ಅಷ್ಟರಲ್ಲಿ ಅವರ ಮನೋವೃತ್ತಿ ಒಂದರಿಂದ ಒಂದಕ್ಕೆ ಬದಲಾಗುತ್ತಿದ್ದದ್ದನ್ನೂ ಕಂಡಿದ್ದೆ – ಹರ್ಷ, ತುಂಟು, ವಿಷಾದ, ಗಂಭೀರ ಮತ್ತು ಕೋಪ ಕೂಡ.

ಆ ದಿನ ತನ್ನನ್ನು ವಿಶ್ವವಿದ್ಯಾನಿಲಯಕ್ಕೆ ಕರೆದುಕೊಂಡುಹೋದ ಪಕ್ಷದ ಕಾರ್ಯಕರ್ತರ ಮೇಲೆ ಅವರು ರೋಷಗೊಂಡರು, ಅಲ್ಲಿ ತಾನು ಕಡ್ಡಾಯವಾಗಿ ಇಂಗ್ಲಿಷಲ್ಲೇ ಮಾತಾಡಬೇಕಾಗಿ ಬಂದದ್ದಕ್ಕೆ. ವಿಶ್ವವಿದ್ಯಾನಿಲಯದ ಭಾಷಣದಲ್ಲಿ ಅವೊತ್ತು ಅವರು ಜಾತಿಪದ್ಧತಿ; ಪ್ರಮುಖವಾಗಿ ಇಂಡಿಯಾದ ಸಂಸ್ಕೃತಿಯ ಬಗ್ಗೆ ಓಜಸ್ವೀ ವಿಶ್ಲೇಷಣೆ ಮಾಡಿದ್ದರು ; ಶಂಕರರ ಅನಂತರ ಇಲ್ಲಿ ಮೂಲಭೂತ ಚಿಂತನೆಯೇ ನಡೆದಿಲ್ಲ, ನಮ್ಮ ಜೀವನ ಅತಿ ಸಾಧಾರಣವಾಗಿಬಿಟ್ಟಿದೆ ಎಂದಿದ್ದರು. ಇದೇ ಮಾತಿಗಾಗಿ ಕೊನೆಯಲ್ಲಿ ಅಲ್ಲಿನ ಒಬ್ಬ ಪ್ರೊಫೆಸರ್ ಲೋಹಿಯಾರನ್ನು 'ನಿರಾಶಾವಾದಿ' ಎಂದು ಕರೆದು ಲೋಹಿಯಾರ ವಿಚಾರದ ಬಗ್ಗೆ ತಮ್ಮ ಪಶ್ಚಾತ್ತಾಪ ವ್ಯಕ್ತಪಡಿಸಿದರು. ಹಾಗಿದ್ದರೂ ಲೋಹಿಯಾ ಆ ಪ್ರೊಫೆಸರರ ಬಗ್ಗೆ ನಯವಾಗಿ ನಡೆದುಕೊಂಡರು, ಅವರ ಟೀಕೆಯ ಬಗ್ಗೆ ವಿಷಾದದ ಮೆಲುನಗೆ ನಕ್ಕಿದ್ದರು.

ಲೋಹಿಯಾರ ಚಿಂತನೆ ಮತ್ತು ಸಾಧನೆಗಳು ಇನ್ನೂ ತುಣುಕುಗಳಾಗಿ ಉಳಿದಿವೆ ಅವನ್ನು ಪೂರ್ಣಗೊಳಿಸಬೇಕಾದ್ದು ಉಳಿದಿದೆ ಎಂಬ ಅರಿವು ನನಗಿದೆ. ಆದರೆ ಆತ ಏನು ಬಿಟ್ಟು ಹೋಗಿದ್ದಾರೋ ಅದು ಇಂಡಿಯಾದ ಬುದ್ಧಿಜೀವಿಗಳಿಗೆ ತುಂಬ ಪ್ರಚೋದಕವಾಗಬಲ್ಲದು. ನೀರದ್ ಚೌಧರಿಯವರಂಥ ಮೇಧಾವಿಗಳು ಮಾರ್ಮಿಕವಾಗಿ ವಿಚಾರಮಾಡಬಲ್ಲವರಾದರೂ 'ಉನ್ನತೋತ್ತಮ'ರ ನಿಲುವಿನಿಂದ ಅವರು ವಿಚಾರಮಾಡುವ ಕಾರಣ, ಸರಿಯಾದ ಐತಿಹಾಸಿಕ ದೃಷ್ಟಿಯಿಲ್ಲದೆ; ಬದಲಾಗಬಲ್ಲ ಭಾರತದ ವಾಸ್ತವತೆಯನ್ನು ಅರ್ಥಮಾಡಿಕೊಳ್ಳಲಾರದೆ ಕಂಗೆಡುತ್ತಾರೆ. ಅವರು ತಮ್ಮ ಆಘಾತಗೊಂಡ – ಆದ್ದರಿಂದಲೇ ಸೊಗಸೆನ್ನುವ, ಅಪೂರ್ವವೆನ್ನಿಸುವ – ಸೂಕ್ಷ್ಮ ಸಂವೇದನೆಯ ಕಡೆ ಮತ್ತೆ ನಮ್ಮ ಗಮನ ಸೆಳೆಯಬಲ್ಲರು ಅಷ್ಟೆ. ಪಾಶ್ಚಿಮಾತ್ಯ ವಿಚಾರವನ್ನು ಅನುಕರಿಸುವ ನಮ್ಮವರು ಕೂಡ 'ಸೂಕ್ಷ್ಮ ಸಂವೇದನೆಯ ಭಾರತೀಯ' ಮನಸ್ಸಿಗಿಂತ ಹೆಚ್ಚಿನದನ್ನು ಬಯಸುವುದಿಲ್ಲ; ಇಂಡಿಯಾದಲ್ಲಿ ತನ್ನನ್ನು ಆವರಿಸುವ ಕೊಳಕಿನ ಮಧ್ಯೆ ವಿವಕ್ತವಾಗಿ ನಿಂತ ಈ ಸೂಕ್ಷ್ಮ ಸಂವೇದನೆಯ 'ಉನ್ನತ್ತೋತ್ತಮ' ಬೇರೆತನವನ್ನೇ ನಾವು ಚಪ್ಪರಿಸಬಯಸುತ್ತೇವೆ ಬಹಳ ಕಾಲದಿಂದ ಬೆಳೆದು ಬಂದಿದ್ದ ಭಾವಾತಿಸಾರದಿಂದ ಕೂಡಿದ ಭಾರತೀಯತೆಗೆ ಇದು ಪ್ರತಿಕ್ರಿಯೆ ಅಷ್ಟೆ. ಆದರೆ

ಇಂಡಿಯಾದ ಹಲವು ಶತಮಾನಗಳ ಕಾಲದ ದೀರ್ಘ ಅವನತಿಯನ್ನು ಅರಿತು ಅಸಹನೆಯಿಂದ ನೀರಧ್ ಚೌಧರಿಯಷ್ಟೆ ಚಡಪಡಿಸುವ ಲೋಹಿಯಾ ಪಾಶ್ಚಿಮಾತ್ಯರಿಗೆ ತಲೆ ಬಾಡಿಗೆ ಕೊಟ್ಟ ನಮಗೆ ಸುಲಭವಾಗಿ ಒಪ್ಪಿತವಾಗುವುದಿಲ್ಲ. ಏಕೆಂದರೆ ನಮ್ಮ ಆಯ್ಕೆಯನ್ನು ಕೃತಿಯಲ್ಲೇ ವ್ಯಕ್ತಗೊಳಿಸುವಂತೆ ಅವರು ನಮಗೆ ಸವಾಲು ಹಾಕುತ್ತಾರೆ. ತನ್ನ ಹಾದಿಯ ಅತ್ಯಂತ ಕತ್ತಲಲ್ಲೂ, ಭಾರತದ ಸದ್ಯದ ವಾಸ್ತವತೆಯನ್ನು ಬದಲಿಸಲು ಸಾಧ್ಯವೆಂಬ, ಸಮಗ್ರ ಐತಿಹಾಸಿಕ ಪ್ರಜ್ಞೆಯಿಂದ ಬಂದ ಭರವಸೆ ಲೋಹಿಯಾರಿಗೆ ಸದಾ ಇದ್ದುದರಿಂದ ನೀರದ್ ಚೌಧರಿಯವರಂತೆ ಇವರು ತಮ್ಮ ಸೂಕ್ಷ್ಮ ಮನಸ್ಸಿನ ಅನನ್ಯತೆಯನ್ನು ಜಾಹೀರಾತಿಗೆಂಬಂತೆ ಸದಾ ಒಡ್ಡಿಕೊಂಡಿರುವ ಲಂಪಟರಾಗಲಿಲ್ಲ – ಆದ್ದರಿಂದಲೇ ಭಾರತೀಯ ಬುದ್ಧಿಜೀವಿಗಳ ಸದ್ಯದ ಫ್ಯಾಶನ್ನಿನ ದೃಷ್ಟಿಯಿಂದ ಆಕರ್ಷಕರೂ ಆಗಲಿಲ್ಲ.

ಭಾರತೀಯ ಭಾಷೆಗಳು, ಇಲ್ಲಿನ ಜಾತಿಪದ್ಧತಿ, ಶಂಕರರ ಅನಂತರ ಭಾರತದ ಪ್ರಜ್ಞೆಯಲ್ಲೆ ಉಂಟಾದ ಬಿರುಕು(ಮೂರ್ತಕ್ಕೂ ಅಮೂರ್ತಕ್ಕೂ ಮಧ್ಯೆ, ಆಧ್ಯಾತ್ಮಿಕವಾಗಿ ಅರ್ಥವೇ ಇಲ್ಲದ 'ಲೌಕಿಕ ಸತ್ಯ'ಕ್ಕೂ ಅಮೂರ್ತಸ್ಥಿತಿಯಲ್ಲಿ ಒಪ್ಪಿತವಾಗಿ ದಿನನಿತ್ಯದ ಜೀವನ ವಾಸ್ತವದಲ್ಲಿ ಪೂರಾ ತಿರಸ್ಕೃತವಾದ 'ಪಾರಮಾರ್ಥಿಕ ಸತ್ಯ'ಕ್ಕೂ ಮಧ್ಯೆ ಉಂಟಾದ ಬಿರುಕು) – ಈ ಮುಂತಾದರ ಬಗ್ಗೆ ಅವರ ಚಿಂತನೆಗಳು ಅನನ್ಯವಾದವು. ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ಸ್ವಂತ ಬರವಣಿಗೆಯ ದೃಷ್ಟಿಯಿಂದಲೂ ನಮ್ಮ ಕನ್ನಡ ಸಾಹಿತ್ಯವನ್ನು ನಾನು ಅರಿತುಕೊಳ್ಳುವುದಕ್ಕೂ ಅವರ ಚಿಂತನೆಗಳು ಅತ್ಯುಪಯುಕ್ತವಾಗಿವೆ. ಸೃಜನಶೀಲವಾದ ಬೀಜವಾಕ್ಯಗಳಾಗಿವೆ.

ಇಂಗ್ಲಿಷಿನಲ್ಲಿ ಬರೆಯುವ ಭಾರತೀಯ ಲೇಖಕ, ತಾನು ಇಂಡಿಯಾದ ಸನ್ನಿವೇಶದಲ್ಲಿ ಹೊರಗಿನವನಾಗಿ ನಿಂತುಬಿಟ್ಟಿರುವುದನ್ನು ತುಂಬಿಸಿಕೊಳ್ಳಲಿಕ್ಕೆ ಅಥವಾ ಪಾಶ್ಚಾತ್ಯರಲ್ಲಿ ತನ್ನ ಮಾಲನ್ನು ಮಾರಿಕೊಳ್ಳುವುದಕ್ಕೆ ಆಕರ್ಷಣೀಯವಾಗಿ ಕಾಣುವ, ಶಾಬ್ದಿಕ ಮಾತ್ರವಾದ, ಹಳಹಳಿಕೆಯ ಭಾರತೀಯತ್ವವನ್ನು ರೂಢಿಸಿಕೊಳ್ಳಲು ಹೆಣಗುತ್ತಿದ್ದಾನೆ; ಅಥವಾ ಮುಜುಗರದಿಂದ ಹುಟ್ಟಿದ ವ್ಯಂಗ್ಯವನ್ನು ರೂಢಿಸಿಕೊಳ್ಳುವುದರ ಮೂಲಕ ಬಿರುಕು, ತಿಕ್ಕಾಟಗಳಿಂದ ಕೂಡಿದ ಭಾರತೀಯ ಜೀವನದ ದ್ರವ್ಯವನ್ನು ತನ್ನ ತೆಕ್ಕೆಗೆ ದಕ್ಕಿಸಿಕೊಳ್ಳಲು ಶ್ರಮಿಸುತ್ತಾನೆ. ಭಾರತೀಯ ಭಾಷೆಗಳಲ್ಲಿ ಬರೆವ ನವ್ಯ ಲೇಖಕರಲ್ಲಿ ಕೆಲವರು (ಎಲ್ಲರೂ ಅಲ್ಲ) ಪಶ್ಚಿಮದ ಹೊಸ ಹೊಸ ಸಾಹಿತ್ಯ ಚಳುವಳಿಗಳ ಲಹರಿಗಳನ್ನೆಲ್ಲ ರಕ್ತಹೀನವೂ ಅಲ್ಪವೂ ಆದ ನಕಲುಗಳಲ್ಲಿ ಅನುಕರಿಸಲು ಹೆಣಗುತ್ತಿದ್ದಾರೆ. ಆದರೆ ಲೋಹಿಯಾ ಇಂಡಿಯಾಕ್ಕೆ ಬದ್ಧರಾದವರಾಗಿದ್ದರು ; ಹಾಗಿದ್ದೂ ಶತಮಾನಗಳ ಕಾಲ ನಮ್ಮನ್ನು ಆವರಿಸಿಕೊಂಡ ಅಸಹ್ಯರಾಶಿಗಳನ್ನು ಕಂಡು ಕ್ರೋಧಗೊಂಡಿದ್ದರು. ಪಶ್ಚಿಮದ ತಾತ್ವಿಕ ಚಿಂತನೆಗಳಲ್ಲಿ ಅವರು ತೀವ್ರ ಆಸಕ್ತಿ ತಾಳಿದ್ದರು ; ಹಾಗಿದ್ದೂ ಅಲ್ಲಿನ ದೋಷಗಳ ಬಗ್ಗೆ ಅವರು ನಿಷ್ಠುರ ವಿರೋಧಿಯಾಗಿದ್ದರು. ಆತ ಸತ್ಯದ

ಮುಖಗಳಿಗೆ ಎಚ್ಚರರಾಗಿದ್ದರು ; ಆ ಮೂಲಕ ಮನುಷ್ಯ ಜೀವನದ ಸಂದಿಗ್ಧಗಳನ್ನು ಸರಿಯಾಗಿ ಅರಿತುಕೊಳ್ಳಲು ಯಾವ 'ಸಮಸ್ಥಿತಿ' ಬೇಕೋ, ಜೊತೆಗೇ ಆಕಾರಹೀನವಾಗದ ಯಾವ ನಿಶ್ಚಿತತೆ ಬೇಕೋ ಅದನ್ನು ಸೂಚಿಸಿದವರಾಗಿದ್ದರು. ಮತ್ತು ಇಂಡಿಯಾದಲ್ಲಿ ಪುನಃ ಬದುಕನ್ನು ಸಮೃದ್ಧಗೊಳಿಸಲು, ಸುಂದರಗೊಳಿಸಲು ಎಂಥ ನಿಶ್ಚಿತ ಪ್ರಯತ್ನ ಮತ್ತು ತೀವ್ರತೆ ಬೇಕೋ ಅದನ್ನು ತನ್ನ ಬದುಕಿನುದ್ದವೂ ನಡೆಸಿದ ಏಕೋದೃಢ ಹೋರಾಟದಲ್ಲಿ ಪಡೆದುಕೊಂಡವರಾಗಿದ್ದರು.

■

"ನಾನು ಕಾಲವನ್ನು ಮತ್ತು ಭವಿಷ್ಯದ ಕ್ಷಣವನ್ನು ಭಯ-ಆಶೆ-ಹತಾಶೆ-ಆತ್ಯಂತಿಕ ವಿಮುಕ್ತಿ ಈ ಮುಂತಾದ ಅನೇಕಾನೇಕ ಮುಖಗಳಲ್ಲಿ ಕಂಡಿದ್ದೆ. ಕಾಲ ನನ್ನ ಎದುರು ನಿಂತು ಒಂದು ಬಟ್ಟೆ ಬಿಚ್ಚಿ ಇನ್ನೊಂದು ಬಟ್ಟೆ ತೋರಿಸುತ್ತಿರುವಂತೆ ನನಗನ್ನಿಸುತ್ತಿತ್ತು...ಅದರ ಎಲ್ಲ ವಸ್ತುಗಳನ್ನೂ ಕಳಚಿ ಕಾಲವನ್ನು ನಗ್ನಗೊಳಿಸಿ ನೋಡಲು ಪ್ರಯತ್ನಿಸಿದೆ... ನಾನು ಕಾಲವನ್ನು ಅನಂತ ವರ್ತಮಾನವಾಗಿ ಕಂಡಿದ್ದೆ-ಶುಚಿಯಾಗಿ, ಅದನ್ನು ಸುಪ್ರಸನ್ನವಾಗಿ ಕಲುಷಿತಗೊಳಿಸುವ ಶೋಕ ಪಶ್ಚಾತ್ತಾಪಗಳ ಭೂತವಿಲ್ಲದೆ, ಹಾಗೂ ಭಯ ಆಕಾಂಕ್ಷೆಗಳ ಭವಿಷ್ಯವಿಲ್ಲದೆ, ನೆನಪಿಗೆ ಕೂಡಾ ಎಟುಕದೇನೋ ಎನ್ನುವಷ್ಟು ಕ್ಷಣದ ಅಣು ಅಲ್ಪವಾದರೂ ಸರಿಯೇ, ನಾನು ಕಾಲವನ್ನು ಜಯಿಸಿದವನಾಗಿದ್ದೆ..."

-ಲೋಹಿಯಾ(ಲಾಹೋರ್ ಕೋಟೆಯಲ್ಲಿ ಅನುಭವಿಸಿದ ಚಿತ್ರಹಿಂಸೆ ಕುರಿತು ಬರೆದಿರುವ 'ಯೋಗದಲ್ಲಿ ಒಂದು ಅಭ್ಯಾಸ')

ಲೋಹಿಯಾ: ಕೇಂದ್ರಹೀನ ದಾರ್ಶನಿಕ

■ ಜಾರ್ಜ್ ಜಾನ್

ದೇವರ ಪಡಿನೆರಳಲ್ಲಿ ಮಾನವ ಸೃಷ್ಟಿ ಆದನೆಂದು ಬೈಬಲ್ ನಮಗೆ ಹೇಳುತ್ತದೆ. ಭಾರತೀಯ ಸಮಾಜವಾದಿ, ತಾನು ಡಾ. ರಾಮಮನೋಹರ ಲೋಹಿಯಾ ಅವರ ಪಡಿನೆರಳಿನಲ್ಲಿ ಸೃಷ್ಟಿಯಾಗಿದ್ದೇನೆಂದು ತೋರಿಸಿಕೊಳ್ಳುತ್ತಾನೆ. ಮಾನವ ಕೆಲವೊಮ್ಮೆ ದೈವತ್ವದ ಅನುದ್ದೇಶಿತ ಅಣಕು ರೂಪವಾಗಿರಲಿಕ್ಕೂ ಉಂಟು. ಆದರೆ ಭಾರತೀಯ ಸಮಾಜವಾದಿ ಮಾತ್ರ ತಾನು ಉದ್ದೇಶಪೂರ್ವಕವಾಗಿಯೇ ಲೋಹಿಯಾ ಅವರ ಅಣಕು ಎಂದು ತೋರಿಸಲು ಪ್ರಯತ್ನಪಟ್ಟಿದ್ದಾನೆ. ಭಾರತೀಯ ಸಮಾಜವಾದೀ ಅವಸ್ಥೆಯನ್ನು ಇನ್ನಷ್ಟು ಸಂಕೀರ್ಣಗೊಳಿಸಿರುವ ಅಂಶವೇನೆಂದರೆ, ಈ ದೇಶದಲ್ಲಿ ಸಮಾಜವಾದದ ಸಂಸ್ಥಾಪಕ ಮತ್ತು ಪ್ರಮುಖ ಪ್ರತಿಪಾದಕರಲ್ಲಿ ಒಬ್ಬರಾಗಿದ್ದ ಲೋಹಿಯಾ, ತಮ್ಮ ಜೀವನದ ಅಂತ್ಯದವರೆಗೆ ತಾವೇ ಒಂದು ವಿಡಂಬನವಾಗಿಬಿಟ್ಟಿದ್ದರು ಎಂಬುದು. ಹಾಗಾಗಿ ಭಾರತೀಯ ಸಮಾಜವಾದಿ ವಿಡಂಬನೆಯೊಂದರ ವಿಡಂಬನೆ ಎಂದರೆ ತಪ್ಪಾಗಲಾರದು.

ಲೋಹಿಯಾ ಅವರನ್ನು ಜ್ಞಾಪಿಸಿಕೊಳ್ಳುವುದು ಅಂದರೆ, ಈ ದೇಶದಲ್ಲಿ ಸಮಾಜವಾದಕ್ಕೆ ಏನಾಯಿತು, ಮತ್ತು ಅದನ್ನು ಹೇಗೆ ಅಪ್ರಸ್ತುತ ಹಾಗೂ ಹಾಸ್ಯಾಸ್ಪದವನ್ನಾಗಿ ಮಾಡಲಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದೇ ಆಗಿದೆ. ಆಶ್ಚರ್ಯದ ಸಂಗತಿ ಎಂದರೆ, ಇಂಡಿಯಾದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳ ಸೂಕ್ಷ್ಮ ತಿಳುವಳಿಕೆ ಇದ್ದ ಮತ್ತು ಅದಕ್ಕೆ ಕಾರ್ಯಸಾಧ್ಯ ಮತ್ತು ನಿಜ ಸಮಾಜವಾದೀ ಪರಿಹಾರಗಳನ್ನು ನಿರೂಪಿಸಬಲ್ಲವರಾಗಿದ್ದ ಲೋಹಿಯಾ ಅವರು, ಬರೀ ವರ್ಣಮಯ ವ್ಯಕ್ತಿತ್ವವನ್ನು ಮಾತ್ರ ಬಿಟ್ಟು

ಕಣ್ಮರೆಯಾದದ್ದು. ನೆಹ್ರೂ ವ್ಯಕ್ತಿ-ಪರಂಪರೆ ಸೃಷ್ಟಿಸುತ್ತಾರೆಂದು ಹೇಳಿದ ಲೋಹಿಯಾ ಕಡೆಯಲ್ಲಿ ಸ್ವತಃ ತಾವೇ ತಮ್ಮ ಹಿಂಬಾಲಕರಿಗೆ ಅನುಕರಣೆಗಾಗಿ ಒಂದು ಕೇಂದ್ರಹೀನ ವ್ಯಕ್ತಿತ್ವವನ್ನು ಬಿಂಬಿಸಿ ಹೋದದ್ದು ಒಂದು ವೈಚಿತ್ರ್ಯ. ಆದರೆ ಈ ಆಶ್ಚರ್ಯವನ್ನೂ ಮೀರಿದ್ದೇನೆಂದರೆ, ಅವರ ಅನುಯಾಯಿಗಳು, ತಮ್ಮ ನಾಯಕನ ವಿಚಾರಧಾರೆಗಳನ್ನು ಪುನರುಜ್ಜೀವನಗೊಳಿಸಿ ಒಂದು ಶಕ್ತಿಯುತ ರಾಜಕೀಯ ಸಾಧನವನ್ನಾಗಿ ಎರಕಗೊಳಿಸದೇ ತಮ್ಮ ನಾಯಕನ ವಿಚಿತ್ರ ಗುಣವೈಶಿಷ್ಟ್ಯಗಳನ್ನು ಮಾತ್ರ ಅನುಸರಿಸಿಕೊಂಡು ಬಂದದ್ದು. ದೇಶಕ್ಕೆ ಸ್ವಾತಂತ್ರ್ಯ ಸಿಗುವವರೆಗೆ, ಲೋಹಿಯಾ ಅವರ ಬೌದ್ಧಿಕ ಮತ್ತು ರಾಜಕೀಯ ಜೀವನವೆಲ್ಲ ಸ್ವಾತಂತ್ರ್ಯ ಸಂಗ್ರಾಮದೊಂದಿಗೆ ನಿಬದ್ಧವಾಗಿತ್ತು. ಇವರು, ಈ ದೇಶಕ್ಕೆ ಬರೀ ರಾಜಕೀಯ ವಿಮುಕ್ತಿ ಮಾತ್ರವಲ್ಲ, ಸಾಮಾಜಿಕ ಪರಿವರ್ತನೆಯೂ ಅತ್ಯಗತ್ಯ ಎಂಬ ದೃಷ್ಟಿಕೋನ ಬೆಳೆಸಿಕೊಂಡ ಸ್ವಾತಂತ್ರ್ಯ ಹೋರಾಟಗಾರರ ಪೈಕಿಯವರಾಗಿದ್ದರು. ಇವರಂತಹ ಸಮಾನ ಮನಸ್ಕರೆಲ್ಲ ಸೇರಿ ೧೯೩೪ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷನ್ನು ಸ್ಥಾಪಿಸಿದರು. ಜೊತೆಗೆ 'ಕಾಂಗ್ರೆಸ್ ಸಮಾಜವಾದಿ' ಎಂಬ ವಾರಪತ್ರಿಕೆ ಆರಂಭಿಸಿದರು. ಲೋಹಿಯಾ ಅವರನ್ನು ಆ ಪತ್ರಿಕೆಯನ್ನು ಸಂಪಾದಿಸುವಂತೆ ಕೇಳಲಾಯಿತು. ಮೊದಲ ಸಂಚಿಕೆಯಲ್ಲೇ ಲೋಹಿಯಾ "ಬ್ರಿಟಿಷ್ ಸಾಮ್ರಾಜ್ಯದಿಂದ ಬೇರ್ಪಟ್ಟ; ಪೂರ್ಣ ಸ್ವತಂತ್ರ ಮತ್ತು ಸಮಾಜವಾದೀ ಸಮಾಜವೊಂದರ ಸ್ಥಾಪನೆ"ಯೇ ಸಮಾಜವಾದಿಗಳ ಪ್ರಯತ್ನವಾಗಿರುತ್ತದೆ ಅಂತ ಘೋಷಿಸಿದರು. ಕಾಂಗ್ರೆಸ್ ಪಕ್ಷದ ಒಳಗೆ ಸಮಾಜವಾದಿಗಳು, ಪಕ್ಷವು ಮಧ್ಯಮ ವರ್ಗದ ಅವಲಂಬನಕ್ಕಿಂತ ಜನಸಾಮಾನ್ಯರ ಕಡೆ ಒಲವು ಹೊಂದುವಂತೆ ಶ್ರಮವಹಿಸಿದರು.

ಗಾಂಧೀ ಪ್ರಭಾವ

ಸಮಾಜವಾದಿಗಳು ಪ್ರಾರಂಭದಿಂದಲೂ ಗಾಂಧೀ ವ್ಯಕ್ತಿತ್ವ ಮತ್ತು ವಿಚಾರಗಳ ಪ್ರಭಾವಕ್ಕೆ ಒಳಗಾಗಿದ್ದರು. 'ಉಪ್ಪು ಮತ್ತು ಸತ್ಯಾಗ್ರಹ' ಎಂಬ ವಿಷಯದ ಮೇಲೆ ಬರ್ಲಿನ್‌ನಿಂದ ಲೋಹಿಯಾ ಪಿಎಚ್‌ಡಿ ಪಡೆದಿದ್ದರು. ಸಮಾಜವಾದಿಗಳು ಕಮ್ಯುನಿಸ್ಟ್ ದಾರಿಗೆ ಬೀಳದಂತೆ ತಡೆದದ್ದು ಬಹುಮಟ್ಟಿಗೆ ಗಾಂಧೀಯವರ ಪ್ರಭಾವವೇ. ಇದರಿಂದಾಗಿ ಕಮ್ಯುನಿಸ್ಟರು ಕಾಂಗ್ರೆಸ್ ಸೋಶಿಯಲಿಸ್ಟ್ ಗುಂಪಿನೊಳಕ್ಕೆ ನುಸುಳಿ, ಅದನ್ನು ಹತೋಟಿಗೆ ತೆಗೆದುಕೊಳ್ಳುವ ಪ್ರಯತ್ನದಲ್ಲಿ ವಿಫಲರಾದರೆಂದರೆ ಆಶ್ಚರ್ಯವಲ್ಲ.

ಸಮಾಜವಾದಿಗಳು, ಗಾಂಧೀಯವರಲ್ಲಿ ಸಮಾನತತ್ವಗಳನ್ನು ಕಂಡುಕೊಂಡರು. ಒಂದು ಪೂರ್ಣಾರ್ಥ ಪಡೆದುಕೊಂಡ ಹಾಗೂ ಒಂದು ಸ್ವತಂತ್ರ ಸಮಾಜವಾದಿ ಗುರುತನ್ನು ಸಾಕಾರಗೊಳಿಸಿಕೊಳ್ಳುವ ಅವರ ಹಾದಿಯಲ್ಲಿ ಗಾಂಧೀಜಿ ಒಂದು ಅಡಚಣೆಯಾಗಿದ್ದರೆಂಬುದನ್ನು ಈಗ ಯಾರಾದರೂ ಕಂಡುಕೊಳ್ಳಬಹುದಾಗಿದೆ. ಸರ್ದಾರ್ ಪಟೇಲ್‌ರಂಥವರಿಗೆ ಸಮಾಜವಾದಿಗಳೆಂದರೆ, ಧಾರ್ಷ್ಟ್ಯ ತುಂಬಿದ ಮೂಢ ಯುವಜನರ ಗುಂಪು. ಪಟೇಲ ಅವರಿಗೆ ಗಾಂಧೀವಾದವೇ ಸಮಾಜವಾದದ

ಪರಮೋತ್ಕೃಷ್ಟ ಘಟ್ಟ. ಗಾಂಧೀ ಸಂಬಂಧ ಸಮಾಜವಾದಕ್ಕೆ ಮಾಡಿದ್ದೆಂದರೆ, ಅದನ್ನು ಆನುಷಂಗಿಕ ಮತ್ತು ಕೇವಲ ದೃಷ್ಟಿಕೋನದ ವಿಷಯವನ್ನಾಗಿ ಪ್ರತಿಬಿಂಬಿಸಿದ್ದು. ಲೋಹಿಯಾ ಮತ್ತು ಇನ್ನಿತರರು, ಗಾಂಧೀ ಅವರೊಂದಿಗೆ ಬಹಳ ವಿಷಯಗಳಲ್ಲಿ ಭಿನ್ನಮತ ಹೊಂದಿದವರಾಗಿದ್ದರು. ಬ್ರಿಟಿಷ್ ಸಾಮ್ರಾಜ್ಯವಾದಕ್ಕೆ ಇನ್ನೂ ಹೆಚ್ಚಿನ ಪ್ರತಿರೋಧ ವ್ಯಕ್ತಪಡಿಸಬೇಕೆಂಬುದು ಅವರ ಅಪೇಕ್ಷೆ ಆಗಿತ್ತು. ಅವರಿಗೆ ಜಾತಿ ವ್ಯವಸ್ಥೆಯಲ್ಲಿ ತಥ್ಯವೇನೂ ಕಾಣಲಿಲ್ಲ. ಅವರು ಟ್ರಸ್ಟೀ ವ್ಯವಸ್ಥೆಯನ್ನು ಒಪ್ಪಿಕೊಳ್ಳಲಾಗಲಿಲ್ಲ. ಮತ್ತು ಅವರಿಗೆ ಕೈಗಾರಿಕೀಕರಣದ ಬಗ್ಗೆ ಯಾವ ಸಹಜ ವೈರವೂ ಇರಲಿಲ್ಲ. ಮಾನವ ಸ್ವಭಾವವನ್ನು ತಿದ್ದುವ ಮುಖಾಂತರ ಸಾಮಾಜಿಕ ಬದಲಾವಣೆ ತರುವುದಕ್ಕಾಗಿ ಆತ್ಮಶಕ್ತಿ (ಸತ್ಯಾಗ್ರಹ)ಯನ್ನು ಬಳಸಿಕೊಳ್ಳುವ ಮತ್ತು ಉಪವಾಸ ಮಾಡುವ ಗಾಂಧೀ ಮಾರ್ಗದ ಬಗ್ಗೆ ಅವರಿಗೆ ತುಂಬಾ ಸಂಶಯ ಇತ್ತು.

ಈ ಎಲ್ಲಾ ಆಕ್ಷೇಪಣೆಗಳು ಮತ್ತು ಭಿನ್ನಾಭಿಪ್ರಾಯಗಳು ಇದ್ದರೂ, ಅವರು ಗಾಂಧೀಜಿಯವರ ಕಾಂಗ್ರೆಸ್ ಪಕ್ಷದಿಂದ ಸಿಡಿದು ದೂರ ಹೋಗಲಿಲ್ಲ. ಪಕ್ಷದೊಳಗೆ ಪಕ್ಷವೊಂದಾಗಿ ಅವರು ಉಳಿದರು. ಮತ್ತು ಆ ಮೂಲಕ ಕಾಂಗ್ರೆಸ್ ಪಕ್ಷವು ಸಮಾಜವಾದಿ ಪ್ರಭಾವಳಿಯೊಂದನ್ನು ಗಳಿಸಿಕೊಳ್ಳಲೂ ನೆರವಾದರು. ಅವರ ಘೋಷಣೆಗಳು ಮತ್ತು ಕಾಲ-ಕಾಲಕ್ಕೆ ನಡೆಸಿದ ಕ್ರಾಂತಿಕಾರಕ ಚಟುವಟಿಕೆಗಳು ಕಾಂಗ್ರೆಸ್ ಪಕ್ಷಕ್ಕೆ ತೀವ್ರಗಾಮಿ ಸ್ವರೂಪ ಕೊಡಲು ಸಹಾಯವಾದವು. ಲೋಹಿಯಾ ಮತ್ತು ಇನ್ನಿತರ ಸಮಾಜವಾದಿಗಳು ೧೯೩೪ರಲ್ಲಿ ಕಾಂಗ್ರೆಸ್ ಬಿಟ್ಟು ಸ್ವತಂತ್ರ ಸಮಾಜವಾದೀ ಪಕ್ಷವೊಂದನ್ನು ಆರಂಭಿಸಿದ್ದರೆ, ಸಮಾಜವಾದ ನಮ್ಮ ಮುಖ್ಯ ರಾಜಕೀಯ ಕಳಕಳಿಗಳ ಪೈಕಿ ಒಂದಾಗುವ ಎಲ್ಲ ಸಾಧ್ಯತೆ ಇತ್ತು. ಆಗ ಅದು, ಬರೀ ಪರಿಧಿಯ ಮತ್ತು ಕೇವಲ ಕೆಲವು ಘೋಷಣೆಗಳ ಹಾಗೂ ಪೋಸುಗಳ ವಿಷಯವಾಗಿ ಉಳಿಯುತ್ತಿದ್ದಿರಲಾರದು.

ಕಾಂಗ್ರೆಸ್‌ನಿಂದ ಬೇರ್ಪಡೆ

ಸಮಾಜವಾದಿಗಳು ತಾವಾಗಿಯೇ ಕಾಂಗ್ರೆಸ್ ಪಕ್ಷದಿಂದ ಬೇರೆಯಾಗಲಿಲ್ಲವೆಂಬುದು ತುಂಬ ಕುತೂಹಲದ ವಿಷಯ; ಬದಲಾಗಿ ೧೯೪೮ರಲ್ಲಿ ಕಾಂಗ್ರೆಸ್ ಪಕ್ಷದ ಅಂಗರಚನೆಯಲ್ಲಿ ಬದಲಾವಣೆಯೊಂದನ್ನು ತಂದು, ಅವರು ಪಕ್ಷದಿಂದ ಬೇರ್ಪಡುವುದು ಅನಿವಾರ್ಯವನ್ನಾಗಿ ಮಾಡಲಾಯಿತು. ಅಂಗರಚನೆಯಲ್ಲಿನ ಬದಲಾವಣೆ, ಅವರು ಕಾಂಗ್ರೆಸ್ ಪಕ್ಷದೊಳಗಿನ ಪಕ್ಷವೊಂದಾಗಿ ಇರಲು ಅವಕಾಶ ನೀಡಲಿಲ್ಲ. ಅವರು ಪಕ್ಷವನ್ನು ಬಿಡುವುದರ ಹೊರತು ಬೇರೆ ದಾರಿಯಿರಲಿಲ್ಲ. ಈ ಘಟನೆ ನಡೆದಾಗ ಸಮಾಜವಾದಿಗಳು ತಾವ ವಂಚಿಸಲ್ಪಟ್ಟೆವೆಂದೂ, ನಡುನೀರಿನಲ್ಲಿ ಕೈಬಿಡಲ್ಪಟ್ಟೆವೆಂದೂ ಭಾವಿಸಿದರು. ಈ ಅಭಿಪ್ರಾಯಕ್ಕೆ ಕಾರಣ ಏನೆಂದರೆ ತಮ್ಮ ದೀರ್ಘ ಕಾಲದ ಕಾಂಗ್ರೆಸ್‌ನೊಳಗಿನ ಸಹಚರ್ಯದಲ್ಲಿ ಸಮಾಜವಾದಿಗಳು ಒಂದು ಸಂಯೋಜಿತ ಘಟಕವಾಗಿ ರೂಪುಗೊಂಡಿರಲಿಲ್ಲ ಎಂಬುದು. ಕ್ರಮಬದ್ಧ

2AF

ಸಂಘಟನೆ ಇಲ್ಲದೇ ಮತ್ತು ಯಾವ ಕಾರ್ಯದಲ್ಲೂ ತೊಡಗುವುದಕ್ಕೂ ಬೇಕಾದ ದೃಢತೆ ಅಥವಾ ಸಮೂಹಬದ್ಧತೆ ಇಲ್ಲದೇ ಸಡಿಲವಾಗಿ ಬೆಳೆದ ಗುಂಪು ಅವರದ್ದಾಗಿತ್ತು. ಹೀಗಿದ್ದರೂ ಸ್ವಾತಂತ್ರ್ಯ ದೊರಕಿದ ಮೇಲೂ ಹೇಗೋ ೧೯೫೨ರ ಸಾರ್ವತ್ರಿಕ ಚುನಾವಣೆವರೆಗೆ ಒಟ್ಟಿಗೇ ಇದ್ದರು. ಚುನಾವಣೆಯಲ್ಲಿನ ಪೂರ್ಣ ಪರಾಭವ ಅವರಿಗೆ ಚೇತರಿಸಿಕೊಳ್ಳಲಾಗದ ಪೆಟ್ಟಾಯಿತು. ಅಲ್ಲಿಂದಾಚೆಗೆ ಸಮಾಜವಾದದ ಇತಿಹಾಸವು ಪಕ್ಷಾಂತರಗಳ, ಒಡಕುಗಳ, ತೇಪೆ ಕೆಲಸಗಳ, ಪುನರೈಕ್ಯತೆಗಳ, ಅಸ್ಥಿರ ಮೈತ್ರಿಕೂಟಗಳ ಮತ್ತು ಸ್ವವಿನಾಶಕಾರಿ ಮಾರ್ಗಗಳ ಇತಿಹಾಸವಾಯಿತು.

ಗಮನಾರ್ಹ ಸಂಗತಿ ಎಂದರೆ, ಲೋಹಿಯಾ ತಮ್ಮ ವಿಚಾರಧಾರೆಯ ಪ್ರತಿಪಾದನೆಗೆ ತೊಡಗಿದ್ದು, ಸಮಾಜವಾದೀ ವಿಘಟನೆಯ ಈ ನಿರ್ಣಾಯಕ ಸಂದರ್ಭದಲ್ಲೇ; ತಮ್ಮ ಸೂಕ್ಷ್ಮಗ್ರಾಹಿತ್ವ ಹಾಗೂ ಉತ್ಸಾಹಪೂರ್ಣತೆಯಿಂದ ಭಾರತದ ಸಾಮಾಜಿಕ ಅನಿಷ್ಟಗಳ ಬಗ್ಗೆ ಮತ್ತು ಅವುಗಳ ಚಿಕಿತ್ಸಾ ಸಾಧ್ಯತೆಗಳ ಬಗ್ಗೆ ತಮ್ಮ ನಿಶ್ಚಿತ ವಿಚಾರಧಾರೆಯನ್ನು ಹರಿಸಿದರು. ಬೇರೆಯವರ ಹಾಗೆ ಅವರು, ಭವ್ಯ ಭಾರತದ ರಮ್ಯಭೂತದ ಬಗ್ಗೆ ಮಾತನಾಡುವುದರಲ್ಲಿ ತೊಡಗಲಿಲ್ಲ. ಜಾಗತಿಕ ಇತಿಹಾಸದಲ್ಲಿ ಪುನರಾವೃತ್ತಿಗೊಂಡ ಗುಲಾಮಗಿರಿಗೆ ಪ್ರಶಸ್ತಿ ಕೊಡುವುದಾದರೆ, ಅದು ಭಾರತೀಯನಿಗೇ ಸಲ್ಲಬೇಕು ಅನ್ನುವುದು ಅವರ ಹೇಳಿಕೆ. ವರ್ಣ-ವ್ಯವಸ್ಥೆಯಿಂದ ಪೋಷಿಸಲ್ಪಟ್ಟ ಭಯಂಕರ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳನ್ನು ಅವರು ಭಾರತದಲ್ಲಿ ಕಂಡರು. ನಿರಂತರವಾಗಿ ಜಾತಿ ವ್ಯವಸ್ಥೆಯ ವಿಷವರ್ತುಲದ ಬಗ್ಗೆ ಮಾತನಾಡುತ್ತಾ ಅವರು ಅದರ ವಿರುದ್ಧ ತಮ್ಮ ಪ್ರತಿರೋಧವನ್ನು ಸಮರ್ಥಿಸಿಕೊಳ್ಳುತ್ತಾ "ಜಾತಿಯ ಬಗ್ಗೆ ಮಾತನಾಡುವುದನ್ನು ನಿಲ್ಲಿಸುವುದೆಂದರೆ, ಭಾರತೀಯ ಸಂದರ್ಭದ ಒಂದೇ ಒಂದು ಪ್ರಮುಖ ವಾಸ್ತವಿಕತೆ ಬಗ್ಗೆ ಕಣ್ಣು ಮುಚ್ಚಿಕೊಂಡಂತೆ; ಜಾತಿಯನ್ನು ದೂರೀಕರಿಸುವುದರಿಂದ ಯಾರೂ ಅದನ್ನು ನಿರ್ಮೂಲ ಮಾಡುವುದು ಸಾಧ್ಯವಿಲ್ಲ" ಎಂದು ನೇರವಾಗಿ ಘೋಷಿಸಿದರು. ಎಲ್ಲಾ ಪ್ರಾಮಾಣಿಕ ಸಮಾಜವಾದಿಗಳಂತೆ, ಸಮಾನತೆಯ ಬಗ್ಗೆ ಅವರ ಕಳಕಳಿ ಗಾಢವಾದದ್ದು ಮತ್ತು ಅಸಮಾನತೆಯ ಬಗ್ಗೆ ಅವರ ತಿಳುವಳಿಕೆ ತೀಕ್ಷ್ಣ ಆದದ್ದು. ಉದಾಹರಣೆಗೆ ಈ ದೇಶದಲ್ಲಿ ಮಹಿಳೆ ಅನುಭವಿಸುವ ಅಸಮಾನತೆಯನ್ನು ದೃಷ್ಟಾಂತಪೂರ್ಣ ವಿಶ್ಲೇಷಣೆಯ ಮೂಲಕ ಕಾಣಿಸಿದ ಮೊದಲಿಗರಲ್ಲಿ ಇವರೂ ಒಬ್ಬರು.

ಲೋಹಿಯಾ ತಾವು ಕಾರ್ಯಸಾಧ್ಯ ಸಮಾಜವಾದೀ ಪರಿಹಾರಗಳಲ್ಲಿ ಕಳಕಳಿ ಹೊಂದಿದವರು ಅನ್ನುವುದನ್ನು ತೋರಿಸಿಕೊಟ್ಟರು. ಅವರು ನಮ್ಮ ಗಮನವನ್ನು ಆರ್ಥಿಕ ಮತ್ತು ಸಾಮಾಜಿಕ ಅಧಿಕಾರಗಳ ವಿಕೇಂದ್ರೀಕರಣದ ಅಗತ್ಯತೆ ಮತ್ತು ಸಾಧ್ಯತೆಯ ಕಡೆ ತಿರುಗಿಸಿದರು. ಅವರ ಚತುರ್‌ಸ್ತಂಭ ರಾಜ್ಯ ವ್ಯವಸ್ಥೆಯ ಕಲ್ಪನೆ, ಸಮಾನತಾ ಸಮಾಜವೊಂದರ ನಿರ್ಮಾಣದ ಒಂದು ಕಾರ್ಯಸಾಧ್ಯ ನೀಲ ನಕ್ಷೆ. ಅವರು ವರಮಾನ ಮತ್ತು ಭೂಒಡೆತನದ ಮೇಲೆ ಗರಿಷ್ಠಮಿತಿ ಹೇರಬೇಕೆಂದು

ಬಲವಾಗಿ ಪ್ರತಿಪಾದಿಸಿದ್ದರು. ಅಂಥದೊಂದು ಗರಿಷ್ಠಮಿತಿಯನ್ನು ಕಾರ್ಯರೂಪಕ್ಕಿಳಿಸಬೇಕಾದರೆ ಬೆಲೆಗಳ ಏರಿಳಿತಗಳನ್ನು ತಡೆಗಟ್ಟುವಂತ ಒಂದು ದರ ಸಂಹಿತೆಯನ್ನು ರೂಪಿಸುವುದರ ಅಗತ್ಯವನ್ನು ಅವರು ಸೂಚಿಸಿದರು.

ಸಣ್ಣ ಘಟಕ ಯಂತ್ರದ ಬಳಕೆಗಾಗಿ ಪ್ರತಿಪಾದನೆ

ಭಾರಿ ಕೈಗಾರಿಕೆಗಳ ಮೇಲಿನ ಸರ್ವಾಲಂಬನ ಕುರಿತು ಅವರು ಮಾಡಿರುವ ಟೀಕೆ ಎಷ್ಟು ಸರಿ ಅನ್ನುವುದು ಈಗ ನಮಗೆ ಅರಿವಾಗುತ್ತಿದೆ. ಖಾಸಗೀ ಆಸ್ತಿ ಕುರಿತು ಅವರು, ಅದು ಕೂಲಿ ಆಳುಗಳಿಂದ ದುಡಿಸಿಕೊಳ್ಳದಂಥ ಆಸ್ತಿಗಷ್ಟೇ ಸೀಮಿತವಾಗಿರಬೇಕೆಂದು ಅಭಿಪ್ರಾಯಪಟ್ಟರು. ಅವರು ಹಾಗೇನೂ ಖಾಸಗೀ ಆಸ್ತಿಗೆ ವಿರುದ್ಧವಾಗಿರಲಿಲ್ಲ. ಆದರೆ ಶೋಷಣೆಯಲ್ಲಿ ಪರಿಣಮಿಸುವ ಯಾವುದೇ ತರದ ಒಡೆತನಕ್ಕೆ ವಿರುದ್ಧವಿದ್ದರು. ಅವರು ಪ್ರತಿಪಾದಿಸಿದ ಮತ್ತು ಸೂಚಿಸಿದ ಇಡೀ ವಿಚಾರಗಳಿಂದ ನಾವು ನ್ಯಾಯಯುತ ಸಮಾಜದ ಕಲ್ಪನೆ ಮಾಡಿಕೊಳ್ಳಲು ಸಾಧ್ಯ.

ಆದರೆ ಲೋಹಿಯಾ ಕ್ರಿಯಾಶೀಲ ವ್ಯಕ್ತಿಯಾಗಿ, ತಮ್ಮ ಚಟುವಟಿಕೆಗಳನ್ನು ಸಮನ್ವಯಗೊಳಿಸಲಾಗದವರಂತೆ ಕಂಡರು. ಅವರ ಆದರ್ಶಗಳು ವಾಸ್ತವರೂಪ ತಾಳದೆ ಹಾಗೇ ಉಳಿದವು. ೧೯೫೨ರ ಚುನಾವಣೆಯ ಸೋಲು ಬೇರೆಲ್ಲಾ ಸಮಾಜವಾದಿಗಳಿಗಿಂತ ಲೋಹಿಯಾವರಿಗೆ ಭಯಂಕರ ಪೆಟ್ಟು ಕೊಟ್ಟಿತೆಂದು ನನಗನಿಸುತ್ತದೆ. ಇದು ಸಮಾಜವಾದೀ ಭಾರತದ ಅವರ ಕನಸನ್ನೇ ನುಚ್ಚು ನೂರುಮಾಡಿ, ಅವರನ್ನು ದೃತಿಗೆಡಿಸಿತೆಂದು ಕಾಣುತ್ತದೆ. ಸೋಲು ಅವರ ವಿಷಯದಲ್ಲಿ, ದರ್ಶನ ಮತ್ತು ಕ್ರಿಯೆಗಳ ಮಧ್ಯದ ಅಂತರ್‌ಬಾಂಧವ್ಯವನ್ನು ಕಡಿದು ಹಾಕಿತು. ಅವರು, ತಮ್ಮ ಸಮಾಜವಾದೀ ದರ್ಶನದ ಕೇಂದ್ರಬಿಂದುವಿನಿಂದ ಹುಟ್ಟದ ಚಟುವಟಿಕೆಗಳಿಗೆ ತೊಡಗಿದರು. ಅವರ ರಾಜಕಾರಣವು ವಿಲಕ್ಷಣ, ಯದ್ವಾ ತದ್ವಾ ಹಾಗೂ ನಿಷ್ಕಾರಣವಾಗಿ ಹೋಯಿತು. ನೆಹರೂ ದ್ವೇಷ, ಕಾಂಗ್ರೆಸ್ಸೇತರವಾದ ಮತ್ತು ಇಂಗ್ಲಿಷ್ ವಿರೋಧ ಅವರ ಗೀಳುಗಳಾಗಿ ಬಿಟ್ಟವು. ಹೀಗೆ ಲೋಹಿಯಾ ಅವರ ಮಾನವತಾ ದರ್ಶನ ಅವರಿಂದಲೇ ವಿಡಂಬನೆಗೊಂಡು, ನಿಕೃಷ್ಟವಾಗಿಬಿಟ್ಟಿತು.

ಲೋಹಿಯಾರಲ್ಲಿ ನಾವು ಕಾಣುವ, ದರ್ಶನ ಮತ್ತು ಕ್ರಿಯೆ ನಡುವಿನ ಹಾಗು ಪ್ರತಿಪಾದನೆ ಮತ್ತು ಕಾರ್ಯಾಚರಣೆ ನಡುವಿನ ಬಿರುಕು, ಸಾಮಾನ್ಯವಾಗಿ ಭಾರತೀಯ ಸಮಾಜವಾದಿಯ, ಹೆಚ್ಚು ಕಡಿಮೆ ಒಂದು ನ್ಯೂನತೆಯಾಗಿ ಬಿಟ್ಟಿದೆ. ಇಂದು ಸಮಾಜವಾದಿಯನ್ನು ಊಹೆಗೆ ನಿಲುಕದ ರಾಜಕಾರಣಿಯನ್ನಾಗಿಸಿರುವುದು ಇದೇ. ಆತ ಯಾವ ರಾಜಕೀಯ ಪಕ್ಷದ ಜೊತೆ ಮೈತ್ರಿ ಬೆಳೆಸುತ್ತಾನೆ, ಯಾವ ರಾಜಕೀಯ ಕಾರ್ಯಾಚರಣೆಯನ್ನು ಸೂಚಿಸಿ ಅದಕ್ಕೆ ಬದ್ಧನಾಗಿರುತ್ತಾನೆ ಎಂಬುದರ ಬಗ್ಗೆ ಖಂಡಿತವಾದ ಒಂದು ಮಾತು ಹೇಳಲಾಗುವುದಿಲ್ಲ. ಅದು ಅವನನ್ನು ಹಾಸ್ಯಾಸ್ಪದಗೊಳಿಸಿ, ಪರಿಣಾಮಹೀನನ್ನಾಗಿ ಮಾಡುತ್ತದೆ.

ನಾವು ಲೋಹಿಯಾ ಅವರನ್ನು ಜ್ಞಾಪಿಸಿಕೊಂಡಾಗ, ತನ್ನ ಆಶಯಗಳು ನುಚ್ಚು ನೂರಾದ್ದರಿಂದ ತನ್ನ ಕೇಂದ್ರ ಕಳೆದುಕೊಂಡ ದಾರ್ಶನಿಕನೊಬ್ಬನ ಚಿತ್ರ ನಮ್ಮ ಮುಂದೆ ಮೂಡುತ್ತದೆ. ಅವರೊಂದು ವರ್ಣಮಯ ವ್ಯಕ್ತಿತ್ವವಾಗಿದ್ದು, ನೋವು-ತಮಾಷಾಗಳ ಮಿಶ್ರಫಲವೇನೋ ಅನ್ನಿಸಿಬಿಡುತ್ತದೆ. ಅವರ ಅನುಯಾಯಿಗಳ ಅವರ ದರ್ಶನಗಳನ್ನು ಪುನಶ್ಚೇತನಗೊಳಿಸುವ ಬದಲು, ಅವರ ಕೊನೆಯ ದಿನಗಳ ಚಂಚಲತೆಯನ್ನೇ ಪುನರಭಿನಯಿಸುತ್ತಿರುವುದು ಭಾರತದಲ್ಲಿನ ಸಮಾಜವಾದದ ದುರಂತವಾಗಿದೆ.

(ಕನ್ನಡಕ್ಕೆ: ಲಿಂಗದೇವರು ಹಳೆಮನೆ)

■

"ನನ್ನನ್ನು ಶಪಿಸುವವರು ಇದ್ದಾರೆ. ಹಣ ಮತ್ತ ಆಸ್ತಿಗೆ ಸಂಬಂಧಪಟ್ಟಂತೆ ಕಿಂಚಿತ್ತೂ ಚಾರಿತ್ರ್ಯ ಉಳಿಸಿಕೊಳ್ಳಲಾಗದವರು ನನ್ನ ಮೇಲೆ ಪದೇ ಪದೇ ಚಾರಿತ್ರ್ಯ ಹನನದ ಆರೋಪ ಹೊರಿಸುತ್ತಾರೆ....ಹಸಿವು ಬಡತನದಂತಹ ಸಂಗತಿಗಳನ್ನು ಬಿಟ್ಟು ಪ್ರಧಾನಮಂತ್ರಿ ಮಿಂಕ್ ಕೋಟ್ ಹಾಗೂ ವಜ್ರದ ನೆಕಲೆಸ್‌ಗಳನ್ನು ಉಡುಗೊರೆಯಾಗಿ ಪಡೆದ ಸಂಗತಿಗಳ ಬಗ್ಗೆ ಚರ್ಚೆ ಮಾಡಿ ಕಾಲಹರಣ ಮಾಡುತ್ತೇನೆಂದು ನನ್ನನ್ನು ಟೀಕಿಸುವವರೂ ಇದ್ದಾರೆ. ಆದರೆ ಈ ಘನವಂತರಿಗೆ, ಇವೆರಡೂ ಪರಸ್ಪರ ಸಂಬಂಧ ಪಡೆದಂತಹವು ಎಂಬುದು ಗೊತ್ತಿದ್ದಂತಿಲ್ಲ. ಒಂದು ಸರ್ಕಾರ ಅಥವಾ ಒಂದು ದೇಶ ಆಸ್ತಿ ಹಾಗೂ ಅಸತ್ಯವನ್ನು ಗುಡ್ಡೆ ಹಾಕಿಕೊಳ್ಳುವ ಹಾದಿಗೆ ಬಿದ್ದಿತೆಂದರೆ ಅದು ಹಸಿವನ್ನು ತೊಲಗಿಸಲಾರದು. ಹಸಿವು, ಸತ್ಯವನ್ನು ಗೌರವದಿಂದ ಕಾಣುವರಿಂದ ಮತ್ತು ಆಸ್ತಿಯನ್ನು ಹೆಚ್ಚಿಸಿಕೊಳ್ಳುವ ಒಳಗಿನ ಆಸೆಯನ್ನು ತ್ಯಜಿಸುವವರಿಂದ ಮಾತ್ರ ನಿರ್ಮೂಲವಾಗಬಲ್ಲುದು"

-ಲೋಹಿಯಾ (ಲೋಕಸಭೆಯಲ್ಲಿ, ೧೯೬೭)

ಲೋಹಿಯಾ: ವಿಚಾರಶೀಲನೊಬ್ಬನ ಏಕಾಕಿತನ

■ ಭೋಲಾ ಚಟರ್ಜಿ

ತಮ್ಮ ಇಡೀ ಜೀವಮಾನದಲ್ಲಿ ಅನೈತಿಕವಾದುದಾದರೂ, ಕೇವಲ ಒಂದೇ ಒಂದು ಮಗುವಿಗೆ ಜನ್ಮವಿತ್ತಾಕೆ ಮತ್ತು ನೈತಿಕವಾಗಿಯೇ ಅರ್ಧ ಡಜನ್‌ಗೂ ಮೀರಿ ಕೆಲಸಕ್ಕೆ ಬಾರದ ಚಿಳ್ಳೆಗಳನ್ನು ಪಡೆದಾಕೆ– ಈ ಇಬ್ಬರಲ್ಲಿ ಯಾರು ಹೆಚ್ಚು ಘನವಂತರು ಹಾಗೂ ಹೆಚ್ಚು ನೀತಿವಂತರು? ಇದೊಂದು ಅಶ್ಲೀಲವಾದ ಪ್ರಶ್ನೆ; ಅದರಲ್ಲೂ ದೇಶದ ಆಧಾರಸ್ತಂಭಗಳೆನಿಸಿದವರ ಸಮಕ್ಷಮದಲ್ಲಿ ಕೇಳಬಾರದ ಪ್ರಶ್ನೆ ಎಂದೆನಿಸುತ್ತದೆಯಲ್ಲವೆ?

ಈ ಪ್ರಶ್ನೆಯನ್ನು ಕೇಳಲಾಯಿತಷ್ಟೇ ಅಲ್ಲ, ಅದು ಉತ್ತರವನ್ನೂ ಪಡೆದುಕೊಂಡಿತು. ಡಾ. ರಾಮಮನೋಹರ ಲೋಹಿಯಾ ಅವರಿಂದ. ಉತ್ತರವನ್ನು ಸೌಮ್ಯೋಕ್ತಿಯಿಂದ ಮುಚ್ಚುಮರೆ ಮಾಡದೆ, ಬರವಣಿಗೆ ರೂಪದಲ್ಲೇ ಅವರು ೧೯೬೭ರಲ್ಲಿ ಅಕಾಲಿಕ ಮರಣಕ್ಕೆ ತುತ್ತಾಗುವ ಮೂರು ವರ್ಷಗಳಿಗೆ ಮೊದಲು– "ಸಂದೇಹ ಬೇಡ, ಒಂದೇ ಒಂದು ಅನೈತಿಕ ಮಗು ಅರ್ಧ ಡಜನ್ ನೈತಿಕ ಚಿಳ್ಳೆಗಳಿಗಿಂತ ಸಾವಿರ ಪಾಲು ಮೇಲು" ಎಂದು ಉತ್ತರಿಸಿದ್ದರು. ಇಂಡಿಯಾ ಇವೊತ್ತು ವಿಕೃತಗೊಂಡಿದೆ; ಲೈಂಗಿಕ ಶುದ್ಧತೆಯ ಬಗ್ಗೆ ಏನೆಲ್ಲಾ ಹೇಳಿಕೊಂಡರೂ ಮದುವೆ ಮತ್ತು ಕಾಮದ ಬಗ್ಗೆ ಜನರ ಭಾವನೆಗಳಲ್ಲಿ ಇರುವ ಧೋರಣೆಗಳು ಹೆಚ್ಚು ಕಡಿಮೆ ಕೊಳಕಾಗಿಯೇ ಇವೆ ಎಂಬುದು ಅವರ ನಿಶ್ಚಿತ ಅಭಿಪ್ರಾಯವಾಗಿತ್ತು. ಈ ಮಾತನ್ನಾಡಿದ ಈ ಭಾರತೀಯ ಸಾಮಾನ್ಯ ಮನುಷ್ಯನಲ್ಲ. ಆತ ಜಾಗೃತಗೊಂಡ ಮೂರನೇ ಜಗತ್ತಿನ ಬುದ್ಧಿಜೀವಿಗಳೆಂದು ಕರೆಯಲಾಗುವ ಜನರಂತೆ ಒಬ್ಬ ಜಾಣ ವಿಶ್ವಾಭಿರಾಮಿ (ಕಾಸ್ಮೋಪೊಲೈಟ್) ಆಗಿರಲಿಲ್ಲ. ತಮ್ಮ ನಿಶ್ಚಿತ ಅಭಿಪ್ರಾಯಗಳಿಗೆ ಸಮಾನವಾದ ದಿಟ್ಟತನದ ಅವರಲ್ಲಿತ್ತು.

ಗರ್ಭಧಾರಣೆಯ ಅಪಾಯ ತೆಗೆದುಕೊಳ್ಳಲು ಇಚ್ಛಿಸದ ಪ್ರತಿಯೊಂದು ಗಂಡು ಹೆಣ್ಣಿಗೂ-ಅವರು ಅವಿವಾಹಿತರಾಗೇ ಇರಲಿ ಬೇಕಾದರೆ-ಸಂತಾನ ಯೋಜನೆಯ ಶಸ್ತ್ರಚಿಕಿತ್ಸೆ ಅಥವಾ ಕಡೆಯ ಪಕ್ಷ ಜನನ ನಿಯಂತ್ರಣದ ಸೌಲಭ್ಯಗಳು ದೊರಕುವಂತಿರಬೇಕು ಎಂದು ಅವರು ೧೯೫೩ರಷ್ಟು ಮೊದಲಿಗೇ ಸಲಹೆ ಮಾಡಿದ್ದುಂಟು.

ಜೀವನವನ್ನು ಕುರಿತ ಅವರ ಚೇತೋಹಾರಿಯಾದ ನಾಗರಿಕ ಧೋರಣೆಯ ಒಂದು ನಿದರ್ಶನವೆಂದರೆ ಅಧ್ಯಾತ್ಮ ಮತ್ತು ನೈತಿಕತೆಗಳು ಇಡಿಯಾಗಿ ಪರಸ್ಪರ ವಿಭಿನ್ನವಾದ ಪರಿಕಲ್ಪನೆಗಳಾಗಿದ್ದು ಅವನ್ನು ಬೆರೆಸಬಾರದೆಂಬ ಅವರ ವಾದ, ಅಧ್ಯಾತ್ಮಿಕತೆಯು ನಿರಪೇಕ್ಷ(Absoulute)ವಾದುದೂ ಮತ್ತು ನೈತಿಕತೆ ಸಾಪೇಕ್ಷವಾದುದೂ ಆಗಿದ್ದು, ಪ್ರತಿಯೊಂದು ಯುಗವೂ ಹಾಗೂ ಪ್ರತಿ ಮನುಷ್ಯನೂ ತನ್ನದೇ ಆದ ನಿರ್ದಿಷ್ಟ ನೈತಿಕತೆಯನ್ನು ಕಂಡುಕೊಳ್ಳಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಸಾರ್ವಜನಿಕವಾಗಿ ಅಸಹ್ಯಕರ ವಿಷಯ ಲಂಪಟತೆ ಎಂದೆಲ್ಲಾ ಟೀಕಿಸುತ್ತಾ, ಗುಟ್ಟಿನಲ್ಲಿ ಮೈಬಿಸಿ ಮಾಡಿಕೊಳ್ಳಲೆಣಿಸುವ ಶ್ರೀಮದ್ಗಾಂಭೀರ್ಯದ ಮೂಸಂಡಿ ಅವರಾಗಿರಲಿಲ್ಲ. "ನೈತಿಕ ಬ್ರಹ್ಮಚರ್ಯ ಸಾಮಾನ್ಯವಾಗಿ ಒಂದು ಬಂಧೀಖಾನೆ. ಕೌಮಾರ್ಯತೆಯ ಗೀಳಿನ ಸಂಕೋಲೆಗಳಿಂದ ಬಂಧಿತರಾಗಿಬಿಟ್ಟು, ವಿಮೋಚಕರೊಬ್ಬರಿಗಾಗಿ ತವಕದಿಂದ ಕಾಯುತ್ತಿರುವಂತಹ ಎಷ್ಟೋ ಬಂಧಿ ಹೃದಯಗಳನ್ನು ಯಾರು ನೋಡಿಲ್ಲ!" ಎಂಬ ಮಾತನ್ನು ಆಡುವಷ್ಟು ಅವರು ಸ್ಪಂದನಶೀಲರಾಗಿದ್ದರು. "ಭಾರತೀಯ ಜನತೆ ಈ ಭೂಮಿಯ ಮೇಲಿನ ಅತ್ಯಂತ ಹೆಚ್ಚು ವಸ್ಯನಿಗಳು" ಎಂಬ ಬಗ್ಗೆ ಅವರು ಕ್ಷಣ ಕೂಡಾ ಸಂದೇಹಿಸಲಿಲ್ಲ. ಬೇರೆಲ್ಲಾ ವಿಚಾರಗಳೊಂದಿಗೇ "ಜಾತಿ ಮತ್ತು ಹೆಣ್ಣು ಈ ಎರಡು ತಾರತಮ್ಯಗಳು, ಮೂಲಭೂತವಾಗಿ ಆತ್ಮದ ಈ ಅಧೋಗತಿಗೆ ಕಾರಣವಾದವುಗಳು. ಈ ಸಂಕುಚಿತತೆಗಳು ಬದುಕಿನ ಎಲ್ಲ ಸಾಹಸಶೀಲತೆ ಮತ್ತು ಆನಂದಗಳನ್ನು ಕೊಂದುಬಿಡುವಷ್ಟು ಶಕ್ತಿಶಾಲಿಯಾದವುಗಳವು" ಎಂಬುದನ್ನು ಅವರು ಮನಗಂಡಿದ್ದರು.

ಹಾಗೆಂದ ಮಾತ್ರಕ್ಕೆ, ಮುಷ್ಟಿ ಮೈಥುನ ಪವಿತ್ರ ವಿವಾಹದ ಮೂಲಕ ಒಂದುಗೂಡದ ಗಂಡು ಹೆಣ್ಣಿನ ಸಂಬಂಧಕ್ಕಿಂತ ನೈತಿಕವಾಗಿ ಸಮರ್ಥನೀಯವಾದದ್ದು ಎನ್ನುವ ವಿಕ್ಟೋರಿಯನ್ ಪುರೋಹಿತ ಅವರಾಗಿರಲಿಲ್ಲ. ಅವರು ಅವಿವಾಹಿತರಾಗಿದ್ದರು ಎಂಬುದನ್ನು ಇಲ್ಲಿ ಮರೆಯಬಾರದು. ಜೀವನದ ಎಲ್ಲ ಒಳ್ಳೆಯ ಮತ್ತು ಸಭ್ಯ ವಸ್ತುಗಳನ್ನು ಅದಕ್ಕಿಂತ ಬೆಚ್ಚಗಿನ ಮಾನವ ಸಹವಾಸವನ್ನು ಅವರು ಪ್ರೀತಿಸುತ್ತಿದ್ದರು. ಹೆಣ್ಣಿನ ಇರವನ್ನೇ ನಿರಾಕರಣೆ ಮಾಡುವಂತಹ ನಿಷ್ಠುರ ಹಾಗು ರಸಹೀನ ವ್ಯಕ್ತಿ ಅವರಾಗಿರಲಿಲ್ಲ. ಅವರು ಹೊರಗೆ ಹೋದಾಗ ಬ್ಯಾನರ್ಜಿಗಳು, ಕಲಬೋವಾಗಳು, ಮಿತ್ರಾಗಳು ಅವರ ಪಾಲಿಗೆ ನಾವು ಹಗಲು ರಾತ್ರಿಯೆನ್ನದೆ ಎದುರಾಗಬೇಕಾದ ಜನಜಂಗುಳಿಯ ಒಂದು ಭಾಗ ಮಾತ್ರವಾಗಿರುತ್ತಿರಲಿಲ್ಲ.

ಸೂಂಟೆಜ್‌ನಿಂದ ಪೂರ್ವಕ್ಕೆ ಬಾಳಿದ-ಅರಿಸ್ಟಾಟಲನ ಕಾವ್ಯ ಮೀಮಾಂಸೆಯಾಗಿರಲಿ, ಮಾರ್ಕ್ಸ್‌ನ ಬಂಡವಾಳಶಾಹಿ ವಿಶ್ಲೇಷಣೆಯೇ ಆಗಿರಲಿ, ಭವಿಷ್ಯವಾದವಾಗಿರಲಿ, ಇಲ್ಲವೇ ಗಾಂಧೀಜಿಯ ಅಹಿಂಸೆ ಮತ್ತು ಸತ್ಯಾಗ್ರಹದ ಪರಿಕಲ್ಪನೆಗಳೇ ಆಗಿರಲಿ ಅಥವಾ ಉಪನಿಷತ್ತುಗಳ ಸಾರವೇ ಆಗಿರಲಿ, ಇವೆಲ್ಲವುಗಳ ಬಗ್ಗೆ ಕೇಳುವವರನ್ನು ಮೂಕವಿಸ್ಮಿತರನ್ನಾಗಿ ಮಾಡುವಷ್ಟು ಆಳವಾದ ಚರ್ಚೆ ನಡೆಸಬಲ್ಲಂತಹ, ಜ್ಞಾನಕೋಶ ಸಮಾನವಾದದ್ದೆಂದು ಹೇಳಬಹುದಾದ ಬಹು ಆಯಾಮಗಳ ವ್ಯಕ್ತಿತ್ವದ- ಕೊನೆಯ ಮೇಧಾವಿ ಅವರಾಗಿದ್ದರು. ಅವರ ಸೌಂದರ್ಯ ಪ್ರಜ್ಞೆಯ ಹಾಗೂ ಸೌಂದರ್ಯದ ಒಂದು ವಿಶಿಷ್ಟ ಸೆಳಕನ್ನು ಹಿಡಿಯಬಲ್ಲ ಅವರ ಸಾಮರ್ಥ್ಯವನ್ನು "ಚರ್ಮದ ಬಣ್ಣ ಸೌಂದರ್ಯ ಅಥವಾ ಇನ್ನಾವುದೇ ಹಿರಿಮೆಗೆ ಅಳತೆಗೋಲಲ್ಲ... ಭಾರತೀಯ ಪುರಾಣಗಳ ಅತಿಶ್ರೇಷ್ಠ ಸ್ತ್ರೀಯರು ಕಪ್ಪು ಬಣ್ಣದವರಾಗಿದ್ದರು. ಕೃಷ್ಣೆ ಎಂದು ಕರೆಯಲಾಗುತ್ತಿದ್ದ ದ್ರೌಪದಿಯು ಐದು ಗಂಡಂದಿರ ಜೊತೆಗಿನ ಅವಳ ಸಂಬಂಧ ಹಾಗೂ ಜೊತೆಗೆ ಇನ್ನೊಬ್ಬರು ಅಥವಾ ಇಬ್ಬರೊಂದಿಗೆ ಹೊಂದಿದ್ದ ಅಧ್ಯಾತ್ಮಿಕ (Piatonic) ಪ್ರೇಮ ವ್ಯವಹಾರವನ್ನು ಅರ್ಥ ಮಾಡಿಕೊಳ್ಳಲಾಗದ ಇವೊತ್ತಿನ ಪುರುಷ ಪೀಳಿಗೆಯ ಪೊಳ್ಳು ಪ್ರತಿಷ್ಠೆಯಿಂದಲೇ ಬಹುನಿರ್ಲಕ್ಷ್ಯಕ್ಕೆ ಒಳಗಾಗಿದ್ದಾಳೆ" ಎಂಬ ಮಾತು ಅಥವಾ "ಸೌಂದರ್ಯ ಮತ್ತು ಲೈಂಗಿಕತೆಗಳು ಪರಸ್ಪರ ನಂಟಂತನದವು....ಲೈಂಗಿಕತೆ ಇಲ್ಲದ ಪ್ರೇಮವಾಗಲೀ ಅಥವಾ ಪ್ರೇಮವಿಲ್ಲದ ಸೌಂದರ್ಯವಾಗಲೀ ಎಲ್ಲೂ ಕಂಡುಬರುವುದಿಲ್ಲ" ಎನ್ನುವಲ್ಲಿ ಅರಿಯಬಹುದು. ಇಂಡಿಯಾದ ರಾಜಕಾರಣದಲ್ಲಿನ ಬಿರುಗಾಳಿಯಂತಹ ಕ್ಷೋಭೆಕಾರನಾಗಿದ್ದ ರಾಮಮನೋಹರ, ಸಮಾಜವಾದೀ ಚಳುವಳಿಯ ಬಂಡುಕೋರ (Non conformist) ತತ್ವಜ್ಞಾನಿಯಾಗಿದ್ದರು.

ಲೋಹಿಯಾರವರ ಮೌಲ್ಯಗಳ ಶ್ರೇಣಿಯಲ್ಲಿ ಮಾನವನ ಘನತೆ ಮತ್ತು ಪ್ರಜಾಸತ್ತಾತ್ಮಕ ವಿಧಾನಗಳ ಬಗೆಗಿನ ಗೌರವ ಮುಂಚೂಣಿಯಲ್ಲಿ ನಿಲ್ಲುತ್ತವೆ. ಮಾನವನ ಚೈತನ್ಯವನ್ನು ಬುಡಮೇಲುಗೊಳಿಸುವುದರ, ಸಣ್ಣತನಗಳಿಗೆ ಎಳೆಯುವುದರ ಹಾಗೂ ಅನೈತಿಕಗೊಳಿಸುವುದರ ವಿರುದ್ಧ; ಸಮಾಜದ ಚಲನಶೀಲತೆಗೆ ಅಡ್ಡಿಯಾಗುವ ಗೋತ್ರ, ನಿಷಿದ್ಧತೆ, ವಿಧಿಕರ್ಮ, ಸಂಪ್ರದಾಯ ಮತ್ತು ಕಟ್ಟಳೆಗಳ ವಿರುದ್ಧ; ವ್ಯಕ್ತಿವ್ಯಕ್ತಿಗಳ ನಡುವೆ ಸ್ತರಗಳನ್ನು ಸೃಷ್ಟಿಸುವ ತಾರತಮ್ಯಗಳ ವಿರುದ್ಧ; ಹಕ್ಕಾಗಿಲ್ಲದ ಎಲ್ಲ ವಿಶೇಷ ಸೌಲಭ್ಯಗಳ ವಿರುದ್ಧ ಹಾಗೂ ಮನುಷ್ಯನನ್ನು ನಿರ್ದಿಷ್ಟವಾಗಿ ನೆಲೆಗೊಂಡ ವ್ಯವಸ್ಥೆಯೊಂದರೊಳಗೆ ಬಂಧಿಸಿಡಲು ಮುನ್ನುಗ್ಗುವ ಎಲ್ಲದರ ವಿರುದ್ಧ ಅವರ ಅವಿಶ್ರಾಂತ ಹೋರಾಟ ನಡೆದಿತ್ತು. ಬಂಡಾಯದ ಅತೀವ ಅಗತ್ಯವಿದ್ದಾಗ, ಆದರೆ ಅದು ಸಮಾಜದಲ್ಲಿ ಶಾಪಾರ್ಹವಾಗಿದ್ದಾಗ, ಅವರು ಒಬ್ಬ ಬಂಡುಕೋರರಾಗಿಯೇ ಉಳಿದರು. ಬದುಕಿನಲ್ಲಿ ಯಾವುದೇ ಏರುಪೇರನ್ನು ಸಹಿಸದ ಸಂಪ್ರದಾಯ ಮತ್ತು ಅಧಿಕಾರ ಜಡವಾದ ಸಮಾಜವೊಂದರಲ್ಲಿದ್ದ, ಅದರಲ್ಲೂ ಬಂಡುಕೋರ ಎಂದರೆ

ಅಧಿಕಾರ ಮತ್ತು ಸಮೃದ್ಧಿಗಳಿಂದ ದೂರವೇ ಉಳಿಯುವುದಕ್ಕೆ ಒಂದು ಅನಿವಾರ್ಯ ರಹದಾರಿ ಎಂಬರ್ಥ ಪ್ರಚಲಿತವಿರುವಾಗ–ರಾಜಕಾರಣದಲ್ಲಿ ಬಂಡುಕೋರರಾಗಿ ಉಳಿಯುವುದು ಅಪರೂಪದ ಧೈರ್ಯ ಮತ್ತು ಪ್ರಾಮಾಣಿಕತೆಗಳನ್ನು ಬೇಡುತ್ತದೆ. ಇವು ಲೋಹಿಯಾರಲ್ಲಿ ವಿಫುಲವಾಗಿದ್ದವು.

* * *

ಅವರ ಶಬ್ದಕೋಶದ ಅತ್ಯಂತ ಸಕ್ರಿಯ ಶಬ್ದ ಎಂದರೆ ಬದಲಾವಣೆ –ಸದಾ ಭೂತಕಾಲವನ್ನೇ ಆರಾಧಿಸುತ್ತಿರುವ ಈ ಸಮಾಜವನ್ನು ತಲ್ಲಣಗೊಳಿಸಿ ಭವಿಷ್ಯವನ್ನು ಆರಾಧಿಸುವಂತಹ ಚಲನಶೀಲ ಸಮಾಜವನ್ನಾಗಿ ರೂಪಾಂತರಿಸುವ ಬದಲಾವಣೆ. ಬದಲಾವಣೆಗಾಗಿ ಅವರ ಆಸೆ ಹೆಚ್ಚು ಕಡಿಮೆ ಒಂದು ವ್ಯಸನವೇ ಆಗಿಬಿಟ್ಟಿತ್ತು; ಆದರೆ ಅದೊಂದು ಭವ್ಯ ವ್ಯಸನವಾಗಿತ್ತು. "ಜಾತಿ ಭಾರತೀಯ ಜೀವನದಲ್ಲಿನ ಅತ್ಯಂತ ಭಾವಪರವಶ ಅಂಶ....ಸ್ಥಗಿತತೆಯ ಪರವಾದ ಹಾಗೂ ಬದಲಾವಣೆಗೆ ವಿರೋಧಿಯಾದ ಭಯಂಕರ ರೂಪದ ಶಕ್ತಿ; ಪ್ರಸ್ತುತದಲ್ಲಿನ ಎಲ್ಲ ಸಣ್ಣತನಗಳನ್ನೂ ಅಗೌರವವನ್ನೂ ಸುಳ್ಳುಗಳನ್ನೂ ಭದ್ರಪಡಿಸುವ ಒಂದು ಅಸ್ತ್ರ" ಎಂಬ ನಂಬಿಕೆಯಿಂದ ಲೋಹಿಯಾ, ಪ್ರಪಂಚದ ಯಾವುದೇ ವ್ಯಾವಹಾರಿಕ ರಾಜಕಾರಣಿ ನುಡಿಯಲು–ನಡೆಯಲು ಯಾವುದೇ ಕಾಲದಲ್ಲಾಗಲೀ ಹಿಂಜರಿಯುವ ರೀತಿಯಲ್ಲಿ ನುಡಿದು ನಡೆದರು. ಮೋಡಗಳಲ್ಲಿ ತಲೆ ಹುದುಗಿಸಿಕೊಂಡ ತಾರೆಗಣ್ಣುಗಳ ಭಾವಪರವಶ ವ್ಯಕ್ತಿ ಅವರೆಂದೂ ಆಗಿರಲಿಲ್ಲ. ಕರ್ತವ್ಯ ಸಂದರ್ಭ ಅಂತಹುದಾದರೆ, ಊಹೆಗೂ ನಿಲುಕದಂತಹ ಕಠಿಣ ವ್ಯಕ್ತಿ ಅವರಾಗಿಬಿಡುತ್ತಿದ್ದರು. ತತ್ವಗಳ ಪ್ರಶ್ನೆ ಬಂದಿತೆಂದರೆ, ಮೂರ್ತ ಮತ್ತು ಅಮೂರ್ತಗಳ ನಡುವಣ ಪರಸ್ಪರ ಸಂಬಂಧಕ್ಕೆ ಸಂಬಂಧಿಸಿದಂತೆ ಕಠಿಣ ಮತ್ತು ಕ್ಲಿಷ್ಟ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಅವರು ಕೆಲ ಬಾರಿ ಜನಪ್ರಿಯತೆಯನ್ನು ಹಾಗೂ ಸ್ನೇಹಿತರ ಮತ್ತು ವಿರೋಧಿಗಳ ದಾಳಿಯನ್ನು ಲೆಕ್ಕಿಸದೆ ಮುನ್ನುಗ್ಗುತ್ತಿದ್ದರು. ಐವತ್ತರ ದಶಕದಲ್ಲಿ ಸುದೀರ್ಘ ಲೆಕ್ಕಾಚಾರದ ಬಳಿಕ, ತಾವೇ ಮುಖ್ಯ ಶಿಲ್ಪಿಗಳಾಗಿ ರೂಪಿಸಿದ್ದ ಭಾರತೀಯ ಸಮಾಜವಾದೀ ಚಳುವಳಿಯನ್ನು ಇಬ್ಭಾಗವಾಗಿ ಒಡೆಯಲು ನಿರ್ಧರಿಸಿದರು. ಏಕೆಂದರೆ ತಾತ್ವಿಕ ರಾಜಕಾರಣ ಪಣಕ್ಕಿಡಲ್ಪಟ್ಟಾಗ ಯುಕ್ತಾಯುಕ್ತತೆ ಎಂಬುದರಲ್ಲಿ ಯಾವುದೇ ಅರ್ಥವನ್ನು ಅವರು ಕಾಣಲಿಲ್ಲ.

ಲೋಹಿಯಾ ಮೂರ್ತಿಭಂಜಕ (Iconocladt) ರೆಂಬುದು ವಿವಾದಕ್ಕೆಡೆಯಿಲ್ಲದ ಮಾತು. ಆದರೆ ಈ ಮೂರ್ತಿಭಂಜಕತೆ ಕೇವಲ ಪತ್ರಿಕೆಗಳ ಮುಖಪುಟಗಳ ಸಾಲುಗಳನ್ನು ತಲುಪುವ ಉದ್ದೇಶದಲ್ಲ. ವ್ಯಕ್ತಿಗಳು ಮತ್ತು ಸಂದರ್ಭಗಳ ಬಗೆಗಿನ ಅವರ ಈ ದೃಷ್ಟಿಕೋನದ ಹಿಂದಿದ್ದ ವಿವೇಕವನ್ನು ಸಂದೇಹಿಸಿದವರಿಗೆ ಲೋಹಿಯಾರವರ ಮಾತು ಇದಾಗಿರುತ್ತಿತ್ತು: "ಕೆಲವು ಜನರನ್ನಾದರೂ ರೊಚ್ಚಿಗೆಬ್ಬಿಸದೆ

ಮಹತ್ತರವಾದುದೆಂದೂ ಸಾಧ್ಯವಾಗಿಲ್ಲ. ಸಮಾಜದ ಮಹತ್ತರ ಬದಲಾವಣೆಗಳು, ಸಮಾಜದ ಒಂದು ಭಾಗವನ್ನು–ಅದು ಕೆಲವು ಬಾರಿ ಅದರ ದೊಡ್ಡ ಭಾಗವೇ ಆಗಿದ್ದರೂ ಇರಬಹುದು–ಸಂಪೂರ್ಣವಾಗಿ ರೊಚ್ಚಿಗೆಬ್ಬಿಸದೇ ಸಾಧ್ಯವಾಗುವುದಿಲ್ಲ". ಮೋಹನದಾದ ಕರಮಚಂದ ಗಾಂಧಿ ಮಾಡಿದ್ದೂ ಇದನ್ನೇ. "ಗಾಂಧೀಜಿಗೆ ತಮ್ಮ ಜನಪ್ರಿಯತೆಯನ್ನು ಹೇಗೆ ಪಣಕ್ಕೊಡ್ಡಬೇಕೆಂಬುದು ಗೊತ್ತಿತ್ತು. ಅವರ ಬಳಿ ಒಂದು ಕರು ಇತ್ತು–ಪೂಜ್ಯವೆಂದು ಹೇಳಲಾಗುತ್ತಿದ್ದ ಹಸುವೊಂದರದ್ದು ಅದು. ಅದನ್ನು ಒಂದು ವಿಶಿಷ್ಟ ಸಂದರ್ಭದಲ್ಲಿ ಚುಚ್ಚುಮದ್ದಿನ ಮೂಲಕ ಕೊಲ್ಲಿಸಿದರು. ಹೀಗೆ ಅವರು ಕೋತಿಯೊಂದನ್ನೂ ಗುಂಡಿಟ್ಟು ಕೊಲ್ಲಿಸಿದ್ದರು. ಹರಿಜನರನ್ನು ದೇವಸ್ಥಾನಗಳಿಗೆ ಕರೆದೊಯ್ದರು. ಅಂತರ್ಜಾತೀಯವಲ್ಲದ ವಿವಾಹಗಳಿಗೆ ಹೋಗಲು ನಿರಾಕರಿಸಿದರು. ವಿವಾಹ ವಿಚ್ಛೇದನವನ್ನು ಸಮ್ಮತಿಸಿದರು. ಹಿಂದೂಗಳು ದೇಶದ್ರೋಹ ಎಂದು ಹಾಹಾಕಾರ ಮಾಡುತ್ತಿದ್ದಾಗಲೇ ೫೫ ಕೋಟಿ ರೂ. ಅಥವಾ ಅದಕ್ಕೂ ಹೆಚ್ಚಿನದನ್ನು ಪಾಕಿಸ್ತಾನಕ್ಕೆ ಕೊಡಿಸಿದರು. ಆಸ್ತಿಯ ವಿರುದ್ಧ ನುಡಿದದ್ದೇ ಅಲ್ಲದೆ ನಡೆದರೂ ಕೂಡಾ. ಒಟ್ಟಾರೆ ಹೇಳುವುದಾದರೆ ದೇಶವನ್ನು ಸಜೀವಗೊಳಿಸುವ ಯಾವುದೇ ಅಂಶವನ್ನು–ಅದು ಅವರಿಗೆ ಅಪಾಯ ಮತ್ತು ಮಿಥ್ಯಾಪವಾದ ತರುವಂತಿದ್ದರೂ–ಯಾವುದೇ ಸಂದರ್ಭದಲ್ಲೂ ಅದನ್ನು ತಪ್ಪಿಸದೆ ನಿರ್ಭಿಡೆಯಿಂದ ನಿರ್ವಹಿಸಿದರು" ಎಂದು ಲೋಹಿಯಾ ವಿವರಿಸುತ್ತಾರೆ.

ಒಂದು ದಶಕದಷ್ಟು ಹಿಂದೆ ಅವರು ತಮ್ಮ ಬದುಕಿನ ಮಹತ್ವದ ದಿನಗಳನ್ನು ಪ್ರವೇಶಿಸುತ್ತಿದ್ದಾಗಲೇ ಹಠಾತ್ತನೇ ಕಣ್ಮರೆಯಾದ ಬಳಿಕ ಲೋಹಿಯಾ ಎಂಬುದು ಮರೆತುಹೋದ ಹೆಸರಾಗಿರುವುದು ಆಶ್ಚರ್ಯದ ಸಂಗತಿಯೇನಲ್ಲ. ಅವರ ಬಗ್ಗೆ ಕಾಳಜಿ ಮಾಡುವಷ್ಟು ವೇಳೆ–ಅವರ ನಿಷ್ಠಾವಂತ ಅನುಯಾಯಿಗಳ ಗುಂಪು ಹಾಗೂ ಅಲ್ಲೊಬ್ಬ ಇಲ್ಲೊಬ್ಬ ಏಕಾಕೀ ಅಭಿಮಾನಿಗಳನ್ನು ಬಿಟ್ಟರೆ–ಯಾರಿಗೂ ಇದ್ದಂತೆ ಕಾಣುವುದಿಲ್ಲ. ಬಹುಶಃ ಸಮಾಜ ತಾನಾಗಿಯೇ ಅವರನ್ನು ನೆನಪಿನ ಪಾಳಿಗೆ ಬಿದ್ದು ಹೋಗಲೆಂದು ಬಿಟ್ಟುಬಿಟ್ಟಿರಬಹುದು. ಏಕೆಂದರೆ, ಸಾಂಪ್ರದಾಯಿಕ ಪರಿಕಲ್ಪನೆಗಳು ಹಾಗೂ ಮೌಲ್ಯಗಳ ವಿರುದ್ಧವಾದ ಕ್ರಾಂತಿಕಾರೀ ಸ್ಫೂರ್ತಿಯೇ ಮೈಗೂಡಿದಂತಿದ್ದ ದೇಹದ ಅಂಗುಲಂಗುಲದಲ್ಲೂ ಬಂಡುಕೋರರಾಗಿದ್ದ ಲೋಹಿಯಾ ಸಮಾಜದ ಆತ್ಮಸಾಕ್ಷಿಗೆ ಸವಾಲು ಎಸೆಯುವವರಾಗಿದ್ದರು. ಈ ಬಗೆಯ ನಿರ್ಲಕ್ಷ್ಯದ ಬಗ್ಗೆ ಯಾರಾದರೂ ಆಕ್ಷೇಪವನ್ನಾದರೂ ಎತ್ತಬೇಕೇಕೆ? ಶಂಕರಾಚಾರ್ಯರು ಮನೆ ಮಾತಾಗಿ ರಾರಾಜಿಸುತ್ತಿರುವಾಗ ಬುದ್ಧನನ್ನು ಕೇವಲ ವರ್ಷಕ್ಕೊಮ್ಮೆ ಮಾತ್ರ ಉತ್ಸವರೂಪದಲ್ಲಷ್ಟೇ ನೆನಪು ಮಾಡಿಕೊಳ್ಳಲಾಗುತ್ತಿಲ್ಲವೆ? ಆದರೆ ತಡವಾಗಿಯಾದರೂ ಒಂದು ಗಮನಾರ್ಹ ಬದಲಾವಣೆ ತೋರುವಂತೆ ಕಂಡುಬರುತ್ತಿದೆ. ಸಂದರ್ಭಗಳು ಘಟನೆಗಳನ್ನು ಬದಲಿಸುತ್ತವೆಂಬುದನ್ನು ಸಮರ್ಥಿಸುವಂತೆ ಉಪೇಕ್ಷೆಗೊಳಗಾಗಿದ್ದ ಲೋಹಿಯಾರವರನ್ನು ಅರಿವಿಗೆ ತಂದುಕೊಳ್ಳುವಂತಾಗಿದೆ. ಲೋಹಿಯಾ ತಮ್ಮ ಶಿಲುಬೆಯನ್ನು ತಾನೇ

ಹೊತ್ತು ನಡೆದಿದ್ದಾಗ ಅವರನ್ನು ತಿರಸ್ಕಾರ ಜಿಗುಪ್ಸೆಗಳಿಂದ ದಿಟ್ಟಿಸುತ್ತಿದ್ದ ಕಳ್ಳ ಯಥಾಸ್ಥಿತಿವಾದಿಗಳೇ ಇಂದು ಅವರದ್ದೆಂದು ಹೇಳುವ ಅನೇಕ ಹಿರಿಮೆಗಳ ಬಗ್ಗೆ–ಕೊರತೆಗಳ ಮಾತೇ ಇಲ್ಲ–ಹಿಗ್ಗಾಮುಗ್ಗಾ ಎಳೆದು ಭಾವಗೀತಾತ್ಮಕವಾಗಿ ವಾಗ್ಸ್ಫುರಿ ಹರಿಸಿದ್ದಾರೆ. ಲೋಹಿಯಾ ಇವೊತ್ತೇನಾದರೂ ಬದುಕಿದ್ದಲ್ಲಿ, ತಮ್ಮ ಮೇಲೆ ಈಗ ಧಾರಾಳವಾಗಿ ಮಾಡಕಲಾಗುತ್ತಿರುವ ತುಂಬು ಹೊಗಳಿಕೆಯ ಪ್ರಹಾರದಿಂದ ಸ್ತಂಭಿತರಾಗುತ್ತಿದ್ದರೇನೋ.

ನಿಜ, ಜೀವಂತವಾಗಿದ್ದಾಗ ಅವರು ಅನೇಕ ಮಂದಿಯ ಹೃದಯ ಮತ್ತು ಮನಸ್ಸುಗಳನ್ನು ಆಳಿದರು. ಮುನ್ನಡೆ ತೀರಾ ಕಷ್ಟವಾಗಿದ್ದಾಗ ಜನರಿಗೆ ಕ್ರಿಯಾಶೀಲತೆಗಾಗಿ ಸ್ಫೂರ್ತಿ ತುಂಬಿದರು; ಸಂಪೂರ್ಣವೆಂದೇ ತೋರಿದ ವಿನಾಶದ ಸಂದರ್ಭದಲ್ಲಿ ಸಂಘಟನೆಯನ್ನು ಹುರಿದುಂಬಿಸಿದರು; ಕಾಲವನ್ನು ಮರಳಿ ಪಡೆಯಲು ಮತ್ತೆ ಹೋರಾಟ, ನೋವು, ತ್ಯಾಗಗಳ ಹಾದಿಗೆ ಒಯ್ಯಲು ಸೆಣಸಿದರು. ಇಷ್ಟೇ ಆದರೆ ಈಗ ಅವರದಾಗಿ ಏನು ಉಳಿದಿದೆ? ಅವರು ಉಂಟು ಮಾಡಿದ ತಳಮಳ, ಉದ್ರೇಕ, ಆವೇಶಗಳೆಲ್ಲವೂ ಭೂತಕಾಲದ ವಸ್ತುಗಳಾಗಿಬಿಟ್ಟಿವೆ. ಇದೆಲ್ಲಕ್ಕಿಂತ ಹೆಚ್ಚಾಗಿ ಲೋಹಿಯಾ ಅಂದರೆ ಸಾರತಃ ಏನು? ಸಮಾಜವಾದದ ಅವಶ್ಯಕತೆಗಳು ಭಾರತೀಯ ಅನನ್ಯತೆಯನ್ನು ಪಡೆದುಕೊಳ್ಳಬೇಕೆಂಬ ಆಳವಾದ ಅರಿವಿದ್ದ ಸಾಮಾಜಿಕ ತತ್ವಜ್ಞಾನಿ ಅವರೇನು? ಅನ್ಯಾಯದ ವಿರುದ್ಧ ಸಿಟ್ಟು ಹಾಗೂ ಸಮಾನತಾ ಸಮಾಜದ ಬಗೆಗಿನ ತೀವ್ರ ಹಂಬಲದಿಂದಾಗಿ ಒಂದೇ ನಾಮವಿಶೇಷದಡಿಯಲ್ಲಿ ಉಳಿಯಲು ನಿರಾಕರಿಸಿದ ಉಗ್ರಗಾಮಿಯೇನು? ಇನ್ನೇನೂ ಆಗಲೇ ಒಲ್ಲದ ಓರ್ವ ಕ್ರಾಂತಿಕಾರಿ, ತನ್ನ ಕಾಲಕ್ಕೂ ಮೊದಲೇ ಹುಟ್ಟಿದ ಓರ್ವ ದಾರ್ಶನಿಕ ಅಥವಾ ಕೆಲವರು ಸೂಚಿಸುತ್ತಿರುವಂತೆ ಕಾಣುವ, ಅಧಿಕಾರದ ಮೊಗಸಾಲೆಗಳಿಗೆ ತನ್ನನ್ನು ತಾನೇ ತಳ್ಳಿಕೊಳ್ಳುವ ಏಕೈಕ ಗುರಿಯಿದ್ದ ತಲೆ ಕೆಟ್ಟ ಮಾದರಿಯೇನಾದರೂ ಅವರಾಗಿದ್ದರೋ!

ಈ ವ್ಯಕ್ತಿಯ ಒಟ್ಟು ಚಿತ್ರ ಕೊಡಲು, ಅವರ ದಾರ್ಶನಿಕತೆಯನ್ನು ಅದರದ್ದೇ ನಿಜಮೌಲ್ಯಗಳ ನೆಲೆಯಲ್ಲಿ ಅಂದಾಜು ಮಾಡಲು, ದಂಗುಬಡಿಸುವಂತಹ ಅವರ ಘಟನಾಮಯ ಜೀವನಕಥೆಯನ್ನು ಸಿಂಹಾವಲೋಕಿಸಬೇಕಾಗುತ್ತದೆ. ಗಾಂಧೀಜಿಯ ನಿಷ್ಠಾವಂತ ಅನುಯಾಯಿಯಾಗಿದ್ದ ತಂದೆ ಹೀರಾಲಾಲರಿಂದ ಪ್ರೇರಿತರಾದ ಲೋಹಿಯಾ ರಾಜಕೀಯದ ಮೊದಲ ಸವಿಯನ್ನು ತಮ್ಮ ೧೪ನೇ ವಯಸ್ಸಿನಲ್ಲಿಯೇ ವಯಸ್ಸಾದ ತಂದೆಯ ಜೊತೆ ಗಯಾದಲ್ಲಿ ನಡೆದ ಕಾಂಗ್ರೆಸ್ ಸಭೆಗೆ ಹೋಗುವುದರ ಮೂಲಕ ಪಡೆದರು. ತದನಂತರದಲ್ಲಿ ಜರ್ಮನಿಗೆ ಹೋಗಿ ಪಿ.ಎಚ್‌ಡಿ. ಪಡೆದು ಭಾರತಕ್ಕೆ ಮರಳಿ ಬಂದು ಅರಸಿ ಬಂದ ಕೈತುಂಬ ಸಂಬಳದ ಹುದ್ದೆಯೊಂದರ ಆಹ್ವಾನವನ್ನು ತಿರಸ್ಕರಿಸಿ, ತಮ್ಮ ಬದುಕನ್ನು ಕಾಂಗ್ರೆಸ್ ಪಕ್ಷದ ಸಮಾಜವಾದಿಗಳ ಮಧ್ಯೆ; ಅಂದರೆ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ (ಸಿ.ಎಸ್.ಪಿ) ಎಂದು ಹೆಸರಿಸಿದ್ದ ಗುಂಪಿನಲ್ಲಿ ತೊಡಗಿಸಿಕೊಂಡರು. ಸಿ.ಎಸ್.ಪಿಯ ವಾರಪತ್ರಿಕೆಯಾಗಿದ್ದ ' ಕಾಂಗ್ರೆಸ್ ಸೋಶಲಿಸ್ಟ್'

ಆರಂಭವಾದೊಡನೆಯೇ ಅದರ ಸಂಪಾದಕತ್ವವನ್ನು ವಹಿಸಿಕೊಂಡ ಅವರು ೧೯೩೯ರಲ್ಲಿ ಅದರ ಅಂಕದ ಪರದೆ ಬೀಳುವವರೆಗೂ ಸಂಪಾದಕರಾಗಿ ಕೆಲಸ ಮಾಡಿದರು. ಜವಾಹರಲಾಲ್ ನೆಹರೂ ೧೯೩೬ರಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗುತ್ತಿದ್ದಂತೆ ಲೋಹಿಯಾರಿಗೆ ಮಾಡಲು, ತಮಗೆಂದೇ ರೂಪಿಸಲಾಗಿದ್ದಂತಹ ಕೆಲಸ ಕಾರ್ಯಗಳು ಒದಗಿದವು. ಆ ಇಬ್ಬರು ವ್ಯಕ್ತಿಗಳು, ಅವರ ಹಲವಾರು ದೃಷ್ಟಿಕೋನಗಳಲ್ಲಿ ಪರಸ್ಪರ ವಿರುದ್ಧ ಧೃವಗಳಿಗೆ ಸಂಬಂಧಿಸಿದವರಾದರೂ ಪರಸ್ಪರ ಸೆಳೆಯಲ್ಪಟ್ಟರು. ಕಾಂಗ್ರೆಸ್‌ಗೆ ಪುನಶ್ಚೇತನ ನೀಡಲು ನೆಹರೂ ಹಲವಾರು ಹೊಸ ಅಂಶಗಳನ್ನು ಅಳವಡಿಸಿದರು. ಇವುಗಳಲ್ಲಿ ಬಹುಪ್ರಮುಖವಾದುದೆಂದರೆ ಎ.ಐ.ಸಿ.ಸಿಗೆ ವಿದೇಶಾಂಗ ವಿಭಾಗವೊಂದನ್ನು ಕೊಡಿಸಿದ್ದು. ಹಲವರ ಆಶ್ಚರ್ಯಕ್ಕೆ ಲೋಹಿಯಾರನ್ನು ಅವರು ಈ ವಿದೇಶಾಂಗ ವಿಭಾಗದ ಕಾರ್ಯದರ್ಶಿಯನ್ನಾಗಿ ನೇಮಿಸಿದರು.

ಲೋಹಿಯಾ ತಾವು ಕಣ್ಮರೆಯಾಗುವ ಏಳು ವರ್ಷಗಳ ಮೊದಲೊಮ್ಮೆ "ನನ್ನ ಪೀಳಿಗೆಯ ಜನರಿಗೆ ಗಾಂಧೀಜಿ ಕನಸಿನ, ಜವಾಹರಲಾಲಜೀ ಆಶಯದ ಮತ್ತು ನೇತಾಜಿ ಕೃತಿಯ ಪ್ರತೀಕರಾಗಿದ್ದಾರೆ. ಕನಸು ಎಂದಿಗೂ ನನಸಾಗುವಂತಿಲ್ಲ. ಆಶಯ ಹಳಸಿಬಿಟ್ಟಿದೆ ಮತ್ತು ಕೃತಿ ಅಪೂರ್ಣವಾಗಿಯೇ ಉಳಿದಿದೆ" ಎಂದು ಹೇಳಿದ್ದರು. ಈ ದೇಶವನ್ನು ಕಾಡುತ್ತಿರುವ ಅಸ್ವಸ್ಥತೆಗೆ ನೆಹರೂ ಅವರೇ ಕಾರಣರೆಂದು ಲೋಹಿಯಾ ಗಾಢವಾಗಿ ನಂಬಿದ್ದರು. ನೆಹರೂ ಕುರಿತ ಅವರ ವಿರೋಧ ಸಂಪೂರ್ಣವೂ ಮತ್ತು ಮನನೋಯಿಸಲು ಹಿಂದೆಗೆಯದಂತಹದೂ ಆಗಿತ್ತು. ಲೋಹಿಯಾ ನೆಹ್ರೂರ ಪ್ರಖರಗಣ್ಣಿನ ಸಹವರ್ತಿಗಳಲ್ಲಿ ಒಬ್ಬರಾಗಿದ್ದುದು, ಅವರು ಪರಸ್ಪರ ವಿಶ್ವಾಸದಿಂದ್ದುದು, ಎ.ಐ.ಸಿ.ಸಿ ವಿದೇಶಾಂಗ ವಿಭಾಗದ ಕಾರ್ಯದರ್ಶಿತನ ಲೋಹಿಯಾರ 'ದಿ ಸ್ಟ್ರಗಲ್ ಆಫ್ ಸಿವಿಲ್ ಲಿಬರ್ಟಿಸ್' ಮತ್ತು 'ಇಂಡಿಯಾ ಅಂಡ್ ಚೈನಾ'ದಂತಹ ಹೊತ್ತಿಗೆಗಳು ನೆಹ್ರೂರ ಮುನ್ನುಡಿ ಹೊಂದಿದ್ದುದು-ಇವೆಲ್ಲಾ ಬೇರೊಂದು ಕಥೆಯೇ. ೧೯೩೬ರ ಡಿಸೆಂಬರ್‌ನಲ್ಲಿ ಪ್ರಕಟಗೊಂಡ 'ದಿ ಸ್ಟ್ರಗಲ್ ಆಫ್ ಸಿವಿಲ್ ಲಿಬರ್ಟಿಸ್' ಗೆ ಮುನ್ನುಡಿ ಬರೆಯುತ್ತಾ ನೆಹ್ರೂ "ರಾಮ ಮನೋಹರ ಲೋಹಿಯಾ ಅವರು ಈ ವಸ್ತುವಿನ ಬಗ್ಗೆ ಈ ಹೊತ್ತಿಗೆಯನ್ನು ತರುವಲ್ಲಿ, ಸಾಮಾಜಿಕ ಹಕ್ಕುಬಾಧ್ಯತೆ ಎಂದರೇನು ಎಂಬುದನ್ನು ವಿವರಿಸುವಲ್ಲಿ ಹಾಗೂ ಪಾಶ್ಚಾತ್ಯರಲ್ಲಿ ಅದು ಹೇಗೆ ವಿಕಾಸಗೊಂಡಿದೆ ಎಂದು ತಿಳಿಸುವುದರಲ್ಲಿ ತೀರ ಸಮರ್ಪಕವಾದ ಕೆಲಸವನ್ನು ಮಾಡಿದ್ದಾರೆ. ಇದನ್ನು ಸಾಕಷ್ಟು ಮಂದಿ ಓದುವರೆಂದು ನಾನು ಆಶಿಸುತ್ತೇನೆ ಮತ್ತು ಇದು ನಮ್ಮ ನಡುವೆ ಇರುವ ದಲಿತರ ಸಾಮಾಜಿಕ ಹಕ್ಕುಬಾಧ್ಯತೆಗಳಿಗಾಗಿ ಹೋರಾಡುವುದರಲ್ಲಿ ನಮಗೆ ಸಹಾಯ ಮಾಡುವುದೆಂದು ಭಾವಿಸಿದ್ದೇನೆ" ಎಂದಿದ್ದರು. ಹಲವಾರು ಬಾರಿ ನೆಹರೂ ಕುಟುಂಬದ ಮನೆಯಾದ ಆನಂದ ಭವನ ಲೋಹಿಯಾರವರಿಗೆ ಆತಿಥ್ಯ ನೀಡಿದ್ದುಂಟು. ವಾಸ್ತವವಾಗಿ ಸ್ವತಂತ್ರ ಭಾರತದ ಜನತೆಯಲ್ಲಿ, ಯಾವ ವಿಧವಾದ ಮುಂಗಡ ಪರವಾನಗಿ ಇಲ್ಲದೆ ಪ್ರಧಾನಮಂತ್ರಿಯಾಗಿದ್ದ ನೆಹರೂರವರನ್ನು ಅವರ ಕಛೇರಿಯಲ್ಲಾಗಲಿ

ಅಥವಾ ಮನೆಯಲ್ಲಾಗಲಿ ನೋಡಬಹುದಾಗಿದ್ದ ಕೆಲವೇ ಮಂದಿಯಲ್ಲಿ ಲೋಹಿಯಾ ಕೂಡ ಒಬ್ಬರಾಗಿದ್ದರು.

ಸ್ಟೆಂಟ್ ಮಾರ್ಟಿನ್ನನ ಬೇಸಿಗೆಯಂತೆಯೇ ನೆಹರೂ–ಲೋಹಿಯಾರ ಸ್ನೇಹ, ಒಡಮೂಡುತ್ತಿದ್ದ ಭಾರತೀಯ ರಾಜಕಾರಣದ ವಾಸ್ತವಗಳ ಒತ್ತಡವನ್ನು ತಾಳಿಕೊಳ್ಳಲಾರದೇ ಹೋಯಿತು. ಅವರ ನಡುವಣ ಸಂಬಂಧದ ತಿಕ್ಕಾಟಗಳ ಒಂದು ಕಾರಣವನ್ನು ಇಲ್ಲಿ ಹೇಳಬಹುದು. ಲೋಹಿಯಾ ೧೯೪೯ರಷ್ಟು ಹಿಂದೆಯೇ ಹೊಸ ದಿಲ್ಲಿಯ ನೇಪಾಳೀ ರಾಯಭಾರ ಕಚೇರಿಗೆ (ಎಂಬೆಸಿ) ಒಂದು ಶಾಂತಿಯುತ ಮೆರವಣಿಗೆಯನ್ನು ಕೊಂಡೊಯ್ದರು. ಇದು ಆಗ ಕಟ್ಮಂಡು ಜೈಲಿನಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದ ನೇಪಾಳಿ ಕಾಂಗ್ರೆಸ್ ಮುಖಂಡ ಬಿಶ್ವೇಶ್ವರ ಪ್ರಸಾದ್ ಕೊಯಿರಾಲರವರ ವಿರುದ್ಧ ನಡೆದಿದ್ದ ಕ್ರೂರ ದೌರ್ಜನ್ಯವನ್ನು ಪ್ರತಿಭಟಿಸುವ ಮತ ಪ್ರದರ್ಶನವಾಗಿತ್ತು. ನೇಪಾಳದಲ್ಲಿ ಬಿ.ಪಿ. ಕೊಯಿರಾಲರವರ ನೇತೃತ್ವದಲ್ಲಿ ೧೯೫೦–೫೧ರಲ್ಲಿ ನಡೆದ ಸಶಸ್ತ್ರ ಕ್ರಾಂತಿಯ ಬೆಳವಣಿಗೆಗಳಲ್ಲಿ ನಿರ್ಣಾಯಕ ಪಾತ್ರವಹಿಸಿದ ಯಾವುದೇ ಭಾರತೀಯನಿಗಿಂತ ಪ್ರಮುಖ ಪಾತ್ರವನ್ನು ಲೋಹಿಯಾ ವಹಿಸಿದ್ದರೆಂಬುದನ್ನು ಇಲ್ಲಿ ಗಮನಿಸಬೇಕು. ಗೋವಾದ ಸ್ವಾತಂತ್ರ್ಯ ಹೋರಾಟ ಮತ್ತು ಸ್ವಾತಂತ್ರ್ಯಪೂರ್ವದಲ್ಲಿ ರಜಾಕಾರ ಸಶಸ್ತ್ರ ಪ್ರತಿಭಟನೆಯ ವಿರುದ್ಧ ಹೈದರಾಬಾದಿನಲ್ಲಿ ನಡೆದ ಹೋರಾಟದಲ್ಲಿ ಕೂಡ ಅಂಥದೇ ನಿರ್ಣಾಯಕ ಪಾತ್ರವನ್ನು ಲೋಹಿಯಾ ವಹಿಸಿದರು. ನವದೆಹಲಿಯಲ್ಲಿನ ಶಾಂತಿಯುತ ಮೆರವಣಿಗೆಕಾರರ ವಿರುದ್ಧ ಅಶ್ರುವಾಯು ಸೆಲ್‌ಗಳನ್ನು ಸಿಡಿಸಲಾಯಿತಲ್ಲದೆ ಲೋಹಿಯಾ ಮತ್ತು ಅವರ ಅನೇಕ ಸಹವರ್ತಿಗಳನ್ನು ದಸ್ತಗಿರಿ ಮಾಡಲಾಯಿತು. ಇದು, ಅವರ ಮೊಟ್ಟಮೊದಲ, ಸ್ವತಂತ್ರ ಭಾರತದಲ್ಲಿ ನೆಹರೂ ಪ್ರಧಾನಿಯಾಗಿದ್ದ ಹಾಗೂ ವಲ್ಲಭಭಾಯ್ ಪಟೇಲ್ ಗೃಹಮಂತ್ರಿಯಾಗಿದ್ದಾಗಿನ ಸೆರೆಮನೆ ವಾಸವಾಗಿತ್ತು. (ಆದರೆ ಇದು ಕಟ್ಟ ಕಡೆಯದಂತೂ ಆಗಿರಲಿಲ್ಲ. ಯಾವುದೇ ಸಮಾಜವಾದಿ ನಾಯಕ ಸ್ವತಂತ್ರ ಭಾರತದ ಸೆರೆಮನೆಗಳಲ್ಲಿ ಲೋಹಿಯಾರಷ್ಟು ಪದೇ ಪದೇ ತನ್ನನ್ನು ತಾನು ಕಂಡುಕೊಂಡಿಲ್ಲ) ಮೇಲಿನ ಘಟನೆಯನ್ನು ಲೋಹಿಯಾ ಎಂದಿಗೂ ಬಯಸಿರಲಿಲ್ಲ. ಗಾಯಕ್ಕೆ ಉಪ್ಪು ಸವರಿದಂತೆ (ಕಡೆಯ ಪಕ್ಷ ಲೋಹಿಯಾ ಹೀಗೆ ಭಾವಿಸಿದರು) ಆಗ ತಿವಾರ್ ಜೈಲಿನಲ್ಲಿದ್ದ ಅವರ ಬಳಿಗೆ ಇಂದಿರಾಗಾಂಧಿಯ ಮೂಲಕ ನೆಹರೂ ಕಳಿಸಿದ ಮಾವಿನ ಹಣ್ಣಿನ ಬುಟ್ಟಿ ಅವರನ್ನು ಕೆರಳಿಸಿತು. ಆ ಉಡುಗೊರೆ ಅವರಿಂದ ತಿರಸ್ಕೃತಗೊಂಡು ವಾಪಸ್ ಮರಳಿತು.

ಆದರೆ ನೆಹರೂರವರು ಅವರ ನಡುವಣ ಹಿಂದಿನ ದಿನಗಳ ವಿಶ್ವಾಸವನ್ನು ಎಂದಿಗೂ ಮರೆಯಲಿಲ್ಲ. ಕೆಳಗಿನ ಘಟನೆ ಇದನ್ನು ಶ್ರುತಪಡಿಸುತ್ತದೆ. ಫೆಬ್ರುವರಿ ೧೯೫೧ರ ವೇಳೆಗೆ ಅಖಿಲ ಬರ್ಮಾ ಇಂಡಿಯನ್ ಕಾಂಗ್ರೆಸ್‌ನ ನಾಲ್ಕನೆಯ

ಅಧಿವೇಶನವನ್ನು ಉದ್ಘಾಟಿಸಲು ಲೋಹಿಯಾರವರಿಗೆ ಆಹ್ವಾನ ಬಂದಿತು. ಫೆಬ್ರವರಿ ಒಂದರಂದು ಲೋಹಿಯಾ ಕಲ್ಕತ್ತಾವನ್ನು ಪಾಸ್‌ಪೋರ್ಟ್ ಇಲ್ಲದೆಯೇ(ಲಕ್ನೋದಲ್ಲಿ ಮರೆತು ಬಂದಿದ್ದುದರಿಂದ) ತಲುಪಿದರು. ಫೆಬ್ರವರಿ ಎರಡರ ಮಧ್ಯಾಹ್ನದವರೆಗೆ ಕಲ್ಕತ್ತಾದಲ್ಲಿ ಕಾದರೂ ಪಾಸ್‌ಪೋರ್ಟ್ ಬರಲಿಲ್ಲ. ಮತ್ತು ಮೂರರಂದು ಮಧ್ಯಾಹ್ನ ಮಧ್ಯಾಹ್ನ ಬರ್ಮಾ ಕಾಂಗ್ರೆಸ್ ಅಧಿವೇಶನವನ್ನು ಉದ್ಘಾಟಿಸಿಬೇಕಿದ್ದು ಅದಕ್ಕಾಗಿ ಅಂದು ಬೆಳಿಗ್ಗೆಯೇ ರಂಗೂನಿಗೆ ಹೊರಡಬೇಕಾಗಿತ್ತು. ಫೆಬ್ರುವರಿ ಎರಡರಂದು ಮಧ್ಯಾಹ್ನ ನಾನು ಆಗ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಮುಖ್ಯ ಕಾರ್ಯದರ್ಶಿಯಾಗಿದ್ದ ಎಸ್.ಎನ್.ರೇ ಯವರನ್ನು ಸಂಪರ್ಕಿಸಿ ಸದ್ಯದ ಪರಿಸ್ಥಿತಿಯನ್ನು ವಿವರಿಸಿ, ಪಾಸ್‌ಪೋರ್ಟ್ ಇರಲಿ, ಇಲ್ಲದಿರಲಿ ನಿಗದಿಯಾದ ಕಾರ್ಯಕ್ರಮದಂತೆ ಲೋಹಿಯಾ ರಂಗೂನಿಗೆ ಹೊರಡಲಿದ್ದಾರೆ ಎಂದು ತಿಳಿಸಿದೆ. ಮತ್ತೆ ಸಂಜೆ ಅವರನ್ನು ಸಂಪರ್ಕಿಸಿ ಬರ್ಮಾ ಸರ್ಕಾರದ ಆಕ್ಷೇಪಣೆಯೇನೂ ಇಲ್ಲದಿದ್ದಲ್ಲಿ ಲೋಹಿಯಾ ಪಾಸ್‌ಪೋರ್ಟ್ ಇಲ್ಲದೆಯೇ ಹೊರಡಬಹುದು ಎಂದು ತಿಳಿದೆ. ಕಲ್ಕತ್ತಾದಲ್ಲಿ ಬರ್ಮಾದ ಕೌನ್ಸಿಲ್ ಜನರಲ್ ಆಗಿದ್ದ ಉ. ವಿನ್. ನಮಗೆ ಆ ಬಗ್ಗೆ ಭರವಸೆ ನೀಡಿದ್ದುದರಿಂದ ಹಾಗೂ ಬರ್ಮಾದಲ್ಲಿ ಆಗ ಸಮಾಜವಾದಿ ಸರಕಾರವಿದ್ದುದರಿಂದ ರಂಗೂನ್ ಕಡೆಯಿಂದ ಅಂತಹ ಸಮಸ್ಯೆಗಳಾವುವೂ ಉದ್ಭವಿಸಲಾರವೆಂದು ಅವರಿಗೆ ನಾನು ಹೇಳಿದೆ. ಬಹುಶಃ ರೇಯವರು ಹೊಸದೆಹಲಿಯಿಂದ ಇದಕ್ಕೆ ಅನುಮತಿಯನ್ನು ಪಡೆದುಕೊಂಡಿದ್ದರು ಎಂದರೆ ತಪ್ಪಾಗಲಾರದು–ಆಗ ಪ್ರಧಾನಮಂತ್ರಿಯಾಗಿದ್ದ ನೆಹರೂ ವಿದೇಶಾಂಗ ವ್ಯವಹಾರ ಖಾತೆಯನ್ನೂ ವಹಿಸಿಕೊಂಡಿದ್ದರು. ಲೋಹಿಯಾರವರು ರಂಗೂನಿನ ಮಿಂಗಲ್‌ಡನ್ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಜಾಗತಿಕ ಸರ್ಕಾರದ ಪರ ವಕೀಲ ನಡೆಸುವವರೊಬ್ಬರು ಪಾಸ್‌ಪೋರ್ಟ್ ಇಲ್ಲದೆಯೇ ಪ್ರಯಾಣ ಮಾಡಬೇಕಾದುದು ತೀರ ಸಮರ್ಪಕ ಎಂದು ಬರ್ಮೀಯ ಪತ್ರಕರ್ತನೊಬ್ಬ ಲೋಹಿಯಾರವರಿಗೆ ಮುಗುಳ್ನಗುತ್ತಾ ಸೂಚಿಸಿದ.

ರಂಗೂನ್‌ನಲ್ಲಿ ಲೋಹಿಯಾ, ಏಷ್ಯಾದ ವಿವಿಧ ದೇಶಗಳ ಸಮಾಜವಾದಿಗಳು ಒಟ್ಟಾಗಿ ಸೇರಬಲ್ಲ ವೇದಿಕೆಯೊಂದರ ಅಗತ್ಯದತ್ತ ಬರ್ಮಿ ಸಮಾಜವಾದಿಗಳ ಗಮನ ಸೆಳೆದು, ಅದಕ್ಕಾಗಿ ಅವರು ನಡೆಸಿದ ಪೂರ್ವಭಾವೀ ಪ್ರಯತ್ನಗಳ ಬಗ್ಗೆ ಇಲ್ಲಿ ಸೂಚಿಸಬಹುದೇನೋ. ಅಂತಾರಾಷ್ಟ್ರೀಯ ಸಮಾಜವಾದೀ ಸಮ್ಮೇಳನ ಸಾರತಃ ಪಶ್ಚಿಮ ಯೂರೋಪಿನ ಅಗತ್ಯಗಳಿಗೆ ಸರಿಹೊಂದುವಂತಹದಾಗಿದೆಯಲ್ಲದೆ, ಐರೋಪ್ಯ ರಾಷ್ಟ್ರಗಳ ಮೇಲುಗೈನಿಂದ ಕೂಡಿದ್ದೂ ಆಗಿದೆ ಎಂಬುದು ಅವರ ವಾದವಾಗಿತ್ತು. ಅದು ತನ್ನ ಸ್ಥಾನೀಯ ಆಸಕ್ತಿಗಳ ದೃಷ್ಟಿಕೋನವನ್ನು ಮೀರಿ ಅಂತಾರಾಷ್ಟ್ರೀಯ ಸಮಾಜವಾದಿಗಳ ಸಭೆಯಾಗಿ ಬೆಳೆಯದ ಹೊರತು ಏಷ್ಯಾದ ಸಮಾಜವಾದಿಗಳನ್ನು ಪ್ರತಿನಿಧಿಸುವ ಸ್ವರೂಪವನ್ನು ಪಡೆಯಲಾರದೆಂಬುದು ಅವರ ಅಭಿಪ್ರಾಯ.

ಲೋಹಿಯಾ ಹೇಳಿದಂತೆ "ಯೂರೋಪಿನ ಸಮಾಜವಾದ ತೀವ್ರವಾದ ವ್ಯಾವಹಾರಿಕ ಆದರ್ಶತೆಯನ್ನು ಪಡೆದುಕೊಂಡುಬಿಟ್ಟಿದೆ". ಇದು ವಾಸ್ತವವಾಗಿ ಅವರ ಪ್ರಕಾರ "ಯೂರೋಪಿನ ಸಮಾಜವಾದಿಗಳನ್ನು ಸಣ್ಣ ರಾಷ್ಟ್ರೀಯವಾದಿ ಚಿಪ್ಪಿನೊಳಕ್ಕೆ ತಳ್ಳುತ್ತಿದೆ...ಇಂತಹ ರಾಷ್ಟ್ರೀಯುವಾದಿ ದೃಷ್ಟಿಕೋನಗಳು COMISCOದಂತಹ ಅಂತಾರಾಷ್ಟ್ರೀಯ ಸಮಾಜವಾದಿ ಸಂಸ್ಥೆಗಳನ್ನು (ಕಮಿಟೀ ಆಫ್ ಇಂಟರ್‌ನ್ಯಾಷನಲ್ ಸೋಶಲಿಸ್ಟ್ ಕಾನ್‌ಫರೆನ್ಸ್) ಮಾಡಿರುವಂತೆ ಕೇವಲ ಒಂದು ಅಂಚೆ ಕಛೇರಿಯನ್ನಾಗಿ ಪರಿವರ್ತಿಸಿಬಿಡುತ್ತವೆ....ಯೂರೋಪಿನ ಸಮಾಜವಾದಿಗಳು ಎಷ್ಟರಮಟ್ಟಿಗೆ ತಕ್ಷಣದ ಸಮಸ್ಯೆಗಳಲ್ಲಿ, ಅಂಕಿ ಅಂಶಗಳಲ್ಲಿ, ಪುರಾವೆಗಳಲ್ಲಿ, ಚಿಂತನೆಗಳಲ್ಲಿ ಮುಳುಗಿಹೋಗಿದ್ದಾರೆಂದರೆ ಅವರು ಒಂದು ಸಮಗ್ರ ನೋಟವನ್ನು ಹಾಗೂ ಜಾಗತಿಕ ದೃಷ್ಟಿಕೋನವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದಾರೆ." ಲೋಹಿಯಾರ ನಿರಂತರ ಪ್ರಯತ್ನಗಳಿಂದಾಗಿಯೇ ಬರ್ಮಾ ಮತ್ತು ಇಂಡೋನೇಷ್ಯಾದ ಸಮಾಜವಾದಿ ನಾಯಕರು ಅದರಲ್ಲೂ ನಿರ್ದಿಷ್ಟವಾಗಿ ಉಬಾಸ್ವೇ ಮತ್ತು ಡಾ. ಸೋಸೆನ್ ಸರೀರ್ ಅವರು, ಅವರ ಜೊತೆಗೂಡಿ ೧೯೫೩ರಲ್ಲಿ ರಂಗೂನ್‌ನಲ್ಲಿ ನಡೆದ ಏಷ್ಯಾದ ಸಮಾಜವಾದೀ ಸಮ್ಮೇಳನಕ್ಕಾಗಿ ಸಂಪೂರ್ಣ ಸಿದ್ಧತೆ ನಡೆಸಿದ್ದು. ಹೀಗೆ ಇಂತಹ ಸಂಸ್ಥೆಯೊಂದರ ಪ್ರಮುಖ ಶಿಲ್ಪಿಗಳಲ್ಲಿ ಒಬ್ಬರಾದರೂ, ಲೋಹಿಯಾ ಅದರಲ್ಲಿ ಭಾಗವಹಿಸಲಿಲ್ಲ. ಇದರ ಪ್ರಮುಖ ಕಾರಣಗಳಲ್ಲಿ ಒಂದೆಂದರೆ, ಈ ಸಮಾಜವಾದೀ ಸಮ್ಮೇಳನಕ್ಕೆ ಭಾರತೀಯ ಸಮಾಜವಾದಿಗಳ ನಿಯೋಗದ ಮುಖಂಡರನ್ನಾಗಿ ಜಯಪ್ರಕಾಶ ನಾರಾಯಣರನ್ನು ಆಯ್ಕೆ ಮಾಡಿದುದಾಗಿತ್ತು. ಲೋಹಿಯಾ–ಜಯಪ್ರಕಾಶ ನಡುವಣ ತಾತ್ವಿಕ ನಿಲುವುಗಳಲ್ಲಿನ ಭಿನ್ನಾಭಿಪ್ರಾಯಗಳು ಈ ವೇಳೆಗಾಗಲೇ ಸ್ಪಷ್ಟವಾಗಿ ಪ್ರಕಟಗೊಂಡಿದ್ದವು.

ಸಂದರ್ಭಾನುಸಾರವಲ್ಲ, ಆದರ್ಶ ನಂಬಿಕೆಗಳಿಗನುಸಾರ ಪ್ರಜಾಪ್ರಭುತ್ವ ವಾದಿಯಾಗಿದ್ದ ಲೋಹಿಯಾ, ಸಮಾಜವಾದವನ್ನು ಕಾರ್ಯತಃ ಬದುಕುವ ಮಾರ್ಗ ಎಂದು ತಿಳಿದಿದ್ದರು. ಅದನ್ನು ಪ್ರತಿ ಹಂತದಲ್ಲಿ ಮತ್ತು ಯಾವಾಗಲೂ ಬದುಕು ಮಾಡಿಕೊಳ್ಳಬೇಕು ಹಾಗೂ ಉತ್ಸವಿಕ ಮತ್ತು ಪ್ರದರ್ಶನೀಯ ಹಂತಗಳಿಗೆ ಸೀಮಿತಗೊಳಿಸಬಾರದು. ಭಾರತೀಯ ಸಮಾಜವಾದವು, ಆಲೋಚನೆ ಮತ್ತು ಕ್ರಿಯೆಯಲ್ಲಿ ತನಗೊಂದು ಸ್ವಯಂಚಲನೆಯ ದಿಕ್ಕನ್ನು ಕೊಡಬಲ್ಲ ಹಾಗೂ ಚೆದುರಿ ಚೆಲ್ಲಾಪಿಲ್ಲಿಯಾಗುವುದಕ್ಕೆ ಅವಕಾಶ ಮಾಡಿಕೊಡುವಂತಹ ಗೊಂದಲದಿಂದ ತನ್ನನ್ನು ರಕ್ಷಿಸಬಲ್ಲ ಏಕನಿರಂತರ ತರ್ಕದ ತಾತ್ವಿಕ ಅಡಿಗಟ್ಟನ್ನು ಕಟ್ಟಿಕೊಳ್ಳಬೇಕು ಎಂಬುದು ಅವರ ಅಚಲ ನಂಬಿಕೆಯಾಗಿತ್ತು. ಹೊಸದೊಂದು ಮಾನವ ನಾಗರೀಕತೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ, ಬಂಡವಾಳಶಾಹಿ ಹಾಗೂ ಕಮ್ಯುನಿಸಂಗಳ ಸಮಾನ ಅಸಂಬಂಧ್ಧ ತತ್ವಕ್ಕೆ ತನ್ನನ್ನು ತಾನು ಬದ್ಧವಾಗಿಸಿಕೊಳ್ಳುವುದು ಸಮಾಜವಾದೀ ಚಳುವಳಿಗೆ ಒಂದು ತಾರ್ಕಿಕ ಅಗತ್ಯ. ಅಷ್ಟೆ ಅಲ್ಲ, ಅದು ಇನ್ನಷ್ಟು ಮುನ್ನಡೆದು "ಒಂದು ಬಣಕ್ಕಿಂತ

ಇನ್ನೊಂದನ್ನು ಇಷ್ಟಪಡುವಂತಹ ಧೋರಣೆಯಿಂದ ದೂರವಾದ ಎರಡನ್ನೂ ಸಮಾನ ಒಳ್ಳೆಯವು ಅಥವಾ ಸಮಾನ ಕೆಟ್ಟವು ಎಂದು ಪರಿಗಣಿಸಬಲ್ಲ...ಮೂರನೇ ಬಣವೊಂದನ್ನು ಕಟ್ಟಬೇಕು". ಇದು ಗಿಡ್ಡನಾದ. ಕಪ್ಪನೆಯ, ಒರಟು ಸೌಂದರ್ಯದ ಹಾಗೂ ಹರಿತ ಬುದ್ಧಿಮತ್ತೆಯ ಲೋಹಿಯಾ ಕಂಡ ಕನಸು.

ಲೋಹಿಯಾರವರು ೧೯೫೧ರಷ್ಟು ಹಿಂದೆಯೇ ಒಂದು ಅಂಶವನ್ನು ಮನಗಂಡಿದ್ದರು. "ಏಷ್ಯಾದಲ್ಲಿ–ಬಹುಶಃ ಇಡಿಯ ವಿಶ್ವದಲ್ಲಿ–ಸಮಾಜವಾದವು ಗರಿಷ್ಠ ಸಾಧ್ಯ ಸಮಾನತೆಯ ತತ್ವಪ್ರಣಾಳಿ ಆಗಬೇಕು...ಅದರ ರಾಜಕೀಯ ರಚನೆ ವಿಕೇಂದ್ರೀಕೃತ ರಾಜ್ಯದೊಳಗಿಂದ ಒಡಮೂಡಬೇಕು ಹಾಗೂ ಅದರ ತಾಂತ್ರಿಕ ಚೌಕಟ್ಟನ್ನು ಅದು, ಸಣ್ಣ ಘಟಕ ಕೈಗಾರಿಕೆಯಿಂದಲೇ ಪಡೆದುಕೊಳ್ಳಬೇಕು. ಅಂತಹ ಸಮಾಜವಾದ, ಮನುಷ್ಯರನ್ನು ಗುಲಾಮರಾಗಿಸಿಕೊಳ್ಳುವುದಕ್ಕಿಂತ ಅವರನ್ನು ಒಂದು ಗೌರವಾರ್ಹವಾದ ಜೀವನ ಮಟ್ಟವನ್ನು ಹುಡುಕುತ್ತಿರಲು ಪ್ರೇರೇಪಿಸುತ್ತದೆ. ಆಗಷ್ಟೇ ಅವರು 'ಒಳಗೆ ಶಾಂತಿ ಮತ್ತು ಹೊರಗೆ ಕ್ರಿಯೆ'ಯ ನಾಗರಿಕತೆಯೊಂದಕ್ಕಾಗಿ ಪ್ರಯತ್ನ ಮಾಡಲು ಸಾಧ್ಯವಾಗುತ್ತದೆ".

ಈ ಅಂಶವನ್ನು ಅವರು ಅಖಿಲ ಬರ್ಮಾ ಇಂಡಿಯನ್ ಕಾಂಗ್ರೆಸ್ಸಿನ ಉದ್ಘಾಟನಾ ಭಾಷಣದಲ್ಲಿ ಒತ್ತಿ ಹೇಳುತ್ತಾ ಏಷ್ಯನರು ತಮ್ಮ ಕೈಗಾರಿಕೆ ಮತ್ತು ಕೃಷಿಯನ್ನು ಉತ್ತಮಪಡಿಸಬೇಕೆಂದರು. ರಂಗೂನಿನ ನಗರ ಮಂದಿರದಲ್ಲಿ ಸಭೆಯನ್ನು ಉದ್ದೇಶಿಸುತ್ತಾ ಅವರು ಯುರೋಪು ಅಗತ್ಯಕ್ಕಿಂತ ತ್ವರಿತವಾಗಿ ಮುನ್ನಡೆದಿದ್ದರೆ ಏಷ್ಯಾ ತಾನು ನಡೆಯಬೇಕಾದುದಕ್ಕಿಂತ ನಿಧಾನವಾಗಿ ನಡೆಯುತ್ತಿದೆ" ಎಂದರು. ಭಾರತ ಮತ್ತಿತರ ತಟಸ್ಥ ಬಣದ ದೇಶಗಳು ಜೊತೆಗೂಡಬೇಕೆಂಬ ಆಲೋಚನೆಯನ್ನು ಚರ್ಚೆಗೆತ್ತಿಕೊಂಡ ಅವರು; ಇದರ ಆರಂಭಿಕ ಪ್ರಯತ್ನವಾಗಿ ಭಾರತ, ಬರ್ಮಾ ಮತ್ತು ಇಂಡೋನೇಷ್ಯಾಗಳ ಪರಸ್ಪರ ಸಹಕರಿಸುವ ಒಪ್ಪಂದವೊಂದಕ್ಕೆ ಬರಬೇಕೆಂದರು. ಫೆಬ್ರುವರಿ ೧೯೫೧ರಲ್ಲಿ ರಂಗೂನಿಗೆ ನೀಡಿದ ಸಂಕ್ಷಿಪ್ತ ಭೇಟಿಯಲ್ಲಿ ವಿಶ್ವದ ರಾಜಕೀಯಕ್ಕೆ ಹೊರತಾಗಿ ಏಷ್ಯಾದ ರಾಜಕೀಯದ ಬಗ್ಗೆ ಪ್ರಸ್ತಾಪ ಮಾಡುವುದು ನಿರರ್ಥಕ ಎಂದು ಒತ್ತಿ ಹೇಳಿದರು. ಎರಡನೆಯದಾಗಿ, ಏಷ್ಯ ತನ್ನ ತಲಾ ಬಂಡವಾಳದ ತೊಡಗಿಸುವಿಕೆಯನ್ನು ಹೆಚ್ಚಿಸಿ "ಹೊಸ ಉತ್ಪಾದನಾ ತಂತ್ರಜ್ಞಾನ'ವನ್ನು ಬೆಳೆಸುವುದರಲ್ಲಿ ಹೆಣಗಬೇಕು" ಎಂದರು. ಅಂದರೆ ಸಮಾಜವಾದಿ ಆರ್ಥಿಕ ವ್ಯವಸ್ಥೆ ಮಾತ್ರ ನಿಭಾಯಿಸಬಲ್ಲಂಥ "ಸಣ್ಣ ಘಟಕಗಳ ತಂತ್ರಜ್ಞಾನ"ದತ್ತ ಗಮನಹರಿಸಬೇಕು. "ವಿಶ್ವ ಅಭಿವೃದ್ಧಿ ಪ್ರಾಧಿಕಾರ", "ವಿಶ್ವ ಆಹಾರ ಮಂಡಲಿ" ಹಾಗೂ "ಅಂತಾರಾಷ್ಟ್ರೀಯ ದಳ"ಗಳ ಅಗತ್ಯತೆಯನ್ನು ಒತ್ತಿ ಹೇಳುತ್ತಾ ಲೋಹಿಯಾರವರು, ತಟಸ್ಥತೆ ಎಂದರೆ ಅಟ್ಲಾಂಟಿಕ್ ಮತ್ತು ಸೋವಿಯತ್ ಬಣಗಳಿಗೆ ಒಂದರ ನಂತರ ಮತ್ತೊಂದರಂತೆ ಸೇವೆ ಸಲ್ಲಿಸುವುದಲ್ಲವೆಂಬುದನ್ನು ಏಷ್ಯನರು ಗಮನದಲ್ಲಿಡಬೇಕೆಂದರು. ಅದರ ಪ್ರಾಥಮಿಕ ಅಗತ್ಯವೆಂದರೆ ಅನುಭೋಗತೆಯ

ಸರಪಳಿಯೊಂದಕ್ಕೆ ಕ್ರಿಯೆಗಳ ನೀತಿಸಂಹಿತೆಯನ್ನು ಗಂಟು ಹಾಕುವುದನ್ನು ವಿರೋಧಿಸುವ ಸ್ವತಂತ್ರ ಯೋಚನಾಕ್ರಮದ ಸೃಷ್ಟಿ ಎಂದರು.

ಸಮಾಜವಾದದ ಪಕ್ಷ ಯಾವುದೇ ಹಂತದಲ್ಲಿ ಬಹಳಷ್ಟು ಮಟ್ಟಿಗೆ ಪಾಶ್ಚಾತ್ಯ ಬುದ್ಧಿಜೀವಿಗಳ ಅಳತೆಗೆ ಅನುಗುಣವಾಗಿದ್ದು, ಹಲವು ಬಾರಿ ಲೋಹಿಯಾ ತಮ್ಮ ಆಲೋಚನೆಗಳನ್ನು ವಾಸ್ತವದ ಚೌಕಟ್ಟಿಗೆ ತುಂಬಬಲ್ಲ ವಾಹಕವೊಂದರ ಕೊರತೆಯಿರುವುದನ್ನು ಗಮನಿಸಿದರು. ಇದು ಅವರನ್ನು ಇಂತಹ ಅಡೆತಡೆಗಳ ವಿರುದ್ಧ ಕಾರ್ಯೋನ್ಮುಖರಾಗಿ ಅವುಗಳನ್ನು ನಿವಾರಿಸಿಕೊಳ್ಳಲು ಪ್ರೇರೇಪಿಸಿತು. ಅವರ ಅನೇಕ ಆಲೋಚನಾ ಆವಿಷ್ಕಾರಗಳು, ತನ್ನ ಜನತೆಯಲ್ಲಿ ಗುರುತಿಸಿಕೊಂಡ ಭಾರತೀಯ ಸಮಾಜವಾದದ ವಿಶ್ವಾಸಾರ್ಹ ರೂಪವೊಂದನ್ನು ಮೂಡಿಸುವಲ್ಲಿ ಮಾಡಿದ ಪ್ರಯತ್ನಗಳಾಗಿದ್ದವು.

ಸ್ವಾತಂತ್ರ್ಯೋತ್ತರ ಭಾರತದ ೧೯೫೨ರ ಮಹಾಚುನಾವಣೆ ಸಮಾಜವಾದಿ ಪಕ್ಷವನ್ನು ಹೆಚ್ಚು ಕಡಿಮೆ ನಿರ್ನಾಮ ಮಾಡಿತ್ತು. ಜೋಲುಮುಖದ ಸಮಾಜವಾದಿಗಳು ಪಂಚಮಡಿಯಲ್ಲಿ ನಡೆದ ವಿಶೇಷ ಅಧಿವೇಶನವೊಂದರಲ್ಲಿ ಈ ಇಕ್ಕಟ್ಟಿನಿಂದ ಹೊರಬರುವ ದಾರಿಯೊಂದನ್ನು ಹುಡುಕಲು ಸೇರಿದರು. ಅಲ್ಲಿ ಅಂದು ಭಾರತೀಯನನ್ನು ಮೊಳ್ಳು ಆಶಯಗಳಿಂದ ಹಿಡಿದಿಟ್ಟಿದ್ದ ಎಲ್ಲದರ ವಿರುದ್ಧ ಹಾಗೂ ನಾಳಿನ ಮಾನವನಾಗಿ ಲೋಹಿಯಾ ಒಡಮೂಡಿದರು. ಅಲ್ಲಿ ನೆರೆದಿದ್ದ ಪ್ರತಿನಿಧಿಗಳನ್ನು ಉದ್ದೇಶಿಸುತ್ತಾ "ಭಾರತ ಬಂಡವಾಳಶಾಹಿ ಅಥವಾ ಕಮ್ಯೂನಿಸಂ–ಈ ಎರಡರ ಹಿನ್ನೆಲೆಗೆ, ಉಡುಗಿಹೋದ ಕಂಠದಲ್ಲಿ ಕಿರುಚುವ ಹಿಮ್ಮೇಳವಾಗಬೇಕೆ ಅಥವಾ ಇವೆರಡಕ್ಕಿಂತ ಭಿನ್ನವಾದ ನಾಗರಿಕತೆಯನ್ನು ಸೃಷ್ಟಿಸುತ್ತ ಮುನ್ನುಗ್ಗಬೇಕೆ ಎಂಬುದನ್ನು ಕೆಲವು ವರ್ಷಗಳ ಮಟ್ಟಿಗಾದರೂ ಈ ಅಧಿವೇಶನ ನಿರ್ಧರಿಸುತ್ತದೆ" ಎಂದರು. ಅದೇ ಸಮಯದಲ್ಲಿ "ಯಾವುದೇ ಜೀವಂತವಿರುವ ಸಿದ್ಧಾಂತ ತನ್ನನ್ನು ಸಂಪೂರ್ಣವಾಗಿ ಕಂಡುಕೊಂಡುಬಿಟ್ಟಿರಲು ಅಥವಾ ಮುಚ್ಚಿಕೊಂಡು ಬಿಟ್ಟಿರಲು ಸಾಧ್ಯವಿಲ್ಲ. ಸಮಾಜವಾದಿಗಳು ತಮ್ಮ ತಾತ್ವಿಕ ಗೊಂದಲಗಳ ಬಗ್ಗೆ ವ್ಯಾಕುಲಗೊಳ್ಳಲು ನಿಲ್ಲಿಸಿದ ದಿನ ಒಂದು ದುರ್ದಿನ ಆಗಿರುತ್ತದೆ ಎಂಬುದನ್ನು ಮರೆತಲ್ಲಿ ಅದು ಸುತರಾಂ ಹೆಡ್ಡತನವಾಗಿರುತ್ತದೆ" ಎಂದರು. "ಸಮಾಜವಾದ ನಿರ್ಬಂಧಿತ ಬಂಡವಾಳಶಾಹಿ ಹಾಗೂ ಮಿಶ್ರ ಆರ್ಥಿಕ ವ್ಯವಸ್ಥೆಯ ಎಲ್ಲ ವಾದಗಳನ್ನೂ ಸಂಪೂರ್ಣವಾಗಿ ತಿರಸ್ಕರಿಸಬೇಕು" ಎಂದು ಅವರು ಒತ್ತಿ ಹೇಳಿದರು.

ಕಮ್ಯುನಿಸಂನ ಬಗ್ಗೆ ಹೇಳುತ್ತಾ ಅವರು, ಅದು "ಕೇವಲ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಸಂಬಂಧಗಳನ್ನು ಬದಲಿಸುತ್ತದೆ. ಆದರೆ ಅದರ ಶಕ್ತಿಗಳನ್ನು ಮರುಸೃಷ್ಟಿ ಮಾಡತೊಡಗುತ್ತದೆ. ಸಮಾಜವಾದ ವಾಸ್ತವವಾಗಿ ಈ ಎರಡರಲ್ಲೂ ಮೂಲಭೂತ ಬದಲಾವಣೆಗಳನ್ನು ತರಬೇಕು ಎಂದರು. "ಯಂತ್ರಜ್ಞಾನ"ವನ್ನು

ತಿರಸ್ಕರಿಸಬೇಕೆಂದು ಹೇಳಿದರೆ? ಇಲ್ಲ, ಎಂದಿಗೂ ಇಲ್ಲ. ಅವರು ಮುನ್ನೋಡಿದ್ದು "ಭಾರಿ ಯಂತ್ರವ್ಯವಸ್ಥೆ ಮತ್ತು ಅದರ ಸಹವರ್ತಿಯಾದ ರಾಕ್ಷಸೀಯ ರಾಜ್ಯವ್ಯವಸ್ಥೆ ಪ್ರಧಾನವಾಗುವುದನ್ನು ನಿರಾಕರಿಸುವಂತಹ ಸಂದರ್ಭವನ್ನಷ್ಟೆ. "ಹಿಂದುಳಿದ ದೇಶಗಳು ಎಂದಾದರೂ ಕಮ್ಯುನಿಸಂ ಮತ್ತು ಬಂಡವಾಳಶಾಹಿಗಳ ಸಾಮಾನ್ಯ ಆಶಯವಾದ, ಅಭಿವೃದ್ಧಿ ಹೊಂದಿದ ದೇಶಗಳ ಮಾದರಿಯನ್ನು ಆಧರಿಸಿ ತಮ್ಮನ್ನು ರೂಪಿಸಿಕೊಳ್ಳಲು ನಿರ್ಧರಿಸಿದ್ದೇ ಆದರೆ, ಆ ಸುದೀರ್ಘ ಬರ್ಬರತೆಯ ನೋವಿನ ಹಾದಿಯ ಕೊನೆಯಲ್ಲಿ ಸೋಲು ಮತ್ತು ಸೋಲನ್ನು ಮಾತ್ರ ಕಾಣಬಲ್ಲವು" ಎಂದು ಅವರು ವಾದಿಸಿದರು.

ಲೋಹಿಯಾ ಇಲ್ಲಿಗೇ ನಿಲ್ಲಲಿಲ್ಲ. ಯುರೋಪಿನ ಸಮಾಜವಾದ ಚಾರಿತ್ರಿಕ ಕಾರಣಗಳಿಂದಾದಂತೆ "ಸಾವಧಾನವಾಗಿ, ಶಾಸನಬದ್ಧವಾಗಿ ಹಾಗೂ ವಿವರಣಾತ್ಮಕವಾಗಿ ನಡೆಯದೆ; ಪ್ರಪಂಚದ ಇತರ ಭಾಗಗಳಲ್ಲಿ ಮತ್ತು ಇನ್ನು ಮುಂದೆ, ಸಮಾಜವಾದ. ತೀವ್ರವೂ, ಅಗತ್ಯ ಬಿದ್ದಾಗ ಅರಾಜ್ಯಾಂಗೀಯವೂ ಹಾಗೂ ಉತ್ಪಾದನೆಯ ಮೇಲೆ ತನ್ನ ಒತ್ತನ್ನು ಹೇರಬೇಕಾದುದೂ ಆಗಿದೆ'. ಆದರೆ ಇಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ ಯಾವುದು? ಮನವೊಲಿಸುವಿಕೆಯ ಹಾಗೂ ಕಾನೂನು ನಿರ್ಮಾಣ ಪ್ರಕ್ರಿಯೆಗಳು ಯಾವಾಗಲೂ ಉಪಲಬ್ಧವಿಲ್ಲದಿರುವುದರಿಂದ ಅಥವಾ ಅಕಾಲಿಕವಾಗಿರುವುದರಿಂದ ಸಮಾಜವಾದಿಗಳು ಅದಕ್ಕೆ "ವರ್ಗಹೋರಾಟದ ವಿಧಾನಗಳನ್ನು–ಅದರಲ್ಲೂ ಹಿಂದುಳಿದ ಪ್ರದೇಶಗಳಲ್ಲಿ–ಅಳವಡಿಸಬೇಕಾದುದು ಅಗತ್ಯ" ಎಂಬುದು ಅವರ ಉತ್ತರವಾಗಿತ್ತು. ಇವನ್ನು ಸಾಂಪ್ರದಾಯಿಕ ಹಾಗೂ ರೂಢಿಯಾಗಿರುವ ಅರ್ಥದಲ್ಲಿ ವರ್ಗಹೋರಾಟದ ಪರಿಕಲ್ಪನೆಯಾಗಿ ಬಳಸಬೇಕಿಲ್ಲ. ಹೋರಾಟದ ರೂಪ ಮತ್ತು ಸಂಘಟನೆ "ತಾಕ್ಷಣಿಕ ಫಲಿತಾಂಶದ ಪರೀಕ್ಷೆಗಳನ್ನು ಜಯಿಸಿಯೇ ಮುಂದೆ ಸಾಗಬೇಕಾಗುತ್ತದೆ" ಅಂದರೆ "ಹೋರಾಟದ ಪ್ರತಿಯೊಂದು ಕ್ರಿಯೆಯೂ ತನ್ನದೇ ಆದ ಸಮರ್ಥನೆಯನ್ನು ಪಡೆದಿರಬೇಕಾಗುತ್ತದೆ... ಅದು ಪ್ರಸ್ತುತ ರಾಷ್ಟ್ರೀಯ ಸ್ವಾತಂತ್ರ್ಯದ ತ್ಯಾಗವನ್ನು ಯಾವುದೋ ಕಾಣದ ಕಾಲದ ಏಕಜಗತ್ತಿನ ನಿರ್ಮಾಣದ ಹೆಸರಿನಲ್ಲಿ ಸಮರ್ಥಿಸಬಾರದು;ಭವಿಷ್ಯದ ಆರೋಗ್ಯಕ್ಕಾಗಿ ತಕ್ಷಣಕ್ಕೆ ಕೊಲೆಯೊಂದನ್ನು ಮಾಡುವಂತಹುದನ್ನು...ಸಮರ್ಥಿಸಬೇಕಾಗಿಲ್ಲ". ಅದೇ ಸಂದರ್ಭದಲ್ಲಿ "ಸಮಾಜವಾದಿ ವರ್ಗಹೋರಾಟ", ಅದರ ಕ್ರಾಂತಿಕಾರಿ ಚಟುವಟಿಕೆಯ ಉಗ್ರ ಸ್ವರೂಪವನ್ನು ಸಡಿಲಗೊಳಿಸಬಾರದು... ಅಹಿಂಸೆ ಎಂದರೆ ಹೋರಾಟದ ಪರಿತ್ಯಾಗ ಅಥವಾ ಸಾವಧಾನ ಅಂತ ಎಂದಾದರೂ ಅರ್ಥ ಪಡೆಯುವಂತಾದಲ್ಲಿ ಆಗ ಅದು ಮೃಗೀಯ ಹಿಂಸೆಯ ತೊಗಲನ್ನು ಹೊದ್ದುಕೊಂಡಿರುತ್ತದಷ್ಟೆ" ಎಂಬುದನ್ನು ಮರೆಯಬಾರದು. "ಹೊಸ ನಾಗರಿಕತೆಯೊಂದನ್ನು ಕಟ್ಟಲು ಆರಂಭಿಸುವಲ್ಲಿ ಕಮ್ಯುನಿಸಂ ಮತ್ತು ಬಂಡವಾಳಶಾಹಿಗಳೆರಡೂ ಸಮಾನವಾಗಿ ಅಸಂಬದ್ಧವಾದವು" ಎಂದು ಲೋಹಿಯಾ ಬಲವಾಗಿ ನಂಬಿದ್ದರು. ಆದರೆ ಈ ಸಾಮಾನ್ಯ ಅಸಂಬದ್ಧತೆಯ ಸಿದ್ಧಾಂತವನ್ನು ಸಮಾನವಾಗಿ ಕೆಡಕು ಬಗೆಯುವ ಅಥವಾ ಎರಡೂ ಮನೆಗಳಿಗೆ ಪ್ಲೇಗು, ಮಾರಿ

ಬಡಿಯಲಿ–ಧೋರಣೆ ಎಂದು ತಪ್ಪು ತಿಳಿಯಬಾರದು. ಕಮ್ಯುನಿಸಂ ಮತ್ತು ಬಂಡವಾಳಶಾಹಿಗಳು ಪ್ರಸ್ತುತ ನಾಗರಿಕತೆಯ ಸಂಕೀರ್ಣ ರಚನೆಯ ಎರಡು ಭಾಗಗಳಷ್ಟೆ ಎಂಬುದನ್ನು ಮಾತ್ರ ಮರೆಯಬಾರದು–ಅಷ್ಟೆ.

ಸಾಮಾಜಿಕ ಬದಲಾವಣೆಯ ಪರಿಣಾಮಕಾರಿ ಸಾಧನವಾಗಿ ಸಮಾಜವಾದಿ ಪಕ್ಷ ಪರಿಣಮಿಸಲು ಅದು ಎರವಲು ಪಡೆದ ಉಸುರಿನೊಂದಿಗೆ ಬದುಕುವುದನ್ನು ನಿಲ್ಲಿಸಬೇಕು. ಸಮಾಜವಾದಿಗಳು ಕಮ್ಯುನಿಸಂನಿಂದ ಅದರ ಆರ್ಥಿಕ ಗುರಿಗಳನ್ನೂ ಬಂಡವಾಳಶಾಹಿ ಅಥವಾ ಲಿಬರಲ್ ಯುಗದಿಂದ ಅವರ ಆರ್ಥಿಕೇತರ ಮತ್ತು ಸಾರ್ವತ್ರಿಕ ಗುರಿಗಳನ್ನು ಕಡ ತರುವುದನ್ನು ಮುಂದುವರೆಸಿದಲ್ಲಿ ಮುನ್ನಡೆಯುವುದು ಅಸಾಧ್ಯವೇ ಸರಿ. ಸಮಾಜವಾದಕ್ಕೆ ಒಂದು ಸುಭದ್ರ ತಳಪಾಯವನ್ನು ಒದಗಿಸುವುದು ತೀರ ಅಗತ್ಯವಾಗಿತ್ತು. ಮತ್ತು ಇದು ಗುದ್ದಲಿ, ಓಟು ಮತ್ತು ಸೆರೆಮನೆ ತತ್ವಕ್ಕೆ ಅಂಟಿಕೊಳ್ಳುವುದರ ಮೂಲಕ ಸಾಧ್ಯವಾಗಬೇಕು. ಇದನ್ನು ಲೋಹಿಯಾ ಕ್ರಿಯೆಯ ಮೂರು ಮುಖಗಳ ಸಾಂಕೇತಿಕರಣ ಎಂದು ಹೇಳಿ, ಇವು ಕ್ರಮವಾಗಿ ರಚನಾತ್ಮಕ ಕೆಲಸ, ಚುನಾವಣೆ ಮತ್ತು ಅನ್ಯಾಯಗಳಿಗೆ ಪ್ರತಿರೋಧದ ಸಂಕೇತಗಳೆಂದು ವಿವರಿಸಿದರು. ಅತ್ಯಂತ ಸ್ಪಷ್ಟವಾದ ಶಬ್ದಗಳಲ್ಲಿ ಅವರು ಕಾಂಗ್ರೆಸ್‌ನ ಜೊತೆ ಸಹಭಾಗಿತ್ವದ ಮಾತುಕತೆಗೆ ಅಥವಾ ಕಮ್ಯುನಿಸ್ಟರ ಜೊತೆ ಸಂಯುಕ್ತರಂಗಕ್ಕೆ ತಾವು ವಿರೋಧಿಗಳೆಂದು ಸಾರಿದರು. ಏಕೆಂದರೆ ಸಹಭಾಗಿತ್ವ ಅಥವಾ ಸಂಯುಕ್ತರಂಗದ ಮಾತುಕತೆಗಳು ವಾಸ್ತವವನ್ನು ಎದುರಿಸಲು ಮತ್ತು ಕಷ್ಟವಾದ ಹೋರಾಟದ ಹಾದಿಯನ್ನು ತುಳಿಯಲು ನಿರಾಕರಿಸುವ ಪ್ರಯತ್ನಗಳಷ್ಟೆ. ವಿನೋಬಾ ಭಾವೆಯವರ ಭೂದಾನ, ಸರ್ವೋದಯ ಚಳುವಳಿಯ ಬಗ್ಗೆ ಹೇಳುತ್ತಾ (ಅದು ಆ ವೇಳೆಗಾಗಲೇ ಸಮಾಜವಾದಿ ಪಕ್ಷದ ಅತ್ಯಂತ ಮಾಂತ್ರಿಕ ಮುಖಂಡರಾಗಿದ್ದ ಜಯಪ್ರಕಾಶ ನಾರಾಯಣರನ್ನು ಸೆಳೆದಿತ್ತು) ಲೋಹಿಯಾರವರು ಅದು ಈವರೆಗೂ ಅಸಮರ್ಪಕವಾದ ಪ್ರೀತಿಯ ಅಸ್ತ್ರವಾಗಿ ಉಳಿದಿದೆ. ಯಾವಾಗ ಪ್ರೀತಿ ಮತ್ತು ಕ್ರೋಧ–ಎಲ್ಲರ ಬಗ್ಗೆ ಪ್ರೀತಿ ಮತ್ತು ಅನ್ಯಾಯದ ಬಗ್ಗೆ ಕ್ರೋಧ–ಕ್ರಾಂತಿಯ ಮೂಲಕ ಜಂಟಿ ಅಭಿವ್ಯಕ್ತಿಯನ್ನು ಪಡೆಯಲು ಸಾಧ್ಯವಾಗುತ್ತದೆಯೋ ಆಗಲೇ ಮಾನವತ ತನ್ನ ಮುಂದಿನ ಹೆಜ್ಜೆಯನ್ನು ಇಡಲು ಸಾಧ್ಯವಾಗುತ್ತದೆ ಎಂದರು.

ಭಾರತೀಯ ಸಮಾಜವಾದ ತನ್ನ ಕೊರತೆಯಾಗಿದ್ದ, ಸಮಕಾಲೀನ ಸವಾಲುಗಳಿಗೆ ಸ್ಪಂದಿಸಿ ಉತ್ತರ ಕೊಡಬಲ್ಲಂಥ ಸಿದ್ಧಾಂತಿಯೊಬ್ಬನನ್ನು ಲೋಹಿಯಾರವರಲ್ಲಿ ಕಂಡುಕೊಂಡಿತೆಂದು ಸ್ವಲ್ಪ ಕಾಲದ ಮಟ್ಟಿಗಾದರೂ ಅನ್ನಿಸಿತ್ತು. ಆದರೆ ಬಹಳಷ್ಟು ಮಂದಿ ಏನಾದರೂ ಹೊಸತನ್ನು ಕಲಿಯಲಾಗಲಿ ಅಥವಾ ಹಳತನ್ನು ಮರೆಯಲಾಗಲಿ ಸಿದ್ಧರಿರಲಿಲ್ಲವೆಂಬುದು ಸ್ಪಷ್ಟವಾಗಲು ಹೆಚ್ಚು ಕಾಲ ಕಾಯಬೇಕಾಗಲಿಲ್ಲ. ಸಮಾಜವಾದಿ ಪಕ್ಷ ಮತ್ತು ಕಿಸಾನ್ ಮಜ್ದೂರ್ ಪ್ರಜಾಪಕ್ಷಗಳು ಪ್ರಜಾ ಸೋಶಲಿಸ್ಟ್ ಪಕ್ಷವಾಗಿ(ಪಿ.ಎಸ್.ಪಿ) ಜೆ.ಬಿ. ಕೃಪಲಾನಿ ಮತ್ತು ಲೋಹಿಯಾರವರ ಅಧ್ಯಕ್ಷತೆ ಮತ್ತು ಕಾರ್ಯದರ್ಶಿತ್ವಗಳಲ್ಲಿ

ವಿಲೀನಗೊಂಡಾಗ, ಸುಭಾಷರ ಫಾರ್ವರ್ಡ್ ಬ್ಲಾಕ್ ಕೂಡ ಅದರೊಡನೆ ೧೯೫೨ರಲ್ಲಿ ವಿಲೀನಗೊಂಡಿತು. ವ್ಯಕ್ತಿಕೇಂದ್ರಿತ ವಿರೋಧಾಭಿಪ್ರಾಯಗಳು ಸಮಾಜವಾದಿ ಚಳುವಳಿಯಲ್ಲಿ ತಲೆದೋರಿದವು. ಲೋಹಿಯಾ ತಮ್ಮ ಗುರಿಯನ್ನು ತುಂಬಾ ಜಾಗರೂಕತೆಯಿಂದ ಆರಿಸಿಕೊಂಡಿದ್ದು, ಅದಕ್ಕೆ ಬದ್ಧವಾಗಿ ನಡೆಯಲು ನಿರ್ಧರಿಸಿದ್ದರು. ವಿರೋಧ ಪಕ್ಷದ ಅಸ್ತ್ರಗಳು ಬೇರಾರೂ ಅಲ್ಲದೆ ಪ್ರಧಾನಿ ನೆಹರೂರವರ ವಿರುದ್ಧ ಕೇಂದ್ರೀಕರಿಸಿರಬೇಕು ಹಾಗೂ ಕಾಂಗ್ರೆಸ್‌ನ ಹಿಡಿತವನ್ನು ಹಿಂದಿ ಮಾತೃಭಾಷೆಯ ಪ್ರದೇಶಗಳ ಹಿಡಿತದಿಂದ–ಅದರಲ್ಲೂ ಉತ್ತರಪ್ರದೇಶದ ಕೈಯಿಂದ ಮೊದಲು–ತಪ್ಪಿಸಬೇಕು ಎಂಬುದು ಅವರ ಅಚಲವಾದ ವಿಶ್ವಾಸವಾಗಿತ್ತು.

ಆದರೆ ಅವರು ತಮ್ಮ ಗೆಳೆಯರ ಅಭಿಪ್ರಾಯ ಪರಿಗಣಿಸದೆ ಹೋದಂತೆ ಕಂಡರು. ೧೯೫೩ರಲ್ಲಿ ಮೊದಲಿಗೆ ಜಯಪ್ರಕಾಶರು ನೆಹರೂರವರ ಆಹ್ವಾನದ ಮೇರೆಗೆ ಅವರೊಂದಿಗೆ ಮಾತುಕತೆಗಳನ್ನು ಆರಂಭಿಸಿದರು. ಇದರ ಉದ್ದಿಶ್ಯ ಜಯಪ್ರಕಾಶರ ೧೪ ಅಂಶಗಳ ಕಾರ್ಯಕ್ರಮವೊಂದನ್ನು ಆಧರಿಸಿ ಪಿ.ಎಸ್.ಪಿ ಎಲ್ಲ ಹಂತಗಳಲ್ಲಿ ಕಾಂಗ್ರೆಸ್‌ನೊಡನೆ ಅಧಿಕಾರವನ್ನು ಹಂಚಿಕೊಳ್ಳುವ ಸಾಧ್ಯತೆಯನ್ನು ಪರಿಶೀಲಿಸುವುದಾಗಿತ್ತು. ನೆಹರೂ–ಜಯಪ್ರಕಾಶರ ಮಾತುಕತೆಗಳು ಇನ್ನೂ ವಿಫಲವಾಗುತ್ತಿದ್ದಂತೆಯೇ ಪಿ.ಎಸ್.ಪಿಯ ಮಹಾ ಐವರಲ್ಲಿ ಒಬ್ಬರೆನಿಸಿದ್ದ ಶ್ರೀ ಅಶೋಕ ಮೆಹತಾರವರು ತಮ್ಮ "ಹಿಂದುಳಿದ ಅರ್ಥವ್ಯವಸ್ಥೆಯ ರಾಜಕೀಯ ಅನಿವಾರ್ಯತೆಗಳು" ಎಂಬ ಹೊಸ ಸಿದ್ಧಾಂತ ತಂದು, ಬೇರೆ ಅಂಶಗಳ ಜೊತೆ "ಸಾಮಾಜಿಕ ಬೆಳವಣಿಗೆಗಾಗಿ ಪ್ರಜಾಪ್ರಭುತ್ವವಾದಿ ಪಕ್ಷಗಳ ನಡುವೆ, ಪ್ರಸ್ತುತ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಪಿ.ಎಸ್.ಪಿಗಳ ಸಹಕಾರವನ್ನು" ಸಲಹೆ ಮಾಡಿದರು. ಇದು ನಡೆಯುತ್ತಿದ್ದ ಸಂಗತಿಗಳ ಮೇಲೆ ಬರೆ ಎಳೆದಂತಾಯಿತು. ಇಂತಹ ಪ್ರಯತ್ನಗಳಿಗೆ ಲೋಹಿಯಾ ನೀಡಿದ ಒಂದೇ ವಿವರಣೆ ಎಂದರೆ, "ದಣಿದ" ಕೆಲವು ಮಂದಿ ರೆಕ್ಕೆ ಪುಕ್ಕಗಳಿಗಾಗಿ ಹಕ್ಕಿಯನ್ನು ಕೊಲ್ಲಲು ಶತಾಯ–ಗತಾಯ ಪ್ರಯತ್ನಿಸುತ್ತಿದ್ದಾರೆ ಎಂಬುದು. ೧೯೫೪ರಲ್ಲಿ ತಿರುವಾಂಕೂರು–ಕೊಚ್ಚಿ ಪ್ರಾಂತ್ಯದಲ್ಲಿ(ಇಂದಿನ ಕೇರಳ) ಕಾಂಗ್ರೆಸ್ ಬೆಂಬಲ ಪಡೆದ ಪಿ.ಎಸ್.ಪಿ (ಅಲ್ಪಮತದ) ಸರಕಾರವಿದ್ದು, ಅದು ನಿಃಶಸ್ತ್ರರಾದ ಪ್ರದರ್ಶನಕಾರರ ಮೇಲೆ ಗುಂಡು ಹಾರಿಸಿದಾಗ ಸಂಭವಿಸಿದ ನಾಲ್ಕು ಮಂದಿ ಮಡಿದ ಘಟನೆ ಪಕ್ಷಕ್ಕೆ ಕೊನೆಯ ಕುತ್ತನ್ನು ತಂದಿತು. ಪಕ್ಷದ ಕಾರ್ಯದರ್ಶಿಯಾಗಿ ಲೋಹಿಯಾರವರು (ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆ ವೇಳೆಗಾಗಲೇ ಹನ್ನೊಂದು ಬಾರಿ ಜೈಲುವಾಸವನ್ನನುಭವಿಸಿದ್ದು, ಆಗ ತೆರಿಗೆ–ತೆರಬೇಡಿ ಚಳವಳಿಯೊಂದರ ಮುಂದಾಳತ್ವವನ್ನು ವಹಿಸಿದ್ದಕ್ಕಾಗಿ ಉತ್ತರ ಪ್ರದೇಶದ ಜೈಲೊಂದರಲ್ಲಿದ್ದರು) ಪಿ.ಎಸ್.ಪಿ ಸರಕಾರ ತಕ್ಷಣ ರಾಜೀನಾಮೆ ನೀಡಬೇಕೆಂದು ಆಗ್ರಹಪಡಿಸಿದರು. ಅವರ ವಾದ ಸಮಾಜವಾದಿ ಚಳವಳಿಯ ತರ್ಕ ಮತ್ತು ತತ್ವಗಳಿಂದಲೇ ತನ್ನ ಆಧಾರವನ್ನು ಪಡೆದಿತ್ತಾದರೂ, ಅವರ ಮಾತಿಗೆ ಯಾರೂ ಕಿವಿಗೊಡಲೇ ಇಲ್ಲ.

ನೆಹರು-ಜಯಪ್ರಕಾಶರ ಮಾತುಕತೆಗಳು ಅವರನ್ನು ಕೈಕಟ್ಟಿ ಕೂರುವಂತೆ ಮಾಡಿದ್ದರೆ, ತಿರುವಾಂಕೂರು ಕೊಚ್ಚಿಯ ಬೆಳವಣಿಗೆಗಳು ಅವರ ಭಯವನ್ನು ಮತ್ತಷ್ಟು ಶೃತಪಡಿಸಿದವು-ಪಕ್ಷದ ಮುಖಂಡರ ಗಣನೀಯವಾದ ಭಾಗವೊಂದು ಅಧಿಕಾರಕ್ಕಾಗಿ ಕೈಚಾಚುವುದರಲ್ಲಿ ತುಂಬಾ ಉತ್ಸುಕತೆಯಿಂದಿತ್ತು. ಎರಕ ಆಗಲೇ ಹುಯ್ದಾಗಿತ್ತು. ಪಕ್ಷವನ್ನು ಒಡೆಯಲು ಮತ್ತು ಅದಕ್ಕೆ ಕಾರಣಕರ್ತರು ಮತ್ತೊಂದು ಬಣವೆಂದು ಕಾಣುವಂತಾಗಲೂ ಲೋಹಿಯಾ ತಂತ್ರಗಳನ್ನು ಹೂಡಿದರು. ಉತ್ತಮ ತಂತ್ರಪರಿಣತರಾಗಿದ್ದ ಅವರು, ತಾವು ಬಯಸಿದ್ದ ರೀತಿಯಲ್ಲೇ ಅದು ನೆರವೇರುವಂತೆ ಮಾಡಿದರು. ಜುಲೈ ೧೯೫೫ರಲ್ಲಿ ಜಯಪ್ರಕಾಶರ ಗೊತ್ತುವಳಿಯಾದ "ಪಕ್ಷವನ್ನು ಒಡೆಯುವ ಚಟವಟಿಕೆಗಳನ್ನು ನಡೆಸಿದ್ದಕ್ಕಾಗಿ ಡಾ. ಲೋಹಿಯಾ ಮತ್ತು ಅವರ ಸಹವರ್ತಿಗಳ ವಿರುದ್ಧ ಶಿಸ್ತುಕ್ರಮವನ್ನು ಕೈಗೊಳ್ಳುವುದನ್ನು" ಪಕ್ಷ ಅನುಮೋದಿಸಿತು. ಇಲ್ಲಿಂದ ಸುರುವಾದ ಹೋರಾಟದ ಹಾದಿ ೧೯೫೬ರ ಜನವರಿಯ ಮೊದಲ ಭಾಗದಲ್ಲಿ ಲೋಹಿಯಾರವರ ನೇತೃತ್ವದಲ್ಲಿ ಸಮಾಜವಾದಿ ಪಕ್ಷ ಜನ್ಮ ತಾಳುವವರೆಗೆ ಪಿ.ಎಸ್.ಪಿಯಲ್ಲಿ ತೀವ್ರಗಾಮಿ ರಾಜಕೀಯ ಮತ್ತು ಆಂತರಿಕ ಪ್ರಜಾಪ್ರಭುತ್ವಗಳ ಅಂಶಗಳ ಮೇಲೆ ಆವಿರ್ಭವಿಸಿದ ಬಿಕ್ಕಟ್ಟಿನಿಂದಾದ ಕಿರುಹೆಜ್ಜೆಯಾಗಿತ್ತು. ಪಕ್ಷಪದ್ಧತಿಗೆ ದಾರಿ ಮಾಡಿಕೊಡುವ ಸಂಸದೀಯ ಪ್ರಜಾಪ್ರಭುತ್ವವೇ ದೇಶದ ಎಲ್ಲ ಅನಿಷ್ಟಗಳಿಗೆ ಕಾರಣವೆಂದು ನಂಬಿಕೊಂಡ ಜಯಪ್ರಕಾಶರು, ಪಿ.ಎಸ್.ಪಿ ಪಕ್ಷದ ತಮ್ಮ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡಿ ತಮ್ಮ ಪಕ್ಷರಹಿತ ರಾಜಕೀಯವನ್ನು ಅರಸುವ ಮಹಾಪ್ರಯಾಣವನ್ನು ಆರಂಭಿಸಿದರು.

ಮಹತ್ತರವಾದ ಆಕಾಂಕ್ಷೆ ಮತ್ತು ಉತ್ಸಾಹಗಳಿಂದ ಲೋಹಿಯಾ ಸಮಾಜವಾದಿ ಪಕ್ಷವನ್ನು ರೂಪುಗೊಳಿಸುವಲ್ಲಿ ತಮ್ಮನ್ನೇ ತಾವು ಉದ್ಯುಕ್ತರಾಗಿಸಿಕೊಂಡರು. ಹಲವರನ್ನು ಮನುಷ್ಯರನ್ನಾಗಿ ಮಾಡಿದರು. ಉದಾ: ರಾಜನಾರಾಯಣ, ಜಾರ್ಜ್ ಫರ್ನಾಂಡಿಸ್, ರಬಿರಾಯ್, ಮಧು ಲಿಮಯೆ, ದಿನೇಶ್‌ದಾಸ್ ಗುಪ್ತ, ಕಿಶನ್ ಪಟ್ನಾಯಕ್, ಬಾಲಕೃಷ್ಣ ಗುಪ್ತ, ಲೋಕನಾಥ ಜೋಷಿ, ಬದ್ರಿ ವಿಶಾಲ್ ಪಿಟ್ಟಿ ಮತ್ತು ಸೈಫುದ್ದೀನ್ ಕಾಶ್ಮೀರಿ. ಅವರಲ್ಲಿ ನಿರ್ಮಾಣ ಮತ್ತು ಹೋರಾಟದ ನಿರಂತರ ಕಾರ್ಯಕ್ರಮದ ಹಾಗೂ ಜನಾಭಿಮತದ ಅತ್ಯಂತ ಶ್ರೇಷ್ಠ ಅಭಿವ್ಯಕ್ತಿಯಾದ ಓಟು ಇಂತಹ ಪ್ರಮುಖ ವಿಷಯಗಳನ್ನು ಮನದಟ್ಟು ಮಾಡಿದರು. ಸಮಾಜವಾದದ ತಾತ್ವಿಕ ಚೌಕಟ್ಟನ್ನು ಪುನರ್‌ರೂಪಿಸಲು ನಾಲ್ಕು ಸ್ತಂಭಗಳ ರಾಜ್ಯ, ಅಧಿಕಾರ ವಿಕೇಂದ್ರೀಕರಣ, ಮಧ್ಯಸ್ಥ ತಂತ್ರಜ್ಞಾನ (intermediate technology) ಮತ್ತು ಸಣ್ಣ ಯಂತ್ರಘಟಕಗಳ ಪರಿಕಲ್ಪನೆಯ ಅಗತ್ಯವನ್ನು ಒತ್ತಿ ಹೇಳಿದರು. ಅವರು ನೋಡಿದಂತೆ "ಜನಸಮುದಾಯ...ಬಂಡಾಯದ ಶಕ್ತಿಯನ್ನೇ ಕಳೆದುಕೊಂಡು ಬಿಟ್ಟಿದೆ". ಬೇರೆ ಕಾರಣಗಳ ಜೊತೆ, ಇದಕ್ಕೆ ಇಂಗ್ಲಿಷ್ ಮೋಹದ ಶೇಕಡಾ ಒಂದರಷ್ಟು ಭಾಗವಿರುವ ಶ್ರೀಮಂತರು, ಮೇಲುಜಾತಿಯವರು ಮತ್ತು ವಿಶೇಷ ಸವಲತ್ತುದಾರರು, ಉಳಿದ

ತೊಂಬತ್ತೊಂಭತ್ತು ಭಾಗದಷ್ಟು ಜನಸಂಖ್ಯೆಯನ್ನು ನಿರಂತರ ದಾಸ್ಯದಲ್ಲಿಟ್ಟಿದ್ದಾರೆ...ಕಾಂಗ್ರೆಸ್, ಜನಸಂಘ, ಕಮ್ಯುನಿಸ್ಟ್ ಮತ್ತು ಪ್ರಜಾಸೋಶಲಿಸ್ಟ್ ಪಕ್ಷಗಳೆಲ್ಲವೂ ಈ ಶೇಕಡಾ ಒಂದರಷ್ಟಿರುವ ಮೇಲುವರ್ಗದವರಿಂದ ಆಕ್ರಮಿಸಲ್ಪಟ್ಟಿರುವುದು ಕಾರಣವಾಗಿದೆ. "ಇದೊಂದು ವಿಷವ್ಯೂಹವಾಗಿದ್ದು, ಸಂಪೂರ್ಣ ಬಂಡಾಯವೊಂದೇ ಹೊರದಾರಿಯಾಗಿದೆ". ಆದರೆ ಇದನ್ನು ಸಾಧ್ಯ ಮಾಡುವುದಾದರೂ ಹೇಗೆ? ಸಂಪೂರ್ಣ ಸಮಾನತೆ ಇರುವೆಡೆಯಾಗಲೀ ಅಥವಾ ರಾಕ್ಷಸೀಯ ಅಸಮಾನತೆ ಇರುವೆಡೆಯಾಗಲೀ ಕ್ರಾಂತಿ ಸಾಧ್ಯವಿಲ್ಲ. ಮೊದಲನೆಯದರಲ್ಲಿ ಕ್ರಾಂತಿ ಅನಗತ್ಯವಾಗಿದ್ದರೆ, ಎರಡನೆಯದರಲ್ಲಿ ಬಂಡಾಯಕ್ಕೆ ತ್ರಾಣವೇ ಇರುವುದಿಲ್ಲ ಎಂಬುದು ಅವರಿಗೆ ಗೊತ್ತಿತ್ತು. ಆದ್ದರಿಂದ ಈಗ ಮಾಡಬೇಕಾದುದೆಂದರೆ ಸ್ತರೀಕೃತ ಸಾಮಾಜಿಕ ರಚನೆಯನ್ನು ತಲ್ಲಣಗೊಳಿಸುವುದು. ಈ ದಿಕ್ಕಿನಲ್ಲಿ ಒಂದು ಹೆಜ್ಜೆಯಾರಿ, ರಾಷ್ಟ್ರದ ಮುಖಂಡತ್ವಕ್ಕೆ ಸಾರ ತುಂಬುವುದು...ಹೆಂಗಸರು, ಶೂದ್ರರು, ಹರಿಜನರು, ಮುಸ್ಲಿಮರು ಹಾಗೂ ಆದಿವಾಸಿಗಳ ಪರಮ ಕಾಳಜಿಯಾಗುವಂತಾಗಲು, ಇಂಗ್ಲಿಷನ್ನು ತೊಲಗಿಸುವುದು ಅಗತ್ಯವಾಗಿದೆ.

ಇಷ್ಟಾದರೂ ಸಮಾಜವಾದಿ ಪಕ್ಷದ ರಚನೆಯ ನಂತರದ ಎರಡು ಚುನಾವಣೆಗಳು ಸ್ಥೂಲಕಾಯದ ಕಾಂಗ್ರೆಸ್‌ನ ಅಡಿಗಲ್ಲು ದುರ್ಬಲವಾಗುತ್ತಿದೆ ಎಂಬುದನ್ನು ಕೊಂಚ ಕೂಡಾ ಸೂಚಿಸಲಿಲ್ಲ. ಇದಲ್ಲದೆ ಪಾರ್ಲಿಮೆಂಟಿಗೆ ಆಯ್ಕೆಯಾಗುವಲ್ಲಿನ ಅವರ ಎರಡು ವೈಫಲ್ಯಗಳು(ಅವರು ಎಂ.ಪಿ. ಆಗಿ ಆಯ್ಕೆಯಾದದ್ದು ೧೯೬೩ರ ಉಪಚುನಾವಣೆಯೊಂದರಲ್ಲಿ) ಲೋಹಿಯಾರನ್ನು ಅಲುಗಾಡಿಸಿದ್ದು ಸ್ವಲ್ಪವೇನಲ್ಲ. ನಂತರದಲ್ಲಿನ ಅವರ ಭಾಷಣಗಳು ಹಾಗೂ ಕ್ರಿಯೆಗಳು ಅಸಹನೆಯ ಚಿಹ್ನೆಗಳನ್ನೇನೋ ಹೊಂದಿವೆ; ಅವರು ಆತುರಶೀಲರಾಗಿದ್ದರು ಎಂಬುದನ್ನೂ ಸೂಚಿಸುವಂತಿವೆ. ಸಮಾಜವಾದಿ ಪಕ್ಷ ಏಕಾಂಗಿಯಾಗಿ ಮುನ್ನುಗ್ಗಲು ಸಾಧ್ಯವಾಗದೆಂಬ ಮತ್ತು ಪರಿಸ್ಥಿತಿ ಕೊಂಚ ಮಟ್ಟಿನ ತಂತ್ರಪರಿಣತಿಯನ್ನು ಬೇಡುತ್ತದೆ ಎಂಬ ಅಭಿಪ್ರಾಯಕ್ಕೆ ತಲುಪಿದ್ದಂತೆ ಅವರು ಕಾಣುತ್ತಿದ್ದಾರೆ. "ಎಲ್ಲ ಸೇರಿದ ಕಾಂಗ್ರೆಸ್ಸೇತರವಾದ"ದ ಲೋಹಿಯಾ ಅವರ ಕರೆ ಭಾರತೀಯ ರಾಜಕಾರಣದ ಅನಿವಾರ್ಯತೆಗಳನ್ನು ಸೂಚಿಸುವುದರ ಜೊತೆಗೆ ಕಾಂಗ್ರೆಸ್ಸನ್ನು ಅಧಿಕಾರದಿಂದ ದೂರವಿಡಲು ದೆವ್ವಗಳೊಡನೆ ಕೂಡಾ–ಸಾಕಷ್ಟು ದೂರವಿದ್ದುಕೊಂಡೇ–ಸರಸವಾಡಲು ಹಿಂಜರಿಯದವರ ಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ. ಇದು ಅವರಿಗೆ ಸಾಕಷ್ಟು ಯಶಸ್ಸು ತಂದುಕೊಟ್ಟಿತೆಂಬುದಕ್ಕೆ ನಾಲ್ಕನೇ ಸಾರ್ವತ್ರಿಕ ಚುನಾವಣೆಗಳೇ ಸಾಕ್ಷಿ. ಆದರೆ ಅವರು ತಮ್ಮ ಈ ಸಫಲತೆಗಳ ಮೇಲೆ ಮೈಚೆಲ್ಲಿ ಆರಾಮವಾಗಲಿಲ್ಲ. ಅಥವಾ ತಮ್ಮ ಅನುಯಾಯಿಗಳಿಗೇ ಛೀಮಾರಿ ಹಾಕಲು ಹಿಂದೆಗೆಯಲಿಲ್ಲ; ತಮ್ಮಿಂದಾಗಿ, ಕೆಲವು ರಾಜ್ಯಗಳಲ್ಲಿನ ಅಧಿಕಾರದ ಅಂಗಣಗಳಿಗೆ ನುಗ್ಗಿ ಹೋಗಿದ್ದ ಅನುಯಾಯಿಗಳ ಪೈಕಿ ತಾವು ರೂಪಿಸಿದ್ದ ನೋವು ಸಂಕಷ್ಟಗಳ ಹಾದಿಯಿಂದ ಕೊಂಚ ಸರಿಯಲು ಯತ್ನಿಸಿದ ಯಾರೊಬ್ಬರೂ ಇವರ ಆರ್ಭಟಕ್ಕೆ

ಒಳಗಾಗದೆ ಇರಲಿಲ್ಲ. ಏಕೆಂದರೆ ಭಾರತೀಯ ಸಮಾಜವಾದ ತಾನು ಭರವಸೆ ನೀಡಿದ್ದ ಸುದಿನಗಳನ್ನು ನಿರ್ಮಿಸಲು ಇನ್ನೂ ಸಾಕಷ್ಟು ದೂರ ಕ್ರಮಿಸಬೇಕಿತ್ತು.

ಇಷ್ಟು, ಸಾಕಷ್ಟು ದೌರ್ಬಲ್ಯಗಳಿದ್ದ ಮನುಷ್ಯನೊಬ್ಬನ ಸರಿಸುಮಾರು ಪರಿಪೂರ್ಣ ವ್ಯಕ್ತಿಚಿತ್ರ. ಹಾಗೆ ನೋಡಿದರೆ ದೌರ್ಬಲ್ಯಗಳು ಯಾರಲ್ಲಿಲ್ಲ? ಅಪರಿಪೂರ್ಣವಾಗಿರುವುದು ಮನುಷ್ಯನ ವಿಶೇಷ ಸವಲತ್ತುಗಳಲ್ಲೊಂದಲ್ಲವೆ? ದೇವರು ಇದ್ದಾನೆ, ಪ್ರಾಣಿಗಳು ಇವೆ. ಆದರೆ ಮನುಷ್ಯ ಭಾಗಶಃ ಇದ್ದಾನೆ ಮತ್ತು ಭಾಗಶಃ ತಾನೇನಾಗಬೇಕೆಂಬುದರ ಆಶಯಗಳಾಗಿದ್ದಾನೆ. (God is, animals are; but man partly is and partly what he aspires to be) ಎಂದು ಹೇಳಲಾಗಿಲ್ಲವೆ? ಲೋಹಿಯಾ ರಾಜಕೀಯ ಹಂತದಲ್ಲಿ ಧಾರಾಳವಾಗಿರಲು ಅಸಮರ್ಥರಾಗಿದ್ದರು. ಮೂರ್ಖರನ್ನು ಅವರು ಖುಷಿಯಿಂದ ಸಹಿಸುತ್ತಿದ್ದರು. ಆದರೆ ತಮ್ಮ ತಾತ್ವಿಕ ಚೌಕಟ್ಟುಗಳನ್ನು ಪ್ರಶ್ನಿಸಬಹುದಾದ ಯಾರೊಂದಿಗೂ ಅವರಿಗೆ ಸಹನೆ ಪ್ರದರ್ಶಿಸಲಾಗುತ್ತಿರಲಿಲ್ಲ. ಪಕ್ಷದ ಸಹವರ್ತಿಗಳೂ ಸೇರಿದಂತೆ ಅವರ ವಿರೋಧಿಗಳು ಅವರಿಂದ ಕ್ಷಮೆಯನ್ನಾಗಲೀ ಸಹಾನಭೂತಿಯನ್ನಾಗಲೀ ನಿರೀಕ್ಷಿಸುವಂತಿರಲಿಲ್ಲ. ನಿನ್ನೆಯ ತಿಕ್ಕಾಟಗಳನ್ನು ಮತ್ತು ವಿವಾದಗಳನ್ನು ಪೂರಾ ಮರೆತುಬಿಡುವುದು ಅವರ ವಾಡಿಕೆಯಾಗಿರಲಿಲ್ಲ. ತಮ್ಮೊಂದಿಗೆ ಭಿನ್ನಾಭಿಪ್ರಾಯಕ್ಕೆ ಇಳಿಯುವುದರೊಂದಿಗೆ ಚರ್ಚೆ ಸುರು ಮಾಡಿದೊಡನೆ ಅವರ ನಾಲಿಗೆ ಹಲ್ಲಾಗಿಬಿಡುತ್ತಿತ್ತು. ಮತ್ತು ಲೇಖನಿ ಎರೆದು ಹಾಕುವ ಕತ್ತಿಯಾಗಿಬಿಡುತ್ತಿತ್ತು.

ಜಯಪ್ರಕಾಶರ ಬಗ್ಗೆ ತಮ್ಮ ಪುಸ್ತಕ "ಭಾರತದ ವಿಭಜನೆಯ ಅಪರಾಧಿಗಳು– (Guilty Men of Indias Partotion) " (ಪ್ರಕಟನೆ: ೧೯೬೦ ಡಿಸೆಂಬರ್)ನಲ್ಲಿ ಅವರು ಆಡಿರುವ ಮಾತುಗಳು ನಿದರ್ಶನವಾಗಿ ನಿಲ್ಲುತ್ತವೆ: "ಶ್ರೀ ನೆಹರೂರಲ್ಲಿ ಅಡಗಿದ್ದ ಅಪೂರ್ವ ಚಾಣಾಕ್ಷತೆ, ಗಾಂಧೀಜಿ ಹತ್ಯೆಯ ಅಂತಿಮ ಹೊಣೆ ಯಾರದ್ದು ಎಂಬ ಬಗ್ಗೆ ವಿವಾದದ ಮೂಲಕ ಪ್ರಕಟವಾಯಿತು. ಹತ್ಯೆಯ ಕೆಲವು ದಿನಗಳ ನಂತರ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ಶ್ರೀ ಜಯಪ್ರಕಾಶ ನಾರಾಯಣರು ನನ್ನ ಬಳಿ ಬಂದು ಒಂದು ಜಂಟಿ ಹೇಳಿಕೆಗೆ ನಾನು ಸಹಿ ಹಾಕುವಂತೆ ಬಯಸಿದರು. ಅದರಲ್ಲಿ ಹಲವಾರು ಸಲಹೆಗಳ ಜೊತೆಗೆ ಸರ್ದಾರ್ ಪಟೇಲರನ್ನು, ಅವರು ಗೃಹಮಂತ್ರಿಯ ಹೊಣೆಗಾರಿಕೆಯನ್ನು ನಿರ್ಲಕ್ಷಿಸಿದ್ದಕ್ಕಾಗಿ ಹಲವು ಖಾತೆಗಳನ್ನು ವಹಿಸಿಕೊಂಡಿರುವುದಕ್ಕಾಗಿ ದೂಷಿಸಲಾಗಿತ್ತು. ನಾನು ಹೇಳಿಕೆಯ ಈ ಭಾಗವನ್ನು ಆಕ್ಷೇಪಿಸಿ ಇದನ್ನು ಹಲವಾರು ಖಾತೆಗಳನ್ನು ವಹಿಸಿಕೊಂಡಿದ್ದ ಪ್ರಧಾನಮಂತ್ರಿ ಶ್ರೀ ನೆಹರೂ ಅವರನ್ನೂ ಸೇರಿಸಿದಂತೆ ಒಂದಕ್ಕಿಂತ ಹೆಚ್ಚು ಖಾತೆಗಳನ್ನು ಹೊಂದಿರುವ ಎಲ್ಲ ಮಂತ್ರಿಗಳಿಗೂ ಅನ್ವಯಿಸುವಂತೆ ಸಾರ್ವತ್ರಿಕರಿಸಲು ಸೂಚಿಸಿದೆ. ನಾವು ಕೊಂಚ ಹೊತ್ತು ಇದರ ಬಗ್ಗೆ ಬಿಸಿಯೇರಿದ ಚರ್ಚೆ ಮಾಡಿದೆವು. ಕೊನೆಗೆ ಅವರಿಬ್ಬರು ನನ್ನ ಸಹಿಯಿಲ್ಲದೆ ಹೋಗಬೇಕಾಯಿತು. ಮಾರನೇ ದಿನ ಅವರಿಬ್ಬರೂ ನಾನು ಸೂಚಿಸಿದ

ಬದಲಾವಣೆಯೊಂದಿಗೆ ಬಂದರು. ಜಂಟಿ ಹೇಳಿಕೆ ಬಿಡುಗಡೆ ಮಾಡಿದ ಪತ್ರಿಕಾಗೋಷ್ಠಿಯಲ್ಲಿ, ಒಂದಕ್ಕಿಂತ ಹೆಚ್ಚು ಖಾತೆಗಳನ್ನು ಹೊಂದಿರುವ ಶ್ರೀ ಜಯಪ್ರಕಾಶ ನಾರಾಯಣರಿಂದ ನಿರ್ದಿಷ್ಟವಾಗಿ ಸರ್ದಾರ ಪಟೇಲರತ್ತಲೇ ಸೂಚಿತವಾಯಿತು... ದೂಷಣೆಯೂ ಸೇರಿದಂತೆ ನಮ್ಮ ಸಲಹೆಗಳು ಪಡೆದ ಪ್ರಚಾರ ಅಮೋಘವಾದದ್ದು. ಇದು ಸರ್ದಾರ ಪಟೇಲರನ್ನು, ಅಳಿಸಲಾಗದಂತಹ ಕಳಂಕಕ್ಕೆ ಗುರಿ ಮಾಡುವುದರ ಮೂಲಕ ಶ್ರೀ ನೆಹರೂ ಅವರಿಗೆ ಮಹತ್ತರ ಸಹಾಯ ಮಾಡಿತಲ್ಲದೆ ಜನತೆಯ ಅಳತೆಗೋಲಿನಲ್ಲಿ ಶ್ರೀ ನೆಹರೂ ಅವರು ಮೇಲಕ್ಕೇರಲೂ ಸಹಾಯವಾಯಿತು... ತದನಂತರ ಪಟೇಲರ ಬೆಂಬಲಿಗರು ಎಬ್ಬಿಸಿದ ಹುಯಿಲಿನಿಂದಾಗಿ ಶ್ರೀ ಜಯಪ್ರಕಾಶ ನಾರಾಯಣರು ತಮ್ಮದೇ ಆದ ಚಾಕಚಕ್ಯತೆ ಮತ್ತು ಸಾಮರ್ಥ್ಯದಿಂದ ಬಚಾಯಿಸಿಕೊಳ್ಳಲಾಗದಂತಹ ಮಡುವಿನಲ್ಲಿ ಬಿದ್ದಾಗ ಅವರ ರಕ್ಷಣೆಗೆ ಶ್ರೀ ನೆಹರೂ ಬಂದರು. ಶ್ರೀ ನೆಹರೂ ತಮ್ಮ ಆಶ್ರಿತನನ್ನು–ಈ ಸಂದರ್ಭದಲ್ಲಿ ಓರ್ವ ಸಮರ್ಥ ಏಜೆಂಟನಾಗಿದ್ದವರನ್ನು–ಅತ್ಯದ್ಭುತ ಉದಾರತೆ ಹಾಗೂ ಅಪಾರ ಸಾರ್ವಜನಿಕ ಶ್ಲಾಘನೆಯೊಡನೆ ರಕ್ಷಿಸಿದರು."

ಇಷ್ಟಾದರೂ ಕೂಡಾ, ಕಟ್ಟುನಿಟ್ಟುತೆ ಹಾಗೂ ಒಂದು ರೀತಿಯ ಸಂಪ್ರದಾಯತೀತವಾದ ತತ್ವಾವೃತವಾದೀತನದ ನೋಟದ ಹಿಂದೆ ಅವರು ತಮ್ಮ ಪ್ರೀತ್ಯತೆ, ಸಂವೇದನಾಶೀಲತೆ ಹಾಗೂ ಸಹಿಷ್ಣುತೆಗಳನ್ನು ಮುಚ್ಚಿಟ್ಟಿದ್ದರು. ತಮ್ಮನ್ನ ನೆರಳಿನಂತೆ ಅನುಸರಿಸಿದ ಪರಿವಾರದ ಹೊರತಾಗಿಯೂ ಅವರು ಏಕಾಂಗಿಯೇ ಆಗಿದ್ದರು; ಪ್ರೀತಿ ಮತ್ತು ಆತ್ಮೀಯತೆಗಾಗಿ, ತಾವು ಮನೆಯೆಂದು ಕರೆಯಬಹುದಾದ ಒಂದು ಸ್ಥಳಕ್ಕಾಗಿ ಹಂಬಲವಿಲ್ಲದವರೇನೂ ಅವರಾಗಿರಲಿಲ್ಲ. ನಲವತ್ತರ ದಶಕದ ಕೊನೆಯಲ್ಲಿ ಅವರು ಜಯಪ್ರಕಾಶರಿಗೆ(ಹಿಂದಿಯಲ್ಲಿ) ಬರೆದ ಪತ್ರ ಸ್ವಲ್ಪ ಮಟ್ಟಿಗೆ ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಅದರ ಭಾವಾನುವಾದ ಹೀಗಿದೆ: "ಪ್ರಿಯ ಜಯಪ್ರಕಾಶ್...ನಿಮಗಾದರೆ ಹೆಂಡತಿ, ತಮ್ಮ ಹಾಗೂ ಸೋದರಳಿಯ ಇದ್ದಾರೆ. ನಿಮಗೆ ದೇಶದೊಡನೆ ಆತ್ಮೀಯ ಸಂಬಂಧವಿದೆ..." ಬ್ರಹ್ಮಚಾರಿ ಲೋಹಿಯಾಗೆ ತನ್ನದೆನ್ನುವ ಕುಟುಂಬವಾಗಲೀ ಅಥವಾ ಒಂದು ಶಾಶ್ವತ ಮನೆಯಾಗಲೀ ಇರಲಿಲ್ಲ.

ಇಲ್ಲಿ, ನಶಿಸದೆ ಉಳಿಯುವ ಈ ವ್ಯಕ್ತಿಯ ಚಿತ್ರ, ಇತರರು ಶಾಸ್ತ್ರ ಸಂಹಿತೆಗಳಿಗೆ ತಲೆಬಾಗಿ ನಡೆಯಲು ಮುಂದಾಗುತ್ತಿದ್ದಾಗ ತನ್ನ ವಿವೇಚನಾಶಕ್ತಿಯನ್ನು ದುಡಿಸಿಕೊಳ್ಳಲು ಪಟ್ಟು ಹಿಡಿದ ವ್ಯಕ್ತಿಯದ್ದು;ಇತರರು ಒಂದು ನಿರ್ದಿಷ್ಟ ಪ್ರದೇಶ ಹಾಗೂ ಜನಸಮುದಾಯಗಳ ಬಗ್ಗೆಯೇ ಮಾತನಾಡುತ್ತಿದ್ದಾಗ ತನ್ನ ದಿಗಂತ ದೃಷ್ಟಿಯೊಳಗೆ ಎಲ್ಲ ಖಂಡಗಳನ್ನು ಹಿಡಿದಿಟ್ಟುಕೊಳ್ಳಬಲ್ಲವನಾಗಿದ್ದ ವ್ಯಕ್ತಿಯದ್ದು. ಈ ದೃಷ್ಟಿಯೇ ಬಹುಶಃ ಅವರು ಷೂಮೇಕರ್, ಮಿಲೋವ್ ಜಿಲಾಸ್, ಆಲ್ಬರ್ಟ್ ಐನ್‌ಸ್ಟೀನ್, ಮೋಷೆ ಶಾರೆತ್, ಸ್ಮಿಂಗ್ ಫೆಲೋ ಬಾರ್, ಎಚ್.ಎಸ್. ಮತ್ತು ಎಮ ಮೇರಿಯಾ

ಬ್ರೆಯಲ್‌ಸ್ಫೋರ್ಡ್, ಹಬೀಬ್ ಜಾರ್ಗಿಬಾ, ತಾಯಬ್ ಸ್ಲಿಂ, ಕಮಾಲ್ ಜುಂಬ್ಲಾಟ್, ಲೂಯಿ ಫಿಶರ್ ಹಾಗೂ ಸತ್ಯೇನ್ ಬೋಸ್ ಅವರುಗಳ ಬಗ್ಗೆ ಅಂತಹ ಮಹಾನ್ ಆಕರ್ಷಣೆ ಹೊಂದಿದ್ದುದಕ್ಕೆ ಕಾರಣವಾಗಿದ್ದಿರಬಹುದು. ಎಲ್ಲಕ್ಕಿಂತ ಹೆಚ್ಚಾಗಿ, ಲೋಹಿಯಾ ಅವರ ಬಲ, ಅವರ 'ವ್ಯವಸ್ಥಾ ಅವಿಧೇಯತೆ'ಯೇ(Non conformism) ಆಗಿತ್ತು. ಇವರು ಹೇಳಿದ ಈ ಮಾತನ್ನು ಇನ್ಯಾವ ರಾಜಕಾರಣಿಯಾದರೂ ಹೇಳುವ ಧೈರ್ಯ ಮಾಡಬಲ್ಲನೇ?; "ಯಾವುದೇ ಸಾರ್ವಜನಿಕ ಕಾರಣಕ್ಕಾಗಿ ಮತ್ತು ಸೆರೆಮನೆ ಹೊರಗೆ ಸಾರ್ವಜನಿಕವಾಗಿ ಕೈಗೊಳ್ಳುವ ಉಪವಾಸ ಸತ್ಯಾಗ್ರಹವು ಆತ್ಮವಂಚನೆ, ಅಸತ್ಯ ಹಾಗೂ ವೈಯಕ್ತಿಕತೆಯನ್ನು ಪೋಷಿಸುತ್ತದೆ. ಗಾಂಧೀಜಿ ಬದುಕಿದ್ದಾಗೂ ಕೂಡಾ ನಾನು ಅವರೊಂದಿಗೆ ಉಪವಾಸ ಸತ್ಯಾಗ್ರಹ ಅಥವಾ ಉಪವಾಸಿಯು ತಾನು ಆಹಾರ ತೆಗೆದುಕೊಳ್ಳದೇ ಹೋದುದರಿಂದ ಸಾಯುವವರೆಗೂ ಅವನೊಬ್ಬ ಕಪಟಿಯೇ ಎಂದು ವಿಚಾರ ವಿಮರ್ಶೆ ಮಾಡಲು ಯತ್ನಿಸಿದ್ದೆ". ತಮ್ಮ ವ್ಯವಸ್ಥಾ ಅವಿಧೇಯತೆಯ ಕಾರಣದಿಂದಾಗಿಯೇ ಲೋಹಿಯಾ, ಇತರೆಲ್ಲಾ ಸಮಾಜವಾದಿಗಳಿಗಿಂತ ಗಾಂಧೀಜಿಯೊಡನೆ ಅತ್ಯಂತ ನಿಕಟ ಸಂಪರ್ಕ ಸಾಧಿಸಿಕೊಳ್ಳಲು ಸಾಧ್ಯವಾಗಿತ್ತೇನೋ? ಇಂತಹ ಮನುಷ್ಯ ಆತ ಏನಾಗಿದ್ದನೋ ಅಂತೆಯೇ ವರ್ಣಿಸಲ್ಪಡಲು ಅರ್ಹ: "nothing extenuate, nor set down aught is malice"

(ಕನ್ನಡಕ್ಕೆ: ಟಿ.ಎಸ್. ಸತ್ಯನಾಥ್)

■

"ಇಷ್ಟು ಕಾಲದ ನಂತರ, ನನ್ನಲ್ಲಿ ಉಳಿದುಹೋಗಿರುವ ತೀವ್ರ ವಿಷಾದವೆಂದರೆ, ನಾನು ಗಾಂಧೀಜಿಯಂತಹ ಮಹಾನ್ ವ್ಯಕ್ತಿಗಳ ಸಾಲಿನಲ್ಲ ಇಡಬಯಸುವ ಐನ್‌ಸ್ಟೀನ್‌ರನ್ನು ಮತ್ತೊಮ್ಮೆ ಭೇಟಿ ಮಾಡಿ ನಮ್ಮ ಮಾತುಕತೆಯನ್ನು ಮುಂದುವರಿಸಲಾಗಲಿಲ್ಲವಲ್ಲಾ ಎಂಬುದು. ಹಾಗೂ ಇನ್ನೊಂದು ವಿಷಾದವೆಂದರೆ ಪ್ರಪಂಚದ ಆ ಮಹಾನ್ ನಗರ ನ್ಯೂಯಾರ್ಕ್‌ನ ಮುಖವನ್ನು, ನನಗೆ ಅವಕಾಶವಿದ್ದಾಗಲೂ ಇನ್ನಷ್ಟು ಹತ್ತಿರದಿಂದ ನೋಡಲಾಗಲಿಲ್ಲವಲ್ಲಾ ಎಂಬುದು. ನಾನು ಅಮೆರಿಕಾವನ್ನು ನೆನೆಸಿಕೊಂಡಾಗ–ನನ್ನ ಬದುಕಿನಲ್ಲಿ, ಅವಕಾಶವಿದ್ದಾಗ ಮಾಡಲಾಗದೇ ಹೋದ ಅನೇಕ ಆನಂದಮಯ ಹಿತಕರ ವಿಷಯಗಳ ಬಗ್ಗೆ ನೆನೆಸಿಕೊಂಡಾಗ ಆದಂತೆಯೇ–ಇಂತಹ ಇನ್ನೂ ಅನೇಕ ವಿಷಾದಗಳು ನನ್ನನ್ನು ಮುತ್ತುತ್ತವೆ. ಆದರೆ ಈ ಎಲ್ಲ ವಿಷಾದಗಳೇನೇ ಇರಲಿ, ನಾನೆಷ್ಟು ಬೇಡ ಬೇಡವೆಂದರೂ ಐನ್‌ಸ್ಟೀನ್ ನನ್ನನ್ನು ಬೀಳ್ಕೊಡಲು ಆಟೋ ಕಾದು ನಿಂತಿದ್ದ ರಸ್ತೆಯ ಬದಿವರೆಗೂ ಬಂದು, 'ನೀವು ಬಂದು ನನ್ನನ್ನು ಭೇಟಿ ಮಾಡಿ ಸಂತೋಷ ಉಂಟು ಮಾಡಿದ್ದೀರಿ; ಯಾಕೆಂದರೆ ನನ್ನನ್ನು ಭೇಟಿ ಮಾಡಲು ಬರುವವರಲ್ಲಿ ಮನುಷ್ಯರೆ ಅಪರೂಪ' ಎಂದು ವಿದಾಯ ಹೇಳಿದಾಗ ನಾನು ಅಪೂರ್ವ ರೀತಿಯ ಹಿತವನ್ನು ಅನುಭವಿಸಿದೆ. ಅಲ್ಲಾ, ನಾವೇಕೆ ಇಷ್ಟೊಂದು ಒಂಟಿಯಾಗಿದ್ದೇವೆ?"

–ಲೋಹಿಯಾ('ಲೋಹಿಯಾ ಅಂಡ್ ಅಮೆರಿಕಾ ಮೀಟ್'ಗೆ ಮುನ್ನುಡಿಯಲ್ಲಿ)

ಲೋಹಿಯಾ ಅಮರ ರಹೇ...

■ ವೀರಣ್ಣ ತಿಮ್ಮಾಜಿ

ವಿಲಿಂಗ್ಡನ್ ಆಸ್ಪತ್ರೆಯ ಹಸಿರು ಹುಲ್ಲಿನ ಮೈದಾನ. ಜನ ಗುಂಪು ಗುಂಪಾಗಿ ಸೇರಿದ್ದರು. ಜನಸಂದಣಿಯಿಂದ ಒಂದು ಧ್ವನಿ ಕೇಳಿ ಬಂತು: "ಡಾ. ರಾಮ ಮನೋಹರ ಲೋಹಿಯಾ ಅವರ ಶರೀರ ಈಗ ಅವರ ಅನುಯಾಯಿಗಳದ್ದು; ನಮ್ಮದು. ಅವರ ಸಾವಿರಾರು ಜನ ಸಹಕಾರಿಗಳದ್ದು. ಅದು ಈಗ ಕೋಟಿ ಕೋಟಿ ದೀನ ದಲಿತರ ಸ್ವತ್ತಾಗಿದೆ". ಆ ಧ್ವನಿಯಲ್ಲಿ ವೇದನೆಯಿತ್ತು. ಡಾ. ಲೋಹಿಯಾರ ಶರೀರ ಮತ್ತು ಸೇವೆ ಪ್ರಪಂಚದ ನೊಂದವರ ದುಃಖ ನಿವಾರಣೆಗೆ ಬಹಳ ಅಗತ್ಯವಿತ್ತು ಅನ್ನುವ ಕೊರಗು ಆತನ ಮಾತಿನಲ್ಲಿತ್ತು. ಮಾತಿನಲ್ಲಿ ಉದ್ವಿಗ್ನತೆ ಇತ್ತು.

ಹೊಸ ದೆಹಲಿಯ ವಿಲಿಂಗ್ಡನ್ ಆಸ್ಪತ್ರೆ, ದೊಡ್ಡ ದೊಡ್ಡ ಜನರು, ವಿ.ಆಯ್.ಪಿಗಳನ್ನೇ ಹೆಚ್ಚು ಕಾಳಜಿ ಮಾಡುವ ಆಸ್ಪತ್ರೆ. ಆದರೂ ಎಲ್ಲಾ ಸರ್ಕಾರಿ ಆಸ್ಪತ್ರೆಗಳಂತೆ ಅದೂ ಒಂದು ಕಟುಕರ ಮನೆ ಅನ್ನುವ ಕುಖ್ಯಾತಿ ಅದಕ್ಕಿತ್ತು. ಆದರೆ ಖಾಸಗೀ ಆಸ್ಪತ್ರೆಯಲ್ಲಿ ದುಬಾರಿ ಖರ್ಚಿನಲ್ಲಿ ಆಪರೇಷನ್ ಮಾಡಿಸಿಕೊಳ್ಳುವುದಕ್ಕೆ ಡಾ. ಲೋಹಿಯಾ ಅವರ ವಿರೋಧ ಇತ್ತು. ಅವರ ಈ ವಿರೋಧ ಅವರ ವಿಚಾರಗಳಿಗೆ ಅನುಗುಣವಾಗೇ ಇತ್ತು. ಶ್ರೀಮಂತರ ಮಕ್ಕಳಿಗಷ್ಟೇ ಪ್ರತ್ಯೇಕ ಶಾಲೆಗಳು, ರೈಲ್ವೆ ಡಬ್ಬಿಗಳಲ್ಲಿ ಇದ್ದುಳ್ಳವರ ಸಲುವಾಗಿ ಬೇರೆ ಡಬ್ಬಿಗಳು, ಸರ್ಕಾರೀ ಪ್ರವಾಸಿ ಮಂದಿರಗಳಲ್ಲೇ ಇಳಿದುಕೊಳ್ಳಬೇಕೆನ್ನುವ ಹವ್ಯಾಸ, ಇಂಥವನ್ನೆಲ್ಲ ಅವರು ಕಟುವಾಗಿ ಟೀಕಿಸುತ್ತಿದ್ದರು. ಅದಕ್ಕೆಂತಲೇ ಅವರು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ಸಾರ್ವಜನಿಕ ಆಸ್ಪತ್ರೆ ಸೇರಿದ್ದರು. ಅವರ ಶಸ್ತ್ರಚಿಕಿತ್ಸೆ ಇದೆ ಅನ್ನುವುದು, ಅವರ ಅನುಯಾಯಿಗಳ ಪೈಕಿ ಕೆಲವರಿಗಾದರೂ ಗೊತ್ತಿದ್ದಿರಬಹುದು. ಶಸ್ತ್ರಚಿಕಿತ್ಸೆ, ಮುಂಬೈ, ಕಲ್ಕತ್ತಾ ಇಲ್ಲವೇ ಮದ್ರಾಸಿನ ಸುಪ್ರಸಿದ್ಧ ಆಸ್ಪತ್ರೆಯಲ್ಲಿ ಮಾಡಿಸಿಕೊಳ್ಳಬೇಕು ಅಂತಾ ಈ ಕೆಲವರಾದರೂ

ಡಾ. ಲೋಹಿಯಾರವರನ್ನು ಒತ್ತಾಯಪಡಿಸಿ, ಹಟ ಹಿಡಿಯಬಹುದಿತ್ತು. ಲೋಹಿಯಾರ ಮೇಲಿನ ಅವರ ಪ್ರೇಮ-ಅಭಿಮಾನ ಕಡಿಮೆ ಇತ್ತು ಅಂತ ಹೇಳಲಿಕ್ಕಾಗದು; ಆದರೆ ಲೋಹಿಯಾರ ಬೇನೆಯ ತೀವ್ರತೆ ಅವರಿಗೆ ತಿಳಿದಿರಲಿಕ್ಕಿಲ್ಲ. ಅದಾವ ತಪ್ಪಿಗಾಗಿ ನಮಗೀ ಆಘಾತ ಎರಗಿ ಬಂತು ಅನ್ನುವುದು ನಮಗೆ ಬಿಡಿಸಲಾರದ ಒಗಟಾಗಿತ್ತು. ಲೋಹಿಯಾ ಒಂದು ಅತಿ ಅಮೂಲ್ಯ ವಸ್ತು. ನಾವೆಲ್ಲ ಆ ವಸ್ತುವನ್ನು ಉಳಿಸಿಕೊಳ್ಳುವುದು ಆಗಲಿಲ್ಲ ಅನ್ನುವ ಕೊರಗು ನಮ್ಮನ್ನು ಕಾಡುತ್ತಿತ್ತು.

ಪ್ರೋಸ್ಟೇಟ್ ಗ್ಲ್ಯಾಂಡ್ ಆಪರೇಷನ್ ಅಂಥ ಕಠಿಣ ಆದದ್ದೇನಲ್ಲ. ರಕ್ತದ ಒತ್ತಡ, ಹೃದಯದ ತೊಂದರೆ ಇಂಥ ಬೇನೆಗಳಿದ್ದರೆ, ಈ ಆಪರೇಷನ್ನು ತೊಡಕಿನದಾಗುವ ಅಪಾಯವಿರುತ್ತದೆ. ವಿಲಿಂಗ್ಡನ್ ಆಸ್ಪತ್ರೆಯ ಡಾಕ್ಟರ್‌ಗಳಿಗೆ ಇವೆಲ್ಲ ಗೊತ್ತಿರಲಿಲ್ಲ ಅನ್ನುವಂತಿರಲಿಲ್ಲ. ಲೋಹಿಯಾ ಅವರಿಗೆ ಅವರ ಪ್ರಕೃತಿಯ ಎಲ್ಲಾ ವಿವರಗಳನ್ನು ಡಾಕ್ಟರ್‌ಗಳು ಕೊಟ್ಟಿದ್ದರು. ಶಸ್ತ್ರಚಿಕಿತ್ಸೆಗೆ ಎರಡು ದಿನ ಮೊದಲು ಅವರು ಆಸ್ಪತ್ರೆಗೆ ಸೇರಿದ್ದರು. ಆ ಎರಡು ದಿನಗಳಲ್ಲಾದರೂ ಅವರ ಇತರ ಬೇನೆಗಳಿಗೆ ಉಪಚಾರ ಔಷಧಿ ಕೊಡಬಹುದಿತ್ತಲ್ಲ? ಹಿರಿಯ ಸರ್ಜನ್ ಡಾ. ಪಾಠಕರಿಗೂ ಇದು ತಿಳಿಯಲಿಲ್ಲವೊ? ಚುನಾವಣೆಗಳ ಕಾಲಕ್ಕೆ ಮೈಯಲ್ಲಿ ವಿಕಾರವಾಗಿ, ಅದಕ್ಕೆ ಶಸ್ತ್ರ ಚಿಕಿತ್ಸೆ ಒಂದೇ ಉಪಾಯ ಅನ್ನುವ ಸಂಗತಿ ಡಾ. ಲೋಹಿಯಾರಿಗೆ ಮನವರಿಕೆ ಆಗಿತ್ತು.

ಚುನಾವಣಾ ಪ್ರಚಾರದ ಬಹಳ ಪ್ರಯಾಸದ ಕೆಲಸ ಲೋಹಿಯಾರಂಥ ನಾಯಕರಿಗೆ. ಪಕ್ಷದ ಎಲ್ಲಾ ಅಭ್ಯರ್ಥಿಗಳೂ, ತಮ್ಮ ತಮ್ಮ ಮತಕ್ಷೇತ್ರ ಪ್ರಚಾರಕ್ಕಾಗಿ ಆಗ್ರಹಪಡಿಸುವವರು. ಎಲ್ಲರ ಬೇಡಿಕೆಯನ್ನು ಪೂರೈಸುವುದು ಸಾಧ್ಯವಿಲ್ಲ. ಆದರೂ ಲೋಹಿಯಾ ಪಕ್ಷದ ಯಶಸ್ಸಿಗಾಗಿ ಶಕ್ತಿಮೀರಿ ದುಡಿದರು. ಅನ್ನ-ನೀರು, ನಿದ್ದೆ-ನೀರಡಿಕೆಗಳ ಪರಿವಿಲ್ಲದೇ ಪ್ರಚಾರದಲ್ಲಿ ಮೈ-ಮನಸ್ಸನ್ನು ತೊಡಗಿಸಿದ್ದರು. ತಮ್ಮ ಪ್ರಕೃತಿಯ ಬಗ್ಗೆ ಅವರು ಎಂದೂ ಯಾರಿಗೂ ಏನೂ ಹೇಳುತ್ತಿರಲಿಲ್ಲ. ಚುನಾವಣೆ ಮುಗಿಯುತ್ತಿದ್ದಂತೆ ಅವರ ವಿಕಾರ ಬಲಿಯತೊಡಗಿತ್ತು. ಪ್ರೋಸ್ಟೇಟ್ ಗ್ಲ್ಯಾಂಡಿನ ಬೇನೆಯನ್ನು ದೂರ ಮಾಡಲು, ಇಂಜೆಕ್ಷನ್‌ಗಳ ಮೂಲಕ ಪ್ರಯತ್ನಿಸಿ, ಆಮೇಲೆ ಕೈ ಬಿಡಲಾಯಿತು. ಮೆಟ್ಟಿಲು ಹತ್ತುವುದು, ದೂರ ನಡೆಯುವುದು, ಇವು ಅವರಿಗೆ ಆಯಾಸ ಮಾಡಬಹತ್ತಿದವು. ಶಸ್ತ್ರಚಿಕಿತ್ಸೆ ಬಿಟ್ಟರೆ ಇದಕ್ಕೆ ಬೇರೆ ಉಪಾಯ ಉಳಿದಿಲ್ಲ ಅಂತ ತಜ್ಞ ಡಾಕ್ಟರುಗಳು ನಿರ್ಧರಿಸಿದರು. ೧೯೬೭ರ ಸೆಪ್ಟಂಬರ್ ೨೮ನೇ ತಾರೀಖು ಅವರು ಆಸ್ಪತ್ರೆಗೆ ದಾಖಲಾದರು. ಲೋಹಿಯಾ ಎಲ್ಲೇ ಇರಲಿ ತಮ್ಮ ಸುತ್ತಲಿದ್ದ ಜನರ ಸ್ನೇಹವನ್ನು ಗೆಲ್ಲುತ್ತಿದ್ದರು. ಅವರು ತಮ್ಮ ಮಾತು, ವಿಚಾರಗಳಿಂದ ಅಲ್ಲಿನ ಡಾಕ್ಟರ್ ಮತ್ತು ನರ್ಸುಗಳ ಮೇಲೆ ಪ್ರಭಾವ ಬೀರುವಲ್ಲಿ ತಡವಾಗಲಿಲ್ಲ.

ಶಸ್ತ್ರಚಿಕಿತ್ಸೆಗೆ ಸೆಪ್ಟೆಂಬರ್ ೩೦ನೇ ತಾರೀಖನ್ನು ಗೊತ್ತು ಮಾಡಲಾಯಿತು. ಡಾ. ಪಾಠಕ ಶಸ್ತ್ರಕ್ರಿಯೆ ಮಾಡಿದರು. ಆಪರೇಷನ್ ಟೇಬಲ್ ಮೇಲೆಯೇ, ಲೋಹಿಯಾರ

ಶರೀರದಿಂದ ಬಹಳಷ್ಟು ರಕ್ತ ಹರಿದುಹೋಯಿತು. ಅದು ಅವರ ಶಕ್ತಿಯನ್ನೇ ಹೀರಿಕೊಂಡು ಹೋಯಿತು. ಆದರೆ ಆ ಕ್ಷಣದಲ್ಲಿ ನೀಡಿದ ಹೊರಗಿನ ರಕ್ತದಿಂದ ಅವರು ಬದುಕಿದರು. ಆಗ ಮೂಡಿದ ನೆಮ್ಮದಿ ಬಹಳ ಹೊತ್ತಿನವರೆಗೆ ಉಳಿಯಲಿಲ್ಲ. ಅಕ್ಟೋಬರ್ ಒಂದನೇ ತಾರೀಖಿನ ದಿನ ರಕ್ತದ ಒತ್ತಡ ಹೆಚ್ಚಿದೆ, ಜ್ವರ ಏರಿದೆ ಎನ್ನುವ ಸುದ್ದಿ ಭಯ ಮೂಡಿಸಿತು. ಆಪರೇಷನ್ನಿಗೆ ಬಳಸಿದ ಸಾಧನಗಳನ್ನು ಸರಿಯಾಗಿ ಸ್ವಚ್ಛವಾಗಿ ತೊಳೆಯದೇ ಉಪಯೋಗಿಸಿದ್ದರಿಂದ, ಈ ಹೊಸ ತೊಂದರೆ ಮೂಡಿತ್ತು. ಮುಂಬೈದಿಂದ ತಜ್ಞ ಡಾ. ಕುಲಾಬಾವಾಲಾ ಮತ್ತು ಡಾ. ದಸ್ತೂರ ಮತ್ತು ಪಟ್ನಾದಿಂದ ಮತ್ತೊಬ್ಬ ತಜ್ಞ ಡಾಕ್ಟರು ಬಂದು ಲೋಹಿಯಾರ ಆರೋಗ್ಯವನ್ನು ಪರೀಕ್ಷಿಸಿ, ತಂತಮ್ಮ ಅಭಿಪ್ರಾಯಗಳನ್ನು ನೀಡಿ ಹೋದರು. ವಿಲಿಂಗ್ಡನ್ನಿನ ಮುಖ್ಯಸ್ಥ ಡಾ. ಬ್ರಿಲಾಲ್ ಅವರಿಗೆ, ಹೊರಗಿನ ಡಾಕ್ಟರುಗಳು ಬಂದು ತಮ್ಮ ಅಭಿಪ್ರಾಯ ಹೇಳುವುದು ಸರಿ ಕಾಣಲಿಲ್ಲ. ಎಲ್ಲಿ ತಮ್ಮ ತಪ್ಪು ಹೊರಬೀಳುವುದೋ ಅನ್ನು ಹೆದರಿಕೆ ಇತ್ತೋ ಏನೋ? ಆಪರೇಷನ್ ಆದಾಗಿನಿಂದ ೪ನೇ ತಾರೀಖಿನವರೆಗೆ, ಲೋಹಿಯಾರ ಸ್ಥಿತಿಯಲ್ಲಿ ಸ್ಥಿರತೆ ಬರಲೇ ಇಲ್ಲ. ಒಮ್ಮೆ ಸುಧಾರಣೆ ಕಂಡರೆ , ಮರುಕ್ಷಣ ಬಿಗಡಾಯಿಸಿರುತ್ತಿತ್ತು. ಅವರ ಹಿತಚಿಂತಕರು ಮತ್ತು ಮಿತ್ರರ ಹೃದಯದ ಬಡಿತವೂ ಏರಿಳಿಯುತ್ತಿತ್ತು. ಮೃತ್ಯುವಿನ ಸಂಗಡ ಲೋಹಿಯಾ ನಡೆಸಿದ ಸೆಣಸಾಟದಲ್ಲಿ ಯಾರ ಕೈ ಮೇಲಾಗುವುದೋ ಅನ್ನುವ ಚಿಂತೆ. ಅವರ ಅನುಯಾಯಿಗಳನ್ನು ಆವರಿಸಿತ್ತು. ಅದೊಂದು ಭೀಷಣ ಹೋರಾಟ. ಮೃತ್ಯುವಿನ ಎದುರಿಗೆ ಲೋಹಿಯಾ ಏನೂ ಕಡಿಮೆ ವ್ಯಕ್ತಿ ಅಲ್ಲ. ಮೃತ್ಯು ಏನು ಮಾಡಿದರೂ, ಅವರು ಒಳಗಾಗಲಿಲ್ಲ.

ನಾಲ್ಕನೇ ತಾರೀಖು ಮುಗಿಯುತ್ತಿದ್ದಂತೆ, ಲೋಹಿಯಾರ ಶ್ವಾಸೋಚ್ಛ್ವಾಸ ಜೋರಾಯಿತು. ಅನೇಕ ತಜ್ಞ ಡಾಕ್ಟರುಗಳನ್ನು ಕರೆಸಲಾಯಿತು. ಬಂಧುಮಿತ್ರರೆಲ್ಲ ಬಂದರು. ಇದಲ್ಲದೆ, ನೂರಾರು ಜನ, ಲೋಹಿಯಾ ಆಸ್ಪತ್ರೆಗೆ ಸೇರಿದಾಗಿನಿಂದ, ಆಸ್ಪತ್ರೆ ಆವರಣದಲ್ಲೇ ಮೆಟ್ಟು ಹಾಕಿದ್ದರು. ಯಾರು, ಎಷ್ಟಿದ್ದರೂ, ಏನೂ ತೋಚದಾಯಿತು.

ಐದನೇ ತಾರೀಖಿನ ರಾತ್ರಿ ಬರುತ್ತಿದ್ದಂತೆ ಎಲ್ಲರ ಮನದಲ್ಲೂ ಭಯ ಮೂಡಹತ್ತಿತು. ಲೋಹಿಯಾರಿಗೆ, ರಾತ್ರಿ ತರುವ ಯಾತನೆಗಳು ನಮಗೆ ನಡುಗನ್ನು ಹುಟ್ಟಿಸಿದ್ದವು. ಈ ರಾತ್ರಿ ಅವರಿಗೆ ಬಿಕ್ಕಳಿಕೆ ಬಂದಿತ್ತು. ಅವರ ಎರಡೂ ಕೈಗಳಲ್ಲಿ, ಸಲಾಯಿನ ಗ್ಲೂಕೋಜನ್ನು ಏರಿಸಲಾಗಿತ್ತು. ಮೂಗಿನ ಒಂದು ಹೊರಳಿಯಲ್ಲಿ ಪ್ರಾಣವಾಯುವಿನ ನಲಿಕೆ ಇನ್ನೊಂದು ಹೊರಳಿಯಲ್ಲಿ ಏರಿಸಿದ ನಲಿಕೆ, ಹೊಟ್ಟೆಯೊಳಗಿನ ಹೊಲಸು ತೆಗೆಯಲು ಇತ್ತು. ಇದೂ ಅಲ್ಲದೆ ಅವರಿಗೆ ಎನಿಮಾ ಬೇರೆ ಕೊಡಲಾಗಿತ್ತು. ಇಷ್ಟೆಲ್ಲ ನೋವುಗಳನ್ನು ನುಂಗಿ, ಲೋಹಿಯಾ ಸುಮ್ಮನೇ ಇದ್ದರು. ಆದರೆ, ಅದನ್ನೆಲ್ಲ ನೋಡಿ ಸಹಿಸುವುದು ನಮ್ಮಿಂದಾಗಲಿಲ್ಲ. ಕಣ್ಣೀರು ಸುರಿಸುವುದನ್ನು ಬಿಟ್ಟರೆ ನಾವೇನು ಮಾಡಬಹುದಾಗಿತ್ತು?

ತಾರೀಖು ಆರರ ರಾತ್ರಿ ಮತ್ತೇನು ಅನಾಹುತವನ್ನು ತರುವುದೋ ಅಂತ ಎಲ್ಲರಲ್ಲೂ ಹೆದರಿಕೆ. ಜ್ವರ ೧೦೫ಕ್ಕೆ ಹೋಗಿತ್ತು. ಕುತ್ತಿಗೆಯ ಸುತ್ತಲೂ ಬರ್ಫನ್ನಿಡಲಾಯಿತು. ಮೈಗೆ ತಣ್ಣೀರಿನ ಪಟ್ಟಿಯನ್ನು ಸುತ್ತಲಾಯಿತು. ಈ ರೀತಿ ಕೃತ್ರಿಮವಾಗಿ ಜ್ವರ ಕೆಳಗಿಳಿಯಿತು.

ಏಳರ ಮುಂಜಾನೆ ರಕ್ತದ ಒತ್ತಡ, ದೇಹದ ಉಷ್ಣ ಮತ್ತು ನಾಡಿಬಡಿತ ಸರಿಯಾಗಿವೆ ಅಂತ ತಿಳಿಸಲಾಯಿತು. ಗಂಟೆ ಪತ್ತರ ಸುಮಾರಿಗೆ ಡಾ॥ ಬ್ರಿಲಾಲ್ ಅವರು, ಲೋಹಿಯಾರ ದೇಹಸ್ಥಿತಿಯ ತಪಾಸಣೆ ಮಾಡಿದರು. ಲೋಹಿಯಾಜಿ ಈಗ ಅಪಾಯದಿಂದ ಪಾರಾಗಿದ್ದಾರೆ ಅಂತ ಡಾ॥ ಬ್ರಿಲಾಲ್ ಹೇಳಬೇಕೆಂದಿದ್ದರು. ಆದರೆ ಅದೇ ಲಂಡನ್ನಿನ ಪ್ರಸಿದ್ಧ ವೈದ್ಯ ಡಾ.ರಿಚರ್ಸ್‌ರಿಂದ ಫೋನ್ ಬಂತು. "ಶಸ್ತ್ರ ಚಿಕಿತ್ಸೆ ಮಾಡಿದ ಜಾಗದಲ್ಲಿ ಗಾಯ ಉಲ್ಬಣಗೊಳ್ಳುವ ಸಂಭವ ಇದೆ ಎಚ್ಚರದಿಂದಿರಿ" ಅಂತ. ಇದು ಗೊತ್ತಾಗುತಿದ್ದಂತೆಯೇ, ಅಲ್ಲಿ ನೆರೆದ ಜನರಲ್ಲಿ ಮೊದಲು ಮೂಡಿದ್ದ ಆಶೆ ಬಾಡಿತು. ಸಮಸ್ಯೆ ಭೀಕರವಾಗುತ್ತಲೇ ಹೋಯಿತು. ತಾರೀಖು ೭ರ ಮುಂಜಾನೆಯ ಸುಧಾರಣೆ ತಾತ್ಕಾಲಿಕ ಆದದ್ದು ಅನ್ನುವ ನಿರಾಶೆಯಿತ್ತು. ಜ್ವರವೇನೋ ಇಳಿಯಿತು. ಆದರೆ ಚಳಿ ಜೋರಾಯಿತು. ಆ ಥಂಡಿಯ ನಡುಗಿಗೆ ಲೋಹಿಯಾಜಿ ಹಾರಿಬೀಳುತ್ತಿದ್ದರು. ಶರೀರದ ಶಾಖವನ್ನು ಮೇಲೇರಿಸಲು ಮತ್ತೆ ಕೃತ್ರಿಮ ಉಪಾಯ. ರಗ್ಗಿನ ಮೇಲೆ ರಗ್ಗನ್ನು ಹೊಂದಿಸಲಾಯಿತು. ಬಿಸಿನೀರಿನ ಚೀಲಗಳಿಂದ ಮೈಯನ್ನು ಕಾಯಿಸಲಾಯಿತು. ಥಂಡಿಯೇನೋ ಹೋಯ್ತು. ಆದರೆ ಪರಿಸ್ಥಿತಿಯಲ್ಲಿ ಬದಲಾವಣೆ ಆಗಲಿಲ್ಲ.

೮ನೇ ತಾರೀಖು ಉದಯವಾಗುತ್ತಿದ್ದಂತೆ, ಇನ್ನೊಂದು ವಿಷಾದದ ಸುದ್ದಿಯನ್ನೇ ತಂದಿತ್ತು. ಲೋಹಿಯಾರ ಉಸಿರಾಟ ಮಂದವಾಗಿತ್ತು. ಎಲ್ಲ ಡಾಕ್ಟರ್‌ಗಳು ಅವರ ಸುತ್ತ ನೆರೆದಿದ್ದರು. ಎಂಜೆಕ್ಷನ್ ಮೇಲೆ ಎಂಜೆಕ್ಷನ್ ಕೊಡಲಾಗುತ್ತಿತ್ತು. ಅಂತೂ ಉಸಿರಾಟ ಚುರುಕಾಯಿತು. ಅದೇ ಹೊತ್ತಿಗೆ ಲಂಡನ್ನಿನಿಂದ ಡಾ. ಬೆನೆಡಾವ್ಡ್ ಫೋನ್ ಮಾಡಿ ಹೇಳಿದರು. "ಲೋಹಿಯಾರ ಆಪರೇಷನ್ನಿನ ಗಾಯ ಬಿಚ್ಚಿ ನೋಡಿರಿ" ಅಂತ. ಹೆಚ್ಚು ಕಡಿಮೆ ಇದೇ ಸಮಯದಲ್ಲಿ ಮೊರಾರ್ಜಿ ಭಾಯಿ ಅವರು ಮುಂಬೈನ ಖ್ಯಾತ ಸರ್ಜನ್ ಡಾ. ಶಾಂತಿಲಾಲ ಮೆಹ್ತಾರನ್ನು ಕರೆಸಿದ್ದರು. ಡಾ. ಮೆಹ್ತಾ ಲೋಹಿಯಾರ ಆಪರೇಷನ್ನಿನ ಹೊಲಿಗೆಗಳನ್ನು ಬಿಚ್ಚಿ ಆ ಜಾಗದಲ್ಲಿ ಕೂಡಿದ್ದ ಕೀವನ್ನು ತೆಗೆದು ಹಾಕಿದರು. ಲುಧಿಯಾನಾದ ಅಮೆರಿಕನ್ ವೈದ್ಯ ಡಾ. ಡೇವಿಸ್, ದಿಲ್ಲಿಯ ಮೆಡಿಕಲ್ ಇನ್‌ಸ್ಟಿಟ್ಯೂಟದ ಡಾ. ವಿಗ್, ಡಾ. ರಾವ್‌ಬ್ರೆನಿತ್; ಮತ್ತು ಡಾ. ಬಲದೇವಸಿಂಗ್, ಬನಾರಸದ ಡಾ. ಉಡುಪ, ಮದ್ರಾಸಿನ ಡಾ.ಕೇಶಿ, ಮಧ್ಯಪ್ರದೇಶದ ಡಾ. ಧಾರಕರ್ ಹಾಗೂ ಮುಂಬೈನ ಡಾ. ದಸ್ತೂರ ಮತ್ತು ಡಾ.ಕುಲಾಬಾವಾಲಾ ಮೊದಲಾದ ವೈದ್ಯವಿಜ್ಞಾನದ ಪರಿಣತರು ಅಲ್ಲಿ ಸೇರಿದರು. ಅವರೆಲ್ಲ ವಿಚಾರವಿನಿಮಯ ಮಾಡಿಕೊಂಡು, ಲೋಹಿಯಾರಿಗೆ ಕೊಡಬೇಕಾದ ಔಷಧೋಪಚಾರದ ಬಗ್ಗೆ ಒಮ್ಮತಕ್ಕೆ ಬಂದರು. ಅದರಂತೆ ಉಪಚಾರವು ಸಹ ನಡೆಯಿತು. ಮೊರಾರ್ಜಿ ಭಾಯಿ ಸ್ವತಃ

ಆಸಕ್ತಿ ವಹಿಸಿ ವ್ಯವಸ್ಥೆಗಳನ್ನು ನೋಡಿಕೊಳ್ಳುವಲ್ಲಿ ಪಾಲ್ಗೊಂಡಿದ್ದರಿಂದ, ಬ್ರಿಗೇಡಿಯರ್ ಡಾ. ಲಾಲ್ ಅವರಿಗೆ ಸುಮ್ಮನಿರಬೇಕಾಯಿತು.

ಡಾ. ಮೆಹ್ತಾ ಅವರು. ಲೋಹಿಯಾರ ಗಾಯದ ಕೀವನ್ನು ತೆಗೆದು ಹಾಕಿದ ಮೇಲೆ ದೇಹದ ಶಾಖ ತನ್ನಿಂತಾನೇ ಸಹಜ ಮಟ್ಟಕ್ಕೆ ಬಂದಿತ್ತು. ದೇವರು, ದೈವ, ಧರ್ಮ ಇದಾವುದನ್ನು ನಂಬದ ಸಮಾಜವಾದಿಗಳು ಡಾ. ಶಾಂತಿಲಾಲರು ದೇವರೆಂದು ವಂದನೆ ಸಲ್ಲಿಸಿದರು.

ಜರ್ಮನಿಯ ಡಾ. ಅಲ್ಕೆನ್ ಅವರು ಕೂಡಾ, ಇದೇ ಹೊತ್ತಿಗೆ ಬಂದು, ತಜ್ಞರು ಲೋಹಿಯಾರನ್ನು ಉಳಿಸಲು ನಡೆಸಿದ ಪ್ರಯತ್ನಕ್ಕೆ ನೆರವಾದರು.

ಪ್ರಾಣಕ್ಕೆ ಅಪಾಯ ತಂದಿದ್ದ, ಆಪರೇಶನ್ ಗಾಯದಲ್ಲಿನ ಕೀವು, ಈಗಿಲ್ಲವಾದ್ದರಿಂದ ಇಂದಿಲ್ಲ ನಾಳೆ ಲೋಹಿಯಾ ಸುಧಾರಿಸಿಕೊಂಡಾರು ಅನ್ನುವ ಭರವಸೆ ಮೂಡಿತ್ತು. ನಮಗೆಲ್ಲ ನಮ್ಮ ಪ್ರಾಣಕ್ಕಿಂತ ಮಿಗಿಲಾದ ಲೋಹಿಯಾ ನಮ್ಮನ್ನು ಇಲ್ಲೇ ಬಿಟ್ಟು ಹೋಗುವುದಿಲ್ಲ ಅನ್ನುವ ನಂಬಿಕೆ ನಮ್ಮಲ್ಲಿ ಮನೆ ಮಾಡಿತ್ತು. ಬರಲಿರುವ ರಾತ್ರಿ ಮತ್ತು ರಾತ್ರಿಯು ಸಾಮಾನ್ಯವಾಗಿ ತರುತ್ತಿದ್ದ ಗಂಡಾಂತರಗಳನ್ನು ನೆನೆಸಿಕೊಂಡಾಗ ನಮ್ಮ ಆಶೆ–ನಿರಾಶೆಗಳಿಗೆ ಮಂಕು ಹಿಡಿಯುತ್ತಿತ್ತು.

ಎಂದಿನ ರಾತ್ರಿಗಳಂತೆ ಇವತ್ತಿನ ರಾತ್ರಿ ಕೂಡಾ ಹೊಸ ತೊಂದರೆಯನ್ನೊಡ್ಡಿತ್ತು. ಲೋಹಿಯಾರ ಮೂತ್ರಪಿಂಡಗಳ ಕೆಲಸ ನಿಂತುಹೋಗಿದೆ ಅನ್ನುವ ಸುದ್ದಿ ಬಂತು. "ಅವಶ್ಯವಿರುವ ಔಷಧಿಗಳನ್ನೆಲ್ಲ ಕೊಡಲಾಗಿದೆ. ಮೂತ್ರಪಿಂಡಗಳು ಸರಿಯಾಗಬಹುದು. ನಿಸರ್ಗದ ಮೇಲೆ ಭರವಸೆ ಇಡಬೇಕು" ಅನ್ನುವ ಜರ್ಮನ್ ಡಾಕ್ಟರರ ಮಾತಿನಿಂದ ನಾವೆಲ್ಲ ತಣ್ಣಗಾದೆವು.

೧೦ನೇ ತಾರೀಖಿನ ಮುಂಜಾವು. ನಮಗೆಲ್ಲ ಒಂದು ಸಮಾಧಾನದ ಸುದ್ದಿ ಕಾದಿತ್ತು. ಮೂತ್ರಪಿಂಡಗಳು ಮೊದಲಿನಂತೆ ಕೆಲಸ ಮಾಡುತ್ತಿದ್ದವು. ಶ್ವಾಸೋಚ್ಛ್ವಾಸದ ತೊಂದರೆ ಕೂಡಾ ಕಡಿಮೆ ಆಗಿತ್ತು. ಹಗಲು ಹೊತ್ತಿನಲ್ಲಿ ಯಾವ ಅನಿಷ್ಟವೂ ಎದುರಾಗಲಿಲ್ಲ. ರಾತ್ರಿ ಬರಬಾರದೆಂದು ಎಲ್ಲರೂ ಅನ್ನುತ್ತಿದ್ದರು. ಆದರೆ ಅದನ್ನು ತಡೆಯುವವರಾರು? ಹಗಲಿನ ನಂತರ ರಾತ್ರಿ, ರಾತ್ರಿಯ ನಂತರ ಹಗಲು, ಇದೊಂದು ನಿಲ್ಲದ, ನಿಲ್ಲಿಸಲಾಗದ ಚಕ್ರ.

ಪ್ರೋಸ್ಟೇಟ್ ಗ್ಲ್ಯಾಂಡಿನ ತಪಾಸಣೆ ಮಾಡಿ, ಕ್ಯಾನ್ಸರ್ ಬೇನೆ ಇರಬಹುದೆಂದು, ಸಂಶಯ ವ್ಯಕ್ತಪಡಿಸಲಾಯಿತು. ಈ ಸುದ್ದಿಯನ್ನು ಖಚಿತಪಡಿಸರಿಲಿಲ್ಲ. ಕ್ಯಾನ್ಸರ್ ಇದ್ದರೂ, ಗಾಬರಿಯಾಗುವ ಕಾರಣ ಇಲ್ಲ ಅಂತ ತಿಳಿಸಲಾಯಿತು. ಇದಕ್ಕೆ ಹೊರದೇಶಗಳಲ್ಲಿ ಇಲಾಜಿದೆ. ಆದರೆ ರಕ್ತದೋಷ ಮತ್ತು ಜ್ವರ ಚಿಂತೆಗೀಡು ಮಾಡಿದ್ದವು. ಲೋಹಿಯಾರಿಗೆ ಸೆಪ್ಟಿಸೇಮಿಯಾ ಬೇರೆ ಬಾಧಿಸುತ್ತಿದೆ ಎಂದು ಅಲ್ಲಿದ್ದವರೆಲ್ಲ

ಮಾತಾಡುತ್ತಿದ್ದರು. ದಿನದಿಂದ ದಿನಕ್ಕೆ ಹೊಸ ಹೊಸ ಸುಧಾರಿಸಿದ ಔಷಧಿಗಳು ಬರುವ ಇವತ್ತಿನ ಯುಗದಲ್ಲಿ, ಸೆಪ್ಟಿಸೇಮಿಯಾ ಆಗಿದೆ ಎನ್ನುವ ಮಾತನ್ನು ಕೇಳಿ, ಜನರೆಲ್ಲ ರೊಚ್ಚಿಗೆದ್ದರು. "ಆಪರೇಷನ್ ಆದ ಹತ್ತು ದಿನಗಳಿಗೆ ಸಿಕ್ಕ ಈ ತೀವ್ರ ರೀತಿಯ ಉಪಚಾರ ಮೂರೂ ಇಲ್ಲ, ನಾಲ್ಕನೇ ದಿನಕ್ಕೆ ಸಿಕ್ಕಿದ್ದರೆ ಇವೆಲ್ಲಾ ಸಮಸ್ಯೆಗಳೇ ಬರುತ್ತಿರಲಿಲ್ಲ". "ಜರ್ಮನಿಯ ಡಾ. ಅಲ್ಕನ್ ಅವರ ಉನ್ನತ ಮಟ್ಟದ ಉಪಚಾರವನ್ನು, ಒಂದು ಕೊಳಕು ಆಸ್ಪತ್ರೆಯಲ್ಲಿ ನಡೆಸಲಾಗುತ್ತಿದೆ"- ಇವೆಲ್ಲ ಮಾತುಗಳು, ಡಾ. ಲಾಲರ ಮೇಲೆ ಸಿಟ್ಟು ತರುತ್ತಿದ್ದವು.

ಆವೊತ್ತು ರಾತ್ರಿ, ಗಟ್ಟಿದೆಯ ಲೋಹಿಯಾರಿಗೆ ಏನೂ ಆಗದು ಅನ್ನುವ ಆಶೆ ಇಟ್ಟುಕೊಂಡು, ನಮ್ಮಲ್ಲನೇಕರು ಮನೆಗೆ ಹೋದೆವು. ಮನೆ ಮುಟ್ಟಿದ ಮೇಲೂ ನಮಗೆ ಅದೇ ಚಿಂತೆ ಕಾಡುತ್ತಿತ್ತು. ಅಷ್ಟರಲ್ಲಿ ಫೋನ್ ಸಂದೇಶ ಬಂತು. ಆಗಬಾರದ್ದು ಆಗೇಬಿಟ್ಟಿತು.

ಡಾ. ಲೋಹಿಯಾ ನಮ್ಮನ್ನೆಲ್ಲ ಬಿಟ್ಟುಹೋಗಿದ್ದರು.

ಜಬರದಸ್ತ ಇಚ್ಛಾಶಕ್ತಿಯ ಡಾ. ಲೋಹಿಯಾರು, ಸಾವಿನೊಡನೆ ೧೨ ದಿನ ಸೆಣಸಿದ ನಂತರ, ಶರಣಾಗಿದ್ದರು. ಅವರ ಇಚ್ಛಾಶಕ್ತಿ, ತಾಳ್ಮೆಯನ್ನು ನೋಡಿ ಡಾಕ್ಟರುಗಳೂ ದಂಗಾಗಿದ್ದರು. ಲೋಹಿಯಾ ಅಸಾಧಾರಣ ವ್ಯಕ್ತಿ ಅಂತ ಅವರೆಲ್ಲ ಪ್ರಾಮಾಣಿಕವಾಗಿ ಒಪ್ಪಿಕೊಂಡರು.

ಸಾವಿನ ಅಂತಿಮ ಕ್ಷಣಗಳು ಸಮೀಪಿಸಿದಾಗಲು ಕೂಡಾ, ದೇಶ, ದೇಶದ ಸ್ಥಿತಿ, ಬಡಬಗ್ಗರ ಗತಿ, ದೀನದಲಿತರ ಜೀವನ ಇವನ್ನು ಬಿಟ್ಟರೆ, ಲೋಹಿಯಾರ ತಲೆಯಲ್ಲಿ ಬೇರೆ ವಿಚಾರಗಳೇ ಇರಲಿಲ್ಲ. ಆಪರೇಶನ್ನು, ಅವರ ರೋಗ, ಇವು ಅವರ ದೇಹವನ್ನು ಕೊರೆಯುತ್ತಿದ್ದವಾದರೂ, ದೇಶದ ನಿರ್ಗತಿಕರ ಮೇಲಿನ ಅಂತಃಕರಣ ಕಡಿಮೆಯಾಗಿರಲಿಲ್ಲ. ಅನ್ಯಾಯ-ಅನೀತಿಗಳ ಮೇಲಣ ರೋಷ ಕಡಿಮೆಯಾಗಿರಲಿಲ್ಲ. ಉತ್ತರ ಪ್ರದೇಶ ಮತ್ತು ಬಿಹಾರದ ರೈತರ ಬಗ್ಗೆ ಚಿಂತಿಸುತ್ತಿದ್ದರು. ಒಂದು ಸಲ ಲೋಹಿಯಾರು ಉತ್ತರ ಪ್ರದೇಶದ ಭೂಕಂದಾಯದ ಪ್ರಶ್ನೆ ಮೇಲೆ ಹೇಳಿಕೆಯೊಂದನ್ನು ನೀಡಹೊರಟಿದ್ದರು. ಆದರೆ ಮಾತಾಡುತ್ತಿರುವಾಗ ನಡುವೆಯೇ ಪ್ರಜ್ಞಾಶೂನ್ಯರಾಗಿಬಿಟ್ಟರು. ದೇಶದ ಕೋಟಿ-ಕೋಟಿ ಜನರು ಡಾಕ್ಟರ್‌ಗಳು ಮತ್ತು ಔಷಧೋಪಚಾರ ಸಿಗದೇ ನರಳುತ್ತಿರುವಾಗ, ಮತ್ತು ಎಷ್ಟೋ ಜನ ನರಳಿ ಸಾಯುತ್ತಿರುವಾಗ, ನನಗೇಕೆ ಇಷ್ಟೊಂದು ಕಾಳಜಿ ಅನ್ನುವುದು ಅವರ ಪ್ರತಿಭಟನೆಯಾಗಿತ್ತು. ಇಷ್ಟೆಲ್ಲ ಜನರು ತಮ್ಮ ಉದ್ಯೋಗ ಬಿಟ್ಟು ತಮ್ಮ ಸುತ್ತ ಕೂತಿರುವುದು ಅವರಿಗೆ ಸರಿಬರುತ್ತಿರಲಿಲ್ಲ. "ನೀವೆಲ್ಲರೂ ನಿಮ್ಮ ನಿಮ್ಮ ಉದ್ಯೋಗಗಳಿಗೆ ಹೋಗಿ" ಎಂದು ಆಗ್ರಹಪಡಿಸುತ್ತಿದ್ದರು. ತಮ್ಮನ್ನು ನೋಡಲು ಬಂದವರೆಲ್ಲ ಊಟ ಮಾಡಿರುವರೋ ಇಲ್ಲವೋ ಎಂದು ಪದೇ ಪದೇ ಕೇಳಿ ಖಚಿತಪಡಿಸಿಕೊಳ್ಳುತ್ತಿದ್ದರು.

ಲೋಹಿಯಾ, ಸಾವಿನ ಹಾಸಿಗೆಯ ಮೇಲಿದ್ದರೂ, ಅವರ ವಿನೋದದ ಗುಣ ಕೊನೆವರೆಗೂ ಚುರುಕಾಗಿತ್ತು. ಒಮ್ಮೆ ಅವರು ಒಬ್ಬ ಡಾಕ್ಟರರಿಗೆ ಕೇಳಿದರು. "ಈ ಬೇನೆಯಿಂದ ನನಗೆ ಗುಣಮುಖವಾಗುವುದೋ" ಅಂತ. "ಖಂಡಿತವಾಗಿ" ಡಾಕ್ಟರು ಉತ್ತರಿಸಿದರು. ಆಗ ಲೋಹಿಯಾ ಹೇಳಿದರು. "ಡಾಕ್ಟರ್‌ಗಳು ಕೂಡಾ ರಾಜಕಾರಣಿಗಳಂತೆ ಅಜ್ಞಾನಿಗಳೇ. ಇಬ್ಬರೂ ಕತ್ತಲಲ್ಲಿ ಹುಡುಕುವ ಜನ." ಒಂದು ದಿನ ಉಪಪ್ರಧಾನಿ ಮೊರಾರ್ಜಿ ದೇಸಾಯಿ ಭೆಟ್ಟಿಯಾಗಿ ಹೋದ ಮೇಲೆ, ಒಬ್ಬರು ಕೇಳಿದರು ಅವರೇನು ಅಂದರು? ಅಂತ. 'ಲೋಕಸಭೆಯಲ್ಲಿ ಮಾಡಿದಂತೆ ಇಲ್ಲೂ ಮಾಡಬೇಡಿರಿ. ಶಾಂತವಾಗಿರಿ' ಅಂತ ಹೇಳಿದರು ಅಂತ ಲೋಹಿಯಾ ತಿಳಿಸಿದರು! ಆಪರೇಶನ್ ಗಾಯದಿಂದ ಕೀವನ್ನು ತೆಗೆದ ಮೇಲೆ ಡಾ.ಲಾಲರು, ಲೋಹಿಯಾರಿಗೆ ಹೇಳಿದರು, "ಡಾ.ಸಾಬ್, ಅಬ್ ಆಪ್ ಅಚ್ಚೇ ಹೋ ಜಾಯೇಂಗೆ". ತಕ್ಷಣ ಲೋಹಿಯಾರಿಂದ ಉತ್ತರ ಹಾರಿಬಂತು. "ಹಾ ಅಬ್ ತಕ್ ತುಮ್ ಝೂಟ್ ಬೋಲತೇ ಥೆ..." "ಅಬ್ ಶಾಯದ್ ಠೀಕ್ ಬೋಲ್ ರಹೇ ಹೋ!" ಮತ್ತೊಬ್ಬರು 'ನೀವಿನ್ನು ಮೇಲೆ ಗುಣವಾಗ್ತೀರಿ' ಅಂದಾಗ ಲೋಹಿಯಾ ಹೇಳಿದ್ದು: 'ಕ್ಯಾ ತುಮ್‌ಭಿ ಝೂಟ್ ಬೋಲನೆವಾಲೋಂಕೆ ಜಮಾತ್‌ಮೆ ಶಾಮಿಲ್ ಹೋಗಯೇ!'

ಲೋಹಿಯಾರ ಪ್ರಜ್ಞಾಶಕ್ತಿ ಎಷ್ಟೂ ಕುಂದಿರಲಿಲ್ಲ. ಬಂದು ಹೋದವರನ್ನೆಲ್ಲ ಸರಿಯಾಗಿ ಗುರ್ತಿಸುತ್ತಿದ್ದರು. ಸಮರ್ಪಕ ಮಾತನ್ನಾಡುತ್ತಿದ್ದರು. ಕೇಳಿದ ಪ್ರಶ್ನೆಗಳಿಗೆ ಅವರಿಂದ ತಕ್ಷಣ ಆದರೆ ತಕ್ಕ ಉತ್ತರ ಬರುತ್ತಿತ್ತು. ಹಿಂದೀ, ಬಂಗಾಲೀ ಮತ್ತು ಜರ್ಮನ್ ಈ ಭಾಷೆಗಳನ್ನು ಅವರು ನಿರರ್ಗಳವಾಗಿ ಮಾತಾಡುತ್ತಿದ್ದರು. ದೇಶ ವಿದೇಶಗಳ ಡಾಕ್ಟರ್‌ಗಳ ಜೊತೆ ಅವರವರ ಭಾಷೆಯಲ್ಲೇ ಅವರನ್ನು ಮಾತಾಡಿಸುತ್ತಿದ್ದರು. ದೈಹಿಕವಾಗಿ ಅಶಕ್ತವಾಗಿದ್ದರೂ ಅವರ ನೆನಪಿನ ಶಕ್ತಿ ದುರ್ಬಲ ಆಗಿರಲಿಲ್ಲ. ನೆನಪು, ಪ್ರಜ್ಞೆ, ಇಚ್ಛಾಶಕ್ತಿ ಇವೆಲ್ಲ ಪ್ರಬಲವಾಗಿದ್ದರೂ ಹನ್ನೊಂದನೇ ತಾರೀಖಿನ ದಿನ ರಾತ್ರಿ ಅರ್ಧಕ್ಕೆ ಸ್ಮೃತಿ ತಪ್ಪಿತೋ ತಿಳಿಯದಾಗಿದೆ.

ಇನ್ನು ಈ ಶರೀರವನ್ನು ಹೆಚ್ಚು ಅರೆಯಬಾರದು; ಡಾಕ್ಟರ್‌ಗಳ ಜ್ಞಾನ ವಿಜ್ಞಾನಗಳು ನಿಸರ್ಗದ ಮುಂದೆ ತಲೆ ತಗ್ಗಿಸಿವೆ ಅಂತ ನಿರ್ಧರಿಸಿದರೋ ಏನೋ, ಲೋಹಿಯಾ ಸಾವಿಗೆ ಶರಣಾಗಿದ್ದರು. ತಮ್ಮ ಶರೀರಕ್ಕೆ ಚಿರ ವಿಶ್ರಾಂತಿ ನೀಡಿದ್ದರು. 'ಅಬ್ ಮೈ ಜಾ ರಹಾಂ ಹೂಂ...ಅಬ್ ಛೋಡೋ' ಅಂದರು.

ಅವರ ನೋವನ್ನು ಹಂಚಿಕೊಳ್ಳಲು ಅಲ್ಲಿ ಅನೇಕ ಜನ ಕಳಕಳಿ, ಅಭಿಮಾನ, ಭಾವನೆಯಿಂದ ಸೇರಿದ್ದರು. ಆದರೆ ಲೋಹಿಯಾಜಿ ಇನ್ನೊಬ್ಬರಿಗೆ ದೈಹಿಕ ನೋವನ್ನು ಕೊಡುವ ಸ್ವಭಾವದವರಲ್ಲ. ಗುರುದ್ವಾರಾ ರಕಾಬಗಂಜ್ ರಸ್ತೆಯ ೭ನೇ ನಂಬರ್ ಮನೆಯಲ್ಲಿರುತ್ತ. ಮ್ಯಾನ್‌ಕೈಂಡ್ ಪತ್ರಿಕೆಯ ಸಹ ಸಂಪಾದಕಿ ಪ್ರೊ.ರಮಾ ಮಿತ್ರರನ್ನು ಮಾತ್ರ ಆಗಾಗ ತಮ್ಮ ಬಳಿ ಕರೆಸುತ್ತಿದ್ದರು.

೯ನೇ ತಾರೀಖಿನ ಮಧ್ಯಾಹ್ನ ಅವರ ಗಾಯದ ಪಟ್ಟಿಯನ್ನು ಬಿಚ್ಚಿದಾಗಿನಿಂದ ಹಿಡಿದು ಅವರ ಹತ್ತಿರ ಯಾರನ್ನೂ ಬಿಡುತ್ತಿರಲಿಲ್ಲ. ಸಾಂಸರ್ಗಿಕ ರೋಗ ಅಪಾಯಕ್ಕಾಗಿ ಈ ರೀತಿ ಪ್ರವೇಶವನ್ನು ನಿಷೇಧಿಸಲಾಗಿತ್ತು. ಆಗಿನಿಂದ ಹಿಡಿದು, ೧೦ನೇ ತಾರೀಖಿನ ನಡುರಾತ್ರಿಯ ನಂತರದ ೧ ಗಂಟೆ ೫ ನಿಮಿಷದ ವರೆಗಿನ ೨೯-೩೦ ತಾಸುಗಳವರೆಗೆ, ಅವರ ಬಳಿ ಡಾಕ್ಟರು ಮತ್ತಿತರ ಆಸ್ಪತ್ರೆ ಸಿಬ್ಬಂದಿ ಬಿಟ್ಟರೆ ಬೇರೆ ಯಾರೂ ಹೋಗಿರಲಿಲ್ಲ. ನಾವೆಲ್ಲಾ ಇಷ್ಟೆಲ್ಲಾ ಜನ ಇದ್ದು ಅವರ ಪಾಲಿಗೆ ಕಡೇ ಘಳಿಗೆಯಲ್ಲಿ ಇಲ್ಲದಂತಾಗಿದ್ದೆವು. ಅವರನ್ನು ನೋಡಬೇಕೆನ್ನುವ ತಳಮಳ ಸಹನೆ ಮೀರುತ್ತಿತ್ತು. ಆದರೂ ಅಸಹಾಯಕರಾಗಿದ್ದೆವು. ಏನಾದರಾಗಲಿ, ಅವರಿಗೆ ಒಳಿತಾಗಲಿ ಅಂತ ಸಹನೆಯನ್ನು ಮಿತಿಯಲ್ಲಿಟ್ಟಿದ್ದೆವು.

ದಿಲ್ಲೀ ನಗರ, ಅದರಲ್ಲೂ ಹೆಚ್ಚಾಗಿ ಬಡ ವರ್ಗ, ಲೋಹಿಯಾರ ಸ್ಥಿತಿಯ ಬಗ್ಗೆ ವ್ಯಾಕುಲಗೊಂಡಿತ್ತು. ರಿಕ್ಷಾದವರು, ಟಾಂಗಾದವರು, ಟ್ಯಾಕ್ಸಿ ಡ್ರೈವರುಗಳು, ಕಸ ಗುಡಿಸುವವರು, ಜಮಾದಾರರು, ಎಲ್ಲರ ಮನದಲ್ಲಿ, ಬಾಯಲ್ಲಿ ಒಂದೇ ಚಿಂತೆ. ಒಂದೇ ಮಾತು: ಲೋಹಿಯಾ ಗುಣವಾದರೋ? ಲೋಹಿಯಾರಿಗೆ ರಕ್ತದ ಜರೂರಿ ಇದೆ ಅಂದಾಗ, ತಕ್ಷಣ ೧೫೦ ಜನ ಮುಂದೆ ಬಂದರು. ನಮ್ಮ ಪಕ್ಷಕ್ಕೆ ಸೇರಿದವರಲ್ಲಿ ಪಕ್ಷದ ಹಾಗೂ ಲೋಹಿಯಾರ ಬಗ್ಗೆ ಇದರ ಕಳಕಳಿ ಹೊಂದಿದವರು ಕಡಿಮೆ ಇರಲಿಲ್ಲ. ಚುನಾವಣೆ ಫಲಿತಾಂಶಗಳು ಹೊರಬರುವಾಗ, ಕ್ರಿಕೆಟ್ ಟೆಸ್ಟ್‌ಗಳು ನಡೆಯುವಾಗ, ದೇಶದಲ್ಲೆಲ್ಲಾ ಜನ ರೇಡಿಯೋಗಳ ಮುಂದೆ ಗುಂಪಾಗಿ ಸೇರುತ್ತಿದ್ದಂತೆ, ಲೋಹಿಯಾರ ದೇಹಸ್ಥಿತಿಯ ಸಮಾಚಾರ ತಿಳಿದುಕೊಳ್ಳಲು ಜನ ರೇಡಿಯೋ ಸುದ್ದಿಗಾಗಿ ಕಾದಿರುತ್ತಿದ್ದರು. ಅವರು ಇನ್ನಿಲ್ಲ ಅಂದಾಗ, ದೇಶದ ಬಡಬಗ್ಗರಿಗೆ ಹೆಚ್ಚು ದುಃಖವಾಯಿತು. ಬಡಬಗ್ಗರನ್ನು ಕಟ್ಟಿಕೊಂಡು ಅವರ ಸಲುವಾಗಿ ಇನ್ನು ಮೇಲೆ ಹೋರಾಡುವವರಾರು? ಇನ್ನು ಮುಂದೆ ನಮ್ಮ ದಾತಾ ಯಾರು? ಅನ್ನುವ ಪ್ರಶ್ನೆಗಳು ಅವರ ಮನಸ್ಸನ್ನು ಕಾಡುತ್ತಿದ್ದವು.

ಲೋಹಿಯಾ ನಮಗೆಲ್ಲ ನಾಯಕ ಮಾರ್ಗದರ್ಶಿ. ಆತ ಹೊರಟುಹೋದ ಅಂದಾಗ ನಮಗೆಲ್ಲ ಆಕಾಶವೇ ಕಳಚಿ ಬಿದ್ದಂತಾಗಿತ್ತು. ಅತ್ತು, ತಮ್ಮ ದುಃಖವನ್ನು ಬಹಿರಂಗವಾಗಿ ತೋರಿಸಿಕೊಳ್ಳುವುದು, ಲೋಹಿಯಾರಿಗೆ ಸರಿಬರುತ್ತಿರಲಿಲ್ಲ. ಅಧ್ಯಕ್ಷ ಕೆನಡಿಯ ಕೊಲೆಯ ಸಮಯದಲ್ಲಿ, ಅವರ ಹೆಂಡತಿ ಜಾಕ್ವೆಲಿನ್ ತೋರಿಸಿದ ಮನೋಸ್ಥೈರ್ಯವನ್ನು ಲೋಹಿಯಾ ಬಹಳ ಮೆಚ್ಚಿದ್ದರು. ಅವರೇನು ಹೇಳಿಹೋಗಿದ್ದರೂ ನಮಗೆ ಕಣ್ಣೀರನ್ನು ತಡೆಯುವುದಾಗುತ್ತಿರಲಿಲ್ಲ. ಕಂಠ, ಕಣ್ಣು ತುಂಬಿ ಬರುತ್ತಿದ್ದವು. ಅಂತಃಕರಣದ ಆಗರವಾಗಿದ್ದ ಈ ವ್ಯಕ್ತಿ ಮರಳಿ ಬಾರದ ಜಾಗೆಗೆ ಹೋದದ್ದಕ್ಕೆ ಮೌನವಾಗೇ ಮರುಗುತ್ತಿದ್ದೆವು.

ಆಪರೇಷನ್ ಕಾಲಕ್ಕೆ ಆದ ಅಚಾತುರ್ಯ, ಅದರ ಗಾಯದಲ್ಲಾದ ಕೀವು,

ಆಪರೇಷನ್ ಆದ ನಾಲ್ಕನೇ ದಿನಕ್ಕೆ ತಿಳಿದಿದ್ದರೂ, ಲೋಹಿಯಾ ಉಳಿಯುತ್ತಿದ್ದರು ಅಂತ ಏನೇನೋ ಕಲ್ಪನೆಗಳು ತಲೆಯಲ್ಲಿ ಏಳುತ್ತಿದ್ದವು. ಕಾಂಗ್ರೆಸ್ ಸಂಸದೀಯ ಪಕ್ಷದ ಕಾರ್ಯದರ್ಶಿ ಚಂದ್ರಶೇಖರ್ ಮತ್ತು ಮಧುಲಿಮಯೆ, ಸಂಸತ್ತಿನಲ್ಲಿ ಲೋಹಿಯಾರ ಮರಣದ ವಿಚಾರಣೆಗಾಗಿ ಆಗ್ರಹಪಡಿಸಬಹುದು. ವಿಚಾರಣೆಯಾಗಿ ವರದಿ ಕೂಡಾ ಬರಬಹುದು. ಆದರೆ ಲೋಹಿಯಾ ಬರಲು ಸಾಧ್ಯವೆ? ಹೋದ ಪ್ರಾಣ ಮರಳಿ ಬಾರದು ಅನ್ನುವ ಕಟುಸತ್ಯ ಎಲ್ಲರನ್ನೂ ಚುಚ್ಚಿ ನೋವು ಮಾಡುತ್ತಿತ್ತು. ಅವ್ಯವಸ್ಥೆ ಅನಾದರಗಳ ತವರಾದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ನೂರಾರು ಬಡಜನ ಅದಕ್ಕೆ ಬಲಿಯಾಗುತ್ತಿದ್ದರು. ಆ ಜನರ ಗೋಳು ಜಗಜ್ಜಾಹೀರವಾಗಲಿ ಅನ್ನುವ ಬಯಕೆಯಿಂದಲೇ ಲೋಹಿಯಾರು ನರಕದಂತಿರುವ ಇಂಥ ಆಸ್ಪತ್ರೆಗೆ ಸೇರಿದ್ದರೋ ಏನೋ? ತಮ್ಮನ್ನಿಲ್ಲಿ ಬಲಿ ಕೊಟ್ಟು, ಸಾರ್ವಜನಿಕ ಆಸ್ಪತ್ರೆಗಳಲ್ಲಿ ನಡೆಯುವ ನಿರ್ದಯ ಕ್ರೂರ ವ್ಯವಹಾರಗಳನ್ನು ನಿಲ್ಲಿಸಬೇಕು, ಆಸ್ಪತ್ರೆಗಳು ಸುಧಾರಣೆ ಆಗಬೇಕು ಅನ್ನುವುದು ಅವರ ಇಚ್ಛೆ ಇತ್ತೋ ಏನೋ?

ಹನ್ನೊಂದರ ಬೆಳಿಗ್ಗೆ ೧ ಗಂಟೆ ೫ ನಿಮಿಷಕ್ಕೆ (೧೨-೧೫-೧೦) ಅವರ ಪ್ರಾಣಪಕ್ಷಿ ಹಾರಿಹೋಗಿತ್ತು. ಕಳೇಬರವಾಗಿದ್ದ ಅವರ ಶರೀರವನ್ನು ರಕಬಗಂಜ್-ಗುರುದ್ವಾರ ರಸ್ತೆಯಲ್ಲಿನ ಅವರ ಮನೆಗೆ ಸಾಗಿಸಲಾಯಿತು. ಮನೆಯ ಹಿಂದಿನ ಆವರಣದಲ್ಲಿ ಕಾರ್ಯಕರ್ತರು ಸಭೆ ನಡೆಸಿ ವಿದ್ಯುತ್ ಚಿತೆಯಿಂದ ದಿವಂಗತ ನಾಯಕನ ಕಳೇಬರದ ದಹನ ನಡೆಸಬೇಕೆಂದು ನಿರ್ಧರಿಸಿದರು. ದಿಲ್ಲಿಯಲ್ಲಿ ಶವಗಳ ವಿದ್ಯುತ್ ದಹನದ ವ್ಯವಸ್ಥೆ ಇರದಿದ್ದರೆ ತಮ್ಮ ಶರೀರವನ್ನು ಲಕ್ನೊ ಮೆಡಿಕಲ್ ಕಾಲೇಜಿಗೆ ಕೊಡಬೇಕೆಂಬುದು ಅವರ ಇಚ್ಛೆ ಆಗಿತ್ತು. ಕ್ರಿಯಾ ಕರ್ಮ, ಶ್ರಾದ್ಧ, ವಿಧಿ ಇವನ್ನೆಲ್ಲಾ ಮಾಡುವುದನ್ನು ಅವರು ವಿರೋಧಿಸುತ್ತಿದ್ದರು. ಅವರ ತಂದೆ ಹೀರಾಲಾಲಜಿ ತೀರಿಕೊಂಡಾಗ, ಲೋಹಿಯಾಗೆ ಗಾಂಧೀಜಿ ಹೇಳಿದ್ದರು "ಶ್ರಾದ್ಧ ಮಾಡು" ಅಂತ. ಅದರಲ್ಲಿ ವಿಶ್ವಾಸವಿಲ್ಲ ಅಂತ ಲೋಹಿಯಾ ಅದಕ್ಕೆ ಒಪ್ಪಲಿಲ್ಲ. ಲೋಹಿಯಾರ ಈ ವಿಚಾರವನ್ನು ಯಾರೂ ಪ್ರಶ್ನಿಸಲಿಲ್ಲ. ಲೋಹಿಯಾರ ಅಂತ್ಯಯಾತ್ರೆಗೆ, ಅವರ ಬಂಧುಮಿತ್ರರು ದುಡ್ಡು ಕೊಡಲು ಬಂದರು. ಅದನ್ನು ಪಕ್ಷದ ಕಾರ್ಯಕರ್ತರು ಒಪ್ಪಲಿಲ್ಲ. ಅಂತ್ಯಯಾತ್ರೆಯನ್ನು ಬಹಳ ಸಾದಾ ರೀತಿಯಲ್ಲಿ ನಡೆಸಲಾಯಿತು. ಅದಕ್ಕೆ ಕೇವಲ ೧೫೦ ರೂಪಾಯಿ ಮಾತ್ರ ಖರ್ಚಾಗಿತ್ತು. ಸಾರ್ವಜನಿಕ ಆಸ್ಪತ್ರೆಯಲ್ಲಿ ಬಡರೋಗಿಗಳಿಗೆ ನೀಡುತ್ತಿದ್ದ ರೊಟ್ಟಿ ಬಟ್ಟೆಗಳನ್ನೇ ಲೋಹಿಯಾ ಬಳಸುತ್ತಿದ್ದರು.

ಲೋಹಿಯಾಜಿ ಆಸ್ಪತ್ರೆಗೆ ಸೇರಿದಾಗಿನಿಂದ, ಜಯಪ್ರಕಾಶ ನಾರಾಯಣರು ದಿನಕ್ಕೆರಡು ಸಲ ಆಸ್ಪತ್ರೆಗೆ ಬಂದು ಒಂದು ತಾಸೆರಡು ಕುಳಿತಿರುತ್ತಿದ್ದರು. ಅರುಣಾ ಅಸಿಫ್ ಆಲಿ, ಅಶೋಕ ಮೆಹ್ತಾ, ಕೃಪಲಾನಿ ದಂಪತಿಗಳು, ಕಮಲಾದೇವಿ ಚಟ್ಟೋಪಾಧ್ಯಾಯ, ಮೃದುಳಾ ಸಾರಾಭಾಯಿ, ವಿ.ಕೆ. ಕೃಷ್ಣ ಮೆನನ್, ಕಾಮರಾಜ

ಮೊದಲಾದ ಜನ ಬಂದು ಹೋಗುತ್ತಿದ್ದರು. ಗಂಗಾಶರಣ ಬಾಬು, ಪ್ರೇಮ ಭಾಸಿನ್, ಎಚ್.ವಿ. ಕಾಮತ್, ಶಿರೂಭಾವೂ ಲಿಮಯೆ ಅವರೂ ಕೂಡ ಬಂದು ಹೋದರು. ರಾಷ್ಟ್ರಪತಿ ಡಾ. ಜಾಕೀರ್ ಹುಸೇನ, ಪ್ರಧಾನಮಂತ್ರಿ ಇಂದಿರಾ ಗಾಂಧಿ, ಮಂತ್ರಿಗಳಾದ ಮೊರಾರ್ಜಿ ಭಾಯಿ, ಯಶವಂತರಾವ್ ಚವ್ಹಾಣ್, ಜಗಜೀವನರಾಂ, ಕೆ.ಕೆ. ಶಾಹ, ಡಾ.ತ್ರಿಗುಣಸೇನ, ಡಾ. ಚಂದ್ರಶೇಖರ್, ಬಲಿರಾಂ ಭಗತ್, ಕೆ.ಸಿ. ಪಂತ್, ಡಾ.ಸುಶೀಲ ನಯ್ಯರ್, ರಾಮ ಸುಭಗ ಸಿಂಗ್ ಹಾಗೂ ಅಧಿಕಾರಿಗಳೇನಕರು ಬಂದುಹೋದರು.

೧೧ನೇ ತಾರೀಖಿನ ಬೆಳಗಿನಿಂದ, ಲೋಹಿಯಾರ ಮನೆಗೆ ಮಂತ್ರಿಗಳು, ಹಿರಿಯ ಅಧಿಕಾರಿಗಳು ಮೊದಲಾದವರನ್ನೆಲ್ಲ ಹಿಡಿದು, ಬಡವ ಬಲ್ಲಿದರು, ಹೆಂಗಸು-ಗಂಡಸರು, ಮಕ್ಕಳು ಮುದುಕರು ತಂಡತಂಡಗಳಲ್ಲಿ ಬಂದು ಲೋಹಿಯಾರ ಕಡೇ ದರ್ಶನ ಪಡೆದರು. ಆಗಲಿದ ನಾಯಕನಿಗೆ ಹೂಗುಚ್ಛ, ಹೂಹಾರ ಅರ್ಪಿಸಿ, ಗೌರವ ಸಲ್ಲಿಸುತ್ತಿದ್ದರು.

ಮಧ್ಯಾನ್ಹ ಎರಡು ಗಂಟೆಯ ಹೊತ್ತಿಗೆ, ಮನೆಯ ಹೊರಗಡೆ ಪಕ್ಷದ ಧ್ವಜಗಳು, ಹೂಹಾರಗಳಿಂದ ಅಲಂಕರಿಸಲಾದ ಒಂದು ಟ್ರಕ್ಕು ತಯಾರಾಗಿ ನಿಂತಿತ್ತು. ಮೊರಾರ್ಜಿ ಭಾಯಿ, ಯಶವಂತರಾವ್, ಜಯಪ್ರಕಾಶ ಮತ್ತು ಆಚಾರ್ಯ ಕೃಪಲಾನಿಯವರು ಹೆಗಲು ಕೊಟ್ಟು, ಕಳೇಬರವನ್ನು ಹೊರಗೆ ತಂದರು. ಅಲ್ಲಿ ಸೇರಿದ್ದ ಸಹಸ್ರಾರು ಅಭಿಮಾನಿಗಳಿಂದ ಬಂದ "ಡಾ.ಲೋಹಿಯಾ ಅಮರ್ ರಹೇ" ಘೋಷಣೆ ಅಂತಿಮ ಯಾತ್ರೆಯ ಆರಂಭವನ್ನು ಸಾರಿತು. ಡಾ. ಲೋಹಿಯಾರ ಶರೀರಕ್ಕೆ ಪಕ್ಷದ ಧ್ವಜವನ್ನು ಹೊಂದಿಸಿ, ಹೂಹಾರಗಳನ್ನು ಹಾಕಲಾಗಿತ್ತು. ಅಂತ್ಯಯಾತ್ರೆಯಲ್ಲಿ ಗೀತಾಪಾಠ, ರಾಮನಾಮ, ಮಂತ್ರೋಚ್ಚಾರ ಇವಾವುವೂ ಇರಲಿಲ್ಲ. ಮೆರವಣಿಗೆ ಮೌನವಾಗಿತ್ತು. ಟ್ರಕ್ಕಿನ ಮೇಲೆ ಯಾರೂ ಏರಿರಲಿಲ್ಲ. ಎಲ್ಲರೂ ಅದರ ಹಿಂದೆ ನಡೆದಿದ್ದರು.

ವಿದ್ಯುತ್ ಸ್ಮಶಾನದಲ್ಲಿ, ದಹನಕ್ಕಾಗಿ ಶರೀರವನ್ನು ಯಂತ್ರದ ಬಾಯಿಗೆ ಇಡುವ ಮೊದಲು, ಕಳೇಬರದ ಮೇಲೆ ಎಲ್ಲ ಪಕ್ಷಗಳು ಸಂಘ-ಸಂಸ್ಥೆಗಳ ವತಿಯಿಂದ ಹೂಮಾಲೆ ಗುಚ್ಚಗಳನ್ನು ಅರ್ಪಿಸಲಾಯಿತು.

ಶರೀರವನ್ನು ಯಂತ್ರದಲ್ಲಿ ಕೊಡಲಾಯಿತು. ಚರಿತ್ರೆ ಪುರುಷ ಕಣ್ಮರೆಯಾದ. ಅಲ್ಲಿ ನಡೆದ ಶೋಕಸಭೆಯಲ್ಲಿ ಮೊದಲು ಮಾತನಾಡಲು ಎದ್ದ ಜಯಪ್ರಕಾಶ ನಾರಾಯಣರಿಗೆ ಕಂಠ ತುಂಬಿ ಬಂದು ಏನನ್ನು ಹೇಳುವುದಾಗಲಿಲ್ಲ. ತಮ್ಮ ಆಳವಾದ ದುಃಖವನ್ನು ಒಂದೇ ಮಾತಿನಲ್ಲಿ ಹೇಳಿದ್ದರು. 'ಮೈ ರಾಂ ಮನೋಹರ್‌ಸೇ ಆಠ್ ಸಾಲ್ ಕಾ ಬಡಾ ಹೂಂ. ಇಸ್ ವಕ್ತ್ ಮೈ ಉಧರ್ ಅಂದರ್ ಜಾನಾ ಔರ್ ವಹ್ ಮೇರಿ ಜಗಹ್ ಖಡಾ ಹೋನಾ ಉಚಿತ್ ಥಾ..."

ಲೋಕಸಭೆಯ ಸ್ಪೀಕರ್ ಸಂಜೀವರೆಡ್ಡಿ, 'ಸಾಮ್ರಾಜ್ಯವಾದಿಗಳಿಗೆ ಬೆಂಕಿ ಇಡುವ ಈ ವ್ಯಕ್ತಿ ಈಗ ಸ್ವತಃ ಬೆಂಕಿಯಲ್ಲಿ ಸುಡುತ್ತಿದೆ. ಅನ್ಯಾಯದ ವಿರುದ್ಧ ಸಿಡಿದೆದ್ದು

ಹೋರಾಡುವ ಅವರ ಕಿಚ್ಚನ್ನು ನಾವೆಂದೂ ಮರೆಯಲಿಕ್ಕಾಗದು' ಅಂತ ಲೋಹಿಯಾರ ಕ್ರಾಂತಿ ಭಾವನೆಯನ್ನು ಕೊಂಡಾಡಿದರು.

ಲೋಹಿಯಾ ಲೋಕಸಭೆಯೊಳಗೆ ಬರುವುದಕ್ಕೆ ಮೊದಲು ಅದು ಹೆಸರಿಗೆ ಮಾತ್ರ ಲೋಕಸಭೆಯಾಗಿತ್ತು. ಅವರು ಬಂದ ಮೇಲೆ ಅದು ನಿಜವಾದ ಲೋಕಸಭೆ ಆಯಿತು. ಆ ಧ್ವನಿ ಇಂದು ಮಾಯವಾಗಿದೆ' ಅಂತ ಯಶವಂತರಾವ್ ಚವ್ಹಾಣ್ ಹೇಳಿದರು.

'ಲೋಹಿಯಾರಂಥ ಧೀರೋದಾತ್ತ ವ್ಯಕ್ತಿಯನ್ನು ನಾವು ನೋಡಿರಲಿಲ್ಲ. ಎಂಥ ಪ್ರಶ್ನೆ ಬಂದರೂ, ಅದಕ್ಕೆ ಸಮರ್ಪಕ ಉತ್ತರ ಕೊಡುವ ಬುದ್ಧಿಶಕ್ತಿ ಅವರಲ್ಲಿತ್ತು. ಅವರು ಸ್ವತಂತ್ರ ವಿಚಾರದ ವ್ಯಕ್ತಿ. ಅವರು ನಡೆದ ಹಾದಿ ಅನುಕರಣೀಯ' ಅಂತ ತಾರಕೇಶ್ವರಿ ಸಿನ್ಹಾ ತುಂಬಿದ ಕಂಠದಿಂದ ಹೇಳಿದರು.

ಎಸ್.ಎಮ್. ಜೋಶಿ: 'ರಾಷ್ಟ್ರಕ್ಕೆ ಯಾವುದು ಹಿತವಲ್ಲವೋ ಅದು ಪಕ್ಷಕ್ಕೂ ಒಳ್ಳೆಯದಲ್ಲ ಅನ್ನುವುದು ಲೋಹಿಯಾರ ವಾದವಾಗಿತ್ತು. ಅವರು ಕೇವಲ ನಮ್ಮ ಪಕ್ಷದ ನಾಯಕರಾಗಿದ್ದಿಲ್ಲ. ಎಲ್ಲಾ ಪಕ್ಷಗಳ ದೀನ-ದಲಿತರಿಗೆ ಅವರು ನಾಯಕರಾಗಿದ್ದರು.'

ಕೃಪಲಾನಿ, ಅರುಣಾ ಅಸಫ್ಅಲಿ, ಹಿರೇನ್ ಮುಖರ್ಜಿ, ಬ್ರಿಜ್‌ಮೋಹನ ತೂಫಾನ್, ಹಂಸರಾಜ್ ಗುಪ್ತ, ಚಂದ್ರಶೇಖರ್ ಮೊದಲಾದವರು ಪಕ್ಷಬೇಧವಿಲ್ಲದೆ ದಿ.ಲೋಹಿಯಾರಿಗೆ ಶ್ರದ್ಧಾಂಜಲಿ ಸಲ್ಲಿಸಿ ಭಾಷಣ ಮಾಡಿದರು.

ಕಾರ್ಯಕರ್ತರು ತಾ. ೧೩ರ ಮುಂಜಾನೆ ಸಭೆ ನಡೆಸಿ ಲೋಹಿಯಾರ ಸಿದ್ಧಾಂತಗಳನ್ನು ಪಾಲಿಸುವ ಪಣ ತೊಟ್ಟರು. ಗಾಂಧೀಜಿಯವರ ತತ್ವಗಳನ್ನು ಪಾಲಿಸಿದ ನಾಟಕ ನಡೆಯುತ್ತಿತ್ತು. ಹಾಗೆ ಮಾಡಕೂಡದು ಮತ್ತು ಪ್ರಾಮಾಣಿಕವಾಗಿ ಲೋಹಿಯಾ ತತ್ವಗಳನ್ನು ಅನುಸರಿಸಬೇಕೆಂದು ಪ್ರತಿಜ್ಞೆ ಮಾಡಲಾಯಿತು. 'ಮ್ಯಾನ್‌ಕೈಂಡ್' ಪತ್ರಿಕೆಯ ಪ್ರಕಟಣೆಯನ್ನು ಮುಂದುವರಿಸಬೇಕೆಂದು ಕೂಡಾ ನಿರ್ಧರಿಸಲಾಯಿತು. (ಈ ಪತ್ರಿಕೆ ಸದ್ಯಕ್ಕೆ ನಿಂತುಹೋಗಿದೆ) ಮರಣವಾಗಬಾರದ ಪರಿಸ್ಥಿತಿಯಲ್ಲಿ ಲೋಹಿಯಾರ ಮರಣವಾಗಿತ್ತು. ಅವರ ಮರಣದಿಂದ ರಾಷ್ಟ್ರ ಹಿತಚಿಂತಕರೊಬ್ಬರ ಸ್ಥಳ ಬರಿದಾಯಿತು. ತಮ್ಮ ಸೃಜನಶೀಲ ಪ್ರತಿಭೆಯೊಳಗಿಂದ ಅರಳುತ್ತಿದ್ದ ಹೊಸ ಕ್ರಾಂತಿ ಕಲ್ಪನೆಗಳ ಮೂಲಕ ಅವರು ಸಮಾಜವನ್ನು ಗದ ಗದ ನಡುಗಿಸುತ್ತಿದ್ದರು. ನಿಜವಾದ ಸ್ಥಿತಿ ಹೇಳಬೇಕಾದರೆ, ಇನ್ನು ಕೆಲವು ವರ್ಷ ಅವರು ಬದುಕಿದ್ದರೆ ಭಾರತದ ಭಾಗ್ಯವು ಕೆಲ ಮಟ್ಟಿಗಾದರೂ ಬದಲಾವಣೆ ಹೊಂದುತ್ತಿತ್ತು. ಲೋಹಿಯಾ ಮೋಸ ಮಾಡಿದರು. ಎಷ್ಟು ದೊಡ್ಡ ಭಾರವನ್ನು ನಮ್ಮ ನಿರ್ಬಲವಾದ ಹೆಗಲುಗಳ ಮೇಲೆ ಹಾಕಿ ಹೊರಟು ಹೋದರು!

■

ಲೋಹಿಯಾ: ಸಂಸತ್ತಿನಲ್ಲಿ

■ ತಾರಕೇಶ್ವರಿ ಸಿನ್ಹಾ

ಡಾ. ರಾಮಮನೋಹರ ಲೋಹಿಯಾ ಅವರ ಬಗ್ಗೆ ಬರೆಯುವುದು ಎಷ್ಟು ಸುಲಭವೊ ಅಷ್ಟೇ ಕಷ್ಟವೂ ಹೌದು. ಇಂಡಿಯಾದ ರಾಜಕಾರಣದಲ್ಲಿ ಡಾ. ಲೋಹಿಯಾರಂತಹ ವ್ಯಕ್ತಿತ್ವ ಬಹಳ ಅಪರೂಪವಾಗಿ ಕಾಣಸಿಗುವಂತಹದ್ದು. ನಾನಾ ಕೋನಗಳ ವೀಕ್ಷಣೆಯಲ್ಲಿ ಅವರ ವ್ಯಕ್ತಿತ್ವ ಸ್ಫುಟವಾಗಿ ಮೂಡುತ್ತದೆ. ಅವರು, ಕೆಲವರಿಗೆ ಯುಗ ನಿರ್ಮಾಪಕ ಅಥವಾ ಯುಗಪುರುಷರಂತೆ, ಮತ್ತೆ ಕೆಲವರಿಗೆ ಬೆಳಕೂ ಕಾಣದ ದಿಕ್ಕೂದೆಸೆಯಿಲ್ಲದ ಅಲೆಮಾರಿಯಂತೆ ಕಾಣಿಸಿಕೊಳ್ಳುತ್ತಾರೆ. ಹಲವು ಜನ ಕಾಂಗ್ರೆಸ್ಸಿಗರ ದೃಷ್ಟಿಯಲ್ಲಿ ಲೋಹಿಯಾ, ಸದಾ ಎಲ್ಲರ ಮೇಲೆ ಸಿಟ್ಟಾಗುವ ಹತಾಶ ನಾಯಕರಾಗಿ ತೋರುತ್ತಾರೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಲೋಹಿಯಾ ಪ್ರೀತ್ಯಾದರಗಳ ಬುಗ್ಗೆಯಾಗಿದ್ದರು–ಸಾಕ್ಷಾತ್ ಶಿವನಂತೆ ಎನ್ನಬಹುದು. ಹತ್ತಿರದ ಗೆಳೆಯರಿಂದ ಇವರಷ್ಟು ಪ್ರೀತ್ಯಾದರ ವಿಶ್ವಾಸಗಳನ್ನು ಗಳಿಸಿಕೊಂಡಿದ್ದ ರಾಜಕೀಯ ವ್ಯಕ್ತಿ ಸಿಗುವುದು ಕಷ್ಟವೆನಿಸುತ್ತದೆ. 'ದೂರದ ಬೆಟ್ಟ ನುಣ್ಣಗೆ' ಅನ್ನುವ ನಾಣ್ನುಡಿ ಇವರಿಗೆ ಅನ್ವಯಿಸುತ್ತಲೇ ಇರಲಿಲ್ಲ; ದೂರದಿಂದ ಆಕರ್ಷಿಸಿ, ಹತ್ತಿರ ಹೋದಂತೆಲ್ಲ ನಿರಾಸೆಗೊಳಿಸುವ ಹಲವು ಜನರುಂಟು. ಡಾ.ಲೋಹಿಯಾರ ವ್ಯಕ್ತಿತ್ವ ಇದಕ್ಕೆ ಪ್ರತಿಯಾದುದು. ಈ ಡಾಕ್ಟರ ಸಾಹೇಬರನ್ನು ದೂರದಿಂದಷ್ಟೇ ನೋಡಿದವರು ತಪ್ಪು ಕಲ್ಪನೆಗೆ ಒಳಗಾಗುತ್ತಾರೆ. ಆದರೆ ಹತ್ತಿರ ಸರಿದಂತೆಲ್ಲಾ ಅವರು ಅಸಾಮಾನ್ಯ ಬಂಡುಕೋರನಾಗಿ ಕಾಣುತ್ತಾರೆ; ಇಂಡಿಯಾದ ಸಮಷ್ಟಿಯಲ್ಲಿನ ಒಡಕಿನಿಂದ ಜಿನುಗಿದ ವಿಷವನ್ನು ನುಂಗಿದ ಮತ್ತು ಸಮಷ್ಟಿಗೆ ಹೊಸ ಜೀವನ ತುಂಬಲು ನಿಂತ ಸಾಕ್ಷಾತ್ ಮಹಾದೇವನಾಗುತ್ತಾರೆ. "ಆದಿ ಕವಿ, ಕವಿಯಾಗಿರಲೇಬೇಕು; ಅವನ ನಿಟ್ಟುಸಿರಿನೊಡನೆಯೇ ಹಾಡು ಹೊರಟಿರಬೇಕು" ಎಂಬಂತಹ ಸಾಲುಗಳು ಇಂತಹವರನ್ನು ಕುರಿತೇ ಬರೆದಿರಬಹುದು...

ಲೋಹಿಯಾ ಅವರ ಲೋಕಸಭಾ ಜೀವನ ಅವರ ತುಂಬು ವ್ಯಕ್ತಿತ್ವದ ಸಣ್ಣ ಪ್ರತಿಫಲನವಷ್ಟೆ. ಚುನಾವಣೆ ಮುಗಿದು ಲೋಕಸಭೆಗೆ ಬಂದಾಗಲೇ ನಾನು ಅವರನ್ನು ಮೊದಲು ನೋಡಿದ್ದು. ಇದಕ್ಕೂ ಮೊದಲು ನನ್ನ ವಿದ್ಯಾರ್ಥಿದೆಸೆಯಲ್ಲಿ ಅವರ ಬಗ್ಗೆ ಬಹಳಷ್ಟು ಕೇಳಿದ್ದೆ. ನಮ್ಮ ಕಾಲೇಜು ದಿನಗಳಲ್ಲಂತೂ ಲೋಹಿಯಾ ಎಂದರೆ ಮಹಾಕ್ರಾಂತಿಕಾರಿ ಮತ್ತು ಪ್ರಚಂಡ ಸಾಹಸಿ ಎನಿಸಿಕೊಂಡಿದ್ದರು. ಆ ದಿನಗಳಲ್ಲಿ ನಾವು ಅವರ ಬಗ್ಗೆ ನಾನಾ ವಿಧದ ಸಾಹಸಗಾಥಗಳನ್ನು ಕೇಳುವುದರಲ್ಲಿ ತಲ್ಲೀನರಾಗುತ್ತಿದ್ದೆವು. ತಮ್ಮ ಅಸಾಮಾನ್ಯ ಹಾಗೂ ಉಜ್ವಲ ಬದುಕಿನಿಂದ ಅವರು ನಮ್ಮನ್ನು ಬದುಕಿನ ಆಳಕ್ಕೆ ಒಯ್ಯುವ ಪ್ರವಾದಿಯಾಗಿದ್ದರು. ಅವರನ್ನು ನೋಡಬೇಕೆಂಬ ಅಭಿಲಾಷೆ ನನ್ನೊಳಗೆ ತೀವ್ರವಾಗಿತ್ತು. ಅವರು ಲೋಕಸಭೆಯನ್ನು ಪ್ರವೇಶಿಸುವ ಹೊತ್ತಿಗೆ ನನ್ನ ವಿದ್ಯಾರ್ಥಿಜೀವನ ಮುಗಿದು ಬಹಳ ಕಾಲವಾಗಿತ್ತು. ೧೯೬೩ರಲ್ಲಿ ಲೋಕಸಭೆಯಲ್ಲೊಮ್ಮೆ ನನ್ನ ಅಂತರಾಳಕ್ಕೆ ಮುಟ್ಟುವಂತೆ ಅವರ ಜೀವನದ ಕ್ಷಣದರ್ಶನವಾಯಿತು.

ಲೋಕಸಭಾ ಜೀವನದ ಆರಂಭದಲ್ಲಿ ನಾನೂ ಕೂಡ ಅವರ ಬಗ್ಗೆ ತಪ್ಪು ಕಲ್ಪನೆಗೆ ಒಳಗಾಗಿದ್ದೆ. ಬರೇ, ಜವಾಹರಲಾಲ್‌ರಂಥವರೊಡನೆ ಆವೇಶಗೊಳ್ಳುವುದರಿಂದಲೇ ಸಮಾಜದ ಕ್ರಾಂತಿ ಉಂಟು ಮಾಡಬಹುದೆಂಬ ನಂಬಿಕೆಗೆ ಒಳಗಾದವರು ಎಂಬ ಹಾಗೆ ಇವರು ನನಗೆ ತೋರುತ್ತಿದ್ದರು. ಕೇವಲ ನೆಹರೂ ಟೀಕೆಯಲ್ಲೇ ತಮ್ಮ ಉತ್ಸಾಹ ವ್ಯಯ ಮಾಡುವ ಓರ್ವ ಕ್ರಾಂತಿಕಾರಿಯನ್ನು ಕಾಣುವುದು ದುಃಖಕರವೆನಿಸಿತ್ತು. ಅವರ ಲೋಕಸಭಾ ಜೀವನವನ್ನು ನಾನು ಪರಿಭಾವಿಸಿಕೊಂಡಿದುದು ಈ ರೀತಿ. ಚುನಾವಣೆ ಮುಗಿದ ಮೇಲೆ ಅವರು ಲೋಕಸಭಾ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸುವ ದಿನ ನನಗೆ ಅನ್ನಿಸಿತ್ತು: ಇಡೀ ಲೋಕಸಭೆಯ ವಾತಾವರಣ ಕೆಡಿಸುವ ಮತ್ತು ಜವಾಹರರನ್ನು ಟೀಕಿಸುವುದರಲ್ಲಿ ವಾತಾವರಣವನ್ನು ವೈಯಕ್ತಿಕಗೊಳಿಸುವ ವ್ಯಕ್ತಿ ಈತ. ಆದರೆ ಈ ಅನಿಸಿಕೆಯ ಹಿನ್ನೆಲೆಯಲ್ಲಿ ಅವರ ಸಭಾಕಲಾಪಗಳನ್ನು ನೋಡುವ ಕುತೂಹಲ ಇದ್ದೇ ಇತ್ತು. ಅವರ ಸ್ವಭಾವ ನಿಜವಾಗಿಯೂ ಎಂಥಹದು? ಅವರನ್ನು ನೋಡಲು ಇಡೀ ಲೋಕಸಭೆ ಕುತೂಹಲ ತಾಳಿ ಭರ್ತಿಯಾಗಿತ್ತು. ಆಗ ಲೋಕಸಭೆಯಲ್ಲಿ ಸೋಷಲಿಸ್ಟ್ ಪಾರ್ಟಿ ಒಂದು ಸಣ್ಣ ಗುಂಪಾಗಿತ್ತಷ್ಟೆ. ಅದಕ್ಕೆ ತನ್ನದೆ ಆದ ಯಾವುದೇ ವಿಶಿಷ್ಟ ಗುರುತೂ ಇರಲಿಲ್ಲ. ಹಾಗಾಗಿ ಯಾರೂ ಅದರೊಡನೆ ಸಂಬಂಧ ಬೆಳೆಸಿರಲಿಲ್ಲ. ಹಾಗೂ ಪ್ರಾಮುಖ್ಯತೆಯನ್ನು ನೀಡುತ್ತಿರಲಿಲ್ಲ. ಇಂತಹ ಸ್ಥಿತಿಯಲ್ಲೇ ಡಾ.ಲೋಹಿಯಾರನ್ನು ನಾನು ಲೋಕಸಭೆಯಲ್ಲಿ ನೋಡಿದ್ದು. ಒಂದು ವ್ಯಕ್ತಿತ್ವದಲ್ಲಿ ಎರಡು ಮೂಲಗಳನ್ನಿಟ್ಟುಕೊಂಡವರಂತೆ –ಕಟ್ಟುನಿಟ್ಟಾದ ಸಿದ್ಧಾಂತಿಯಂತೆ ಮತ್ತು ಬಹುದೊಡ್ಡ ಭಾವುಕರಂತೆ–ಅವರು ನನ್ನ ಮೊದಲ ನೋಟಕ್ಕೆ ಗೋಚರಿಸಿದರು. ಒಂದು ಕೋನದಿಂದ ಅವರು ಸಂತರಂತೆ ಕಂಡರೂ ಮಹಾ ಮೂರ್ತಿಭಂಜಕ ಹಾಗೂ ಬಂಡುಕೋರರಾಗಿದ್ದರು.

ಲೋಕಸಭೆಗೆ ಬಂದ ತರುವಾಯ ಅವರು ಜವಾಹರಲಾಲ್ ನೆಹ್ರೂ ಅವರನ್ನು ಟೀಕಿಸಲು ಸುರು ಮಾಡಿದರು. ಹಲವಾರು ಬಾರಿ ನೆಹರೂ ಅವರ ಮೇಲೆ ಮುಖಾಮುಖಿ ದಾಳಿ ನಡೆಸುವ ಅವಕಾಶಗಳೂ ಇರುತ್ತಿದ್ದವು. ಒಂದು ದಿನ ನಾನು ಅವರನ್ನು ಕೇಳಿದೆ: "ಡಾಕ್ಟರ್ ಸಾಹೇಬ್ ನೀವು ಇಷ್ಟು ದೊಡ್ಡ ವ್ಯಕ್ತಿ, ತ್ಯಾಗಿ ಹಾಗೂ ಉದಾರಿಗಳಾಗಿದ್ದರೂ ಜವಾಹರ್ ಬಗ್ಗೆ ಮಾತ್ರ ಹಾಗೇಕೆ?". ಆಗ ಡಾಕ್ಟರ್ ಸಾಹೇಬರು ನೀಡಿದ ಉತ್ತರ ನನ್ನಲ್ಲಿನ್ನೂ ಹಸುರಾಗಿ ಉಳಿದಿದೆ. "ತಾರಕೇಶ್ವರಿ, ನನ್ನ ಮತ್ತು ಜವಾಹರರ ಸಂಬಂಧ ಎಂಥದೆನ್ನುವುದು ನಿನಗೆ ಅರ್ಥವಾಗದೇನೋ. ನಾನು ಆತನನ್ನು ನಾಯಕನೆಂದು ಮಾತ್ರವಲ್ಲ, ದೈವವೆಂದೂ ಭಾವಿಸಿದ್ದೆ. ಆದರೆ ಆತ ಕ್ರಾಂತಿಯ ಬೆಂಕಿಯನ್ನು ನಂದಿಸಿಬಿಟ್ಟಿದ್ದಾರೆ. ನಾನು ಅವರೋರ್ವ ಸಮಾಜವಾದೀ ನಾಯಕನೆಂದು ತಿಳಿದಿದ್ದೆ. ಆದರೆ ನಮ್ಮ ಆಶಯಗಳನ್ನೆಲ್ಲಾ ಅವರು ಛಿದ್ರಗೊಳಿಸಿದ್ದಾರೆ. ನನ್ನ ದುಃಖದಾಳವನ್ನು ನೀನು ಅಳೆಯಲಾರೆ...ಅನಾದಿ ಕಾಲದಿಂದಲೂ ಈ ದೇಶ ಪೂಜೆಯ ಗೀಳಿಗೆ ಸಿಕ್ಕಿದೆ. ಈಗ ಜವಾಹರರನ್ನು ಪೂಜಿಸುವುದರಲ್ಲಿ ಅಚ್ಚರಿ ಏನೂ ಇಲ್ಲ. ಇದನ್ನು ಕಿತ್ತೊಗೆಯಬೇಕು. ಅರಳಿಮರದ ಸುತ್ತಿರುವ ಕಲ್ಲುಗಳನ್ನೇ ಈ ದೇಶ ಪೂಜಿಸುತ್ತದೆ. ಈ ತೆರನಾದ ಅಸಹಜ ಕನಸುಗಳನ್ನು ಬುಡಮೇಲುಗೊಳಿಸಿದಾಗಲೇ ದೇಶ ಬದಲಿಸುವುದು. ಆಗ ಮಾತ್ರ ಈ ಸಂಪ್ರದಾಯವನ್ನು ಕಿತ್ತೊಗೆಯಲು ಸಾಧ್ಯ". ಕ್ರಾಂತಿಕಾರಕ ಬದಲಾವಣೆಗಳಿಗಾಗಿ ಸದಾ ಹಾತೊರೆಯುತ್ತಿದ್ದ ವ್ಯಕ್ತಿಯ ಮಾತುಗಳು ಇವು.

ಡಾಕ್ಟರ್ ಸಾಹೇಬರು ಸಂಸತ್ತಿನಲ್ಲಿ ಮಾತಾಡುವಾಗ ಅವರು ಚರ್ಚೆಗೆ ಎತ್ತಿಕೊಳ್ಳುತ್ತಿದ್ದ ಸಮಸ್ಯೆಗಳ ಆಳ ಅರಿಯಲು ನಾವು ತಿಂಗಳುಗಟ್ಟಲೆ ಕಳೆಯುತ್ತಿದ್ದವು. ಯಾಕೆಂದರೆ, ಅವರು ಯಾವ ವಿಷಯವನ್ನೇ ಪ್ರಸ್ತಾಪಿಸಲಿ, ಅದಕ್ಕೆ ಸಂಬಂಧಿಸಿದ ಅಂಶಗಳೆಲ್ಲಾ ಅವರ ತುದಿ ಬೆರಳಲ್ಲೇ ಇರುತ್ತಿದ್ದವು. ಯಾವುದೇ ವಿಷಯದ ಚರ್ಚೆಗೆ ಬಂದರೂ ಸರಿಯೇ, ಅದನ್ನು ಎಳೆಎಳೆಯಾಗಿ ಬಿಡಿಸಿ ಪ್ರತಿಭಾಪೂರ್ಣ ವಕೀಲರಂತೆ ಒಳಹೊಕ್ಕು ನೋಡುತ್ತಿದ್ದರು. ಹಲವು ಸಂದರ್ಭಗಳಲ್ಲಿ ಅವರು ತಮ್ಮ ಈ ನಿರ್ದಾಕ್ಷಿಣ್ಯ ವಕೀಲಿವೃತ್ತಿಗೆ ನನ್ನನ್ನೇ ವಸ್ತುವನ್ನಾಗಿ ಮಾಡಿಕೊಂಡಾಗಲಂತೂ ನಾನು ಒಳಗೊಳಗೇ ಕುದಿದುಹೋಗುತ್ತಿದ್ದೆ! ಆದರೆ ಇದು ಅವರ ಸಂಸದೀಯ ನಡಾವಳಿಯ ಸಹಜ ಲಕ್ಷಣ ಎಂಬ ಅರಿವು ಕ್ರಮೇಣ ನನ್ನಲ್ಲಿ ಮೂಡಿತು. ಯಾವುದೇ ವಿಷಯದ ಆಳವನ್ನೆಲ್ಲಾ ಹೊಕ್ಕು ನೋಡುವುದು ಅವರಿಗೆ ಪ್ರಿಯವಾದದ್ದು. ಹೀಗಿದ್ದರೂ ಅವರಿಗೆ ಎಲ್ಲರೂ ಶ್ರೇಷ್ಠವ್ಯಕ್ತಿಗಳೇ ಆಗಿರುತ್ತಿದ್ದರು. ಎಂತಲೇ ಅವರದ್ದು ಇಂತಹ ಒಂದು ವ್ಯಕ್ತಿತ್ವ ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಹಲವು ವ್ಯಕ್ತಿತ್ವಗಳ ಭಟ್ಟಿ ಎನ್ನಬಹುದೇನೋ.

ಅವರದ್ದು ಅಲೆಮಾರಿ ಬದುಕು. ಅವರದ್ದೇ ಆದ ಸಂಪತ್ತು ಅಥವಾ ಬ್ಯಾಂಕ್ ಹಣ ಇರಲಿಲ್ಲ. ಅವರ ಆಸ್ತಿ ಎಂದರೆ ಕಾರ್ಯಕರ್ತರು. ರಾಮಸೇವಕಜಿ ನನಗೊಮ್ಮೆ

ಹೀಗೆ ಹೇಳಿದರು: 'ಡಾಕ್ಟರರ ಬಗ್ಗೆ ನಮ್ಮ ಅಕ್ಕರೆಗೆ ಕಾರಣ, ಅವರು ತಮ್ಮ ಹಾಗೂ ಇತರರ ಮಧ್ಯೆ ಭೇದ ಎಣಿಸದಿರುವುದು'. ನಿಜ ಅನ್ನಿಸುತ್ತದೆ. ಒಂದು ದಿನ ಹೀಗಾಯಿತು: ನಾನು ನನ್ನ ಕಾರನ್ನು ಕಾಯುತ್ತಾ ಪಾರ್ಲಿಮೆಂಟಿನ ಗೇಟ್ ಬಳಿ ನಿಂತಿದ್ದೆ. ಡಾಕ್ಟರ್ ಸಾಹೇಬರೂ ಅತ್ತ ಕಡೆ ಹಾದು ಹೋಗುತ್ತಿದುದನ್ನು ಕಂಡು ನಾನು "ಎಲ್ಲಿಗೆ ಹೋಗಬೇಕು; ಬನ್ನಿ ಬಿಟ್ಟುಕೊಡುವೆ" ಎಂದೆ. ಅವರು ಕನಾಟ್ ಸರ್ಕಲ್‌ನಲ್ಲಿನ ಕಾಫಿ ಹೌಸ್‌ಗೆ ಹೋಗಬೇಕಿತ್ತು. ಕಾರು ಬಂತು. ಇಬ್ಬರೂ ಕಾರಿನಲ್ಲಿ ಕುಳಿತೆವು. ಕಾಫಿ ಹೌಸ್ ಬಂದ ಕೂಡಲೇ ಅವರು ಇಳಿದು ನನ್ನನ್ನೂ ಅಲ್ಲಿಗೆ ಕರೆದರು. ನಾನು ಅಲ್ಲಿಗೆ ಎಂದೂ ಹೋಗಿರಲಿಲ್ಲ. ಅದಕ್ಕೇ "ಡಾಕ್ಟರ್ ಸಾಹೇಬ್ ಆ ಕಾಫಿ ಹೌಸ್‌ನಲ್ಲಿ ಬರೀ ಜನ-ಜನ-ಜನ. ಆ ಜನಜಂಗುಳಿಗೆ ನಾನಂತೂ ಬರಲಾರೆ" ಎಂದೆ. ನನ್ನ ಈ ಮಾತು ಕೇಳಿದ ಕೂಡಲೇ ಅವರ ಮುಖದಲ್ಲಿ ಗೆರೆಗಳು ಮೂಡಿದವು. ಕಣ್ಣು ಚೂಪು ಮಾಡಿ ಅವರು ಹೇಳಿದರು: "ನೀನು ಈ ರೀತಿ ಭೇದ ಎಣಿಸುವುದು ನನಗೆ ಬೇಸರ ಉಂಟು ಮಾಡಿದೆ. ಅಲ್ಲಿಗೆ ಬರುವವರೆಲ್ಲಾ ಗುಮಾಸ್ತರು, ಟ್ಯಾಕ್ಸಿ ಡ್ರೈವರ್‌ಗಳು, ಟಾಂಗಾವಾಲಾಗಳು ಇತ್ಯಾದಿ ಅತಿ ಸಾಮಾನ್ಯ ಜನರೇ. ಅಂತ ಕಡೆ ಬರುವುದರಿಂದ ಅಂತಸ್ತಿಗೆ ಕಮ್ಮಿ ಅಂತ ನೀನು ಭಾವಿಸುವುದಾದರೆ, ನಿನ್ನ ಬುದ್ಧಿ ನೆಟ್ಟಗಿಲ್ಲಾಂತ ನಾನು ತಿಳಿಯಬೇಕಾಗುತ್ತದೆ". ನಾನು ಅವರತ್ತ ನೋಡಿದೆ. ಸಹಿಸಲಾರದಷ್ಟು ಜಿಗುಪ್ಸೆಯಾಯಿತು. ಆದರೆ ನನ್ನೊಳಗೆ ಅಂತಹದು ಏನಾದರೂ ಇದ್ದರೆ, ಅದರಿಂದ ದೂರ ಉಳಿಯಬೇಕೆಂದೂ ಮನಸ್ಸು ಮಾಡಿದೆ.

ಅವರ ನಿವಾಸಕ್ಕೆ ಭೇಟಿ ಕೊಡುವ ಹಲವು ಸಂದರ್ಭಗಳೂ ನಮಗೆ ಒದಗುತ್ತಿತ್ತು. ಅಲ್ಲಿ ಸದಾ ರೈತರು, ಕಾರ್ಮಿಕರು, ಕಲಾವಿದ-ಬರಹಗಾರರು, ಉಪಾಧ್ಯಾಯರುಗಳು ಹಾಗೂ ಪಕ್ಷದ ಕಾರ್ಯಕರ್ತರು ಮುಂತಾದವರಿಂದ ತುಂಬಿದ ಭಾರೀ ಗುಂಪು ಇರುತ್ತಿತ್ತು. ಅದೇ ಅವರ ಸಂಸಾರವಾಗಿತ್ತು ಕೂಡಾ. ಆದರೆ ಅವರು ಅದರ ಯಜಮಾನರಂತೂ ಆಗಿರಲಿಲ್ಲ. ಎಲ್ಲರೊಳಗೆ ಅವರು ಒಂದಾಗಿದ್ದರು. ಅವರ ಮಾತುಗಳಲ್ಲೇ ಇದನ್ನು ಹೇಳುವುದಾದರೆ; "ದಣಿದ, ಬಾಯಾರಿದ, ಹೃದಯ ಛಿದ್ರವಾದ, ಶೋಷಣೆಗೊಳಗಾದ ಸರ್ವರಿಗೂ ಇಲ್ಲಿ ಸ್ವಾಗತ. ಪ್ರೀತ್ಯಾದರಗಳಿಂದ ವಂಚಿತರಾದವರಿಗೆ ನನ್ನ ಪ್ರೀತಿ ಮುಡಿಪಾಗಿದೆ."

ಗಂಡು-ಹೆಣ್ಣಿನ ನಡುವೆ, ವರ್ಗ ವರ್ಗಗಳ ನಡುವೆ ಯಾವುದೇ ರೀತಿಯ ಅಸಮಾನತೆಯ ವಿಷಯವಾಗಲಿ ಅವರು ತೀವ್ರ ಚರ್ಚೆಗೆ ಇಳಿಯುತ್ತಿದ್ದರು. ಎಲ್ಲ ತೆರನ ಸಮಾನತೆ ತರಲು ಅವಿಶ್ರಾಂತವಾಗಿ ದುಡಿಯುವ ಅವರ ಚಿತ್ರ ನನ್ನ ಕಣ್ಮುಂದೆ ಬರುತ್ತದೆ. ಒಂದು ಸಲ ಪಾರ್ಲಿಮೆಂಟಿನ ಸೆಂಟ್ರಲ್ ಹಾಲ್‌ನಲ್ಲಿ ಡಾಕ್ಟರ್ ಸಾಹೇಬರು ಕುಳಿತಿದ್ದರು. ಸಾಮಾನ್ಯವಾಗಿ ಅವರು ಇರುವಲ್ಲೆಲ್ಲಾ ಜನ ಮುತ್ತಿಕೊಂಡಿರುತ್ತಿದ್ದರು. ಸಾಮಾನ್ಯವಾಗಿ ಅವರನ್ನು ಲೋಕಸಭಾ ಸದಸ್ಯರು ಮತ್ತು ಪತ್ರಕರ್ತರು ಸುತ್ತುವರೆದಿದ್ದರು. ಅವರೆಲ್ಲ ಒಟ್ಟಾಗಿ ಮಾತಾಡುತ್ತಾ ಮಧ್ಯೆ ಮಧ್ಯೆ ಜೋರಾಗಿ ನಗುತ್ತಿದ್ದುದು ಕಾಣಿಸಿತು.

ಡಾಕ್ಟರ್ ಸಾಹೇಬರು ಪಾರ್ಲಿಮೆಂಟಿನಲ್ಲಿ ಬಿಗುವಾಗಿದ್ದಷ್ಟೇ ಹೊರಗೆ ಮೃದುವಾಗಿ ವಿನೀತರಾಗುತ್ತಿದ್ದರು. ಎಷ್ಟೋ ಸಲ ಪಾರ್ಲಿಮೆಂಟಿನಲ್ಲಿ ನಮ್ಮನ್ನೇ ಟೀಕಿಸಿದ್ದರೂ ಹೊರಗೆ ಮಾತ್ರ ಕಾಫಿಗೆ, ಐಸ್‌ಕ್ರೀಮ್‌ಗೆ ಕರೆಯುತ್ತಿದ್ದರು. ಆ ದಿನ ಶನಿವಾರವಾದುದರಿಂದ ಲೋಕಸಭೆ ಮುಚ್ಚಿದ್ದು ಸೆಂಟ್ರಲ್ ಹಾಲ್ ಮಾತ್ರ ತೆರೆದಿತ್ತು. ನನ್ನನ್ನು ನೋಡಿದಾಕ್ಷಣ ಕರೆದರು. ಆಗ ಅವರು ಗಂಭೀರವಾದ ಚರ್ಚೆಯೊಂದರಲ್ಲಿ ಮುಳುಗಿದ್ದರು. ಚರ್ಚೆಗೂ ನಾನೂ ಸೇರಿಕೊಂಡೆ. ಆ ಚರ್ಚೆಯ ನಡುವೆ ನಾನು ಒಮ್ಮೆ, ಹತಾಶಗೊಂಡವರಂತಿದ್ದ ಕೆಲವು ಗಂಡಸರಿಗೆ 'ಬಳೆ ತೊಟ್ಟುಕೊಳ್ಳಿರಿ' ಎಂದು ಹೇಳಿದ ಮಾತನ್ನು ಸೇರಿಸಿದೆ. ಡಾಕ್ಟರ್ ಸಾಹೇಬರು ಕೂಡಲೇ ಗಂಭೀರರಾದರು. ಪಕ್ಕದಲ್ಲಿದ್ದ ನನ್ನ ಮಗಳ ಕಡೆಗೆ ತೀವ್ರವಾಗಿ ತಿರುಗಿ ನೋಡಿ, "ನೋಡು, ನಿನ್ನಮ್ಮನೇ ನಿನ್ನ ವಿರುದ್ಧ ಮಾತಾಡುತ್ತಿದ್ದಾಳೆ. ಬಳೆಗಳು ದೌರ್ಬಲ್ಯದ ಸಂಕೇತವೇನು?" ಎಂದು ಕೇಳಿದರು. ಮತ್ತೆ ಮುಂದುವರಿಸಿ ಅವಳನ್ನೇ ದಿಟ್ಟಿಸಿ ನೋಡುತ್ತಾ "ನಿನ್ನನ್ನು ದುರ್ಬಲಗೊಳಿಸಲು ನಿನ್ನ ತಾಯಿಗೆ ಯಾವ ಹಕ್ಕೂ ಇಲ್ಲ" ಎಂದಾಗ ನನ್ನ ಮಗಳು ಅವರನ್ನು ಪಿಳಿಪಿಳಿ ನೋಡಿದಳು. ಎಲ್ಲರೂ ನಗಲು ಆರಂಭಿಸಿದಳು. ಎಲ್ಲರೂ ನಗಲು ಆರಂಭಿಸಿದರು. ಅವಳು ಈ ಶ್ರೇಷ್ಠ ಕ್ರಾಂತಿಕಾರಿಯನ್ನು ಅರಿತುಕೊಳ್ಳಲು ಹವಣಿಸುತ್ತಿದ್ದಳು.

ಡಾ. ಲೋಹಿಯಾ ಅವರು ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲಿ ಸಮಾನತೆಗಾಗಿ ಚಳುವಳಿ ಮಾಡುತ್ತಿದ್ದಂತೆಯೇ ಭಾರತೀಯ ಭಾಷೆಗಳಿಗೂ ಘನತೆ ತಂದುಕೊಡುವ ಹೋರಾಟದಲ್ಲಿ ನಿರತರಾಗಿದ್ದರು. ಭಾರತೀಯರು ಅವರವರ ಭಾಷೆಗಳ ಬಗ್ಗೆ ಹೆಮ್ಮೆ ತಂದುಕೊಳ್ಳಬೇಕೆಂಬುದು ಅವರ ಆಶಯ. ಕಾರಣ: ಒಂದು ದೇಶದ ಸಾಂಸ್ಕೃತಿಕ ಅಸ್ತಿತ್ವ ನಿಲ್ಲುವುದು ಭಾಷೆಯ ಮೇಲೆಯೇ. ಅವರು ಇಂಗ್ಲಿಷ್ ಆಕ್ರಮಿತ ಸ್ಥಾನಗಳಲ್ಲಿ ಭಾರತೀಯ ಭಾಷೆಗಳನ್ನು ತರಲು ಯತ್ನಿಸುತ್ತಿದ್ದರು. ಅವರ ಪಕ್ಷ ಕೇವಲದಷ್ಟಿದ್ದರೂ ಈ ಕೆಲಸಕ್ಕಾಗಿ ಚಳುವಳಿ ಹಬ್ಬಿಸಿತ್ತು. ಭಾಷೆಯ ಸತ್ಯತೆಯನ್ನು ಅವರ ಪಕ್ಷ ಗುರುತಿಸಿತ್ತು. ಪ್ರಾದೇಶಿಕ ಭಾಷೆಗಳನ್ನು ಮುಂದೆ ತರಬೇಕೆನ್ನುವ ವಿಷಯ ಡಾ. ಲೋಹಿಯಾ ಅವರದ ದೊಡ್ಡ ಕೊಡುಗೆ ಎಂದರೆ ಸರಿಯಾಗಿ ಹೇಳಿದಂತಾಗುತ್ತದೆ. ಒಂದು ಸಲ ಪಾರ್ಲಿಮೆಂಟ್‌ನಲ್ಲಿ, ಶ್ರೀ ಸ್ವರ್ಣಸಿಂಗರು ಸುಳ್ಳು ಹೇಳಿದರೆಂದು ಲೋಹಿಯಾ ಆರೋಪಿಸಿದರು. ಕಾಂಗ್ರೆಸ್ಸಿಗರು ಇದನ್ನು ವಿರೋಧಿಸಿ, ಆ ಮಾತನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಆದರೆ ಡಾ. ಲೋಹಿಯಾ ಅದನ್ನು ತಿರಸ್ಕರಿಸಿದರು. ಮಾತಿನ ಚಕಮಕಿ ನಡೆದು ಈ ವಿಷಯ ಕೊನೆಗೊಂಡಿತು. ಹೊರಬಂದ ಮೇಲೆ ಅವರಿಗೆ "ಒಂದು ಮಾತು ಹೇಳಲು ಇಚ್ಛಿಸುತ್ತೇನೆ" ಎಂದು ಸೂಚಿಸಿದೆ. ಅವರು "ಏನು ಹೇಳು" ಎಂದರು. ಆಗ ನಾನು "ನೀವು ದೊಡ್ಡ ವಿದ್ವಾಂಸರು. ಭಾಷೆಯ ಮೇಲೆ ಅಪಾರ ಹಿಡಿತ ಇರುವವರು. ಆದರೂ ನೀವು 'ಝೂಟ್'(ಸುಳ್ಳು) ಪದ ಬಳಸುವುದು ಸರಿಯೆ?" ಎಂದೆ. ಅದಕ್ಕವರು 'ಸರಿ ಇನ್ನೇನು ಬಳಸಬೇಕಿತ್ತು ಹೇಳು' ಎಂದರು. ಅದಕ್ಕೆ ನಾನು "ಶ್ರೀ ಸ್ವರ್ಣಸಿಂಗರು ಅಸತ್ಯವನ್ನು

ನುಡಿಯುತ್ತಿದ್ದಾರೆ ಅಂತ ಹೇಳಬಹುದಿತ್ತು' ಎಂದು ಸೂಚಿಸಿದೆ. ನನ್ನ ಈ ಸೂಚನೆಗೆ ಡಾಕ್ಟರ್ ಸಾಹೇಬರು "ತಾರಕೇಶ್ವರಿ, 'ಅಸತ್ಯ' ಎನ್ನುವುದು ನಿಘಂಟಿನ ಮತ್ತು ಭಾರೀ ಭವನಗಳಲ್ಲಿ ವಾಸಿಸುವ ನಿನ್ನಂತಹ ಜನ ಆಡುವ ಮಾತು. ಸಾಮಾನ್ಯ ಜನ ಖಂಡಿತ ಆ ಪದವನ್ನು ಬಳಸುವುದಿಲ್ಲ" ಎನ್ನುತ್ತಿದ್ದಂತೆ ನಾನು ವಿಷಾದದಲ್ಲಿ ಕುಸಿದು ಹೋದೆ.

ಲೋಹಿಯಾ ಮರಣಾನಂತರ ಲೋಕಸಭೆಯಲ್ಲಿ ದುಃಖದ ಛಾಯೆ ಆವರಿಸಿತ್ತು. ಅವರು ನಮ್ಮ ನಡುವೆ ಅಗ್ನಿಪರ್ವತದಂತಿದ್ದು ಹಾಗೆಯೇ ಹೊರಟುಹೋದರು. ಲೋಕಸಭೆಯಲ್ಲಿ ಅವರು ತಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟುಹೋಗಿದ್ದಾರೆ. ಲೋಕಸಭೆ ಇನ್ನೂ ಅವರ ಧ್ವನಿಯನ್ನು ಪ್ರತಿಧ್ವನಿಸುತ್ತಿದೆ. ಅವರಂತೆ ಚಳುವಳಿ ನಡೆಸುವ ಮತ್ತಾರೂ ಈ ದೇಶದಲ್ಲಿಲ್ಲ. ದೇವರನ್ನು ಮತ್ತು ನಾಯಕರನ್ನು ಶ್ರೀಸಾಮಾನ್ಯನ ಮಟ್ಟಕ್ಕೆ ತರಲೆತ್ನಿಸಿದವರು ಅವರೊಬ್ಬರೇ. ಡಾ.ರಾಮಮನೋಹರ ಲೋಹಿಯಾ ದೇಶದ ರಾಜಕೀಯ ದಿಗಂತದಲ್ಲಿ ಒಬ್ಬ ಶ್ರೇಷ್ಠ ವ್ಯಕ್ತಿಯಾಗಿ ಪ್ರವೇಶಿಸಿದ್ದರು. ಅವರ ಮರಣಾನಂತರ ಯಾರೋ ಒಬ್ಬರು ಹೀಗೆಂದರು: "ಮಜ್ನು ಇಲ್ಲವಾದ, ಕಾಡು ಗೋಳ್ಗರೆಯುತ್ತಿದೆ..."

(ಕನ್ನಡಕ್ಕೆ: 'ಮಾನವ')

■

"ಲೋಕಸಭೆಯಲ್ಲಿ, ಮಂತ್ರಿಗಳ ಜಾರಿಕೆ ಉತ್ತರಗಳ, ಮೌನದ ಅಥವಾ ಬರೀ ಏನೋ ಗೊಣಗಾಟಗಳ ಮೂಲಕ ಬಹಳ ಸಾರಿ ಸತ್ಯದ ಕೊಲೆಯಾಗುತ್ತದೆ. ವಜ್ರದ ನೆಕ್‌ಲೇಸ್ ಹಾಗೂ ಸ್ವೆಟ್ಲಾನಾ ಪ್ರಶ್ನೆಗಳೇ ಇದಕ್ಕೆ ಉದಾಹರಣೆಗಳು. ಈ ಪ್ರಶ್ನೆಗಳನ್ನು ಎತ್ತುವುದಕ್ಕೆ, ಎಷ್ಟೊಂದು ರಾದ್ಧಾಂತವಾಗಿ ಕಾಲ ಹಾಳಾಯಿತು! ಆದರೂ ಆದರೂ ಕೊನೆಗೆ ಮಂತ್ರಿಗಳು ಸಿಕ್ಕಹಾಕಿಕೊಂಡಾಗ, ಅವರು ತಮ್ಮ ಸದಸ್ಯರ ಕೈಗಳನ್ನೆತ್ತಿಸುವ ಮೂಲಕವೋ ಅಥವಾ ಮತ ತೆಗೆದುಕೊಳ್ಳುವ ಮೂಲಕವೋ ಅಥವಾ ಸ್ವತಹ ವಿರೋಧೀ ಸದಸ್ಯರ ಪೆದ್ದುತನ ಇಲ್ಲವೇ ಅಜಾಗರೂಕತೆ ಇಲ್ಲವೇ ಅದರಲ್ಲಿನ ಪರಸ್ಪರ ಈರ್ಷೆಯ ಪರಿಣಾಮದಿಂದಾಗಿಯೋ ಮತ್ತು ಕೆಲವು ವಿರೋಧ ಪಕ್ಷಗಳು ಆಡಳಿತಪಕ್ಷದೊಂದಿಗೆ ಹೊಂದಿರುವ ಭಯ ಅಥವಾ ಸಾಮೀಪ್ಯದ ಉಪಯೋಗದಿಂದಲೋ ತಪ್ಪಿಸಿಕೊಂಡು ಪಾರಾಗಿಬಿಡುತ್ತಾರೆ. ತಮ್ಮ ಸುಳ್ಳುಗಳನ್ನು ಮುಚ್ಚಿಕೊಳ್ಳಲು ಮಂತ್ರಿಗಳಿಗೆ, 'ಬಾಯಿ ತಪ್ಪುವುದು' ಮತ್ತು 'ತಪ್ಪಾಗಿದೆ' ಈಯೆರಡು ಅಂಶಗಳೂ ನೆರವಾಗುತ್ತಲಿವೆ. ಇದೆಲ್ಲದರಿಂದಾಗಿ ಸಂಸದಿಯ ಪ್ರಜಾಪ್ರಭುತ್ವವೆಂಬುದೇ ಒಂದು ದೊಡ್ಡ ಕಪಟವೆಂಬಂತಾಗಿದೆ'

–ಲೋಹಿಯಾ(೯-೬-೭, 'ಮ್ಯಾನ್‌ಕೈಂಡ್')

ಡಾ. ಲೋಹಿಯಾ ಹಾಗೂ ವಿಷ್ಯಾದ ಸಮಾಜವಾದಿ

■ ಪ್ರೇಮ್ ಭಾಸಿನ್

ಕಾಂಗ್ರೆಸ್ ಸಮಾಜವಾದಿ ಪಕ್ಷದ ಹುಟ್ಟನ್ನು ವಿವರಿಸುತ್ತ ಮೇರಠ್ ಸಿದ್ಧಾಂತವು* (ಜನವರಿ ೧೯೩೬) "ಪಕ್ಷ ಹೊರಮೂಡಿದ್ದು; ಹಿಂದಿನ ಎರಡು ರಾಷ್ಟ್ರೀಯ ಹೋರಾಟಗಳ ಅನುಭವದಿಂದ; ರಾಷ್ಟ್ರೀಯ ಆಂದೋಲನಕ್ಕೆ ಹೊಸ ದಿಕ್ಕನ್ನು ನೀಡುವುದು-ಅಂದರೆ ಅದರ ಧ್ಯೇಯಗಳ ಪುನರ್ವ್ಯಾಖ್ಯಾನ ಹಾಗೂ ವಿಧಾನಗಳ ಪರಿಷ್ಕರಣ- ಅವಶ್ಯಕ ಎಂದು ನಂಬಿದ ಕಾಂಗ್ರೆಸ್ಸಿಗರಿಂದ; ಅದು ಹಿಂದಿನ (೧೯೩೦-೩೨ರಲ್ಲಿ ಗಾಂಧೀಜಿ ಪ್ರಾರಂಭಿಸಿದ) ಸವಿನಯ ಭಂಗ ಚಳುವಳಿಯ ಕೊನೆಯಲ್ಲಿ ರಚಿತವಾಯಿತು... ಪ್ರಸ್ತುತ ಸಾಮಾಜಿಕ ಶಕ್ತಿಗಳ ಬಗ್ಗೆ ಸೈದ್ಧಾಂತಿಕ ಹಿಡಿತವನ್ನು ಹೊಂದಿದವರಿಂದ ಮಾತ್ರ ಈ ದಿಕ್ಕಿನಲ್ಲಿ ಕಾರ್ಯಾರಂಭ ಸಾಧ್ಯವಿತ್ತು. ಇಂಥ ಕಾಂಗ್ರೆಸ್ಸಿಗರೆಂದರೆ ಮಾರ್ಕ್ಸ್‌ನ ಸಮಾಜವಾದದಿಂದ ಪ್ರಭಾವಿತರಾದ ಹಾಗೂ ಅದನ್ನು ಒಪ್ಪಿಕೊಂಡ ಕಾಂಗ್ರೆಸ್ಸಿಗರೇ ಆಗಿರುವುದು ಸ್ವಾಭಾವಿಕವಾಗಿತ್ತು. ಆದುದರಿಂದ ಪಕ್ಷದ ಕಾರ್ಯಕ್ರಮ ಮಾರ್ಕ್ಸ್‌ವಾದಿ ಕಾರ್ಯಕ್ರಮವೇ ಆಗಿರಬೇಕು. ಇಲ್ಲವಾದರೆ ತನ್ನ ಧ್ಯೇಯವನ್ನು ಕಾರ್ಯಗೊತಗೊಳಿಸುವುದಕ್ಕಾಗಿ ಮುಂದಾಳುತನವನ್ನು ನೀಡುವಲ್ಲಿ ಪಕ್ಷ ಸೋಲುತ್ತದೆ. ಮಾರ್ಕ್ಸ್‌ವಾದ ಮಾತ್ರ ಸಾಮ್ರಾಜ್ಯವಾದಿ ವಿರೋಧಿ ಶಕ್ತಿಗಳನ್ನು ಅವುಗಳ ಅಂತಿಮ ನೆಲೆಗೆ ಮುಟ್ಟಿಸಲು ಸಾಧ್ಯ"* ಎಂದು ಹೇಳಿತು.

ಮಾರ್ಕ್ಸ್‌ವಾದದ ಪರವಾಗಿ ಇದ್ದ ಇಷ್ಟು ಸ್ಪಷ್ಟ ನಿಲುವಿನಿಂದಾಗಿ, ಕಾಂಗ್ರೆಸ್ ಸಮಾಜವಾದಿ ಪಕ್ಷ ಮಾಸ್ಕೊ ಹಾಗೂ ಕಮ್ಯುನಿಸ್ಟ್

*** ಕಾಂಗ್ರೆಸ್ ಸಮಾಜವಾದಿ ಪಕ್ಷ ಮೇರಠ್‌ನಲ್ಲಿ ನಡೆಸಿದ ಎರಡನೇ ಅಖಿಲ ಭಾರತ ಸಮ್ಮೇಳನದ ಘೋಷಣೆ**

ಇಂಟರ್‌ನ್ಯಾಷನಲ್ ಜೊತೆಗೆ ಸಂಪರ್ಕ ಬಯಸುವುದು ಹಾಗು ಬೆಳೆಸುವುದು ಸ್ವಾಭಾವಿಕ ಎನಿಸಬಹುದಿತ್ತು. ಆದರೆ ಈ ರೀತಿ ಆಗಲಿಲ್ಲ. ಏಕೆಂದರೆ, ಶ್ರೀ ಜಯಪ್ರಕಾಶ ನಾರಾಯಣರು ಹೇಳುವಂತೆ "ಜಗತ್ತಿನ ಎಲ್ಲ ಕಾರ್ಮಿಕ ಹಾಗೂ ಸಮಾಜವಾದಿ ಚಳುವಳಿಗಳ ವಿಭಜನೆಗೆ ಹಾಗೂ ಎಲ್ಲಾ ವಸಾಹತು ರಾಷ್ಟ್ರಗಳಲ್ಲಿ ಕಮ್ಯುನಿಸ್ಟರ ಒಬ್ಬಂಟಿತನಕ್ಕೆ ಕಾರಣವಾದ, ೧೯೨೮ರಿಂದ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ಅನುಸರಿಸಿದ ತಪ್ಪು ನೀತಿ... ಇದು ಸಾಮಾನ್ಯವಾಗಿ ಮಾರ್ಕ್ಸ್‌ವಾದಿ ಸಿದ್ಧಾಂತಗಳಿಗೂ, ವಿಶೇಷವಾಗಿ ಲೆನಿನ್ ರೂಢಿಸಿದ ವಸಾಹತುಗಳ ಬಗೆಗಿನ ಪ್ರಸಿದ್ಧ ನೀತಿಗೂ ವಿರುದ್ಧವಾಗಿತ್ತು.[೧]

ಯುರೋಪಿನ ಸಾಮಾಜಿಕ ಪ್ರಜಾಪ್ರಭುತ್ವವಾದಿಗಳ ಬಗ್ಗೆ ಕಾಂಗ್ರೆಸ್ ಸಮಾಜವಾದಿ ಪಕ್ಷಕ್ಕೆ ಪ್ರೀತಿಯೂ ಇರಲಿಲ್ಲ. ಗೌರವವೂ ಇರಲಿಲ್ಲ. ಇದಕ್ಕೆ ಕಾರಣ ಬ್ರಿಟನ್ನಿನ ಎರಡು ಲೇಬರ್ ಸರಕಾರಗಳ ಅನುಭವ.

ಈ ರೀತಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಹೇಳಿಕೊಳ್ಳುವಂತಹ ಅಂತರ್‌ರಾಷ್ಟ್ರೀಯ ಸಂಪರ್ಕಗಳನ್ನಾಗಲೀ, ಸಂಬಂಧಗಳನ್ನಾಗಲೀ ಹೊಂದಿರಲಿಲ್ಲ. ಆದರೆ ಇದರ ಅರ್ಥ ಅಂತಾರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ, ಅದಕ್ಕೆ ಯಾವುದೇ ಆಸಕ್ತಿ ಇರಲಿಲ್ಲವೆಂದಾಗಲೀ, ಅಥವಾ ಅದಕ್ಕೊಂದು ಅಂತಾರಾಷ್ಟ್ರೀಯ ನೀತಿ ಹಾಗು ದೃಷ್ಟಿಕೋನ ಇರಲಿಲ್ಲವೆಂದಾಗಲೀ ಅಲ್ಲ. ಅಲಹಾಬಾದಿನಲ್ಲಿ, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಅಂತಾರಾಷ್ಟ್ರೀಯ ವಿಭಾಗದಲ್ಲಿ ಕೆಲಸ ಮಾಡುತ್ತ ಡಾ. ರಾಮಮನೋಹರ ಲೋಹಿಯಾ, ಮೂರನೆಯ ದಶಕದ ಮೊದಲಲ್ಲಿನ ಜರ್ಮನಿಯ ತಮ್ಮ ವೈಯಕ್ತಿಕ ಪರಿವೀಕ್ಷಣೆಯ ಜೊತೆಗೆ ಅಂತಾರಾಷ್ಟ್ರೀಯ ಶಕ್ತಿಗಳ ಹಾಸುಹೊಕ್ಕು ಪ್ರವಾಹಗಳನ್ನು ಅಧ್ಯಯನ ಮಾಡಿದ್ದರು;ಹಾಗೂ ಪರತಂತ್ರ ದೇಶಕ್ಕಾಗಿ, ನವಜಾತ ಪಕ್ಷಕ್ಕಾಗಿ ಒಂದು ಸ್ವತಂತ್ರ ವಿದೇಶ ನೀತಿಯನ್ನು ರೂಪಿಸಿದ್ದರು. ೧೯೩೮–೩೯ರಷ್ಟು ಮೊದಲೇ ಅಲಿಪ್ತನೀತಿ ಹಾಗೂ ಸಮಾನ–ಅಸಂಬದ್ಧತೆಯ ಎರಡೂ ಮೂಲಭೂತ ಪರಿಕಲ್ಪನೆಗಳನ್ನು ಅವರು ರೂಪಿಸಿದ್ದರು ಎನ್ನುವುದು ಗಮನಾರ್ಹ.

ಅದು ಕಠಿಣ ಹಾಗೂ ಗೊಂದಲಮಯ ಸ್ಥಿತಿಯಾಗಿತ್ತು; ಸಾಮ್ರಾಜ್ಯವಾದ ಹಾಗೂ ಫ್ಯಾಸಿಸಂ ನಡುವೆ, ಯುದ್ಧ ಹೆಚ್ಚು ಹೆಚ್ಚು ಸಂಭವನೀಯವಾಗತೊಡಗಿತ್ತು. ಇವೆರಡರಲ್ಲಿ ಯಾವುದು ಹೆಚ್ಚಿನ ಅನಿಷ್ಟ ಎನ್ನುವುದು ಸ್ವಾಭಾವಿಕ ಪ್ರಶ್ನೆಯಾಗಿತ್ತು. ಪ್ರಜಾಪ್ರಭುತ್ವ ಹಾಗೂ ಸಮಾಜವಾದಗಳೆರಡಕ್ಕೂ ಫ್ಯಾಸಿಸಂ ಒಂದು ಗಂಡಾಂತರ ಎನ್ನುವುದನ್ನು ಯಾರೂ ಅಲ್ಲಗಳೆಯುವುದು ಸಾಧ್ಯವಿರಲಿಲ್ಲ. ಆದರೆ ಸಾಮ್ರಾಜ್ಯವಾದ ಕೂಡಾ ಸಮಾಜವಾದ ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಅಷ್ಟೇ

---

೧. ಫ್ರಾಂ ಸೋಷಲಿಸಂ ಟು ಸರ್ವೋದಯ

ಗಂಡಾಂತರಕಾರಿಯಾಗಿತ್ತು. ಈ ಸಮಸ್ಯೆಗೆ ಪರಿಹಾರ ಯಾವುದು? ಡಾ.ಲೋಹಿಯಾ ಈ ಬಗ್ಗೆ ಸ್ಪಷ್ಟ ಹಾಗೂ ದೃಢ ನಿಲುವು ಹೊಂದಿದ್ದರು. "ನಾನು ಸಮ್ರಾಜ್ಯವಾದ-ವಿರೋಧಿಯೂ ಹೌದು, ಸಮಾಜವಾದಿಯೂ ಹೌದು ಎಂದು ಹೇಳುವುದು ಅಸಬಂಧ್ಧ ಎಂದು ನಾನು ಬಲ್ಲೆ. ಏಕೆಂದರೆ ಒಬ್ಬ ಸಮಾಜವಾದಿ, ಸಾಮ್ರಾಜ್ಯವಾದ-ವಿರೋಧಿ ಕೂಡ ಆಗಿರಬೇಕು. ಆದರೂ ಸಹ ನನ್ನ ಈ ಎರಡೂ ನಿಷ್ಠೆಗಳನ್ನು ನಾನು ಪ್ರತ್ಯೇಕವಾಗಿ ಹೇಳುವುದು ಅಗತ್ಯವಾಗಿದೆ. ಏಕೆಂದರೆ ಇತ್ತೀಚೆಗೆ ಸಾಮ್ರಾಜ್ಯವಾದ ವಿರೋಧಿ ಚಳುವಳಿಯನ್ನು ಹತ್ತಿಕ್ಕುವ ಸಮಾಜವಾದಿಗಳೂ ಇದ್ದಾರೆ"[೨] ಫ್ಯಾಸಿಸಂ ಒಂದು ಕಡಿಮೆ ಮಾಡಲಾಗದಂತಹ ಅನಿಷ್ಟವೇನಲ್ಲ. ಹಾಗೂ ಇವೆರಡರಲ್ಲಿ ಜನತಾಂತ್ರಿಕ ರಾಷ್ಟ್ರವಾದಿ ಯಾವುದನ್ನೂ ಆರಿಸಿಕೊಳ್ಳಲಾಗದು ಎನ್ನುವುದು ಅವರ ಉತ್ತರವಾಗಿತ್ತು. ಸಾಮ್ರಾಜ್ಯವಾದ ವಿರೋಧ ಹಾಗೂ ಫ್ಯಾಸಿಸಂ ವಿರೋಧ-ಇವೆರಡರ ಬದಲು ಅವರು ರಾಷ್ಟ್ರೀಯತೆ ಹಾಗೂ ಪ್ರಜಾಪ್ರಭುತ್ವಕ್ಕೆ ಸ್ಪಷ್ಟವಾಗಿ ಬದ್ಧವಾದ ರಚನಾತ್ಮಕ ಕಲ್ಪನೆಯನ್ನು ಮುಂದಿಟ್ಟರು.

ಯುದ್ಧೋತ್ತರ ಜಗತ್ತು ಹಾಗೂ ಪ್ಯಾರಿಸ್ಸಿನ ಶಾಂತಿ ಸಂಧಾನಗಳು ಆಚಾರ್ಯ ನರೇಂದ್ರ ದೇವರನ್ನು ೧೯೪೭ರ ಪ್ರಾರಂಭದಲ್ಲಿ ಈ ರೀತಿ ಹೇಳಲು ಪ್ರಚೋದಿಸಿದವು. "ಅಮೆರಿಕದ ಪ್ರಾಬಲ್ಯ ಪ್ರಾರಂಭವಾಗಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಅದು ಜಗತ್ತಿನ ಕ್ಷೇಮಕ್ಕೆ ಸಹಾಯಕವಾಗದು. ಅಮೇರಿಕೆ ಎಲ್ಲೆಡೆಗು ಪ್ರತಿಕ್ರಾಂತಿಯನ್ನು ಬೆಂಬಲಿಸುತ್ತಿದೆ. ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವಗಳ ಹೆಸರಿನಲ್ಲಿ ಅಮೆರಿಕದ ಕಾರ್ಯ ವಾಸ್ತವವಾಗಿ ಹೊಸ ಸಾಮ್ರಾಜ್ಯವಾದಕ್ಕೆ ಜನ್ಮ ಕೊಡುತ್ತಿದೆ. ಇಂಗ್ಲೆಂಡಿಗೆ ಹೇಗೆ ತತ್ವನಿಷ್ಠೆ ವಿದೇಶಿ ನೀತಿ ಇಲ್ಲವೋ ಹಾಗೆಯೇ ರಶಿಯದ ನೀತಿ ಕೂಡ ಯಾವುದೇ ತತ್ವಗಳನ್ನು ಆಧರಿಸಿಲ್ಲ. ತನ್ನ ತತ್ವಗಳನ್ನು ರೂಪಿಸುವಲ್ಲಿ ಹೊಸ ಯುಗದ ಅವಶ್ಯಕತೆಗಳಿಗೆ ಅನುಗುಣವಾದ ಹೊಸ ಮೌಲ್ಯಗಳ ಪರಿಗಣನೆಯಿಂದ ರಶಿಯ ನಿರ್ದೇಶಿತವಾಗಿಲ್ಲ... ಎರಡೂ ಬಣಗಳು ಒಂದರಿಂದ ಇನ್ನೊಂದು ಹೆದರಿಕೊಂಡಿವೆ. ಹಾಗೂ ಉದ್ರಿಕ್ತವಾಗಿ ಯುದ್ಧದ ಸಿದ್ಧತೆಗಳನ್ನು ನಡೆಸಿವೆ. ಇಂಗ್ಲೆಂಡ್ ಹಾಗೂ ಅಮೆರಿಕೆಗಳು ಪಶ್ಚಿಮದ ದೇಶಗಳ ಬಣವೊಂದನ್ನು ಕಟ್ಟುತ್ತಿದ್ದರೆ, ರಷಿಯ, ಪೂರ್ವ ಯುರೋಪಿನ ಎಲ್ಲಾ ದೇಶಗಳನ್ನು ತನ್ನ ಪ್ರಭುತ್ವದ ಪರಿಧಿಯೊಳಗೆ ತಂದಿದೆ. ಉತ್ತರದಲ್ಲಿ ಫಿನ್‌ಲ್ಯಾಂಡಿನಿಂದ ಮೊದಲು ಮಾಡಿ ದಕ್ಷಿಣದಲ್ಲಿ ಟರ್ಕಿ-ಸಿರಿಯಾದವರೆಗಿನ ಎಲ್ಲಾ ಕ್ಷೇತ್ರಗಳನ್ನು ತನ್ನ ಪರಿಧಿಯೊಳಗೆ ಸೇರಿಕೊಳ್ಳುವುದರ ಮೂಲಕ ಪಶ್ಚಿಮದ ಶಕ್ತಿಗಳ ಪೂರ್ವೋನ್ಮುಖಿ ಮುನ್ನಡೆಯನ್ನು ತಡೆಯಲು ಒಂದು ಒಡ್ಡನ್ನು ಅದು ಕಟ್ಟಬಯಸುತ್ತದೆ"[೩]

---

೨. ಕಾಂಗ್ರೆಸ್ ಸೋಷಲಿಸ್ಟ್ ೨-೪-೧೯೩೮

೩. ಆಚಾರ್ಯ ನರೇಂದ್ರ ದೇವ-ಯುಗ ಔರ್ ನೇತೃತ್ವ:ಪ್ರೊ. ಮುಕುಟ ಬಿಹಾರಲಾಲ್

ಆದರೆ ಎರಡೂ ಗುಂಪುಗಳ ಬಗೆಗಿನ ಈ ಭ್ರಮನಿರಸನ ಭಾರತದ ಸಮಾಜವಾದಿಗಳಲ್ಲಿ ಒಂಟಿತನವನ್ನು ಬೆಳೆಸಲಿಲ್ಲ. ಅಥವಾ ಯಾವುದೇ ಅಂತಾರಾಷ್ಟ್ರೀಯ ಸಹಕಾರ ಅಥವಾ ಸಹವಾಸವನ್ನು ಅವರು ಕೈಬಿಡುವಂತೆ ಮಾಡಲಿಲ್ಲ. ೧೯೪೭ರಲ್ಲಿ ಹೊಸದಿಲ್ಲಿಯಲ್ಲಿ ನಡೆದ ಏಷ್ಯನ್ ಸಂಬಂಧಗಳ ಸಮ್ಮೇಳನದ ಲಾಭ ಪಡೆದು ಭಾರತದ ಸಮಾಜವಾದಿಗಳು, ಸಮ್ಮೇಳನಕ್ಕಾಗಿ ಬಂದ ಇಂಡೋನೇಷ್ಯದ, ಬರ್ಮಾದ ಹಾಗೂ ಇನ್ನಿತರ ಏಷ್ಯನ್ ಸಮಾಜವಾದಿಗಳೊಡನೆ ಸಂಪರ್ಕ ಬೆಳೆಸಿದರು. ಹಾಗೂ ಏಷಿಯದಲ್ಲಿ ಕಾರ್ಯನಿರತರಾಗಿರುವ ಸಮಾಜವಾದಿ ಪಕ್ಷಗಳ ಸಂಘಟನೆಯೊಂದರ ರಚನೆಯ ವಿಚಾರವನ್ನು ಮುಂದಿಟ್ಟರು. ಈ ವಿಚಾರವನ್ನು ವಿವರಿಸುತ್ತ ಆಚಾರ್ಯ ನರೇಂದ್ರ ದೇವ "ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಏಷ್ಯನ್ ದೇಶಗಳ ಸಮಾಜವಾದಿ ಪಕ್ಷಗಳು ಒಂದು ಕಡೆಗೆ ಸೇರುವುದು ಅಗತ್ಯ. ಹಾಗೆ ಮಾಡುವುದರಿಂದ ಆ ಪಕ್ಷಗಳಿಗೆ ಪರಸ್ಪರ ಪ್ರೋತ್ಸಾಹ ಹಾಗೂ ಶಕ್ತಿ ದೊರೆಯುತ್ತದೆ. ಇಂತಹ ಸಮ್ಮೇಳನದಲ್ಲಿ ಪಕ್ಷಗಳ ಹಿತಾಸಕ್ತಿಗಳು ಪರಸ್ಪರ ವಿರುದ್ಧವಾಗಿರುವುದಿಲ್ಲ. ಜೊತೆಗೆ ಯಾವುದೊಂದು ಪಕ್ಷವೂ ಇನ್ನಿತರೆ ಪಕ್ಷಗಳನ್ನು ದಮನ ಮಾಡುವುದೂ ಸಾಧ್ಯವಾಗುವುದಿಲ್ಲ. ಸಾಮಾನ್ಯ ಹಿತಾಸಕ್ತಿ ಹಾಗೂ ಧ್ಯೇಯಗಳನ್ನು ಹೊಂದಿರುವ, ಒಂದೇ ಸಿದ್ಧಾಂತವನ್ನು ನಂಬಿರುವ, ಹಾಗೂ ಪರಸ್ಪರ ಸಮಾನ ಸ್ಥಾನಮಾನಗಳನ್ನು ಒಪ್ಪಿಕೊಳ್ಳಲು ಸಿದ್ಧವಿರುವ ಪಕ್ಷಗಳನ್ನು ಮಾತ್ರ ಈ ಸಮ್ಮೇಳನಕ್ಕೆ ಆಹ್ವಾನಿಸಬೇಕು"[೪] ಎಂದರು.

ಏಷ್ಯದ ಸಮಾಜವಾದಿ ಸಮ್ಮೇಳನವು ಅಧಿಕೃತವಾಗಿ ಹುಟ್ಟಲು ಆರು ವರ್ಷಗಳು ಉರುಳಬೇಕಾದರೂ, ತಮ್ಮ ಪ್ರವಾಸ ಹಾಗೂ ಬರಹಗಳ ಮುಖಾಂತರ ಇದಕ್ಕೆ ಒಂದು ಮೂರ್ತರೂಪ ಕೊಡುವ ಹಾಗೂ ಏಷ್ಯದ ಸಮಾಜವಾದದ ಮೂಲಭೂತ ನೀತಿ ನಿರೂಪಣೆಯ ಕೆಲಸ ಡಾ. ಲೋಹಿಯಾ ಪಾಲಿಗೆ ಬಿತ್ತು. ಈ ದಿಕ್ಕಿನಲ್ಲಿ ಅವರು ಈಜಿಪ್ಟ್, ಲೆಬನಾನ್, ಇಸ್ರೇಲ್, ಬರ್ಮಾ, ಇಂಡೋನೇಷ್ಯ ಹಾಗೂ ಇನ್ನಿತರ ದೇಶಗಳಿಗೆ ಪ್ರವಾಸ ಕೈಗೊಂಡರು.

ಅವರ ಪ್ರಕಾರ, ಸಾಮ್ರಾಜ್ಯವಾದ ಹಾಗೂ ಫ್ಯಾಸಿಸಂ ನಡುವಿನ ಸಂಪೂರ್ಣ ಯುದ್ಧದ ನಡುವೆಯೂ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ದೃಢ ಹೋರಾಟ ನಡೆಸುವಂತೆ ಭಾರತದ, ಬರ್ಮಾದ ಹಾಗೂ ಇಂಡೋನೇಷ್ಯದ ಸಮಾಜವಾದಿಗಳನ್ನು ಪ್ರಚೋದಿಸಿದ ತತ್ವಗಳೇ ಏಷ್ಯದ ಸಮಾಜವಾದಿಗಳ ಮಾರ್ಗದರ್ಶಕ ತತ್ವಗಳಾಗಿರಬೇಕು. ಯುದ್ಧದ ನಂತರದ ಪರಿಸ್ಥಿತಿ ಯುದ್ಧಕ್ಕಿಂತ ಮೊದಲಿನ ಪರಿಸ್ಥಿತಿಗಿಂತ ಭಿನ್ನವೇನೂ ಆಗಿರಲಿಲ್ಲ. ಈಗ ಸಾಮ್ರಾಜ್ಯವಾದಿ ಹಾಗೂ ಫ್ಯಾಸಿಸ್ಟ್ ಬಣಗಳ ಬದಲು 'ಪ್ರಜಾಪ್ರಭುತ್ವವಾದಿ' ಹಾಗೂ 'ಸಮಾಜವಾದಿ' ಬಣಗಳ ನಡುವಣ ವಿರೋಧವು ಜಗತ್ತನ್ನು ಕಾಡತೊಡಗಿತ್ತು. ಇವೆರಡರ ನೆಪಗಾರರು ಜನತೆಯ ಸ್ವಾತಂತ್ರ್ಯಗಳು ಹಾಗೂ ಭೌತಿಕ ಪ್ರಗತಿಯ

೪. ಪ್ರೊ. ಮುಕುಟ ಬಿಹಾರಿಲಾಲ

ಹೆಸರಿನಲ್ಲಿ ತಮಗೆ ಬೆಂಬಲ ನೀಡಬೇಕೆಂದು ಪ್ರಚಾರ ಕೈಗೊಂಡಿದ್ದರು. ಆದರೆ ಡಾ. ಲೋಹಿಯಾ ಇವೆರಡರಲ್ಲಿ ಒಂದರ ಕಡೆ ವಾಲುವುದನ್ನು ತಳ್ಳಿ ಹಾಕಿದರು. ಅಲಿಪ್ತತೆಯನ್ನು ಘೋಷಿಸಿದ ಅವರು ಜಾಗತಿಕ ವ್ಯವಹಾರಗಳಲ್ಲಿ ಪ್ರಜಾಪ್ರಭುತ್ವ ಹಾಗೂ ಸಮಾಜವಾದಗಳೆರಡಕ್ಕೂ ರಚನಾತ್ಮಕವಾಗಿ ಬದ್ಧವಾಗಿರುವ ಮೂರನೆಯ ಬಣವೊಂದನ್ನು ಕಟ್ಟಲು ಕರೆ ನೀಡಿದರು.

ಬಹುಮಟ್ಟಿಗೆ ಅವರೊಬ್ಬರ ಪ್ರಯತ್ನದಿಂದಾಗಿಯೇ ಫಲ ಮೂಡಿತು. ಬರ್ಮ, ಇಂಡೋನೇಷ್ಯ ಹಾಗೂ ಭಾರತದ ಸಮಾಜವಾದಿ ಪಕ್ಷಗಳ ಪ್ರತಿನಿಧಿಗಳು ರಂಗೂನಿನಲ್ಲಿ ಪೂರ್ವಭಾವಿ ಸಭೆಯೊಂದನ್ನು ನಡೆಸಿದರು. ಈ ಸಭೆಯಲ್ಲಿ ಡಾ. ಲೋಹಿಯಾ ಭಾರತೀಯ ಪ್ರತಿನಿಧಿ ತಂಡದ ಮುಖಂಡತ್ವ ವಹಿಸಿದ್ದರು. ಏಷ್ಯದ ಸಮಾಜವಾದಿ ಸಮ್ಮೇಳನವೊಂದನ್ನು ಔಪಚಾರಿಕವಾಗಿ ಪ್ರಾರಂಭಿಸುವುದರ ಅವಶ್ಯಕತೆಯ ಬಗ್ಗೆ ಮಾತ್ರವಲ್ಲದೇ, ಸಂಘಟನೆಯ ಮೂಲಭೂತ ತತ್ವಗಳ ಬಗ್ಗೆಯೂ ೧೯೫೨ರ ಮಾರ್ಚ್ ೨೫ರಂದು ಒಂದು ಒಪ್ಪಂದಕ್ಕೆ ಬರಲಾಯಿತು. ಸಮ್ಮೇಳನಕ್ಕಾಗಿ ಸಿದ್ಧತೆಗಳನ್ನು ಮಾಡಲು ಹಾಗೂ ರಂಗೂನಿನಲ್ಲಿ ಸಮ್ಮೇಳನವನ್ನು ನಡೆಸಲು, ಬರ್ಮಾ, ಇಂಡೋನೇಷ್ಯ ಹಾಗೂ ಭಾರತದ ಪಕ್ಷಗಳ ಒಬ್ಬೊಬ್ಬ ಪ್ರತಿನಿಧಿಯನ್ನೊಳಗೊಂಡ ಒಂದು ಸಿದ್ಧತಾ ಸಮಿತಿಯನ್ನು ರಂಗೂನಿನಲ್ಲಿ ಸ್ಥಾಪಿಸಬೇಕೆಂದೂ ನಿರ್ಧರಿಸಲಾಯಿತು.

ಒಂದೆಡೆ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ (ಕೋಮಿನ್‌ಫಾರ್ಮ್) ಹಾಗೂ ಇನ್ನೊಂದೆಡೆಗೆ ಆಗಲೇ ಭಾರತದ ಸಮಾಜವಾದಿ ಪಕ್ಷ ಔಪಚಾರಿಕವಾಗಿ ಸಂಬಂಧಗಳನ್ನು ಬೆಳೆಸಿದ್ದ ಸೋಷಲಿಸ್ಟ್ ಇಂಟರ್‌ನ್ಯಾಷನಲ್‌ಗಳು ಚುರುಕಾಗಿ ಕೆಲಸ ಮಾಡುತ್ತಿದ್ದ ಈ ಸಮಯದಲ್ಲಿ ಏಷ್ಯದ ಸಮಾಜವಾದಿಗಳಿಗಾಗಿ ಪ್ರತ್ಯೇಕ ಸಂಘಟನೆಯನ್ನು ನಿರ್ಮಿಸುವ ಅವಶ್ಯಕತೆ ಏನಿತ್ತು? ಈ ಬಗ್ಗೆ ಏಷ್ಯದ ಸಮಾಜವಾದಿಗಳ ನಿಲುವನ್ನು, ಬರ್ಮಾ, ಇಂಡೋನೇಷ್ಯ ಹಾಗೂ ಭಾರತದ ಸಮಾಜವಾದಿ ಪಕ್ಷಗಳ ಜಂಟೀ ಹೇಳಿಕೆ ಹಲವು ಚಿಕ್ಕ ಹಾಗೂ ಚೊಕ್ಕ ಪ್ಯಾರಾಗಳಲ್ಲಿ ವಿವರಿಸಿತು:

"ಪಶ್ಚಿಮ ಜಗತ್ತಿನಲ್ಲಿ ಬಂಡವಾಳವಾದದ ವಿರೋಧಿ ಹಾಗೂ ಅದರ ತಾರ್ಕಿಕ ಪರಿಣಾಮದ ರೂಪದಲ್ಲಿ ಸಮಾಜವಾದ ಹಾಗೂ ಸಮಾಜವಾದಿ ಚಳುವಳಿಗಳು ಪ್ರಾರಂಭವಾದವು".

"ಲಾಭವನ್ನೇ ಚೈತನ್ಯ ಮಾಡಿಕೊಂಡ ಬಂಡವಾಳವಾದವು ಸಾಮ್ರಾಜ್ಯವಾದ ಹಾಗೂ ವಸಾಹತುವಾದಗಳಿಗೆ ಜನ್ಮ ಕೊಟ್ಟಿತು. ಜನತೆಯ ಉದ್ಧಾರದ ಸಾಧನಗಳನ್ನು ಒದಗಿಸುವುದು ಅದಕ್ಕೆ ಸಾಧ್ಯವಾಗಿಲ್ಲ. ಅದು ಮಾನವನಿಂದ ಮಾನವನ ಶೋಷಣೆಯ ಒಂದು ರೂಪವಾಯಿತು".

"ಮಾನವನ ಘನತೆ ಹಾಗೂ ಸಮಾನತೆಯನ್ನು ಕೋಮಿನ್‌ಫಾರ್ಮ್‌ನ ಕಮ್ಯುನಿಸಂ, ಕಾರ್ಯಾಚರಣೆಯ ಸ್ತರದಲ್ಲಿ ನಿರಾಕರಿಸುತ್ತದೆ"

"ಅದರ(ಕೋಮಿನ್‌ಫಾರ್ಮ್‌ನ) ಧೋರಣೆಗಳು ಹಾಗೂ ನಂಬಿಕೆಗಳನ್ನು, ಅದು ತನ್ನ ಕೋಟೆ ಎಂದು ಪರಿಗಣಿಸುವ ಸೋವಿಯತ್ ರಶಿಯದ ನಿಲುವಿನಿಂದ ಪ್ರತ್ಯೇಕಿಸಲಾಗದು. ಕೋಮಿನ್‌ಫಾರ್ಮಿನ ಕಮ್ಯುನಿಸ್ಟರು ಎಂದರೆ ಅವರು ಮುಖ್ಯವಾಗಿ ಬರೀ ಸೋವಿಯತ್ ರಶಿಯದ ಮುಂಚೂಣಿ ವೀಕ್ಷಕರು ಹಾಗೂ ಬೇಹುಗಾರರು".

"ಕೋಮಿನ್‌ಫಾರ್ಮಿನ ದೇಶಗಳಲ್ಲಿ–ಉತ್ಪಾದನೆಯ ಕ್ಷೇತ್ರಗಳಲ್ಲಿಯೂ ಅನುಭವಕ್ಕೆ ಬಂದಿರುವ ರಹಸ್ಯ ಪೊಲೀಸರ ಮುಖೇನ ಭಯೋತ್ಪಾದಕ ವಿಧಾನಗಳನ್ನು ಬಳಸುವ –ಕೋಮಿನ್‌ಫಾರ್ಮ್ ಪಕ್ಷಗಳ ಸರ್ವಾಧಿಕಾರವಿರುತ್ತದೆ."

"ಈ ಕಾರಣಗಳಿಂದಾಗಿ ಏಷ್ಯದ ಸಮಾಜವಾದಿ ಪಕ್ಷಗಳು ಬಂಡವಾಳವಾದ ಹಾಗೂ ಕೋಮಿನ್‌ಫಾರ್ಮ್–ಕಮ್ಯುನಿಸಂ ಇವೆರಡನ್ನೂ ತಿರಸ್ಕರಿಸುತ್ತಿವೆ".

ಆ ಜಂಟಿ ಹೇಳಿಕೆಯಲ್ಲಿ ಪಶ್ಚಿಮದ ಸಮಾಜವಾದದ್ದೇ ಆಗಲಿ, ಸೋಷಲಿಸ್ಟ್ ಇಂಟರ್‌ನ್ಯಾಷನಲ್‌ದ್ದೇ ಆಗಲಿ ಪ್ರಸ್ತಾಪವೇ ಇರಲಿಲ್ಲ.

ಮುಂದುವರಿದು ಹೇಳಿಕೆ, "ಹಲವರ ಲಾಭಕ್ಕಾಗಿ ಮಾತ್ರ ಇರದೇ ಸಮಾಜದ ಪ್ರಯೋಜನಕ್ಕಾಗಿ ಇರುವ ಯೋಜನಾಬದ್ಧ ಉತ್ಪಾದನೆ." "ಸಾಮಾಜಿಕ ನ್ಯಾಯ". ಅರ್ಥವ್ಯವಸ್ಥೆಯ "ರಾಷ್ಟ್ರೀಕೃತ" ಹಾಗೂ "ಸಹಕಾರಿ" ಕ್ಷೇತ್ರಗಳು ನಿರ್ಬಾಧಿತವಾಗಿ ಕಾರ್ಯನಿರ್ವಹಿಸಲು ಅನುಮತಿ, "ಅಧಿಕಾರಶಾಹಿ ಆಡಳಿತ ಯಂತ್ರದ ಬದಲಾಗಿ ಜನತಾಂತ್ರಿಕ ಆಡಳಿತ ಯಂತ್ರ" ಹಾಗೂ "ಅಂತಾರಾಷ್ಟ್ರೀಯ ಸಹಕಾರ ಹಾಗು ನ್ಯಾಯದ ಮೇಲೆ ಆಧಾರಿತವಾದ ಶಾಂತಿ" ಮೊದಲಾದವುಗಳಲ್ಲಿ ಏಷ್ಯದ ಸಮಾಜವಾದಿಗಳ ನಂಬಿಕೆಯನ್ನು ದೃಢೀಕರಿಸಿತು.

ಈ ಜಂಟೀ ಹೇಳಿಕೆ ಈ ಮೂರು ಪಕ್ಷಗಳ ದೃಷ್ಟಿಕೋನದ ಸಮನ್ವಯವನ್ನು ಒಳಗೊಂಡಿರುವುದು ಮೇಲ್ನೋಟಕ್ಕೆ ಸಹಿತ ಸ್ಪಷ್ಟವಾಗುತ್ತದೆ. ಉ ನೂ ಸರ್ಕಾರದ ಆಧಾರಶಿಲೆಯಂತಿದ್ದ ಬರ್ಮಾದ ಪಕ್ಷ ಸ್ಪಷ್ಟವಾಗಿ ಮಾರ್ಕ್ಸ್‌ವಾದಿಯಾಗಿತ್ತಷ್ಟೇ ಅಲ್ಲ; ಪ್ರತ್ಯೇಕವಾದಿ ಹಾಗೂ ಪ್ರತಿಕ್ರಿಯಾವಾದಿ ಕೊರಿಯನ್‌ರೊಂದಿಗೆ ಸೇರಿ ದಂಗೆ ಎದ್ದಿದ್ದ ಅಲ್ಲಿಯ ಕಮ್ಯುನಿಸ್ಟರೊಂದಿಗೆ ಹತಾಶ ಹೋರಾಟದಲ್ಲಿ ತೊಡಗಿತ್ತು. ಇಂಡೋನೇಷ್ಯದ ಜನ ಕೂಡ ಕಮ್ಯುನಿಸ್ಟ್ ದಂಗೆಯೊಂದರ ವಿರುದ್ಧ ಹೋರಾಡಿ ಅದನ್ನು ನಿಗ್ರಹಿಸಿದ್ದರು. ನಿಜವಾಗಿ ನೋಡಿದರೆ ಅದೊಂದು ದಕ್ಷಿಣ ಹಾಗೂ ದಕ್ಷಿಣಪೂರ್ವದಲ್ಲಿ ಕಮ್ಯುನಿಸ್ಟರ ಬಂಡಾಯದ ಯುಗವಾಗಿತ್ತು. ಹೊಸದಾಗಿ ಹೊರಹೊಮ್ಮುತ್ತಿದ್ದ ಜನತಾಂತ್ರಿಕ ರಾಷ್ಟ್ರೀಯ ಶಕ್ತಿಗಳು ತಮ್ಮ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳುವುದನ್ನು ತಪ್ಪಿಸಲು ಹಾಗೂ ಪಶ್ಚಿಮದ ಶಕ್ತಿಗಳನ್ನು ಯುರೋಪಿನಿಂದ ಏಷ್ಯದ ಕಡೆಗೆ ತಿರುಗಿಸಲು ಸ್ಟಾಲಿನ್, ಭಾರತ, ಪಾಕಿಸ್ತಾನ್, ಬರ್ಮಾ, ಮಲಯಾ, ಥಾಯ್‌ಲ್ಯಾಂಡ್, ಇಂಡೋನೇಷ್ಯ, ಫಿಲಿಫಿನ್‌ಗಳು ಹಾಗೂ ಇನ್ನಿತರ ದೇಶದಲ್ಲಿ ಗಲಭೆಗಳನ್ನು ಪ್ರಚೋದಿಸಲು ಪ್ರಯತ್ನಿಸಿದ್ದ. ಸೋವಿಯತ್

ರಶಿಯ ಹಾಗೂ ಅದರ ಸ್ಥಾನೀಯ ಕೈಗೊಂಬೆಗಳ ಬಗೆಗಿನ ಏಷ್ಯದ ಸಮಾಜವಾದಿಗಳ ಈ ಕಹಿಭಾವನೆ ಸ್ವಾಭಾವಿಕ ಹಾಗೂ ಅರ್ಥವಾಗುವಂಥದ್ದು. ಕಾಮಿನ್‌ಫಾರ್ಮಿಸ್ಟರು ಹಾಗೂ ಅವರ ವಿಧಾನಗಳ ಟೀಕೆಯಲ್ಲಿನ ವಿಸ್ತಾರದಲ್ಲಿ ಈ ಸಮಾಜವಾದಿ ಸಂಘಟನೆ ತನ್ನ ಪ್ರತಿಬಿಂಬವನ್ನು ಕಂಡುಕೊಂಡಿತು. ಪಶ್ಚಿಮ ಸಾಮ್ರಾಜ್ಯವಾದವನ್ನು ಸುಮಾರು ಹಗುರುವಾಗಿಯೇ ಬಿಟ್ಟುಕೊಡಲಾಯಿತು. ಆದರೆ "ಜನತಾಂತ್ರಿಕ ಆಡಳಿತ" ಹಾಗೂ "ಏಷ್ಯದ ವಿಸ್ತೃತ ಜನತೆಯ ಸಂಪೂರ್ಣ ಮುಕ್ತಿ"ಯ ಮೇಲಿನ ಒತ್ತು ಸ್ಪಷ್ಟವಾಗಿದ್ದಂತೆಯೇ ಆ ಮೂಲಕ ಬಂಡವಾಳವಾದಿ ಪ್ರಜಾಪ್ರಭುತ್ವದ ತಿರಸ್ಕಾರವೂ ಸ್ಪಷ್ಟವಾಗಿತ್ತು. (ಏಕೆಂದರೆ ಅದು ಬರಿ ರಾಜಕೀಯ ಹಕ್ಕುಗಳನ್ನು ಮಾತ್ರ ಒದಗಿಸುತ್ತದೆ; ಸಾಮಾಜಿಕ ಹಕ್ಕುಗಳನ್ನಲ್ಲ.)

ಆದರೆ ಈ ಒಪ್ಪಂದದಲ್ಲಿಯೇ ಮುಂದಿನ ಭಿನ್ನಾಭಿಪ್ರಾಯಗಳ ಬೀಜಗಳು ಅಡಗಿಕೊಂಡಿದ್ದವು. ಮೊದಲ ಏಷ್ಯನ್ ಸಮಾಜವಾದಿ ಸಮ್ಮೇಳನ ರಂಗೂನಿನಲ್ಲಿ ೧೯೫೩ರ ಜನವರಿ ೬-೧೫ರವರೆಗೆ ನಡೆಯಿತು. ಆದರೆ ಡಾ.ಲೋಹಿಯಾ ಅದರಲ್ಲಿ ಭಾಗವಹಿಸಲಿಲ್ಲ. ಅವರದ್ದೇ ನಿರಂತರ ಶ್ರಮ ಹಾಗೂ ಆಸಕ್ತಿಯ ಫಲಸ್ವರೂಪವಾದ ಈ ಸಮ್ಮೇಳನದಲ್ಲಿ ಅವರು ಭಾಗವಹಿಸದೇ ಇರುವುದಕ್ಕೆ ಅವರ 'ವೈಯಕ್ತಿಕ' ಸ್ವಭಾವ ಕಾರಣವಾಗಿತ್ತೋ ಅಥವಾ ಆಗ ಅವರ ಕಣ್ಣಿಗೆ ಬಿದ್ದ ಹಲವು ಪ್ರವೃತ್ತಿಗಳ ಬಗ್ಗೆ ಅವರು ಚಿಂತಾಭರಿತರಾಗಲು ಪ್ರಾರಂಭಿಸಿದ್ದು ಕಾರಣವಾಗಿತ್ತೋ? ನಿಜ ಹೇಳುವುದಾದರೆ ಇದುವರೆಗೆ ನಾನು ಈ ಬಗ್ಗೆ ಖಚಿತ ಅಭಿಪ್ರಾಯಕ್ಕೆ ಬರುವುದು ಸಾಧ್ಯವಾಗಿಲ್ಲ. ಬಹುಶಃ ಇವೆರಡೂ ಕಾರಣಗಳಾಗಿದ್ದಿರಬಹುದು.

ರಂಗೂನ್ ಸಮ್ಮೇಳನದ ಬಗ್ಗೆ ಬರೆಯುತ್ತ ಇಸ್ರೇಲಿನ ಪ್ರಧಾನಮಂತ್ರಿ ಹಾಗೂ ಇಸ್ರೇಲಿನ ಪ್ರತಿನಿಧಿ ತಂಡದ ಮುಖಂಡರಾಗಿದ್ದ ಮೋಶಿ ಶಾರೆತ್, ಏಷ್ಯದ ಸಮಾಜವಾದಿಗಳ ಇಬ್ಬಗೆಯ ಮನಸ್ಸನ್ನೂ, ಸಮ್ಮೇಳನದಿಂದ ಹೊರಮೂಡಿದ ರಾಜಿ ಭಾವದ ಸೂತ್ರಗಳನ್ನೂ ಗುರುತಿಸಿದರು. ಅವರ ಪ್ರಕಾರ "ಏಷ್ಯದ ವಿಶಿಷ್ಟತೆ ಹಾಗೂ ವಿಶ್ವದ ಏಕತೆ-ಈ ಪರಿಕಲ್ಪನೆಗಳ ನಡುವಣ ಘರ್ಷಣೆಯೇ ಈ ಸಮ್ಮೇಳನದ ಕಾರ್ಯಕಲಾಪಗಳ ವಿಶಿಷ್ಟತೆಯಾಗಿತ್ತು... ಜಾಗತಿಕ ಶಾಂತಿಯ ಸಮಸ್ಯೆಯ ಬಗೆಗಿನ ದೃಷ್ಟಿಯು, ಎರಡೂ ವಿರೋಧಿ ಬಣಗಳ ನಡುವೆ ಮೂರನೆಯ ಶಕ್ತಿಯ ಪಾತ್ರವನ್ನು ನಿರ್ವಹಿಸಲು ಬಯಸದ ಹಲವು ಏಷ್ಯದ ದೇಶಗಳ ಮಹಾತ್ವಾಕಾಂಕ್ಷೆಯಿಂದ ಪ್ರಚೋದಿತವಾಗಿತ್ತು. ಈ ಸಮಸ್ಯೆಯ ಬಗ್ಗೆ ಸಹ ಭಿನ್ನಾಭಿಪ್ರಾಯ ತೀವ್ರವಾಗಿತ್ತು. ನಂತರ ಅಂಗೀಕೃತವಾದ ನಿರ್ಣಯದಲ್ಲಿ ಪ್ರಚಲಿತ ಪ್ರವೃತ್ತಿ ಸಾಕಷ್ಟು ಬದಲಾದ ರೂಪದಲ್ಲಿ ಪ್ರಕಟವಾಯಿತು. ಅಂತಾರಾಷ್ಟ್ರೀಯ ಬಲವರ್ಧನೆಯ ಮುಂದುವರಿಯುತ್ತಿರುವ ಪ್ರಕ್ರಿಯೆ ವಿಶ್ವಶಾಂತಿಗೆ ಗಂಡಾಂತರಕಾರಿ ಎಂದು ಸಮ್ಮೇಳನದ ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಆದರೆ ಅದೇ ಉಸಿರಿನಲ್ಲಿ, ಅದು ತಾತ್ವಿಕ ತಟಸ್ಥತೆಯನ್ನು ತಿರಸ್ಕರಿಸಿತು. ಆಕ್ರಮಣವನ್ನು ಎದುರಿಸಲು ಎಲ್ಲಾ ಜನತಾಂತ್ರಿಕ

ದೇಶಗಳನ್ನು ಬಲಪಡಿಸಲು ಕರೆ ನೀಡಿತು. ಹಾಗೂ ಬಾಹ್ಯ ಮತ್ತು ಆಂತರಿಕ ಗಂಡಾಂತರಗಳಿಂದ ಪ್ರಜಾಪ್ರಭುತ್ವದ ಸಕ್ರಿಯ ರಕ್ಷಣೆಯ ವಿಚಾರಕ್ಕೆ ತಾನು ಬದ್ಧ ಎಂದು ಹೇಳಿತು"[೫]

ಹೈದರಾಬಾದ್(ಆಗಸ್ಟ್ ೧೯೫೩) ಹಾಗೂ ಕಾಲಾವ್ (ಬರ್ಮಾ, ಮೇ ೧೯೫೪)ಗಳಲ್ಲಿ ನಡೆದ ಏಷ್ಯನ್ ಸಮಾಜವಾದಿ ಸಮ್ಮೇಳನದ ಬ್ಯೂರೋದ ಸಭೆಗಳಲ್ಲಿ ಲೋಹಿಯಾ ಭಾಗವಹಿಸಿದರು. ಕುದಿಯುತ್ತಿದ್ದ;ದೃಷ್ಟಿಕೋನಗಳ ಭಿನ್ನಾಭಿಪ್ರಾಯ ಕಾಲಾವ್‌ನಲ್ಲೇ ಹೊರಬಂತು;ಹಾಗೂ ಡಾ. ಲೋಹಿಯಾ ಅವರು ಏಷ್ಯನ್ ಸಮಾಜವಾದಿ ಸಮ್ಮೇಳನದ ಖಜಾಂಚಿ ಹಾಗೂ ಅದರ ವಸಾಹತು–ವಿರೋಧಿ ಬ್ಯೂರೋದ ಅಧ್ಯಕ್ಷರಾದ ಯು ಕಾವ್ ನೈನ್ ಅವರೊಂದಿಗೆ ಘರ್ಷಿಸಿದರು.

ತಮ್ಮ ಪ್ರಾಸ್ತಾವಿಕ ಮಾತುಗಳಲ್ಲಿ, ವಸಾಹತುವಾದದ ಬಂಡವಾಳವಾದಿ ಹಾಗೂ ಕಮ್ಯುನಿಸ್ಟ್ ಪ್ರಕಾರಗಳ ಬಗ್ಗೆ . ಯು ಕಾವ್ ನೈನ್, "ನನಗೆ ತಿಳಿದಂತೆ, ಎರಡೂ ಬಗೆಯ ವಸಾಹತುವಾದ ಗಂಡಾಂತರಕಾರಿಯಾಗಿವೆ. ವಾಸ್ತವವಾಗಿ, ಬಹುಶಃ ರಶಿಯದ ಸಾಮ್ರಾಜ್ಯವಾದ ಇನ್ನೂ ಹೆಚ್ಚು ಅವನತಿಪರವಾದದ್ದು ಹಾಗೂ ಇನ್ನೂ ಹೆಚ್ಚು ಗಂಡಾಂತರಕಾರಿ;ಏಕೆಂದರೆ ಅದು ಹೆಚ್ಚು ಕರುಣಾಹೀನವಾದದ್ದು, ಹೆಚ್ಚು ವ್ಯವಸ್ಥಿತವಾದದ್ದು ಹಾಗೂ ಜಾಗತಿಕ ಕಮ್ಯುನಿಸ್ಟ್ ಕ್ರಾಂತಿಯ ಹೆಸರಿನಲ್ಲಿ ಹೆಚ್ಚು ವಿಜೃಂಭಿತ ಭಾಷೆಯಿಂದ ಸಮರ್ಥಿತವಾದದ್ದು.[೬]

ಇದನ್ನು ಡಾ. ಲೋಹಿಯಾ ಪ್ರಶ್ನಿಸದೇ ಇರುವುದು ಹೇಗೆ ಸಾಧ್ಯವಿತ್ತು? ಸೋವಿಯತ್ ಸಾಮ್ರಾಜ್ಯವಾದ ಹೆಚ್ಚು ಕರುಣಾಹೀನವಾದದ್ದು ಹಾಗೂ ಭಾಷಾ ವಿಜೃಂಭಣೆಯಿಂದ ಕೂಡಿದ್ದು ಎಂದು ಯು ಕಾವ್ ನೈನ್ ಹೇಳಿದುದನ್ನು ಒಪ್ಪುವುದರ ಮೂಲಕ ಡಾ.ಲೋಹಿಯಾ ಚರ್ಚೆ ಪ್ರಾರಂಭಿಸಿದರು. ಅದರ ಬಗ್ಗೆ ನಿರಾಸಕ್ತರಾಗುವುದರಿಂದ ಏಷ್ಯದ ಜನರನ್ನು ಬರಿ ಎಚ್ಚರಿಸುವುದಕ್ಕಷ್ಟೇ ಅಲ್ಲ, ಅದರ ನಿಜಸ್ವರೂಪವನ್ನು ಬಯಲಿಗೆಳೆಯುವುದು ಅವಶ್ಯಕ ಎನ್ನುವುದನ್ನೂ ಅವರು ಒಪ್ಪಿದರು. ಆದರೆ ಸೋವಿಯತ್ ಸಾಮ್ರಾಜ್ಯವಾದವನ್ನು, 'ಜನತಾಂತ್ರಿಕ' ಸಾಮ್ರಾಜ್ಯವಾದದೊಂದಿಗೆ, ಮೊದಲನೆಯದಕ್ಕೆ ಹಾನಿಯಾಗುವಂತೆ ಹೋಲಿಸುವುದರ ಬಗ್ಗೆ ಅವರು ಎಚ್ಚರಿಕೆ ನೀಡಿದರು. "ಇಂತಹ ಹೋಲಿಕೆಗಳು ಬಹುತೇಕವಾಗಿ ಒಂದು ಆಯ್ಕೆಗೆ ನಮ್ಮನ್ನು ಕೊಂಡೊಯ್ದುಬಿಡುತ್ತದೆ. ಇಂಥ ಆಯ್ಕೆಯನ್ನು ಕನಿಷ್ಠದ ಆಯ್ಕೆ ಎಂದೂ ಕರೆಯುತ್ತಾರೆ. ಆದರೆ ಅಂತಹ ಯಾವ ಆಯ್ಕೆಯೂ ಇರಬಾರದು, ಕನಿಷ್ಟ ಏಷ್ಯದ ಸಮಾಜವಾದಿಗಳಿಗೆ... ನಿಜವಾಗಿ ನೋಡಿದರೆ ಇರಬಾರದು. ಇಂಡೋ–ಚೀನಾ

---

೫. ಜನತಾ ಮೇ ೧೭, ೧೯೫೩

೬. ಜನತಾ ಜೂನ್ ೨೦, ೧೯೫೪

ಅಥವಾ ಕೇನ್ಯಾದಲ್ಲಿ ಬಂಡವಾಳವಾದಿ ಸಾಮ್ರಾಜ್ಯವಾದ ನಡೆಸಿದ ಭಯೋತ್ಪಾದನೆಗಿಂತ ಹೆಚ್ಚಿನ ಬರ್ಬರತೆ ಇನ್ನಾವುದು ಆಗಬಹುದೆಂಬುದು ನನಗಂತೂ ಗೊತ್ತಿಲ್ಲ. ಸೈದ್ಧಾಂತಿಕವಾಗಿ ಅಟ್ಲಾಂಟಿಕ್ ಗುಂಪಿನಿಂದ ಮಾತ್ರವಲ್ಲದೇ ಸೋವಿಯತ್ ಬಣದಿಂದ ಕೂಡ ಬಂಡವಾಳದಿಂದ ಮಾತ್ರವಲ್ಲ, ಕಮ್ಯುನಿಸಂನಿಂದ ಕೂಡ-ಸ್ಪಷ್ಟವಾಗಿ ದೂರ ಉಳಿಯುವಂತಹ ಮನೋಭಾವವನ್ನು ಬೆಳೆಸಿದರೆ ಮಾತ್ರ ಸಮಾಜವಾದ ಗೆಲ್ಲುವುದು-ಅದೂ ಏಷ್ಯದಲ್ಲಿ-ನಿಶ್ಚಿತವಾಗಿ ಸಾಧ್ಯ. ಇವೆರಡರಲ್ಲಿ ಒಂದನ್ನು ಹೆಚ್ಚಾಗಿ ಬಯಸುವವರಿಂದ ಇನ್ನೊಂದರ ವಿರುದ್ಧ ಹೋರಾಡುವ ಮತ್ತು ನಮ್ಮದೇ ದಾರಿಯನ್ನು ನಿರ್ಮಿಸಿಕೊಳ್ಳುವ ನಮ್ಮ ಶಕ್ತಿಯನ್ನು ಕುಗ್ಗಿಸಿಕೊಳ್ಳುತ್ತೇವೆ... ಜನತೆಯ ಮನಸ್ಸಿಗಾಗಿ ನಡೆಯುವ ಹೋರಾಟ ಅವರ ದೇಹಗಳಿಗಾಗಿ ನಡೆಯುವ ಹೋರಾಟದಷ್ಟೇ ನಿರ್ಣಾಯಕವಾದದ್ದು. ಈ ಹೋರಾಟದಲ್ಲಿ ಎಲ್ಲಾ ತೆರನ ಸಾಮ್ರಾಜ್ಯವಾದಗಳ ಹಾಗೂ ಅವುಗಳಿಗೆ ಜನ್ಮ ಕೊಡುವ ಎಲ್ಲಾ ನಂಬಿಕೆಗಳ ಸಮನಾದ ತಿರಸ್ಕಾರದಲ್ಲಿ ಏಷ್ಯದ ಸಮಾಜವಾದಿಗಳ ನಂಬಿಕೆ ಬೇರೂರಬೇಕು. ಬಂಡವಾಳವಾದದ ವಿರುದ್ಧದ ಹೋರಾಟವನ್ನು ಎಷ್ಟು ತೀವ್ರಗೊಳಿಸಲಾಗುತ್ತದೆಯೋ, ಅಷ್ಟರ ಮಟ್ಟಿಗೆ ತಾವು ಕಮ್ಯುನಿಸಂನೊಂದಿಗೆ ಕೂಡಾ ಹೋರಾಡುವುದು ಸುಲಭ ಸಾಧ್ಯವಾಗುತ್ತದೆ ಎನ್ನುವುದನ್ನು ಸಮಾಜವಾದಿಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು"[೭]

ಈ ಮಧ್ಯೆ ಭಾರತದ ಸಮಾಜವಾದ ಪಕ್ಷ ಮೊದಲ ಬಾರಿ ಇಬ್ಭಾಗವಾಯಿತು. ಹಾಗೂ ಕಾಲಾವ್‌ನಲ್ಲಿ ನಡೆದ ಸಭೆಯೇ ಡಾ. ಲೋಹಿಯಾ ಭಾಗವಹಿಸಿದ ಕೊನೆಯ ಏಷ್ಯನ್ ಸವಾಜವಾದಿ ಸಮ್ಮೇಳನದ ಸಭೆಯಾಯಿತು. ಆದರೆ ಪಕ್ಷ ಇಬ್ಭಾಗವಾಗಿರದಿದ್ದರೂ ಸಹ ಏಷ್ಯನ್ ಸಮಾಜವಾದಿ ಸಮ್ಮೇಳನದ ಚರ್ಚೆಗಳಲ್ಲಿ ಸಕ್ರಿಯ ಪಾತ್ರ ವಹಿಸುವುದನ್ನು ಅವರು ಬಹುಶಃ ಕಡಿಮೆ ಮಾಡುತ್ತಿದ್ದರು ಎನ್ನಿಸುತ್ತದೆ. ತಮ್ಮ ಜೀವವನ್ನೇ ಸವೆಸಿ ಒಂದು ಗುಂಪನ್ನು ಅಥವಾ ಸಂಘಟನೆಯನ್ನು ಬೆಳೆಸುವಲ್ಲಿ ಅವರು ಕಾರಣಕರ್ತರಾಗಿದ್ದರೂ ಸಹ, ತಾವು ನಿರ್ದೇಶಿಸಿದ ಪಥವನ್ನು ತ್ಯಜಿಸಿದ ಅಂತಹ ಸಂಘಟನೆಗಳಿಂದ ವಿಮುಖರಾಗುವಲ್ಲಿ ಡಾ. ಲೋಹಿಯಾ ಹಿಂದೆ ಮುಂದೆ ನೋಡುತ್ತಿರಲಿಲ್ಲ.

ಅಂದಿನಿಂದ ೧೮ ವರ್ಷಗಳು ಉರುಳಿವೆ. ಆದರೆ ಕಾಲಾವ್‌ನಲ್ಲಿ ಅವರು, ಅಂದು ಆಡಿದ ಮಾತುಗಳು ಅಂದಿಗೆ ಎಷ್ಟು ಸಮರ್ಪಕವಾಗಿದ್ದವೋ ಇಂದಿಗೂ ಅಷ್ಟೇ ಸಮರ್ಪಕವಾಗಿವೆ ಎಂಬುದನ್ನು ಘಟನೆಗಳು ರುಜುವಾತು ಮಾಡಿಸಿವೆ.

(ಕನ್ನಡಕ್ಕೆ: ಬಾಮು ಹೆದ್ದೂರಶೆಟ್ಟಿ)

■

೭. ಜನತಾ ಜೂನ್ ೨೦ ೧೯೫೪

ಲೋಹಿಯಾ: ಒಂದು ಹಿನ್ನೋಟ

■ ಕಿಷನ್ ಪಟ್ನಾಯಕ್

ಬದಲಾವಣೆಯ ಅಸ್ತ್ರವಾಗಿ ಉಪಯೋಗಿಸಲ್ಪಡಬೇಕಾದ ಯಾವುದೇ ಸಾಮಾಜಿಕ ಸಿದ್ಧಾಂತ ಅಥವಾ ಕಾರ್ಯಕ್ರಮ ತಂತಾನೇ ಮಾರ್ಪಾಡುಗಳಿಗೆ ಒಳಗಾಗಬೇಕಾಗುತ್ತದೆ. ಒಂದು ವೇಳೆ ಚಿಂತನಶಾಲಿಯು ಮಹಾಪುರುಷನಾಗಿದ್ದ ಪಕ್ಷದಲ್ಲಂತೂ ಅವನ ಸಿದ್ಧಾಂತವನ್ನು ಸಾರಾಸಗಟಾಗಿ ಉಪಯೋಗಿಸಲಿಕ್ಕಾಗುವುದಿಲ್ಲ– ಅದರ ಸಾರ ಅಥವಾ ಬೇರಿನ ತತ್ವಗಳು ಶತಮಾನ ಸತ್ಯಗಳಾಗಿದ್ದರೂ ಕೂಡಾ. ಅತ್ಯುನ್ನತ ಮಹಾಪುರುಷರಾದ ಪ್ಲೇಟೋ, ಮಾರ್ಕ್ಸ್ ಮತ್ತು ಗಾಂಧಿ ಇವರೆಲ್ಲರ ಸಿದ್ಧಾಂತಗಳು ಹೆಚ್ಚು ಕಡಿಮೆ ಇಡೀ ಜಗತ್ತನ್ನೇ ಸುತ್ತುಗಟ್ಟಿಕೊಂಡು ಶತಶತಮಾನಗಳ ದೀರ್ಘ ಅವಧಿಗಾಗಿ ಬೆಳವಣಿಗೆಯ ಯೋಜನೆ ಹಾಕುವಷ್ಟು ಸಾರ್ವತ್ರಿಕವಾಗಿದೆ.

ಏನೇ ಆದರೂ ಆಚರಣೆಯಲ್ಲಿ, ಅಂಥ ಸಿದ್ಧಾಂತಗಳನ್ನು ಕೇವಲ ದೇಶದ ಸರಹದ್ದುಗಳೊಳಗೆ ಮತ್ತು ನಿಯಮಿತ ಕಾಲಾವಧಿಯವರೆಗೆ– ಉದಾಹರಣೆಗೆ– ಕೆಲವು ದಶಕಗಳ ಕಾಲ ಪ್ರಯೋಗಿಸಬಹುದು. ಲೆನಿನ್, ಮಾವೋ ಅಥವಾ ಬಿಸ್ಮಾರ್ಕ್‌ರಂಥಹ ಮಹಾ ರಾಜಕೀಯ ನಾಯಕರು ದೇಶದ ಸರಹದ್ದುಗಳ ಒಳಗೆ 'ದುಡಿ'ಯಬೇಕಾಗಿದೆ; ಮತ್ತು ನಾಲ್ಕೈದು ದಶಕಗಳ ಕಾಲಾವಧಿ ಮೀರದಂತೆ ತಂತ್ರಗಳನ್ನು ರೂಪಿಸಿಕೊಳ್ಳಬೇಕಾಗಿದೆ. ಕಾರ್ಯಕ್ಷೇತ್ರ ಮತ್ತು ಕಾಲಾವಧಿಯ ದೃಷ್ಟಿಯಿಂದ ಹಾಕಿಕೊಳ್ಳಬೇಕಾಗಿರುವ ಈ ಥರದ ಮಿತಿಯಿಂದಾಗಿಯೇ ಯಾರು ಆ ಸಿದ್ಧಾಂತಗಳನ್ನು ತತ್‌ಕ್ಷಣದಲ್ಲಿ ಪ್ರಯೋಗಿಸಬೇಕೆನುತ್ತಾರೋ ಅಂಥವರು ಆ ಸಿದ್ಧಾಂತಗಳನ್ನು ತಿದ್ದಿ ಸರಿ ಮಾಡಿಕೊಳ್ಳಬೇಕಾಗಿದೆ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಸಿದ್ಧಾಂತಗಳು ಸತ್ಯವನ್ನು ಪರಿಕ್ಷೆಗೆ ಒಡ್ಡುವುದಕ್ಕಾಗಿ ಪ್ರಾಯೋಗಿಕ ಪರಿಕರ ಇದ್ದಂತೆ.

ಒಂದು ಸತ್ವಯುತವಾದ ಸಿದ್ಧಾಂತ ಪ್ರಾಮಾಣಿಕ ಕಾರ್ಯಕರ್ತನೊಬ್ಬನ ಮೂಲಕ ಬದುಕಿನ ಪರೀಕ್ಷೆಗೆ ಒಡ್ಡಲ್ಪಟ್ಟಾಗ ಸತ್ವದ ಹೊಸ ಹೊಸ ರೂಪಗಳು ಬಯಲಿಗೆ ಬರುತ್ತವೆ. ವ್ಯತಿಕ್ರಮವಾಗಿ, ಸತ್ಯವನ್ನು ಹಿಂಜಿದಾಗ ಅದು ಹೊಸ ರೂಪಕ್ಕೆ ತಿರುಗುತ್ತದೆ ಮತ್ತು ಮುಂದಿನ ಹೆಜ್ಜೆಯಲ್ಲಿ ಬದಲಾವಣೆಗಾಗಿ ಸಿದ್ಧಾಂತದ ಮೇಲೆ ಒತ್ತಡ ತರುತ್ತದೆ. ತಪ್ಪುತಪ್ಪಾಗಿ ಇಲ್ಲಾ ಅರೆಮನಸ್ಸಿನಿಂದ ಒಂದು ಸಿದ್ಧಾಂತವನ್ನು ಬದುಕ ಪರೀಕ್ಷೆಗೆ ಒಡ್ಡಿದಾಗ ಅದು ತೊಡಕುಗಳನ್ನು ಮತ್ತು ಅಕರಾಳ ವಿಕರಾಳತೆಗಳನ್ನು (Distortions) ಉತ್ಪತ್ತಿಸುತ್ತದೆ. ಈ ಅಕರಾಳ ವಿಕಾರಳತೆಗಳು ಮುಂದೆ ಸಿದ್ಧಾಂತದಲ್ಲಿಯೇ ಮಾರ್ಪಾಟುಗಳನ್ನು ಮಾಡಿಬಿಡುತ್ತವೆ.

ಕಾರ್ಯಕ್ರಮಗಳು ಹೆಚ್ಚಾಗಿ ಸಮಯ ಮತ್ತು ಪ್ರದೇಶಕ್ಕೆ ಅಂಟಿಕೊಂಡಿರುತ್ತವೆ. ಅವು ನಿರ್ದಿಷ್ಟ ಕಾಲಾವಧಿಗಾಗಿ ಪ್ರದೇಶವೊಂದರ ಗತಿಸ್ಥಿತಿಗಳಿಗೆ ನೇರವಾಗಿ ಸಂಬಂಧಿಸಿರುತ್ತವೆ. ಆ ಕಾರಣಕ್ಕಾಗಿಯೇ ಕಾಲಸಂದರ್ಭಕ್ಕನುಸಾರವಾಗಿ ಹೊಸಬರಿಂದ ಕಾರ್ಯಕ್ರಮಗಳಲ್ಲಿ ಸತತವಾಗಿ ನಿಯಮಿತ ಬದಲಾವಣೆಯಾಗುತ್ತಿರಬೇಕು. ಕೆಲವು ಮಹಾಪುರುಷರು ಪ್ರತಿಪಾದಿಸಿದ ಮೂಲ ಸ್ಥೂಲ ಸಿದ್ಧಾಂತಗಳ ಮಾರ್ಪಾಡಿಗಾಗಿ ಸಮರ್ಥನೀಯ ಆಧಾರ ಅಥವಾ ಅವಶ್ಯಕತೆಯನ್ನು ಸೂಚಿಸಲೆಂದೇ ಒಂದು ಸಮಜಾಯಿಷಿಯಾಗಿ ಈ ಮೇಲಿನ ಪೀಠಿಕೆಯನ್ನು ಬರೆಯಲಾಗಿದೆ. ಆದರೆ ಈ ಥರದ ಮಾರ್ಪಾಡಿಸುವಿಕೆಯ ಪ್ರಕ್ರಿಯೆಯಲ್ಲಿ ಕಲಬೆರಕೆ ಅಥವಾ ಉದ್ದೇಶಪೂರ್ವಕವಾದಂಥ ಅಕರಾಳವಿಕರಾಳತೆಯೂ ನಡೆಯಬಹುದು. ಅಲ್ಲದೇ ಯಾರು ತನ್ನ ಗುರು ಅಥವಾ ನಾಯಕನ ಸಿದ್ಧಾಂತವನ್ನು ಪ್ರಾಮಾಣಿಕವಾಗಿ ಬದುಕ ಪರೀಕ್ಷೆಗೆ ಒಡ್ಡುತ್ತಿದ್ದಾರೆ ಮತ್ತು ಯಾರು ಅದನ್ನು ಬುದ್ಧಿಪೂರ್ವಕವಾಗಿ ಅಕರಾಳವಿಕರಾಳಗೊಳಿಸುತ್ತಿದ್ದಾರೆ ಎಂಬುದನ್ನು ಪತ್ತೆ ಹಚ್ಚುವುದು ಕಷ್ಟಸಾಧ್ಯವೇ. ಕಾರ್ಯಕರ್ತ ಅಥವಾ ಉತ್ತರಾಧಿಕಾರಿ (successor) ತೀವ್ರತರವಾದ ಆಸ್ಥೆ ಮತ್ತು ಗುರಿಯ ಬಗೆಗಿನ ನಿಷ್ಠೆಯಿಂದ ಹೋರಾಟದ ಕಣಕ್ಕೆ ಎಳೆಯಲ್ಪಟ್ಟಿದ್ದಾನೋ ಇಲ್ಲವೋ ಎಂಬುದನ್ನಷ್ಟು ಮಾತ್ರ ನಾವು ಗಮನಿಸಬಹುದಾಗಿದೆ, ಅಷ್ಟೇ.

ಲೋಹಿಯಾವಾದಿಗಳನ್ನು ವಿಮರ್ಶೆಗೆ ಗುರಿಪಡಿಸಲು ಮತ್ತು ಇಂದಿನ ವಿಶೇಷ ಘಟನೆಗಳ ಉತ್ಕಟ ಘಟ್ಟದ ನಮ್ಮ ರಾಜಕೀಯಕ್ಕೆ ಸಂಬಂಧಿಸಿದಂತೆ ಲೋಹಿಯಾ ಸಿದ್ಧಾಂತದ ಪ್ರಾಯೋಗಿಕ ಸತ್ಯವನ್ನು ಲೆಕ್ಕಾಚಾರಕ್ಕೊಳಪಡಿಸಲು ಈ ಮುನ್ಸೂಚನೆಯ ದೀರ್ಘ ಟಿಪ್ಪಣಿ ಅವಶ್ಯವಾಯಿತು. ನನಗನಿಸುತ್ತದೆ, ಅನುಯಾಯಿಗಳ ವಿಷಯದಲ್ಲಿ ಲೋಹಿಯಾ ಅವರು ತೀರಾ ದುರದೃಷ್ಟವಂತರಗಿದ್ದರೇನೊ ಅಂತ. ಅವರ ಅನುಯಾಯಿಗಳನ್ನು ಬರೋಬರಿಯಾಗಿ ಈ ರೀತಿ ವಿಭಾಗಿಸಬಹುದು. ೧. ಅವರ ನುಡಿಗಟ್ಟುಗಳನ್ನು ಪರಿಣಾಮಹೀನವಾಗಿ ಸಂಬಂಧ ಸಾಟಿಯೇ ಇಲ್ಲದ ರೀತಿಯಲ್ಲಿ ಪದೇ ಪದೇ ಹೇಳುವವರು. ೨. ತಮ್ಮ ರಾಜಕೀಯ ಸಮಯಸಾಧಕತನಕ್ಕೆ ಒಗ್ಗುವಂಥ

ಸಂದರ್ಭದಲ್ಲಿ ಮಾತ್ರ ತಾವು ಲೋಹಿಯಾ ನಿಷ್ಠರೆಂಬ ಪೋಜು ಕೊಟ್ಟು ಕವಾಯತು ಮಾಡುವವರು.

ತಮ್ಮ ಉತ್ತರಾಧಿಕಾರಿಗಳನ್ನಾಗಿ ತತ್ವಶಿಷ್ಯರನ್ನು (disciples) ದಕ್ಕಿಸಿಕೊಳ್ಳುವುದರಲ್ಲಿ ಯಶಸ್ವಿಯಾದ ಆ ಎಲ್ಲಾ ಮಹಾಪುರುಷರು ನಿಜಕ್ಕೂ ಅದೃಷ್ಟಶಾಲಿಗಳೇ. ತಮ್ಮ ಗುರುವಿನ ನಿಖರ ಶಬ್ದವಾಕ್ಯಗಳನ್ನು ಮಾರ್ಪಡಿಸಿಕೊಳ್ಳಲು ಹಿಂಜರಿಯದ ಅವರು ಚಿಂತನಾ ಪ್ರವಾಹದ ಚೈತನ್ಯ ಮತ್ತು ಸಾರವನ್ನು ಕಾಪಾಡಿಕೊಂಡು ಹೋಗುತ್ತಾರೆ ಹಾಗೂ ಅದನ್ನು ಸಮರ್ಥಶಾಲಿ ಪ್ರವಾಹವನ್ನಾಗಿ ವಿಸ್ತರಿಸುತ್ತಾರೆ. ಅವರ ಪ್ರಸ್ತುತತೆ, ಗುರಿಯ ಬಗೆಗೆ ಅವರಲ್ಲಿರುವ ನಿಷ್ಠೆ ಮತ್ತು ಅವರ ಸ್ವಾರ್ಥರಹಿತ ಅರ್ಪಣಾ ಮನೋಭಾವದಲ್ಲಿಯೇ ಅಡಕವಾಗಿರುತ್ತದೆ.

ಯಾವುದನ್ನು ಒಬ್ಬರು ಮೊದಲು ಉಪದೇಶಿಸಿದ್ದರೋ ಅದರಿಂದ–ಶೈಲಿ, ರಚನೆ ಅಲ್ಲದೇ ಸಾರಾಂಶದಲ್ಲಿಯೂ– ಮತ್ತೊಬ್ಬರು ಭಿನ್ನಭಿನ್ನವಾಗಿದ್ದರೂ ಕೂಡಾ ರಾಮಕೃಷ್ಣರಿಗೆ ವಿವೇಕಾನಂದರು ದ್ರೋಹಗೈದರು ಎಂದು ಯಾರಾದರೂ ಹೇಳಲು ಸಾಧ್ಯವೆ?

ಕಾಲ ಉರುಳುತ್ತಾ ಹೋದಂತೆ ಲೋಹಿಯಾ ಪರಿವಾರದಲ್ಲಿದ್ದ ಸಮಯಸಾಧಕರ ಮತ್ತು ನಿಂದಕರ ಹೂರಣ ಸರಿಯಾಗಿ ಹೊರಬಂದಿದೆ. ಲೋಹಿಯಾ ಅವರನ್ನು ಅರಿಯದವರು ಮಾತ್ರ, ರಾಜನಾರಾಯಣಗಳ ಅಥವಾ ಮಧುಲಿಮಯೆಗಳ 'ತಾವೇ ಲೋಹಿಯಾವಾದದ ವಕ್ತಾರರು' ಎಂಬ ವಾರಸುದಾರಿಕೆಗಳಿಗೆ ಮಹತ್ವ ಕೊಡಬಲ್ಲರು. ಆದರೆ ಚಿಕ್ಕ ಚಿಕ್ಕದಾಂಥ ಪ್ರಾಮಾಣಿಕ ಗುಂಪುಗಳು ಅಥವಾ ವ್ಯಕ್ತಿಗಳು ಕೂಡಾ– ಅವರ ನಿಷ್ಠೆಯನ್ನು ಪ್ರಶ್ನಿಸಲಿಕ್ಕೇ– ಆಗುವುದಿಲ್ಲ– ಎಲ್ಲಿಯತನಕ ಕೇವಲ ಲೋಹಿಯಾರವರ ಜನ್ಮ ಮತ್ತು ಸಾವಿನ ದಿನಗಳನ್ನು ಆಚರಿಸುತ್ತ ಮತ್ತು ಅವರ ಕೆಲವು ಥಕ್ಕನೆ ಹಿಡಿಯುವ ಸೂಕ್ತಿಗಳನ್ನು ಗಿಳಿ ಪಾಠ ಮಾಡುತ್ತ, ಲೋಹಿಯಾರವರ ಯಕಶ್ಚಿತ್ ಉಪಾಸಕರಾಗಿ ಉಳಿಯುತ್ತಾರೋ ಅಲ್ಲಿಯತನಕ ಅವರು ಉಪಯೋಗಕ್ಕೇ ಬರುವುದಿಲ್ಲ. ಎಲ್ಲಿಯತನಕ ತತ್ವಗಳು ಅವರ ವರ್ತನೆ ಮತ್ತು ಬದುಕಗತಿಯಲ್ಲಿ ಎಬ್ಬಲೂ ಸಾಧ್ಯವಾಗದಂಥ ಅವಿಭಾಜ್ಯ ಅಂಗವಾಗುವುದಿಲ್ಲವೋ, ಎಲ್ಲಿಯ ತನಕ ಅವರು ತಮ್ಮ ಸ್ವಂತ ನುಡಿಕಟ್ಟು ಮತ್ತು ಕಲ್ಪನೆ, ಸ್ವಂತ ಉದಾಹರಣೆ ಮತ್ತು ಅಂಕಿಅಂಶಗಳ ಮೂಲಕ ತಮ್ಮನ್ನು ತಾವೇ ತಾವಾಗಿ ಬಹಿರಂಗಪಡಿಸಿಕೊಳ್ಳುವುದಿಲ್ಲವೋ ಅಲ್ಲಿಯತನಕ ಅವರನ್ನು ಗಿಳಿಗಳೆಂದೇ ಕರೆಯಬೇಕು. 'ಜೇಲು, ಸಲಿಕೆ ಮತ್ತು ಮತ'ದ ವಕಾಲತ್ತು ವಹಿಸುವ, 'ಚತುಸ್ತಂಭ ರಾಜ್ಯ'ವೆಂದು ಕರೆದ ತಕ್ಷಣ ವಿಕೇಂದ್ರೀಕರಣದ ಅರ್ಥ ಸಡಿಲವಾಗಿ ಬಿಡುತ್ತದೆ ಎಂದು ಹಠ ಹಿಡಿಯುವ ಲೋಹಿಯಾವಾದಿಗಳ ಮಾತು ಕೇಳುತ್ತಾ ಹೋದಂತೆ ಅಸಹ್ಯವೆನಿಸುತ್ತದೆ–ನಿರಾಶೆಯಾಗುತ್ತದೆ.

ಒಂದು ವೇಳೆ ಲೋಹಿಯಾವಾದಿಯೊಬ್ಬನನ್ನು ಧರ್ಮದ ಬಗ್ಗೆ ಒಂದಿಷ್ಟು

ಮಾತನಾಡು ಎಂದು ಕರೆದಾಗ, "ಧರ್ಮ ದೀರ್ಘಾವಧಿಯ ರಾಜಕಾರಣ, ರಾಜಕಾರಣ ಅಲ್ಪಾವಧಿಯ ಧರ್ಮ" ಈ ಥರ ಅವನು ಮಾತು ಶುರು ಮಾಡುತ್ತಾನೆ. ಹಿಂದುಳಿದ ವರ್ಗಗಳ ಮೀಸಲಾತಿಯ ಬಗ್ಗೆ ಹೇಳುವುದಾದರೆ ಅದು ಕಟ್ಟುನಿಟ್ಟಾಗಿ ಲೋಹಿಯಾ ಹೇಳಿದಂತೆ ಶೇಕಡಾ ಅರವತ್ತೇ ಇರಬೇಕು; ಶೇ. ೫೯ ಅಥವಾ ೬೧ ಎಂದಲ್ಲಿ ಆತ ಒಪ್ಪುವುದೇ ಇಲ್ಲ! ಲೋಹಿಯಾವಾದಿಗಳು ಬೆಲೆಯೇರಿಕೆ ಬಗ್ಗೆ ಮಾತನಾಡುತ್ತಾ, ಸ್ಟ್ರೆಪ್ಟೋಮೈಸಿನ್ ಇಂಜಕ್ಷನ್‌ಗೆ ಸಂಬಂಧಿಸಿ ಡಾ. ಲೋಹಿಯಾ ಮಾಡಿದ್ದ ಮೌಲ್ಯ ವಿಶ್ಲೇಷಣೆಯ ಅಂಕಿಅಂಶಗಳ ದೃಷ್ಟಾಂತ ಕೊಡುವುದನ್ನು ನಾನು ಕೇಳಿದ್ದೇನೆ. ಆದರೆ ಡಾ. ಲೋಹಿಯಾರವರು ಆ ಲೆಕ್ಕಾಚಾರವನ್ನು ಕಾಲು ಶತಮಾನದ ಹಿಂದೆ ಮಾಡಿದ್ದರು! ಆನಂತರ ಯಾವನೇ ಒಬ್ಬ ಲೋಹಿಯಾವಾದಿಯೂ ಒಂದೇ ಒಂದು ಸಾಮಗ್ರಿಯದ್ದಾಗಲೀ ಮೌಲ್ಯ-ಬೆಲೆಯ ಸಂಬಂಧವನ್ನು ಪರೀಕ್ಷಿಸುವ ಪ್ರಯತ್ನ ಮಾಡಿಲ್ಲ.

ಯಾವುದೇ ರೀತಿಯಲ್ಲಿ ಲೋಹಿಯಾರ ಸಾವಿನ ನಂತರ ಅವರ ಸಿದ್ಧಾಂತದ ರಚನಾತ್ಮಕ ಅಥವಾ ವಿಮರ್ಶಾತ್ಮಕ ಬೆಳವಣಿಗೆ ನಡೆಯಲಿಲ್ಲವೆಂಬ ಸಂಗತಿಯನ್ನು ಸಾದರಪಡಿಸಲು ಮೇಲಿನ ಉದಾಹರಣೆಗಳನ್ನು ಕೊಡಲಾಗಿದೆ. ಲೋಹಿಯಾವಾದಿಗಳಲ್ಲಿ ಬಹಳಷ್ಟು ಜನ ಡಿಗ್ರೀವಂತ ಅಜ್ಞಾನಿಗಳಾಗಿದ್ದಾರೆ, ಅವರು ಎಂದೂ ಸಿದ್ಧಾಂತಗಳ ಬಗ್ಗೆ ಓದುವುದಿಲ್ಲ, ಬರೆಯುವುದಿಲ್ಲ ಮತ್ತು ಸಮಾಜವಾದದ ತಾತ್ವಿಕ ಮುಖಗಳ ಬಗ್ಗೆ ಕಿಂಚಿತ್ತಾದರೂ ಯೋಚಿಸುವುದಿಲ್ಲ. ಚರ್ಚಿಸುವುದಿಲ್ಲ. ಅವರ ಅನುಯಾಯಿಗಳಾಗಿದ್ದವರಲ್ಲಿ ಯಾರು ರಾಜಕೀಯ ಅಧಿಕಾರ ಮತ್ತು ರಾಷ್ಟ್ರೀಯ ಪ್ರಾಮುಖ್ಯತೆ ಪಡೆದುಕೊಂಡಿದ್ದಾರೋ ಅವರಲ್ಲಿ, ರಾಜಕೀಯ ಅಥವಾ ಆರ್ಥಿಕ ವಿಚಾರ ಮತ್ತು ವಿಶ್ಲೇಷಣೆಗೆ ಒಂದಾದರೂ ಅಧ್ಯಾಯವನ್ನೂ ಸೇರಿಸಿದಂಥವರು ಒಬ್ಬರೂ ಇಲ್ಲ. ಈ ಮಾತು ಅವರೆಲ್ಲ ಬುದ್ಧಿಜೀವಿಗಳೆಂಬ ಕಾರಣಕ್ಕಾಗಿ ಅಲ್ಲ; ಆದರೆ ಅವರು ರಾಜಕೀಯ ಸಮಯಸಾಧಕತನದಲ್ಲಿ ಎಷ್ಟರಮಟ್ಟಿಗೆ ಹೂತು ಹೋಗಿದ್ದಾರೆಂದರೆ... ಅವರು ಬರವಣಿಗೆಗೆ ಇಲ್ಲಾ ಬಾಯಿ ಮಾತುಗಳಿಗೆ ಕಿವಿಗೊಡುವುದೇ ಇಲ್ಲ-ಅವು ಅವರ ಅಹಂ ಮತ್ತು ಕರ್ಣಪಟಲಕ್ಕೆ ಹಿತ ಕೊಡದ ಹೊರತು.

ಇದೆಲ್ಲಾ ತಾತ್ವಿಕ ಬದನಾಮಿತನ (bankruptcy) ಮತ್ತು ಮುಖ್ಯವಾಗಿ ಸಾಮಾಜಿಕ-ಆರ್ಥಿಕ ಮತ್ತು ಸಾಂಸ್ಕೃತಿಕ ಹಂತಗಳಲ್ಲಿ ಬೇರೆ ಮೂಲ ಚಟುವಟಿಕೆ ಇಲ್ಲದಂಥ ಅಪೂರ್ವ ಬಂಜೆತನದ ಪರಿಣಾಮಕ್ಕೆ ಎಡೆಮಾಡಿತು. ರಾಜಕೀಯ ವಲಯದಲ್ಲಿ ಜನಶಕ್ತಿಯನ್ನು ಕಟ್ಟುವಂಥ ಸಹನೆಯ ಮತ್ತು ದಿನನಿತ್ಯದ ಜಾಗರೂಕ ಕೆಲಸದ ಸ್ಥಾನವನ್ನು ಬಿಸಿಬಿಸಿ ಮಾತುಗಳು ಮತ್ತು ರಂಗುರಂಗಿನ ಉಲ್ಲೇಖಗಳು ಅಲಂಕರಿಸಿದವು. ಕಟ್ಟಕಡೆಯಲ್ಲಿ ಹೇಳುವುದಾದರೆ ಸಮಾಜವಾದಿಗಳು-ಅದರಲ್ಲೂ ಮುಖ್ಯವಾಗಿ ಲೋಹಿಯಾವಾದಿ ಪಂಥದವರು -ತೀರಾ ಅಂತರ್ಮುಖಿಗಳೂ ಪಶ್ಚಾತ್ತಾಪ ಹೀನರೂ ಮತ್ತು ಅಪ್ರತಿಮ ವೈಯಕ್ತಿಕವಾದಿಗಳೂ ಆಗಿದ್ದಾರೆ. ಅವರು

ಸ್ವವಿಮರ್ಶೆ ಮಾಡಿಕೊಳ್ಳಲು ಮತ್ತು ಹೊಸ ಕಾರ್ಯಕ್ರಮಕ್ಕೆ ಆವೇಶದಿಂದ ಜಿಗಿಯುವ ಮುನ್ನ ಪರಸ್ಪರ ಚರ್ಚಿಸಲು ಆಜನ್ಮವಾಗಿಯೇ ಅಸಮರ್ಥರಾಗಿದ್ದಾರೇನೋ? ಅಂತನಿಸುತ್ತದೆ. ಸತತವಾಗಿ ಅನೇಕ ತಾಸು ದಿನಗಳವರೆಗೆ ಕುಳಿತುಕೊಂಡು ಇತ್ತೀಚಿನ ವೈಫಲ್ಯತೆಗಳನ್ನು ವಿಮರ್ಶಿಸಿಕೊಳ್ಳಲು, ಕಾರ್ಯತಂತ್ರ ಸುಧಾರಿಸಿಕೊಳ್ಳುವುದರ ಬಗೆಗಿನ ಪ್ರಶ್ನೆಗಳನ್ನು ಚರ್ಚಿಸಲು ಅವರು ಅಸಮರ್ಥರಾಗಿರುವುದು ಗ್ಯಾರಂಟಿಯಾಗಿಬಿಟ್ಟಿದೆ.

ಈ ಅಂತಿಮ ಅಂಶವೇ ಈಗಾಗಲೇ ನಿರಾಶದಾಯಕವಾಗಿರುವ ಪರಿಸ್ಥಿತಿಯನ್ನು ಶಾಶ್ವತವಾಗಿ ಹದಗೆಡಿಸಿಬಿಡುತ್ತದೆ. ತೀರ ಇತ್ತೀಚೆಗೆ ಲೋಹಿಯಾ ಮಾರ್ಗಕ್ಕೆ ಆಕರ್ಷಿತರಾದ ಮತ್ತು ಲೋಹಿಯಾ ಕಾಲದ 'ಕಾಂಗ್ರೆಸ್ಸೇತರವಾದ' ಗೀಳು ಅಂಟಿಸಿಕೊಳ್ಳದೇ ಇರುವ ಸಮಾಜವಾದಿಗಳ ಹೊಸ ಜನಾಂಗ ಮಾತ್ರ, ಲೋಹಿಯಾವಾದವನ್ನು ಅಕರಾಳವಿಕಾರಾಳತೆ ಮತ್ತು ಉಪಾಸಕರ ಹಾಗೂ ಅವಕಾಶವಾದಿಗಳಿಂದಾಗುತ್ತಿರುವ ಹಿಗ್ಗಾಮುಗ್ಗಾ ಎಳೆತ– ಈ ಎರಡೂ ಅವಳಿಜವಳಿ ಗಂಡಾಂತರಗಳಿಂದ ವಿಮೋಚನೆಗೊಳಿಸುವ ಸಾಧ್ಯತೆ ಇದೆ ಅಂಥ ಹರೆದಯ ಸಮಾಜವಾದಿಗಳಿಗೆ ಮೊಟ್ಟಮೊದಲು 'ಮಾರ್ಕ್ಸ್ ನಂತರದ ಅರ್ಥಶಾಸ್ತ್ರ' ಮತ್ತು 'ಇತಿಹಾಸದ ಚಕ್ರ'ದಲ್ಲಿ ಪ್ರತಿಪಾದಿಸಲ್ಪಟ್ಟಿರುವ ಜಾಗತಿಕ ದೃಷ್ಟಿಕೋನದ ತತ್ತ್ವ ದರ್ಶನ ಮಾಡಿಸಬೇಕಾಗಿದೆ. ಸಮಾಜವಾದಿಗಳಲ್ಲದವರ ಜೊತೆಗೂಡಿ ಅಧಿಕಾರ ಹಂಚಿಕೊಳ್ಳುವ ಧೋರಣೆಯನ್ನು ವಿರೋಧಿಸಿದ ಮೊದಲಿನ ಹೋರಾಟದ ಲೋಹಿಯಾ ಅವರು ಇದು ಕ್ರಾಂತಿಕಾರಿ ಫಲಿತಾಂಶಕ್ಕಾಗಿ ಮೂಲಭೂತ ಮತ್ತು ಪ್ರಜಾಪ್ರಭುತ್ವವಾದಿ ರಾಜಕೀಯವನ್ನು ಪುನಃಶ್ಚೇತನಗೊಳಿಸಲು ಹೆಚ್ಚು ಸಮಂಜಸವಾಗಿದ್ದಾರೆ. ಕೊನೇ ದಿನಗಳ ಲೋಹಿಯಾ ವ್ಯಕ್ತಿತ್ವ, ತಂತ್ರಗಳಿಗೆ ಮತ್ತು ತತ್‌ಕ್ಷಣದ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮೊದಲ ಲೋಹಿಯಾ ವ್ಯಕ್ತಿತ್ವದ ಬೆಳವಣಿಗೆಯಾಗಿತ್ತು. ಆದರೆ ಶಕ್ತಿ ರಾಜಕಾರಣದಲ್ಲಿ ಅವರ ಉತ್ತರಾಧಿಕಾರಿಗಳಾದವರು ಅಧಿಕಾರದ ಪಾಲುಗಾರಿಕೆಯ ಸಮೃದ್ಧ ಮತ್ತು ಆಯಾಸರಹಿತದ ದಿನಗಳಿಗೆ ಒಗ್ಗಿಕೊಂಡುಬಿಟ್ಟಿದ್ದಾರೆ. ಮತ್ತು ಅದನ್ನೇ ತಮ್ಮ ಅಪ್ರತಿಮ ಹಾಗೂ ಏಕೈಕ ಹಂಬಲವನ್ನಾಗಿಸಿಕೊಂಡಿದ್ದಾರೆ. 'ಕಾಂಗ್ರೆಸ್ ಹಟಾವೋ', 'ಅಂಗ್ರೇಜಿ ಹಟಾವೊ', 'ಬೆಲೆ ನಿಗದಿ, 'ಜಾತಿ ವಿನಾಶ' ಈ ಘೋಷಣೆಗಳು ಗಂಭೀರ ಸಿದ್ಧಾಂತದ ಕಾರ್ಯೋನ್ಮುಖ ಅಭಿವ್ಯಕ್ತಿಗಳಾದಾಗ ಮಾತ್ರ ಅರ್ಥಪೂರ್ಣವಾಗಬಲ್ಲವು. ನಮ್ಮ ಸಮಾಜದ ಜಮೀನ್ದಾರಿ–ಬಂಡವಾಳಶಾಹಿ ರಚನೆಯನ್ನು ನಾಶಪಡಿಸುವ ಕ್ರಾಂತಿಕಾರಿ ಉದ್ದೇಶವಿಲ್ಲದೇ ಹೋದಲ್ಲಿ–ಈ ಘೋಷಣೆಗಳು ಮೂಲಭೂತವೆನ್ನಿಸಿದರೂ ಕೂಡಾ. ಪರಿಣಾಮಕಾರಿಯಾಗದೇ ಹೋಗಬಹುದು; ಅಥವಾ ಕಾಲಾನುಕಾಲದಲ್ಲಿ ಸ್ವಂತ ಸೋಲಿಗೂ ಕಾರಣವಾಗಬಹುದು.

ಇತ್ತೀಚಿನ ದಿನಗಳಲ್ಲಿ ಲೋಹಿಯಾರ ಹೆಸರಿನಲ್ಲಿ ಅತ್ಯಂತ ಹೇಯ ಮಟ್ಟದ ಅಕರಾಳ–ವಿಕರಾಳತೆ ಅಂಕುರಿಸಿ ಬೆಳೆದದ್ದು–ಹಿಂದುಳಿದವರಿಗೆ ಮೀಸಲಾತಿಯ ಬಗೆಗಿನ ಲೋಕದಳ ರಾಜಕೀಯದಿಂದ. ಮೀಸಲಾತಿ ತತ್ವ, ಜಾತೀಯತೆಯನ್ನು –

ಜಾತಿಪದ್ಧತಿಯನ್ನು ನಾಶಪಡಿಸಲು ಉಪಯೋಗಿಸಿದಾಗ ಮಾತ್ರ ಮೂಲಭೂತ ಅಸ್ತ್ರವಾಗುತ್ತದೆ. ಆದರೆ ಬಿಹಾರದಲ್ಲಿ ಕರ್ಪೂರಿ ಠಾಕೂರ್ ಮತ್ತು ಮಧುಲಿಮಯೆ ಅವರಿಂದ ನಿರೂಪಿಸಲ್ಪಟ್ಟ ಪ್ರಕಾರ ಅದು, ಉದ್ದೇಶಪೂರ್ವಕವಾಗಿ ಮಧ್ಯಮ ಜಾತಿಯ ಚುನಾವಣಾ ಶಕ್ತಿ ರಾಜಕೀಯದ ಅಂಗಳದಾಟಗಳಿಗೆ ಮೆತ್ತೆಯಾಗಲು ಪ್ರಯತ್ನಿಸಿತು. ಅದು ಲೋಹಿಯಾರ ಧೋರಣೆಯಾಗಿರಲಿಲ್ಲ. ಅದು ಈ ಹಿಂದೆ ಮುಂದೆ ಬಂದ ಕಾಂಗ್ರೆಸ್ ಪ್ರಧಾನಮಂತ್ರಿಗಳು ಮತದಾರರನ್ನು ಉಪಯೋಗಿಸಿಕೊಂಡ ಹಳೇ ತಂತ್ರವಾಗಿತ್ತು.

ನಿಜ, ಇಲ್ಲಿಯವರೆಗಿನ ಕಾಂಗ್ರೆಸ್ ಪ್ರಧಾನಮಂತ್ರಿಗಳು ತಮ್ಮ ಉಪಯೋಗಕ್ಕಾಗಿ ಮಧ್ಯಮ ಜಾತಿಗಳನ್ನು ಹೊರತುಪಡಿಸಿ–ಇನ್ನಿತರ ಜಾತಿಗಳ ಭಿನ್ನ ಬತ್ತಳಿಕೆಗಳನ್ನು ಹೊಂದಿದ್ದರು. ಇಲ್ಲಿಯತನಕ ಕಾಂಗ್ರೆಸ್ಸು ಬ್ರಾಹ್ಮಣರನ್ನು, ಹರಿಜನರನ್ನು ಮುಸ್ಲಿಮರನ್ನು ಜಾತೀವಾದಿ ಒಕ್ಕೂಟವೊಂದರಲ್ಲಿ ತುರುಕಲು ಪ್ರಯತ್ನಿಸುತ್ತಲೇ ಬಂದಿದೆ. ಆದರೆ, ಲೋಕದಳವು ಹಿಂದುಳಿದವರ ಮತ್ತು ಮುಸ್ಲಿಮರ ಕೂಟ ರಚಿಸಲು ಪ್ರಯತ್ನಿಸಿತು. ಹಿಂದುಳಿದ ವರ್ಗಗಳ ಹೋರಾಟವು ವರ್ಗದ ನಾವಸಾವಳಿಯುನ್ನು ಸಮರ್ಥಿಸಿಕೊಳ್ಳಬೇಕಾದಲ್ಲಿ, ವರ್ಗಹೋರಾಟದಲ್ಲಿ ಜಾತಿ ತಾತ್ಪರ್ಯವನ್ನು ಮತ್ತು ಜಾತಿಯ ಸಂಘಟನೆಗಳಲ್ಲಿ ವರ್ಗ ತಾತ್ಪರ್ಯವನ್ನು ಪ್ರೇರೇಪಿಸಬೇಕು. ಸತ್ಯ ಸಂಗತಿಯೆಂದರೆ, ಜಾತಿಯ ಬಗೆಗಿನ ಲೋಹಿಯಾ ಧೋರಣೆ ಯಾವಾಗ ಅದು ಹರಿಜನರು, ಶೂದ್ರರು, ಮಹಿಳೆಯರು ಮತ್ತು ಮುಸ್ಲಿಮರಲ್ಲಿಯ ಕೆಳಜಾತಿಗಳು ಈ ಎಲ್ಲಾ ಹಿಂದುಳಿದ ವರ್ಗಗಳನ್ನು ಬೆಸೆಯುತ್ತದೋ ಮತ್ತು ಅವರೆಲ್ಲರ ಸಾಂಘಿಕ ಶಕ್ತಿಯನ್ನು ಸಾಮಾಜಿಕ ಸಂಪ್ರದಾಯಿಕ ಜಾಡ್ಯತೆ ಮತ್ತು ಅಸಮಾನತೆಯನ್ನು ಮುಗಿಸಿಬಿಡಲು ಉಪಯೋಗಿಸುತ್ತದೋ ಆವಾಗ ಮಾತ್ರ ಕ್ರಾಂತಿಕಾರಿ ಫಲಿತಾಂಶಗಳನ್ನು ನೀಡಿತು ಎಂದು ಹೇಳಬಹುದು.

ಮೀಸಲಾತಿ ಧೋರಣೆ ಯಾವ ರೀತಿಯಲ್ಲಿ ರಚಿತವಾಗಬೇಕೆಂದರೆ ಹರಿಜನ ಜಾತಿಗಳಲ್ಲಿರುವ ಬಡವರು ಮತ್ತು ಮಧ್ಯಮ ಜಾತಿಗಳಲ್ಲಿರುವ ಬಡವರು ಹಾಗೂ ಮುಸ್ಲೀಮರಲ್ಲಿಯ ಕೆಳಜಾತಿಗಳು ಪ್ರಯೋಜನ ಪಡೆಯುವಂತಿರಬೇಕು. ಕರ್ಪೂರಿ ಠಾಕೂರರ ದೃಷ್ಟಿಕೋಣ, ಬಲಿಷ್ಠರಾದ ಮಧ್ಯಮ ಜಾತಿಯವರಾದ ಯಾದವರು, ಕುರ್ಮಿಗಳು ಮತ್ತು ಝೂಟರು ಇವರು ಮಾತ್ರ ಹಿಂದುಳಿದವರೆಂದು ಅರ್ಥೈಸುವಂತೆ ಮಾಡಿ 'ಹಿಂದುಳಿದ ವರ್ಗ'ದ ನಿಜವಾದ ಅರ್ಥವನ್ನೇ ಹಿಚುಕಿಬಿಟ್ಟಿತು. ಮಧುಲಿಮಯೆಯವರಂತೂ ರಜಪೂತರನ್ನು ಮೀಸಲಾತಿ ಪಟ್ಟಿಯಲ್ಲಿ ಸೇರಿಸಬೇಕೆಂಬ ಬೇಡಿಕೆ ಇಡುವ ಮಟ್ಟಕ್ಕೆ ಹೋದರು.

ಜಾತಿ ಬಗೆಗಿನ ಸಮಾಜವಾದಿಗಳ ಧೋರಣೆಯನ್ನು ಈ ರೀತಿಯಾಗಿ ಪುನರ್ರಚಿಸಬೇಕಾಗಿದೆ:

೧. ಹರಿಜನರ ಸಂಘಟನೆಗೆ ಇತರೆಲ್ಲದಕ್ಕಿಂತ ಪ್ರಾಮುಖ್ಯತೆ ನೀಡಬೇಕಾಗಿದೆ.

೨. 'ಹಿಂದುಳಿದವರಿಗಾಗಿ ಮೀಸಲಾತಿ' ಕಾರ್ಯಕ್ರಮವನ್ನು, ಅಂತರ್ಜಾತಿ ವಿವಾಹ ಮತ್ತು ಜಾತಿಯ ಪ್ರತ್ಯೇಕತೆಯನ್ನು ಸಡಿಲಗೊಳಿಸುವ ದೃಷ್ಟಿಯಿಂದ ಜೊತೆ ಊಟದಂಥ ಕಾರ್ಯಕ್ರಮಗಳ ಅವಿಭಾಜ್ಯ ಅಂಗವಾಗಿ ಜಾರಿಗೊಳಿಸಿಕೊಂಡು ಹೋಗಬೇಕು.

೩. ಹರಿಜನೇತರರಲ್ಲಿ ಮೀಸಲಾತಿಯನ್ನು–ಅತ್ಯುನ್ನತ ಮಟ್ಟದ ಪ್ರಾಮುಖ್ಯತೆಯನ್ನು–ಅಂತರ್ಜಾತಿ ವಿವಾಹವಾದವರಿಗೆ ಕೊಡಬೇಕು.

೪. ಹಿಂದುಳಿದ ಜನಪದಗಳಿಗೆ ಶಿಕ್ಷಣ ಮತ್ತು ತರಬೇತಿ ಕೊಡುವಂಥ ಜಾನಪದ ಕಾರ್ಯಕ್ರಮ ಇಲ್ಲದೇ ಹೋದಾಗ, ಮೀಸಲಾತಿಯ ಫಲಗಳನ್ನು ಹಿಂದುಳಿದ ಜಾತಿಗಳಲ್ಲಿರುವ ಐಶ್ವರ್ಯಶಾಲಿಯಾದ ವಿಶೇಷಾಧಿಕಾರದ ವಿಭಾಗಗಳೇ ಭೋಗಿಸುತ್ತವೆ.

೫. ಜಾತಿಯ ಮೀಸಲಾತಿಯನ್ನು ಕೇವಲ ಗೆಜೆಟೆಡ್ ಆಫೀಸುಗಳಿಗೆ ಮತ್ತು ರಾಜಕೀಯ ಸ್ಥಾನಗಳಿಗೆ ಮಾತ್ರ ಅನ್ವಯಿಸಬೇಕು. ಎಲ್ಲಾ ಉದ್ಯೋಗಗಳನ್ನು ಜಾತಿಗಳ ಮಧ್ಯವೇ ವಿಭಾಗಿಸಲ್ಪಡಬಾರದು. ಅಲ್ಲದೇ ಭಡ್ತಿಗಳಲ್ಲು ಮೀಸಲಾತಿ ಇರಬೇಕಾಗಿಲ್ಲ.

೬. ಮೀಸಲಾತಿ ಸೀಮಿತ ಅವಧಿಯವರೆಗೆ ಮಾತ್ರ ಇರಬೇಕು. ಆ ಅವಧಿಯಲ್ಲಿ ಅದನ್ನು ಕಾರ್ಯಗತಗೊಳಿಸಬೇಕು. ಆದರೆ ಅನಂತರ ಅದನ್ನು ಮುಂದುವರೆಸಬಾರದು.

ಅದೇ ರೀತಿ ಅಂಗ್ರೇಜಿ ಹಟಾವೊ(ಇಂಗ್ಲಿಷ್ ತೊಲಗಿಸಿ) ಧೋರಣೆಯನ್ನು ಇಂದಿನ ಪರಿಸ್ಥಿತಿಗೆ ಸರಿಯಾಗಿ ಹೊಂದುವಂತೆ ಪುನರ್ರಚಿಸಬೇಕಾಗಿದೆ. ಇಂಗ್ಲಿಷ್ ತೊಲಗಿಸಿ ಚಳುವಳಿಯ ಈ ಹಿಂದಿನ ನಾಯಕರು ಮಂತ್ರಿಗಳಾಗಿ, ಆಳುವ ಪಕ್ಷದ ನೇತಾರರಾಗಿ ಅಧಿಕಾರಕ್ಕೇ ಬಂದರೂ ಕೂಡ, ಕಾಂಗ್ರೆಸ್ಸಿನ ಹಾದಿಯನ್ನು ಅನುಸರಿಸುತ್ತಾ ಬಂದು ಭಾಷಾ ಧೋರಣೆಯನ್ನು ಬದಲಿಸಲು ಅಪೂಟಾ ಎಳ್ಳಷ್ಟು ಕೆಲಸವನ್ನು ಅವರು ಮಾಡದೇ ಹೋಗಿ ಅಂಗ್ರೇಜಿ ಹಟಾವೋ ಘೋಷಣೆ ೧೯೭೭ ನಂತರ ತನ್ನ ವಿಶ್ವಾಸಾರ್ಹವಾದ ತಾಕತ್ತನ್ನು ಕಳೆದುಕೊಂಡುಬಿಟ್ಟಿತು. ಹೋರಾಟದ ಪೂರ್ಣಾವಧಿ ಕಾರ್ಯಕರ್ತರು ಈ ಬಗಲಚೂರಿಯ ಮಂದಿಯ ವಿರುದ್ಧ ಪಿಟ್ಟೆನಲಿಲ್ಲ. ಇದು ಈ ಚಳುವಳಿ ಜನಭಾಷೆಗಳನ್ನು ಚಲಾವಣೆಗೆ ತರುವುದಕ್ಕಿಂತ ಹಿಂದಿಯನ್ನು ಹಬ್ಬಿಸುವುದರಲ್ಲಿ ಹೆಚ್ಚು ಆಸಕ್ತವಾಗಿದೆ ಎಂಬ ಸಂಶಯವನ್ನು ಮತ್ತಷ್ಟು ಬಲಪಡಿಸಿತು.

ಈ ಸಂಶಯವನ್ನು ಕಿತ್ತೊಗೆಯಲು ಮತ್ತು ಚಳುವಳಿಗೆ ಹೊಸ ಉಸಿರು ಮತ್ತು ತಾಜಾ ತಾಕತ್ತನ್ನು ನೀಡಲು ಈ ಕೆಳಗಿನ ಹೆಜ್ಜೆಗಳ ಮೂಲಕ ಮುನ್ನಡೆಯಬೇಕಾಗಿದೆ.

೧. 'ಇಂಗ್ಲಿಷ್ ಹಟಾವೋ' ಸಮ್ಮೇಳನಗಳಗಿಂತ ಭಾರತೀಯ ಭಾಷಾ ಸಮ್ಮೇಳನಗಳಿಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕು.

೨. ಸಮಿತಿಗಳಲ್ಲಿ, ಸಮ್ಮೇಳನಗಳಲ್ಲಿ ಮತ್ತು ಸಂಘಟನೆಗಳ ಸಭೆಗಳಲ್ಲಿ ಹಿಂದಿಯೇತರ ಭಾಷೆಗಳನ್ನು ಮಾತಾಡುವ ಸದಸ್ಯರಿಗೆ-ಅವರನ್ನು ಅವರೇ ಪೂರ್ಣಪ್ರಮಾಣದಲ್ಲಿ ವಿಶದಪಡಿಸಿಕೊಳ್ಳಲು –ಸಾಕಷ್ಟು ಅವಕಾಶವನ್ನು ಕೊಡಬೇಕು. ಅವರ ಸ್ವಂತ ಪ್ರಾದೇಶಿಕ ಭಾಷೆಗಳಿಗೆ ಉಪಯೋಗದ ಅವಕಾಶಗಳನ್ನು ಜಾರಿಗೊಳಿಸಿದಾಗ ಮಾತ್ರ ಇದು ಸಾಧ್ಯವಾಗುತ್ತದೆ.

೩. ಹಿಂದಿ ಪ್ರದೇಶದಲ್ಲಿರುವ ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತರು ಕನಿಷ್ಠ ಯಾವುದಾದರೊಂದು ಹಿಂದಿಯೇತರ ಭಾರತೀಯ ಭಾಷೆಯನ್ನ ಕಲಿಯಬೇಕು.

೪. ಇಂಗ್ಲಿಷ್ ಭಾಷೆಯ ಸ್ಥಾನದಲ್ಲಿ, ಪ್ರಾದೇಶಿಕ ಭಾಷೆಗಳನ್ನು ತರುವುದಕ್ಕಾಗಿ ಮತ್ತು ಇಂಗ್ಲಿಷ್ ಮಾಧ್ಯಮವಿರುವ ಮಕ್ಕಳ ಶಾಲೆಗಳನ್ನು ಕೊನೆಗಾಣಿಸುವುದಕ್ಕಾಗಿ ಕಾರ್ಯಕ್ರಮಗಳಲ್ಲಿ ನಿಗಿನಿಗಿಸುವ ಕಾವನ್ನು ಹುಟ್ಟಿಸಬೇಕಾಗಿದೆ.

ಮೂರನೇದಾಗಿ 'ಕಾಂಗ್ರೆಸ್ಸೇತರವಾದ'ವನ್ನು ಮುಖ್ಯ ರಾಜಕೀಯ ಕಾರ್ಯಕ್ರಮವನ್ನಾಗಿ ಕೈಬಿಟ್ಟು, ಸಮಾಜವಾದಿಗಳಲ್ಲದವರ ಜೊತೆ ಸರಕಾರಿ ಅಧಿಕಾರವನ್ನು ಹಂಚಿಕೊಳ್ಳದಿರುವಿಕೆಯ ಧೋರಣೆಗೆ ಸಮಾಜವಾದಿಗಳು ಹಿಂದಿರುಗಬೇಕಾಗಿದೆ.

ನಾಲ್ಕನೇಯದಾಗಿ, ಸಮಾಜವಾದಿಗಳು ಆರ್ಥಿಕ ಹೋರಾಟಗಳನ್ನು ಮರೆತೇಬಿಟ್ಟಿದ್ದಾರೆ. ಅವರು ಈ ಸ್ವಭಾವವನ್ನು ಪುನರ್ವಿಮರ್ಶಿಸಿಕೊಂಡು ಭೂಹೋರಾಟಗಳಿಗೆ ವಿಶೇಷ ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ. ಹಳ್ಳಿಯ ವಿರುದ್ಧ ಪಟ್ಟಣ ಮತ್ತು ಉಚ್ಚ ಜಾತಿಯ ವಿರುದ್ಧ ಹಿಂದುಳಿದ ಜಾತಿ– ಈ ಥರದ ಸರಳೀಕೃತ ದ್ವಂದ್ವಗಳ ಹಿಂದುಗಡೆ ಅವರು ಮರೆ ಮಾಡಿಕೊಳ್ಳುವುದು ಏಕೆಂದರೆ ಶ್ರೀಮಂತರ ಮತ್ತು ಬಡವರ ಮಧ್ಯದ ಹೋರಾಟಗಳ ಕಾಠಿಣ್ಯತೆಯಿಂದ ತಪ್ಪಿಸಿಕೊಳ್ಳುವ ದೃಷ್ಟಿಯಿಂದಲೇ. ಪಟ್ಟಣದ ವಿರುದ್ಧ ಹಳ್ಳಿ ಮತ್ತು ಉಚ್ಚಜಾತಿಯ ವಿರುದ್ಧ ಹಿಂದುಳಿದ ಜಾತಿ ಈ ಥರದ ಹೋರಾಟಗಳು ಅರ್ಥಪೂರ್ಣವಾಗುವುದು ಹಳ್ಳಿಗರು ಮತ್ತು ಹಿಂದುಳಿದವರು ದೊಡ್ಡ ದೊಡ್ಡ ಶ್ರೀಮಂತ ಜಮೀನುದಾರರ ಮುಂದಾಳತ್ವ ಪಡೆಯದಿದ್ದಾಗ ಮಾತ್ರ. ಈ ದೊಡ್ಡ ಜಮೀನ್ದಾರಿ ಶಕ್ತಿಗಳು ನಗರೀಕರಣದಲ್ಲಿ ಮತ್ತು ಜಾತಿಪದ್ಧತಿಯ ಮುಂದುವರಿಕೆಯಲ್ಲಿ ಸ್ವಾರ್ಥ ಆಸಕ್ತಿಗಳನ್ನು ಅಡಗಿಸಿಟ್ಟುಕೊಂಡಿರುತ್ತವೆ. ಆ ಕಾರಣಕ್ಕಾಗಿಯೇ ಈ ದೊಡ್ಡ ದೊಡ್ಡದಾಗಿ ಕಾಣಿಸುವ ದ್ವಂದ್ವಗಳು ಹೆಚ್ಚಾಗಿ ಬರಿ ಬಾಯಿ ಬಡಾಯಿಯಾಗಿ ಬಿಟ್ಟು, ಬಡ ಜನಪದವನ್ನು ಬಡಿದೆಬ್ಬಿಸುವುದೇ ಇಲ್ಲ.

ಐದನೇಯದಾಗಿ, ಬಂಡವಾಳಶಾಹಿ ಸುಲಿಗೆಯನ್ನು ಸಾಮ್ರಾಜ್ಯಶಾಹಿ ಪದ್ಧತಿಯಿಂದ ಬೇರ್ಪಡಿಸಲಿಕ್ಕಾಗುವುದಿಲ್ಲ. ಹಾಗೂ ಶೋಷಕರು ಮತ್ತು ದುಡಿಮೆಗಾರರೆಂದು ಮಾಡುವ ವಾಸ್ತವಿಕವಾದ ವರ್ಗ ವಿಭಾಗವನ್ನು ಜಾಗತಿಕ ಸಾಮ್ರಾಜ್ಯಶಾಹಿ ಪದ್ಧತಿಯ ಹಿನ್ನೆಲೆಯಲ್ಲಿಯೇ ನೋಡಬೇಕಾಗಿದೆ ಎಂದು ಗುರುತಿಸಿದ

ಮಹಾಪುರುಷರ ಪೈಕಿ ಬಹುಶಃ ಲೋಹಿಯಾರವರೇ ಮೊದಲಿಗರಾಗಿದ್ದರೂ ಕೂಡ ಸಮಾಜವಾದಿಗಳು ತಮ್ಮ ಚಳುವಳಿಯನ್ನು ಎಂದಿಗೂ ಜಾಗತಿಕ ತಕ್ಕಡಿಯಲ್ಲಿಟ್ಟು ತೂಗಲೇ ಇಲ್ಲ. ಲೋಹಿಯಾರ ನಿಜವಾದ ತತ್ವಶಿಷ್ಯನಾದಂಥವನು ಅಂತರ್ರಾಷ್ಟ್ರೀಯ ಶೋಷಣೆಯ ವಿರುದ್ಧ ಕೂಡಾ ಸಮರ ಸಾರಬೇಕಾಗಿದೆ.

ಕೊನೆಯದಾಗಿ, ಸಮಾಜವಾದಿಗಳು ಮುಖ್ಯವಾಗಿ ಸರಕಾರದ ವಿರುದ್ಧದ ಅಂದರೆ, ರಾಜಕೀಯ ಅಧಿಕಾರ ವ್ಯವಸ್ಥೆಗಳನ್ನು ವಿರೋಧಿಸುವಂಥ ಹೋರಾಟಗಾರರಾಗಿದ್ದಾರೆ. ರಾಜಕೀಯ ಶಕ್ತಿಯ ವಿರುದ್ಧದ ಹೋರಾಟ ಮುಖ್ಯವಾಗಿ ಮಧ್ಯಮ ವರ್ಗದ ಖಯಾಲಿಗಷ್ಟೇ ಸೀಮಿತವಾಗುವ ಸಂಭವ ಇದೆ. ಆರ್ಥಿಕ ಅಧಿಕಾರ ವ್ಯವಸ್ಥೆಗಳ ವಿರುದ್ಧ ಹೋರಾಟದ ಒಂದು ಮಾದರಿಯಾಗಿ ಅಹಿಂಸೆಯ ಪರಿಣಾಮಶೀಲತೆಯನ್ನು ಸಮಾಜವಾದಿ ಅಥವಾ ಸರ್ವೋದಯ ಚಳುವಳಿಯಾಗಲೀ ಈವರೆಗೆ ಎಂದಿಗೂ ಪ್ರದರ್ಶಿಸಿಲ್ಲ. ಇತ್ತೀಚೆಗೆ ಬಿಹಾರದ ಛಾತ್ರ ಯುವ ಸಂಘರ್ಷ ವಾಹಿನಿಯು ಗಯಾ–ಮುಜಾಫರ್‌ಪುರ ಮತ್ತು ಮಧು ಬನಿ ಜಿಲ್ಲೆಗಳಲ್ಲಿ–ಭೂಮಾಲಕರ ವಿರುದ್ಧದ ಭೂರಹಿತ ಹೋರಾಟಗಳಲ್ಲಿ ಆದರ್ಶವೊಂದನ್ನು ಸ್ಥಾಪಿಸಿದೆ. ಹೊಸ ಮಾರ್ಗದ ಹೋರಾಟಗಳಿಂದ ಕೂಡಲೇ ಮುಖ ತಿರುಗಿಸಿಕೊಂಡುಬಿಡುವ ಸಮಾಜವಾದಿಗಳು ಇವರಿಂದ ಪಾಠವೊಂದನ್ನು ಕಲಿತುಕೊಳ್ಳಬಹುದಾಗಿದೆ.

ಲೋಹಿಯಾ ಅವರನ್ನು, ಸಾರ್ವತ್ರಿಕವಾಗಿ ಜಗತ್ತಿನ ಸಂದರ್ಭದಲ್ಲಿ ಮತ್ತು ನಿರ್ದಿಷ್ಟವಾಗಿ ಇಂಡಿಯಾದ ಸಂದರ್ಭದಲ್ಲಿ ಸಮಾಜವಾದವನ್ನು ಪುನರ್ ವ್ಯಾಖ್ಯಾನಿಸಿದ ಯಾವುದೇ ಯುಗದ ಮಹಾನ್ ಚಿಂತಕರನ್ನಾಗಿ ಪ್ರಸ್ತುತಗೊಳಿಸಬಹುದಾದ ಮಾರ್ಗವನ್ನು ಸೂಚಿಸುವುದಕ್ಕಷ್ಟೆ ಮೇಲಿನ ವಿವರಣೆಗಳು.

(ಕನ್ನಡಕ್ಕೆ: ವಿಜಯ ಪಾಟೀಲ)

"ಒಂದು ದೇಶವೇ ಆಗಲಿ ವ್ಯಕ್ತಿಯೇ ಆಗಿರಲಿ, ನಾವು ಪ್ರೀತಿಸಿ ಮೆಚ್ಚತೊಡಗಿದೊಡನೆಯೇ ನಮ್ಮೆಲ್ಲಾ ವಿವರ್ಶಾತ್ಮಕ ಬುದ್ಧಿಯನ್ನು ಕಳೆದುಕೊಂಡು ಅದನ್ನು ಆದರ್ಶವೆಂದು ಪರಿಗಣಿಸುವ ಪ್ರವೃತ್ತಿ ಉಂಟಾಗುತ್ತದೆ. ಆ ವ್ಯಕ್ತಿ ಅಥವಾ ಆ ದೇಶ ಏನೇ ಆಗಿರಲಿ, 'ಅದೇ ನಮ್ಮ ಆದರ್ಶ, ವಾಸ್ತವ ಮತ್ತು ಆದರ್ಶಗಳು ಬೆರಕೆಗೊಂಡು ಬಿಡುವ ಇಂತಹ ಆಲೋಚನಾವಿಧಾನದ ಬಗ್ಗೆ ನಾವು ಎಚ್ಚರದಿಂದಿರಬೇಕು. ಅಲ್ಲಾ, ಮನಸ್ಸಿನ ಕೆಲಸವಾದರೂ ಏನು? ಇರುವುದನ್ನು ಅರ್ಥ ಮಾಡಿಕೊಂಡು, ಅದೇ ಸಮಯದಲ್ಲಿ ಯಾವುದು ಇರಬೇಕಾಗಿದೆಯೋ ಅದನ್ನು ಕಲ್ಪಿಸಿಕೊಂಡು, ನಂತರ ಇವೆರಡರ ನಡುವೆ ಸಂಬಂಧ ಹೆಣೆಯುವುದೇ ಮನಸ್ಸಿನ ಕಲಾಪ"

–ಲೋಹಿಯಾ (ಒಂದು ತಾತ್ವಿಕ ಪರಿಕಲ್ಪನೆ)

ಲೋಹಿಯಾ ಸಮಾಜವಾದದ ವೈಶಿಷ್ಟ್ಯಗಳು

■ ಡಾ. ರಾಜಾರಾಂ ತೋಳ್ಪಾಡಿ

ಭಾರತದ ಬೌದ್ಧಿಕ ಮತ್ತು ರಾಜಕೀಯ ಇತಿಹಾಸದಲ್ಲಿ ಡಾ. ರಾಮಮನೋಹರ ಲೋಹಿಯಾ ಅವರದ್ದು ವಿಶಿಷ್ಟ ಸ್ಥಾನ. ಅವರು ಸಮಾಜವಾದಿ ಆಂದೋಲನದ ಒಬ್ಬ ಸೃಜನಶೀಲ ಚಿಂತಕರಾಗಿ ಮತ್ತು ಸ್ಫೂರ್ತಿದಾಯಕ ನಾಯಕರಾಗಿ, ತಾವು ಪ್ರತಿಪಾದಿಸಿದ ಗುರಿಗಳಿಗಾಗಿ ತಮ್ಮ ಬದುಕನ್ನೇ ಮುಡಿಪಾಗಿಡಬಲ್ಲ ಒಂದು ತಲೆಮಾರಿನ ಜನರನ್ನೇ ತಯಾರು ಮಾಡಿದರು. ಅವರ ವಿಚಾರಗಳಲ್ಲಿನ ಭಾವಗೀತಾತ್ಮಕತೆ ಮತ್ತು ಅವನ್ನು ಕಾರ್ಯಗತಗೊಳಿಸಲು ಅವರು ತೋರಿದ ಕೆಚ್ಚು ಅವರನ್ನು ಅವರ ಕಾಲದಲ್ಲೇ ಒಂದು ದಂತಕಥೆಯನ್ನಾಗಿಸಿದ್ದವು. ಆದರೆ ಅವರು ಯಾವಾಗಲೂ ತಮ್ಮ ಬಹಳಷ್ಟು ಸಹದ್ಯೋಗಿಗಳಿಗೆ ತಮ್ಮನ್ನು ಒಪ್ಪಿತವಾಗದಂತೆ ಮಾಡಿದ ವಿವಾದಗಳ ಮಧ್ಯೆಯೇ ಇರುತ್ತಿದ್ದರು! ಇದರ ಫಲವಾಗಿ ಅವರನ್ನು ಮೆಚ್ಚುವ, ಆರಾಧಿಸುವ ಜನರು ಎಷ್ಟು ದೊಡ್ಡ ಪ್ರಮಾಣದಲ್ಲಿದ್ದರೋ ಅಷ್ಟೇ ದೊಡ್ಡ ಪ್ರಮಾಣದಲ್ಲಿ ಅವರನ್ನು ಟೀಕಿಸುವ ಜನರೂ ಇದ್ದರು. ಇಷ್ಟಾದರೂ, ಓರ್ವ ಸಮೃದ್ಧ ಚಿಂತಕರಾಗಿ ಮತ್ತು ಸ್ಫೂರ್ತಿದಾಯಕ ನಾಯಕರಾಗಿ ಅವರ ಸ್ಥಾನಮಾನ ಬಹಳಷ್ಟು ಮಟ್ಟಿಗೆ ವಿವಾದಾತೀತವಾಗಿಯೇ ಇದೆ ಎಂದು ಹೇಳಬಹುದು.

ಲೋಹಿಯಾ ಅವರ ಸಮಾಜವಾದಿ ಸಂಕಥನದ ಮಹತ್ವವಿರುವುದು, ಅದು ಸಮಾಜವಾದಿ ಸಿದ್ಧಾಂತ ಮತ್ತು ಕಾರ್ಯಶೀಲತೆಗಳ ಒಂದು ವಿಶಿಷ್ಟ ಭಾರತೀಯ ಆವೃತ್ತಿಯನ್ನು ರೂಪಿಸುವಲ್ಲಿನ ಅವರ ಆಳವಾದ ಬದ್ಧತೆಯಲ್ಲಿ. ಸಮಾಜವಾದ ಎಂಬುದು ಮೂಲತಃ ಒಂದು ತತ್ವದರ್ಶನವಾಗಿ ಮತ್ತು ಆಂದೋಲನವಾಗಿ ಪಶ್ಚಿಮ ಯೂರೋಪ್‌ನಲ್ಲಿ ಹುಟ್ಟಿದುದಾಗಿದ್ದು, ಬೇರೆ ಕಡೆ ಅದರ ಯಾಂತ್ರಿಕ ಅನ್ವಯದ ಪ್ರಯತ್ನಗಳು ಅನುಹಾತಗಳನ್ನಷ್ಟೇ

ಉಂಟು ಮಾಡಬಲ್ಲುದೆಂದು ಲೋಹಿಯಾಗೆ ತಮ್ಮ ಪಕ್ಷದ ಸಹೋದ್ಯೋಗಿಗಳ ಮಧ್ಯೆ ಎಲ್ಲರಿಗಿಂತ ಹೆಚ್ಚು ಚೆನ್ನಾಗಿ ಗೊತ್ತಿತ್ತು. ಭಾರತೀಯ ಸಮಾಜದ ಐತಿಹಾಸಿಕ ವಿಶಿಷ್ಟತೆಯ ಆಧಾರದ ಮೇಲೆ ಭಾರತೀಯ ಸಮಾಜವಾದಕ್ಕೆ ಒಂದು ತಾತ್ವಿಕ ಅಡಿಪಾಯವನ್ನು ಒದಗಿಸಲು ಅವರು ಅನೇಕ ವಿಷಯಗಳಗಳ ಜೊತೆ ಗುದ್ದಾಡಬೇಕಾಯಿತು. ವಸಾಹತುಸಾಹಿ ಜೊತೆ ಭಾರತೀಯ ಸಮಾಜದ ಐತಿಹಾಸಿಕ ಮುಖಾಮುಖಿಯಂತಹ ವಿಶಿಷ್ಟ ವಿಷಯದಿಂದ ಹಿಡಿದು ಆಧುನಿಕತೆಯ ಸಮಸ್ಯಾತ್ಮಕತೆಯಂತಹ ವಿಶಾಲ ವಿಷಯದವರೆಗೆ ಅವುಗಳ ವೈವಿಧ್ಯ ಹರಡಿತ್ತು. ಈ ವೈವಿಧ್ಯಮಯ ವಿಷಯಗಳ ಜೊತೆ ಮುಖಾಮುಖಿಯಾಗಿರುತ್ತಿರುವಾಗಲೇ ಲೋಹಿಯಾ ಮತ್ತೆ ಮತ್ತೆ ಹಿಂದಿರುಗುವುದು, ಭಾರತದಲ್ಲಿ ಸಮಾಜವಾದಿ ಹೋರಾಟ ಮತ್ತು ಪುರ್ನನಿರ್ಮಾಣದ ಸಂಸ್ಕೃತಿ ವಿಶಿಷ್ಟ ಮತ್ತು ಸಾಂದರ್ಭಿಕ ಅರಿವುಳ್ಳ ಒಂದು ಮಾದರಿಯನ್ನು ರೂಪಿಸುವ ಕೇಂದ್ರ ಸಮಸ್ಯೆಯೆಡೆಗೇ.

ಭಾರತೀಯ ಸಮಾಜವಾದಕ್ಕೆ ಒಂದು ತಾತ್ವಿಕ ಅಡಿಪಾಯವನ್ನು ನಿರ್ಮಿಸುವ ಕೆಲಸ ಸೈದ್ಧಾಂತಿಕತೆ ಹಾಗೂ ಕಾರ್ಯಶೀಲತೆ– ಈ ಎರಡೂ ನೆಲೆಗಳಲ್ಲಿ ಬೃಹತ್ ಸವಾಲುಗಳನ್ನು ಒಳಗೊಂಡಿದೆ ಎಂಬುದನ್ನು ಲೋಹಿಯಾ ಚೆನ್ನಾಗಿ ಬಲ್ಲವರೇ ಆಗಿದ್ದರು. ಅವುಗಳಲ್ಲಿ ಅತಿ ಮುಖ್ಯವಾದುದೆಂದರೆ, ಸಮಾಜವಾದದ ಜ್ಞಾನ ಶಾಸ್ತ್ರೀಯ ಸಾರವನ್ನು ಪುರ್ನವ್ಯಾಖ್ಯಾನಿಸುವುದು ಮತ್ತು ಅದರ ಸಿದ್ಧಾಂತವನ್ನು ಪಶ್ಚಿಮ ಯೂರೋಪಿನ ಸಂದರ್ಭದಿಂದ ಭಾರತೀಯ ವಾಸ್ತವಗಳಿಗೆ ವರ್ಗಾಯಿಸುವುದಕ್ಕೆ ಸಂಬಂಧಿಸಿದುದೇ ಆಗಿದೆ. ಈ ಅರ್ಥದಲ್ಲಿ ಲೋಹಿಯಾ, ರಾಜಕೀಯ ಸಿದ್ಧಾಂತಗಳ ವರ್ಗಾವಣೆಯಂತಹ ಚಟುವಟಿಕೆಯಲ್ಲಿ ಎದುರಾಗುವ ಕಷ್ಟಗಳು ಮತ್ತು ಜಟಿಲತೆಗಳ ಅರಿವಿದ್ದ ಕೆಲವೇ ಕೆಲವು ಆಧುನಿಕ ಭಾರತದ ಚಿಂತಕರಲ್ಲಿ ಒಬ್ಬರೆನಿಸಿದ್ದಾರೆ. ಸಮಾಜವಾದದ ರಾಜಕೀಯ ಸಿದ್ಧಾಂತದ ಇಂತಹ ವರ್ಗಾವಣೆಯ ಸಂಕೀರ್ಣ ಕೆಲಸ, ಸಮಾಜವಾದಿ ಕಾರ್ಯಾಚರಣೆ ಮತ್ತು ಪರಿವರ್ತನೆಯ– ಐತಿಹಾಸಿಕವಾಗಿ ಸಮರ್ಪಕವೆನಿಸುವ– ರೂಪಗಳನ್ನು ನಿರ್ಮಿಸುವಲ್ಲಿ ಬಹು ಮುಖ್ಯವೆಂದು ಲೋಹಿಯಾ ಭಾವಿಸಿದ್ದರು.

ಸಮಾಜವಾದದ ರಾಜಕೀಯ ಸಿದ್ಧಾಂತದ ವರ್ಗಾವಣೆಯ ಮತ್ತು ಭಾರತೀಯ ಸಮಾಜವಾದದ ತಾತ್ವಿಕ ಅಡಿಪಾಯವನ್ನು ಕಟ್ಟುವ ಸವಾಲುಗಳು ಲೋಹಿಯಾರನ್ನು ಸಮಾಜವಾದದ ಪಾಶ್ಚಿಮಾತ್ಯ ಮಾದರಿಗಳನ್ನು ಗಂಭೀರವಾಗಿ ಪರಿಶೀಲಿಸಿ; ಅವುಗಳ ದೋಷ ಮತ್ತು ಮಿತಿಗಳನ್ನು ಗುರುತಿಸುವ ಕಡೆ ಕೊಂಡೊಯ್ದಿತು. ಲೋಹಿಯಾರಿಗೆ ಸಮಾಜವಾದದ ಲಭ್ಯ ಪಾಶ್ಚಿಮಾತ್ಯ ಮಾದರಿಗಳ ಇಂತಹ ಅಧ್ಯಯನ, ಭಾರತದಂತಹ ಐರೋಪ್ಯೇತರ ಸಮಾಜಗಳಲ್ಲಿ ಈ ಮಾದರಿಗಳ ಅಪ್ರಸ್ತುತತೆಯನ್ನು ಎಲ್ಲ ಕಾಲಕ್ಕೂ ಮತ್ತು ಎಲ್ಲರಿಗೂ ಸಾಧಿಸಿ ತೋರಿಸಲು ಅಗತ್ಯವಾಗಿತ್ತು. ತಮ್ಮ ವಿಶ್ಲೇಷಣೆಯಲ್ಲಿ ಲೋಹಿಯಾ, ಮಾರ್ಕ್ಸ್‌ವಾದವನ್ನು ಸೈದ್ಧಾಂತಿಕವಾಗಿ ಬಹು ಗಟ್ಟಿಯಾದ ಮತ್ತು

ರಾಜಕೀಯವಾಗಿ ಬಹು ಪ್ರಭಾವಿಯಾದ ಸಮಾಜವಾದಿ ಸಂಕಥನವೆಂದು ಗುರುತಿಸಿದ್ದರಿಂದಾಗಿಯೇ ಅವರು ಅದಕ್ಕೆ ಒಂದು ವ್ಯವಸ್ಥಿತ ವಿಮರ್ಶೆಯನ್ನು ರೂಪಿಸಲು ಸಾಧ್ಯವಾಯಿತು. ಮಾರ್ಕ್ಸ್‌ವಾದಕ್ಕೆ ಒಂದು ಸರ್ವ ವ್ಯಾಪಕ ವಿಮರ್ಶೆಯನ್ನು ರೂಪಿಸುವ ಅವರ ಯೋಜನೆ ಹಲವಾರು ಕಾರಣಗಳಿಂದಾಗಿ ಪೂರ್ಣವಾಗಿ ನೆರವೇರಲಿಲ್ಲವಾದರೂ, ಭಾರತದಲ್ಲಿ ಸಮಾಜವಾದಿ ಸಿದ್ಧಾಂತ ಮತ್ತು ಕಾರ್ಯಾಚರಣೆಯ ಯಾವುದೇ ಅರ್ಥಪೂರ್ಣ ಪುನಾರಚನೆಯಲ್ಲಿ ನಿರ್ಣಾಯಕವಾಗಬಲ್ಲ ಹೊಸ ನೆಲೆಯ ಹಲವು ಆಲೋಚನೆಗಳನ್ನಂತೂ ಅವರು ನಮಗೆ ಒದಗಿಸಿದ್ದಾರೆ.

ಮಾರ್ಕ್ಸ್‌ವಾದ ಬಂಡವಾಳವಾದದ ಅತ್ಯಂತ ಸ್ವೋಪಜ್ಞ ತಾತ್ವಿಕ ವಿವರಣೆಯನ್ನು ಒದಗಿಸುತ್ತದೆಂಬ ವಾದವನ್ನು, ಅದು ಬಂಡವಾಳವಾದದ ಬಾಹ್ಯ ಚೈತನ್ಯಮೂಲಗಳನ್ನು ಸಮರ್ಪಕವಾಗಿ ಗುರುತಿಸಿಲ್ಲ ಎಂಬ ಕಾರಣಕ್ಕೆ ಲೋಹಿಯಾ ಒಪ್ಪುವುದಿಲ್ಲ. ಬಂಡವಾಳವಾದದ ಆಂತರಿಕ ಮತ್ತು ಬಾಹ್ಯ ಚೈತನ್ಯಗಳ ನಡುವಣ ಸಂಕೀರ್ಣ ಸಂಬಂಧದ ಮೇಲೆ ಸೂಕ್ತ ಬೆಳಕು ಚೆಲ್ಲಲಾಗದ ತನ್ನ ಅಸಾಮರ್ಥ್ಯದಿಂದಾಗಿ, ಮಾರ್ಕ್ಸ್‌ವಾದವು ಸಾಮ್ರಾಜ್ಯಶಾಹಿ ಕುರಿತಂತೆ ಒಂದು ಅಸಮರ್ಪಕ ಮತ್ತು ಐತಿಹಾಸಿಕವಾಗಿ ತಪ್ಪಾದ ವಿವರಣೆ ಒದಗಿಸುತ್ತದೆ ಎಂದು ಲೋಹಿಯಾ ವಾದಿಸಿದರು. ಸಾಮ್ರಾಜ್ಯವಾದ ಎನ್ನುವುದು ಬಂಡವಾಳವಾದದ ವಿಸ್ತರಣೆ ಎಂಬ ಬಹು ಪ್ರಚಲಿತವಾಗಿದ್ದ ಮಾರ್ಕ್ಸ್‌ವಾದಿ ಕಲ್ಪನೆಗೆ ಬದಲಾಗಿ ಅವರು ಬಂಡವಾಳವಾದ ಮತ್ತು ಸಾಮ್ರಾಜ್ಯವಾದಗಳು ಅವಳಿ ಜವಳಿಗಳು ಎಂದು ನಿರೂಪಿಸಿದರು.

ಲೋಹಿಯಾ ಅವರ ಬಂಡವಾಳವಾದದ ವಿಶ್ಲೇಷಣೆಯು ಐರೋಪ್ಯೇತರ ಮತ್ತು ಮಾಜಿ ವಸಾಹತು ದೇಶಗಳಲ್ಲಿನ ಸಮಾಜವಾದದ ಸಾಧ್ಯತೆಗಳಿಗೆ ಸಂಬಂಧಿಸಿದಂತೆ ಬಹು ಮುಖ್ಯ ಒಳನೋಟಗಳನ್ನು ಒದಗಿಸುವ ಎರಡು ಆಯಾಮಗಳನ್ನು ಒಳಗೊಂಡಿದೆ. ಮೊದಲಾಗಿ, ಲೋಹಿಯಾರ ವಿಮರ್ಶೆ ಬಂಡವಾಳವಾದವನ್ನು ಬಹು ನೆಲೆಗಳಲ್ಲಿ ಗ್ರಹಿಸುವ ಸಾಧ್ಯತೆಗಳನ್ನು ಸೂಚಿಸುತ್ತದೆ. ಬಂಡವಾಳವಾದವನ್ನು ಅರ್ಥೈಸಿಕೊಳ್ಳುವ ವಿವಿಧ ಮತ್ತು ಸಮಾನ ಸಾಧುತ್ವದ ನೆಲೆಗಳಿವೆ ಮತ್ತು ಅದನ್ನು ಪರಿಧಿಯಿಂದ ನೋಡಿದಾಗ ದೊರಕುವ ಚಿತ್ರವು ಕೇಂದ್ರದಿಂದ ಗ್ರಹಿಸಿದಾಗ ದೊರಕುವ ಚಿತ್ರದಿಂದ ಮೂಲಭೂತವಾಗಿ ಭಿನ್ನವಾಗಿರಬಲ್ಲುದೆಂದು ಇದು ಹೇಳುತ್ತದೆ. ಎರಡನೆಯದಾಗಿ, ಬಂಡವಾಳವಾದದ ಮಾರ್ಕ್ಸ್‌ವಾದಿ ವಿಶ್ಲೇಷಣೆ ಕುರಿತ ಲೋಹಿಯಾ ವಿಮರ್ಶೆ, ಬಂಡವಾಳವಾದಕ್ಕೆ ಸವಾಲು ಅದರ ಕೇಂದ್ರದಿಂದ ಅಲ್ಲ, ಪರಿಧಿಯಿಂದಲೇ ಹೊಮ್ಮುವ ಸಾಧ್ಯತೆಗಳನ್ನು ಎತ್ತಿ ಹೇಳುತ್ತದೆ. ಹಾಗಾಗಿ, ಇದು ವಸಾಹತುಶಾಹಿಯಿಂದ ಕುಗ್ಗಿಹೋದ ಪಶ್ಚಿಮೇತರ ಜಗತ್ತಿನಲ್ಲಿ ಸಮಾಜವಾದಕ್ಕೆ ಉಜ್ವಲ ಭವಿಷ್ಯವಿದೆ ಎಂದೂ ಸೂಚಿಸುತ್ತದೆ.

ಲೋಹಿಯಾ ಅವರ ಸಮಾಜವಾದಿ ದರ್ಶನ, ಭಾರತದಲ್ಲಿ ಸಮಾಜವಾದದ

ಕ್ರಿಯಾಶೀಲತೆಯ ಆಧಾರವು ಹೋರಾಟವೇ ಆಗಿರುತ್ತದೆಂದು ಹೇಳುವುದರಲ್ಲೂ ಗಮನಾರ್ಹವೆನಿಸುತ್ತದೆ. ಏಕೆಂದರೆ, ಅವರು ಭಾರತದ ಸಮಾಜವಾದಿ ಪರಿವರ್ತನೆ ಜನರ ಸಕ್ರಿಯ ಭಾಗವಹಿಸುವಿಕೆಯ ಮೂಲಕ ಆಗಬೇಕೆಂದು ಬಲವಾಗಿ ನಂಬಿದ್ದರು. ಹಾಗಾಗಿ, ಸಮಾಜವಾದಿ ಕ್ರಿಯಾಶೀಲತೆಗೆ ಹೋರಾಟವನ್ನು ಆಧಾರವಾಗಿ ಪ್ರತಿಪಾದಿಸುವ ಮೂಲಕ ಲೋಹಿಯಾ, ಸಮಾಜವಾದವನ್ನು ನಾಗರಿಕ ಸಮಾಜದ(ಹಕ್ಕುಗಳ) ಚಳುವಳಿಯ ಉತ್ಪನ್ನವನ್ನಾಗಿಯೂ ಕಲ್ಪಿಸಿಕೊಂಡಿದ್ದರು ಎಂದು ಹೇಳಬಹುದು.

ಹೋರಾಟವನ್ನು ಆಧಾರವಾಗುಳ್ಳ ನಾಗರಿಕ ಸಮಾಜಾತ್ಮಕವಾದ ಸಮಾಜವಾದವನ್ನು ರೂಪಿಸುವ ಲೋಹಿಯಾರ ಪ್ರಯತ್ನ ಪ್ರಾಥಮಿಕವಾಗಿ ಬಹುಶಃ, ಸ್ವತಂತ್ರ ಭಾರತದಲ್ಲಿನ ಅತಿ ಮುಖ್ಯ ತಾತ್ವಿಕ ಮಾದರಿಗಳ ಬೆಳವಣಿಗೆಗಳಿಗೆ ನೀಡಿದ ಪ್ರತ್ರಿಕಿಯೆಯೇ ಆಗಿದೆ. ನೆಹರೂ ಭಾರತದ ರಾಜ್ಯವ್ಯವಸ್ಥೆಯ ಮುಖ್ಯಸ್ಥನಾಗಿ ಮೂಡಿ ಒಂದು ಕಲ್ಯಾಣ ರಾಜ್ಯ ಮಾದರಿಯ ಸಮಾಜವಾದವನ್ನು ಅನುಸರಿಸತೊಡಗಿದ್ದು, ಲೋಹಿಯಾರನ್ನು ನೆಹರೂ ಸಮಾಜವಾದದ ಮಾದರಿಗಿಂತ ಭಿನ್ನವಾದ ಮಾದರಿಯನ್ನು ರೂಪಿಸಲು ಪ್ರೇರೇಪಿಸಿತು. ಲೋಹಿಯಾ ಪ್ರಕಾರ ನೆಹರೂ, ಸಮಾಜವಾದಿ ವಾಗ್ವೈಖರಿ ಬಳಸಿ ಭಾರತದಲ್ಲಿ ಕೀನ್ಸ್‌ನ ಆರ್ಥಿಕ ಬೆಳವಣಿಗೆಯ ಮಾದರಿಯನ್ನು ಅನುಸರಿಸಿದರು. ನೆಹರೂರ ಈ ಪ್ರಯತ್ನದಲ್ಲಿ ಲೋಹಿಯಾ ಎರಡು ಉದ್ದೇಶಗಳನ್ನು ಕಂಡರು. ಒಂದು, ಭಾರತದಲ್ಲಿ ಬಂಡವಾಳಶಾಹಿ ಬೆಳವಣಿಗೆಯ ಪ್ರಕ್ರಿಯೆಯ ಕ್ರೋಢೀಕರಣ. ಎರಡು, ನಾಗರಿಕ ಸಮಾಜವನ್ನು ರಾಜ್ಯವ್ಯವಸ್ಥೆಯ ಒಟ್ಟಾರೆ ಮೇಲ್ವಿಚಾರಣೆಗೆ ಒಪ್ಪಿಸುವುದು. ಸ್ವಾತಂತ್ರ್ಯಾನಂತರ ಲೋಹಿಯಾ ತಮ್ಮ ಇಡೀ ರಾಜಕೀಯ ಬದುಕನ್ನು ನೆಹರೂ ಅವರ ಆಧುನೀಕರಣ ಮತ್ತು ಅಭಿವೃದ್ಧಿಯ ಯೋಜನೆಯನ್ನು ಎದುರು ಹಾಕಿಕೊಂಡೇ ಕಟ್ಟಿಕೊಂಡರು ಎಂಬುದನ್ನು ನಾವಿಲ್ಲಿ ಗಮನಿಸದಿರಲಾಗದು. ಹಾಗಾಗಿಯೇ ಅವರು ನೆಹರೂರ ಸಮಾಜವಾದವನ್ನು ಸರ್ಕಾರಿ ಸಮಾಜವಾದವೆಂದು ಗುರುತಿಸಿದರು ಮತ್ತು ತಮ್ಮ ಸಮಾಜವಾದಿ ಮಿತ್ರರನ್ನು ನೆಹರೂ ಅವರಿಂದ ತಾತ್ವಿಕ ಮತ್ತು ರಾಜಕೀಯ ದೂರವನ್ನು ಕಾಪಾಡಿಕೊಳ್ಳಬೇಕೆಂದು ಆಗ್ರಹಿಸಿದರು.

ಐವತ್ತರ ಮತ್ತು ಅರವತ್ತರ ದಶಕಗಳ ಭಾರತೀಯ ರಾಜಕಾರಣದಲ್ಲಿ ಲೋಹಿಯಾ ರೂಪಿಸಲು ಯತ್ನಿಸಿದ ಕಾಂಗ್ರೆಸ್ಸೇತರವಾದ ನೆಹರೂ ಅಡಿಯಲ್ಲಿ ಕಾಂಗ್ರೆಸ್ ನಂಬಿದ್ದ ಆಧುನೀಕರಣ ಮತ್ತು ಆರ್ಥಿಕ ಅಭಿವೃದ್ಧಿಯ ಮಾದರಿ ಕುರಿತ ಅವಿಶ್ವಾಸದ ಅಭಿವ್ಯಕ್ತಿಯೇ ಆಗಿತ್ತೆಂದರೆ ತಪ್ಪಾಗಲಾರದು. ಭಾರತದಲ್ಲಿನ ಈ ಕಾಂಗ್ರೆಸ್–ನೆಹರೂ ಕಾರ್ಯಕ್ರಮ ಬಂಡವಾಳಶಾಹಿಯ ಬೆಳವಣಿಗೆಗಷ್ಟೇ ಅಲ್ಲ, ನಾಗರಿಕ ಸಮಾಜದ ಎಲ್ಲ ಸಾಧ್ಯ ಸೃಜನಶೀಲ ಉಪಕ್ರಮಗಳನ್ನು ನಿರ್ಣಾಯಕವಾಗಿ ದಮನ ಮಾಡಬಲ್ಲ ಒಂದು ದೈತ್ಯ ರಾಜ್ಯವ್ಯವಸ್ಥೆಗೇ ದಾರಿ ಮಾಡಿಕೊಡಬಲ್ಲುದೆಂದು ಅವರು ಬಲವಾಗಿ ಅನುಮಾನಿಸಿದ್ದರು.

ಅಲ್ಲದೆ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಮಾಜವಾದಿ ರಾಜಕಾರಣ ಸಿಕ್ಕಿ ಹಾಕಿಕೊಳ್ಳತೊಡಗಿದ್ದ ಸಂಸದೀಯ ಮಾದರಿಯ ರಾಜಕಾರಣದ ಬಗ್ಗೆ ಕೂಡಾ ಲೋಹಿಯಾಗೆ ಆಳವಾದ ಆತಂಕವಿತ್ತು. ಸಂಸದೀಯ ಮಾದರಿಯ ರಾಜಕಾರಣದ ಮಿತಿಗಳನ್ನು ಮತ್ತು ಸಮಾಜವಾದವನ್ನು ಚುನಾವಣಾ ರಾಜಕಾರಣದ ಆಚೆಗೂ ವಿಸ್ತರಿಸುವ ಅಗತ್ಯವನ್ನು ತಮ್ಮ ಸಮಾಜವಾದಿ ಮಿತ್ರರಿಗೆ ಮನವರಿಕೆ ಮಾಡಿ ಕೊಡಲು ಅವರು ಸರ್ವ ಪ್ರಯತ್ನ ಮಾಡಿದರು. ಸಮಾಜವಾದಿ ಪರಿವರ್ತನೆಯ ವಿಷಯವನ್ನು ಕೇವಲ ಸಂವೈಧಾನಿಕ ಮತ್ತು ಸಂಸದೀಯ ಚೌಕಟ್ಟಿನಲ್ಲಿ ಗ್ರಹಿಸಲಾಗದು ಎಂದು ಅವರು ಬಲವಾಗಿ ನಂಬಿದ್ದರು. ಹಾಗಾಗಿಯೇ ಅವರು ಪಕ್ಷದೊಳಗೇ, ಜನರನ್ನು ಸಂಘಟಿಸಿ ಅವರ ಶಕ್ತಿಯನ್ನು ಸಮಾಜವಾದಿ ಹೋರಾಟ ಮತ್ತು ಪುನಾರಚನೆಯ ಕೆಲಸಗಳಲ್ಲಿ ತೊಡಗಿಸಲು ಬದ್ಧವಾದ ಅನೇಕ ಉಪ ಸಂಘಟನೆಗಳನ್ನು ಕಟ್ಟುವ ಪ್ರಯತ್ನ ಮಾಡಿದರು. ಹೀಗೆ ಲೋಹಿಯಾ, ನಾಗರಿಕ ಸಮಾಜದ ಸಕ್ರಿಯ ಭಾಗವಹಿಸುವಿಕೆಯ ಮೂಲಕ ಮೂಡುವ ಸಮಾಜವಾದದ ವಿಶಿಷ್ಟ ಮಾದರಿಯನ್ನು ಪ್ರಸ್ತುತಪಡಿಸುವ ಮೂಲಕ ಭಾರತೀಯ ಸಮಾಜವಾದಿಗಳ ಪೈಕಿ ಎದ್ದು ಕಾಣುವಂತಹ ವ್ಯಕ್ತಿತ್ವವಾಗಿದ್ದಾರೆ. ಹಾಗಾಗಿ ಲೋಹಿಯಾ, ಅಂತಸ್ಥವಾಗಿ ಬಲಶಾಲಿಯಾದ ರಾಜ್ಯ ವ್ಯವಸ್ಥೆಯ ದಾಳಿಗಳ ವಿರುದ್ಧ ರಕ್ಷಣೆಯಾಗಿ ಅಂತಸ್ಥವಾಗಿ ದುರ್ಬಲವಾದ ನಾಗರಿಕ ಸಮಾಜ ತನ್ನ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳುವ ಅಗತ್ಯವನ್ನು ಮನಗಂಡ; ಆಧುನಿಕ ಭಾರತದ ಬೌದ್ಧಿಕ ಇತಿಹಾಸದಲ್ಲಿನ ಕೆಲವೇ ಕೆಲವು ಚಿಂತಕರಲ್ಲಿ ಒಬ್ಬರಾಗಿದ್ದಾರೆ.

ಲೋಹಿಯಾ ಅವರ ಸಮಾಜವಾದಿ ಸಂಕಥನದ ಇನ್ನೊಂದು ಗಮನಾರ್ಹ ವಿಶೇಷತೆ ಎಂದರೆ, ಸಮಾಜವಾದದ ನೈತಿಕ ಆಯಾಮಕ್ಕೆ ಅವರು ನೀಡಿದ ಮಹತ್ವ ಲೋಹಿಯಾ ಪ್ರಕಾರ ಸಮಾಜವಾದ ಒಂದು ತತ್ವ ಮತ್ತು ಒಂದು ಅನುಷ್ಠಾನವಾಗಿ ತನ್ನ ನೈತಿಕ ತುಡಿತವನ್ನು ಸಮತೆ ಅಥವಾ ಸಮಾನತೆಯ ಕಲ್ಪನೆಯಿಂದ ಪಡೆದುಕೊಳ್ಳುತ್ತದೆ. ಅವರ ಪ್ರಕಾರ ಸಮಾಜವಾದವನ್ನು ಒಂದು ಕೇಂದ್ರ ತತ್ವಕ್ಕೆ ಭಟ್ಟಿಯಿಳಿಸುವುದಾದರೆ, ಆ ತತ್ವ ಸಮಾನತೆಯೇ ಆಗಿರುತ್ತದೆ. ಸಮಾಜವಾದದ ಸಿದ್ಧಾಂತ ಮತ್ತು ಕಾರ್ಯಾಚರಣೆಯ ಇಡೀ ಸಂಕೀರ್ಣ ವ್ಯವಸ್ಥೆಯನ್ನು ಸಂಘಟಿಸಬೇಕಾಗಿರುವುದು ಅಥವಾ ಕಟ್ಟಬೇಕಾಗಿರುವುದು ಸಮಾನತೆ ಎಂಬ ಒಂದು ಕೇಂದ್ರ ನೈತಿಕ ತತ್ವ ಮತ್ತು ಒಂದು ಮುಖ್ಯ ಊಹಾ ಆದರ್ಶದ ಮೇಲೆ ಎಂಬುದು ಅವರ ನಂಬಿಕೆಯಾಗಿತ್ತು. ಲೋಹಿಯಾ, ಸಮಾಜವಾದವನ್ನು ಒಂದು ನೈತಿಕ ತತ್ವ ಮತ್ತು ನಡವಳಿಕೆಯ ಪರಿಕಲ್ಪನೆಯಲ್ಲಿ ಸಾಮಾಜಿಕ ಬದಲಾವಣೆಯ ಮಾಧ್ಯಮವನ್ನಾಗಿ ಮುಂದಿರಿಸುವ ಪ್ರಯತ್ನ ಮಾಡಿದರು. ಒಂದರ್ಥದಲ್ಲಿ ಅವರು ನೈತಿಕ ಭಾರಗಳ ಸಮಾಜವಾದಿ ಆದರ್ಶ ಪ್ರಪಂಚಕ್ಕೆ ಪ್ರತಿಯಾಗಿ ಸಮಾಜವಾದವನ್ನು ಒಂದು ಪ್ರಬಲವಾದ ನೀತಿ ನಿರಪೇಕ್ಷ ವೈಜ್ಞಾನಿಕ ದರ್ಶನವನ್ನಾಗಿ ಅರ್ಥೈಸಿದ ಮಾರ್ಕ್ಸ್‌ವಾದಿ ಆವೃತ್ತಿಗೆ ಈ ಮೂಲಕ ಪ್ರತಿಕ್ರಿಯಿಸಿದರು ಎಂದು ಕಾಣುತ್ತದೆ.

ಹೀಗೆ ಸಮಾಜವಾದವನ್ನು ಪ್ರಾಥಮಿಕವಾಗಿ ಒಂದು ನೈತಿಕ ನಡಾವಳಿಯ ಶಬ್ದಕೋಶದ ಎರಕದಲ್ಲಿ ಪುನರ್ರೂಪಿಸುವ ಲೋಹಿಯಾ ಅವರ ಪ್ರಯತ್ನ, ಸಾಮಾಜಿಕವಲ್ಲದೆ ಸಾಂಸ್ಕೃತಿಕ ನೆಲೆಗಳಲ್ಲಿಯೂ ಸೃಷ್ಟಿಯಾಗಿದ್ದ ತಾರತಮ್ಯಗಳ ಮತ್ತು ದಮನಕಾರಿ ಸಂರಚನೆಗಳ ವಿರುದ್ಧ ಜನತೆ ಅವಿರತ ಹೋರಾಟಗಳನ್ನು ನಡೆಸಲು ಅನುವು ಮಾಡಿಕೊಟ್ಟಿತು. ಲೋಹಿಯಾ ನೇತೃತ್ವದ ಸಮಾಜವಾದಿ ಆಂದೋಲನದ ಅವಿಭಾಜ್ಯ ಅಂಗಗಳಾಗಿರುವ ಜಾತಿ ಅಸಮಾನತೆ, ಲಿಂಗ ತಾರತಮ್ಯ ಹಾಗೂ ಇಂಗ್ಲಿಷ್ ಭಾಷಾ ಪ್ರಭುತ್ವದ ವಿರುದ್ಧದ ಸಂಘರ್ಷಗಳು, ಅವರು ಎಂತಹ ನೈತಿಕ ಕೆಚ್ಚಿನೊಂದಿಗೆ ಸಮಾಜವಾದವನ್ನು ಸಾಮುದಾಯಿಕ ನೈತಿಕತೆಯ ಲಂಗರುಗಳಲ್ಲಿ ಕಟ್ಟಿ ನಿಲ್ಲಿಸಲು ಪ್ರಯತ್ನಿಸಿದ್ದರು ಎಂಬುದಕ್ಕೆ ಸಾಕ್ಷಿಯೇ ಆಗಿವೆ. ಲೋಹಿಯಾ ಅವರ ಸಮಾಜವಾದದ ನೈತಿಕ ಅಡಿಗಲ್ಲು ಸ್ವತಂತ್ರ ಭಾರತದಲ್ಲಿನ ಅವರ ರಾಜಕೀಯ ಬದುಕಿನಲ್ಲಿ ಅವರು ಮುನ್ನಡೆಸಿದ ಅನೇಕ ಸಂಘರ್ಷಗಳಲ್ಲಿ ಜನತೆ 'ನೈತಿಕ ಜೀವಿ'ಗಳಾಗಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿದ್ದರಲ್ಲೂ ಎದ್ದು ಕಾಣುವಂತಿದೆ. ಸಮಾಜವಾದ, ಜನತೆಯ ಭಾಗವಹಿಸುವಿಕೆಯ ಮೂಲಕ ಮಾತ್ರ ತನ್ನ ನಿಜತ್ವ ಮತ್ತು ಮಾನ್ಯತೆಯನ್ನು ಪಡೆದುಕೊಳ್ಳಬಲ್ಲದೆಂದು ಅವರು ಭಾವಿಸಿದ್ದರು.

ಹೀಗಾಗಿ ಸಹಜವಾಗಿಯೇ, ಸಮಾಜವಾದಿ ಕಾರ್ಯಕ್ರಮಕ್ಕೆ ಒಂದು ಸೈದ್ಧಾಂತಿಕ ಮತ್ತು ರಾಜಕೀಯ ಪ್ರೇರಣೆ ನೀಡುವ ಲೋಹಿಯಾ ಅವರ ಪ್ರಯತ್ನಗಳು ಸ್ವತಂತ್ರ ಭಾರತದಲ್ಲಿನ ಸಮಾಜವಾದಿ ರಾಜಕಾರಣದ ಚಿತ್ರವನ್ನೇ ಗಮನಾರ್ಹವಾಗಿ ಬದಲಾಯಿಸಿತು. ಸಮಾಜವಾದಿ ರಾಜಕಾರಣ ಬಹು ಮುಖ್ಯ ಹೋರಾಟಗಳ ವೇದಿಕೆಯಾಯಿತು. ಓರ್ವ ವರ್ಣಮಯ ವ್ಯಕ್ತಿತ್ವವಾಗಿ ಮತ್ತು ಕಲ್ಪನಾಶೀಲ ನಾಯಕರಾಗಿ ಲೋಹಿಯಾ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಜನರನ್ನು, ವಿಶೇಷವಾಗಿ ಯುವಜನರನ್ನು ಆಕರ್ಷಿಸಿ ಅವರಲ್ಲಿ ಸರಿಯಾದ ದಿಕ್ಕು ಮತ್ತು ಉದ್ದೇಶಗಳ ಅರಿವನ್ನು ಮೂಡಿಸಿದರು. ಕೆಲಕಾಲದ ಮಟ್ಟಿಗಾದರೂ ಅವರು ಜಾತಿ ಅಸಮಾನತೆ, ಲಿಂಗ ತಾರತಮ್ಯ, ಕೃಷಿರಂಗದ ನಿರ್ಲಕ್ಷ್ಯ ಮತ್ತು ಇಂಗ್ಲಿಷ್ ಭಾಷಾ ರಾಜಕಾರಣದ ವಿರುದ್ಧ ನಡೆಸಿದ ಹೋರಾಟಗಳು ಮತ್ತು ಚಳುವಳಿಗಳು ಭಾರತದಲ್ಲಿನ ಸಮಾಜವಾದಿ ಕಾರ್ಯಕ್ರಮಕ್ಕೆ ಒಂದಿಷ್ಟು ಗೌರವಾನ್ವಿತತೆ ಮತ್ತು ಕಸುವನ್ನೂ ಒದಗಿಸಿದವು. ಸಮಾನತೆ, ನ್ಯಾಯ ಮತ್ತು ಆತ್ಮ ಗೌರವಗಳನ್ನು ಭಾರತೀಯ ಸಮಾಜವಾದದ ಕೇಂದ್ರ ತತ್ವಗಳನ್ನಾಗಿ ಎತ್ತಿ ಹಿಡಿಯುವಲ್ಲಿನ ಅವರ ದಣಿವರಿಯದ ಪ್ರಯತ್ನಗಳು ಭಾರತದ ಸಮಾಜವಾದಿ ರಾಜಕಾರಣದ ಏಳು ಬೀಳುಗಳ ಇತಿಹಾಸದಲ್ಲಿ ಓರ್ವ ಅನನ್ಯ ಚಿಂತಕ ಮತ್ತು ನಾಯಕರಾಗಿ ಅವರ ಸ್ಥಾನವನ್ನು ಚಿರಸ್ಥಾಯಿಯಾಗಿಸಿವೆ.

(ಕನ್ನಡಕ್ಕೆ: ಡಿಎಸ್ಸೆನ್)

■

ಲೋಹಿಯಾರ ಇತಿಹಾಸ ಜಿಜ್ಞಾಸೆ: ಎರಡು ಟಿಪ್ಪಣಿಗಳು

■ ನೀಲಗಂಗಯ್ಯ ಪೂಜಾರ

೧. ಇತಿಹಾಸದ ಪ್ರೇರಕ ಶಕ್ತಿ

ಇತಿಹಾಸಕ್ಕೇನಾದರೂ ಸೂತ್ರಬದ್ಧ ಚಲನೆ ಇದೆಯೆ? ಅದು ಕ್ಲುಪ್ತ ಮಾರ್ಗದಲ್ಲಿ, ಕ್ಲುಪ್ತ ಗತಿಯಲ್ಲಿ ಚಲಿಸುವುದೇ ಇಲ್ಲವೆಂದು ಹೇಳಿದರು ಡಾ. ಲೋಹಿಯಾ. ಆದರೂ ಇತಿಹಾಸಕ್ಕೆ ದರ್ಶನಾನುಭವದ ಮೇಲುಹೊದಿಕೆಯೊಂದನ್ನು ಒದಗಿಸುವ ಪ್ರಯತ್ನ ನಡೆಯಬೇಕು–ಹಾಗಾಗುವಾಗ ಯಾವುದೇ ದೇಶ, ಜನಾಂಗ, ನಾಗರಿಕತೆಗಳಿಗೆ ಅಪಚಾರವಾಗದಂತೆ ವಿನೀತ ಭಾವವನ್ನು ವಹಿಸಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು.

ಇತಿಹಾಸದ ಆಂತರ್ಯವನ್ನು ಅರಿಯುವಲ್ಲಿ ಎಲ್ಲ ಚಾರಿತ್ರಿಕ ಸಿದ್ಧಾಂತಗಳೂ ತಲೆದಂಡ ಒಪ್ಪಿಸಿಯೇ ಬಂದಿವೆಯೆಂದು ಲೋಹಿಯಾರ ಖಂಡಿತದ ಅಭಿಪ್ರಾಯ. ಸ್ಪಿಂಗ್ಲರ್, ನಾರ್ಥರಾಪ್, ಸೊರೊಕಿನ್, ಟಾಯನ್ಬಿಯಂತಹ ದರ್ಶನಕಾರರು ಸಂಸ್ಕೃತಿಯ ಏಳುಬೀಳುಗಳ ಕುರಿತಾಗಿ ನೀಡಿದ ವಿವರಣೆ–ಸಿದ್ಧಾಂತಗಳನ್ನೆಲ್ಲ ಲೋಹಿಯಾ, ಅನ್ವೇಷಣೆಯ ಒರೆಗೆ ಹಚ್ಚಿ ಅವುಗಳ ನಿಖರತೆಯನ್ನು ಆಹ್ವಾನಿಸಿದ್ದಾರೆ. ಈ ಮಹಾನುಭಾವರೆಲ್ಲರ ಆಲೋಚನೆಯ ಕೇಂದ್ರಬಿಂದುವು ಯುರೋಪು ಮಾತ್ರವಾಗಿದ್ದು ಯುರೋಪಿನ ನಾಗರಿಕತೆ, ಸಂಸ್ಕೃತಿಗಳನ್ನು ಐರೋಪ್ಯ ಸಮಾಜದ ಅನುಭವದ ಹಿನ್ನೆಲೆಯಲ್ಲಿ ಮಾತ್ರ ಪರೀಕ್ಷಿಸಿ ಸಾರ್ವತ್ರಿಕ ಸಾಧುವಾಗಬಲ್ಲ ಸಿದ್ಧಾಂತಗಳನ್ನು ರೂಪಿಸಲಿಕ್ಕೆ ಪ್ರಯತ್ನಿಸಿದ್ದಾರೆ. ಕಳೆದ ಮುನ್ನೂರು ವರ್ಷಗಳ ಕಾಲ ಯುರೋಪು ಸಭ್ಯತೆ ನಾಗರಿಕತೆಗಳ ಯೌವನಾನುಭವದಿಂದ ಎಲ್ಲ ನಾಗರಿಕ ಭೂಖಂಡಗಳ ಋತುರಾಜನಾಗಿ ಮೆರೆದಿರಬಹುದು. ಹಾಗೆ ನೋಡಿದರೆ ಇತಿಹಾಸ ವನಿತೆಯು

ಭಾರತದೊಂದಿಗೆ ಹಿಂದೊಮ್ಮೆ-ಎರಡು ಸಲವೋ ಏನೋ-ಪ್ರಣಯಾರಾಧನೆ ನಡೆಸಿರಲಿಲ್ಲವೆ? ಗ್ರೀಸ್, ರೋಮ್, ಚೀನ, ಅರೇಬಿಯಾ ಇವೂ ಇತಿಹಾಸ ಕನ್ಯೆಯೊಡನೆ ಹಸೆಮಣೆಯ ಮೇಲೆ ಕುಳಿತಿರಲಿಲ್ಲವೆ? ಯುರೋಪಿನದೇ ಏನಂಥ ಹೆಗ್ಗಳಿಕೆ? ಎಲ್ಲ ಜನಾಂಗ-ನಾಗರಿಕತೆಗಳೂ ಉತ್ಕರ್ಷ-ಅಪಕರ್ಷಗಳನ್ನು ಕಂಡೇ ಬಂದಿವೆ. ಯುರೋಪು ಇದರಿಂದ ವಿನಾಯಿತಿಯನ್ನೇನೂ ಪಡೆದು ಬಂದಿಲ್ಲವಲ್ಲ!

ತಮ್ಮ ವೀಕ್ಷಣೆಯ ಬಹಳಷ್ಟು ಶಕ್ತಿಪೂರ್ಣ ಕಿರಣಗಳನ್ನು ಡಾ.ಲೋಹಿಯಾ ಕಾರ್ಲ್ ಮಾರ್ಕ್ಸರ 'ವರ್ಗ ಸಮರ' ಮತ್ತು 'ಇತಿಹಾಸದ ಭೌತ ವಿವರಣೆ'ಗಳ ಮೇಲೆ ಹಾಯಿಸಿದ್ದಾರೆ. ಕಮ್ಯೂನಿಸ್ಟ್ ಮೆನಿಫೆಸ್ಟೋ ಮೂಲಕ "ಇಲ್ಲಿವರೆಗಿನ ಮಾನವ ಜನಾಂಗದ ಇತಿಹಾಸವೆಲ್ಲ ಮತ್ತೇನೂ ಆಗಿರದೆ ವರ್ಗಸಂಘರ್ಷದ ಇತಿಹಾಸ ಮಾತ್ರವಾಗಿದೆ"ಯೆಂದು ಸಾರಿ ಮೀಮಾಂಸೆಗೈಯುತ್ತ ಮಾರ್ಕ್ಸ್-ಎಂಗೆಲ್ಸರು, ಆರ್ಥಿಕವಾಗಿ ಶೋಷಿತವಾದ ವರ್ಗಗಳು ತಮ್ಮ ಶೋಷಕರಾದ ಪ್ರಭುವರ್ಗದ ವಿರುದ್ಧ ನಡೆಸಿರತಕ್ಕ ಸಂಘರ್ಷಗಳೇ ಇತಿಹಾಸ ಚಲನೆಯ ಶಕ್ತಿ ಸ್ಥಾವರಗಳೆಂದು ಹೇಳಿದ್ದಾರೆ. ಮಾರ್ಕ್ಸ್, ಡಯಲೆಕ್ಟಿಕಲ್ ತರ್ಕಾನುಸಂಧಾನದ ಮೇರೆಗೆ ಬಂಡವಾಳವಾದಿ ಸಮಾಜವು ತನ್ನ ನಾಶಕ್ಕೆ ಕಾರಣವಾಗಬಲ್ಲ ಸ್ವಯಂ ವಿರೋಧಗಳನ್ನೆಲ್ಲಾ ತಾನೇ ನಿರ್ಮಿಸಿಕೊಳ್ಳುತ್ತದೆ ಎಂದಿದ್ದ.

ಬಂಡವಾಳವಾದವು ತಾನು ಬೆಳೆದು ವಿಕಸನಗೊಳ್ಳುತ್ತ ನಡೆದಂತೆ ಸಂಪದುತ್ಪಾದನೆಯ ಸಾಧನ ಸಲಕರಣೆಗಳಲ್ಲಿ ನಾವೀನ್ಯತೆಯು ದಿನಕ್ಕೊಂದು ಚೆಂದವಾಗಿ ಬೆಳೆಯುತ್ತ ಬಂದು, ಬಂಡವಾಳದ ಜಮಾವಣೆಯು ತೀರಾ ಕೆಲವರ ಕೈಯಲ್ಲಿ ಆಗುತ್ತದೆ, ನಡೆಯುತ್ತದೆ. ಕೆಲವೇ ಬಂಡವಾಳಗಾರರ ಕೈಯಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯ ಕೂಲಿಕಾರರು ದುಡಿಯುತ್ತ ಹೋದಂತೆ ಅವರ ಸಹಜ ಸಾಮಾಜೀಕರಣವೂ ಆಗುತ್ತ ಹೋಗುತ್ತದೆ. ಸಾಧನ ಸಲಕರಣೆಗಳ ನಾವೀನ್ಯತೆ ಹೆಚ್ಚಾಗುತ್ತಾ ಹೋದಂತೆ ಕೂಲಿಕಾರರ ನಿರುದ್ಯೋಗ, ದಾರಿದ್ರ್ಯ ದುಮ್ಮಾನಗಳು ಬೆಳೆಯುತ್ತ ನಡೆದು ಸಮಾಜೀಕರಣಗೊಂಡ ದುಡಿಮೆಯಾಳುಗಳು ಬಂಡವಾಳಶಾಹಿಯ ಕುತ್ತಿಗೆಗೆ ಉರುಲು ಬಿಗಿಯಹತ್ತುತ್ತಾರೆ. ಕೊನೆಗೊಮ್ಮೆ ಬಂಡವಾಳದಾರ-ಕೂಲಿಕಾರ ಸಂಬಂಧದ ಗೋಣಸು ಛಟಿಲ್ಲನೆ ಸಿಡಿದುಹೋಗುತ್ತದೆ. ಕೂಲಿಕಾರರ ಸಾರ್ವತ್ರಿಕ ಕ್ರಾಂತಿಯಾಗಿ ಬಂಡವಾಳಶಾಹಿ ಆಗ ಕೊನೆಯುಸಿರೆಳೆಯುತ್ತದೆ. ಅಲ್ಲಿಯವರೆಗೆ ಬಂಡವಾಳಶಾಹಿಯ ಊಳಿಗಕ್ಕಿದ್ದ ತಂತ್ರವಿಜ್ಞಾನಗಳು ಮುಕ್ತಗೊಂಡು ಸಮಾಜವಾದಿ ಕೈಗಾರಿಕೋದ್ಯಮ ಮತ್ತು ವ್ಯವಸಾಯಗಳಿಗೆ ತಮ್ಮನ್ನು ತಾವೆ ಅರ್ಪಿಸಿಕೊಳ್ಳುತ್ತವೆ. ಈ ರೀತಿ ಮಾರ್ಕ್ಸ್‌ನು ಪ್ರವಾದಿಯಾಗಿ ನಿಂತು ತನ್ನ ಕಾಲಜ್ಞಾನವನ್ನು ಸಾರಿದ್ದ.

ಮಾರ್ಕ್ಸ್ ಸಾರಿದ್ದ ಕಾಲಜ್ಞಾನಕ್ಕೆ ಇತಿಹಾಸ ಕೈಕೊಟ್ಟಿದ್ದನ್ನು ಮಾರ್ಕ್ಸ್‌ವಾದಿಗಳು ಇನ್ನೂ ಮನಗಂಡಿಲ್ಲ. ಬಂಡವಾಳವಾದವು ತಂತ್ರನೈಪುಣ್ಯತೆ ಮತ್ತು ಸಾಧನ

ಸಲಕರಣೆಗಳ ನಾವೀನ್ಯತೆಗಳು ಪರಾಕಾಷ್ಠೆಯನ್ನು ಸಾಧಿಸಿದ ಯುರೋಪಿಯನಲ್ಲಿಯೇ ಬಂಡವಾಲವಾರ–ಕೂಲಿಕಾರರ ಸಂಬಂಧದ ಗೋಣಸು ಘಟಿಲ್ಲೆಂದು ಸಿಡಿಯಬೇಕಾಗಿತ್ತು. ಸಮಾಜವಾದಿ ಕ್ರಾಂತಿಯ ಕಿಡಿಯು, ಬಂಡವಾಲಗಾರಿಕೆಯ ಪರಾಕಾಷ್ಠೆಯನ್ನು ತಲುಪಿದ ಇಂಗ್ಲೆಂಡಿಯನಲ್ಲಿಯೋ, ಜರ್ಮನಿ ಅಥವಾ ಫ್ರಾನ್ಸಿನಂತಹ ಯುರೋಪಿನ ದೇಶದಲ್ಲಿ ಎಲ್ಲಿಯಾದರೂ ಹಾರಬೇಕಾಗಿತ್ತು. ಈ ತರ್ಕದ ಬೆನ್ನು ಹತ್ತಿ ಹಿಂದೆ ಹೋದರೆ ನಾಗರಿಕತೆಯ ಎಲ್ಲ ಅಭ್ಯುತ್ಥಾನ–ಪತನಗಳ ಭ್ರೂಣವನ್ನು ಯುರೋಪಿನ ಗರ್ಭವೇ ಪ್ರತಿ ಸಾರೆಯೂ ಹೊತ್ತು ಬರಬೇಕಾಗಿತ್ತು. ಇತಿಹಾಸವು ಈ ಸೂತ್ರ ನಿಬದ್ಧತೆಗೆ ಪಕ್ಕಾಗಿ ನಡೆದುಕೊಂಡು ಬಂದಿದ್ದರೆ ಅದು ಇತಿಹಾಸವೇ ಆಗುತ್ತಿದ್ದಿಲ್ಲ. ಶ್ರಮಿಕ ಬಂಡವಾಲದಾರ ಸಂಬಂಧಗಳ ಗೋಣಸು ರಶಿಯದಲ್ಲಿಯೇ ಮೊದಲು ಕಿತ್ತು ಹೋಗುತ್ತಿದ್ದಿಲ್ಲ.

ಪಶ್ಚಿಮ ಯುರೋಪು ಇಲ್ಲವೇ ಅಮೆರಿಕೆಯ ಸಂಯುಕ್ತ ಸಂಸ್ಥಾನಗಳಂತಹ ಬಂಡವಾಲದಾರಿಕೆಯ ಪರಾಕಾಷ್ಠೆಯನ್ನು ತಲುಪಿದ ದೇಶಗಳಲ್ಲಿ ಶ್ರಮಿಕ ವರ್ಗದ ಸಾಮಾಜೀಕರಣವೇನೋ ಆಯಿತು. ಆದರೆ ಅದರ ಜೊತೆಗೆ ವಸಾಹತು ಸುಲಿಗೆಯ ಮೂಲಕ ಸಂಪಾದಿತನಾದ ಸಂಪತ್ತಿನಲ್ಲಿ ಅವರಿಗೂ ಪಾಲು ದೊರೆಯಿತು. ಅವರ ಸಂಬಳ ಸಾರಿಗೆಗಳು ಹೆಚ್ಚಿ ಅವರ ಜೀವನ ಮಟ್ಟ ಉತ್ಕೃಷ್ಟಗೊಂಡಿತು. ವಸಾಹತು ದೇಶಗಳಲ್ಲಿಯ ಕಸುಬು ಕೈಗಾರಿಕೆಗಳನ್ನೆಲ್ಲ ಮುರಿದಿಕ್ಕಿ ಯುರೋಪಿನ ಕಾರ್ಮಿಕರು ಸಿದ್ಧಪಡಿಸಿದ ವಸ್ತುಗಳಿಗೆ ಅಬಿಚ್ಛಿನ್ನ ಮಾರುಕಟ್ಟೆಯನ್ನು ಒದಗಿಸಿಕೊಟ್ಟ ಸಾಮ್ರಾಜ್ಯವಾದಕ್ಕೆ, ಯುರೋಪಿನ ಶ್ರಮಿಕರು ಎಂದಿಗೂ ಋಣಿಯಾಗಿರಬೇಕಾಗಿದೆ. ಭಾರತ, ಬರ್ಮಾ, ಮಲಯಾ. ಆಫ್ರಿಕೆಯ ವಿಶಾಲ ಭೂಖಂಡದ ಕಾರ್ಮಿಕ ವರ್ಗದ ನಿರ್ಗತಿಕ ಬದುಕಿನ ಮೇಲೆ ಯುರೋಪಿನ ಕಾರ್ಮಿಕ ತನ್ನ ಕಲ್ಯಾಣಸೌಧವನ್ನು ಕಟ್ಟಿಕೊಂಡ ಅಂಶವನ್ನು ಮಾರ್ಕ್ಸ್ ಮರೆತೇಬಿಟ್ಟನೆಂದು ಲೋಹಿಯಾ ಮಾರ್ಕ್ಸ್‌ವಾದಿಗಳನ್ನು ಕೆಣಕಿದ್ದಾರೆ.

ಹೀಗೆಂದಾಕ್ಷಣ ಇತಿಹಾಸ ನಿರ್ಮಿತಿಯಲ್ಲಿ ವರ್ಗಸಮರದ ಪಾತ್ರವನ್ನು ಲೋಹಿಯಾ ಪಟ್ಟಾಪೂರಾ ನಿರಾಕರಿಸಿದರೆಂದರ್ಥವಲ್ಲ. ತಮ್ಮ ಜೀವನವಿಡೀ ವರ್ಗಸಂಘರ್ಷದ ಅಲಗುಗಳನ್ನು ಮಸೆದು ಹದನುಗೊಳಿಸಲು ಅವರು ಸಂದರ್ಭಗಳನ್ನು ಅರಸುತ್ತಲೇ ಇದ್ದರು. ಸಿಕ್ಕ ಸಂದರ್ಭವನ್ನೆಂದೂ ಅವರು ಹುಸಿ ಕಾಳಗದಲ್ಲಿ ವ್ಯರ್ಥಗೊಳಿಸಲಿಲ್ಲ. ಆದರೆ ಇತಿಹಾಸ ನಿರ್ಮಿತಿಯಲ್ಲಿ ಜನಾಂಗವೊಂದು ತನ್ನೊಳಗಿನ ವರ್ಗಗಳ ಆಂತರಿಕ ಸಂಘರ್ಷದ ಜೊತೆಗೇ ಇನ್ನೊಂದು ಜನಾಂಗದ ಮೇಲುಗೈಯನ್ನು ಪಡೆಯುವ ಬಾಹ್ಯ ಸಂಘರ್ಷದಲ್ಲಿಯೂ ತೊಡಗಿಕೊಂಡಿರುತ್ತದೆಂಬ ಮಾತು ಲೋಹಿಯಾ ಎತ್ತಿ ತೋರಿಸಿದರು. ಅರ್ನಾಲ್ಡ್ ಟಾಯನ್ಬಿ ಈ ಯಮಳ ಸಂಘರ್ಷಗಳ ಸಿದ್ಧಾಂತವನ್ನು ಮುಂದೆ ಮಾಡಿದವರು. ಆಂತರಿಕವಾಗಿ ವರ್ಗಸಂಘರ್ಷ ಮತ್ತು ಬಾಹ್ಯದಲ್ಲಿ ಜನಾಂಗಿಕ ಮೇಲಾಟ ಈ ಉಭಯ ಸಂಘರ್ಷಗಳ ಒತ್ತಿನಲ್ಲಿ

ಸಿಕ್ಕಿ ಹಾಕಿಕೊಂಡು ನಾಗರಿಕತೆಗಳು ಖಿಲಗೊಳ್ಳುವ, ಇಲ್ಲವೇ ಉತ್ಕರ್ಷಗೊಳ್ಳುವ ಹವಣು ಪಡೆಯುತ್ತವೆಂದು ಟಾಯನ್ಬಿ ಪ್ರತಿಪಾದಿಸಿದರು. ಇದು ಪ್ರಮೇಯದ ಅತಿಯಾದ ಸರಳೀಕರಣವಾಯಿತು. ಈ ಮೋಟು ಪ್ರಮೇಯಕ್ಕೆ ಕೈ ಕಾಲುಗಳನ್ನು ಹಚ್ಚಿ ಲೋಹಿಯಾ ಇತಿಹಾಸಕ್ಕೆ ಅನುಸಂಧಾನಾತ್ಮಕ ದರ್ಶನವೊಂದನ್ನು ನೀಡಲು ಯತ್ನಿಸಿದರು. ಒಂದು ಕಡೆಯಲ್ಲಿ ಜನಾಂಗದೊಳಗಿನ ವರ್ಗಗಳು, ತಮ್ಮ ಚಲನೆಯನ್ನು ಕಳೆದುಕೊಂಡು ಜಾತಿಗಳಾಗಿ ಗಟ್ಟಿಗೊಳ್ಳುತ್ತಿರುವುದು; ಜಾತಿಗಳು ಚಲನೆ ಪಡೆದು ವರ್ಗ ಸ್ವರೂಪ ಪಡೆಯುವುದು-ಹೀಗೆ ಜೀಕ ಜೋಕಾಲಿಯ ಗತಿಯಲ್ಲಿ ಎಣೆಯಾಡುತ್ತವೆ. ಇನ್ನೊಂದು ಕಡೆಯಲ್ಲಿ ಸಂಪತ್ತು ಮತ್ತು ಅಧಿಕಾರ ಬಲಗಳ ಕೇಂದ್ರವು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸ್ಥಳಾಂತರಗೊಳ್ಳುತ್ತಿರುತ್ತದೆ. ಈ ಆಂತರಿಕ ಎಡೆಯಾಟ ಮತ್ತು ಬಾಹ್ಯ ಪಲ್ಲಟಗಳ ಗತಿಯಲ್ಲಿ ಒಂದು ನಿಬದ್ಧತೆಯಿದೆ. ಆ ನಿಬದ್ಧತೆಯೇ ಇತಿಹಾಸಕ್ಕೆ ಗತಿ ನೀಡುವ ಪ್ರೇರಕಶಕ್ತಿ. ಬಾಹ್ಯ ಸಂಪತ್ತು ಮತ್ತು ಅಧಿಕಾರದ ಕೇಂದ್ರವು ಪಲ್ಲಟಗೊಂಡು ಈ ದೇಶಕ್ಕೆ ಅದು ಬಂದಿತೋ ಆಗ ಈ ದೇಶದ ಜಾತಿಗಳು ತಮ್ಮ ಜಡತೆಯನ್ನು ಕಳೆದುಕೊಂಡು ಚಲನೆ ಪಡೆದು ವರ್ಗಗಳಾಗಹತ್ತುತ್ತವೆ. ಸಂಪತ್ತು ಅಧಿಕಾರಗಳು ಇಲ್ಲೇ ನಿಂತು ಬಾಹ್ಯಸ್ಪರ್ಧೆ ಇಲ್ಲದಾದಾಗ ವರ್ಗಗಳು ಚಲನೆ ಕಳೆದುಕೊಂಡು ಜಾತಿಗಳಾಗಿ ಗಟ್ಟಿಗೊಳ್ಳುತ್ತವೆ. ಜಗತ್ತಿನ ಒಟ್ಟು ಮೊತ್ತದ ದಕ್ಷತೆಯಲ್ಲಿ ತನ್ನ ಪಾಲಿಗಾಗಿ ಪರಮಾವಧಿ ಮೊತ್ತದ ದಕ್ಷತೆಯನ್ನು ಪಡೆದುಕೊಳ್ಳಲು ಜನಾಂಗಗಳು ನಡೆಸುತ್ತಿರುವ ಪೈಪೋಟಿಯು, ಬಾಹ್ಯ ಒತ್ತಡದ ಪಾತವನ್ನು ನಿರ್ಧರಿಸುತ್ತದೆ.

ಲೋಹಿಯಾ ಅನ್ವೇಷಣೆಯಲ್ಲಿ ಆವಿಷ್ಕಾರಗೊಂಡು ಬಂದ ಈ ಇತಿಹಾಸ ತತ್ವಜ್ಞಾನದ ಮೇಲೆ ಇನ್ನೂ ವ್ಯಾಸಂಗ, ಚರ್ಚೆ, ಸಂಶೋಧನೆ ನಡೆಯಬೇಕಾಗಿದೆ. ರಾಜಕೀಯದಲ್ಲಿ ಸೋಲು, ಹಿಮ್ಮುಖಗಳನ್ನು ಅನುಭವಿಸಿದ ಡಾ.ಲೋಹಿಯಾ ವ್ಯಾಸಂಗ ಕ್ಷೇತ್ರಕ್ಕೆ ನೀಡಿದ ಈ ಅಪೂರ್ವ ಕೊಡುಗೆಯನ್ನು ವ್ಯಾಸಂಗ ಕ್ಷೇತ್ರವು ಹೇಗೆ ಸ್ವೀಕರಿಸುತ್ತದೆಯೋ ಇನ್ನು ನೋಡಬೇಕಾಗಿದೆ.

೨. ಮಾರ್ಕ್ಸ್ ಹಾಗೂ ಭಾರತದ ಜಾತಿ

ಭಾರತದ ಜಾತಿಯ ಮಹಾಸಂಸ್ಥೆಯು ಯಾವ ರಾಜಕೀಯ ಶಾಸ್ತ್ರ-ಸಿದ್ಧಾಂತಗಳಿಗೂ, ಯಾವ ವ್ಯಾಖ್ಯಾನ-ಭಾಷ್ಯಗಳಿಗೂ ಪಕ್ಕಾಗದೆ, ಎಲ್ಲ ಕಾಲ ಖಂಡಗಳಿಗೂ ಆಹ್ವಾನಿಸಿ ನಿಂತಿದೆಯೆಂದು ನಾನು ಹಿಂದೊಂದು ಕಡೆ ಬರೆಯುವಾಗ ಮಾರ್ಕ್ಸ್‌ನ ಇತಿಹಾಸದ ಭೌತವಾದಿ ವಿವರಣೆಯ ಪ್ರಣಾಳಿಯೇ ಪ್ರಧಾನವಾಗಿ ನನ್ನ ದೃಷ್ಟಿಯಲ್ಲಿತ್ತೆಂದು ಸ್ಪಷ್ಟಪಡಿಸಿಯೇ ಮುಂದುವರೆಯಬೇಕಿದೆ. ಯಾಕೆಂದರೆ, ಇತಿಹಾಸವನ್ನು ಸಮಗ್ರವಾಗಿ ಅಳೆದು, ಅದರ ಕಾಲ ಖಂಡಗಳನ್ನು ಇದಮಿತ್ಥಂ

ಎಂದು ವಿಭಜಿಸಿ, ಪ್ರವಾದಿ ಪಟ್ಟವನ್ನು ತನಗಾಗಿ ನಿರ್ಮಿಸಿಕೊಂಡ ಮಾರ್ಕ್ಸ್‌ನನ್ನು ಯಾರು ತನೇ ನಿರ್ಲಕ್ಷಿಸಿಲಿಕ್ಕೆ ಆದೀತು? ತನ್ನ ಕಾಲದ ಯೂರೋಪಿನ ವಿಚಾರಲೋಕದ ತಾರೆಗಳೆನಿಸಿದ ಹೆಗಲ್, ಡಾರ್ವಿನ್, ಲೂಯಿ ಫ್ಯೂರ್‌ಬ್ಯಾಕ್‌ರ ಸಿದ್ಧಾಂತ ಕ್ರಮಗಳನ್ನೆಲ್ಲ ಪಳಗಿಸಿಕೊಂಡು ಅವುಗಳನ್ನು ತನ್ನ ವರ್ಗ ಸಂಘರ್ಷದ ನೊಗಕ್ಕೆ ಹೂಡಿ ಇತಿಹಾಸದ ನೆಲವನ್ನು ಹರಗಿ ಜಾಲಾಡಿಸಿದ ಆ ಮಹಾ ಮೇಧಾ ಸಾಮರ್ಥ್ಯದ ಮಾರ್ಕ್ಸ್‌ನಿಗೆ ಪ್ರಣಾಮ ಸಲ್ಲಿಸಿಯೇ ನಾನು ಕೇಳುತ್ತೇನೆ: ಭಾರತದಲ್ಲಿ ಸಂಪತ್ತು ಅಧಿಕಾರಗಳ ಚಲನೆಯನ್ನು ಇತಿಹಾಸದ ಆರಂಭದಿಂದ ಇಲ್ಲಿಯವರೆಗೆ ತಡೆದು ನಿಲ್ಲಿಸಿದ ಐತಿಹಾಸಿಕ ಪ್ರೇರಣೆ ಯಾವುದು? ಶ್ರೇಣಿ ನಿಬದ್ಧವಾಗಿ ಅವು ಉಳಿದುಕೊಂಡು ಬಂದ ವಿದ್ಯಮಾನದ ಆಂತರ್ಯವೇನು?

'The history of all hither-to existing soceity is the history of class struggles'! ಇತಿಹಾಸ ಕನ್ಯೆಯನ್ನು ಸೆರೆ ಹಾಕಿದ ದುರ್ಗದ ಕೀಲಿಕೈಯನ್ನೇ ಮಾರ್ಕ್ಸ್‌ನು ತನ್ನ ಅನುಯಾಯಿಗಳ ಕೈಯಲ್ಲಿಟ್ಟು ಹೋಗಿದ್ದಾನೆ. ಅದರೂ ನಮ್ರನಾಗಿ ನಾನು ಹೇಳುತ್ತೇನೆ: ಇವರಿಗೆ ಸಿಕ್ಕಿದ್ದು ಬರಿ ದುರ್ಗದ ಕೀಲಿ ಕೈ. ಇತಿಹಾಸದ ಹಿಂದಿರುವ ಪ್ರೇರಣೆ ಏನು? ಇತಿಹಾಸವು ಇತಿಹಾಸವಾಗಲಿಕ್ಕೆ ಕಾರಣವೇನು? ಮಾರ್ಕ್ಸ್‌ನ ಮೇರೆಗೆ ಈ ಕಾರಣ ಸಮಾಜವು ಅನುಸರಿಸಿಕೊಂಡು ಬಂದಿರುವ ಉತ್ಪಾದನಾ ವಿಧಾನವು ಚಲಿಸ ಹಚ್ಚಿರುವ ಪ್ರೇರಣೆ. ಇದೊಂದು ಪ್ರೇರಣೆಯಲ್ಲದೇ ಇನ್ನೇನೂ ಇತಿಹಾಸವನ್ನು ಇತಿಹಾಸವಾಗಲು ಹಚ್ಚಿಲ್ಲವೆಂದು ಮಾರ್ಕ್ಸ್‌ನ ವಾದ. ಹೆಗಲ್ಲನು ಇತಿಹಾಸವೆಂದರೆ ಸಮಾಜವು ತನ್ನ ಅಸಹಾಯಕ ಪ್ರಥಮವಸ್ಥೆಯಿಂದ ಹಂತ ಹಂತವಾಗಿ ಬೆಳೆಯುತ್ತಾ ಪ್ರಷ್ಯನ್ ರಾಜ್ಯವ್ಯವಸ್ಥೆಯವರೆಗೆ ವಿಶಾಲಗೊಳ್ಳುತ್ತಾ ಬಂದಿರುವ ಸ್ವಾತಂತ್ರ್ಯ ತತ್ವವೇ ಇತಿಹಾಸದ ಪ್ರಧಾನ ಪ್ರೇರಣೆಯೆಂದು ಹೇಳಿದಾಗ, ಮಾರ್ಕ್ಸ್‌ನು ತತ್ವ-ಗಿತ್ವವೆಂದು ಹೇಳುವ ಅಭೌತಿಕ ಮಾತಿನಿಂದ ಇತಿಹಾಸವು ಚಲನೆ ಪಡೆಯುವುದು ಅಸಂಭವವೆಂದು ವಾದಿಸಿ, ತನ್ನ ಜಡವಾದಿ ವಿವರಣೆಯನ್ನು ಇತಿಹಾಸವನ್ನು ಅರ್ಥವಿಸಲಿಕ್ಕೆ ಒದಗಿಸಿಕೊಟ್ಟನು.

ಸಮಾಜದ ಅಗತ್ಯಗಳನ್ನು ಪೂರೈಸಿಕೊಡುವಲ್ಲಿ ಉತ್ಪಾದಕ ಶಕ್ತಿಗಳು ಸದಾ ನಿರತವಾಗಿರುತ್ತವೆ. ಉತ್ಪದನಾ ಕ್ರಿಯೆಯಲ್ಲಿ ನಿರತವಾಗಿರುವ ವಿವಿಧ ಉತ್ಪಾದಕ ಶಕ್ತಿಗಳು ತಮ್ಮಲ್ಲಿಯೇ ಉಚಿತವಾದ ಸಂಬಂಧಗಳನ್ನು ಹಮ್ಮಿಕೊಂಡಿರುತ್ತವೆ. ಧನಿ-ಊಳಿಗದ ಆಳು, ಮಾಲೀಕ-ಕೂಲಿಕಾರ, ಭೂಮಿ-ಬಂಡವಾಳ ಹೀಗೆಲ್ಲ ಉತ್ಪಾದನಾ ವಿಧಾನದ ನಿರ್ದಿಷ್ಟ ಸ್ಥಿತಿಯಲ್ಲಿ ಸಂಬಂಧ ನೆಲೆಗೊಂಡಿರುತ್ತದೆ. ಆದರೆ ಉತ್ಪಾದನಾ ವಿಧಾನವು ಒಂದೇ ನಿರ್ದಿಷ್ಟ ಸ್ಥಿತಿಯಲ್ಲಿ ನಿಲ್ಲುವುದಿಲ್ಲ. ಸತತ ಸಂಶೋಧನೆ, ಕುಶಲತೆಯ ಪರಿಪಾಕ ಅನುಭವಗಳಿಂದ ಉತ್ಪಾದನಾ ವಿಧಾನವು ಪೂರ್ಣತೆಯೆಡೆಗೆ ಧಾವಿಸುತ್ತಿರುತ್ತದೆ. ಹೀಗೆ ಉತ್ಪಾದನಾ ಶಕ್ತಿಯು ಪರಿಪಾಕಗೊಳ್ಳುತ್ತ ಹೋದರೂ, ದನಿ-ಊಳಿಗದಾಳು,

ಮಾಲೀಕ-ಕೂಲಿಕಾರನ ಮಜೂರಿ ಈ ಸಂಬಂಧಗಳು ವಿಕಾಸಗೊಳ್ಳಲಿಕ್ಕೆ ನಿರಾಕರಿಸಿ ಜಡವಾಗಿ ನಿಂತುಕೊಂಡುಬಿಡಲು ಯತ್ನಿಸುತ್ತವೆ. ಈ ರೀತಿಯ ಪರಿಪಾಕಗೊಳ್ಳುತ್ತಿರುವ ಉತ್ಪಾದನಾ ಶಕ್ತಿಗಳು ಉತ್ಪಾದನಾ ಸಂಬಂಧಗಳ ಜಡತೆಯೊಡನೆ ಸದಾ ಘರ್ಷಿಸುತ್ತಲೇ ಇರುತ್ತವೆ. ಈ ಆಂತರಿಕ ತರ್ಕದ ಮೇಲೆ ಮಾರ್ಕ್ಸ್‌ನ ಇತಿಹಾಸದ ಭೌತಿಕ ವಿವರಣೆ ನಿಂತಿದೆ. ಇದೇ ಇತಿಹಾಸದ ಪ್ರೇರಣೆಯಾದರೆ, ಭಾರತದಲ್ಲಿ ಇತಿಹಾಸವೇ ನಡೆದಿಲ್ಲವೆಂದು ಹೇಳಬೇಕಾಗುತ್ತದೆ.

ನಮ್ಮಲ್ಲಿಯ ಸಮಾಜದ ಬೇರೆ ಬೇರೆ ವರ್ಗಗಳು ತಮ್ಮ ತಮ್ಮ ನಿಶ್ಚಿತ ಶ್ರೇಣಿಯಲ್ಲಿ ತಮತಮಗೆ ಉಚಿತವಾದ ಸ್ಥಾನವನ್ನು ಪಡೆದುಕೊಂಡು ಇನ್ನೊಂದು ವರ್ಗದೊಡನೆ ಸೆಣಸಾಡದೆ, ಇತಿಹಾಸದುದ್ದಕ್ಕೂ ಗಟ್ಟಿಗೊಂಡು ಇದ್ದಲ್ಲಿಯೇ ನಿಂತುಕೊಂಡು ಬಂದಿವೆ. ವನಚರ ವೃತ್ತಿಯಿಂದ ಆಧುನಿಕ ಆರ್ಯಭಟ ವಿನ್ಯಾಸದವರೆಗೆ ಉತ್ಪಾದನಾ ಶಕ್ತಿಗಳು ಪರಿಪಾಕಗೊಂಡು ಬಂದಿದ್ದರೂ, ಪಂಚಮ ಜಾತಿಯವನೊಬ್ಬನೂ ಮೇಲು ಜಾತಿಯೊಳಗೆ ಪ್ರವೇಶ ಪಡೆಯದ ಈ ಪವಾಡವನ್ನು ಮಾರ್ಕ್ಸ್‌ವಾದಿಯು ತನ್ನ ಇತಿಹಾಸದ ಜಡವಾದಿ ವಿವರಣೆಯ ಬೆಳಕಿನಲ್ಲಿ ಅರ್ಥ ಮಾಡಿ, ಪಲ್ಲವಿ ಹಾಡಿ ಹೇಳಲಿ. ಹೊಲೆ ಮಾದಿಗರ ಇಡಿಯ ಜಾತಿಗೆ ಜಾತಿಯೇ ಆದಾಯದಿಂದಾಗಲೀ, ಸಾಮಾಜಿಕ ಅಂತಸ್ತಿನಿಂದಾಗಲೀ ಮೇಲಕ್ಕೇರದಂತೆ ನಿಗ್ರಹಿಸಿದ ಈ ವಿದ್ಯಮಾನಕ್ಕೆ ಮಾರ್ಕ್ಸ್‌ನ ವರ್ಗ ಸಂಘರ್ಷ ಪ್ರಕ್ರಿಯೆಯು ಸೋತು ಶರಣಾಗತಿಯನ್ನು ಒಪ್ಪಿಸಿ ಕೊಟ್ಟಿದೆಯೆಂಬುದನ್ನು ಮಾರ್ಕ್ಸ್‌ವಾದಿಗಳು ಒಪ್ಪಲಾರರೇನೋ ನಿಜ. ಆದರೆ ವೇದ, ಆಗಮ, ಶ್ರುತಿ ಶಸ್ತ್ರಗಳೆಲ್ಲ ಉಪಜೀವಿಕೆಯ ಸಾಧನಗಳಾಗಿರುವಂತೆ ಮಾರ್ಕ್ಸ್‌ನ ಸಿದ್ಧಾಂತವೂ ಭಾರತದ ಮಟ್ಟಿಗೆ ಬುದ್ಧಿವಂತಿಕೆಯ ಬಣಗು ವೇದಾಂತವಾಗಿರುವದೇನೂ ಸುಳ್ಳಲ್ಲ. ಸಾಂಖ್ಯ ಯೋಗವನ್ನೇ ತಮ್ಮ ಉಚ್ಚಿಷ್ಟಕ್ಕೆ ಬಳಸಿಕೊಂಡ ಜನ ಮಾರ್ಕ್ಸ್‌ವಾದವನ್ನು ಬಿಟ್ಟಾರೆಯೇ? ಲೋಹಿಯಾ ಸಂಜ್ಞೆ ಮಡಿದ್ದು ಈ ಅಪಾಯ ಕುರಿತೇ.

■

"ಇತಿಹಾಸ ಕ್ಷೇತ್ರದ ಸ್ಮಿತ್-ಮಾರ್ಕ್ಸ್ ಸಮಾಜವಿಜ್ಞಾನಿಗಳು, ಸಮಾಜದ ಸಾರ್ವತ್ರಿಕ ಗುರಿಗಳ ಮೂಲಕವೇ ಅದರ ಆರ್ಥಿಕ ಗುರಿಗಳೂ ಒಡಮೂಡುತ್ತವೆ ಎಂದು ನಂಬುವ ಗಾಂಧೀವಾದಿ ಸಮಾಜವಿಜ್ಞಾನಿಗಳ ಹಾಗೇ, ಆರ್ಥಿಕ ಗುರಿಗಳ ಮೂಲಕವೇ ಸಾರ್ವತ್ರಿಕ ಗುರಿಗಳೂ ಒಡಮೂಡುತ್ತವೆ ಎಂದು ನಂಬುತ್ತಾರೆ. ಒಂದರಿಂದ ಇನ್ನೊಂದು ಸ್ವಯಂಚಾಲಿತವಾಗಿ ಒಡಮೂಡುತ್ತವೆನ್ನುದರಲ್ಲಿನ ಇಂತಹ ನಂಬಿಕೆ, ಇತಿಹಾಸದ ಸೃಷ್ಟಿ ಹಾಗೂ ಅರ್ಥೈಸುವಿಕೆಗಳೆರಡನ್ನೂ ವಿರೂಪಗೊಳಿಸಿವೆ. ಈ ನಂಬಿಕೆ ಪ್ರಕಾರ ಭೌತಿಕವು(matter) ತಲೆಕೆಳಕಾದ ಭಾವಾತ್ಮಕತೆಯೂ(Spirituality), ಮತ್ತು ಭಾವವು(Spirit) ತಲೆ ಕೆಳಕಾದ ಭೌತಿಕತೆಯೂ (materiality) ಎಂದಾಗುತ್ತದೆ"

-ಲೋಹಿಯಾ ('ಇತಿಹಾಸ ಚಕ್ರ'ದಲ್ಲಿ)

ಮಾರ್ಕ್ಸ್, ಗಾಂಧಿ ಮತ್ತು ಲೋಹಿಯಾ

■ ಡಿ.ಎಸ್. ನಾಗಭೂಷಣ

ಅಣುಬಾಂಬು ಮತ್ತು ಗಾಂಧೀಜಿ ಈ ಶತಮಾನದ ಎರಡು ಅದ್ಭುತಗಳೆಂದು ತಾವು ಪರಿಗಣಿಸುವುದಾಗಿ ಲೋಹಿಯಾ ಒಂದು ಕಡೆ ಹೇಳಿದ್ದಾರೆ. ಯಾರಾದರೊಮ್ಮೆ ಅವರನ್ನು ಈ ಹಿಂದಿನ ಶತಮಾನದ ಅದ್ಭುತಗಳ ಬಗ್ಗೆ ಕೇಳಿದ್ದರೆ, ಅವರು ಬಹುಶಃ ಮಾರ್ಕ್ಸ್‌ನನ್ನು ಹೆಸರಿಸುತ್ತಿದ್ದರೇನೋ. ಲೋಹಿಯಾ ತತ್ವಪ್ರಣಾಳಿಯ ಪ್ರಮುಖ ಪ್ರಚೋದನಾಶಕ್ತಿ ಮಾರ್ಕ್ಸ್‌ವಾದವೇ ಎಂಬ ಸಂಗತಿಯ ಹಿನ್ನೆಲೆಯಲ್ಲಿ ಈ ಊಹೆಯಷ್ಟೆ. ಲೋಹಿಯಾ ಪ್ರಕಾರ ಅಣುಬಾಂಬು ಒಂದು ನಾಗರಿಕತೆಯ ಅವನತಿಯ ಪ್ರತೀಕವಾದರೆ, ಗಾಂಧೀಜಿ ಅಲ್ಲೇ ಹೊಸ ಚಿಗುರು ಕಾಣಿಸಿಕೊಂಡಿರುವುದರ ಸಂಕೇತ. ಇಲ್ಲಿ ಮಾರ್ಕ್ಸ್‌ನ ಸ್ಥಾನ ಈ ಅವನತಿಗೊಳ್ಳುತ್ತಿರುವ ನಾಗರೀಕತೆಯಲ್ಲಿನ ದುರಂತ ನಾಯಕನದ್ದು. ತನ್ನನ್ನು ರೂಪಿಸಿದ ಅವನತಿಶೀಲ ನಾಗರಿಕತೆಗೆ ಪುನಶ್ಚೇತನ ನೀಡುವ ಅವನ ಪ್ರಯತ್ನ, ಅವನ ಕಾಲ ಮತ್ತು ಖಂಡ ಅವನ ಮೇಲೆ ಹೇರಿದ ಪರಿಮಿತಿಗಳಿಂದಾಗಿ ಸಂಕುಚಿತಗೊಂಡು ವಿಫಲವಾಗಿದೆ. ಆದರೆ ಅವನ ಈ ವೈಫಲ್ಯವೂ ಪರೋಕ್ಷವಾಗಿ, ಅನೇಕ ಅನನ್ವೇಷಿತ ಜಾಗತಿಕ ನಿಜಗಳನ್ನು ಅರಿತುಕೊಳ್ಳಲು ಸಹಾಯಕವಾಗಿದೆ ಎಂಬ ಮಟ್ಟಿಗೆ ಬಹುಮುಖ್ಯದ್ದಾಗಿದೆ.

ಹಾಗೆ ನೋಡಿದರೆ ಗಾಂಧೀಜಿಯದ್ದೂ ಸಂಪೂರ್ಣ ಯಶಸ್ಸೇನಲ್ಲ. ಅವರ ಹಿಂದೂ ಮನಸ್ಸಿನ ಸಾರ್ವತ್ರಿಕ ಮೌಲ್ಯಗಳ ವಲಯ ಅವರಿಗೆ ಹೇಗೆ ಯಶಸ್ಸು ತಂದುಕೊಟ್ಟಿತೋ ಹಾಗೆ ಸಂಕುಚಿತ ಮೌಲ್ಯಗಳ ವಲಯ, ಆ ಯಶಸ್ಸನ್ನು ಸಂದೇಹದ ಕಣ್ಣುಗಳಿಂದ ನೋಡುವಂತೆ ಮಾಡಿದೆ. ಮಾರ್ಕ್ಸ್, ಯುರೋಪಿನ ಮಟ್ಟಿಗೆ ಕ್ರಾಂತಿಕಾರಿಯಾಗಿಯೂ ಇಂಡಿಯಾದ ಮಟ್ಟಿಗೆ ಸುಧಾರಣಾವಾದಿಯಾಗಿಯೂ ಕಾಣುತ್ತಾರೆ. ಮಾರ್ಕ್ಸ್‌ನ ಈ ಸುಧಾರಣಾವಾದಿ ಬಿಂಬ(Image)ಕ್ಕೆ ಆತ

ವಸಾಹತುಶಾಹಿಯ ಶೋಷಣೆಯನ್ನು ಅದರೆಲ್ಲಾ ಆಯಾಮಗಳೊಡನೆ ಅರ್ಥ ಮಾಡಿಕೊಳ್ಳಲಾಗದೇ ಹೋದದ್ದೇ ಕಾರಣವಾದರೆ ಗಾಂಧೀಜಿಯ ಸುಧಾರಣಾವಾದಿ ಬಿಂಬಕ್ಕೆ ಅವರು ಜಾತಿ ಶೋಷಣೆಯನ್ನು ಅದರೆಲ್ಲಾ ಆಯಾಮಗಳೊಂದಿಗೆ ಅರ್ಥ ಮಾಡಿಕೊಳ್ಳದೆ ಹೋದದ್ದೇ ಕಾರಣವಾಗಿದೆ.

ಆದರೆ ಈ ಕಾರಣಗಳು ಈ ಇಬ್ಬರು ಮಹಾನ್ ವ್ಯಕ್ತಿಗಳಲ್ಲಿನ ಭಾಗಶಃ ಸುಧಾರಣವಾದಿತ್ವವನ್ನು ವಿವರಿಸುತ್ತವೆಯೇ ಹೊರತು, ಇವರಿಬ್ಬರೊಳಗಿನ ಕ್ರಾಂತಿಕಾರಿ ಸುಧಾರಣಾವಾದಿ ವಿಭಜನೆಯ ನೆಲೆಗಳನ್ನು ಗುರುತಿಸುವುದಿಲ್ಲ. ಹಾಗೂ ಇಂತಹ ವಿಭಜನೆಗಳು ಹುಟ್ಟು ಹಾಕುವ ಜಾಗತಿಕ, ರಾಷ್ಟ್ರೀಯ ದ್ವಂದ್ವಗಳ ಬಗ್ಗೆ ಸೂಚನೆ ಕೊಡುವುದಿಲ್ಲ. ಈ ವಿಭಜನೆಯ ನೆಲೆಗಳನ್ನು ಗುರುತಿಸಿ, ಈ ದ್ವಂದ್ವಗಳನ್ನು ನಿವಾರಿಸಬಲ್ಲ ಸಂಯೋಜನೆಯ ಒಂದು ಪ್ರಯೋಗ ನಡೆಸಿದ್ದೇ ಡಾ. ಲೋಹಿಯಾ ಅವರ ಹೆಗ್ಗಳಿಕೆಯಾಗಿದೆ. ಈ ಪ್ರಯೋಗದ ಆರಂಭದಲ್ಲೇ ಅವರು ಈ ಮಾತುಗಳನ್ನು ಆಡಿದ್ದು. "ನಾನು ಗಾಂಧಿವಾದಿ ಎಂದಾಗಲಿ ಅಥವಾ ಮಾರ್ಕ್ಸ್‌ವಾದಿ ಎಂದಾಗಲಿ ಹೇಳಿಕೊಳ್ಳುವುದು ಬರೀ ಹುಂಬತನ. ಹಾಗೆಯೇ ಗಾಂಧಿ ವಿರೋಧಿ ಅಥವಾ ಮಾರ್ಕ್ಸ್ ವಿರೋಧಿ ಎಂದು ಹೇಳಿಕೊಳ್ಳುವುದು ಕೂಡಾ. ಕಲಿಯಲು ಮಾರ್ಕ್ಸ್‌ನಿಂದಷ್ಟೇ ಗಾಂಧಿಯಿಂದಲೂ ಅಮೂಲ್ಯ ವೈಚಾರಿಕ ರಾಶಿ ಇದೆ ನಿಜ. ಆದರೆ ಕಲಿಯುವುದು, ಕಲಿಯುವವನ ದೃಷ್ಟಿ ಚೌಕಟ್ಟು ಒಂದು ಕಾಲ ಅಥವಾ ಒಂದು ವ್ಯಕ್ತಿಗಷ್ಟೇ ಸೀಮಿತವಾಗದಿದ್ದಾಗ ಮಾತ್ರ ಸಾಧ್ಯ. ಸಂಶೋಧಕರು ಯಾವುದೇ ಒಂದು ವ್ಯಕ್ತಿ ಯ ವಿಚಾರಗಳನ್ನು ಸದಾ ವಿಮರ್ಶೆಗೆ ಒಳಪಡಿಸುತ್ತಲೇ ಇರಬೇಕು–ವಿಶೇಷತಃ ಆ ಒಂದು ವ್ಯಕ್ತಿ ಮಾರ್ಕ್ಸ್ ಅಥವಾ ಆಗಿದ್ದಲ್ಲಿ".

ಮಾರ್ಕ್ಸ್‌ವಾದದ ಜಾಗತಿಕ ಸ್ವರೂಪದ ವೈಫಲ್ಯ ಇರುವುದು ಬಂಡವಾಳಶಾಹಿ ಕುರಿತು ಅದರ ವಿಶ್ಲೇಷಣೆಯಲ್ಲಿ. ಮಾರ್ಕ್ಸ್‌ನ ಪ್ರಕಾರ, ಬಂಡವಾಳಶಾಹಿಯು ವಿಕಾಸಹಂತದಲ್ಲಿ ಪ್ರಗತಿಪರವಾಗಿತ್ತು. ಏಕೆಂದರೆ ಅದು ತಂತ್ರಜ್ಞಾನ ಹಾಗೂ ಬೃಹತ್ ಕೈಗಾರಿಕೆಗಳ ಆವಿಷ್ಕಾರ ರೂಪದಲ್ಲಿ ಮನುಷ್ಯನನ್ನು 'ನಾಗರಿಕ'ನನ್ನಾಗಿ ಮಾಡತೊಡಗಿತ್ತು.

---

* ಮಾರ್ಕ್ಸ್‌ನ ಸೈದ್ಧಾಂತಿಕ ಉತ್ತರಾಧಿಕಾರಿಗಳೆಂದು ಹೇಳಲಾಗುವ ಲೆನಿನ್, ಸ್ಟಾಲಿನ್ ಮತ್ತು ಮಾವೋ ಅವರುಗಳು ಮಾರ್ಕ್ಸ್‌ನ ಕೊರತೆಗಳನ್ನು ತುಂಬಿದ್ದಾರೆ ಎಂದು ಹೇಳುವ ಕೆಲವು ಜನ ಒಂದು ವಿಷಯವನ್ನು ಮರೆಯುತ್ತಾರೆ. ಲೆನಿನ್, ಸ್ಟಾಲಿನ್ ಮತ್ತು ಮಾವೋ ತಂತಮ್ಮ ರಾಷ್ಟ್ರೀಯ ಸೀಮೆಗಳೊಳಗೆ ದೇಶವಿಶಿಷ್ಟ ಅಗತ್ಯಗಳಿಗನುಗುಣವಾಗಿ ತಮ್ಮದೇ ಆದರ ತಂತ್ರಗಳ ಮೂಲಕ ಸಾಧಿಸಿದ ಜಯಗಳಿಗೆ ಸೈದ್ಧಾಂತಿಕ ಸಮರ್ಥನೆಗಳಿಗಾಗಿ ಪ್ರಚುರ ಪಡಿಸಿದ 'ವಿಚಾರಗಳು' ನಿಜವಾದ ಅರ್ಥದಲ್ಲಿ ವಿಚಾರಗಳೇ ಅಲ್ಲ. ಬರೀ ಸಮರ್ಥನೆಗಳು. ಕೇವಲ ರಾಷ್ಟ್ರೀಯ ಹಿತಾಸಕ್ತಿಗಳ ಚೌಕಟ್ಟಿನಲ್ಲಿ ಹುಟ್ಟಿಕೊಂಡ ಈ ವಿಚಾರವೇಷದ ಸಮರ್ಥನೆಗಳು ಜಾಗತಿಕ ಹಿತದ ಆಶಯವುಳ್ಳ ಮಾರ್ಕ್ಸ್‌ವಾದದೊಡನೆ ಸಾವಯವಾಗಿ ಬೆರೆಯಲಾರವು.

ಅಪಾರ ಕ್ರತುಶಕ್ತಿಯ ಈ ತಂತ್ರಜ್ಞಾನ ಮನುಷ್ಯನ ಸಂಪೂರ್ಣ ಅಗತ್ಯಗಳನ್ನು ಈಡೇರಿಸಿ ಸಂತೃಪ್ತಗೊಳಿಸುತ್ತದೆಂದು ಮಾರ್ಕ್ಸ್ ಬಗೆದಿದ್ದ.

ಆದರೆ ನಿಜ ವಾಸ್ತವವಾದರೂ ಏನು? ಮಾರ್ಕ್ಸ್ 'ಅಪಾರ ಕೃತುಶಕ್ತಿಯ ತಂತ್ರಜ್ಞಾನ' ಹಾಗೂ 'ಸಂತೃಪ್ತ ಮನುಷ್ಯ' ಎಂದೆಲ್ಲಾ ಮಾತನಾಡುತ್ತಿದ್ದಾಗ ಅವನ ಕಲ್ಪನೆಗಳಲ್ಲಿ ತೇಲಾಡುತ್ತಿದ್ದ ತಂತ್ರಜ್ಞಾನ ಹಾಗು ಮನುಷ್ಯ ಎಲ್ಲಿಯವು? ಈವರೆಗೆ ಇಂಡಿಯಾದ ಯಾವ ಸಕ್ರಿಯ ಕಮ್ಯುನಿಸ್ಟನನ್ನೂ ಈ ಪ್ರಶ್ನೆಗಳನ್ನು ಕಾಡಿಲ್ಲವೆಂಬ ಅಂಶ (ಕೈ ಬೆರಳೆಣಿಕೆಯಷ್ಟಿರುವ ಮತ್ತು ತಮ್ಮನ್ನು ನವಮಾರ್ಕ್ಸ್‌ವಾದಿಗಳೆಂದು ಕರೆದುಕೊಳ್ಳುವ ಒಂದು ಗುಂಪು ಇತ್ತೀಚೆಗೆ ಈ ಪ್ರಶ್ನೆಗಳನ್ನು ಕೇಳಿಕೊಳ್ಳತೊಡಗಿದೆ.) ಇಂಡಿಯಾದ ಕಮ್ಯುನಿಸಂನ ಚಿಂತನಶೀಲತೆ ಬಗ್ಗೆ ಎಲ್ಲವನ್ನೂ ಹೇಳುತ್ತದೆ. ಜಾಗತಿಕ ಆಶಯದ ಮಾರ್ಕ್ಸ್‌ನನ್ನು ಬರೀ ಯುರೋಪಿನ ವಾಸ್ತವಕ್ಕಷ್ಟೇ ಕಟ್ಟಿ ಹಾಕಿದ ಅಂಶವೆಂದರೆ, ಆತ ಬಂಡವಾಳಶಾಹಿಯನ್ನು ಒಂದು ಆರ್ಥಿಕ ವಿದ್ಯಮಾನವೆಂದಷ್ಟೇ ಅರ್ಥ ಮಾಡಿಕೊಂಡನೇ ಹೊರತು ಆತನಿಗೆ ಅದರ ರಾಜಕೀಯ ಸ್ವರೂಪವನ್ನು ಕಾಣಲಾಗಲೇ ಇಲ್ಲ ಎಂಬುದು. ಬಂಡವಾಳಶಾಹಿಯ ಪ್ರತ್ಯಕ್ಷ ಪ್ರಚಂಡಶಕ್ತಿಗೆ ಮಾರುಹೋದ ಮಾರ್ಕ್ಸ್, ಈ ಪ್ರಚಂಡ ಶಕ್ತಿಯ ಮೂಲ ಯಾವುದು, ಈ ಪ್ರಚಂಡ ಶಕ್ತಿ ತಂತಾನೇ ಉದ್ಭವವಾಯಿತೇ ಅಥವಾ ಇದರ ಆಳದಲ್ಲಿ ಪರೋಕ್ಷ ಸುಲಿಗೆಯೇನಾದರೂ ಅಡಗಿದೆಯೋ ಎಂಬ ವಿಮರ್ಶೆಗೆ ಹೋಗಲಿಲ್ಲ. ಬಹುಶಃ ಈ ವಿಮರ್ಶಾಹೀನತೆಗೆ ಕಾರಣ, ಮಾರ್ಕ್ಸ್‌ನು ಮೂಲತಃ ಯುರೋಪಿನ ವಿದ್ಯಮಾನವಾಗಿದ್ದ ಬಂಡವಾಳಶಾಹಿಯನ್ನು ಒಂದು ಜಾಗತಿಕ ವಿದ್ಯಮಾನವೆಂದು ತಪ್ಪಾಗಿ ಬಗೆದು ವಿಶ್ಲೇಷಣೆಗೆ ತೊಡಗಿದ್ದು. ಆದರೆ ನಿಜ ವಾಸ್ತವ ಎಂದರೆ, ಬಂಡವಾಳಶಾಹಿಯು ತನ್ನ ಮೊದಲ ಸಾಧನೆಯಾದ ಬ್ರಿಟನ್ನಿನ ಬಟ್ಟೆ ಗಿರಣಿಯಿಂದ ಹಿಡಿದು ಕೊನೆಯ ಸಾಧನೆಯಾದ ಅಮೇರಿಕಾದ ಅಣುಬಾಂಬಿನವರೆಗೂ ವಸಾಹತುಶಾಹಿ ಪೂರೈಸಿದ ರಕ್ತವನ್ನು ಕುಡಿದೇ ಬೆಳೆದಿದೆ. ಲೋಹಿಯಾ ಪ್ರಕಾರ ವಸಾಹತುಶಾಹಿ ಇಲ್ಲದ ಬಂಡವಾಳಶಾಹಿ ಎಂಬುದೇ ಇಲ್ಲ. ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಗಳದ್ದು ಅವಳಿ ಜವಳಿ ಜನನ. ಬಂಡವಾಳಶಾಹಿಯ ಉಗಮದ ಬಗ್ಗೆ ಅವರು ಹೀಗೆ ಬರೆಯುತ್ತಾರೆ:

"ಬಂಡವಾಳಶಾಹಿ ಮೊದಲು ತಲೆ ಎತ್ತಿದ್ದು ೧೮ನೇ ಶತಮಾನದ ಉತ್ತರಾರ್ಧದಲ್ಲಿ ಇಂಗ್ಲೆಂಡ್‌ನಲ್ಲಿ. ಸ್ಪಾನಿಷ್ ಹಡಗುಗಳ ಲೂಟಿ, ಬಂಗಾಳದಿಂದ ಬರುತ್ತಿದ್ದ ವರಮಾನ ಮತ್ತು ಸ್ವತಃ ಬ್ರಿಟನ್‌ನಲ್ಲೇ ರೈತರನ್ನು ಸಾರ್ವಜನಿಕ ಭೂಮಿಯಿಂದ ಹೊಡೆದೋಡಿಸಿದ್ದು–ಇವೆಲ್ಲಾ ಸೇರಿ ಬಂಡವಾಳಶಾಹಿ ಪೂರ್ವ ಸಂಪತ್ತು ಶೇಖರಣೆಯಾಗಿತ್ತು. ಬಂಡವಾಳಶಾಹಿಯ ತಾಂತ್ರಿಕ ಆಧಾರವಾದ ಯಂತ್ರಜ್ಞಾನವನ್ನು ಬಳಸಿದ ಮೊದಲ ಕೈಗಾರಿಕೆ ಎಂದರೆ ಜವಳಿ ಗಿರಣಿಗಳು. ಈ ಲಂಕಾಷೈರ್ ಕೈಗಾರಿಕೆ

ಆರಂಭವಾಗುತ್ತಿದ್ದಂತೆ ತನ್ನ ಚೈತನ್ಯಕ್ಕಾಗಿ ಹೊರಕ್ಕೆ ಕಣ್ಣಾಡಿಸಿತು ಹಾಗೂ ಅದನ್ನು ಭಾರತದಲ್ಲಿ ದೊರಕಿಸಿಕೊಂಡಿತು. ಅಂದರೆ, ಬ್ರಿಟಿಷ್ ಗಿರಣಿಗಳು ಇಂಡಿಯಾದ ನೇಕಾರರನ್ನು ಆರ್ಥಿಕ ಪೈಪೋಟಿಯಿಂದ ಮಾರುಕಟ್ಟೆಗಳಲ್ಲಿ ಹಿಂದೆ ಬೀಳಿಸಿದವು ಎಂದರ್ಥವಲ್ಲ. ಈಸ್ಟ್ ಇಂಡಿಯಾದ ಕಂಪನಿಯೂ ಅದರ ನಿಷ್ಠ ಸೇವಕರೂ ಭರತ ಖಂಡದ ಆಂತರಿಕ ವ್ಯವಹಾರಗಳನ್ನು ತಮ್ಮ ಕೈಗೆ ತೆಗೆದುಕೊಳ್ಳುವುದರ ಮುಖಾಂತರ ಮಾರುಕಟ್ಟೆಗಳನ್ನು ತಮ್ಮ ರಾಜಕೀಯ ಏಕಸ್ವಾಮ್ಯಕ್ಕೆ ಒಳಪಡಿಸಿಕೊಂಡು, ಆ ಮೂಲಕ ಯಾವುದು ಭಾರತದ ಮಾರುಕಟ್ಟೆಗಳಲ್ಲಿ ಮಾರಾಟವಾಗಬೇಕು, ಯಾವುದು ಆಗಬಾರದು ಎಂದು ನಿರ್ಧರಿಸತೊಡಗಿದರು. ಆದ್ದರಿಂದ ಬ್ರಿಟನ್- ಭಾರತದ ಪೈಪೋಟಿ ಭಾರತದ ನೇಕಾರನಿಗೆ ಸಂಬಂಧಿಸಿದಂತೆ ಬರೀ ವ್ಯಾಪಾರ-ವ್ಯವಹಾರದ ಪ್ರಶ್ನೆಯನ್ನು ಮೀರಿ ನಿಂತು ರಾಜಕೀಯ ಪ್ರಶ್ನೆಯಾಗಿತ್ತು. ಲಂಕಾಷೈರ್‌ನ ಬಟ್ಟೆಗಿರಣಿಗಳ ಚೈತನ್ಯ ಅದರ ಆರಂಭರೂಪದಲ್ಲೇ ಭಾರತದಿಂದ ಶೋಷಿಸಿದುದಾಗಿತ್ತು. ಹಾಗೂ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ, ಇದು ಭಾರತದ ಮೇಲಿನ ಬ್ರಿಟಿಷ್ ಆಳ್ವಿಕೆಯ ದೆಸೆಯಿಂದಲೇ ಸಾಧ್ಯವಾಯಿತು"

ಮುಂದುವರಿದು ಲೋಹಿಯಾ, ಹೀಗೆ ಆರಂಭವಾದ ಬ್ರಿಟಿಷ್ ಬಂಡವಾಳಶಾಹಿಯು ತನ್ನ ಹೊಸ ಘಟ್ಟಗಳನ್ನು ಮುಟ್ಟಬೇಕಾದ(ಉದಾ: ಭಾರಿ ಕೈಗಾರಿಕೆಯ-ರೇಲ್ವೇಸ್-ಆರಂಭ) ಹಾಗೂ ಬಿಕ್ಕಟ್ಟುಗಳನ್ನು ಹಾದುಹೋಗಬೇಕಾದ (ಉದಾ:೧೯ನೇ ಶತಮಾನದ ಎರಡನೇ ದಶಕದಲ್ಲಿನ ಸಾರ್ವತ್ರಿಕ ಕೈಗಾರಿಕಾ ಸ್ಥಗಿತತೆ) ಸಂದರ್ಭಗಳಲ್ಲೆಲ್ಲಾ ಕೂಡಾ ಹೇಗೆ ವಸಾಹತುಶಾಹಿಯೊಂದಿಗೆ ಕೈ ಕೈ ಹಿಡಿದುಕೊಂಡು ನಡೆಯಿತು ಎಂಬುದಕ್ಕೂ ಪುರಾವೆಗಳನ್ನು ಒದಗಿಸುತ್ತಾರೆ. ಹಾಗೆಯೇ ಫ್ರಾನ್ಸ್, ಜರ್ಮನಿ, ಅಮೆರಿಕಾ ಹಾಗೂ ಜಪಾನ್‌ಗಳ ಬಂಡವಾಳಶಾಹಿಗಳೂ ಎಂತೆಂತಹ ರೂಪಗಳಲ್ಲಿನ ಅನಾವರಣಗಳೊಂದಿಗೆ (ಉದಾ: ಚೀನಾ, ಆಗ್ನೇಯ ಏಷ್ಯಾ, ಲ್ಯಾಟಿನ್ ಅಮೆರಿಕಾ, ಆಫ್ರಿಕಾ ರೆಡ್ ಇಂಡಿಯನ್ನರ ಅಮೇರಿಕಾ) ಹುಟ್ಟಿದವು ಅನ್ನುವುದನ್ನು ಅವರು ವಿವರಿಸುತ್ತಾರೆ.*

ಹೀಗೆ ಬಂಡವಾಳಶಾಹಿಯ ವಿಕಾಸ ಎಂದರೆ ವಸಾಹತುಶಾಹಿಯ ವಿಕಾಸವೂ ಆಗಿದೆ. ಈ ಹಿನ್ನೆಲೆಯಲ್ಲಿ ಮಾಜಿ ವಸಾಹತುವೊಂದಾದ ಇಂಡಿಯಾ, ಬಂಡವಾಳಶಾಹಿಯ ತನ್ನ ವಿಕಾಸಹಂತದಲ್ಲಿ ಪ್ರಗತಿಪರವಾಗಿತ್ತು ಎಂಬ ಮಾರ್ಕ್ಸ್‌ನ ಅಭಿಪ್ರಾಯವನ್ನು ಯಾವ ಅರ್ಥದಲ್ಲಿ ಮಾನ್ಯ ಮಾಡಬೇಕು? ಕನಿಷ್ಟ ಪಕ್ಷ ಏಷ್ಯಾದ ದೇಶಗಳು ತಂತಮ್ಮ ಆರ್ಥಿಕ ಅವಸ್ಥೆಗಳನ್ನು ಅರ್ಥ ಮಾಡಿಕೊಳ್ಳಬೇಕಾದಲ್ಲಿ

---

* ಈ ವಿವರಗಳಿಗಾಗಿ ಲೋಹಿಯಾ ಅವರ 'ಮಾರ್ಕ್ಸ್ ಅಂಡ್ ಸೋಶಲಿಸಂ'ನ ಮೊದಲ ಅಧ್ಯಾಯ- 'ಎಕನಾಮಿಕ್ಸ್ ಆಫ್ಟರ್ ಮಾರ್ಕ್ಸ್' ನೋಡಿರಿ.

“ವಸಾಹತುಶಾಹಿ ಬಂಡವಾಳಶಾಹಿಯನ್ನು ನಾವು ಚರಿತ್ರೆಯಲ್ಲಿ ಎಲ್ಲೂ ಕಾಣಲಾರೆವು...ಬಂಡವಾಳಶಾಹಿ ವಿಕಾಸದ ಚರಿತ್ರೆಯು ಮತ್ತೇನೂ ಆಗಿರದೆ, ವಸಾಹತುಶಾಹಿ ಜನಾಂಗಗಳ ಹಸಿವಿನ, ಭೂಹೀನ ರೈತರ ಗೋಳಿನ ಕಥೆಯಾಗಿದೆ” ಎಂಬ ಚಾರಿತ್ರಿಕ ಸತ್ಯವನ್ನು ಮೊದಲು ಮನದಟ್ಟು ಮಾಡಿಕೊಳ್ಳಬೇಕೆನ್ನುವ ಲೋಹಿಯಾ ಅವರು, “ಬಂಡವಾಳಶಾಹಿಯು ಉತ್ಪಾದನಾಶಕ್ತಿಗಳು ಹಾಗೂ ಉತ್ಪಾದನಾ ಸಂಬಂಧಗಳ ನಡುವೆ ಬಿಕ್ಕಟ್ಟನ್ನು ಉಂಟು ಮಾಡುತ್ತದೆ” ಎಂಬ ಮಾರ್ಕ್ಸ್‌ವಾದಿ ಹೇಳಿಕೆಯನ್ನು ನಾವು, “ಅದೇ ಸಮಯದಲ್ಲಿ ಅದು ಪ್ರಪಂಚವನ್ನು ಎರಡಾಗಿ ಸೀಳಿತ್ತು –ಒಂದು ಭಾಗಕ್ಕೆ ತನ್ನ ಕ್ರಾಂತಿಕಾರೀ ತಂತ್ರಜ್ಞಾನದ ಸವಲತ್ತುಗಳ ವರದಾನ ಮಾಡಿದರೆ ಇನ್ನೊಂದು ಭಾಗಕ್ಕೆ ಬಡತನ, ಹತಾಶೆ ಹಾಗೂ ಊಹಾತೀತ ಸಂಕಷ್ಟಗಳನ್ನು ಕೊಡುಗೆಯಾಗಿ ನೀಡಿತು; ಒಂದು ಭಾಗಕ್ಕೆ ಹೊಸ ಉತ್ಪಾದನಾ ಉಪಕರಣಗಳನ್ನು ನೀಡುತ್ತಾ ಹೋದರೆ, ಇನ್ನೊಂದು ಭಾಗಕ್ಕೆ ಬಾಳಿಕೆ ಕಳೆದುಕೊಂಡ ಉಪಕರಣಗಳನ್ನು ಬಿಟ್ಟು ಹೋಗಿದೆ” ಎಂದು ಪೂರ್ಣಗೊಳಿಸಬೇಕು ಎಂದು ಎಚ್ಚರಿಸುತ್ತಾರೆ. ಈ ಹಿನ್ನೆಲೆಯಲ್ಲಿ ಬಂಡವಾಳಶಾಹಿಯ ಅಂತ್ಯವನ್ನು ಕುರಿತ ಮಾರ್ಕ್ಸ್‌ನ ತೀರ್ಮಾನವನ್ನು ಹೀಗೆ ತಿದ್ದುತ್ತಾರೆ. “ಬಂಡವಾಳಶಾಹಿಯ ಗೋರಿಯನ್ನು ತೋಡುವವರು ಸಾಮ್ರಾಜ್ಯಶಾಹಿ ದೇಶಗಳ ದುಡಿಮೆಗಾರರಲ್ಲ; ವಸಾಹತುಶಾಹಿ ಜನತೆ ಹಾಗೂ ದುಡಿಮೆಗಾರರು”.

ಇಡೀ ಜಗತ್ತನ್ನು ಸಮರೂಪಿಯಾದ ಒಂದೇ ಅರ್ಥವ್ಯವಸ್ಥೆಯೆಂದು ಮಾರ್ಕ್ಸ್ ಪರಿಭಾವಿಸಿದುದರಿಂದ ಉಂಟಾದ ಇನ್ನೊಂದು ಮೂಲಭೂತ ದೋಷವೆಂದರೆ ಜಾತಿ ಮತ್ತು ವರ್ಗದ ನಡುವಣ ಅಂತರ್ಗತ ಸಂಬಂಧದ ಅನನ್ವೇಷಣೆ. ಲೋಹಿಯಾ ಪ್ರಕಾರ ಸಮಾಜವೊಂದರಲ್ಲಿನ ವರ್ಗ ಹೋರಾಟು ಉತ್ಕಟ ಘಟ್ಟ ಮುಟ್ಟಿದಾಗ ಆ ಸಮಾಜ ಹೊರಗಿನ ಸಮಾಜವೊಂದರ 'ಆಕ್ರಮಣ'ದ ಒತ್ತಡಕ್ಕೆ ಸಿಗುತ್ತದೆ. ಆಗ ಈ ಒತ್ತಡವನ್ನು ಎದುರಿಸುವುದಕ್ಕೆ ಅಗತ್ಯವಾದ ಸ್ಥಿರತೆಯನ್ನು ಗಳಿಸಿಕೊಡುವುದಕ್ಕಾಗಿ ಸಮಾಜ, ವರ್ಗ–ಹೋರಾಟದ ಶಮನರೂಪವಾಗಿ ಜಾತಿಗಳನ್ನು ಸೃಷ್ಟಿಗೊಳಿಸಿಕೊಳ್ಳುತ್ತದೆ. ಮತ್ತೆ ಹೊರಗಿನ ಒತ್ತಡ ಕಡಿಮೆಯಾಗತೊಡಗಿದಂತೆ ಸಮಾಜ ಜಾತಿಗಳ ಸ್ಥಗಿತತೆಯನ್ನು ಸಹಿಸಿಕೊಳ್ಳದೇ ವರ್ಗಗಳಾಗಿ ಅರಳಿಕೊಳ್ಳತೊಡಗುತ್ತದೆ. ಹೀಗೆ ಜಾತಿಗಳು ಸ್ಥಗಿತಗೊಂಡ ವರ್ಗಗಳೂ, ವರ್ಗಗಳು ಅರಳಿಕೊಂಡ ಜಾತಿಗಳೂ ಆಗಿವೆ. ಈ ಹಿನ್ನೆಲೆಯಲ್ಲಿ ಮಾನವನ ಇತಿಹಾಸ ಎಂದರೆ ವರ್ಗ ಹೋರಾಟಗಳ ಇತಿಹಾಸ ಎಂಬ ಮಾರ್ಕ್ಸ್‌ವಾದೀ ವ್ಯಾಖ್ಯಾನ ಅಪೂರ್ಣ ಮತ್ತು ಆ ಮೂಲಕ ಅಸಮಂಜಸವಾಗಿದ್ದು; ಸ್ಥೂಲವಾಗಿ ಮಾನವ ಇತಿಹಾಸವು ಜಾತಿಗಳು ಮತ್ತು ವರ್ಗಗಳ ನಡುವಣ ಆಂತರಿಕ ತುಯ್ದಾಟಗಳ ಮತ್ತು ಅಧಿಕಾರ ಹಾಗೂ ಸಮೃದ್ಧಿಗಳಲ್ಲಿನ ಬಾಹ್ಯ(ಖಂಡಾಂತರ) ಪಲ್ಲಟಗಳ ಇತಿಹಾಸವಾಗಿದೆ ಎಂದು ಡಾ. ಲೋಹಿಯಾ ವಿವರಿಸುತ್ತಾರೆ. (ಹಾಗೆ ನೋಡಿದರೆ, ಮಾನವ ಇತಿಹಾಸಕ್ಕೆ ಇತಿಹಾಸವೇ ಇಲ್ಲದಿರುವ ಸಂಭವವೂ ಉಂಟೆಂದು ಅವರು ಅಭಿಪ್ರಾಯಪಡುತ್ತಾರೆ.)

ಉತ್ಪಾದನಾ ಸಂಬಂಧಗಳ ನೆಲೆಯಿಂದಲೇ ಜನಜೀವನದ ಸ್ವರೂಪವನ್ನು ಅರ್ಥ ಮಾಡುವುದು ತಪ್ಪು ಎಂಬ ನಿಲುವಿಗನುಗುಣವಾಗಿಯೇ ಡಾ. ಲೋಹಿಯಾ, ಒಂದು ಕಾಲದ ಜನಜೀವನವನ್ನು ಅದು ವಿಕಾಸಗೊಳಿಸುವ ನಾಗರಿಕತೆಯನ್ನು ಅಧ್ಯಯನ ಮಾಡುವುದರಿಂದ ಅರ್ಥ ಮಾಡಿಕೊಳ್ಳಬೇಕೆಂದು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಅವರು ಬಂಡವಾಳಶಾಹಿ ಹಾಗೂ ಕಮ್ಯೂನಿಸಂ ಎರಡರ ಆಟಾಟೋಪಗಳೂ ಇರುವ ಇಂದಿನ ನಾಗರಿಕತೆಯನ್ನು ಅಧ್ಯಯನ ಮಾಡುತ್ತಾರೆ. ಈ ಅಧ್ಯಯನದಿಂದ ಕಂಡುಬರುವುದೆಂದರೆ, ಬಂಡವಾಳಶಾಹಿಯೇ ಆಗಲಿ, ಕಮ್ಯುನಿಸಮ್ಮೇ ಆಗಲಿ, ಸೃಷ್ಟಿಸುತ್ತಿರುವುದು ಒಂದೇ ರೀತಿಯ ಮನುಷ್ಯನನ್ನು ಎಂಬುದು. ಈ ದೃಷ್ಟಿಯಿಂದ ಈ ಎರಡೂ ಒಂದೇ ನಾಗರಿಕತೆಯ ಎರಡು ಮುಖಗಳು. ಏಕೆಂದರೆ ಈ ಎರಡು ಯುರೋಪಿನಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯ ಪರಿಣಾಮಗಳೇ. ಹೊಸ ಹೊಸ ಬೃಹತ್ ಉತ್ಪಾದನೆಯ ಉಪಕರಣಗಳ ಆವಿಷ್ಕಾರಗಳೇ ಈ ಎರಡೂ ವಿದ್ಯಮಾನಗಳ ಹಿಂದಿರುವ ಚೈತನ್ಯ ಶಕ್ತಿಗಳು. ಮಾರ್ಕ್ಸ್‌ನೇ ಹೇಳಿದ ಹಾಗೆ, ಬಂಡವಾಳದ ಕೇಂದ್ರೀಕರಣವೇ ಹೊಸ ಹೊಸ ಉತ್ಪಾದನಾ ಉಪಕರಣಗಳ ಆವಿಷ್ಕಾರದ ಬೆಂಬಲಶಕ್ತಿ. ಬಂಡವಾಳಶಾಹಿ ಸಮಾಜವೇ ಆಗಲಿ, ಕಮ್ಯುನಿಸ್ಟ್ ಸಮಾಜವೇ ಆಗಲಿ ನಿಂತಿರುವುದು ಈ ಬೆಂಬಲ ಶಕ್ತಿಯ ಮೇಲೆ. ಇದು ಇನ್ನಷ್ಟು ಸ್ಪಷ್ಟವಾಗುವುದು ಸುಪ್ರಸಿದ್ಧ ಕಮ್ಯೂನಿಸ್ಟ್ ಘೋಷಣೆ 'ಪ್ರತಿಯೊಬ್ಬನಿಂದಲೂ ಅವನವನ ಸಾಮರ್ಥ್ಯಕ್ಕನುಗಣವಾಗಿ ಮತ್ತು ಪ್ರತಿಯೊಬ್ಬನಿಗೂ ಅವನವನ ಅಗತ್ಯಕ್ಕನುಗುಣವಾಗಿ' ಎಂಬುದು ಸಮಾಜಗಳ ನೇತಾರರೇ ಒಪ್ಪಿಕೊಂಡಂತೆ ಸದ್ಯಕ್ಕೆ (ಅರ್ಥವ್ಯವಸ್ಥೆಯ ಸ್ಥಿರತೆಯ ದೃಷ್ಟಿಯಿಂದ ಇದು ಅನಿವಾರ್ಯವೆಂದು ಅವರು ಹೇಳುತ್ತಾರೆ) 'ಪ್ರತಿಯೊಬ್ಬನಿಂದಲೂ ಅವನವನ ಸಾಮರ್ಥ್ಯಕ್ಕನುಗುಣವಾಗಿ' ಎಂದು ಮಾರ್ಪಾಡಾಗಿರುವ ವಾಸ್ತವ ಸತ್ಯವನ್ನು ಪರಿಶೀಲಿಸಿದಾಗ. ಇದು ಅಕ್ಷರಶಃ ಬಂಡವಾಳಶಾಹಿ ತತ್ವಪ್ರಣಾಳಿಕೆಯೇ. ದೂರ ದೂರವಿದ್ದೂ, ಬಂಡವಾಳಶಾಹಿ ಅಮೆರಿಕನ್ ವ್ಯವಸ್ಥೆಯ ಅರ್ಥಶಾಸ್ತ್ರಜ್ಞ ಗಾಲ್‌ಬ್ರೇತ್ ಹಾಗೂ ಕಮ್ಯುನಿಸ್ಟ್ ರಷ್ಯನ್ ವ್ಯವಸ್ಥೆಯ ಭೌತ ವಿಜ್ಞಾನಿ ಸಖಾರೋವ್ ಇಬ್ಬರೂ, ಈ ಎರಡೂ ವ್ಯವಸ್ಥೆಗಳು ಕ್ರಮೇಣ ಒಂದು ಸಂಗಮದೆಡೆಗೆ (ಸಾಮಾನ್ಯ ಗುರಿಯೆಡೆಗೆ) ಸಾಗುತ್ತಿವೆ ಎಂದು ವ್ಯಕ್ತಪಡಿಸಿರುವ ಏಕಾಭಿಪ್ರಾಯದ ಸೂಚನೆಯೂ ಇದೇ.

ಕುತೂಹಲದ ಸಂಗತಿ ಎಂದರೆ ಅಮೆರಿಕಾ ಮತ್ತು ರಷ್ಯಾಗಳೆರಡರಲ್ಲೂ ಆಯಾ ಅರ್ಥವ್ಯವಸ್ಥೆಗಳ ಬೆಳವಣಿಗೆಗಳು ಕ್ರಮೇಣ ಅಂತ್ಯದ ಅಂಚಿಗೆ ಹತ್ತಿರವಾಗುತ್ತಿರುವುದರಿಂದ ಅಲ್ಲಿ ಸಾಮಾಜಿಕ ಶ್ರೇಣೀಕರಣ ರೂಪದಲ್ಲಿ ಮತ್ತೆ ಜಾತಿ ವ್ಯವಸ್ಥೆ ಮೆಲ್ಲಗೆ ತಲೆ ಎತ್ತಲಾರಂಭಿಸಿದೆ! ಏಕೆ ಹೀಗೆ? ಬಂಡವಾಳಶಾಹಿಯನ್ನು ಒಂದು ಐತಿಹಾಸಿಕ ಪರಿಘಟನೆಯೆಂದು ಅದರೆಲ್ಲ ಆಯಾಮಗಳೊಂದಿಗೆ ಅರ್ಥಮಾಡಿಕೊಳ್ಳದೇ ಕೇವಲ ಒಂದು ಆರ್ಥಿಕ ಪರಿಘಟನೆಯೆಂದಷ್ಟೇ ಪರಿಗಣಿಸಿದ್ದೇ

"ಈ ದೂರ ದೂರ ಆದರೂ ಎಷ್ಟು ಹತ್ತಿರ!"ದ ಆಕಸ್ಮಿಕಕ್ಕೆ ಕಾರಣವಾಗಿವೆ. ಇದೇ ಹಿನ್ನೆಲೆಯಲ್ಲಿ ಡಾ. ಲೋಹಿಯಾ ಅವರ ಈ ಮಾತುಗಳು ಗಮನಾರ್ಹವಾಗಿವೆ. "ಅಮೆರಿಕಾ, ರಷ್ಯಾವನ್ನು ದೂಷಿಸಬಹುದು ಮತ್ತು ರಷ್ಯಾ, ಅಮೆರಿಕಾವನ್ನು ದೂಷಿಸಬಹುದು. ಬಂಡವಾಳಶಾಹಿಯು ಕಮ್ಯುನಿಸಮ್ಮನ್ನು ದೆವ್ವದಂತೆ ಚಿತ್ರಿಸಬಹುದು; ಹಾಗೆಯೇ ಕಮ್ಯುನಿಸಂ ಕೂಡಾ ಬಂಡವಾಳಶಾಹಿಯನ್ನು ದೆವ್ವದಂತೆ ಚಿತ್ರಿಸಬಹುದು. ಆದರೆ ಮಾನವ ಜನಾಂಗದ ಮೂರು ಆಘಾತಕಾರೀ ಬೆಳವಣಿಗೆಗಳಾಗಿರುವ ಬಡತನ, ಯುದ್ಧ ಹಾಗೂ ಭಯಗಳನ್ನು ಒಂದಿಷ್ಟಾದರೂ ಶಮನ ಮಾಡಲು ಈ ಎರಡೂ ವ್ಯವಸ್ಥೆಗಳು ಅಸಮರ್ಥವಾಗಿವೆ ಎಂಬ ವಾಸ್ತವಾಂಶ ಮಾತ್ರ ನಮ್ಮ ಮುಂದೆ ಸ್ಥಿರವಾಗಿ ನಿಂತಿದೆ" ಕಮ್ಯೂನಿಸಂನ ಅತ್ಯಂತ ಅಸಹ್ಯವಾದ ಅವಸ್ಥೆಯೆಂದರೆ ಅದು ಸಾರತಃ ತನ್ನನ್ನು ಒಂದು ದೇಶದೊಂದಿಗೆ–ರಷ್ಯಾದೊಂದಿಗೆ–ಗುರುತಿಸಿಕೊಳ್ಳಬೇಕಾದ ಅವನತಿಗೆ ಈಡಾಗಿರುವುದು ಎಂದು ಲೋಹಿಯಾ ಸೂಚಿಸುತ್ತಾರೆ.

ಇಷ್ಟೆಲ್ಲವನ್ನೂ ಗಮನಿಸಿದ ಮೇಲೆ 'ಇಂಡಿಯಾದಲ್ಲಿ ಕಮ್ಯೂನಿಸಂ' ಎಂಬುದರ ಅರ್ಥವಾದರೂ ಏನು? ಇಂಡಿಯಾದಲ್ಲಿ ಬಂಡವಾಳದ ಕೇಂದ್ರೀಕರಣ ಎಷ್ಟು ನಡೆದಿದೆ? ಇಂಡಿಯಾದ ದುಡಿಮೆಗಾರರಿಂದ ಸುಲಿಯಲಾದ 'ಹೆಚ್ಚುವರಿ ಮೌಲ್ಯ'ದ ಮೂಲಕ ಕೇಂದ್ರೀಕೃತಗೊಂಡ ಬಂಡವಾಳವೆಲ್ಲವೂ ಇಂಡಿಯಾದಲ್ಲೇ ಉಳಿದಿದೆಯೇ? ಬಂಡವಾಳದ ಕೇಂದ್ರೀಕರಣದ ಫಲವಾದ ಹೊಸ ಉತ್ಪಾದನಾ ಉಪಕರಣಗಳ ಆವಿಷ್ಕಾರ ಇಂಡಿಯಾದಲ್ಲಿ ಯಾವ ಮಟ್ಟದಲ್ಲಿ ನಡೆದಿದೆ? (ಇಂಡಿಯಾದ ರೈತನ ನೇಗಿಲು ಎರಡು ಸಾವಿರ ವರ್ಷಗಳಿಂದಲೂ ಸುಧಾರಣೆಯೇ ಇಲ್ಲದೆ ಹಾಗೇ ಉಳಿದಿದೆ!) ಇಂಡಿಯಾದ ದುಡಿಮೆಗಾರರ ಅಗ್ಗದ ದುಡಿಮೆಯ ಪರಿಣಾಮವೆಲ್ಲವೂ ಬ್ರಿಟನ್ ಹಾಗೂ ಇತರ ಮಾಜಿ ಪ್ರಭು ದೇಶಗಳಲ್ಲಿ ಭಾರೀ ಯಂತ್ರಗಳ ರೂಪದಲ್ಲಿ ಕ್ರಿಯಾಶೀಲವಾಗಿದೆ ಅಲ್ಲವೆ? ಈ ಕಾರಣದಿಂದಾಗಿಯೇ ಲೋಹಿಯಾ ಇಂಡಿಯಾ ಹಾಗೂ ಅಭಿವೃದ್ಧಿಗೊಂಡ ದೇಶಗಳ ನಡುವಣ ವ್ಯಾಪಾರ ವಿನಿಮಯ ಶೋಷಣೆಯ ಮುಂದುವರಿಕೆಯಾಗಿದೆ ಎಂದು ಸೂಚಿಸುತ್ತಾರೆ. ಇಂಡಿಯಾದ ದುಡಿಮೆಗಾರನೊಬ್ಬ ನಾಲ್ಕು ತಾಸುಗಳಲ್ಲಿ ಉತ್ಪಾದಿಸಿದ ಸರಕನ್ನು ಅಮೆರಿಕಾ ಅಥವಾ ರಷ್ಯಾದ ದುಡಿಮೆಗಾರನೊಬ್ಬ ತನ್ನ ಆಧುನಿಕ ಉಪಕರಣಗಳ ನೆರವಿನಿಂದಾಗಿ ಕೇವಲ ಅರ್ಧ ತಾಸಿನಲ್ಲಿ ಉತ್ಪಾದಿಸಿದ ಸರಕಿನೊಡನೆ ವಿನಿಮಯ ಮಾಡಿಕೊಳ್ಳುವುದು ಸಾಮ್ರಾಜ್ಯಶಾಹಿಯ ಹೊಸ ರೂಪ ತಾನೆ?

ಈ ಹಿನ್ನೆಲೆಯಲ್ಲಿ ಇನ್ನೂ ನಿರ್ಣಾಯಕ ಅಂಶವೆಂದರೆ, ಇಂಡಿಯಾದ ಬಹುಸಂಖ್ಯಾತ ಜನರ ಮನಸ್ಸನ್ನು ಒಂದಲ್ಲ ಒಂದು ಹಂತದಲ್ಲಿ ಆಳುತ್ತಿರುವುದು ಜಾತಿಪ್ರಜ್ಞೆಯೇ ಅಲ್ಲವೆ? ಜಾತಿಗಳಾಗಿ ಗಟ್ಟಿಗೊಂಡಿದ್ದ ವಿಶ್ವದ ಇತರೆಲ್ಲಾ ಸಮಾಜಗಳೂ ಗಣನಾರ್ಹ ಅವಧಿಗಳಲ್ಲೇ ವರ್ಗಗಳಾಗಿ ಅರಳಿಕೊಂಡಿರುವಾಗ ಇಂಡಿಯಾ ಮಾತ್ರ ಶತಶತಮಾನಗಳಿಂದಲೂ ಜಾತಿಗಳಾಗಿಯೇ ಗಟ್ಟಿಗೊಂಡಿರುವುದರ ಹಿಂದಿರುವ

ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಸೂಕ್ಷ್ಮಗಳನ್ನು ಕಮ್ಯುನಿಸ್ಟ್ ಪ್ರಣಾಲಿಯು ಅರ್ಥ ಮಾಡಿಕೊಳ್ಳಬಲ್ಲುದೆ? (ಇಂಡಿಯಾದ ಕಮ್ಯೂನಿಸಂ ಕೊಸರಾಡಿಕೊಂಡಾದರೂ ಜಾತಿಯನ್ನು ಒಂದು ವಾಸ್ತವವೆಂದು ಒಪ್ಪಿಕೊಳ್ಳುವುದಕ್ಕೆ ಐದು ದಶಕಗಳನ್ನು ತೆಗೆದುಕೊಂಡಿತು!) ಇಂಡಿಯಾದಲ್ಲಿ ವರ್ಗಗಳನ್ನು ಗುರುತಿಸುವ ಒರೆಗಲ್ಲಾದರೂ ಯಾವುದು?

ಹೀಗೆ ಕಮ್ಯೂನಿಸಂನ ತಾತ್ವಿಕ ಅಪೂರ್ಣತೆ ಹಾಗೂ ವಿರೋಧಾಭಾಸಗಳ ಆಚೆಯೂ ಇಂಡಿಯಾ, ಕಮ್ಯೂನಿಸ್ಟ್ ಚೌಕಟ್ಟಿಗೆ ಸವಾಲಾಗಿಯೇ ನಿಲ್ಲುತ್ತದೆ. ಈ ಎಲ್ಲ ಪ್ರಶ್ನೆಗಳಿಗೆ ಕೇವಲ ಉತ್ತರ ಹುಡುಕಿಕೊಳ್ಳದೇ ಇಂಡಿಯಾದಲ್ಲಿ ಕಮ್ಯೂನಿಸ್ಟ್ ರಾಜಕಾರಣದ ಬಗ್ಗೆ ಮಾತನಾಡುವುದು ಕೇವಲ ಬೌದ್ಧಿಕ ಕಸರತ್ತು ಮತ್ತು ಅಂತಿಮ ಪರಿಣಾಮವಾಗಿ ಆತ್ಮವಂಚನೆಯಷ್ಟೇ ಆಗುತ್ತದೆ ಎಂದು ಡಾ. ಲೋಹಿಯಾ ಅಭಿಪ್ರಾಯಪಡುತ್ತಾರೆ. "ಯುರೋಪಿನಲ್ಲಾದ ಕೈಗಾರಿಕಾ ಕ್ರಾಂತಿ ಹಾಗೂ ಅನಂತರದ ವಿದ್ಯಮಾನ ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ಪುನಾರವರ್ತನೆಗೊಳ್ಳಲು ಅಸಾಧ್ಯವಾದ ಒಂದು ಅನನ್ಯ ಚಾರಿತ್ರಿಕ ಪರಿಸ್ಥಿತಿಗೆ ಸೇರಿದುದು. ಬಹಳ ಕಡಿಮೆ ನೆಲ ಮತ್ತು ಬಹಳ ಹೆಚ್ಚು ಜನ ಹಾಗೂ ಕೆಲವೇ ಕೆಲವು ಉಪಕರಣಗಳು ಏಷ್ಯಾದ ಹೆಗ್ಗುರುತಾದ್ದರಿಂದ ಬೃಹತ್ ಉತ್ಪಾದನೆ ತಂತ್ರದ ಅನ್ವಯವೂ ತೀರಾ ಅಸಾಧ್ಯ" ಎಂದು ಅವರು ವಿಶ್ಲೇಷಿಸುತ್ತಾರೆ. (ಮಾವೋ ಅವರ ಮರಣಕ್ಕೇ ಕಾಯುತ್ತಿದ್ದಂತೆ ಚೀನಾ ಕಮ್ಯೂನಿಸ್ಟ್ ಅಭಿವೃದ್ಧಿ ವಿಧಾನದ ಬಗ್ಗೆ ಇಡಿಯಾಗಿ ಪುನರಾಲೋಚನೆಯನ್ನೇ ಸುರು ಮಾಡಿರುವುದು ನಿಷ್ಕಾರಣವಾಗಿ ಅಲ್ಲ) ಇಷ್ಟೆಲ್ಲದರ ಹಿನ್ನೆಲೆಯಲ್ಲೇ ಡಾ. ಲೋಹಿಯಾ ಅವರು ಕಮ್ಯೂನಿಸಂ ಅನ್ನು ಆಧುನಿಕ ಕ್ರೈಸ್ತ ಧರ್ಮದ ನಂತರ ಯುರೋಪ್ ಏಷ್ಯಾದ ಮೇಲೆ ಪ್ರಯೋಗಿಸಿರುವ ಇತ್ತೀಚಿನ ಅಸ್ತ್ರ ಎಂದು ಗುರುತಿಸಿದ್ದು; ಮತ್ತು ಏಷ್ಯಾ, ಯುರೋಪಿನ ಈ ಅಸ್ತ್ರ ರೂಪದ ನಾಗರಿಕತೆಯಲ್ಲೇ ತನ್ನ ಹಿತಗಳನ್ನೂ ಗುರುತಿಸಿಕೊಳ್ಳುವ ಬುದ್ಧಿವಿಹೀನತೆಗೆ ಈಡಾಗದೆ ತನ್ನದೇ ಸ್ವಂತ ಗುರುತನ್ನು ಹುಡುಕಿಕೊಳ್ಳುವ ಮೂಲಕ ಬೆಳೆದು ಬಾಳುವ ಆತ್ಮವಿಶ್ವಾಸವನ್ನು ರೂಢಿಸಿಕೊಳ್ಳಬೇಕು ಅಂತ ಕರೆ ಕೊಟ್ಟಿದ್ದು.

ಬಂಡವಾಳಶಾಹಿ ಮತ್ತು ಕಮ್ಯುನಿಸಂಗಳೆರಡರ ಕೊಡುಗೆಯಾದ ಅಣುಬಾಂಬ್ ಸೂಚಿಸುವ ಮಾನವ ಜನಾಂಗದ ಆತ್ಮವಿನಾಶದ ದುರಂತ ಹಾಗೂ ಏಷ್ಯಾದ ಆತ್ಮನಿರೀಕ್ಷಣೆಯ ಫಲವಾದ ಮಹಾತ್ಮ ಗಾಂಧಿ ಸೂಚಿಸುವ ಆತ್ಮವಿಕಾಸದ ಆಶಯ– ಇವುಗಳ ದ್ವಂದ್ವ, ಮನುಷ್ಯಪರವಾದ ಕ್ರಿಯಾಶೀಲತೆಯ ಹೊಸದೊಂದು ಬಾಗಿಲನ್ನೇ ಜಗತ್ತಿಗೆ ತೆರೆಯಬಲ್ಲುದೆಂದು ಡಾ. ರಾಮಮನೋಹರ ಲೋಹಿಯಾ ನಂಬಿದ್ದರು.

ಲೋಹಿಯಾ ಗಾಂಧೀಜಿಯನ್ನು ತಮ್ಮ ೯ನೇ ವಯಸ್ಸಿನಲ್ಲೇ ತಮ್ಮ ತಂದೆಯವರ ಜೊತೆ ಹೋಗಿ ಕಂಡಿದ್ದರು. ತಂದೆ ಹೀರಾಲಾಲ್ ಗಾಂಧೀಜಿಯವರಿಂದ ಪ್ರಭಾವಿತರಾದ ಕೆಲವೇ ಮೊದಲಿಗರ ಪೈಕಿ ಒಬ್ಬರು ಎಂಬುದು ಇಲ್ಲಿ ಗಮನಾರ್ಹ. ಲೋಹಿಯಾ

ತಮ್ಮ ಡಾಕ್ಟರೇಟ್ ಪ್ರಬಂಧಕ್ಕಾಗಿ ಆರಿಸಿಕೊಂಡ ವಿಷಯವೂ ಗಾಂಧೀಜಿ ನೇತೃತ್ವದ ದಂಡಿ ಉಪ್ಪಿನ ಸತ್ಯಾಗ್ರಹವನ್ನೇ. ಈ ಸತ್ಯಾಗ್ರಹದಲ್ಲಿ ಹೀರಾಲಾಲರನ್ನು ಪೊಲೀಸರು ಪ್ರಜ್ಞೆ ತಪ್ಪುವವರೆಗೂ ಹೊಡೆದು ಉರುಳಿಸಿದ್ದರು. ಈ ಪ್ರಬಂಧದ ಮುಖಶೀರ್ಷಿಕೆಯಾದ 'ಭೂಮಿಯ ಉಪ್ಪು' ಎಂಬಲ್ಲಿ ಲೋಹಿಯಾ, ಉಪ್ಪಿನ ಹಿಂದಿರುವ ಭಾವನಾತ್ಮಕತೆಯಲ್ಲಿ ಆರ್ಥಿಕ ಹಾಗೂ ರಾಜಕೀಯ ಅಂಶಗಳು ಹೇಗೆ ಮಿಳಿತವಾಗಿದೆ ಎಂಬುದನ್ನು ವಿವರಿಸುತ್ತಾರೆ. ಜರ್ಮನಿಯಿಂದ ಡಾಕ್ಟರೇಟ್ ಪದವಿ ಪಡೆದು ಬಂದ ಕೂಡಲೇ ರಾಮಮನೋಹರರು ಸೇರಿದ್ದು ಗಾಂಧೀಜಿಯ ಶಾಲೆಯನ್ನೇ; ಆದರೆ ಬರೀ ವಿದ್ಯಾರ್ಥಿಯಾಗಿ ಅಲ್ಲ; ವಿಮರ್ಶಕರಾಗಿ ಕೂಡಾ.

ಮಹಾನ್ 'ವ್ಯವಸ್ಥಾ ಅವಿಧೇಯ'ರಾಗಿದ್ದ ಲೋಹಿಯಾ ಅತಿ ಬೇಗನೇ ಗಾಂಧೀಜಿಯವರ ಗಮನ ಸೆಳೆದರು. ಹಾಗೆಯೇ ಹೋರಾಟದ ಹೊಸ ಹೊಸ ರೂಪಗಳ ಆವಿಷ್ಕಾರದ ಚಿಂತನೆಯಲ್ಲಿ ತೊಡಗುತ್ತಿದ್ದ ಗಾಂಧೀಜಿ, ಲೋಹಿಯಾರ ಸೃಜನಶೀಲ ಚಿಂತನೆಯ ಪ್ರಮುಖ ಪ್ರೇರಕಶಕ್ತಿಯಾದರು. ಲೋಹಿಯಾ ಮೂಲಕ ಗಾಂಧೀಜಿ ತರುಣ ಸಮಾಜವಾದಿಗಳಿಗೆ ಎಷ್ಟು ಹತ್ತಿರದವರಾದರೆಂದರೆ ಒಮ್ಮೆ ಅಶೋಕ ಮೆಹ್ತಾರಿಗೆ ಅವರು ಚರ್ಚೆಯನ್ನು ಮೊಟಕುಗೊಳಿಸುತ್ತಾ ಹೀಗೆ ಹೇಳಿದರು. "ನೀವು ಅಹಿಂಸಾ ಮಾರ್ಗವನ್ನು ಒಪ್ಪಿಕೊಳ್ಳುವುದೇ ಆದರೆ ನಾನು ಇಂದೇ ನಿಮ್ಮ ಸಮಾಜವಾದಿ ಪಕ್ಷದ ಅಧ್ಯಕ್ಷನಾಗಬಯಸುವೆ". ಆದರೆ ದುರಂತವೆಂದರೆ ಸಮಾಜವಾದಿಗಳ ಹೋರಾಟದ ಮಾರ್ಗದ ಬಗ್ಗೆ ಸಂದೇಹವನ್ನೇ ಉಳಿಸಿಕೊಂಡು ಬಂದ ಗಾಂಧೀಜಿಗೆ, ರಾಷ್ಟ್ರವಿಭಜನೆಯ ಸಂದರ್ಭದಲ್ಲಿ ದೇಶಾದ್ಯಂತ ತಲೆ ಎತ್ತಿದ ಕೋಮುವಾರು ಹತ್ಯೆಗಳ ಪರಿಹಾರ ಪ್ರಯತ್ನಗಳಲ್ಲಿ ನೆರವಾದವರು ಲೋಹಿಯಾ ಹಾಗು ಇತರ ಸಮಾಜವಾದಿ ಗೆಳೆಯರೇ...

ಸ್ವತಂತ್ರ ಇಂಡಿಯಾಕ್ಕಾಗಿ ತಮ್ಮದೇ ಸ್ವತಂತ್ರ ಆರ್ಥಿಕ ಚಿಂತನೆಗಳನ್ನು ರೂಪಿಸಿಕೊಳ್ಳುತ್ತಿದ್ದ ಲೋಹಿಯಾ, ಹೋರಾಟದ ಮಾರ್ಗದ ವಿಷಯದಲ್ಲಿ ಗಾಂಧೀಜಿಯವರ ಚಿಂತನೆಯಲ್ಲಿ 'ಹೊಸ'ದನ್ನು ಕಂಡರು. ಸಾಕ್ರೇಟಿಸ್ ಮತ್ತು ಥೋರೋ ಪರಂಪರೆಯ ಹೋರಾಟದ ಮಾರ್ಗ ಗಾಂಧೀಜಿ ಮೂಲಕ ನಾಗರಿಕ ಅಸಹಕಾರ ಸತ್ಯಾಗ್ರಹದ ಹೆಸರಿನಲ್ಲಿ ಜನಸಾಮಾನ್ಯರ ಪ್ರತಿಭಟನಾ ಅಸ್ತ್ರವಾಗಿ ಬಳಕೆಗೆ ಬಂದುದನ್ನು ಅವರು ಕಂಡರು. "ನಾಗರಿಕ ಅಸಹಕಾರ ವಿವೇಚನೆಯ ಭರವಸೆ ಇದ್ದಂತೆ... ವಿವೇಚನೆ ತನ್ನ ಗುಣವನ್ನು ಉಳಿಸಿಕೊಂಡೂ ಆದೇಶಾತ್ಮಕವಾಗಬೇಕಾದಲ್ಲಿ, ವಿವೇಚನಾರಹಿತ ಆಜ್ಞೆಗಳ ಪಾಲನೆಯ ನಾಗರಿಕ ನಿರಾಕರಣೆಯ ಹೊರತಾಗಿ ಬೇರೆ ಮಾರ್ಗವಿಲ್ಲ..." ಎಂಬುದು ಅವರ ನಂಬಿಕೆಯಾಯಿತು. ಈ ಹಿನ್ನೆಲೆಯಲ್ಲಿ ಹಿಂಸಾತ್ಮಕ ಹಾಗೂ ಅಹಿಂಸಾತ್ಮಕ ಹೋರಾಟಗಳ ತುಲನೆಯನ್ನು ಅವರು ಮಾಡಿದರು. ಹಿಟ್ಲರನ ನೇತೃತ್ವದ ನಾಜೀ ರಾಷ್ಟ್ರೀಯವಾದ ಹಾಗೂ ಸ್ಟಾಲಿನ್ ನೇತೃತ್ವದ ಮಾರ್ಕ್ಸ್– ಲೆನಿನ್‌ವಾದ

ಅವರ ಕಣ್ಮುಂದಿದ್ದವು. ಹಿಂಸೆಯನ್ನು ವೈಭವೀಕರಿಸುವ ಯಾವುದೇ ವರ್ಗರಹಿತ ಹಾಗೂ ಜಾತಿರಹಿತ ಸಮಾಜವನ್ನು ಕಟ್ಟಲಾರದು ಎಂಬುದು ಅವರ ಈ ತುಲನಾತ್ಮಕ ಅಧ್ಯಯನದ ತೀರ್ಮಾನವಾಗಿತ್ತು. ಹಿಂಸೆ ಯಾವಾಗಲೂ ಹೇಡಿಯ ಸಾಧನವಾಗಿರುತ್ತದೆ. ಅದು ಯಾವಾಗಲೂ ತನಗಿಂತ ದುರ್ಬಲನಾದವನನ್ನು ಹುಡುಕಿಕೊಂಡು ಹೋಗುತ್ತದೆ. ತನಗಿಂತ ಸಬಲನಾದವನನ್ನು ಕಂಡೊಡನೆ ಅದು ಪಲಾಯನ ಮಾಡುತ್ತದೆ ಎಂಬುದು ಹಿಂಸೆ ಕುರಿತ ಅವರ ವಿಶ್ಲೇಷಣೆಯಾಗಿತ್ತು.*

ಹಿಂಸೆ ಅಹಿಂಸೆಯ ವಿಷಯದಲ್ಲಿ ಲೋಹಿಯಾ ಗಾಂಧೀಜಿಯವರಿಂದ ಭಿನ್ನವಾಗುವುದು ಹಿಂಸೆ ಅಹಿಂಸೆಗಳ ನಿರಪೇಕ್ಷ ರೂಪದ ವಿಷಯದಲ್ಲಿ. ಗಾಂಧೀಜಿಗೆ ಅಹಿಂಸೆ ಎನ್ನುವುದು ಎಲ್ಲ ಕಾಲಕ್ಕೂ ನಿರಪೇಕ್ಷವಾದುದಾಗಿದ್ದರೆ, ಲೋಹಿಯಾಗೆ ಅಹಿಂಸೆ ಅನಿವಾರ್ಯ ಸಹಜವಾದ ಹೋರಾಟದ ಮಾರ್ಗ ಮಾತ್ರವಾಗಿತ್ತು. ಹಿಂಸೆ ಅಹಿಂಸೆ ಕುರಿತು ಸಮಾಜವಾದೀ ಚಳುವಳಿಯಲ್ಲಿನ ಜಿಜ್ಞಾಸೆ ಕುರಿತು ಅವರು ಹೇಳುವುದಿದು: “ಬಲಪ್ರಯೋಗದ ಸಮಸ್ಯೆಯೊಂದನ್ನು ಸಮಾಜವಾದಿಗಳು ಜಿಜ್ಞಾಸೆ ಮಾಡುತ್ತಿದ್ದಾರೆ. ಕೆಲವು ಸಮಾಜವಾದಿಗಳು ಹಿಂಸೆಗಿಳಿಯಬೇಕಾಗಬಹುದೆಂದು ಹೇಳುತ್ತಾರೆ. ಈ ಬಗೆಯ ಜಿಜ್ಞಾಸೆ ಸಮಾಜವಾದೀ ಸಂಘಟನೆಯ ಬೆಳವಣಿಗೆಗೆ ಹಾನಿಯುಂಟು ಮಾಡುತ್ತದೆ. ಕೊನೆಯ ಹಂತಗಳಲ್ಲಿ ನಾವು ಹಿಂಸಾಮಾರ್ಗಕ್ಕೆ ಇಳಿಯಬೇಕೋ ಬೇಡವೋ ಎಂಬುದು ಆನುಷಂಗಿಕ ಪ್ರಶ್ನೆ. ಪ್ರಸ್ತುತ ಪ್ರಶ್ನೆ ಎಂದರೆ ಜನಗಳನ್ನು ಅಹಿಂಸಾತ್ಮಕ ಹೋರಾಟದ ಆಧಾರದ ಮೇಲೆ ಸಂಘಟಿಸಬೇಕೋ ಅಥವಾ ಹಿಂಸೆಯನ್ನು ಆಧಾರಿಸಿಯೋ ಎಂಬುದು... ಒಂದು ಜನತಾ ಹೋರಾಟದ ಅಂತಿಮ ಹಂತದಲ್ಲಿ ಹಳೆಯ ವ್ಯವಸ್ಥೆಯೊಂದು ಕೇವಲ ಬಂದೂಕುಗಳನ್ನಾಧರಿಸಿಯೇ ಹೋರಾಡಲು ನಿಂತಾಗ, ದಮನ ಮಾಡಲು ನಿಂತಾಗ, ಆ ಹಂತದಲ್ಲಿ ಮಹಾಜನಸ್ತೋಮವು ತನ್ನ ಅಖಂಡ ಶಕ್ತಿಯಿಂದ ಅದನ್ನು ಕಿತ್ತೆಸೆಯಲು ನಿರ್ಧರಿಸಿ ನವೀನ ಹೋರಾಟ ವಿಧಾನವೊಂದಕ್ಕೆ ಜನ್ಮವೀಯಬಹುದು. ಆದರೆ ಇದು ಯಾವಾಗಲೂ ಸಯಮಸ್ಫೂರ್ತವಾ ಅಲ್ಪಾವಧಿ ಹಿಂಸೆಯಾಗಿರುತ್ತದೆ. ಈ ಅಲ್ಪಾವಧಿ ಸಮಯಸ್ಫೂರ್ತ ಹಿಂಸೆಯನ್ನು ಕಲ್ಪಿಸಿಕೊಂಡು ಇಡೀ ಒಂದು ಸಿದ್ಧಾಂತ ಹಾಗೂ ಸಂಘಟನೆಯ ನಿರ್ಮಾಣಕ್ಕೆ ತೊಡಗುವುದು ತಪ್ಪಾಗುತ್ತದೆ.”

“ನಾಗರಿಕ ಅಸಹಕಾರ ಸತ್ಯಾಗ್ರಹವು ವೈಯಕ್ತಿಕ ಅಭ್ಯಾಸವಾಗಿ ಹಾಗೂ ಸಾಮೂಹಿಕ ಸಾಧನವಾಗಿ ಒಂದು ಆಯುಧ ಸನ್ನದ್ಧ ತರ್ಕವಾಗಿದೆ. ಇದನ್ನುಳಿದ

---

*ಹಿಂಸೆಯನ್ನು ಪ್ರತಿಪಾದಿಸುವ ಇಂಡಿಯಾದ ಕೆಲವು ಕಮ್ಯೂನಿಸ್ಟ್ ನಾಯಕರು, ತಾವು ನಡೆಸುದುದಕಿಂತ ಜೋರಾದ ಹಿಂಸೆ ಪೋಲೀಸರ ಕಡೆಯಿಂದ ಬರತೊಡಗಿದಾಗ ಅದಕ್ಕೆ ಬಲಿಯಾಗಲು ಬರೀ ಜನಸಾಮಾನ್ಯರನ್ನು ಬಿಟ್ಟು ತಾವು ತಲೆತಪ್ಪಿಸಿಕೊಂಡು ಸುರಕ್ಷಿತ ಸ್ಥಳಗಳಿಗೆ ಪಲಾಯನ ಮಾಡಿದುದನ್ನು ಈ ಸಂದರ್ಭದಲ್ಲಿ ನೆನೆಯಬಹುದಾಗಿದೆ.

ಇನ್ನೇನೇ ಆದರೂ ಅದೊಂದು ನಿರ್ಬಲ ತರ್ಕವೊ ಅಥವಾ ತರ್ಕಾತೀತ ಮೃಗೀಯ ಶಕ್ತಿಯೋ ಆಗುತ್ತದೆ. ಇದು ಇಡೀ ಮಾನವ ಜನಾಂಗಕ್ಕೆ ಗಾಂಧೀಜಿ ನೀಡಿದ ಕೊಡುಗೆ"–ಎಂಬ ವಿಶ್ಲೇಷಣಾತ್ಮಕ ನಂಬಿಕೆಯೇ ಲೋಹಿಯಾ ಹಿಂಸೆ–ಅಹಿಂಸೆ ಕುರಿತು ಭಾವಾತಿರೇಕಕ್ಕೆ ಹೊರತಾದ ವಿವೇಚನಾಶೀಲ ನಿಲುವು ತಳೆಯಲು ಸಾಧ್ಯ ಮಾಡಿದ್ದು.

ಆದರೆ ಲೋಹಿಯಾ ಹಿಂಸೆಯನ್ನು ಒಂದು ಮುಟ್ಟಬಾರದ ವಸ್ತುವಿನಂತೆ ಇಡಿಯಾಗಿ ತಳ್ಳಿ ಹಾಕಲಿಲ್ಲ. ಹಿಂಸೆ ಹೇಡಿತನಕ್ಕೆ ಬದಲಾಗಿ ಪ್ರತಿರೋಧ ರೂಪವಾಗಿ ಮತ್ತು ಹಿಮ್ಮೆಟ್ಟದೆ ಕೊನೆವರೆಗ ಹೋರಾಡುವ ಮನುಷ್ಯ ಛಲವಾಗಿ ಮೂಡಿಬಂದಲ್ಲಿ ಅದು ಸ್ವೀಕಾರರ್ಹವೇ ಎಂಬುದು ಲೋಹಿಯಾರವರ ಅಭಿಪ್ರಾಯವಾಗಿತ್ತು. ಇಂಡಿಯಾದ ಆಳುವ ವರ್ಗಗಳ ಪ್ರತೀಕವಾಗಿದ್ದ ಕಾಂಗ್ರೆಸ್ಸಿನ ದಮನಶೀಲ ಪ್ರವೃತ್ತಿಗಳಿಂದ ಬೇಸತ್ತ ಲೋಹಿಯಾ ತಾವು ಸ್ಥಗಿತತೆಗೆ ಬದಲಾಗಿ ಅರಾಜಕತೆಯನ್ನು ಬಯಸುವುದಾಗಿ ಘೋಷಿಸಿದರು. ೧೯೬೬ರ ಏಪ್ರಿಲ್‌ನಲ್ಲಿ ರಾಜಸ್ತಾನದ ಕೋಟಾ ಎಂಬಲ್ಲಿ ಸಾರ್ವಜನಿಕವಾಗಿ ಭಾಷಣ ಮಾಡುತ್ತಾ ಹಿಂಸೆ ಕುರಿತ ತಮ್ಮ ಕಲ್ಪನೆಯನ್ನು ಹೀಗೆ ವಿವರಿಸಿದರು: "...ಆದರೆ ಹಸಿವು ಮತ್ತು ಕ್ರೌರ್ಯ ಮಿತಿಮೀರಿದ ಮಟ್ಟ ಮುಟ್ಟಿದಲ್ಲಿ, ಸರ್ಕಾರವನ್ನು ಬೇರೆ ಮಾರ್ಗಗಳಿಂದ ಕೂಡ ಬದಲಿಸಬೇಕಾಗಬಹುದು... ಕಾಂಗ್ರೆಸ್ ಪಕ್ಷ ಭಯೋತ್ಪಾದನೆ ಹಾಗೂ ಆಮಿಷಗಳಿಂದ ಹಣ ಸಂಗ್ರಹಣೆಗೆ ತೊಡಗುವ, ಚುನಾವಣಾ ಕಾಲದಲ್ಲಿ ಜನಗಳನ ಮನಸ್ಸನ್ನು ಕ್ಷಣಿಕತೆಗಳಿಗೆ ಒಳಗಾಗಿಸುವ, ರಾಜಕೀಯ ಚರ್ಚೆಗಳನ್ನು ವಿಕೃತಗೊಳಿಸುವ, ಲೋಕಸಭೆ ಹಾಗೂ ವಿಧಾನಸಭೆಗಳನ್ನು ಅಪ್ರಾಮಾಣಿಕವಾಗಿ ಶಕ್ತಿಹೀನಗೊಳಿಸುವ ಪ್ರವೃತ್ತಿಗಿಳಿಯುವಷ್ಟು ಪರಿಸ್ಥಿತಿ ಕೆಟ್ಟರೆ, ನಮ್ಮ ಸ್ವಯಂಸೇವಕರು ಜನಸಮೂಹಕ್ಕೆ ಸಚಿವಾಲಯಗಳು, ಸಂಸತ್ತು, ಆಕಾಶವಾಣಿ ಕೇಂದ್ರಗಳು ಹಾಗೂ ಶಸ್ತ್ರಾಗಾರಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮುಂದಾಳತ್ವ ನೀಡಲು ಸಿದ್ಧರಾಗಬೇಕು... ಈ ನಡುವೆ ನಾನು ಹಿಂಸೆಯನ್ನು ಪ್ರಚಾರಪಡಿಸುತ್ತಿರುವೆನೆಂದು ಆಪಾದಿಸಲಾಗುತ್ತಿದೆ. ಇಲ್ಲ, ಅಹಿಂಸಾ ವಿಧಾನದ ಅನುಸರಣೆಗೇ ಬದ್ಧನಾಗಲು ನಾನು ಇಷ್ಟಪಡುವೆ. ಆದರೆ ಈ ಕ್ರೂರ, ಅಮಾನವೀಯ, ರಾಕ್ಷಸ ಹಿಂಸಾಚಾರದಿಂದ ನಾವು ಉಳಿದುಕೊಳ್ಳುವುದು ಸಂಘಟಿತ ಹಿಂಸೆಗಿಳಿಯುವ ಮೂಲಕ ಮಾತ್ರ ಎನ್ನುವಂತಾದರೆ, ಆಗ ನಾನು ಸಂಘಟಿತ ಹಿಂಸೆಯ ಬಳಕೆಗೆ ಇಚ್ಛೆಪಡುವೆ".

ಲೋಹಿಯಾರ ನಾಗರಿಕ ಅಸಹಕಾರದ ಪರಿಕಲ್ಪನೆಯ ಹಿಂದಿರುವ ಅಹಿಂಸೆಯ ಕಲ್ಪನೆ ಹಾಗೂ ಹಿಂಸೆ ಕುರಿತ ಈ ಮೇಲಿನ ಅವರ ಮಾತಿನ ನಡುವೆ ಮೇಲ್ನೋಟಕ್ಕೆ ವಿರೋಧಾಭಾಸ ಕಾಣಿಸಬಹುದು. ಆದರೆ ಇಲ್ಲಿ ಬಹು ಜನರು ಗುರುತಿಸದೇ ಹೋಗುವ ಅಂಶವೆಂದರೆ, ಜನತೆಗೆ ಅಹಿಂಸೆಯೇ ಹಿಂಸೆಯಾಗಿ ಸಾಕ್ಷಾತ್ಕಾರವಾಗುವ 'ಸತ್ಯ'ದ ಕ್ಷಣವೇ ನಿರ್ಣಾಯಕ. ಆಗ ನಿರ್ಣಾಯಕವಾಗುವುದು ಈ ಸತ್ಯವೇ ಹೊರತು

ಹಿಂಸೆಯೂ ಅಲ್ಲ ಅಹಿಂಸೆಯೂ ಅಲ್ಲ-ಆ ಕ್ಷಣದೊಳಗೆ ಈ ಎರಡೂ ಜನತಾ ಹೋರಾಟದೊಳಗೆ transcend ಆಗಿರುತ್ತವೆ ಎಂಬುದು ಲೋಹಿಯಾರ ತತ್ವ ಮೀಮಾಂಸೆ.

ಹೀಗೆ ಗಾಂಧೀಜಿಯ ಅಹಿಂಸಾತತ್ವದ ಹಿಂದಿನ ಭಾವವನ್ನು ಮಾತ್ರ ಸೆಳೆದುಕೊಳ್ಳುವ ಲೋಹಿಯಾ, ಇಡೀ ಗಾಂಧೀವಾದದ ಬಗ್ಗೆ ತಳೆಯುವುದೂ ಈ ವಿಮರ್ಶಾತ್ಮಕ ನಿಲುವನ್ನೇ. ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ರೂಪಿಸಿದ ಸತ್ಯಾಗ್ರಹದ ಅಸ್ತ್ರವನ್ನು ಸಾಮಾಜಿಕ ಹಾಗೂ ಆರ್ಥಿಕ ಸ್ವಾತಂತ್ರ್ಯಕ್ಕಾಗಿಯೂ ನಡೆಸುವ 'ಸಮಾಜವಾದಿ ವರ್ಗ ಹೋರಾಟ'ದ ನಿರಂತರ ಅಸ್ತ್ರವನ್ನಾಗಿ ('ನಾಗರಿಕ ಅಸಹಕಾರ ಸತ್ಯಾಗ್ರಹ' ಎಂಬ ಹೆಸರಿನಲ್ಲಿ) ಪರಿಷ್ಕರಿಸಿದ ಲೋಹಿಯಾ, ಗಾಂಧೀವಾದದ ಸಾಮಾಜಿಕ ಹಾಗೂ ಆರ್ಥಿಕ ಅಂಶಗಳನ್ನೂ ತಮ್ಮ ಚಿಕಿತ್ಸಕ ನೋಟದ ಮೂಲಕ ಪರಿಷ್ಕರಣೆಗೆ ಒಳಪಡಿಸಿದರು. ಗಾಂಧೀಜಿ ಆತ್ಮಪರಿಶುದ್ಧಿಗಾಗಿ ಪ್ರತಿಪಾದಿಸಿದ ಬ್ರಹ್ಮಚರ್ಯ ಪಾಲನೆ, ವರ್ಣ ವ್ಯವಸ್ಥೆ ಕುರಿತ ವ್ಯಾಖ್ಯಾನ ಹಾಗೂ ಆಸ್ತಿ ಸಂಬಂಧ ಕುರಿತ ಟ್ರಸ್ಟೀಷಿಪ್ ವ್ಯವಸ್ಥೆಯ ನಿರೂಪಣೆ- ಇದನ್ನು ಲೋಹಿಯಾ ಒಪ್ಪಲಿಲ್ಲ. ಮನುಷ್ಯರ ನಡುವಣ ಲೈಂಗಿಕ ಸಂಬಂಧ, ಸಾಮಾಜಿಕ ಸಂಬಂಧ ಹಾಗೂ ಆರ್ಥಿಕ ಸಂಬಂಧ ಈ ಮೂರು ಸಂಬಂಧಗಳ ಬಗ್ಗೆಯೂ ಲೋಹಿಯಾ ಗಾಂಧೀಜಿಯ ವಿರುದ್ಧವಾಗಿದ್ದೂ; ಕೊನೆ ಕ್ಷಣದವರೆಗೆ ಅವರ ನೆರಳಿನಂತೆ ಅನುಸರಿಸಿದ್ದು ಒಂದು ಚೋದ್ಯವಾಗಿ ಕಾಣಬಹುದು. ಆದರೆ ಹಾಗೇನಿಲ್ಲ. ಮನುಷ್ಯ ಸಂಬಂಧಗಳ ವಿಷಯದಲ್ಲಿ ಗಾಂಧೀಜಿ ಬಹುಮುಖಿ ಹಿಂದೂ ಧರ್ಮವನ್ನು ನೆಲೆ ಮಾಡಿಕೊಂಡರೆ, ಲೋಹಿಯಾ ಎಲ್ಲ ರೀತಿಯ ಧರ್ಮೀಯತೆಯನ್ನೂ transcend ಮಾಡಿಕೊಂಡ ಸಮಾಜವಾದೀ ತತ್ವಚಿಂತನೆಯನ್ನು ನೆಲೆ ಮಾಡಿಕೊಂಡರು. ಈ ನೆಲೆ ಗಾಂಧೀಜಿಯನ್ನು ನಿರಪೇಕ್ಷ ಲೈಂಗಿಕ ಪರಿಶುದ್ಧತೆ, ಧಾರ್ಮಿಕ ಸಾಮಾಜಿಕತೆ ಹಾಗೂ ಟ್ರಸ್ಟೀಶಿಪ್ ಪರಿಕಲ್ಪನೆಗಳಿಗೆ ಕೊಂಡೊಯ್ದಿದ್ದರೆ; ಲೋಹಿಯಾರ ತತ್ವ ಚಿಂತನೆ ಅವರನ್ನು ಶೋಷಣೆ ಇಲ್ಲದಂತಹ ಲೈಂಗಿಕ ಸಂಬಂಧ, ಜಾತಿ ವಿನಾಶ ಹಾಗೂ ಆಸ್ತಿಯ ಸಾಮಾಜೀಕರಣದ ಕಲ್ಪನೆಗಳಿಗೆ ಕರೆದೊಯ್ದಿತು. ಇದು ಮುಂದೆ ಸದಾ ಏರುತ್ತಾ, ಹೋಗುವ ಪಶ್ಚಿಮದ ಗ್ರಾಹಕವಾದಿ ನಾಗರಿಕತೆಗೆ ಪ್ರತಿಯಾಗಿ ಸರಳ ಸಭ್ಯ ಜೀವನಮಟ್ಟದ ಹೊಸ ಜಾಗತಿಕ ನಾಗರಿಕತೆಯ ಕಲ್ಪನೆಯನ್ನು ರೂಪಿಸುವಲ್ಲಿ ಅವರಿಗೆ ನೆರವಾಯಿತು.

ಗಾಂಧೀಜಿ ಹಾಗೂ ಲೋಹಿಯಾ ನಡುವಣ ಏಕತೆಯಲ್ಲಿನ ಈ ಭಿನ್ನತೆಯಿಂದಾಗಿಯೇ ಗಾಂಧೀಜಿ ಸಾವಿನ ನಂತರ ಲೋಹಿಯಾ ಗಾಂಧೀವಾದವನ್ನು ಎರಡು ಭಾಗಗಳಾಗಿ ನೋಡುವಂತಾದದ್ದು. ಗಾಂಧೀವಾದ ತನ್ನ ಸಮಗ್ರತೆಯನ್ನು ಕಳೆದುಕೊಂಡಿತ್ತು; "ಗಾಂಧೀವಾದ ಇಂದು ತನ್ನ ಎರಡು ಉತ್ಪತ್ತಿಗಳ ರೂಪದಲ್ಲಿ ವ್ಯಕ್ತಗೊಳ್ಳುತ್ತಿದೆ- ಸರ್ಕಾರಿ ಗಾಂಧೀವಾದ ಹಾಗೂ ಮಠೀಯ ಗಾಂಧೀವಾದ. ಈ

ಎರಡು ಉತ್ಪತ್ತಿರೂಪಗಳ ಜೋಡಣೆಯನ್ನೇ ಇಂದು ಅಧಿಕಾರಯುತವಾಗಿ ಗಾಂಧೀವಾದ ಎಂದು ಕರೆಯಲಾಗುತ್ತಿರುವುದು. ಈ ಅಧಿಕಾರಯುತ ಗಾಂಧೀವಾದ ವಿಜಯದ ನಂತರ ಹೇಪಲಾಡಿ ತತ್ವಜ್ಞಾನವಾಗಿ ಹೋಗಿದೆ. ಅದಕ್ಕೆ ಹಲ್ಲುಗಳೇ ಇರಲಿಲ್ಲವೋ ಎನ್ನುವಂತೆ ಅವನ್ನು ಕಳಚಿಡಲಾಗಿದೆ. ಮಠೀಯ ಗಾಂಧೀವಾದ ತನ್ನ ಜೀವನೋಪಾಯಕ್ಕಾಗಿ ಇಡಿಯಾಗಿ ಸರ್ಕಾರೀ ಗಾಂಧೀವಾದವನ್ನು ಅವಲಂಬಿಸಿದೆ. ಸರ್ಕಾರೀ ಗಾಂಧಿವಾದ ಏನೂ ಮಾಡದೆ ಕೂತಿದೆ. ಈ ಎರೂ ಸ್ತರೀಕರಣದ ವೈಭವದೊಂದಿಗೆ ಆನಂದ, ಸಂತೃಪ್ತಿಯ ನಿರಾತಂಕ ಬಾಳುವೆ ನಡೆಸಿವೆ"

ಗಾಂಧೀವಾದದ ಈ ಅವನತಿಗೆ ಕಾರಣ ಅದರ ಭಾವವನ್ನೇ ನಿರ್ಲಕ್ಷಿಸಿ ಬರೀ ಅದರ ಹಂದರವನ್ನಷ್ಟೇ ಜಗ್ಗುತ್ತಿರುವುದೇ ಆಗಿದೆ ಎಂಬುದನ್ನು ಲೋಹಿಯಾ ಗುರುತಿಸಿದ್ದರು. ಮನುಷ್ಯನ ಪ್ರಜ್ಞೆ ವಿಘಟನೆಗೊಳ್ಳದಂತೆ, ಆತನನ್ನು ಕೇಂದ್ರವಾಗುಳ್ಳ ಸಾಮಾಜಿಕ ಘಟಕಗಳನ್ನು ರೂಪಿಸುವುದೇ ಗಾಂಧಿವಾದದ ಹಿಂದಿನ ಭಾವವಾಗಿತ್ತು. ಚರಖಾ ಈ ಭಾವದ ಸಂಕೇತ ಮಾತ್ರ; ಅದು ಮನುಷ್ಯನ ಘಟನೆಯನ್ನು ಕಾಪಿಡಬಲ್ಲ ತಂತ್ರಜ್ಞಾನದ ಪ್ರತೀಕ ಮಾತ್ರ. ಈ ಹಿನ್ನೆಲೆಯಲ್ಲೇ ಲೋಹಿಯಾ ಗಾಂಧೀವಾದ ಮತ್ತೆ ಕ್ರಾಂತಿಕಾರಿಯಾಗಬಹುದಾದ ಮಾರ್ಗವೊಂದನ್ನು ಸೂಚಿಸಿದ್ದು". ಪ್ರಸಕ್ತ ಪ್ರಗತಿಶೀಲ ತಂತ್ರಜ್ಞಾನವನ್ನು ಗಾಂಧೀವಾದದ ಸಹಾಯದೊಡನೆ ಪರಿಷ್ಕರಿಸಿ ಒಂದು ಹೊಸ ಸ್ವರೂಪದ ಅರ್ಥವ್ಯವಸ್ಥೆಗೆ ಬುನಾದಿ ಹಾಕುವುದಾದರೆ ಆಗ ಗಾಂಧೀವಾದವು ಸರ್ಕಾರದ ಮೂಲಕ ಕ್ರಾಂತಿಕಾರಕವಾಗಿ ಕಾರ್ಯಪ್ರವೃತ್ತವಾದೀತು. ಅದು, ಗಾಂಧೀವಾದದ ಭಾವವನ್ನು ಅರ್ಥ ಮಾಡಿಕೊಳ್ಳುವುದರ ಮೂಲಕ ಸಾಧ್ಯವೇ ಹೊರತು ಅದನ್ನು ಅಕ್ಷರಶಃ ಅನುಕರಿಸಿ ನೂಲುತ್ತಾ ಕೂರುವುದರಿಂದಲ್ಲ."

■

"ನಾಗರಿಕ ಅಸಹಕಾರ ಸತ್ಯಾಗ್ರಹಿಗೆ ಚರಿತ್ರೆಯ ಪಾಠ ಗೊತ್ತಿದೆ– ಕ್ರೂರಿಗಳು ಬದುಕುವುದು ಹೇಡಿಗಳಿರುವೆಡೆಯಲ್ಲಿ ಮಾತ್ರ ಎಂಬುದು ಗೊತ್ತಿದೆ: ಜಗತ್ತಿನ ಜನತೆ, ೯೯ ವರ್ಷಗಳ ಸಾಧು ಗೋವುಗಳ ಬದುಕು ಹಾಗೂ ನಂತರದ ಒಂದು ವರ್ಷದ ಹುಲಿಯ ಬದುಕಿನ ನಡುವೆ ತುಯ್ದಾಡುತ್ತದೆ ಎಂಬುದು ಗೊತ್ತಿದೆ; ದೀರ್ಘ ಹಾಗೂ ನಿಸ್ಸಹಾಯಕ ಶರಣಾಗತಿಯ ನಂತರ ಅದು ಹಠಾತ್ತನೆ ಸಿಡಿದೆದ್ದು ನಿಲ್ಲುತ್ತದೆ. ಕ್ರೂರ ವ್ಯವಸ್ಥೆಯೊಂದನ್ನು ಹೊಡೆದುರುಳಿಸಿ ಮತ್ತೊಂದು ಕ್ರೂರವ್ಯವಸ್ಥೆಯನ್ನು ಕಟ್ಟಲು...." ಎಂಬುದು ಗೊತ್ತಿದೆ.

–ಲೋಹಿಯಾ(ಮ್ಯಾನ್‌ಕೈಂಡ್' ನವೆಂ.೧೯೫೫)

ಲೋಹಿಯಾ: ಒಂದು ಅಸಮರ್ಪಕ ಜೀವನ ಚರಿತ್ರೆ

■ ಎಸ್. ವೆಂಕಟರಾಂ

ಶ್ರೀ ಓಂಕಾರ ಶರದ್‌ರವರು ಬರೆದಿರುವ ರಾಮಮನೋಹರ ಲೋಹಿಯಾರವರ ಜೀವನ ಚರಿತ್ರೆಯನ್ನು* ತುಂಬಾ ನಿರೀಕ್ಷೆಯಿಂದಲೇ ಓದಲು ಎತ್ತಿಕೊಳ್ಳುತ್ತೇನೆ. ಲೋಹಿಯಾ ತಮ್ಮ ಕಾಲದ ಮಹತ್ವಪೂರ್ಣ ಭಾರತೀಯ ಮುಖಂಡರಲ್ಲೊಬ್ಬರು. ಒಂದು ಜೀವನವಿಡೀ ಕಾಲವನ್ನು ಅವರು ಗಂಭೀರ ಹಾಗೂ ನಿರಂತರ ರಾಜಕೀಯ ಚಟುವಟಿಕೆಯಲ್ಲಿ ಕಳೆದರಷ್ಟೇ ಅಲ್ಲ;ರಾಜಕೀಯ ಚಟುವಟಿಕೆಯ ಪುರುಷಾರ್ಥ ಹುಡುಕುವುದರಲ್ಲೂ ಮತ್ತು ಅದರ ಉದ್ದೇಶವನ್ನು ಸಂಸ್ಕರಿಸುವುದರಲ್ಲೂ ಅವರು ನಿಮಗ್ನರಾಗಿದ್ದರು. ಅವರ ಜೀವನ ಚರಿತ್ರೆ ಬರೆಯಲೆಳಸುವವರನ್ನು ಅವರು ಸೂಜಿಗಲ್ಲಿನಂತೆ ಆಕರ್ಷಿಸುತ್ತಾರೆ. ಆದರೆ ಅವರ ಮುಂದೆ ಜವಾಬ್ದಾರಿಯ ದೊಡ್ಡ ಸವಾಲನ್ನೂ ಒಡ್ಡುತ್ತಾರೆ.

ರಾಜಕೀಯ ಜೀವನ ಚರಿತ್ರೆಯನ್ನು ಬರೆಯಬಯಸುವ ವಿದ್ವಾಂಸರಿಗೆ ಲೋಹಿಯಾರವರ ವಿಷಯ ಸಮೃದ್ಧ ಹಾಗೂ ಬಹುಮುಖ ಜೀವನ ತುಂಬಾ ಆಕರ್ಷಕವಾದದ್ದು. ಅವರ ಬದುಕಿನ ಪೂರ್ವಾರ್ಧ ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟದ ಜೊತೆಗೂ, ಉತ್ತರಾರ್ಧ ಸಮಾಜವಾದಿ ಆಂದೋಳನದ ಜೊತೆಗೂ ಹಾಸು ಹೊಕ್ಕಾಗಿ ಹೆಣೆದುಕೊಂಡಿದೆ. ಒಂದು ಸಾಧಾರಣ ಮಾರವಾಡಿ ವ್ಯಾಪಾರಿ ಕುಟುಂಬದ ಈ ಚುರುಕು ಹುಡುಗ ತನ್ನ ಜೀವನದ ಕಡೆಯ ಇಪ್ಪತ್ತು-ಮುವ್ವತ್ತು ವರುಷಗಳ ಕಾಲದ ಅತ್ಯಂತ ಪ್ರವೃತ್ತ ಹಾಗೂ ಕ್ಷಾತ್ರಶೀಲ ಸಮಾಜವಾದಿಯಾಗಿ ರೂಪುಗೊಂಡದ್ದು ಹೇಗೆ? ಅವರು ಸತತವಾಗಿ

---

*ಇದು ಲೋಹಿಯಾ ಪ್ರಕಾಶನದಿಂದ ಕನ್ನಡದಲ್ಲೂ (ಅನುವಾದ: ಹಸನ್ ನಯೀಂ ಸುರಕೋಡ್) ಪ್ರಕಟವಾಗಿದೆ

ಅರಸುತ್ತಿದ್ದ ವಿಚಾರಗಳನ್ನು ಹಾಗೂ ಹುಡುಕುತ್ತಿದ್ದ ಕಾರ್ಯ ವಿಧಾನಗಳನ್ನು ರೂಪಿಸಿದ ಅವರ ಅಂತರಂಗದ ಮತ್ತು ಬಹಿರಂಗದ ಶಕ್ತಿಗಳು ಯಾವುವು? ಮೊದ ಮೊದಲು ಪ್ರಖ್ಯಾತರಾದ ಸೋಷಲಿಸ್ಟ್ ನಾಯಕರಲ್ಲಿ ಬಹುಮಂದಿ ಪರಾನ್ಮುಖರಾದರೂ ಅಥವಾ ರಂಗದಿಂದ ನಿರ್ಗಮಿಸಿದರೂ ಇವರು ಮಾತ್ರ ಕಡೆ ಉಸಿರಿರುವ ತನಕ ಹೋರಾಟದ ಕಣ ಬಿಡದ ಮರ್ಮವೇನು? ಇಂಥ ಮುಖ್ಯ ಪ್ರಶ್ನೆಗಳಿಗೆ ಉತ್ತರಿಸದೆ ಲೋಹಿಯಾರವರ ಜೀವನ ಚರಿತ್ರೆ ಪೂರ್ಣವಾಗಲಾರದು.

ಲೋಹಿಯಾರವರ ಜೀವನ ಚರಿತ್ರೆಕಾರರ ಮುಂದೆ ಎರಡು ಬೃಹದಾಕಾರದ ಕಷ್ಟಗಳು ಎದುರಾಗುತ್ತವೆ. ಅವರ ಜೀವನ ಚರಿತ್ರೆ, ಅವರ ಬಿಡುವು ಕಾಣದ ರಾಜಕೀಯ ಚಟುವಟಿಕೆಗಳ ದಾಖಲೆಯಾಗಿರಬೇಕು; ಮಾತ್ರವಲ್ಲದೇ, ಅವರ ಪ್ರಧಾನ ವಿಚಾರಗಳ ಪ್ರತಿಪಾದನೆಯೂ ಅಗಿರಬೇಕು. ಆದರೆ, ಲೋಹಿಯಾ ತಮ್ಮ ಜೀವನದ ಆರಂಭ ದೆಸೆ ಹಾಗೂ ಕುಟುಂಬದ ಹಿನ್ನೆಲೆ ಬಗ್ಗೆ ಸರ್ವೇ ಸಾಮಾನ್ಯವಗಿ ಮೌನವಾಗಿರುತ್ತಿದ್ದರು. ಅವರ ಜೀವನದ ಅನಂತರದ ಕಾಲದಲ್ಲೂ ಅವರೇನೂ ಕ್ರಮಬದ್ಧ ದಾಖಲೆಗಳನ್ನು ಇಡುತ್ತಿರಲಿಲ್ಲ. ಆದುದರಿಂದ ಅವರ ಜೀವನ ಕಾಲದ ವಿವಿಧ ಚಟುವಟಿಕೆಗಳ ವರದಿಗಳನ್ನೂ ಸಮಗ್ರೀಕರಿಸುವುದು ಕಷ್ಟವೇ ಸರಿ. ಅಲ್ಲದೇ, ಅವರ ಜೀವನದ ಪ್ರಾರಂಭಿಕ ದಿನಗಳ ಬಗ್ಗೆ ಬೆಳಕು ಚೆಲ್ಲಬಹುದಾಗಿದ್ದ ಅವರ ತಲೆಮಾರಿನ ಜನ ಒಬ್ಬೊಬ್ಬರಾಗಿ ಇಲ್ಲವಾಗುತ್ತಿದ್ದಾರೆ. ಈಗಾಗಲೇ ಬಾಲಕೃಷ್ಣ ಗುಪ್ತ ಇಲ್ಲ.

ಇನ್ನೊಂದು ಕಷ್ಟ ಕೂಡಾ ಇದೆ. ಲೋಹಿಯಾರವರು ವಿಚಾರಧಾರೆಗಳನ್ನು ಮಂಡಿಸಲು ಅಥವಾ ಖಂಡಿಸಲು ಅಪಾರವಾಗಿ ಬರೆದರೂ ಕೂಡಾ, ಆ ವಿಚಾರಧಾರೆಗಳ ಸ್ರೋತಗಳನ್ನು ಸೂಚಿಸಿದ್ದು ವಿರಳ. ಏಕೆಂದರೆ, ವಿಚಾರಗಳ ಅನ್ವೇಷಣೆ ಯಾವೊಂದು ವ್ಯಕ್ತಿಯ ಮೇಲೂ ಕೇಂದ್ರೀಕರಣ ಆಗಿರಬಾರದೆಂಬುದು ಅವರ ನಂಬುಗೆಯಾಗಿತ್ತು. ಮಾರ್ಕ್ಸನು ತನ್ನ ದಾರ್ಶನಿಕ ದಾರ್ಶನಿಕ ವಿಚಾರಧಾರೆಯನ್ನು ಜರ್ಮನಿಯಿಂದಲೂ, ಆರ್ಥಿಕ ವಿಚಾರಧಾರೆಯನ್ನು ಇಂಗ್ಲೆಂಡಿನಿಂದಲೂ, ಸಮಾಜವಾದಿ ವಿಚಾರಧಾರೆಯನ್ನು ಫ್ರಾನ್ಸಿನಿಂದಲೂ ಪಡೆದು ತನ್ನ ಸಿದ್ಧಾಂತಗಳನ್ನು ಸಂಶ್ಲೇಸಿದನೆಂಬುದು ಸುವಿದಿತ. ಆದುದರಿಂದ ಮಾರ್ಕ್ಸಿನ ಸಿದ್ಧಾಂತಗಳಲ್ಲಿ ಈ ಬೇರೆ ಬೇರೆ ಎಳೆಗಳನ್ನು ಗುರುತಿಸಿ ಅವುಗಳ ರೂಪಾಂತರಣವನ್ನು ಗಮನಿಸುವುದು ಸಾಧ್ಯ. ಆದರೆ ಲೋಹಿಯಾರವರ ಜೀವನ ಚರಿತ್ರಕಾರನಿಗೆ ಒಂದು ಗುರುತರವಾದ ಅರ್ಹತೆಯೂ ಅತಿ ಅಗತ್ಯ- ಆತನು ಲೋಹಿಯಾ ವಿಚಾರಧಾರೆಯ ಪೂರ್ವೋತ್ತರವನ್ನು ತಿಳಿದವನಾಗಿರಬೇಕು. ಅವರ ಬರೆಹಗಳಲ್ಲಿ-ಅಲ್ಲಲ್ಲಿ ಕೆಲ ಹೆಸರುಗಳನ್ನು ಮಾತ್ರ ನಾವು ಹೇಳಬೇಕೆಂದರೆ-ಜೈನ ದಾರ್ಶನಿಕರು, ಟ್ರಾಟ್ಸ್ಕಿ, ಜಿಲಾಸ್, ರಸೆಲ್, ಹೆಗಲ್, ರೋಸ್ಲಾ, ಟಿ.ಎಸ್.ಎಲಿಯಟ್, ಸ್ಕಾಟ್ ಬಿಕನಾನ್,

ಉಬಸ್ವೇ, ವೆಬರ್, ಸ್ಪೆಗ್ಲಂರ್, ಮವ್ರೋ, ಶಂಕರ ಹಾಗೂ ಸ್ವಾಭಾವಿಕವಾಗಿಯೇ ಮಾರ್ಕ್ಸ್ ಮತ್ತು ಗಾಂಧಿಯವರ ಅಭಿಪ್ರಾಯಗಳು ಎದುರಾಗುತ್ತವೆ. ಇವರನ್ನು ಹಾಗೂ ಇತರರನ್ನು ಕೆಲವು ಬಾರಿ ಅವರು ಹೆಸರಿಸುತ್ತಿದ್ದರು.;ಅನೇಕ ಬಾರಿ ಇಲ್ಲ. ತಾವು ಪರಿಶೀಲಿಸುತ್ತಿದ್ದ ವಿಚಾರ ಕರ್ತೃಗಳನ್ನು ಹೆಸರಿಸಬೇಕೆಂಬ ನಿಯಮವೇನೂ ಇಲ್ಲದೆ, ವಿಚಾರಗಳನ್ನು ಕೈಗೆತ್ತಿಕೊಂಡು ಅವುಗಳನ್ನು ಅನುಮೋದಿಸಿ, ವಿರೋಧಿಸಿ, ಸಂಶೋಧಿಸಿ ಚರ್ಚಿಸುತ್ತಿದ್ದುದು ಲೋಹಿಯಾರವರ ಶೈಲಿ.

ಮುಖ್ಯ ಅಂಶ ಇದು: ಕಮ್ಯೂನಿಸ್ಟ್ ಹಾಗೂ ಸಮಾಜವಾದಿ ಪ್ರಜಾತಂತ್ರ– ಈ ಎರಡೂ ಸಿದ್ಧಾಂತಗಳು ಮುಗ್ಗರಿಸಿ ಹಳೇ ಜಗತ್ತು ಸತ್ತು ಬಿದ್ದಿದ್ದಾಗ, ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ಮಾನವನ ಧರ್ಮಸಂಕಟವನ್ನು ಮೂಲಭೂತ ರೀತಿಯಲ್ಲಿ ಗುರುತಿಸಿ ಆವಿಷ್ಕರಿಸುವುದರಲ್ಲಿ ತೊಡಗಿದ ಸಂವೇದನಾಶೀಲ ಧೀಮಂತರಾಗಿದ್ದರು ಲೋಹಿಯಾ. ತಾವಿದ್ದ ಜಗತ್ತಿನ ಭೂಭಾಗದಲ್ಲಿನ ಜನತೆಯ ಹೋರಾಟಗಳಲ್ಲಿ ಪಾಲ್ಗೊಳ್ಳುವುದರ ಜೊತೆ ಜೊತೆಗೇ ಇದನ್ನು ಅವರು ಮಾಡಿದುದು ಮಹತ್ವಪೂರ್ಣವದ ವಿಷಯ. ಆವರು ಶ್ರಮಿಸಿದ್ದು ಕೇವಲ ರಾಜಕೀಯ ಕಾರ್ಯಕ್ರಮ ಕಡೆಯುವುದಕ್ಕಷ್ಟೇ ಅಲ್ಲ, ಒಂದು ಜೀವನ ದರ್ಶನವನ್ನು ರೂಪಿಸಲು ಕೂಡಾ. ದ್ವಂದ್ವಮಾನ ಭೌತವಾದವನ್ನು ದರ್ಶನಶಾಸ್ತ್ರದ ದೃಷ್ಟಿಯಿಂದ, ವರ್ಗ ಸಂಘರ್ಷವನ್ನು ಸಮಾಜಶಾಸ್ತ್ರದ ದೃಷ್ಟಿಯಿಂದ, ಸಾಹಿತ್ಯ, ಕಲೆ, ಸಂಸ್ಕೃತಿ ಕ್ಷೇತ್ರದ ಕೆಲವು ಪ್ರಸಕ್ತ ವಿಚಾರಗಳನ್ನು ಸೌಂದರ್ಯಶಾಸ್ತ್ರದ ದೃಷ್ಟಿಯಿಂದ ಅವರು ಪ್ರಶ್ನಿಸಿ ವಿಮರ್ಶಿಸಿದರು. ರಾಜಕೀಯದಲ್ಲಿ ಎಷ್ಟೇ ಪ್ರಮುಖರಾಗಿದ್ದರೂ, ಇತರ ಸಮಾಜವಾದಿಗಳಿಗೂ ಲೋಹಿಯಾರವರಿಗೂ ಇರುವ ಮುಖ್ಯ ಅಂತರ ಇದೇ. ಅಂತೆಯೇ ಸಮಾಜವಾದಿ ಚಳುವಳಿಯಲ್ಲಿ ತಮ್ಮ ವಿಶಿಷ್ಟ ಮುದ್ರೆಯೊಂದನ್ನು ಅವರು ಬಿಟ್ಟು ಹೋಗಿದ್ದಾರೆ. ಈ ಬೆಳಕಿನಲ್ಲಿ ಲೋಹಿಯಾರವರ ವಿಚಾರಧಾರೆಯನ್ನು ವಿಮರ್ಶೆಗೊಳಪಡಿಸಿ ಮಂಡಿಸಬೇಕು. ಅದಕ್ಕೆ ಲೋಹಿಯಾರ ಜೀವನ ಚರಿತ್ರೆಕಾರ ಅವರ ಮನೋಸೂಕ್ಷ್ಮಗಳನ್ನು ಅರಿತವನಾಗಿರಬೇಕು. ಅಲ್ಲದೇ ಲೋಹಿಯಾ ತುಂಬಾ ಕಳಕಳಿಯ ವ್ಯಕ್ತಿ;ಸಂಭಾಷಣೆಯಲ್ಲಿ ಕಲೆಗಾರ;ತನ್ನ ಧ್ಯೇಯಗಳಲ್ಲಿ ಸದಾ ಪ್ರವೃತ್ತ;ಬಹುಬಾರಿ ಅವರ ವಿಚಾರಧಾರೆಯಲ್ಲಿ ಮೂಲಭೂತ ವಿಷಯಗಳು ಮಿಂಚುತ್ತಿದ್ದವು;ಟೀಕೆಯಲ್ಲಿ ನಿರ್ದಯಿ;ವಿವಾದಾತ್ಮಕ ಬರೆಹದಲ್ಲಿ ಅಸಮಾನ ತೀಕ್ಷ್ಣಮತಿ;ಸಂಘಟನೆಯ ವಿಷಯಗಳಲ್ಲಿ ಅವರ ಲೋಪಗಳು ಇಲ್ಲದಿರಲಿಲ್ಲ. ಮಹಾತ್ಮ ಗಾಂಧಿ ಹಾಗೂ ಅವರ ನಡುವೆ ಇದ್ದ ವಾತ್ಸಲ್ಯ ಮತ್ತು ಅವರ ಮೇಲೆ ಗಾಂಧೀಜಿಯ ಪ್ರಭಾವ ಇವುಗಳನ್ನು ಕೂಡಾ ಅವರ ಜೀವನ ಚರಿತ್ರೆಯಲ್ಲಿ ವಿಮರ್ಶಾತ್ಮಕವಾಗಿ ಪರಿಶೀಲಿಸಬೇಕಾಗುತ್ತದೆ.

ಈ ದೃಷ್ಟಿಯಿಂದ ನೋಡಿದ್ದೇ ಆದರೆ ಶ್ರೀ ಓಂಕಾರ ಶರದ್ ಅವರು ಬರೆದ ಲೋಹಿಯಾರವರ ಜೀವನ ಚರಿತ್ರೆ ತುಂಬಾ ನಿರಾಶಾದಾಯಕವಾಗಿದೆ. ಅವರು ಲೋಹಿಯಾರವರ ಬಗ್ಗೆ ಸರ್ವೇಸಾಮಾನ್ಯವಾಗಿ ದೊರೆಯುವ ಮಾಹಿತಿಯನ್ನು

ಬರೇ ಸಂಗ್ರಹಿಸಿ ಜೋಡಿಸಿದ್ದಾರೆ. ಇಡೀ ಪುಸ್ತಕ ಲೋಹಿಯಾರವರ ಜೀವನ ಮತ್ತು ಚಟುವಟಿಕೆಗಳ ಬಗ್ಗೆ ಬರೆದುಕೊಂಡ ಒಂದು ಪೂರ್ವಭಾವಿ ಟಿಪ್ಪಣಿಯಂತಿದೆ. ಸಿಗಬಹುದಾಗಿದ್ದ ಎಲ್ಲ ಮಾಹಿತಿಯನ್ನು ಕೂಡಾ ಅವರು ಸಂಗ್ರಹಿಸಿಲ್ಲ. ಅಥವಾ ಕಾಣಬೇಕಾಗಿದ್ದವರೆನ್ನೆಲ್ಲ ಕಂಡು ಮಾತನಾಡಿಯೂ ಇಲ್ಲ. ಸಂಗ್ರಹಿಸಿದ ಮಾಹಿತಿ ಜೋಡಿಸುವುದರಲ್ಲಿಯೂ ಕೂಡಾ ಅವರ ಲೇಖನ ಕೌಶಲ್ಯ ತೋರಿಸಿಲ್ಲ. ಇಷ್ಟೇ ವಸ್ತುವನ್ನು ಒಳಗೊಂಡೂ ಈ ಪುಸ್ತಕದ ಕನಿಷ್ಟ ಮೂರರಲ್ಲೊಂದು ಭಾಗವನ್ನು ಕಡಿಮೆ ಮಾಡಬಹುದಿತ್ತು.

ಶ್ರೀ ಶರದ್ ಅವರಿಗೆ, ಜೀವನ ಚರಿತ್ರಕಾರನೊಬ್ಬನಿಗೆ ತನ್ನ ಕಥಾ ನಾಯಕನ ಬಗ್ಗೆ ಇರಬಹುದಾದ ಸ್ವಾಭಾವಿಕ ಅಭಿಮಾನ ಮತ್ತು ಹಾಸ್ಯಾಸ್ಪದವಾಗಿ ಕಾಣಬಹುದಾದ ಹೊಗಳು ಭಟ್ಟನ ವಾಗಾಂಡಂಬರಗಳಿಗೆ ವ್ಯತ್ಯಾಸ ತಿಳಿಯದು. ವಿಷಯದ ಬಗ್ಗೆ ಪ್ರೌಢ ಹಾಗೂ ವಿಮರ್ಶಾತ್ಮಕವಾದ ದೃಷ್ಟಿಕೋನವಿಲ್ಲದ ಕಾರಣ, ವಿಚಾರಗಳ ಜಗತ್ತಿನಲ್ಲಿ ಅವರು ಆಗಂತುಕರಂತೆ ಕಾಣುತ್ತಾರೆ. ಪುಸ್ತಕದ ಆರಂಭದಲ್ಲಿಯೇ ತಮ್ಮ ಈ ಮುಂದಿನ ಅಣಿಮುತ್ತುಗಳಿಂದ ಓದುಗರಿಗೆ ದಿಗ್ಭ್ರಮೆ ಹಿಡಿಸುತ್ತಾರೆ: "ಆ ಕಾಲದಲ್ಲಿ ಜನರು ಪಾಪ ಪುಣ್ಯಗಳಿಗೆ ತುಂಬಾ ಮಹತ್ವ ಕೊಡುತ್ತಿದ್ದರು. ನಿಜವೇ, ಒಬ್ಬ ಬ್ರಾಹ್ಮಣ ಮೃತನಾಗಿದ್ದ. ಲೋಹಿಯಾ ಕುಟುಂಬಕ್ಕೆ ಇದರಿಂದ ತುಂಬಾ ಗಾಬರಿಯಾಯಿತು. ಒಂದು ಪ್ರಾಣಾಂತಿಕ ಭಯ ಅದನ್ನು ಆವರಿಸಿತ್ತು. ಈ ಭಯ ಸಂಪೂರ್ಣವಾಗಿ ಸ್ವಾಭಾವಿಕವಾಗಿತ್ತು. ತನ್ನನ್ನು ತಾನೇ ಕೊಂದುಕೊಂಡು ಬ್ರಾಹ್ಮಣನು ಬ್ರಹ್ಮನಾಗಿದ್ದನೆಂದೂ, ಈ ಬ್ರಹ್ಮದ ಶಾಪ ಲೋಹಿಯಾ ಕುಟುಂಬಕ್ಕೆ ತಗುಲಿತ್ತೆಂದೂ ಜನ ಹೇಳಿದರು. ಈ ಶಾಪದ ಮಹಿಮೆ ಬೇಗನೆ ಕಾಣತೊಡಗಿತು. ಬರೇ ಅವಿಶ್ವಾಸ ಕೆಲಸಕ್ಕೆ ಬರಲಿಲ್ಲ. ಮುಂದೆ ನಡೆದ ಘಟನೆಗಳು ನಿಸ್ಸಂಶಯವಾಗಿ ವಿಲಕ್ಷಣವೂ ಅನಿರೀಕ್ಷಿತವೂ ಆಗಿದ್ದವು. ಮನಸುಖರಾಂ ಅವರಿಗೆ ನಾಲ್ವರು ಗಂಡು ಮಕ್ಕಳು: ಗೋಪಿಲಾಲ್, ಕಿಷನ್ ಲಾಲ್, ಶಿವನಾರಾಯಣ ಮತ್ತು ವಿಷ್ಣು ದಯಾಳ್. ಈ ಬಡಪಾಯಿಗಳು ಶಾಪದ ಫಲಗಳನ್ನು ತಮ್ಮ ಕಣ್ಣಾರೆ ಕಂಡರು."(ಪುಟ: ೨೨,೨೩) ಲೋಹಿಯಾರವರ ಜೀವನ ಚರಿತ್ರೆಯಲ್ಲಿ ಇಂತಹ ಅವಿಚಾರಿ ಹರಟೆ ಅನಪೇಕ್ಷಣೀಯ. ವಿಮರ್ಶಾತ್ಮಕ ಮತ್ತು ವಿದ್ವತ್ಪೂರ್ಣ ದೃಷ್ಟಿಕೋನ ಹಾಗೂ ಅದಕ್ಕೆ ಅನುರೂಪವಾದ ಸಂಯಮಶೀಲವಾದ ಗದ್ಯ ಇಲ್ಲದ್ದನ್ನು ವಾಗಾಡಂಬರದಿಂದ ಮುಚ್ಚಲು ಯತ್ನಿಸಲಾಗಿದೆ. ಉದಾ: "ಲೋಹಿಯಾರವರಿಗೆ ಬುದ್ಧನ ಅನುಕಂಪವಿತ್ತು, ಮಹಮ್ಮದನ ಪ್ರೇಮವಿತ್ತು, ಶಂಕರನ ಕ್ರೋಧವಿತ್ತು."(ಪು: ೯) ಹೀಗಾದರೆ, ಸ್ಟಾಲಿನ್ನರ ಅಧಿಕೃತ ಜೀವನ ಚರಿತ್ರೆಕಾರರನ್ನು ಮೂದಲಿಸುವುದಾದರೂ ಏಕೆ?

ಇಂಗ್ಲಿಷ್ ಭಾಷೆಯ ವಾಕ್ಯ ರಚನಾ ಕ್ರಮದಲ್ಲಿ ಅನುವಾದಕರೂ ಆಗಿರುವ ಲೇಖಕರು ವಹಿಸುವ ಸ್ವಾತಂತ್ರ್ಯ ಹಾಗೂ ಹಿಂದಿ ವಾಕ್ಯಗಳನ್ನು ಶಬ್ದಶಃ ಇಂಗ್ಲಿಷಿಗೆ ತರ್ಜುಮೆ ಮಾಡುವ ಅವರ ಅಭ್ಯಾಸ ಕೆಲವು ವಿನೋದಕರ ಪರಿಣಾಮಗಳಿಗೆ ಎಡೆ

ಕೊಟ್ಟಿದೆ. ಉದಾ: "ಲೋಹಿಯಾ ಒಂದು ಪೂರಾ ವಾರ ಅವರ ಮಿತ್ರನ ತಾಯಿಯ ಕಾಯಿಲೆ ವಾಸಿಯಾಗದೇ ಇರುವ ತನಕ ಥಾಕ್ಕಾದಲ್ಲಿ ಇದ್ದರು"(ಪು: ೬೦) ಇನ್ನೊಂದು: "ಹೀರಾಲಾಲ್ ಲೋಹಿಯಾರಂತೆ ಕಲ್ಕತ್ತಾದ ಸಾರ್ವಜನಿಕರಲ್ಲಿ ಸಮಾನ ಜನಪ್ರಿಯತೆ ಗಳಿಸಿದವರು ಯಾರೂ ಇರಲಿಲ್ಲ. ಕಾರಣವೇನೆಂದರೆ, ಅವರ **ಜಗಳಗಂಟ ಸ್ವಭಾವ**(ಪು: ೧೪೬). ಹೀಗೇ ಹಲವಾರು ಉದಾಹರಣೆಗಳು! ಇನ್ನು ಲೇಖಕರಿಗೆ ಅಪ್ಟನ್ ಸಿಂಕ್ಲೇರ್ ಅವರ ಹೆಸರಿನ ಕಾಗುಣಿತ ತಿಳಿಯದು. ಉಲ್ಲೇಖಗಳು ಕೂಡಾ ತಪ್ಪು ತಪ್ಪು. ಮುದ್ರಾ ರಾಕ್ಷಸ ತಾನೇ ತಾನಾಗಿ ಮೆರೆದಿದ್ದಾನೆ. ವಿಚಾರವಂತ ಲೋಹಿಯಾರ ಬಗ್ಗೆ ಚರ್ಚೆಯೇ ಇಲ್ಲ. ಮಾರ್ಕ್ಸ್‌ನನ್ನು ನಾಲ್ಕಾರು ವಾಕ್ಯಗಳಲ್ಲಿ ಮುಗಿಸಿದ್ದಾರೆ. ಲೆನಿನ್ ಮತ್ತು ಹೆಗಲ್ಲರ ಹೆಸರುಗಳ ಉಲ್ಲೇಖವೇ ಇಲ್ಲ!

ಲೋಹಿಯಾರವರ ಯುವಜೀವನದ ಅತ್ಯಂತ ನಿರ್ಣಾಯಕ ಕಾಲ ಅವರು ಜರ್ಮನಿಯಲ್ಲಿ ಕಳೆದ ಕೆಲವು ವರ್ಷಗಳು. ಅಲ್ಲಿ ಅವರು ಯಾವ ಪ್ರಭಾವಗಳಿಗೆ ಒಳಗಾದರೆಂಬ ವಿಷಯದ ಚರ್ಚೆಯೇ ಇಲ್ಲ. ಲೋಹಿಯಾರವರೇ ಇದನ್ನು ಕುರಿತು ತಮ್ಮ ಪುಸ್ತಕವೊಂದರಲ್ಲಿ ಸೂಚ್ಯವಾಗಿ ತಿಳಿಸಿದ್ದಾರಲ್ಲವೇ? ಇದರ ಬಗ್ಗೆ ಬರೆಯಬೇಕಿದ್ದರೆ, ಅಂದಿನ ಜರ್ಮನನಿ, ಅದರಲ್ಲೂ ಬರ್ಲಿನ್ ಮತ್ತು ಅದರ ವಿಶ್ವವಿದ್ಯಾಲಯದ ಸ್ಥಿತಿಗತಿ ಕುರಿತು ಅಧ್ಯಯನ ಮಾಡಬೇಕಾಗುತ್ತಿತ್ತು. ಲೋಹಿಯಾರವರ ಮಹತ್ವಪೂರ್ಣ ವಿಚಾರಗಳಾದ ಪ್ರಸಕ್ತ ನಾಗರೀಕತೆಯ ಅಸಂಬದ್ಧತೆ, ವರ್ಣ-ವರ್ಗದ ಪದರೀಕರಣ, ಸಮಾನತೆ, ಬಹು ಕಾರಣವಾದ, ಅದ್ವೈತ ಮತ್ತು ಗಾಂಧಿ-ಮಾರ್ಕ್ಸ್ ದ್ವಂದ್ವ ಇವುಗಳನ್ನು ಶ್ರೀ ಶರದ್ ತಪ್ಪಿ ಕೂಡಾ ಮುಟ್ಟಿಲ್ಲ. ವಿಚಾರವಂತ ವ್ಯಕ್ತಿಯೊಬ್ಬನ, ಆದರೆ ವಿಚಾರಗಳಿಗೆ ಸ್ಥಾನವೇ ಇಲ್ಲದ ಜೀವನ ಚರಿತ್ರೆ ಇದು. ವಿಚಾರಗಳನ್ನು ಅವುಗಳ ಇತಿಹಾಸದ ಹಿನ್ನೆಲೆಯಲ್ಲಿ ಚರ್ಚಿಸಿಲ್ಲವಾದ ಕಾರಣ, ವಿಚಾರವಾದಿಯಾದ ಲೋಹಿಯಾ ಪ್ರವಾದಿಯಾಗಿ ಕಾಣುತ್ತಾರೆ!

ಎಷ್ಟೇ ಒಲ್ಲದ ಮನಸ್ಸಿನಿಂದಲೇ ಆದರೂ ಲೋಹಿಯಾ ಅವರ ಜೀವನ ಚರಿತ್ರೆ ಶ್ರೀ ಓಂಕಾರ ಶರದ್ ಅವರ ಸಾಮರ್ಥ್ಯದ ತೆಕ್ಕೆಗೆ ಒಗ್ಗದ ವಸ್ತು ಎಂಬ ನಿರ್ಣಯಕ್ಕೆ ಬರಲೇ ಬೇಕಾಗುತ್ತದೆ. ಈ ಜೀವನ ಚರಿತ್ರೆಯ ಹಿಂದಿ ಅವತರಣಿಕೆಯ ಕೆಲ ಪುಟಗಳನ್ನೋದಿದ ನಂತರ ಲೋಹಿಯಾರವರೇ ಈ ರೀತಿಯ ಹಿತವಚನ ನೀಡಿದ್ದರಂತೆ: "ನೀವು ಬಳಸಿರುವ ಶೈಲಿ ಇಂಗ್ಲಿಷ್‌ಗೆ ಅನುವಾದ ಮಾಡಲಾಗದಂತಹುದು. ಇಂಗ್ಲಿಷ್ ಭಾಷೆಯಲ್ಲಿ ಅದನ್ನು ನಿಜವಾಗಿ ಅಭಿವ್ಯಕ್ತಗೊಳಿಸಲಾಗದು. ನಿಜ, ಅದನ್ನು ಇಂಗ್ಲಿಷಿನಲ್ಲಿ ಹೊಸದಾಗಿ ಬರೆಯಬಹುದು. ನೀವೇ ಇಂಗ್ಲಿಷ್ ಅವತರಣಿಕೆಗೆ ಪ್ರಯತ್ನಿಸಬೇಕು. ಆಗ ಏನಾದರೂ ನಿಮಗೆ ಸ್ವಲ್ಪ ಯಶಸ್ಸು ದೊರಕೀತು"(ಪುಸ್ತಕದ ಹೊದಿಕೆ ಮೇಲಿನ ಬೊಗಳೆಯಿಂದ). ಇದರಲ್ಲಿ ಲೇಖಕರು ಲೋಹಿಯಾರ 'ಹಿತವಚನ'ದಲ್ಲಿನ ವ್ಯಂಗ್ಯವನ್ನು ಗಮನಿಸಿಲ್ಲ, ಅವರ ಬುದ್ಧಿವಾದವನ್ನೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಈ ಸಂದರ್ಭದಲ್ಲಿ

ಅಸಾಧಾರಣ ರಾಜಕೀಯ ಜೀವನ ಚರಿತ್ರೆಕಾರರಾದ ಮೆಹರಿಂಗ್, ಬರ್ಟ್ರಾಂ ವುಲ್ಫ್, ಇಸಾಕ್ ಡ್ಯೂಷರ್ ಅಂಥವರ ನೆನಪು ಬರುವುದು ಸಹಜ.

ಪುಸ್ತಕ ವಿಮರ್ಶಕನ ಕರ್ತವ್ಯದ ಆಚೆಗೆ ಹೋಗಿ ಒಂದು ಮಾತು ಹೇಳುವುದಾಗಲೀ, ಅನೇಕ ಸಮರ್ಥರ ಪೈಕಿ ಕೆಲವರನ್ನು ಮಾತ್ರವೇ ಹೆಸರಿಸುವುದಾಗಲೀ ಕ್ಷಮ್ಯವಾದರೆ, ನಾವು('ಮ್ಯಾನ್‌ಕೈಂಡ್' ಸಂಪಾದಕ ಮಂಡಳಿಯ ಪರವಾಗಿ?) ಈ ಒಂದು ನಮ್ರ ಸಲಹೆ ಮಾಡಬಯಸುತ್ತೇವೆ: ವಿ.ಡಿ.ಎನ್.ಸಾಹಿ, ಡಾ॥ ಯು.ಆರ್.ಅನಂತಮೂರ್ತಿ, ಮಧು ಲಿಮಯೆ, ಪ್ರೊ॥ ರಮಾ ಮಿತ್ರ, ಕೃಷ್ಣನಾಥ್, ಕಿಷನ್ ಪಟ್ನಾಯಕ್, ಓಂ ಪ್ರಕಾಶ್ ದೀಪಕ್, ಕಮಲೇಶ್, ರಾಮಕೃಷ್ಣನ್ ಮತ್ತು ಇನ್ನಿತರರು ಕಲೆತು ಚರ್ಚಿಸಿ ಲೋಹಿಯಾ ಅವರ ಜೀವನಕ್ಕೆ ಅನುರೂಪವಾದ ಒಂದು ಜೀವನ ಚರಿತ್ರೆಯ ಯೋಜನೆ ನಿರ್ಮಿಸಿ ಕಾರ್ಯಗತಗೊಳಿಸಬೇಕು.

(ಸೋಷಲಿಸ್ಟ್ ಪಾರ್ಟಿ(ಕರ್ನಾಟಕ)ಯ ರಾಜ್ಯ ಸಮ್ಮೇಳನ–೧೯೭೩ರ ಸ್ಮರಣ ಸಂಚಿಕೆಯಿಂದ)

■

"ವಿಶ್ವ ಸಂಸತ್ತಿನಲ್ಲಿ ಎರಡು ಮನೆಗಳಿಗೆ ಅವಕಾಶವಿರಬೇಕು. ಮೇಲ್ಮನೆಯಲ್ಲಿ ಜನಸಂಖ್ಯೆಯನ್ನು ಲೆಕ್ಕಕ್ಕೆಟ್ಟುಕೊಳ್ಳದೆ, ಪ್ರತಿರಾಷ್ಟ್ರಕ್ಕೂ ಸಮಾನ ಪ್ರಾತಿನಿಧ್ಯವಿರಬೇಕು. ಕೆಳಮನೆಯಲ್ಲಿ ಪ್ರಾದೇಶಿಕ ಮಹತ್ವಕ್ಕನುಸಾರವಾಗಿ ವಯಸ್ಕ ಮತದಾನದ ಆಧಾರದ ಮೇಲೆ ಪ್ರತಿನಿಧಿಗಳ ಸಂಖ್ಯೆ ಮತ್ತು ಆಯ್ಕೆಯನ್ನು ನಿರ್ಧರಿಸಬೇಕು. ಇಂಥ ಸಂಸ್ಥೆಯೊಂದು ರಚಿತವಾಗುವುದಾದರೆ ಅದು ಕೇವಲ ಅಂತಾರಾಷ್ಟ್ರೀಯ ಜಗಳಗಳ ಪರಿಹಾರದ ವೇದಿಕಯಾಗದೆ, ಮಾನವ ಜನಾಂಗದ ಆತ್ಮಸಾಕ್ಷಿಯ ಸಂರಕ್ಷಕನೂ ಆದೀತು. ಆ ಮೂಲಕ ಅದು ದೇಶಗಳ ಮೇಲೆ ನೈತಿಕ ಅಧಿಕಾರ ಪ್ರಭಾವವನ್ನು ಚಲಾಯಿಸಬಲ್ಲ ಒಂದು ಜಾಗತಿಕ ಬಲ ಅಥವಾ ಜಾಗತಿಕ ಅಭಿವೃದ್ಧಿ ಪ್ರಾಧಿಕಾರಕ್ಕೂ ಕಾರಣವಾದೀತು.

ಸೀಮಿತ ಅಧಿಕಾರಗಳುಳ್ಳ ಇಂಥ ಸಂಸ್ಥೆಯೊಂದರ ರಚನೆಗಾಗಿ ಜಗತ್ತಿನ ನಾಗರಿಕ ಲೋಕ ತಂತಮ್ಮ ರಾಷ್ಟ್ರೀಯ ಸರ್ಕಾರಗಳನ್ನು ಧಿಕ್ಕರಿಸಲೂ ಸಿದ್ಧವಾಗುವಂತಹ ದಿನಕ್ಕಾಗಿ ನಾವೆಲ್ಲಾ ಕಾಯಬೇಕು.

–ಲೋಹಿಯಾ(ಮ್ಯಾನ್ ಕೈಂಡ್, ನವೆಂಬರ್–೧೯೫೬)

'ಸಣ್ಣ ಘಟಕ ಯಂತ್ರ': ಲೋಹಿಯಾ ಕಲ್ಪನೆ

■ ಎಂ. ಆರ್ಮುಗಂ

ಬಂಡವಾಳಶಾಹಿ ಅರ್ಥವ್ಯವಸ್ಥೆಗಳಲ್ಲಿ, ಅರ್ಥವ್ಯವಸ್ಥೆಗಳನ್ನು ಸರ್ಕಾರೀ ನಿಯಮೀಕರಣಕ್ಕೆ ಒಳಪಡಿಸುವ ಪ್ರಕ್ರಿಯೆ ೧೯೩೦ರ ದಶಕದ ಆರ್ಥಿಕ ಹಿಂಜರಿತದ ದಿನಗಳ ನಂತರ ವ್ಯಾಪಕವಾಗಿ ಜಾರಿಗೆ ಬಂತು. ಎರಡನೇ ಮಹಾಯುದ್ಧದ ಮುಕ್ತಾಯದೊಂದಿಗೆ ಆರಂಭವಾದ ಅವಧಿಯಲ್ಲಿ ಹೊಸದಾಗಿ ವಿಮೋಚನೆಗೊಂಡ ದೇಶಗಳ ನೀತಿ ನಿರೂಪಣೆಯ ಮೇಲೆ ಇದು ಉಂಟು ಮಾಡಿದ ಪ್ರಭಾವ ವ್ಯಾವಹಾರಿಕವಾಗಿ ರಚನಾತ್ಮಕವಾದದ್ದೆಂದು ಪರಿಗಣಿಸಲಾಗಿದೆ.

ಉದಾಹರಣೆಗೆ, ಇಂಡಿಯಾದಲ್ಲಿ ಇದನ್ನು ನೆಹರೂ ೧೯೪೪ರಲ್ಲಿ, ಬಂಡವಾಳವಾದ ಹಾಗೂ ಕಮ್ಯೂನಿಸ್ಟ್ ಅಥವಾ ಸಮಾಜವಾದಿ ಸಿದ್ಧಾಂತಗಳ ನಡುವಣ ಘರ್ಷಣೆಯ ಹಿನ್ನೆಲೆಯಲ್ಲಿ "ಒಂದು ಸುವರ್ಣ ಮಧ್ಯಮ ಮಾರ್ಗ" ಅಂತ ವರ್ಣಿಸಿದರು. ಅವರ ಮಾತುಗಳಲ್ಲೇ ಹೇಳುವುದಾದರೆ, ಇದು ಈ ಎರಡು ಪ್ರತಿಸ್ಪರ್ಧಿ ಸಿದ್ಧಾಂತಗಳ ಪೈಕಿ ಯಾವುದಾದರೊಂದಕ್ಕೆ ಸೇರುವ ತೀವ್ರವಾದೀ ಮಾರ್ಗವಾಗಿರಬೇಕಿಲ್ಲ. ಇದು ಇವೆರಡರ ನಡುವೆ ಇರುವಂತಹುದು. ಬಹಳಷ್ಟು ದೇಶಗಳಲ್ಲಿ "ಹಳೇ ಶೈಲಿಯ ಬಂಡವಾಳವಾದದಿಂದ ಪೂರ್ಣವಾಗಿ ಭಿನ್ನವಾದ ಮತ್ತು ಸಾಮಾನ್ಯವಾಗಿ ಸಮಾಜವಾದವೆಂದು ಕರೆಯಲ್ಪಡುವುದರ ಕಡೆ ವಾಲುವಂತಹ ಇತರ ಮಾರ್ಗಗಳನ್ನು ಕಂಡುಹಿಡಿಯುವ" ಪ್ರಯತ್ನವೊಂದು ನಡೆಯಿತೆಂದೂ ಅವರು ಸೂಚಿಸುತ್ತಾರೆ. ಇಂತಹದೊಂದು ಪ್ರಯತ್ನದ ಪರಿಣಾಮವಾಗಿ, ಅರ್ಥಶಾಸ್ತ್ರ ಸಾಹಿತ್ಯದಲ್ಲಿ 'ಬಂಡವಾಳ ಹೂಡಿಕೆಯ ಗತಿ'ಗೆ ಸಂಬಂಧಪಟ್ಟಂತೆ ಇರುವ, ಆರ್ಥಿಕ ಬೆಳವಣಿಗೆ'ಯ ಹಾಗೂ ಪಶ್ಚಿಮದ ವಿಕಸಿತ ಅರ್ಥವ್ಯವಸ್ಥೆಗಳ ಮತ್ತು ಹಿಂದುಳಿದ ದೇಶಗಳ ವಿಕಾಸಶೀಲ ಅರ್ಥವ್ಯವಸ್ಥೆಗಳ ನಡುವೆ ಪೂರಕ

ಸಂಬಂಧದ ಪರಿಕಲ್ಪನೆಗಳು ವ್ಯಾಪಕವಾಗಿ ಕಾಣಿಸಿಕೊಳ್ಳತೊಡಗಿದವು. ಗುನ್ನರ್ ಮಿರ್ಡಾಲ್ ಅವರ ಮಾತುಗಳಲ್ಲಿ ಹೇಳುವುದಾದರೆ ಅದು "ಮೂಲಭೂತ ಬದಲಾವಣೆಗೆ ಸಿಕ್ಕಿದ ಅಂತಾರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯ ಒಂದು ಪ್ರತಿಬಿಂಬನ"ವಾಗಿತ್ತು.

ರಾಮ ಮನೋಹರ ಲೋಹಿಯಾ ೧೯೫೫ರಲ್ಲಿ ಈ ಬಗ್ಗೆ ಹೀಗೆ ಹೇಳಿದರು: "ಹಿಂದುಳಿದ ಅರ್ಥವ್ಯವಸ್ಥೆಗಳಿಗೆ ನೆರವಾಗಲು ಮುಂದುವರಿದ ಅರ್ಥವ್ಯವಸ್ಥೆಗಳಲ್ಲಿನ ಆಸಕ್ತಿಯ– ಈ ಪದೆ ಪದೇ ಪ್ರಸ್ತಾಪಕ್ಕೆ ಬರುತ್ತಿರುವ–ಮಾತು ಬರೀ ಒಂದು ಶಾಸ್ತ್ರೋಕ್ತ ವಿಧಿಯಂತಿದ್ದು, ಹೆಚ್ಚೆಂದರೆ ಅದು ಇಡೀ ಸಮಸ್ಯೆಯ ಮೇಲ್ಮೈಯನ್ನಷ್ಟೇ ಮುಟ್ಟಬಲ್ಲುದು". ಅವರ ಪ್ರಕಾರ, ಜಾಗತಿಕ ವ್ಯಾಪಾರ ಹಾಗೂ ಸಾಮಾಜಿಕ ಭದ್ರತೆಯ ಸಿದ್ಧಾಂತಗಳಿಗಾಗಿ ಈಗ ಬಳಸಲಾಗುತ್ತಿರುವ ಪೂರ್ಣ ಉದ್ಯೋಗದ ತತ್ವವು ಸಾಪೇಕ್ಷ ಸಮಾನ ಉತ್ಪಾದಕತೆಯ (relatively equal productivity) ತತ್ವಕ್ಕೆ ಜಾಗ ಬಿಟ್ಟುಕೊಡಬೇಕು. ಆಗ ವಸಾಹತುಶಾಹಿ–ಕ್ರಮೇಣ ನಗಣ್ಯ ಪರಿಘಟನೆಯಾಗತೊಡಗಿದ್ದರೂ–ಮಾನವ ಸಂಬಂಧಗಳ ಮೇಲೆ ವಿನಾಶಕಾರೀ ಪ್ರಭಾವ ಬೀರುತ್ತತೆಂಬುದನ್ನು ಮರೆಯಬಾರದು. ಈ ದಿಸೆಯಲ್ಲಿ ಮುಂದುವರಿದು ಅವರು, ಸಮಾನ ಅಸಂಬದ್ಧತೆ ತತ್ವದ ಆಧಾರದ ಮೇಲೆ ಮೂರನೇ ಬಣದ ಕಲ್ಪನೆಯನ್ನು ಮಂಡಿಸಿದರು. ಎರಡು ಶಕ್ತಿ ಬಣಗಳ ನಡುವಣ ಘರ್ಷಣೆಯು ಏಷಿಯಾದ ಹೊಸ ರಾಷ್ಟ್ರಗಳಲ್ಲಿನ ರಾಷ್ಟ್ರ ನಿರ್ಮಾಣ ಸಮಸ್ಯೆಗೆ ಯಾವುದೇ ರೀತಿಯಲ್ಲಿ ಪ್ರಾಸಂಗಿಕವಾಗಿಲ್ಲವೆಂದು ಲೋಹಿಯಾ ದೃಢವಾಗಿ ನಂಬಿದ್ದರು. ಅವರ ಪ್ರಕಾರ ಬಂಡವಾಳವಾದ ಹಾಗೂ ಕಮ್ಯೂನಿಸಂಗಳೆರಡೂ ಆಸ್ತಿ ಪ್ರಶ್ನೆಯ ಹೊರತಾಗಿ ಒಂದೇ ನಾಗರಿಕತೆಯ ಎರಡು ರೂಪಗಳು. ಮೂಲತಃ ಅವು ರಾಜಕೀಯ ಹಾಗೂ ಆರ್ಥಿಕ ಕೇಂದ್ರೀಕರಣದ ಮತ್ತು ಬಲಪ್ರಯೋಗದ ಸಿದ್ಧಾಂತಗಳು. ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟೇತರ ಎಂದಾಗುತ್ತಿರುವ ಜಗತ್ತಿನ ಇಬ್ಭಾಗವು ವಿಚಾರ ಸಂಪೂರ್ಣವಾಗಿ ಬಲಪ್ರಯೋಗಕ್ಕೆ ಶರಣಾಗುವ ಸ್ಥಿತಿಯನ್ನು ನಿರ್ಮಿಸುತ್ತಿದೆ. ಆಗ ಆಲೋಚನೆ ಎಂಬುದು ಕ್ರಿಯಾತ್ಮಕವಾಗದೆ, ಪ್ರಚಾರಾತ್ಮಕವಾಗುತ್ತದೆ. ಆದ್ದರಿಂದ ಅವರು ಇವೆರಡರಲ್ಲಿ ಒಂದರ ಸೈದ್ಧಾಂತಿಕ ಆಯ್ಕೆಯನ್ನು ತಳ್ಳಿ ಹಾಕಿದರು. ಪ್ರಗತಿಯ ಹೆಬ್ಬಯಕೆಯನ್ನು ಹೊಂದಿದ, ಹೊಸದಾಗಿ ವಿಮೋಚನೆಗೊಂಡ ಜನತೆಗಳಿಂದ ಕೂಡಿದ ರಾಷ್ಟ್ರಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಅವರು ಮೂರನೇ ಬಣದ ಕಲ್ಪನೆ ಮಾಡಿದರು. 'ಇಂದಿನ ಅಂತಾರಾಷ್ಟ್ರೀಯ ಅರ್ಥದಲ್ಲಿ ಒಂದು ಬಣವೆಂದರೆ, ಅದರಲ್ಲಿ ಒಂದು ಒಕ್ಕೂಟ–ಸರ್ಕಾರಗಳ ಒಕ್ಕೂಟ–ಹಾಗೂ ಒಂದು ಶಕ್ತಿ–ಜನತೆಯ ಶಕ್ತಿ–ಒಳಗೊಂಡಿರುತ್ತದೆ.' ಆದರೆ ಲೋಹಿಯಾ ಇದನ್ನು ಯಥಾಸ್ಥಿತಿಯ ಬಂಡವಾಳವಾದ ಹಾಗೂ ಇಚ್ಛಾನುವರ್ತಿಯಾದ ಕಮ್ಯೂನಿಸಂನಿಂದ ಪೂರ್ಣ ಭಿನ್ನವಾದ, ಶಾಂತಿಪೂರ್ಣ ಕ್ರಾಂತಿ ಹಾಗೂ ಆರ್ಥಿಕ ಪುನರ್ನಿರ್ಮಾಣದ ಸಮಾಜವಾದೀ ಬಣವೆಂದು ಗುರುತಿಸಿದರು.[೧] ಈ ದಿಸೆಯಲ್ಲಿ ಅವರು ರೂಪಿಸಿದ ವಿಭಿನ್ನ ಪರಿಕಲ್ಪನೆಗಳ ಪೈಕಿ

ಅತ್ಯಂತ ಮೂಲಭೂತವಾದದ್ದು, ಕೈಗಾರಿಕೀಕರಣಕ್ಕಾಗಿ 'ಸಣ್ಣ ಘಟಕ' ಯಂತ್ರ (small unit machine) ದ ಪರಿಕಲ್ಪನೆ.

"ಭಾರೀ ಪ್ರಮಾಣದ ಯಂತ್ರ ಹಾಗೂ ಅತ್ಯುನ್ನತ ಮಟ್ಟದ ಯಂತ್ರಾಧುನೀಕರಣ ಮುಂತಾದವುಗಳು ನಾಲ್ಕಾರು ಕಾನ್‌ಪುರಗಳನ್ನೊ, ಕಲ್ಕತ್ತಾಗಳನ್ನೋ ಹುಟ್ಟು ಹಾಕಬಹುದು... ಆದರೆ ಅದು ತರಾತುರಿ ಚಟುವಟಿಕೆಯ ಈ ದ್ವೀಪಗಳ ಸುತ್ತ ಅಸಹನೀಯ ನಿರುದ್ಯೋಗ ಹಾಗೂ ಬಡತನವನ್ನು ನಿರ್ಮಿಸುತ್ತದೆ" ಅಂತ ಲೋಹಿಯಾ ಸೂಚಿಸಿದರು. ಈ ಇಡೀ ಸಮಸ್ಯೆಯನ್ನು ಅವರು ಬಹಳಷ್ಟು ಸಾರಿ ಹೀಗೆ ಮುಂದಿಡುತ್ತಿದ್ದರು. 'ಇಂಡಿಯಾ, ಜಾವಾ ಅಥವಾ ಚೀನಾದ ಒಬ್ಬ ರೈತನನ್ನು ಒಬ್ಬ ಕಾರ್ಮಿಕನನ್ನಾಗಿ, ಒಬ್ಬ ಬೇಸಾಯಗಾರನನ್ನು ಟ್ರ್ಯಾಕ್ಟರ್ ಚಾಲಕನನ್ನಾಗಿ ಮಾಡುವುದು ಅಥವಾ ಕಾರ್ಖಾನೆಯ ಕಾರ್ಮಿಕನೊಬ್ಬನಿಗೆ ಆಧುನಿಕ ಯಂತ್ರಜ್ಞಾನದ ಪರಿಪೂರ್ಣ ಬಂಡವಾಳ ಒದಗಿಸುವುದು ತೀರಾ ದೊಡ್ಡ ಆಶಯ ಆಗಿರಬಹುದು ಅಥವಾ ಆಗಿರದೇ ಇರಬಹುದು; ಆದರೆ ಅದನ್ನು ಸಾಧಿಸುವುದು ಅಸಾಧ್ಯ ಹಾಗೂ ಅದೊಂದು ನಿಷ್ಫಲದಾಯಕ ಹಾಗೂ ಕ್ರೂರಪ್ರಯತ್ನವಾಗಿ ಮಾತ್ರ ಉಳಿಯುತ್ತದೆ. ರಷ್ಯಾದಲ್ಲಿ ಸಾಮೂಹೀಕರಣಕ್ಕೆ ಮುಂಚೆ ಕೃಷಿಕಾರ್ಮಿಕನೊಬ್ಬನ ತಲಾ ಸರಾಸರಿ ಭೂಮಿಯ ಪ್ರಮಾಣ ೧೫ ಎಕರೆ ಇತ್ತು. ಮತ್ತು ಟ್ರ್ಯಾಕ್ಟರ್ ಅವರನ್ನು ಸರಿಸುಮಾರಾಗಿ ಅಮೆರಿಕಾದ ಕೃಷಿಯ ಮಟ್ಟಕ್ಕೆ ಒಯ್ದಿತ್ತು. ಆದರೆ ಇದೇ ಸರಾಸರಿ ಪ್ರಮಾಣ ಒಂದರಿಂದ ಒಂದೂವರೆ ಎಕರೆಯಷ್ಟಿರುವ ಇಂಡಿಯಾ ಮತ್ತು ಚೀನಾಗಳಲ್ಲಿ, ಕಮ್ಯೂನಿಸ್ಟ್ ಆಧುನೀಕರಣ ಕೋಟ್ಯಾಂತರ ಜನರನ್ನು ಕೆಲಸಹೀನರನ್ನಾಗಿ ಮಾಡುತ್ತದೆ. ಯುರೋಪ್ ಮತ್ತು ಅಮೆರಿಕಾಗಳಲ್ಲಿ ಕಾರ್ಮಿಕರು ತಲಾ ೫೦೦೦ ರೂಪಾಯಿಗಳಿಂದ ೧೦೦೦೦ ಸಾವಿರ ರೂಪಾಯಿಗಳವರೆಗಿನ ಮೌಲ್ಯದ ಉತ್ಪಾದನಾ ಸಲಕರಣೆಗಳನ್ನು ಹೊಂದಿದ್ದಾರೆ. ಇಂತಹ ಯಂತ್ರಾಧುನಿಕ ಮಟ್ಟಗಳ ಪ್ರಕಾರ ಇಂಡಿಯಾದಲ್ಲಿ ಕಡಿಮೆ ಎಂದರೆ, ೭ ಕೋಟಿ ಜನ ನಿರುದ್ಯೋಗಿಗಳಾಗಿದ್ದಾರೆ ಅಂತ ಲೋಹಿಯಾ ವಿವರಿಸಿದರು.[೩]

ಮತ್ತೊಂದು ದಿಟ್ಟ ವಿಚಾರ ಪ್ರತಿಪಾದನೆಯಲ್ಲಿ ಲೋಹಿಯಾ ಕಮ್ಯೂನಿಸಂ ಹಾಗೂ ಬಂಡವಾಳವಾದಗಳನ್ನು ಕೇಂದ್ರೀಕರಣದ ಹಾಗೂ ಬೃಹತ್ ಉತ್ಪಾದನೆಯ ಸಿದ್ಧಾಂತಗಳೆಂದು ವರ್ಣಿಸಿ, ಇವು ತೀರಾ ಅಧೋಗತಿಯ ಉತ್ಪಾದನಾ ಸಾಧನಗಳ ಮೇಲೆ ಬದುಕಿರುವ ಅತಿ ಹೆಚ್ಚು ದಟ್ಟಣೆಯ ಜನಸಂಖ್ಯೆಯ ಮುಂದೆ ನಿಷ್ಪ್ರಯೋಜಕವಾಗಿ ನಿಲ್ಲುವುವು ಅಂತ ಗುರುತಿಸಿದರು. ಏಷ್ಯಾದ ಜನದಟ್ಟಣೆ, ಇಂಡಿಯಾದ ಪ್ರತಿ ಚದರಮೈಲಿಗೆ ೩೦೦ರಿಂದ ಹಿಡಿದು ಜಾವಾದ ಪ್ರತಿ ಚದರ ಮೈಲಿಗೆ ೬೦೦ರ ತನಕ ಹಬ್ಬಿದೆ. ಆದರೆ ಈ ಪ್ರದೇಶಗಳ ಉತ್ಪಾದನಾ ಸಾಧನಗಳ ಸರಾಸರಿ ಮೌಲ್ಯ ಪ್ರತಿ ವ್ಯಕ್ತಿಗೆ ಕೇವಲ ೧೫೦ ರೂಪಾಯಿಗಳ ಮಟ್ಟದಲ್ಲಿ ನಿಲ್ಲುತ್ತದೆ. ಏಷ್ಯಾಕ್ಕೆ ಒಂದು ಸಮಂಜಸ ಆರ್ಥಿಕ ಅಸ್ತಿತ್ವ ಒದಗಿಸುವ ಯಾವುದೇ ಪ್ರಯತ್ನ, ಈ

ಅತಿಯಾದ ಜನದಟ್ಟಣೆಯ ಹಾಗೂ ಅಸಮರ್ಪಕವಾದ ಬಂಡವಾಳ ಸಾಧನಗಳ ಸಮಸ್ಯೆಗಳನ್ನು ಎದುರಿಸಲೇಬೇಕು. ಈ ಎರಡು ಅಂಶಗಳು ವಸ್ತುತಃ ಫೋರ್ಡ್ ಅಥವಾ ಸ್ಟಾಲಿನ್ ಮಾದರಿಯ ಕೈಗಾರೀಕರಣದ ಯಾವುದೇ ತರದ ಯೋಜನೆಗಳನ್ನು ಅಸಾಧ್ಯಗೊಳಿಸುತ್ತವೆ.

ಬಂಡವಾಳವಾದ ಹಾಗೂ ಕಮ್ಯೂನಿಸಂಗಳ ಮೂಲನಂಬಿಕೆಗಳನ್ನೇ (premises) ನಾಶ ಮಾಡುವುದು ಸಮಾಜವಾದದ ಒಂದು ಆಂತರಿಕ ಅಗತ್ಯವೆಂದು ಲೋಹಿಯಾ ಭಾವಿಸಿದರು. ಬಂಡವಾಳವಾದವು, ಕೈಗಾರಿಕೆ ಹಾಗೂ ಬೇಸಾಯಕ್ಕೆ ನಿರಂತರ ಬದಲಾವಣೆಗಳಿಂದ ಕೂಡಿದ ವಿಜ್ಞಾನದ ಅನ್ವಯದಲ್ಲಿ ಪರಿಣಮಿಸುವ, ವ್ಯಕ್ತಿನಿಷ್ಠತೆಯ ಹಾಗೂ ಮುಕ್ತ ಉದ್ಯಮದ ಒಂದು ಸಿದ್ಧಾಂತ. ಕಮ್ಯೂನಿಸಂ, ಸಾಮಾಜಿಕ ಒಡೆತನದ ಮತ್ತು ಉತ್ಪಾದನಾ ಸಾಧನಗಳನ್ನು ಅವುಗಳ ಖಾಸಗಿ ಆಸ್ತಿ ಸಂಬಂಧಗಳಿಂದ ಬಿಡುಗಡೆಗೊಳಿಸುವ ಒಂದು ಸಿದ್ಧಾಂತ. ಆದರೆ ಇದು ಪಾರಂಪರಿಕವಾಗಿ, ಬಂಡವಾಳವಾದದಿಂದ ಅದರ ಉತ್ಪಾದನಾ ತಂತ್ರವನ್ನು ತನ್ನದಾಗಿಸಿಕೊಂಡಿದೆ. ಇದೇ ರೀತಿಯಲ್ಲಿ ಯುರೋಪಿನಲ್ಲಿನ ಸಮಾಜವಾದ ಕೂಡ ಬೃಹತ್ತಾದ ಉತ್ಪಾದನಾಶಕ್ತಿಗಳ 'ಸಂಚಯ'ವೊಂದನ್ನು ಹೊಂದಿವೆಯೆಂತಲೂ ಅವರು ಸೂಚಿಸಿದರು. ಆದರೆ ಇಂತಹದೇನನ್ನೂ ಹೊಂದಿರದ ಜಗತ್ತಿನ ಉಳಿದ ಭಾಗದಲ್ಲಿನ ಸಮಾಜವಾದ, ತಾನು ತನ್ನ ಸಮಾಜಗಳಿಗೆ ಹಂಚುವುದಕ್ಕೆ ಬೇಕಾದಷ್ಟು 'ಸಂಚಯ'ವನ್ನೂ ನಿರ್ಮಿಸಿಕೊಳ್ಳಬೇಕಾಗಿದೆ. ಅದಕ್ಕೆಂದೇ ಅವರು ಕ್ರಾಂತಿಗಾಗಿ ಬೇರೊಂದು ರಣನೀತಿಯ ಅಗತ್ಯವನ್ನು ಪ್ರತಿಪಾದಿಸಿದರು.

ತೌಲನಿಕ ಸಮಾನತೆಯ ಒಂದು ಸ್ಥಿತಿಗೆ ಹಿಂದುಳಿದ ರಷ್ಯಾದ ಮುಂದುವರಿಕೆಯು, ಕೈಗಾರಿಕೀಕರಣ ಯುಗದ ಪ್ರಯೋಜನಗಳು ಸ್ಥಾನಿಕವೂ ಹಾಗೂ ವಿಶಿಷ್ಟವಾಗಿ ಐತಿಹಾಸಿಕವೂ ಆದವುಗಳು ಮತ್ತು ಅವನ್ನು ಬೇರೆ ಕಡೆ ಸೃಷ್ಟಿಯಾಗುವುದಿಲ್ಲ ಎಂಬ ಅಂಶವನ್ನು ಸ್ವಲ್ಪಮಟ್ಟಿಗೆ ಮಂಕುಗೊಳಿಸಿಬಿಟ್ಟಿದೆ ಎಂದು ಲೋಹಿಯಾ ಅಭಿಪ್ರಾಯಪಟ್ಟರು. ಈ ಸಂಬಂಧದಲ್ಲಿ ಅವರು ಎರಡು ಗಮನಾರ್ಹ ಅಂಶಗಳನ್ನು ಗುರುತಿಸಿದರು: (೧) ರಷ್ಯಾ ಎಲ್ಲವನ್ನೂ ಆರಂಭದಿಂದಲೇ ಸುರು ಮಾಡಲಿಲ್ಲ; ಮತ್ತು (೨) ರಷ್ಯಾದ ಅತಿ ಕಡಿಮೆ ಸಾಂದ್ರತೆಯ ಜನಸಂಖ್ಯೆ ಬೃಹತ್ ಉತ್ಪಾದನೆಯ ವಿಧಾನಗಳಿಗೆ ಅಪೂರ್ವ ಅವಕಾಶ ಕಲ್ಪಿಸಿತು.[೪] ಒಂದು ಕಾಲದಲ್ಲಿ ಕಮ್ಯುನಿಸಂ ಹೇಗೆ ಊಳಿಗಮಾನ್ಯ ಹಾಗೂ ಬಂಡವಾಳಶಾಹಿಗಳೆರಡರ ವಿರುದ್ಧವೂ ಹೋರಾಡಿ ಅವೆರಡನ್ನೂ ಮೀರಿ ಬೆಳೆಯಿತೋ ಹಾಗೆಯೇ, ಸಮಾಜವಾದ ಇವೊತ್ತು ಬಂಡವಾಳಶಾಹಿ ಹಾಗೂ ಕಮ್ಯುನಿಸಂಗಳೆರಡರ ವಿರುದ್ಧವೂ ಹೋರಾಡಿ ಅವೆರಡನ್ನೂ ಮೀರಿ ಬೆಳೆಯುತ್ತದೆಂದು ಲೋಹಿಯಾ ಸೂಚಿಸಿದರು.[೫]

ಚೀನಿ ಕಮ್ಯೂನಿಸ್ಟರ ಬಗ್ಗೆ ಕ್ರುಶ್ಚೇವ್ ಮಾಡಿದ ಚೇಷ್ಟೆಯ ಟೀಕೆ("ಚೀನಿಯರದ್ದು,

ಖಾಲಿಮೇಜಿನ ಸುತ್ತ ಸಂಪೂರ್ಣ ಸಮಾನತೆಯಲ್ಲಿ ಕೂತಿರುವ ವಿಶೇಷ ಬುದ್ಧಿಯ, ಆದರೆ ಹಸಿದ ಜನರ ಸಮಾಜವಾದ")ಯನ್ನು ಗಮನಿಸಿ ರಿಚರ್ಡ್ ಲೊವೆಂಥಾಲ್ ಹೇಳಿದರು; "ಇದು ಕಮ್ಯೂನಿಸ್ಟ್ ಬಣ ಈವರೆಗೆ ಹಿಂದುಳಿದ ದೇಶಗಳ ಬುದ್ಧಿಜೀವಿಗಳನ್ನು ಸೆಳೆದ ಮುಖ್ಯ ಆಕರ್ಷಣೆಗಳಲ್ಲಿ ಒಂದರ–ಶೀಘ್ರ ಆಧುನೀಕರಣದ ಮಾದರಿಯೊಂದರ ಆಕರ್ಷಣೆ–ಕೊರತೆಯನ್ನು ಎದುರಿಸುತ್ತದೆ" ಮುಂದೆ ಅವರು ಹೇಳಿದ್ದರು: "ಆಗ ಚೀನಾ ರೀತಿಯ ಕಮ್ಯುನಿಸಂ ಅಭಿವೃದ್ಧಿಗಾಗಿ ಒಂದು ಮಾದರಿಯಾಗದೆ, ಅದರ ವೈಫಲ್ಯವನ್ನು ಸಾಬೀತುಪಡಿಸುವ ಹಾಗೂ ಕೊನೆಗೆ ಪಾಶ್ಚಿಮಾತ್ಯ ನಾಗರಿಕತೆಯ ಪ್ರಭಾವಕ್ಕೆ ಒಡ್ಡಿಕೊಳ್ಳುವುದರ ಒಂದು ಮಾದರಿಯಾಗುತ್ತದೆ". ಇದೇ ಸಮಸ್ಯೆಯನ್ನು ಲೋಹಿಯಾ ೧೯೫೨ರಲ್ಲಿ ಈ ಮಾತುಗಳಲ್ಲಿ ಮುಂದಿಟ್ಟಿದ್ದರು: "ಏಷ್ಯಾದ ಆಯೋಜಕರಿಗೆ ಈಗ ಎರಡು ದಾರಿಗಳಿವೆ–ಅರ್ಥವ್ಯವಸ್ಥೆಯ ಉಳಿದೆಲ್ಲಾ ವಲಯಗಳನ್ನೂ ಹಿಂದುಳಿಸಿ ಒಂದು ಪ್ರದೇಶ ಅಥವಾ ಒಂದು ಕೈಗಾರಿಕೆಯನ್ನು ಸರ್ವಮಾನ್ಯ ಆಧುನಿಕ ಮಟ್ಟಗಳಿಗೆ ವಿಸ್ತರಿಸುವುದು; ಇಲ್ಲವೇ ಸ್ವಲ್ಪ ನಿಧಾನವಾದರೂ ಸರಿಯೇ, ಇಡೀ ಅರ್ಥವ್ಯಸ್ಥೆಯನ್ನು ಅದರೆಲ್ಲಾ ವೃತ್ತಿ ಹಾಗೂ ಪ್ರದೇಶಗಳೊಂದಿಗೆ ಸರ್ವಾಂಗೀಣವಾಗಿ ಎತ್ತರಿಸುವುದು. ಏಷ್ಯಾಕ್ಕೆ ಹೆಚ್ಚೆಚ್ಚು ಸಲಕರಣೆಗಳ ಹಾಗೂ ಯಂತ್ರಗಳ, ಹೊಸ ಕೈಗಾರಿಕೆಗಳ ಹಾಗೂ ವೃತ್ತಿಗಳ ಅಗತ್ಯವಿದೆ; ಅದಕ್ಕೆ ಹೊಸ ಜಮೀನುಗಳನ್ನು ಉಳುಮೆಗೆ ಒಳಪಡಿಸುವ ಹಾಗೂ ಹಳೆಯ ಜಮೀನುಗಳನ್ನು ಹೆಚ್ಚು ಇಳುವರಿ ಕೊಡುವಂತೆ ಮಾಡುವ ಅಗತ್ಯವಿದೆ[೭]

ಪಾಶ್ಚಿಮಾತ್ಯ ಈರೋಪ್ ಹಾಗೂ ಉತ್ತರ ಅಮೆರಿಕಾಗಳಲ್ಲಿನ ಹತ್ತೊಂಭತ್ತನೇ ಶತಮಾನದ ಆರ್ಥಿಕ ಪ್ರವೃತ್ತಿಗಳು ಎಲಿಸ್ ಹಾಗೂ ಡೇನಿಯಲ್ ಥೋರ್ನರ್ ಹೇಳಿದ ಹಾಗೆ "ಭಾರತ ಸಾಗಿ ಹೋಗಬೇಕಾದ ಹಾದಿಗೆ ಮಾರ್ಗ ಸೂಚಿಗಳಾಗಲಾರವು. ಭಾರತದಲ್ಲಿ ತಯಾರಿಕಾ ಕ್ಷೇತ್ರದಲ್ಲಿನ ಪುರುಷ ಕಾರ್ಮಿಕರ ಬಲ ೧೯೧೧ರಿಂದ ೧೯೩೦ರ ತನಕ ಸುಮಾರು ೭೦ ಲಕ್ಷ ಮಟ್ಟದಲ್ಲೇ ಉಳಿದಿತ್ತು. ೧೯೩೧ ಹಾಗೂ ೧೯೬೦ರ ಮಧ್ಯೆ ಇದು ಎರಡು ಪಟ್ಟಾಯಿತು.[೮] ೧೯೧೧ರಿಂದ ೩೧ರ ಅವಧಿಯಲ್ಲಿ ದುಡಿಯುವ ಜನ ಬಲದ ಪ್ರತಿ ನೂರು ಜನರಿಗೆ ತಯಾರಿಕಾ ಕಾರ್ಮಿಕರ ಪ್ರಮಾಣ ೯ರಿಂದ ೮ಕ್ಕೆ ಇಳಿಯಿತು. ಮತ್ತು ೧೯೬೧ರ ಹೊತ್ತಿಗೆ ಈ ಸಂಖ್ಯೆ ೧೧ಕ್ಕೆ ಹೆಚ್ಚಿತ್ತು. ಆದರೆ ತದನಂತರದಲ್ಲಿ "ಆಧುನೀಕರಣದ ದಿಸೆಯಲ್ಲಿ ಭಾರತದ ಪ್ರಗತಿ, ತಯಾರಿಕಾ ಕೆಲಸ ಕಾರ್ಯಗಳಲ್ಲಿ ತೊಡಗಿರುವ ಕಾರ್ಮಿಕರ ಶೇಕಡಾ ಪ್ರಮಾಣದ ಭಾರಿ ಹೆಚ್ಚಳದ ರೂಪದಲ್ಲಿ ಪ್ರತಿಬಿಂಬಿತವಾಗಿರುವುದು ಅಸಂಭವ "[೯] ಈ ಇಕ್ಕಟ್ಟಿನ ಪರಿಸ್ಥಿತಿಯಿಂದ ಬಿಡಿಸಿಕೊಳ್ಳಲು ಲೋಹಿಯಾ ಸಣ್ಣ ಯಂತ್ರ–ತಂತ್ರಜ್ಞಾನದ ಅಗತ್ಯವನ್ನು ತೀವ್ರವಾಗಿ ಪ್ರಸ್ತಾಪಿಸಿದರು. ಈ ಹೊಸ ತಂತ್ರಜ್ಞಾನ ಹೇಗಿರಬೇಕೆಂದರೆ, ಅದು ಪಾಶ್ಚಿಮಾತ್ಯ ಮಟ್ಟಗಳ ಭಾರೀ ಬಂಡವಾಳ ಹೂಡಿಕೆಯನ್ನು ಬೇಡಬಾರದು. ಹಾಗೂ ಒಂದು ನಿಗದಿತ ವಾರ್ಷಿಕ ಬಂಡವಾಳ ಹೂಡಿಕೆಗೆ ಪ್ರತಿಫಲವಾಗಿ, ಅದರಿಂದ

ಪಾಶ್ಚಿಮಾತ್ಯ ಯಂತ್ರಾಧುನೀಕೃತ ಮಟ್ಟಗಳಲ್ಲಿ ಸಾಧ್ಯವಾಗುವ ಉದ್ಯೋಗಾವಕಾಶಗಳ ಹತ್ತರಷ್ಟನ್ನು ತನ್ನ ಯಂತ್ರಾಧುನೀಕೃತ ಮಟ್ಟಗಳಲ್ಲಿ ಸೃಷ್ಟಿಸಬೇಕು. ಅವರ ಮನಸ್ಸಿನಲ್ಲಿದ್ದುದು, ಈ ಯಂತ್ರಾಧುನೀಕರಣ ಅಥವಾ ಯಂತ್ರರಾಹಿತ್ಯ ಉಂಟು ಮಾಡುವ ಒತ್ತಡಗಳಿಂದ ಮುಕ್ತವಾದ ಮತ್ತು ಒಂದು ಚೊಕ್ಕ ಬದುಕನ್ನು ಸಾಧ್ಯ ಮಾಡುವ ಮಟ್ಟಿಗೆ ಬಂಡವಾಳೀಕರಣ ಏರುವ ಒಂದು ಅರ್ಥವ್ಯವಸ್ಥೆ. ಪ್ರಸಕ್ತ ಯಂತ್ರಪರಿಸ್ಥಿತಿಯನ್ನು ಮೀರಿ ಮುಂದುವರೆಯುವಂತಹ; ಆದರೆ, ನಮ್ಮ ಸಾರ್ವತ್ರಿಕ ಅರ್ಥವ್ಯವಸ್ಥೆ ಮೇಲೆ ಅಸ್ತವ್ಯಸ್ತತೆಗಳನ್ನು ಉಂಟು ಮಾಡುವ ರೀತಿಯ ವಿಘಟನಾಕಾರೀ ಒತ್ತಡಗಳನ್ನು ಹೇರದಂತಹ ಯಂತ್ರ ಸಲಕರಣೆಗಳಿಂದ ಜಗತ್ತಿನ ಮೂರನೆ ಎರಡು ಭಾಗವನ್ನು ಸಜ್ಜುಗೊಳಿಸುವುದು ಸಾಧ್ಯ ಎಂದು ಲೋಹಿಯಾ ತಿಳಿದಿದ್ದರು.

ಪ್ರಸಕ್ತ ವಿಶ್ಲೇಷಣೆಗೆ ಸಂಬಂಧಪಟ್ಟಂತೆ ಮಾರ್ಕ್ಸ್‌ವಾದದ ಹಾಗೂ ಸಮಾಜವಾದಗಳ ನಡುವಣ ಭಿನ್ನತೆಯನ್ನು ಲೋಹಿಯಾ, ೧೯೫೨ರಲ್ಲಿ ಆಡಿದ ಮಾತುಗಳಲ್ಲಿ ಹೀಗೆ ವಿವರಿಸಿದ್ದರು: "ಮಾರ್ಕ್ಸ್‌ವಾದ ಹಾಗೂ ಕಮ್ಯೂನಿಸಂ ತಮ್ಮ ಕರ್ತವ್ಯೋದ್ದೇಶಗಳನ್ನು ಅರ್ಧ ಮಾತ್ರ ಗ್ರಹಿಸಿವೆ ಎಂದೇ ಹೇಳಬೇಕು. ಅವೆರಡರ ಕಳಕಳಿ ಬಂಡವಾಳಶಾಹಿ ಉತ್ಪಾದನಾ ಸಂಬಂಧಗಳನ್ನು ನಾಶ ಮಾಡುವುದಷ್ಟೇ ಆಗಿದೆ. ಆದರೆ ನಿಜವಾದ ಸಮಾಜವಾದ ಬಂಡವಾಳಶಾಹಿ ಉತ್ಪಾದನಾ ಸಂಬಂಧಗಳು ಹಾಗು ಬಂಡವಾಳಶಾಹಿ ಉತ್ಪಾದನಾಶಕ್ತಿಗಳೆರಡನ್ನೂ ನಾಶ ಮಾಡುವ, ಕನಿಷ್ಟ ಪಕ್ಷ ಅವನ್ನು ಪುನರ್ ವಿನ್ಯಾಸಗೊಳಿಸುವ ದಿಸೆಯಲ್ಲಿ ಆಲೋಚಿಸಬೇಕು"[೧೦] ಈಗ ಚಾಲ್ತಿಯಲ್ಲಿರುವ ವೃತ್ತಿಗಳನ್ನು ಯಂತ್ರಾಧುನಿಕಗೊಳಿಸಲು ಇರುವ ಏಕೈಕ ದಾರಿ ಎಂದರೆ, ಸಣ್ಣ ಘಟಕವನ್ನು ಬೇಡುವ, ಕೇಂದ್ರೀಕರಣದ ಅಗತ್ಯವಿಲ್ಲದ ಹಾಗೂ ಹಳ್ಳಿ ಮತ್ತು ಪಟ್ಟಣಗಳೆರಡರಲ್ಲೂ ಅಳವಡಿಕೆ ಸಾಧ್ಯವಿರುವ ಒಂದು ಚಲನಶೀಲ ತಂತ್ರಜ್ಞಾನದ ಆವಿಷ್ಕಾರ. "ಸಣ್ಣ ಘಟಕ ಯಂತ್ರ ಭಾರಿ ಬಂಡವಾಳದ ಯಂತ್ರಕ್ಕಿಂತ ಕಡಿಮೆ ಕಾರ್ಯದಕ್ಷತೆಯುಳ್ಳದ್ದೇನೂ ಆಗಿರಬೇಕಿಲ್ಲ"; ಏಕೆಂದರೆ "ಸುತ್ತುಬಳಸು ಉತ್ಪಾದನೆಯ ಕ್ಷಮತೆಯನ್ನು ತಾಕ್ಷಣಿಕ ಉತ್ಪಾದನೆಯ ಕ್ಷಮತೆಯೊಂದಿಗೆ ಹೋಲಿಸುವ ವಿಧಾನವೇ ಇನ್ನೂ ಗೊತ್ತಾಗಿಲ್ಲ. ಇಷ್ಟೇ ಅಲ್ಲ; ಸಣ್ಣ ಘಟಕ ಯಂತ್ರದ ಪ್ರತಿಪಾದಕರು ಅನಿವಾರ್ಯ ಎನ್ನಿಸುವ ಕ್ಷೇತ್ರಗಳಲ್ಲಿ ಬೃಹತ್ ಉತ್ಪಾದನೆಯನ್ನು ಎಂದೂ ಪೂರ್ಣವಾಗಿ ತಿರಸ್ಕರಿಸಿಲ್ಲ"[೧೦]

ಈ ಸಂಬಂಧದಲ್ಲಿ ಮಾನಿಟೋಬಾ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಪ್ರಾಧ್ಯಾಪಕ ಸಿ.ಎಲ್. ಬರ್ಬಾರ್ ಅವರ ಅಭಿಪ್ರಾಯವನ್ನು ಗಮನಿಸುವುದು ಸೂಕ್ತ. "ಅತ್ಯಂತ ಹಿಂದುಳಿದ ದೇಶಗಳ ಅಗತ್ಯಗಳಿಗೆ ಅತ್ಯಂತ ಸೂಕ್ತವಾದ ರೀತಿಯ ಸಲಕರಣೆಗಳು ಇಲ್ಲವೇ ಇಲ್ಲ. ಏಕೆಂದರೆ ಅಂತಹ ಅಗತ್ಯ ತಂತ್ರಗಳನ್ನು ಈವರೆಗೆ ಆವಿಷ್ಕರಿಸಿಯೇ ಇಲ್ಲ. ಮಾನವಶ್ರಮದ ಆಧಾರವುಳ್ಳ (ಬಂಡವಾಳ ಉಳಿತಾಯದ) ಹಾಗೂ ಸದ್ಯಕ್ಕೆ ಲಭ್ಯವಿರುವ ಸಲಕರಣೆಗಳೊಂದಿಗೆ ಸ್ಪರ್ಧಿಸಲು ಸಾಧ್ಯವಿರುವಷ್ಟು ಕ್ಷಮತೆಯುಳ್ಳ

ರೀತಿಯ ಸಲಕರಣೆಗಳನ್ನು ಅಭಿವೃದ್ಧಿಪಡಿಸುವುದು ನಿಸ್ಸಂದೇಹವಾಗಿಯೂ ಸಾಧ್ಯವಾದರೂ, ಈ ಅಭಿವೃದ್ಧಿ ಸಾಧ್ಯವಾಗುವವರೆಗೆ ಹಿಂದುಳಿದ ವಲಯಗಳು ಈಗ ಪಶ್ಚಿಮದಲ್ಲಿ ಸಜ್ಜುಗೊಳಿಸುತ್ತಿರುವ ಮಾನವಶ್ರಮ ಉಳಿತಾಯದ ಸಲಕರಣೆಗಳ ಬಳಕೆಯನ್ನೇ ಮುಂದುವರಿಸುತ್ತವೆ ಎಂದು ವಿಶ್ವಾಸದಿಂದ ಹೇಳಬಹುದಾಗಿದೆ". ಆದ್ದರಿಂದ ಹೊಸ ತಂತ್ರಜ್ಞಾನನೀತಿಯ ಗುರಿ, ಸಣ್ಣ ಉತ್ಪಾದಕ ಗುಂಪುಗಳು ಅಳವಡಿಸಿಕೊಳ್ಳಬಲ್ಲಂತಹ ತಂತ್ರಗಳನ್ನು ಆರಿಸಿ ಅಭಿವೃದ್ಧಿಪಡಿಸುವುದು ಹಾಗೂ ಅವನ್ನು ಆ ಗುಂಪುಗಳು ಭರಿಸಬಲ್ಲ ವೆಚ್ಚದಲ್ಲಿ ದೊರಕುವಂತೆ ಮಾಡುವುದೇ ಆಗಿರಬೇಕು.[೧೧] ವೈಜ್ಞಾನಿಕತೆ ಎಂಬುದು ಭಾರತದಲ್ಲಿ ಎಲ್ಲ ಹಿಂದುಳಿದ ಅರ್ಥವ್ಯವಸ್ಥೆಗಳಲ್ಲಿದ್ದಂತೆಯೇ ಪಾಶ್ಚಿಮಾತ್ಯ ಉತ್ಪಾದನಾ ವಿಧಾನಗಳನ್ನು ಸ್ಥಳಾಂತರಿಸುವುದಕ್ಕೆ ಎಷ್ಟು ಬೇಕೋ ಅಷ್ಟರ ಹೊರತಾಗಿ, ಮೊಂಡುಗೊಂಡು ಬಿಟ್ಟಿದೆ. ಈ ಹಿನ್ನೆಲೆಯಲ್ಲಿ ಡಾ. ಲೋಹಿಯಾ ೧೯೫೦ರಲ್ಲಿ, "ಅರ್ಥಶಾಸ್ತ್ರ ಅಥವಾ ರಾಜಕೀಯ ಶಾಸ್ತ್ರ ವಿದ್ಯಾರ್ಥಿಯೊಬ್ಬ ವಿಜ್ಞಾನಿಗಳಿಗೆ ಹಾಗೂ ತಂತ್ರಜ್ಞಾನಿಗಳಿಗೆ ಸಲಹೆ ನೀಡಬಲ್ಲವನೇ ಆಗಿದ್ದರೆ, ನಾನು ಆತನನ್ನು ತನ್ನೆಲ್ಲಾ ಶಕ್ತಿ ಸಾಮರ್ಥ್ಯಗಳನ್ನೂ ಸಣ್ಣ ಘಟಕ ಯಂತ್ರ ವ್ಯವಸ್ಥೆಯ ಆವಿಷ್ಕಾರ ಕ್ಷೇತ್ರದಲ್ಲಿ ವಿನಿಯೋಗಿಸುವಂತೆ ಕೇಳಿಕೊಳ್ಳುತ್ತೇನೆ" ಎಂದಿದ್ದರು. ನಮ್ಮ ದೇಶದ ಹಳ್ಳಿ ಮತ್ತು ಪಟ್ಟಣಗಳಲ್ಲಿ ವೈವಿಧ್ಯಮಯ ಕಚ್ಚಾ ಸಾಮಗ್ರಿಗಳು ಸಮೃದ್ಧಿಯಾಗಿವೆ. ಅದೀಗ ಪೋಲಾಗುತ್ತಿದೆ. ಅವನ್ನು ಸಂಸ್ಕರಿಸುವ ಮತ್ತು ಉತ್ಪಾದನೆಗೆ ಹಾಕಿಕೊಳ್ಳುವ ಸಾಧ್ಯತೆ ಕಾಣುವುದು ಸಣ್ಣ ಯಂತ್ರವ್ಯವಸ್ಥೆ ರೂಪುಗೊಂಡಾಗಲೇ. ಅವರು "ನಮ್ಮ ದೇಶದ ಉದ್ದಗಲಕ್ಕೂ ಹಳ್ಳಿ ಪಟ್ಟಣಗಳಲ್ಲಿ, ಸಂಪತ್ತನ್ನು ಉತ್ಪಾದಿಸಲು ಹಾಗೂ ಭೂಮಿಯ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಲಕ್ಷಾಂತರ ಸಂಖ್ಯೆಯಲ್ಲಿ ಶಕ್ತಿ ಚಾಲಿತ ಸಣ್ಣ ಯಂತ್ರಗಳು ಹರಡಿಕೊಂಡಿರುವ" ಕಾಲವನ್ನು ಮುನ್ನೋಡುತ್ತಿದ್ದರು.[೧೨]

ಫ್ರಾಂಕೆಲ್ ನಿರೂಪಿಸಿರುವಂತೆ, ಹಿಂದುಳಿದ ದೇಶಗಳಲ್ಲಿ ಅಭಿವೃದ್ಧಿಯ ಮೂಲ ಸಮಸ್ಯೆ ಇರುವುದು, ಈಗ ಈ ದೇಶಗಳಲ್ಲಿ ಲಭ್ಯವಿರುವ ಶ್ರಮ ಸಂಪನ್ಮೂಲಗಳನ್ನು ಇನ್ನಷ್ಟು ಸಮರ್ಪಕವಾಗಿ ಹಾಗೂ ಪೂರ್ಣವಾಗಿ ಬಳಸಿಕೊಂಡು, ಆ ಮೂಲಕ ಕ್ರಮೇಣ ಬಂಡವಾಳದ ಹೊಸ ರೂಪಗಳನ್ನು ನಿರ್ಮಿಸುವುದು ಅತ್ಯವಶ್ಯಕ ಎಂಬ ಸಂಗತಿಯನ್ನು ಮನವರಿಕೆ ಮಾಡಿಕೊಳ್ಳುವಲ್ಲಿ. ಈ ದೇಶಗಳಲ್ಲಿ ಬಂಡವಾಳ 'ಸಂಚಯ'ದ ಮಾರ್ಗವೆಂದರೆ, ಶ್ರಮದ ಅತ್ಯುತ್ತಮ ಬಳಕೆ ಮಾಡಿಕೊಳ್ಳುವುದು. ಅದನ್ನು ನಮ್ಮಲ್ಲಿ ತೀರಾ ಕಡಿಮೆ ಪ್ರಮಾಣದಲ್ಲಿರುವ ಹಾಗೂ ಗಮನಾರ್ಹ ವೆಚ್ಚ ಮಾಡಿ ಆಮದು ಮಾಡಿಕೊಳ್ಳಬೇಕಾಗುವ ಬಂಡವಾಳದಿಂದ ಬದಿಗೊತ್ತುವುದಲ್ಲ. ಆದ್ದರಿಂದ ಮುಂದುವರಿದ ದೇಶಗಳಲ್ಲಿ ಕಾಣಬರುವಂತಹ ಬಂಡವಾಳ ಕೇಂದ್ರಿತ ಅರ್ಥವ್ಯವಸ್ಥೆಯ ರೂಪುರೇಷೆಗಳನ್ನು ಈ ದೇಶಗಳಲ್ಲೂ ಹಾಕಿ ಹೊರಡುವುದು ಅಸಮರ್ಥನೀಯ. ಏಕೆಂದರೆ ಈ ಇಡೀ ಸಮಸ್ಯೆ ಒಳಗೊಂಡಿರುವುದು, ಬದುಕುವ ಮತ್ತು ದುಡಿಯುವ ಒಂದು ಬೇರೆಯದೇ ಆದ ಕಲೆಯ ವಿಕಾಸದ ಪ್ರಶ್ನೆಯನ್ನು.

ಹಿಂದುಳಿದ ದೇಶವೊಂದಕ್ಕೆ ಬಂಡವಾಳದ ರಫ್ತು ಅಥವಾ ಆಮದು ಅಂದರೆ ಬಂಡವಾಳ ವೆಚ್ಚ ಅಥವಾ ವಿತರಣೆ–ಹೂಡಿಕೆಯ ರೂಪದಲ್ಲಿರಬೇಕೆಂದೇನೂ ಇಲ್ಲ. ಅದು ಬಂಡವಾಳ ಬಳಕೆಯಷ್ಟೇ ಆಗಿರಬಹುದು; ಅಂದರೆ, ಆ ಬಂಡವಾಳದ ಸಂರಕ್ಷಣೆಗೆ ಅಥವಾ ಅದರ ಮಾರ್ಪಾಟಿನ ಮೂಲಕ ಅದರ ಮತ್ತಷ್ಟು ಸಂಚಯಕ್ಕೆ ಅಗತ್ಯವಾದಷ್ಟು ಆರ್ಥಿಕ ಚಟುವಟಿಕೆ ಅಸಾಧ್ಯವಾದಂತಹ ಸಂದರ್ಭಗಳಲ್ಲಿನ ವ್ಯಯವಷ್ಟೇ ಆಗಿರಬಹುದು. ಹದಿನೆಂಟು ಮತ್ತು ಹತ್ತೊಂಭತ್ತನೇ ಶತಮಾನಗಳಲ್ಲಿ ಯುರೋಪ್‌ನಲ್ಲಿ ಬಂಡವಾಳದ ಅಪೂರ್ವ ಬೆಳವಣಿಗೆ ಆದದ್ದು ಯಾಂತ್ರಿಕ ಶಕ್ತಿಗಳಿಂದ ಅಲ್ಲ; ಬದಲಾಗಿ, ಸಾಮಾಜಿಕ ಸಂಬಂಧಗಳ ಹೊಸ ವಿನ್ಯಾಸಗಳ ವಿಕಾಸದಿಂದ. 'ಉಳಿತಾಯ' ಎನ್ನುವುದು ಯಾಂತ್ರಿಕ ಕ್ರಿಯೆ ಆಗಿರಲಿಲ್ಲ; ಬದಲಾಗಿ, ಸಾಮಾಜಿಕ ವರ್ತನೆಯಲ್ಲಿನ ಹೊಸ ಮನೋಭಾವಗಳ ಪರಿಣಾಮವಷ್ಟೇ ಆಗಿತ್ತು ಎಂದು ಲೋಹಿಯಾ ಅರ್ಥೈಸುತ್ತಾರೆ.

ಕನ್ನಡಕ್ಕೆ: 'ನಾ'

■

ಟಿಪ್ಪಣಿಗಳು:

1. Asian and World Order 1952, Will to power, 1956 ಪುಟ–೭೨.
2. The approach to Socialist planning,Mankind, ಸಂಪುಟ:೧ ಪು.–೩೮೪–೭೨.
3. W. B. Reddway, The Devolopment og the Indian economy, 1962, ಪುಟ–೨೪.
4. Materiality and Spirituality, 1953, Marx, Gandhi and Socialism, 1963, ಪುಟ–೨೦೩.
5. An Asian policy, Fragments of World mind, 1952, ಪುಟ–೨೫೦
6. Richard Lownthll, Prospects of Pluralistic Communism, Milorf M. Drachkoritch (ed) Marxism in Modern World, 1965, ಪುಟ–೨೪೭
7. ಟಿಪ್ಪಣಿ ೫ ನೋಡಿರಿ.
8. Alice ಮತ್ತು Daniel Thorner, The 20th century trend in employment in manufacture in india-as illustrated

by the case of W.Bengal in C.R. Rao (ed.) Essays on Econometrics and planning, 1965, ಪುಟ-೩೦೧.

9. Marxism and Socilism, 1952, Gandhi, Marx and Socialism,1963 ಪುಟ-೧೦೭.
10. A New integration Gandhi, Marx and Socialism,1963 ಪುಟ-೩೭೮.
11. Rajkrishna, Human values and Technological change, Mankind ಸಂ. ೧ ಸಂಚಿಕೆ-೩, ಪುಟ-೩೭೮.
12. The farmer in India, Fragaments of World Mind, 1952, ಪುಟ-೬೨.
13. S. Herbert Frankel, The Economic impact on undeveloped Societies: Essays on Intrnatinal investment and Social Change,1953 ಪುಟ-೬೨.
14. ಮೇಲಿನದೇ, ಪುಟ-೬೯,

■

"ಹಿಂದುಳಿದ ಪ್ರದೇಶಗಳ ಭವಿಷ್ಯದ ಮತ್ತು ಆ ಮೂಲಕ ಇಡೀ ಜಗತ್ತಿನ ಭವಿಷ್ಯದ ಬೀಗದ ಕೈ ಇಂಡಿಯಾದ ವಿಜ್ಞಾನಿಗಳ ಹಾಗೂ ತಂತ್ರಜ್ಞರ ಕೈಯಲ್ಲಿದೆ. ಆದರೆ ಅದನ್ನು ಇವರಿನ್ನೂ ಬಳಸಲು ಸುರು ಮಾಡಿಲ್ಲ. ಭಾರೀ ಹಾಗೂ ರಸಾಯನಿಕ ಕೈಗಾರಿಕೆಯಲ್ಲಿ ಇವರು ಕೌಶಲ್ಯವನ್ನೇ ತೋರಿಸಿಲ್ಲ ಅಥವಾ ತೋರಿಸಲು ಇವರಿಗೆ ಅವಕಾಶಗಳೇ ಸಿಕ್ಕಿಲ್ಲದಿರಬಹುದು. ಇವರು ಒಂದಾದರೂ ಆವಿಷ್ಕಾರ ಮಾಡಿರುವ ದಾಖಲೆ ಇಲ್ಲ ಮತ್ತು ಇವರು ತಮ್ಮ ಶಕ್ತಿ ಸಾಮರ್ಥ್ಯಗಳನ್ನೆಲ್ಲಾ ಸಣ್ಣ ಘಟಕ ತಂತ್ರಜ್ಞಾನದ ಕ್ಷೇತ್ರದೊಳಗೆ ತೊಡಗಿಸಲಾರಂಭಿಸುವ ತನಕವೂ ಅಂತಹ ದಾಖಲೆ ನಿರ್ಮಾಣವಾಗುವುದಿಲ್ಲ."

–ಲೋಹಿಯಾ('ಭಾರತದ ರೈತ')

ಗ್ರಾಮೀಣ ಭಾರತ ಮತ್ತು ಲೋಹಿಯಾ

■ ಎನ್.ಸಿ. ಮೆಹ್ರೋತ್ರಾ

ಬ್ರಿಟಿಷರು ದೇಶವನ್ನು ಬಿಟ್ಟುಹೋದಾಗ, ಕಾಂಗ್ರೆಸ್ಸಿಗೆ ಬಳುವಳಿಯಾಗಿ ಉಳಿದದ್ದು ಕೃಷಿಕ್ಷೇತ್ರದ ಹಿಂದುಳಿದ ಅರ್ಥವ್ಯವಸ್ಥೆ. ಕೃಷಿ ಇಳುವರಿ ಕುಂಠಿತಗೊಂಡಿದ್ದು, ಜಾನುವಾರುಗಳು ದುರ್ಬಲಗೊಳ್ಳುತ್ತಿರುವುದು, ಬಡತನ, ನಿರುದ್ಯೋಗ ಮತ್ತು ರೈತರ ಸಾಲದ ಹೊರೆ, ಹಳೆಯ ಮತ್ತು ಉಪಯೋಗಕ್ಕೆ ಬಾರದ ಒಕ್ಕಲುತನ ಸಾಧನ-ಸಲಕರಣೆಗಳು, ದೋಷಪೂರಿತ ಭೂ ಸಂಬಂಧಗಳು, ಜಮೀನನ್ನು ಹರಿದು ಹಂಚಿಕೊಳ್ಳುವುದು ಇಂಥ ಭೂತಾಕಾರದ ಸಮಸ್ಯೆಗಳು, ಕೃಷಿ ಅರ್ಥವ್ಯವಸ್ಥೆಯನ್ನು ಇನ್ನಷ್ಟು ತೊಡಕಿಗೆ ಹಾಕಿದ್ದವು. ಭಾರತದ ಕೃಷಿ ವ್ಯವಸ್ಥೆಯನ್ನು ಪುನರ್ರಚಿಸಿ, ಬೆಳೆಸಿ ಒಂದು ಸಮೃದ್ಧ ವಲಯವನ್ನಾಗಿ ಮಾಡುವುದು, ಭಾರತ ಸರ್ಕಾರಕ್ಕೆ ದುಸ್ತರ ಕೆಲಸವಾಗಿತ್ತು. ಮಿಶ್ರ ಅರ್ಥ ವ್ಯವಸ್ಥೆ ಮತ್ತು ಉತ್ಪಾದನೆಗೆ ಲಾಭ ಮತ್ತು ಪ್ರೇರಣೆ ನೀಡುವ ಅಂಶಗಳಿಂದ ಕೂಡಿದ ಬುರ್ಷ್ವಾ ಆರ್ಥಿಕ ಸಿದ್ಧಾಂತಕ್ಕೆ ಬದ್ಧವಾದ ಕಾಂಗ್ರೆಸ್ ಸರ್ಕಾರಕ್ಕೆ ತನ್ನ ಅಸಮರ್ಪಕ ಕೃಷಿನೀತಿಯಿಂದ ವಸಾಹತು ಆಗಿದ್ದ ಈ ನಾಡಿನ ಹಿಂದುಳಿದ ಅರ್ಥವ್ಯವಸ್ಥೆಯ ಮೂಲ ಸಮಸ್ಯೆಯನ್ನು ಸರಿಪಡಿಸುವುದು ಸಾಧ್ಯವಿಲ್ಲ ಅನ್ನುವುದು ಸಿದ್ಧವಾಗಿತ್ತು.

ಭಾರತದ ರೈತ ಸಮುದಾಯದ ಕನಿಕರ ಸ್ಥಿತಿಯನ್ನು ಲೋಹಿಯಾ ಅರಿತಿದ್ದರು. ಈ ಸಮುದಾಯದಲ್ಲಿ ಬಡತನ ನೆಲವೂರಿತ್ತು. ಸುಧಾರಣೆ ನಿಂತುಹೋಗಿತ್ತು. ರೈತ ಬೇಸಾಯು ಬಿಟ್ಟು ಹೋಗುವಂಥ ಪರಿಸ್ಥಿತಿಗಳಿದ್ದವು. ಭೂಒಡೆತನದ ಮೇಲಿನ ದುಷ್ಟ ಕಾಯ್ದೆಗಳನ್ನು ರದ್ದುಗೊಳಿಸುವುದನ್ನು ತಡ ಮಾಡಿ, ಅಕ್ರಮಗಳಿಗೆ ಅವಕಾಶ ಕಲ್ಪಿಸಿತ್ತು.

ಭಾರತದ ಅರ್ಥ ವ್ಯವಸ್ಥೆಯ ನಿರ್ಣಾಯಕ ಅಂಶವಾದ ಕೃಷಿ ಮತ್ತು ಹಳ್ಳಿ ಪ್ರದೇಶಗಳ ಸ್ಥಿತಿ–ಗತಿಯನ್ನು ಸುಧಾರಿಸಿ ಸುಸ್ಥಿತಿಗೆ ತರಬೇಕಾದರೆ ಅಪಾರವಾಗಿರುವ ಮಾನವಶಕ್ತಿ ಮತ್ತು ಅಸಮರ್ಪಕ ಸಾಧನ ಸಲಕರಣೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕು ಅನ್ನುವುದು ಲೋಹಿಯಾರ ಅಭಿಪ್ರಾಯ ಆಗಿತ್ತು. ಭಾರತದಲ್ಲಿ ಒಬ್ಬ ಕೃಷಿ–ಕೂಲಿಕಾರನಿಗೆ ಉಳಲು ಸರಾಸರಿ ಒಂದೂವರೆ ಎಕರೆಯಷ್ಟು ಮಾತ್ರ ಜಮೀನಿದೆ. ಇದನ್ನು ಯಂತ್ರಾಧುನಿಕಗೊಳಿಸಬಯಸುವ ಕಮ್ಯುನಿಸ್ಟ್ ಇಲ್ಲವೇ ಬಂಡವಾಳವಾದೀ ವಿಧಾನದ ಯಾವುದೇ ಯೋಜನೆ ವಿಫಲವಾಗುವುದು ಖಂಡಿತ.

ಲೋಹಿಯಾ ಹೀಗೆ ಹೇಳಿದ್ದರು: ಅಮೆರಿಕದಲ್ಲಿ ಒಬ್ಬ ಕೃಷಿಕ ಸರಾಸರಿ ೨೦ ಎಕರೆ ಜಮೀನಿನ ಸಾಗುವಳಿ ಮಾಡುತ್ತಾನೆ. ಸಮುದಾಯ ಬೇಸಾಯ ಪದ್ಧತಿ ಇರುವ ರಷ್ಯಾದಲ್ಲಿ ಇದು ೩೦ ಎಕರೆಗಳಷ್ಟಾಗಿದೆ. ಭಾರತದಲ್ಲಿ ಇದು ಇಂದು ಒಂದೂವರೆ ಎಕರೆಯಾಗಿದೆ. ಇದನ್ನು ಲಾಭದಾಯಕ ಯಂತ್ರಾಧುನಿಕರಣ ಮಟ್ಟಕ್ಕೆ ತರಲು ಕಮ್ಯುನಿಸ್ಟ್ ಇಲ್ಲವೇ ಬಂಡವಾಳವಾದಿ ವಿಧಾನ ಅನುಸರಿಸಿದರೂ, ಪ್ರತಿ ಕೃಷಿ ಕೂಲಿಕಾರನಿಗೆ ಕನಿಷ್ಠ ಅದರಿಂದ ಹತ್ತು ಎಕರೆಯಷ್ಟು ನೆಲ ಕೊಡಬೇಕಾಗುತ್ತದೆ. ಹೀಗೆ ಮಾಡಿದರೆ, ಮೂರು ನಾಲ್ಕು ಕೋಟಿ ಕೃಷಿ ಕೂಲಿಕಾರರಿಗೆ ಉದ್ಯೋಗ ಇಲ್ಲದಾಗುತ್ತದೆ. ಈ ಕೂಲಿಕಾರರು ಅವರ ಪರಿವಾರದವರನ್ನು ಕೂಡಿಸಿ ಲೆಕ್ಕ ಮಾಡಿದರೆ, ಏನಿಲ್ಲವೆಂದರೂ ೮–೧೦ ಕೋಟಿ ಜನ ಉದ್ಯೋಗ ಕಳೆದುಕೊಳ್ಳುತ್ತಾರೆ."

ಭಾರತದ ಕೃಷಿ ಸಮಸ್ಯೆಯನ್ನು, ಈ ಕ್ಷೇತ್ರದ ದಲಿತ ದುಡಿಮೆಗಾರರ ಹಿನ್ನೆಲೆಯಲ್ಲಿ ನೋಡಬೇಕೆಂದು ಲೋಹಿಯಾ ಹೇಳಿದ್ದರು. ಅವರೆಂದರೆ ೧. ಕೃಷಿ ಕೂಲಿಕಾರರು, ೨. ಪಾಲು ಫಸಲಿನ ಬೇಸಾಯಗಾರರು ೩. ಲಾಭದಾಯಕವಲ್ಲದ ಜಮೀನಿನ ಹಳೆಯ ಊಳಿಗ.

ಇವರ ಸಲುವಾಗಿ ಲೋಹಿಯಾ, ಈ ಕಾರ್ಯಕ್ರಮಗಳನ್ನು ಸೂಚಿಸಿದ್ದರು. ೧. ಕೃಷಿ ವೇತನಗಳನ್ನು ಏರಿಸುವುದು ೨. ಪಾಲು ಫಸಲಿನ ಬೇಸಾಯಗಾರನಿಗೆ ಕನಿಷ್ಟ ೨/೩ದಷ್ಟಾದರೂ ಫಸಲು ಸಿಗುವಂತೆ, ಕಾಯ್ದೆಯಲ್ಲಿ ಅವಕಾಶ ಮಾಡಿಕೊಡಬೇಕು. ಮತ್ತು ೩. ಲಾಭದಾಯಕವಲ್ಲದ ಜಮೀನಿನ ಕಂದಾಯವನ್ನು ತೆಗೆದುಹಾಕುವುದು.

ಕೃಷಿಯನ್ನು ಸುಧಾರಿಸಲು, ಉತ್ತಮ ನೀರಾವರಿ, ರಸ್ತೆ, ಸಂಪರ್ಕ, ಗೊಬ್ಬರ ಮತ್ತು ಸಲಕರಣೆಗಳಿಂದ ಮಾತ್ರ ಸಾಧ್ಯವೆಂದು ಲೋಹಿಯಾ ಹೇಳುತ್ತಿದ್ದರು. ದೊಡ್ಡ–ದೊಡ್ಡ ನೀರಾವರಿ ಯೋಜನೆಗಳು ಹಾಗೂ ನದಿ ಹತೋಟಿ ಯೋಜನೆಗಳನ್ನು ಅವರು ತಳ್ಳಿ ಹಾಕಲಿಲ್ಲ. ಆದರೆ, ಸಣ್ಣ–ಸಣ್ಣ ನೀರಾವರಿ ಯೋಜನೆಗಳಿಂದ ಕೃಷಿಗೆ ಹೆಚ್ಚು ಅನುಕೂಲ ಆಗುವುದೆಂಬುದು ಅವರ ವಾದವಾಗಿತ್ತು. ಅದರ ಜೊತೆಗೆ, ಇನ್ನೂ ಕೆಲವು ಪೂರಕ ಕ್ರಮಗಳನ್ನು ಸಹ ಸುರು ಮಾಡಬೇಕು.

ಉಳುವವನಿಗೇ ಭೂಮಿ:

ಭೂ-ಸುಧಾರಣೆಯ ಮೊದಲನೆಯ ಹೆಜ್ಜೆಯಾಗಿ ಕೃಷಿ ಭೂಮಿಯ ಒಡೆತನ ಪದ್ಧತಿಯಲ್ಲಿ ತೀವ್ರರೀತಿಯ ಬದಲಾವಣೆ ತರಬೇಕೆಂದು ಲೋಹಿಯಾ ಹೇಳಿದ್ದರು. "ದೇಶದ ಸ್ವಾತಂತ್ರ್ಯ ಘೋಷಿಸುವುದರ ಜೊತೆಗೆ, ಜಮೀನ್ದಾರಿಯನ್ನು ರದ್ದುಪಡಿಸಿರುವುದನ್ನು ಸಹ ಘೋಷಿಸಬೇಕು" ಎಂದು ಲೋಹಿಯಾ ಸ್ವಾತಂತ್ರ್ಯ ಬರುವುದಕ್ಕೆ ಕೆಲ ದಿನ ಮೊದಲು ಹೇಳಿದ್ದರು. ಈ ರೀತಿ ಮಾಡದಿದ್ದರೆ, ಭಾರತ ಸ್ವಾತಂತ್ರ್ಯ ದೇಗುಲದಲ್ಲಿ ಕಾಲಿಡುತ್ತಿದೆ ಎಂದು ಬೀದಿಯ ಮನುಷ್ಯನಿಗೆ ಅನಿಸದು.

ಸರ್ಕಾರ ಕೂಡಾ ಕೆಲ ಭೂಸುಧಾರಣೆ ಕಾರ್ಯಕ್ರಮಗಳನ್ನು ಪ್ರಕಟಿಸಿತು. ಜಮೀನ್ದಾರಿಯನ್ನು ತೆಗೆದು ಹಾಕುವುದು ಮತ್ತು ಅದಕ್ಕೆ ಪರಿಹಾರಧನ ಕೊಡುವುದು. ವಿವಿಧ ವರ್ಗದವರು ಇನ್ನು ಮೇಲೆ ಭೂಮಿ ಪಡೆಯುವುದರ ಮೇಲೆ ಇತಿಮಿತಿಗಳು, ಗೇಣಿದಾರೀ ಸುಧಾರಣೆ ಕಾಯ್ದೆ ಹಾಗೂ ಜಮೀನನನ್ನು ಅಡವು ಇಡುವುದು, ಮಾರುವುದು, ಸಾಗುವಳಿಗೆ ಬೇರೆಯವರಿಗೆ ಮತ್ತು ಬೇರೆಯವರು ಮತ್ತೊಬ್ಬರಿಗೆ ಕೊಡುವುದು ಇವುಗಳ ಮೇಲೆ ನಿರ್ಬಂಧಗಳು. ಇವೇ ಆ ಕಾರ್ಯಕ್ರಮಗಳು. ಆದರೆ ಕಾಂಗ್ರೆಸ್ ಸರ್ಕಾರದ ಈ ಕ್ರಮಗಳಿಂದ ಹಳ್ಳಿಸಮಾಜದ ಮೂಲ ವರ್ಗ ರಚನೆಯಲ್ಲಿ ಬದಲಾವಣೆ ಬರಲಿಲ್ಲ. ಅವುಗಳಿಂದ, ದೊಡ್ಡ ಸಂಖ್ಯೆಯಲ್ಲಿದ್ದ ಹಳೇ ಜಮೀನ್ದಾರರ ಜಾಗದಲ್ಲಿ ಶ್ರೀಮಂತ ಭೂಮಾಲೀಕರ ಒಂದು ಹೊಸ ವರ್ಗ ನಿರ್ಮಾಣವಾಯಿತು.

ಜಮೀನ್ದಾರಿಯನ್ನು ತೆಗೆದು ಹಾಕಿ ಅದಕ್ಕೆ ಪರಿಹಾರಧನವನ್ನು ಕೊಡುವುದನ್ನು ವಿರೋಧಿಸಿದ ಲೋಹಿಯಾ, ಪರಿಹಾರ ಧನದ ಕಾಂಗ್ರೆಸ್ ಸರ್ಕಾರದ ನೀತಿ ಜನರ ಮೇಲೆ ಹೆಚ್ಚಿನ ಹಣಕಾಸಿನ ಹೊರೆಯನ್ನು ಹೊರಿಸುತ್ತದೆ ಎಂದರು. ಇದು ಗ್ರಾಮ-ಸಮುದಾಯದಲ್ಲಿ ಹೊಸ ವಿಶಿಷ್ಟ ವರ್ಗವನ್ನೇ ನಿರ್ಮಿಸುತ್ತದೆ. 'ದೊಡ್ಡ ಜಮೀನ್ದಾರರಿಗೆ ಭಾರೀ ಮೊತ್ತದಲ್ಲಿ ಹಣ ನೀಡುವುದು ಮತ್ತು ರೈತನ ಹಣ ತುಂಬುವ ಶಕ್ತಿಯ ಆಧಾರದ ಮೇಲೆ ಭೂ ಒಡೆತನದ ಭಿನ್ನ ವರ್ಗಗಳನ್ನು ನಿರ್ಮಿಸುವುದು-ಇವು, ಮೊದಲೇ ಇರುವ ಅಸಮಾನತೆ ಇನ್ನೂ ಬಿರುಸಾಗುವಂತೆ ನೆರವಾಗುತ್ತವೆ'.

ಲೋಹಿಯಾರಿಗೆ, ಭೂಮಿ ಇಲ್ಲದ ಕೃಷಿಕರ ಭೂಮಿಯ ದಾಹ, ಸಮಸ್ಯೆಯ ಮುಖ್ಯ ಅಂಶವಾಗಿತ್ತು. ಉಳಿಗನೇ ಜಮೀನಿನ ಒಡೆಯನಾಗಬೇಕು. ಮಣ್ಣನ್ನು ಖುದ್ದಾಗಿ ಉಳುವವನಿಗೇ ಆ ನೆಲವನ್ನು ಒಪ್ಪಿಸಬೇಕು. 'ಹಳ್ಳಿಯಲ್ಲಿ ಭೂಮಿಯಿಲ್ಲದ ಪ್ರತಿ ವ್ಯಕ್ತಿಗೆ, ತುಂಡು ಎಷ್ಟೇ ಸಣ್ಣದಿದ್ದರೂ, ಭೂಮಿ ಕೊಡಬೇಕು. ಮತ್ತು ಹಾಗೆ ಮಾಡದ ಹೊರತು, ಪರಮಾವಧಿ ಮಿತಿ ಮೀರಿದ ಜಮೀನನ್ನು ಪಂಚಾಯ್ತಿಯ ವಶದಲ್ಲಿಟ್ಟರೆ, ಅದು ಭ್ರಷ್ಟಾಚಾರಕ್ಕೆ ಇಂಬು ಮಾಡಿಕೊಡುತ್ತದೆ'. ಭೂ-ಒಡೆತನವನ್ನು

ಖುದ್ದಾಗಿ ಉಳುವವನಿಗೆ ಒಪ್ಪಿಸುವುದರ ಬಗ್ಗೆ ಖ್ಯಾತ ರಾಜಕೀಯಜ್ಞ ಎ.ಆರ್. ದೇಸಾಯಿ ಹೀಗೆ ಹೇಳಿದ್ದಾರೆ:

"ಎಲ್ಲಾ ಹಿಂದುಳಿದ ದೇಶಗಳ ಇತಿಹಾಸವನ್ನು ನೋಡಿದರೆ ಕೃಷಿ ಅರ್ಥ ವ್ಯವಸ್ಥೆಗೆ ಹೊಸ ರೂಪ ಕೊಡಲು ಮತ್ತು ರೈತ ಸಮುದಾಯದ ಬಡತನವನ್ನು ನಿರ್ಮೂಲ ಮಾಡಲು ಮತ್ತು ಅತಿ ಅಗತ್ಯದ ಉಪಾಯವನ್ನು ಬಿಟ್ಟು ಉಳಿದೆಲ್ಲಾ ಉಪಾಯಗಳು ನಿರರ್ಥಕ ಎನ್ನುವುದು ಸಿದ್ಧವಾಗಿದೆ. ಸ್ವಾತಂತ್ರ್ಯ ನಂತರದ ಭಾರತದ ಕೃಷಿ ಇತಿಹಾಸ ಸಹ ಇದೇ ಅನುಭವವನ್ನು ತೋರಿಸಿದೆ. ಭೂಮಿಯ ಆಶೆ, ರೈತವರ್ಗದ ತೀವ್ರಗೀಳು. ಈ ಆಶೆಯನ್ನು ನೀಗಿಸದ ಹೊರತು, ರೈತ ಸಮುದಾಯದ ಅಸಂತೃಪ್ತಿಗೆ ಕೊನೆಯಿಲ್ಲದಂತಾಗುತ್ತದೆ. ಮತ್ತು ಅದು ಅಂತಃಸ್ಫೋಟದ ಇಲ್ಲವೆ ವ್ಯವಸ್ಥಿತ ಹೋರಾಟದಲ್ಲಿ ವ್ಯಕ್ತಗೊಳ್ಳುತ್ತದೆ" *(ರೀಸೆಂಟ್ ಟ್ರೆಂಡ್ಸ್ ಇನ್ ನ್ಯಾಷ್ನಲಿಸಂ, ಪುಟ ೯೪)*

ಭೂ-ವಿತರಣೆಯ ಬಗ್ಗೆ ಲೋಹಿಯಾರ ವಿಚಾರ ಹೀಗಿತ್ತು: ಐದು ಜನರ ಒಂದು ಕುಟುಂಬ, ಯಂತ್ರಗಳು ಇಲ್ಲವೆ ಹೊರಗಿನ ಕೂಲಿಯಾಳುಗಳ ನೆರವಿಲ್ಲದೇ ಎಷ್ಟೊಂದು ಭೂಮಿಯ ಸಾಗುವಳಿ ಮಾಡಬಹುದೋ ಅದರ ಮೂರರಷ್ಟು ವಿಸ್ತಾರದ ಜಮೀನನ್ನು ಮಾತ್ರ ಕುಟುಂಬದ ವಶದಲ್ಲಿ ಬಿಡಬಹುದು ಮತ್ತು ಅದಕ್ಕೂ ಹೆಚ್ಚಿಗೆ ಜಮೀನನ್ನು ಅದಕ್ಕೆ ಕೊಡಬಾರದು.

ಭಾರತದಲ್ಲಿನ ಭೂ-ಸಮಸ್ಯೆಗೆ ಭೂದಾನ ಮಾತ್ರ ಪರಿಹಾರ ನೀಡಬಲ್ಲದು ಅನ್ನುವ ಮಾತನ್ನು ಲೋಹಿಯಾ ಒಪ್ಪಲಿಲ್ಲ. ಈ ದೇಶದ ಭೂ ಸಮಸ್ಯೆಯನ್ನು ಬಿಡಿಸಲು ಭೂದಾನ ಎಷ್ಟು ಪ್ರಯೋಜಕ ಅನ್ನುವುದರ ಬಗ್ಗೆ ಅವರಿಗೆ ಸಂದೇಹ ಇತ್ತು.

ನಕ್ಸಲ್‌ಬಾರಿಯಲ್ಲಿನ ಗಂಭೀರ ಅಶಾಂತಿ ಭಾರತದಲ್ಲಿನ ಭೂಮಿಯ ದಾಹವನ್ನು ನಿವಾರಿಸಲು ಇನ್ನೂ ಬಹಳಷ್ಟು ಮಾಡಬೇಕಾಗಿದೆ ಅನ್ನುವುದನ್ನು ತೋರಿಸಿದೆ ಎಂಬುದು ಲೋಹಿಯಾ ಅವರ ಅಭಿಪ್ರಾಯವಾಗಿತ್ತು. ಲೋಹಿಯಾ, ೧೯೬೭ರಲ್ಲಿ 'ನಕ್ಸಲ್‌ಬಾರಿ ಅಸನ್ಸೋಲ್ ಮತ್ತು ಕಲ್ಕತ್ತಾ' ಎಂಬ ಶೀರ್ಷಿಕೆಯ ತಮ್ಮ ಒಂದು ಲೇಖನದಲ್ಲಿ ಕೃಷಿವಲಯದ ಸಮಸ್ಯೆಯನ್ನು ನಿವಾರಿಸಲು ಮಾಡಬೇಕಾಗಿದ್ದು ಇನ್ನೂ ಸಾಕಷ್ಟಿರುವಾಗ, ಅದನ್ನು ಪೂರ್ಣ ನಿವಾರಿಸಲಾಗಿದೆ ಎಂದು ಭಾರತ ಸರ್ಕಾರ ತಿಳಿದಿದ್ದು ತಪ್ಪು ಅನ್ನುವುದನ್ನು ವಿವರಿಸಿದ್ದರು.

"ಜಮೀನುದಾರಿಯನ್ನು ರದ್ದುಪಡಿಸಿದ ಸಂದರ್ಭದಲ್ಲಿ ಪತ್ರಕರ್ತರು, ವಿದ್ವಾಂಸರು ಮತ್ತು ಸರ್ಕಾರ, ಎಲ್ಲರೂ ಹೇಳಿದರು: ಕೃಷಿ ಸಮಸ್ಯೆಯನ್ನು ನಿವಾರಿಸಲಾಯಿತು ಎಂದು. ಎರಡನೇ ಸಲ, ಲಕ್ಷಾವಧಿ ಎಕರೆ ಜಮೀನು-ಬಹುಶಃ ಐವತ್ತು ಅರವತ್ತು

ಲಕ್ಷ ಇರಬಹುದು–ಕೊಡುಗೆ ಎಂದು ಬಂದಾಗ–ಅದಕ್ಕೂ ಅನೇಕ ವರ್ಷಗಳು ಬೇಕಾಗಿದ್ದವು– ಜಗತ್ತು ಕಂಡರಿಯದ, ಅದ್ದೂರಿ ಪ್ರಚಾರ ಮಾಡಲಾಯಿತು. ಅದನ್ನು ಕೃಷಿ ಕೂಲಿಕಾರರು ಮತ್ತು ಬಡರೈತರಲ್ಲಿ ಹಂಚಿದಾಗ ಕೃಷಿ ಸಮಸ್ಯೆಯನ್ನು ನಿವಾರಿಸಿಬಿಡಲಾಗಿದೆ. ಇನ್ನು ಅದು ಮತ್ತೆ ತಲೆ ಎತ್ತದೆಂದು ಹೇಳಲಾಯಿತು. ಆದರೆ ಅದು ಮೇಲಿಂದ ಮೇಲೆ ತೊಂದರೆ ಕೊಡುವುದು ತಪ್ಪಲಿಲ್ಲ. ಮೂರನೇ ಸಲ, ಅಂದರೆ, ವಿವಿಧ ರಾಜ್ಯಸರ್ಕಾರಗಳು, ಪರಮಾವಧಿ ಭೂ–ಹಿಡುವಳಿಯ ಮೇಲೆ ಮಿತಿ ಹೇರಿದ ಸಂದರ್ಭ. ಆಗ ವಿತರಣೆಗಾಗಿ ಇನ್ನು ಇಪ್ಪತ್ತು ಲಕ್ಷ ಎಕರೆ ಭೂಮಿ ದೊರೆಯಿತು. ಆಗಲೂ ಹೇಳಲಾಯಿತು: ಈ ಸಮಸ್ಯೆಯಲ್ಲಿ ನಿವಾರಿಸಬೇಕಾದ್ದು ಇನ್ನೇನೂ ಉಳಿದಿಲ್ಲ ಎಂದು. ನಮ್ಮ ದೇಶದಲ್ಲಿ ತರ್ಕ ಮತ್ತು ವಿವೇಕ ಅಡ್ಡದಾರಿ ಹಿಡಿದಿವೆ. ಸದ್ದು ಗದ್ದಲ ಜೋರಾದಾಗ ಮಾತ್ರ ಸಮಸ್ಯೆ ಏನು, ಎಂಥದ್ದು. ಅದಕ್ಕೆ ಪರಿಹಾರ ಏನು ಅನ್ನುವುದನ್ನು ಹುಡುಕಲು ಪ್ರಯತ್ನಿಸಲಾಗುತ್ತದೆ. ಈಗ ಮತ್ತೊಮ್ಮೆ, ನಾಲ್ಕನೇ ಸಲ, ನಕ್ಸಲಬಾರಿಯಲ್ಲಿ ಸಮಸ್ಯೆ ಇದೆ. ಅದನ್ನು ಪರಿಹರಿಸಬೇಕಾಗಿದೆ ಅನ್ನುವ ಕೂಗು ಕೇಳಿಬರುತ್ತದೆ..."(*'ಮ್ಯಾನ್‌ಕೈಂಡ್'೧೯೬೭ ಆಗಸ್ಟ್*)

ಆಹಾರಸೇನೆ

ಹಾಳುಬಿದ್ದ ಮತ್ತು ಸಾಗುವಳಿಯಾಗಿರದ ಜಮೀನನನ್ನು ಬೇಸಾಯಕ್ಕೆ ತರುವ ಉದ್ದೇಶದಿಂದ ಮತ್ತು ಹಳ್ಳಿಗರಿಗೆ ಉದ್ಯೋಗ ಒದಗಿಸಿಕೊಡಬೇಕು ಅನ್ನುವ ಧ್ಯೇಯದಿಂದ ಲೋಹಿಯಾ, ಆಹಾರಸೇನೆಯನ್ನು ರಚಿಸುವ ವಿಚಾರವನ್ನು ಮುಂದಿಟ್ಟರು. ಅದಕ್ಕೆ ಹತ್ತು ಲಕ್ಷ ಜನರನ್ನು ಭರ್ತಿ ಮಾಡಿಕೊಳ್ಳಬೇಕು, ಅವರಿಗೆ ಅರಿವೆ–ಆಸರೆಗಳನ್ನು ಸರ್ಕಾರ ನೀಡಬೇಕು, ಹಾಗೂ ಸಾಲುವಷ್ಟು ಸಂಬಳ ಕೊಡಬೇಕು–ಇವು ಈ ಸೇನೆಯ ರೂಪುರೇಷೆಗಳು. ೧೯೪೨ರಲ್ಲಿ ಬ್ರಿಟನ್ನು ಸಮರದಿಂದ ಸಂಕಷ್ಟಕ್ಕೆ ಸಿಕ್ಕಾಗ ಅಲ್ಲಿನ ಭೂ–ಸೇನೆ, ನಲ್ವತ್ತು ಲಕ್ಷ ಎಕರೆಯಷ್ಟು ಹೊಸ ಜಮೀನನ್ನು ಸಾಗುವಳಿಗೆ ತಂದಿತು. ಭಾರತದಲ್ಲಿ ಇದಕ್ಕೂ ಹೆಚ್ಚಿನ ಮಾನವ–ಬಲ ಮತ್ತು ನೆಲ ಇರುವಾಗ, ಇಂಥ ಸೇನೆಯಿಂದ ಎರಡು ವರ್ಷಗಳ ಅವಧಿಯಲ್ಲಿ ವರ್ಷಕ್ಕೆ ಒಂದು ಕೋಟಿ ಎಕರೆಗಳಷ್ಟು ಹೊಸ ನೆಲದಲ್ಲಿ ಸಾಗುವಳಿ ಪ್ರಾರಂಭವಾಗಬಹುದೆಂದು ಲೋಹಿಯಾ ಅಂದಾಜು ಮಾಡಿದರು. ಪ್ರತಿ ಎಕರೆಗೆ ೧೫೦ ರೂಪಾಯಿ ಮತ್ತು ಸೇನೆಯ ಪ್ರತಿಯೊಬ್ಬನಿಗೆ ೧೦೦ ರೂಪಾಯಿ ಖರ್ಚು ಬರಬಹುದೆಂಬ ಅಂದಾಜಿನ ಮೇಲೆ, ಆಹಾರ ಸೇನೆಗೆ ಮೊದಲ ವರ್ಷದಲ್ಲಿ ೨೫೦ ಕೋಟಿ ರೂಪಾಯಿ ಹಣ ಖರ್ಚಾಗುವುದು ಮತ್ತು ಎರಡನೇ ವರ್ಷದಲ್ಲಿ ೨೫೦ ಕೋಟಿಗಳಷ್ಟಾಗುತ್ತದೆ. ಯಾವುದಾದರೂ ಅನಿರೀಕ್ಷಿತ ಸಂದರ್ಭಕ್ಕೆಂದು, ಇನ್ನು ಬೇರೆ ೫೦ ಕೋಟಿ ರೂಪಾಯಿಗಳನ್ನು ಕಾದಿಟ್ಟರಬೇಕು. ಎರಡನೇ ವರ್ಷದ ಕೊನೆಗೆ ಆಹಾರ ಸೇನೆ, ೪೦ ಲಕ್ಷ ಟನ್ನಿನಷ್ಟು ಹೆಚ್ಚು ಆಹಾರ ಬೆಳೆದು ತನ್ನ ಋಣವನ್ನು ತಿರುಗಿ ಕೊಡುವ ವಿಧಾನವನ್ನು ಆರಂಭಿಸುತ್ತದೆ. ಈ ಹಂತದಲ್ಲಿ, ಆಹಾರ ಸೇನೆಯ ಬಹುತೇಕ ಜನರನ್ನು, ಅವರ ಇಚ್ಛೆಯ ಮೇರೆಗೆ

ಸಹಕಾರ ಸಂಸ್ಥೆಗಳ ಸದಸ್ಯರನ್ನಾಗಿ ಮಾಡಿರಬೇಕು. ಇಲ್ಲ ಸಹಕಾರಿ ಗ್ರಾಮಸ್ಥರನ್ನಾಗಿ ಮಾಡಿರಬೇಕು.

ಇಂಥ ಒಂದು ಸೇನೆ ಬಹಳೇ ಪ್ರಯೋಜನಕಾರಿ. ಅದು ಕೊಡುವ ಲಾಭಗಳ ಬಗ್ಗೆ ಲೋಹಿಯಾ:

"ಆಹಾರ ಸೇನೆಯಿಂದ ಸಂದಾಯವಾಗುವ ಲಾಭಗಳಲ್ಲಿ ಆಹಾರ ಮತ್ತು ಉದ್ಯೋಗದ ತುರ್ತು ಸಮಸ್ಯೆಯ ನಿವಾರಣೆ ಅಷ್ಟೇ ಅಲ್ಲ, ನಮ್ಮ ಜನರ ಸಾಮಾಜಿಕ ಸ್ವರೂಪ ಮತ್ತು ಕೃಷಿ ಅರ್ಥ ವ್ಯವಸ್ಥೆಯಲ್ಲಿ ಚೈತನ್ಯ ಮೂಡುತ್ತದೆ".

ಕೃಷಿ ಮತ್ತು ಕೈಗಾರಿಕಾ ಬೆಲೆಗಳ ಸಮನ್ವಯ

ಕೃಷಿ ಮತ್ತು ಕೈಗಾರಿಕ ದರಗಳ ನಡುವೆ ಸಮನ್ವಯ ಇದ್ದರೆ ಜನತೆಯ ಎಲ್ಲಾ ವರ್ಗಗಳಿಗೆ ನ್ಯಾಯ ದೊರೆಯುತ್ತದೆ. ಉತ್ಪಾದನೆ ಸರಿಯಾಗಿರುತ್ತದೆ ಹಾಗೂ ಸುಖ ಸಂತೃಪ್ತಿ ಸಹ ಇರುತ್ತದೆ ಎಂಬುದು ಲೋಹಿಯಾರ ಅಭಿಪ್ರಾಯವಾಗಿತ್ತು. ಅನೇಕ ದೇಶಗಳಲ್ಲಿ ಬ್ಯೂರೋಗಳು, ಉತ್ಪಾದನೆಯ ವೆಚ್ಚ, ಬೆಲೆ ಸೂಚ್ಯಂಕ ಮತ್ತು ಕೃಷಿ ಹಾಗೂ ಕೈಗಾರಿಕೆಯ ಲಾಭದ ಪ್ರಮಾಣಗಳನ್ನು ಕಂಡು ಹಿಡಿಯುತ್ತವೆ. ಈ ಬ್ಯೂರೋಗಳು ಒಂದು ನಿಯಮವನ್ನು ನಿರ್ಧರಿಸುತ್ತವೆ. ಬೆಲೆಗಳು ಈ ನಿಯಮ ಬಿಟ್ಟು ಹೊಯ್ದಾಡಿದರೆ, ಸಮತೋಲವನ್ನು ಕಾಪಾಡಲು ಕ್ರಮ ತೆಗೆದುಕೊಳ್ಳಲಾಗುತ್ತದೆ.

ಸರಾಸರಿ ಇಳುವರಿಯ ಆರೂವರೆ ಎಕರೆವರೆಗಿನ ಭೂಮಾಲೀಕರಿಗೆ ಭೂಕಂದಾಯ ಇರಬಾರದು. ಏಕೆಂದರೆ ಅವು ಲಾಭದಾಯಕದ ಹಿಡುವಳಿ ಅಲ್ಲ ಎಂದು ಲೋಹಿಯಾ ಹೇಳುತ್ತಿದ್ದರು. ಪ್ರಧಾನಮಂತ್ರಿಯೂ ಸೇರಿದಂತೆ ಕಾಂಗ್ರೆಸ್ ಸರ್ಕಾರ ಸಹ ಆರೂವರೆ ಎಕರೆ ಕೆಳಗಿನ ಭೂಹಿಡುವಳಿ ಲಾಭದಾಯಕ ಅಲ್ಲ ಎಂದು ಹೇಳಿತ್ತು. ಇದರಿಂದ ಸರ್ಕಾರದ ಆದಾಯ ಹೇಳಿಕೊಳ್ಳುವಷ್ಟು ಕಡಿಮೆಯಾಗುತ್ತಿರಲಿಲ್ಲ. ಬದಲಾಗಿ, ಅದು ಬೇರೆ ಲಾಭಗಳನ್ನು ಒದಗಿಸುತ್ತದೆ. ಸಹಿಸಲಸಾಧ್ಯವಾದ ತೆರಿಗೆಗಳ ಭಾರದಿಂದ ಬಹುಸಂಖ್ಯೆ ರೈತರನ್ನು ಮುಕ್ತಗೊಳಿಸಬಹುದು. ಎಂತಹ ಕಾಲಕ್ಕೂ ಈ ಕಂದಾಯ ವಸೂಲಿಯ ಚಿಂತೆಯಿಂದ ಯಾವಾಗಲೂ ವ್ಯಾಕುಲಗೊಂಡಿರುವ ೩೦ ಕೋಟಿ ಕೃಷಿಕರ ಮೇಲೆ ಭೂಕಂದಾಯ ರದ್ದತಿ ಅತ್ಯಂತ ಸ್ವಾಗತಾರ್ಹ ಪರಿಣಾಮವನ್ನುಂಟು ಮಾಡುತ್ತದೆ. ಭೂಕಂದಾಯ ರದ್ದತಿಗಾಗಿ, ಲೋಹಿಯಾ ಯಾವುದೇ ಸರ್ಕಾರದೊಡನೆ ಸಹಕರಿಸಲು ಸಿದ್ಧರಿದ್ದರು.

ಕನ್ನಡಕ್ಕೆ: ಚಾಮರಾಜ್

ಕಾಸಿಲ್ಲದ ಲೋಹಿಯಾ ಮದ್ರಾಸ್‌ನಲ್ಲಿ!

■ ಎ.ಕೆ. ನರಸಿಂಹನ್

ರಾಮಮನೋಹರ ಲೋಹಿಯಾರೊಡನೆ ನನ್ನ ಮುಖಾಮುಖಿ ನಡೆದು ೩೬ ವರ್ಷಗಳೇ* ಸಂದು ಹೋಗಿದ್ದರೂ, ಅವರು ಜರ್ಮನಿಯಿಂದ ವಾಪಸಾಗುವ ಮಾರ್ಗದಲ್ಲಿ ಮದ್ರಾಸ್ ಬಂದು ಸೇರಿದಾಗ ಅವರಿದ್ದ ವಿಚಿತ್ರ ಪರಿಸ್ಥಿತಿಯಿಂದಾಗಿಯೇ ಆ ನೆನಪು ನನ್ನಲ್ಲಿ ಇನ್ನೂ ಹಸಿರಾಗಿ ಉಳಿದಿದೆ.

ಆಗ ನಾನು ದೇಶದ್ರೋಹದ ಆಪಾದನೆ ಮೇಲೆ ಶಿಕ್ಷೆ ಅನುಭವಿಸಿದ ಮಾರನೇ ದಿನವೇ ದಿ ಹಿಂದೂ ಪತ್ರಿಕೆ ಸೇರಿ ಸಂಬಳವಿಲ್ಲದ 'ಶಿಕ್ಷಣಾರ್ಥಿ'ಯಾಗಿ ಕೆಲಸ ಮಾಡುತ್ತಿದ್ದೆ. ಆ ಮೊಕದ್ದಮೆಯಲ್ಲಿ ನನ್ನ ಸಹ ಆಪಾದಿತರಾಗಿದ್ದವರು ಅಮೀರ್ ಹೈದರ್ ಖಾನ್. ಅವರನ್ನು ಮುಖ್ಯ ಅಪರಾಧಿ ಎಂದು ಪರಿಗಣಿಸಿ–ನಮ್ಮಿಬ್ಬರನ್ನೂ ದೇಶದ್ರೋಹಿ ಕರಪತ್ರವೊಂದನ್ನು ಹೊರಡಿಸಿದ್ದಕ್ಕಾಗಿ ವಿಚಾರಣೆಗೆ ಒಳಪಡಿಸಲಾಗಿತ್ತು– ಅವರಿಗೆ ೧೮ ತಿಂಗಳುಗಳ ಕಠಿಣ ಶಿಕ್ಷೆ ವಿಧಿಸಲಾಗಿದ್ದರೆ, ನನ್ನನ್ನು ಚಿಕ್ಕ ವಯಸ್ಸಿನ ಕಾರಣದ ಮೇಲೆ ದಂಡ ವಿಧಿಸಿ ಬಿಟ್ಟು ಬಿಡಲಾಗಿತ್ತು.

ನಾನು 'ಕೆಲಸ'ಕ್ಕೆ ಸೇರಿದ ಕೆಲವು ತಿಂಗಳುಗಳ ನಂತರ ಎಂದು ಕಾಣುತ್ತದೆ, ಸಂಪಾದಕರಾದ ವಿ. ರಂಗಸ್ವಾಮಿ ಅಯ್ಯಂಗಾರರು ನನ್ನನ್ನು ಕರೆದು, ಜರ್ಮನಿಯಿಂದ ಒಬ್ಬ ಯುವ ಭಾರತೀಯ ಬಂದಿದ್ದು, ಆತನಿಗೆ ಏನು ಬೇಕಾಗಿದೆ ಎಂದು ವಿಚಾರಿಸಲು ನನಗೆ ಸೂಚಿಸಿದರು. ರಂಗಸ್ವಾಮಿ ಅಯ್ಯಂಗಾರ್‌ಗೆ ನನ್ನ ಮಾರ್ಕ್ಸ್‌ವಾದಿ ಒಲವುಗಳ

---

*ಈ ಲೇಖನ ಇಂಗ್ಲಿಷ್ ಮೂಲದಲ್ಲಿ ಮೊದಲ ಬಾರಿಗೆ 'ಮ್ಯಾನ್ ಕೈಂಡ್'ನ ೧೯೭೦ರ ಫೆಬ್ರುವರಿ–ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಪರಿಚಯುವಿದ್ದು, ಆ ಕಾರಣದಿಂದಾಗಿಯೇ ಬಹುಶಃ ತಮ್ಮ ಅತಿ ಕಚ್ಚಾ ಸಿಬ್ಬಂದಿಯಲ್ಲೊಬ್ಬನಾದ ನನ್ನನ್ನು, ತಮ್ಮನ್ನು ಕಾಣಲು ಬಂದಿದ್ದ ಆ ಯುವ ಭಾರತೀಯನನ್ನು ಭೇಟಿ ಮಾಡಲು ತಿಳಿಸಿರಬೇಕು. ನನ್ನ ಕನಸಿನ ನಾಯಕರಾಗಿದ್ದ ಮಾರ್ಕ್ಸ್ ಮತ್ತು ಏಂಗೆಲ್ಸರ ಭೂಮಿಯೂ ಮತ್ತು ಸೋವಿಯತ್ ಒಕ್ಕೂಟದ ಹೊರಗೆ ಅತಿ ದೊಡ್ಡ ಕಮ್ಯೂನಿಸ್ಟ್ ಪಕ್ಷವನ್ನೂ ಹೊಂದಿದ್ದ ಜರ್ಮನಿಯಲ್ಲಿನ ಪರಿಸ್ಥಿತಿ ಬಗ್ಗೆ ಯುವ ಭಾರತೀಯನಿಂದ ನೇರ ಮಾಹಿತಿ ಪಡೆಯಲು ನಾನು ಕಾತುರನಾಗಿದ್ದೆ.

ನಾನು ಲೋಹಿಯಾರನ್ನು ಭೇಟಿ ಮಾಡಿ, ಅವರಿಗೇನು ಬೇಕು ಎಂದು ಕೇಳಿದೆ. ಅವರು ನನಗೆ ಮೊದಲ ನೋಟಕ್ಕೆ ಓರ್ವ ಅಲೆಮಾರಿಯಂತೆ ಕಂಡರು ಮತ್ತು ಅವರ ವರ್ತನೆ ಪೂರ್ಣ ಅನೌಪಚಾರಿಕವಾಗಿದ್ದು, ತಮ್ಮ ಭಾವ ಭಂಗಿಗಳಲ್ಲಿ ನಿರ್ಭಿಡೆಯಿಂದ ಇರುವುದು ಕಂಡು ಬಂತು. ಖಂಡಿತ ಅವರು ಕಣ್ಣು ಕುಕ್ಕುವಂತಹ ವ್ಯಕ್ತಿಯಾಗಿರಲಿಲ್ಲ, ನಿಜ; ಆದರೆ ಅವರು ನನ್ನೊಂದಿಗೆ ಮಾತನಾಡತೊಡಗಿದ ರೀತಿಯಲ್ಲಿ ಒಂದು ಪ್ರೀತಿ ಪಾತ್ರತೆಯ ವಿಶಿಷ್ಟ ಮಾನವ ಗುಣ ನನ್ನನ್ನು ಆಕರ್ಷಿಸಿತು. ತಾವು ಇದೀಗ ತಾನೇ ಸಿಲೋನ್‌ನಿಂದ ಹಡಗಿನಲ್ಲಿ ಬಂದಿಳಿದಿದ್ದು, ಕಲ್ಕತ್ತಾಗೆ ಪ್ರಯಾಣ ಮಾಡಬೇಕಿದೆ ಎಂದು ಅವರು ತಿಳಿಸಿದರು. ತಾವು ಸಿಲೋನ್ ತಲುಪುವ ವೇಳೆಗೆ ತಮ್ಮಲ್ಲಿದ್ದ ಹಣವೆಲ್ಲ ಖರ್ಚಾಗಿದ್ದು, ಕೊಲೊಂಬೋದಲ್ಲಿನ ಭಾರತದ ರಾಯಭಾರ ಪ್ರತಿನಿಧಿಯ ಮೂಲಕ ಕಲ್ಕತ್ತಾಗೆ ಒಂದು ಟಿಕೆಟ್ ಹೊಂದಿಸಿಕೊಂಡಿರುವುದಾಗಿ ಅವರು ಹೇಳಿದರು. ಕಲ್ಕತ್ತಾವರೆಗಿನ ಪ್ರಯಾಣದ ಖರ್ಚಿಗಾಗಿ ತಾವು ಸಂಪಾದಕರನ್ನು ಭೇಟಿ ಮಾಡಬಯಸುವುದಾಗಿ ಲೋಹಿಯಾ ತಿಳಿಸಿದರು. ಅಗತ್ಯ ಬಿದ್ದರೆ ತಾವೊಂದು ಲೇಖನ ಬರೆದುಕೊಡುವುದಾಗಿಯೂ ಅವರು ಹೇಳಿದರು.

ಈ ಮಾತುಕತೆಯನ್ನು ನಾನು ಸಂಪಾದಕರಿಗೆ ವರದಿ ಮಾಡಿದಾಗ, ಅವರು ಲೋಹಿಯಾಗೆ ಲೇಖನ ಬರೆಯಲು ಸೂಚಿಸುವಂತೆ ನನಗೆ ತಿಳಿಸಿದರು. ಆಗ ತಾನೇ ಜರ್ಮನಿಯಲ್ಲಿ ಹಿಟ್ಲರ್ ಸಾರ್ವತ್ರಿಕ ಚುನಾವಣೆಗಳಲ್ಲಿ ಗೆದ್ದಿದ್ದು, ಜರ್ಮನಿ ಮತ್ತು ಉಳಿದ ಜಗತ್ತಿನ ಮೇಲೆ ಈ ನಾಜಿ ವಿಜಯದಿಂದ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಬರೆಯಲು ನಾನು ಲೋಹಿಯಾಗೆ ಸೂಚಿಸಿದೆ. ಅವರು ಕೂಡಲೇ ಒಪ್ಪಿ, ಬರೆಯಲು ಕೂತರು. ನಾನು ಕಾಗದ ಮತ್ತು ಸೀಸದಕಡ್ಡಿ ತಂದು ಕೊಟ್ಟೆ.

ಲೋಹಿಯಾ ಎರಡು ತಾಸುಗಳಲ್ಲಿ ತಮ್ಮ ಲೇಖನ ಬರೆದು ಮುಗಿಸಿದರು. ನಾನು ಅದನ್ನು ಬೆರಳಚ್ಚು ಮಾಡಿ ಸಂಪಾದಕರಿಗೆ ನೀಡಿದೆ. ಅವರು ಲೋಹಿಯಾಗೆ ಇಪ್ಪತ್ತು ರೂಪಾಯಿಗಳನ್ನು ನೀಡುವಂತೆ ನಗದು ಗುಮಾಸ್ತನಿಗೆ ಹೇಳಿದರು.

ಹಣ ಪಡೆದಾಗ ಲೋಹಿಯಾ ವ್ಯಕ್ತಪಡಿಸಿದ ಹರ್ಷ ಮತ್ತು ರೋಮಾಂಚನಗಳು ನನಗಿನ್ನೂ ನೆನಪಿದೆ. ಅವರು ಕುಣಿದಾಡುವುದೊಂದೇ ಬಾಕಿ ಇತ್ತು! ಆಗ ಸಂಜೆ ៥

ಗಂಟೆಯಾಗಿದ್ದುದರಿಂದ, ತಮ್ಮ ಜೊತೆ ಬರಲು ಬಿಡುವಿದೆಯೇ ಎಂದು ಅವರು ನನ್ನನ್ನು ಕೇಳಿದರು. ಒಂದು ವಾರದಿಂದ ತಾವು ಒಂದೇ ಅಂಗಿ ಹಾಕಿಕೊಂಡಿದ್ದು, ಅದನ್ನು ಒಗೆಯಲಾಗಿಲ್ಲವಾದ್ದರಿಂದ ತಾವು ಮೊದಲು ಮಾಡಬೇಕಾದ ಕೆಲಸವೆಂದರೆ ಒಂದು ಸಿದ್ಧ ಅಂಗಿಯನ್ನು ಕೊಳ್ಳುವುದು ಎಂದರು. ಜೊತೆಗೆ, "ನನ್ನ ಬಳಿ ಇಪ್ಪತ್ತು ರೂಪಾಯಿಗಳು ಇರುವುದರಿಂದ, ನಾನು ಇಂದು ಮದ್ರಾಸ್‌ನ ಯಾವುದೇ ಶ್ರೀಮಂತನಿಗೆ ಸಮನಾಗಿದ್ದೇನೆ" ಎಂದು ಸಂಭ್ರಮಿಸಿದರು.

ಅವರ ಜೊತೆಗೆ ತಿರುಗಾಡುತ್ತಾ ಜರ್ಮನಿಯ ಬಗ್ಗೆ ಎಲ್ಲ ತಿಳಿದುಕೊಳ್ಳಬಹುದೆಂದು ನಾನು ಖುಷಿಯಾದೆ. ನಾವು ದಿ ಹಿಂದೂ ಕಛೇರಿಯಿದ್ದ ೧೦೦, ಮೌಂಟ್ ರಸ್ತೆಯ ಹಳೆಯ ಕಟ್ಟಡದಿಂದ ಹೊರ ಬರುತ್ತಿದ್ದಂತೆ, ಅಂಗಿ ಕೊಳ್ಳಲು ಚೈನಾ ಬಜ಼ಾರ್‌ಗೆ ಹೋಗುವುದಕ್ಕಾಗಿ ಬಸ್ ಅಥವಾ ಟ್ರ್ಯಾಮ್ ಹಿಡಿಯಬೇಕೆಂದು ಸೂಚಿಸಿದೆ. ಆದರೆ ಲೋಹಿಯಾ, ತಮ್ಮ ರೈಲಿಗೆ ಇನ್ನೂ ಬಹಳ ಕಾಲವಿರುವುದರಿಂದ ನಡೆದೇ ಹೋಗೋಣವೆಂದರು. ನಾನು ಒಪ್ಪಿದೆ.

ನಾವಿಬ್ಬರೂ ಮನ್ರೋ ಪ್ರತಿಮೆ ಬಳಿಗೆ ಸಾರುತ್ತಿದ್ದಂತೆ, ಲೋಹಿಯಾ ಎಲ್ಲವನ್ನೂ ವಿಚಿತ್ರ ರೀತಿಯಲ್ಲಿ ನೋಡುತ್ತಿದ್ದುದನ್ನು ನಾನು ಗಮನಿಸಿದೆ. ನಾನು, ಏನು ವಿಷಯ? ಕಣ್ಣಿನ ತೊಂದರೆ ಏನಾದರೂ ಇದೆಯಾ? ಎಂದು ಕೇಳಿದೆ. ಆಗ ಅವರು ಬಂದರಿನಲ್ಲಿ ತಾವು ತಮ್ಮ ಕನ್ನಡಕ ಕಳೆದುಕೊಂಡ ಬಗೆಯನ್ನೂ, ಹೊಸದೊಂದನ್ನು ಖರೀದಿಸಲಾಗದ ಸ್ಥಿತಿಯನ್ನೂ ವಿವರಿಸಿದರು. ಅವರಿಗೆ ದೊಡ್ಡ ಪ್ರಮಾಣದ ದೃಷ್ಟಿ ದೋಷವಿದ್ದುದು ನನ್ನ ಗಮನಕ್ಕೆ ಬಂದಿತು. ನನಗೂ ಸಮೀಪ ದೃಷ್ಟಿ ದೋಷವಿದ್ದುದರಿಂದ, ಅವರು ಮದ್ರಾಸನ್ನು ಚೆನ್ನಾಗಿ ನೋಡಲು ನನ್ನ ಕನ್ನಡಕವನ್ನು ಬಳಸಬಹುದೇ ಎಂದು ಕೇಳಿದೆ. ನನ್ನ ಕನ್ನಡಕದ ಗಾಜಿನ ಶಕ್ತಿ –೨.೫ ಆಗಿದ್ದು; ಲೋಹಿಯಾ ದಪ್ಪ ಗಾಜಿನ ಕನ್ನಡಕವನ್ನು ಬಳಸುವವರಾಗಿದ್ದರೂ, ಅವರು ನನ್ನ ಕನ್ನಡಕವನ್ನು ಬಳಸಲು ಒಪ್ಪಿದರು. ಈಗ ಎಲ್ಲವೂ ಬರಿಗಣ್ಣಿಗಿಂತ ಚೆನ್ನಾಗಿ ಕಾಣುತ್ತಿದೆ ಎಂದು ಅವರು ಹೇಳಿದರು. ನನಗೆ ಸಮಾಧಾನವಾಯಿತು.

ಎಷ್ಟೋ ವರ್ಷಗಳ ನಂತರ–ಸುಮಾರು ಎರಡು ದಶಕಗಳ ನಂತರ–ಲೋಹಿಯಾ ಗೆಳೆಯ 'ವಿಜ್ಜಿ'ಯೊಂದಗೆ ಮೈಲಾಪುರದ ನನ್ನ ಮನೆಗೆ ಭೇಟಿ ನೀಡಿದಾಗ, ಅವರು ಮದ್ರಾಸನ್ನು ಮೊದಲ ಬಾರಿಗೆ ಹೇಗೆ ನನ್ನ ಕನ್ನಡಕದ ಮೂಲಕವೇ ನೋಡಿದ್ದರು ಎಂಬುದನ್ನು ನೆನಪು ಮಾಡಿದೆ.

ನಾನು ಲೋಹಿಯಾರಲ್ಲಿ ಮಗುವಿನ ಸರಳತೆಯನ್ನು ಕಂಡೆ. ಜಗತ್ತಿನ ಪ್ರತಿಯೊಂದರ ಬಗ್ಗೆಯೂ ಅವರಿಗೆ ಸಂಭ್ರಮವಿತ್ತು ಮತ್ತು ಬದುಕಿನ ಪ್ರತಿಯೊಂದು ಗಳಿಗೆಯನ್ನೂ ಅವರು ಆನಂದಿಸುತ್ತಿರುವಂತಿತ್ತು. ನಾನು ಜರ್ಮನಿಯಯಲ್ಲಿನ

ಅವರ ಜೀವನ, ಅವರ ಸಂಶೋಧನ ಮತ್ತು ಕಮ್ಯೂನಿಸಂ ಬಗ್ಗೆ ಕೇಳಿದೆ. ತಾವು ಮಾರ್ಕ್ಸ್ ಮತ್ತು ಏಂಗೆಲ್ಸರನ್ನು ಮೂಲ ಜರ್ಮನ್ ಭಾಷೆಯಲ್ಲೇ ಓದಿಕೊಂಡಿರುವುದಾಗಿಯೂ, ತಮ್ಮೊಂದಿಗೆ ಪೆಟ್ಟಿಗೆ ತುಂಬಾ ಅವರ ಕೃತಿಗಳನ್ನು ಕೊಂಡೊಯ್ಯುತ್ತಿರುವುದಾಗಿಯೂ ಅವರು ಹೇಳಿದರು. ನನಗೆ ಚೆನ್ನಾಗಿ ತಿಳಿದಂತೆ, ಬ್ರಿಟಿಷ್ ಅಧಿಕಾರ ವರ್ಗಕ್ಕೆ ಕಮ್ಯೂನಿಸಂ ಕುರಿತಂತೆ ಒಂದು ರೀತಿಯ ಪವಿತ್ರ ಭಯವಿದ್ದು, ಅವರು ಹೇಗೆ ಈ ಅಪಾಯಕರಿ ಸಾಮಗ್ರಿಯನ್ನು ದೇಶದೊಳಕ್ಕೆ ಬಿಟ್ಟರು ಎಂದು ವಿಚಾರಿಸಿದೆ. ಸುಂಕದ ಅಧಿಕಾರಿಗಳು ಈ ಪುಸ್ತಕಗಳು ಯಾವುದಕ್ಕೆ ಸಂಬಂಧಿಸಿದವು ಎಂದು ಕೇಳಿದಾಗ, ಅವು ಜರ್ಮನ್‌ನಲ್ಲಿದ್ದುದರಿಂದ ಅವೆಲ್ಲ ತತ್ವಶಾಸ್ತ್ರಕ್ಕೆ ಸಂಬಂಧಿಸಿದವು ಎಂದು ಹೇಳಿ ಪಾರಾಗಿದ್ದಾಗಿ ಅವರು ತಿಳಿಸಿದರು. ಅಧಿಕಾರಿಗಳು ಇಂತಹ ವಿಷಯಗಳಲ್ಲಿ ಶುದ್ಧ ಅಜ್ಞಾನಿಗಳಾಗಿದ್ದು, ಹೇಗೆ ಅವರನ್ನು ಮೂರ್ಖರನ್ನಾಗಿಸಬಹುದೆಂದು ಚರ್ಚಿಸುತ್ತಾ ನಾವು ಮನಸಾರೆ ನಕ್ಕೆವು. ಪುಸ್ತಕಗಳು ಕಮ್ಯೂನಿಸಂಗೆ ಸಂಬಂಧಿಸಿದ್ದುವೆಂದು ತಿಳಿಸಿದ್ದರೆ ಖಂಡಿತ ಅವನ್ನೆಲ್ಲ ಅಧಿಕಾರಿಗಳು ವಶಪಡಿಸಿಕೊಂಡು ಲೋಹಿಯಾರನ್ನು ವಿಚಾರಣೆಗೆ ಒಳಪಡಿಸುತ್ತಿದ್ದರು. ಲೋಹಿಯಾ ಚೀನಾ ಬಜ಼ಾರ್‌ನಲ್ಲಿ ಎರಡೂವರೆ ರೂಪಾಯಿಗಳಿಗೆ ಒಂದು ವಿಶೇಷ ನೇಯ್ಗೆಯುಳ್ಳ ರೇಷ್ಮೆ ಅಂಗಿಯನ್ನು ಕೊಂಡರು. ಅಲ್ಲೇ ತಮ್ಮ ಹಳೆಯ ಕೊಳಕು ಅಂಗಿಯನ್ನು ಬಿಚ್ಚಿ ಹೊಸ ಅಂಗಿಯನ್ನು ತೊಟ್ಟುಕೊಂಡರು.

ಅಂಗಡಿಯಿಂದ ಆಚೆ ಬರುತ್ತಿದ್ದಂತೆ, "ನನ್ನ ಬಳಿ ಇನ್ನೂ ಸಾಕಷ್ಟು ಹಣ ಉಳಿದುಬಿಟ್ಟಿದೆ... ನಾನು ನಿಮ್ಮ ಹೆಂಡತಿಗಾಗಿ ಏನನ್ನಾದರೂ ಕೊಳ್ಳಬೇಕು. ಒಂದಿಷ್ಟು ಹೂ ಕೊಳ್ಳುವೆ" ಎಂದರು.

ನಾವು ಹೂವಿನ ಬಜ಼ಾರ್‌ಗೆ ಹೋದೆವು. ಲೋಹಿಯಾ ಒಂದು ರೂಪಾಯಿಗೆ ಕೈ ತುಂಬಾ ಹೂ ಕೊಂಡರು. ನಂತರ ಅವರು, ತಾವು ಬಹಳ ದಿನಗಳಿಂದ ಸ್ನಾನ ಮಾಡಿಲ್ಲವಾದ್ದರಿಂದ ಸ್ನಾನಕ್ಕಾಗಿ ಕಾತರಿಸುತ್ತಿರುವುದಾಗಿ ತಿಳಿಸಿದರು. ನಮ್ಮ ಮನೆಗೆ ಬಂದು ಸ್ನಾನ ಮಾಡಿ ಊಟ ಮುಗಿಸಿ ರೈಲಿಗೆ ಹೊರಡಬಹುದೆಂದು ನಾನು ಅವರನ್ನು ಆಹ್ವಾನಿಸಿದೆ. ಅವರು ಕೂಡಲೇ ಒಪ್ಪಿದರು. ನಾವು ಟ್ರ್ಯಾಂ ಹಿಡಿದು ಮನೆಗೆ ಬಂದೆವು. ನಾನು ಆಗ ಸುಲಿವನ್ಸ್ ಗಾರ್ಡನ್ಸ್ ರಸ್ತೆಯಲ್ಲಿದ್ದ ನನ್ನ ಮಾವನವರ ಮನೆಯಲ್ಲಿ ವಾಸವಾಗಿದ್ದೆ. ನಾನು ಲೋಹಿಯಾರನ್ನು ನನ್ನ ಮಾವನವರಿಗೆ ಮತ್ತು ಹೆಂಡತಿಗೆ ಪರಿಚಯಿಸಿದೆ. ಅವರು ನನ್ನ ಹೆಂಡತಿಗೆ ಹೂ ನೀಡಿ ನಮಸ್ಕರಿಸಿದರು. ಇದು ನನ್ನ ಹೆಂಡತಿಗೆ ಹೊಸ ಅನುಭವವಾಗಿದ್ದು, ಅವಳಿಗೆ ಏನು ಹೇಳಬೇಕೋ ತೋಚದಂತಾಯಿತು!

ನಾನು ಲೋಹಿಯರನ್ನು ಮನೆಯ ಹಿತ್ತಲಿಗೆ ಕರೆದುಕೊಂಡು ಹೋಗಿ ಎತ್ತರದಲ್ಲಿದ್ದ ನಲ್ಲಿಯ ಕೆಳಗೆ ಕೂತು ಸಮೃದ್ಧವಾಗಿ ಸ್ನಾನ ಮಾಡಬಹುದೆಂದು ಸೂಚಿಸಿದೆ.

ಲೋಹಿಯಾ ಈ ಸ್ನಾನವನ್ನು ಎಷ್ಟು ಆನಂದಿಸಿದರೆಂದರೆ, ಅವರು ಪದೇ ಪದೇ, 'ಸುಖವೆಂದರೆ ಇದಪ್ಪಾ!' ಎಂದು ತಮಗೆ ತಾವೇ ಹೇಳಿಕೊಳ್ಳುತ್ತಿದ್ದುದು ಕೇಳಿಸುತ್ತಿತ್ತು. ಅವರು ಸ್ನಾನದ ನಂತರ ಎಷ್ಟು ಹುರುಪಿನಿಂದ ಇದ್ದರೆಂದರೆ, ನಮ್ಮೊಡನೆ ಹಲವು ಹಾಸ್ಯ ಪ್ರಸಂಗಗಳನ್ನು ಮುಕ್ತವಾಗಿ ಹಂಚಿಕೊಂಡರಲ್ಲದೆ, ತೃಪ್ತಿಯಾಗಿ ಊಟ ಮಾಡಿದರು.

ಲೋಹಿಯಾ ರೈಲು ಹತ್ತಿದಾಗ ನನಗೆ ಪತ್ರ ಬರೆಯುವುದಾಗಿ ತಿಳಿಸಿದರು. ಅವರು ಕಲ್ಕತ್ತಾ ತಲುಪಿದ ಮೇಲೆ ರಾಜಕಾರಣದಲ್ಲಿ ಎಷ್ಟು ಮುಳುಗಿ ಹೋದರೆಂದರೆ, ನನ್ನನ್ನು ಸಂಪೂರ್ಣವಾಗಿ ಮರೆತೇಬಿಟ್ಟರೆಂದು ಕಾಣುತ್ತದೆ.

ಕೆಲವು ವರ್ಷಗಳ ನಂತರ ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ನಾನವರನ್ನು ದೂರದಿಂದ ಕಂಡೆನಾದರೂ, ಮಾತನಾಡಿಸಲಾಗಲಿಲ್ಲ. ಇದಾದ ಎಷ್ಟೋ ವರ್ಷಗಳ ನಂತರ ಸಮಾಜವಾದಿ ಚರಿತ್ರೆಕಾರ ಎಂ.ಎಸ್.ಅಪ್ಪಾರಾವ್ ಬಳಿ, ಮುಂದಿನ ಬಾರಿ ಲೋಹಿಯಾ ಮದ್ರಾಸ್‌ಗೆ ಬಂದಾಗ ನಮ್ಮ ಮನೆಗೆ ಕರೆ ತಂದರೆ ಸಂತೋಷವಾಗುತ್ತದೆ ಎಂದು ನನ್ನ ಆಸೆ ತಿಳಿಸಿದೆ. ಈ ಮಧ್ಯೆ ಲೋಹಿಯಾ ಸಮಾಜವಾದಿ ಪಕ್ಷದ ದೊಡ್ಡ ನಾಯಕರಾಗಿದ್ದರು ಮತ್ತು ನಾನೂ ನನ್ನ ಯೌವ್ವನದ ಕ್ರಾಂತಿಕಾರಿ ಕಮ್ಯೂನಿಸಂ ಆಕರ್ಷಣೆಯಿಂದ ದೂರ ಸರಿದು, ಸಕ್ರಿಯ ರಾಜಕಾರಣದಿಂದ ವಿಮುಖನಾಗಿದ್ದೆ.

ಲೋಹಿಯಾ ಅವರ ನನ್ನ ಎರಡನೇ ಭೇಟಿ ಬಹು ಸಂಕ್ಷಿಪ್ತವಾಗಿದ್ದು, ರಾಜಕಾರಣದ ಬಗ್ಗೆ ಯಾವುದೇ ಗಂಭೀರ ಚರ್ಚೆ ಸಾಧ್ಯವಾಗಲಿಲ್ಲ. ಆದರೆ ಆಗಲೂ, ಅವರು ಅದೇ ಇಪ್ಪತ್ತೈದರ ಹರೆಯದ ಆ ಸ್ವಯಂಸ್ಫೂರ್ತ ಸಂಭ್ರಮ ಹಾಗೂ ತೀವ್ರ ಮಾನವ ಸ್ಪಂದನಗಳ ಮುಕ್ತ ಯುವಕನಂತೆಯೇ ನನ್ನನ್ನು ಬೆರಗುಗೊಳಿಸಿದ್ದಂತೂ ನಿಜ.

(ಕನ್ನಡಕ್ಕೆ: ಡಿಎಸ್ಸೆನ್)

■

" ಜಗತ್ತಿನ ಆಲೋಚನಾಕ್ರಮದ ಮೇಲೆ ಯುರೋಪ್ ಎಂತಹ ದಟ್ಟ ಪ್ರಭಾವ ಬೀರಿ ಅದನ್ನು ಆಳುತ್ತಿದೆಯೆಂದರೆ, ಐರೋಪ್ಯೇತರ ದೇಶಗಳ ವಿಶ್ವವಿದ್ಯಾನಿಲಯಗಳ ಜನಕ್ಕೆ ಈ ಆಲೋಚನಾಕ್ರಮವನ್ನೂ, ಅದರ ಪರಿಕಲ್ಪನೆಗಳನ್ನೂ ಒಮ್ಮೆ ನಿಕಟ ಪರೀಕ್ಷೆಗೆ ಒಡ್ಡಬೇಕು ಎಂದು ಅನ್ನಿಸಿಯೇ ಇಲ್ಲ. ಗಾಣದೆತ್ತುಗಳಂತೆ ಅವರು, ಈ ಪರಿಕರಗಳು ಅಸಮರ್ಪಕವಾಗಿದ್ದು ಅವನ್ನು ಕನಿಷ್ಠ ಪುನರ್ವಿನ್ಯಾಸಗೊಳಿಸಬೇಕೆಂಬ ಆಲೋಚನೆಯೂ ಇಲ್ಲದೆ ನಮ್ಮ ಸಾಮಾಜಿಕ ಸನ್ನಿವೇಶಗಳನ್ನು ಅಧ್ಯಯನ ಮಾಡಲು ಬಳಸಿಕೊಳ್ಳುತ್ತಲೇ ಇದ್ದಾರೆ. "

–ಲೋಹಿಯಾ ('ರಾಜಕೀಯದ ಮಧ್ಯೆ ಬಿಡುವು')

ಅಮೆರಿಕಾದಲ್ಲಿ ಲೋಹಿಯಾ ಬಂಧನ!

■ ಎಡ್ವಿನ್ ಕಿಂಗ್

ಲೋಹಿಯಾಗೆ ಅಮೆರಿಕಾದಲ್ಲಿ ಬಹಳ ಜನ ಸ್ನೇಹಿತರಿದ್ದರು. ವಿಶ್ವ ಸಂಸ್ಥೆಯ ಅಡ್ಲಾಯ್ ಸ್ಟೀವನ್‌ಸ್ಟನ್‌ರಿಂದ ಹಿಡಿದು, ಅಹಿಂಸೆ ಮತ್ತು ನಾಗರಿಕ ಅಸಹಕಾರ ಆಂದೋಲನಗಳ ಬೆಂಬಲಿಗರೂ ಮತ್ತು 'ಪ್ರೀತಿಪಾತ್ರ ಸಮುದಾಯ' ಪರಿಕಲ್ಪನೆಯ ಪ್ರತಿಪಾದಕರೂ ಆದ ಎ.ಜೆ.ಮಸ್ಟ್ ಅವರವರೆಗೆ. ೧೯೬೪ರ ಬೇಸಿಗೆಯಲ್ಲಿ ಲೋಹಿಯಾ ಹಲವು ಕಾಲೇಜುಗಳಲ್ಲಿ ಭಾಷಣ ಮಾಡಲು ಅಮೆರಿಕಾಗೆ ಆಹ್ವಾನಿತರಾಗಿದ್ದರು. ದೇಶದ ಪಶ್ಚಿಮ ಭಾಗದಲ್ಲಿ ಅವರು ಪ್ರವಾಸ ಮುಗಿಸಿ ಮಿಸಿಸಿಪ್ಪಿಗೆ ಬಂದರು. ಅದೊಂದು ವೈಯುಕ್ತಿಕ ಭೇಟಿಯಾಗಿತ್ತಾದರೂ, ಮಿಸಿಸಿಪ್ಪಿ ಆಗ ನಾಗರಿಕ ಹಕ್ಕುಗಳ ಆಂದೋಲನದ ಕೇಂದ್ರವೂ ಆಗಿದ್ದುದರಿಂದ; ಆ ಭೇಟಿಗೊಂದು ಉದ್ದೇಶವೂ ಒದಗಿ ಬಂದಿತ್ತೆಂದು ಎಂದು ಹೇಳಬಹುದು.

ಮೇ ೨೭ರಂದು ಬೆಟ್ಟಲ್ಸ್ ಅವರು ಲೋಹಿಯಾರನ್ನು ಜಾಕ್ಸನ್ ವಿಮಾನ ನಿಲ್ದಾಣದಲ್ಲಿ ಎದುರುಗೊಂಡರು. ಅವರೊಂದಿಗೆ ಕೊನೆಕ್ಟಿಕಟ್‌ನ ಗ್ರೀನ್‌ವಿಚ್‌ನಿಂದ ಬಂದ ಕವಿ ಹಾಗೂ ಕಾದಂಬರಿಕಾರ ರುತ್ ಸ್ಟೀಫನ್ ಎಂಬ ಅವರ ಅಮೆರಿಕಾದ ಗೆಳೆಯರೂ ಇದ್ದರು. ಇವರೆಲ್ಲ ಮೊರಿಸನ್ಸ್ ಕೆಫೆಟೇರಿಯಾದ ಶಾಖೆಯೊಂದರ ಬಳಿ ರಾತ್ರಿ ಊಟಕ್ಕಾಗಿ ಇಳಿದರು. ಕೆಫೆಟೇರಿಯಾದ ವ್ಯವಸ್ಥಾಪಕ ೫೪ಳ ವರ್ಷದ ಈ ಭಾರತೀಯನನ್ನು, ಆತನ ಕಂದು ಬಣ್ಣದ ಚರ್ಮವನ್ನೂ ದಿಟ್ಟಿಸಿ ನೋಡಿ ಊಟ ಪೂರೈಸಲು ನಿರಾಕರಿಸಿದ. ಸರಿಯೆಂದು, ಈ ಗೆಳೆಯರ ಗುಂಪು ಅಲ್ಲಿಂದ ಹೊರಟಿತು. ಅದಕ್ಕೆ ಮುನ್ನ ಲೋಹಿಯಾ ಆ ಬಿಳಿಯ ವ್ಯವಸ್ಥಾಪಕನಿಗೆ, ತಾವು ನಾಳೆ ಅಲ್ಲಿಗೆ ಮತ್ತೆ ಬಂದರೂ ಬರಬಹುದೆಂದು ತಿಳಿಸಿದರು.

ಆ ರಾತ್ರಿ ಲೋಹಿಯಾ ಟೌಗ್ಲೂ ಕಾಲೇಜಿನಲ್ಲಿ ನಾಗರಿಕ ಹಕ್ಕುಗಳ ಆಂದೋಲನದಲ್ಲಿ ಸಕ್ರಿಯವಾಗಿದ್ದ ಹಲವು ವಿದ್ಯಾರ್ಥಿಗಳನ್ನು ಭೇಟಿ ಮಾಡಿದರು. ನಾವು ಬೆಟ್ಟಲ್ಸ್ ಮತ್ತು ನಮ್ಮ ಮನೆಯಲ್ಲಿ ಅಮೆರಿಕಾ, ಮಿಸಿಸಿಪ್ಪಿಯಲ್ಲಿನ ವರ್ಣಭೇಧ ವಿರೋಧಿ ಆಂದೋಲನ ಹಾಗೂ ಜಾಕ್ಸನ್ ನಗರದಲ್ಲಿನ ಇತ್ತೀಚಿನ ಘಟನಾವಳಿಗಳ ಬಗ್ಗೆ ವಿವರವಾಗಿ ಮಾತನಾಡಿದವು. ಮಾರನೇ ದಿನ ಲೋಹಿಯಾ ರೆಸ್ಟೋರೆಂಟ್‌ಗೆ ಮತ್ತೆ ಭೇಟಿ ನೀಡುವ ನಿರ್ಧಾರ ಪ್ರಕಟಿಸಿದರು. ನಾವು ಇಲ್ಲಿ ದಸ್ತಗಿರಿಯಾಗುವುದೆಂದರೇನು ಎಂಬುದನ್ನು ಅವರಿಗೆ ವಿವರಿಸಿದೆವು. ಆದರೆ ಹಿಂದಿನ ದಿನದ ಘಟನೆ ಅವರನ್ನು ವಿಚಲಿತಗೊಳಿಸಿತ್ತು. ಅಲ್ಲಿಗೆ ಹಿಂದಿರುಗದಿರುವುದು ಅಹಿಂಸೆಯ ತತ್ವಗಳಿಗೆ ಮಾಡುವ ಅಪಚಾರವೆಂದು ಅವರು ಅಭಿಪ್ರಾಯಪಟ್ಟರು. ನಿನ್ನೆಯ ಪ್ರಸಂಗವನ್ನು ನಿರ್ಲಕ್ಷಿಸಿದಲ್ಲಿ ತಾನು ಪುಕ್ಕಲನೂ, ಸ್ಥಳೀಯ ಕಪ್ಪು ಜನರ ಬದುಕಿನ ಬಗ್ಗೆ ತನಗೆ ಕಾಳಜಿ ಇಲ್ಲವೆಂದು ತನಗೇ ಅನ್ನಿಸಲಾರಂಭಿಸುವ ಸಂಕಟವನ್ನು ವಿವರಿಸಿದರು.

ಮಾರನೆಯ ಬೆಳಿಗ್ಗೆ ಆ ಕೆಫೆಟೇರಿಯಾ ಸರಣಿಯ ಚಿಕ್ಕ ಶಾಖೆಯೊಂದಕ್ಕೆ ಭೇಟಿ ನೀಡಲು ನಿರ್ಧರಿಸಲಾಯಿತು.(ನಿನ್ನೆ ಭೇಟಿ ನೀಡಿದ ಶಾಖೆ ಜಾಕ್ಸನ್ ನಗರದ ವಾಣಿಜ್ಯ ವಲಯದ ಹೃದಯ ಭಾಗದಲ್ಲಿದ್ದು, ಸಮೂಹ ಹಿಂಸೆಯ ಸಾಧ್ಯತೆ ಹೆಚ್ಚಿತ್ತು. ಲೋಹಿಯಾಗೆ ವೈಯುಕ್ತಿಕ ಹಿಂಸೆಯ ಭಯವಿರಲಿಲ್ಲವಾದರೂ, ತಮ್ಮ ಈ ಪ್ರಯತ್ನ ಹೆಚ್ಚು ಗಲಾಟೆಗೆ ಅವಕಾಶ ನೀಡಬಾರದೆಂದು ಅವರು ನಿರ್ಧರಿಸಿದ್ದರು.) ಮೊರಿಸನ್ಸ್‌ನ ವ್ಯವಸ್ಥಾಪಕರು ಮತ್ತು ಇತರ ಆಡಳಿತ ಸಿಬ್ಬಂದಿಗೂ, ಪೋಲೀಸ್ ಮತ್ತು ಪತ್ರಕರ್ತರಿಗೂ ಸುದ್ದಿ ನೀಡಲಾಯಿತು. ನಾನು ಮತ್ತು ನನ್ನ ಪತ್ನಿ ಜೇನಟ್ ಲೋಹಿಯಾರನ್ನು ನಮ್ಮ ವಾಹನದಲ್ಲಿ ಜಾಕ್ಸನ್‌ಗೆ ಕೊಂಡೊಯ್ದೆವು. ನಂತರ ನಾವು ದಂಪತಿಗಳು ಟೌಗ್ಲೂ ಕಾಲೇಜಿನ ಹಲವು ವಿದ್ಯಾರ್ಥಿಗಳೊಂದಿಗೆ ಈ ಘಟನೆ ನೋಡಲು ಸ್ವಲ್ಪ ದೂರದಲ್ಲಿ ನಿಂತೆವು.

ಜಾಕ್ಸನ್ ಡೈಲಿ ನ್ಯೂಸ್ ಪತ್ರಿಕೆಯ ಯಾರೋ ಒಬ್ಬರಿಗೆ, ಭಾರತದ ನಾಗರಿಕ ಸತ್ಯಾಗ್ರಹಿಯೊಬ್ಬ ಮಿಸಿಸಿಪ್ಪಿಯಲ್ಲಿ ಅಹಿಂಸಾತ್ಮಕ ಪ್ರತಿಭಟನೆ ನಡೆಸಿ ದಸ್ತಗಿರಿಯಾಗಬಹುದಾದ ಸಾಧ್ಯತೆಯ ಮಹತ್ವದ ಅರಿವಾಗಿತ್ತೆಂದು ಕಾಣುತ್ತದೆ. ಆ ಪತ್ರಿಕೆ ಈ ಮುಖಾಮುಖಿಯ ವಿವರವಾದ ವರದಿಯೊಂದನ್ನಲ್ಲದೆ ಲೋಹಿಯಾರೊಂದಿಗೆ ಒಂದು ಸಂದರ್ಶನವನ್ನೂ ಪ್ರಕಟಿಸಿತು. ಈ ಅಸಾಮಾನ್ಯ ವರದಿಗೆ ಬಹುಶಃ ಇದು ಓರ್ವ ವಿದೇಶಿ ರಾಜಕಾಣಿಗೆ ಸಂಬಂಧಿಸಿದ್ದು ಎಂಬುದೇ ಕಾರಣವಾಗಿರಬಹುದು. ಬಿಳಿಯರ ಪತ್ರಿಕೆಯ ಈ ವರ್ತನೆ ವಿಶೇಷವಾಗಿತ್ತು ಮತ್ತು ಸಂಪಾದಕರ ಕತ್ತರಿ ಪ್ರಯೋಗದಿಂದ ಮುಕ್ತವಾಗಿತ್ತು. ಪೋಲೀಸರ ವರ್ತನೆ ಕೂಡಾ ಅಸಾಮಾನ್ಯ ರೀತಿಯದಾಗಿತ್ತು. ಅವರು ನಾಗರಿಕ ಹಕ್ಕುಗಳ ಆಂದೋಲನದ ಹಲವು

ಕಾರ್ಯಕರ್ತರನ್ನು ಹೊಡೆದು ಓಡಿಸಿದ್ದರು. ಈ ಘಟನೆಯ ಪತ್ರಿಕಾ ವರದಿಯ ಒಂದು ಭಾಗ ಇಲ್ಲಿದೆ:

ಡಾ॥ ಲೋಹಿಯಾ ಈ ಮೊದಲೇ ಸಾರ್ವಜನಿಕವಾಗಿ ಪ್ರಕಟಿಸಿದ್ದಂತೆ, ರೆಸ್ಟೋರೆಂಟ್ ಬಳಿ ಮೊಣಕಾಲಿನವರೆಗಿನ ನಿಲುವಂಗಿಯಲ್ಲಿ ಕಾಣಿಸಿಕೊಂಡರು. ಅವರು ಕೆಫೆಟೇರಿಯಾವನ್ನು ಪ್ರವೇಶಿಸಲು ಯತ್ನಿಸುತ್ತಿದ್ದಂತೆ, ವ್ಯವಸ್ಥಾಪಕ ಅವರಿಗೆ, 'ನಿಮ್ಮಿಂದ ವ್ಯಾಪಾರ ನಮಗೆ ಬೇಡ. ಇದು ಖಾಸಗಿ ಸ್ವತ್ತು. ನಿಮ್ಮ ವ್ಯಾಪಾರ ನಮಗೆ ಬೇಡ. ನೀವು ಇಲ್ಲಿಂದ ಹೊರಡಿ ಎಂದು ಹೇಳುತ್ತಿರುವೆ. ಹೂಂ, ಹೊರಡಿ' ಎಂದು ಹೇಳಿದ.

ಲೋಹಿಯಾ ಆತನಿಗೆ 'ನಾನು ಇಲ್ಲಿಂದ ಹೋಗುವುದಿಲ್ಲ. ನಾನು ಅತ್ಯಂತ ವಿನಯದಿಂದ ಹೇಳುತ್ತಿರುವೆ, ನಾನು ಇಲ್ಲಿಂದ ಹೋಗುವುದಿಲ್ಲ' ಎಂದು ಉತ್ತರಿಸಿದರು.

ಪೋಲೀಸ್ ಲೆಫ್ಟಿನೆಂಟ್ ವಿಲ್ಸನ್ ಲೋಹಿಯಾಗೆ, 'ಅವರು ಹೇಳಿದ್ದು ಕೇಳಿಸಲಿಲ್ಲವೇನು? ನೀವು ಇಲ್ಲಿಂದ ಹೊರಡಬೇಕು ಎಂದು ಅವರು ಹೇಳುತ್ತಿದ್ದಾರೆ. ದಯವಿಟ್ಟು ಹೊರಡಿ' ಎಂದು ಸೂಚಿಸಿದರು.

ಕೆಫೆಟೇರಿಯಾದ ಬಾಗಿಲು ಬಿಟ್ಟು ತಾವು ಹೊರಡುವುದಿಲ್ಲವೆಂದು ಲೋಹಿಯಾ ಹೇಳಿದಾಗ ವಿಲ್ಸನ್, 'ಕ್ಷಮಿಸಿ, ನಿಮ್ಮನ್ನು ಬಂಧಿಸಬೇಕಾಗುತ್ತದೆ' ಎಂದರು. ಲೋಹಿಯಾ ವಿಶ್ವಾಸದಿಂದ ವಿಲ್ಸನ್ನರತ್ತ ಕೈ ನೀಡಿದಾಗ ಅವರು ಕೈಯನ್ನು ಅತ್ತ ಸರಿಸಿದರು. ಅಲ್ಲಿಯೇ ಕಾಯುತ್ತಿದ್ದ ಪೋಲೀಸ್ ವಾಹನಕ್ಕೆ ಕರೆದುಕೊಂಡು ಹೋಗುತ್ತಿದ್ದಾಗ ಅವರು ವಿಲ್ಸನ್‌ಗೆ, 'ನಿಮ್ಮ ಕೆಲಸ ಇಲ್ಲಿಗೆ ಮುಗಿದಂತೆ ತಾನೇ!' ಎಂದರು. ಅದಕ್ಕೆ, 'ಇಲ್ಲ, ಈಗ ಆರಂಭವಾಗಿದೆ' ಎಂದು ವಿಲ್ಸನ್ ಉತ್ತರಿಸಿದರು.

ನಂತರ ಪೋಲೀಸರು ಲೋಹಿಯಾರನ್ನು ಒಂದು ಭತ್ತದ ವ್ಯಾಗನ್‌ನೊಳಕ್ಕೆ ಹತ್ತಿಸಿ ಬಾಗಿಲು ಮುಚ್ಚಿ ಬೀಗ ಹಾಕಿ ತಮ್ಮ ಸೆರೆಯಾಳನ್ನು ಒಯ್ದರು. ಆದರೆ ಸೆರೆಮನೆಗಲ್ಲ. ಈ ಮನುಷ್ಯನನ್ನು ಸೆರೆಮನೆಗೆ ಕಳಿಸುವ ಸಾಹಸ ಮಾಡಬಹುದೇ ಎಂದು ಮಿಸಿಸಿಪ್ಪಿಯ ಅಧಿಕಾರಿಗಳು ಯೋಚಿಸುತ್ತಾ ನಿರ್ಧಾರಕ್ಕೆ ಬರಲಾಗದೆ ಕೂತಿದ್ದಾಗ, ಸೆರೆಯಾಳಿದ್ದ ವಾಪನ ಸುಮ್ಮನೆ ಜಾಕ್ಸನ್ ನಗರದ ಬೀದಿಗಳಲ್ಲಿ ಸುತ್ತಾಡುತ್ತಿತ್ತು. ಈ ಅಧಿಕಾರಿಗಳು ಬಹುಶಃ ವಾಷಿಂಗ್‌ಟನ್‌ನ ಅಧಿಕಾರಿಗಳಿಗೆ ಕರೆ ಮಾಡಿ ಕಾಯುತ್ತಿದ್ದಿರಬಹುದು. ನಾಗರಿಕ ಹಕ್ಕುಗಳ ಆಂದೋಲನದ ಕೆಲ ಕಾರ್ಯಕರ್ತರು, ಅಮೆರಿಕಾದ ಪ್ರಜೆಗಳನ್ನು ಇಂತಹ ಪ್ರಯತ್ನಗಳಿಗೆ ಸೆರೆಮನೆಗೆ ಕಳಿಸುವ ಸರ್ಕಾರ; ಭಾರತದ ಈ ಸತ್ಯಾಗ್ರಹಿಯನ್ನು ಸೆರೆಮನೆಗೆ ಕಳಿಸುವ ಧೈರ್ಯ ತೋರಲಾರದೇಕೆ ಎಂದು ಸಿನಿಕವಾಗಿ ಮಾತಾಡಿಕೊಳ್ಳತೊಡಗಿದರು. ಅಷ್ಟರಲ್ಲಿ ಪೋಲೀಸರು ಇದ್ದಕ್ಕಿದ್ದಂತೆ ಲೋಹಿಯಾರನ್ನು ಜನ ಗುಂಪುಗೂಡಿದ್ದ ಸ್ಥಳದಲ್ಲಿ ಬಿಡುಗಡೆ ಮಾಡಿ ಹೋದರು.

ಲೋಹಿಯಾ ಸಮಾಧಾನದಿಂದಿದ್ದರು ಮತ್ತು ತಮ್ಮನ್ನು ಸೆರೆಮನೆಗೆ

ದೂಡಲಾಗುವುದೋ ಇಲ್ಲವೋ ಎಂಬ ಬಗ್ಗೆ ಅವರು ತಲೆ ಕೆಡಿಸಿಕೊಂಡಂತಿರಲಿಲ್ಲ. ತಮ್ಮನ್ನು ಬಂಧಿಸಲಾಗಿದೆ ಎಂದು ಪೋಲೀಸ್ ಅಧಿಕಾರಿ ಹೇಳಿದ ನಂತರವೇ ತಾವು ರೆಸ್ಟೋರದ ಬಾಗಿಲಿಂದ ಕದಲಿದ್ದು ಎಂದು ಅವರು ಮತ್ತೆ ಮತ್ತೆ ಹೇಳಿದರು ಹಾಗೇ ಅವರಿಗೆ ತಮ್ಮನ್ನು ಸೆರೆಮನೆಗೆ ದೂಡಲಿಲ್ಲವೇಕೆ ಎಂಬುದು ಸಂಪೂರ್ಣ ಗೊತ್ತಿದ್ದಂತಿತ್ತು.

ನಂತರ ಲೋಹಿಯಾ ಬಿಳಿಯ ಪತ್ರಕರ್ತರೊಂದಿಗೆ ಮಾತನಾಡಿದರು. ಜಾಕ್ಸನ್ ಡೈಲಿ ನ್ಯೂಸ್ ಪತ್ರಿಕೆ ಅವರ ಈ ಕೆಲವು ಮಾತುಗಳನ್ನು ಮುದ್ರಿಸಿತು ಕೂಡಾ:

'ನಾನು ಅಮೆರಿಕಾದ ಬದುಕಿನಲ್ಲಿನ ಕೊಳಕನ್ನು ಎತ್ತಿ ತೋರಿಸುವ ಅಥವಾ ಅದನ್ನು ಪ್ರಚಾರ ಮಾಡುವ ಪ್ರಯತ್ನ ಮಾಡುತ್ತಿಲ್ಲ ಎಂದು ಸ್ಪಷ್ಟ ಪಡಿಸಬಯಸುವೆ. ಏಕೆಂದರೆ, ಇಂತಹ ಕೊಳಕು ಎಲ್ಲ ಕಡೆ ಇದೆ. ಭಾರತದಲ್ಲೂ ಕೂಡಾ.'

'ನಾನು ಬೇಡದಿರುವೆಡೆಯಿಂದ ಕೂಡಲೇ ಕಾಲ್ತೆಗೆಯುವಂತಹವನು. ಆದರೆ ಈ ಸಂದರ್ಭದಲ್ಲಿ ಅಮೆರಿಕಾಗೆ ಏನಾಗುತ್ತಿದೆ ಎಂದು ಯೋಚಿಸಿದಾಗ, ನನಗೆ ಇಲ್ಲಿಂದ ಕಾಲ್ತೆಗೆಯುವುದೆಂದರೆ ಅನ್ಯಾಯ ಮತ್ತು ಕ್ರೌರ್ಯವನ್ನು ಪ್ರೋತ್ಸಾಹಿಸುವುದೆಂದೇ ಆಗುತ್ತದೆ.'

'ಸಾರ್ವಜನಿಕ ಸ್ಥಳವೊಂದಕ್ಕೆ ಕಾಲಿಡುವ ಮೂಲಕ ನಾನು ಸ್ಥಳೀಯ ಕಾನೂನೊಂದನ್ನು ಉಲ್ಲಂಘಿಸುತ್ತಿರುವೆನಾದರೆ, ಮೇಯರ್ ಅಥವಾ ಈ ನಗರದ ಇನ್ನಾವುದೇ ಅಧಿಕಾರಿ ನನ್ನನ್ನು ಬಂಧಿಸಲೆಂದು ನಾನು ನಿರೀಕ್ಷಿಸುವೆ. ನಾನು ಆತನ ಬಗ್ಗೆ ಸಿಟ್ಟನ್ನಾಗಲೀ, ದ್ವೇಷವನ್ನಾಗಲೀ ಹೊಂದಿರುವುದಿಲ್ಲ.'

'ಈ ಕೆಲಸವನ್ನು ನಾನು ಒಬ್ಬ ಮಾನವನಾಗಿ, ಅಮೆರಿಕಾದ ಪ್ರಜೆಯೆಂದು ಭಾವಿಸಿಯೇ ಮಾಡಿರುವೆ. ಹಾಗಾಗಿ ನಮ್ಮ ರಾಯಭಾರ ಕಛೇರಿಗಾಗಲೀ, ಸಂಸತ್ತಿಗಾಗಲೀ ಈ ಬಗ್ಗೆ ಮಾಹಿತಿ ನೀಡುವ ಅಗತ್ಯ ನನಗೆ ಕಂಡು ಬಂದಿಲ್ಲ.'

'ನನ್ನ ಈ ಕೆಲಸಕ್ಕೆ ಸಮರ್ಥನೆಯ ಅಗತ್ಯವಿಲ್ಲವೆಂದು ನಾನು ಭಾವಿಸಿದ್ದೇನೆ. ಈ ಮೂಲಕ ನನು ಸವಿನಯ ಕಾನೂನು ಭಂಗ ಕಾರ್ಯಕ್ರಮದ ಗೆಲುವಿನ ಆಶಯವನ್ನು ವ್ಯಕ್ತಪಡಿಸುತ್ತಿದ್ದೇನೆ'

'ನಾನು ಈ ಮೂಲಕ ಬಣ್ಣ ಮತ್ತು ಜಾತಿಗಳ ಸವಾಲನ್ನು ಸ್ವೀಕರಿಸಿರುವ ಅಮೆರಿಕಾದ ಆರೋಗ್ಯ ಮತ್ತು ಸತ್ವಕ್ಕೆ ನನ್ನ ಗೌರವವನ್ನು ಸಲ್ಲಿಸುತ್ತಿರುವೆ'

(ಕೃಪೆ: 'ಮ್ಯಾನ್‌ಕೈಂಡ್', ಜನವರಿ–ಮಾರ್ಚ್, ೧೯೭೩)

(ಕನ್ನಡಕ್ಕೆ: ಡಿಎಸ್ಸೆನ್)

ಲೋಹಿಯಾ: ಒಂದು ಕಮ್ಯೂನಿಸ್ಟ್ ನೋಟ

■ ಇ.ಎನ್. ಕೊಮರೋವ್

ಡಾ॥ ಲೋಹಿಯಾ ೧೯೬೫ರಲ್ಲಿ ಜರ್ಮನ್ ಪ್ರಜಾಸತ್ತಾತ್ಮಕ ಗಣರಾಜ್ಯದಿಂದ ಸ್ವದೇಶಕ್ಕೆ ವಾಪಸಾಗುವ ಮಾರ್ಗವಾಗಿ ಮಾಸ್ಕೋದಲ್ಲಿ ಕೆಲವು ದಿನಗಳು ತಂಗಿದ್ದರು. 'ಏಷ್ಯಾದ ಜನತೆಯ ಅಧ್ಯಯನ ಸಂಸ್ಥೆ'ಯಲ್ಲಿದ್ದ ನಮಗೆ ಅವರ ಆಗಮನದ ಬಗ್ಗೆ ಮಾಹಿತಿ ದೊರೆಯಿತು. ಭಾರತವನ್ನು ಕುರಿತ ವಿದ್ಯಾರ್ಥಿಗಳಾದ ನಮಗೆ ಲೋಹಿಯಾರ ಕೆಲವು ಪುಸ್ತಕಗಳ ಬಗ್ಗೆ, ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿನ ಮತ್ತು ಆಧುನಿಕ ಭಾರತದ ಸಾರ್ವಜನಿಕ ಜೀವನದಲ್ಲಿನ ಅವರ ಪಾತ್ರದ ಬಗ್ಗೆ ಸ್ವಲ್ಪ ಮಾಹಿತಿ ದೊರೆಯಿತು. ಆದರೆ ನಮ್ಮಲ್ಲಿ ಯಾರೂ ಅವರನ್ನು ಮುಖತಃ ಭೇಟಿ ಮಾಡಿರಲಿಲ್ಲ. ನಾವು ಅವರನ್ನು ನಮ್ಮ ಸಂಸ್ಥೆಗೆ ಅತಿಥಿಯನ್ನಾಗಿ ಆಹ್ವಾನಿಸಿ, ಅವರು ತಮ್ಮ ನೆನಪುಗಳನ್ನು ನಮ್ಮೊಂದಿಗೆ ಹಂಚಿಕೊಳ್ಳಬೇಕೆಂದು ಕೋರಿದೆವು. ಮಾಸ್ಕೋಗೆ ಭೇಟಿ ನೀಡುವ ಹಲವಾರು ಸಂಶೋಧಕರು ಮತ್ತು ಸಾರ್ವಜನಿಕ ವ್ಯಕ್ತಿಗಳಂತೆ ಡಾ॥ ಲೋಹಿಯಾ ಕೂಡಾ ನಮ್ಮ ಆಹ್ವಾನವನ್ನು ಕೂಡಲೇ ಒಪ್ಪಿಕೊಂಡರು.

ತಮ್ಮ ವಿಶಿಷ್ಟ ಪ್ರತಿಭೆ, ಹರಿತ ಬುದ್ಧಿ, ನಿಜವಾದ ಕಸುವು, ಬಿಚ್ಚು ಮನಸ್ಸು ಮತ್ತು ಸವಾಲಿನ ಸ್ಫೂರ್ತಿಯೊಂದಿಗೆ ಲೋಹಿಯಾ ಭಾರತದ ರಾಷ್ಟ್ರೀಯ ವಿಮೋಚನಾ ಹೋರಾಟದ ಐತಿಹಾಸಿಕ ವಿಕಾಸ, ಆಧುನಿಕ ಬದುಕು, ಭಾರತದ ಭವಿಷ್ಯ ಮತ್ತು ಪ್ರಸಕ್ತ ಜಾಗತಿಕ ಬೆಳವಣಿಗೆಗಳನ್ನು ಕುರಿತ ನಮ್ಮ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಅವರು ತಮ್ಮ ವಿಚಾರಗಳ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ಅರಿಯಲು ಚರ್ಚೆಗಾಗಿ ಆಹ್ವಾನಿಸಿದರು. ವಿವಿಧ ವಿಷಯಗಳ ಬಗ್ಗೆ ನಮ್ಮ ನಡುವೆ ಭಿನ್ನಾಭಿಪ್ರಾಯಗಳು ವ್ಯಕ್ತವಾದುವಾದರೂ, ಚರ್ಚೆ ಕುತೂಹಲಕಾರಿಯಾಗಿಯೂ, ಜೀವಂತವಾಗಿಯೂ ಇತ್ತು. ಚರ್ಚೆಯಲ್ಲಿ ಭಾಗವಹಿಸಿದವರಿಗೆ ಡಾ॥ ಲೋಹಿಯಾರೊಡನೆಯ ಮುಖಾಮುಖಿಯಿಂದ ಸಂತೋಷವೂ, ಅನುಕೂಲವೂ ಆಯಿತು.

ಈ ನನ್ನ ಟಿಪ್ಪಣಿಗಳಲ್ಲಿ ಲೋಹಿಯಾರೊಡನೆಯ ಭೇಟಿ ನನ್ನ ಮೇಲೆ ಉಂಟು ಮಾಡಿದ ಪ್ರಬಲ ಮತ್ತು ಸ್ಫುಟವಾದ ಪರಿಣಾಮ ವಿವರಗಳನ್ನು ದಾಖಲಿಸಬಯಸುವೆ.

ನಮ್ಮ ಸಂಸ್ಥೆಗೆ ಭೇಟಿ ನೀಡುವಂತೆ ಆಹ್ವಾನಿಸಲು ನಾನು ಲೋಹಿಯಾ ವಿಮಾನ ನಿಲ್ದಾಣದಿಂದ ಬಂದು ತಂಗಲಿದ್ದ ಹೋಟೆಲ್ ಉಕ್ರೇನ್‌ಗೆ ಹೋದೆ. ನಾನು ಭೇಟಿ ಮಾಡಲಿರುವ ವ್ಯಕ್ತಿಯ ಮುಖ ಚಹರೆಗಳು ಹೇಗಿರಬಹುದೆಂದು ನಾನು ಆಗ ಊಹಿಸಿದ್ದೇನೋ ಇಲ್ಲವೋ ನೆನಪಿಲ್ಲ. ಆದರೆ ಒಂದಂತೂ ಖಂಡಿತ– ಅವರೊಡನೆಯ ಮೊದಲ ಒಡನಾಟವೇ ನನ್ನ ಮೇಲೆ ಅಸಾಮಾನ್ಯ ಪ್ರಭಾವ ಬೀರಿತು. ಭಾರವಾದ ಕೋಟನ್ನು ಧರಿಸಿದ್ದರಿಂದಾಗಿ ಸ್ವಲ್ಪ ಸ್ಥೂಲಕಾಯರಂತೆಯೇ ಕಾಣುತ್ತಿದ್ದ ಮಧ್ಯಮ ಎತ್ತರದ ಈ ಚೈತನ್ಯಶೀಲ ಮನುಷ್ಯ ನಾನು ಕಾಯುತ್ತಿದ್ದ ಹೋಟೆಲ್‌ನ ಮೊಗಸಾಲೆಗೆ ನಡೆದು ಬಂದರು. ಅವರು ಭಾರತೀಯರೇ ಆಗಿದ್ದರು, ನಿಜ; ಆದರೆ ಅವರನ್ನು ಇತರರಿಂದ ಬೇರ್ಪಡಿಸುವಂತಹ ಏನೋ ಒಂದು ಲಕ್ಷಣ ಅವರಲ್ಲಿತ್ತು. ಅವರಲ್ಲಿ ಈಚಿನ ದಿನಗಳಲ್ಲಿ ವಿದೇಶಗಳಿಗೆ ಹೋಗಿಬರುವವರಲ್ಲಿ ಸಾಮಾನ್ಯವಾಗಿ ಕಾಣುವ ಉತ್ಪ್ರೇಕ್ಷಿತ ಅತಿ–ಆಧುನಿಕತೆಯ ಶೈಲಿಯಾಗಲೀ ಅಥವಾ ಎದ್ದು ತೋರುವಂತಹ ರಾಷ್ಟ್ರೀಯ ಲಕ್ಷಣಗಳಾಗಲೀ ನನಗೆ ಕಾಣಲಿಲ್ಲ. ಅವರು ಯಾವುದೇ ಬಿಗುಮಾನವಿಲ್ಲದೆ ಸಹಜವಾಗಿದ್ದು, ಅಲ್ಲಿನ ಹೊಸ ವಾತಾವರಣ ಅವರ ಸಹಜ ವರ್ತನೆಗೆ ಎಳ್ಳಷ್ಟೂ ಭಂಗ ತಂದಂತಿರಲಿಲ್ಲ. ಇದು ಲೋಹಿಯಾರ ಮೊದಲ ಮಾಸ್ಕೋ ಭೇಟಿ ಎಂದು ನಂಬಲು ಅಸಾಧ್ಯವಾಗಿತ್ತು. ಡಾ॥ ಲೋಹಿಯಾ ನನಗೆ ವಿದೇಶಿಯರು ಎಂದು ಅನ್ನಿಸಲೇ ಇಲ್ಲ; ಇದಕ್ಕೆ ಕಾರಣ, ಅವರ ಮುಕ್ತ ಹಾಗೂ ಸುಲಭ ನಡವಳಿಕೆ ಮತ್ತು ನಮ್ಮ ಜನ ಧರಿಸುವಂತಹ ಉಡುಪು ಹಾಗೂ ಟೋಪಿಯನ್ನು ಅವರೂ ಧರಿಸಿದ್ದುದು ಎಂದು ಕಾಣುತ್ತದೆ. ಅವರು ಓರ್ವ ಸೋವಿಯತ್ ಕಾರ್ಯಕರ್ತನಂತೆ ಅಥವಾ ಮಧ್ಯ ಏಷ್ಯಾದಿಂದ ಬಂದ ಸಾಮುದಾಯಿಕ ಕೃಷಿ ವ್ಯವಸ್ಥೆಯ ಅಧ್ಯಕ್ಷನಂತೆ ನನ್ನನ್ನು ನೋಡಿದರು. ಆರಂಭದಿಂದಲೇ ನನಗೆ ಅವರ ಒಡನಾಟ ಹಿತವೆನ್ನಿಸಲಾರಂಭಿಸಿತು ಮತ್ತು ನಾನು ಅವರ ಚಹರೆಗಳನ್ನು ಕುರಿತ ನನ್ನ ಮೊದಲ ಅಭಿಪ್ರಾಯಗಳನ್ನು ಅವರಿಗೆ ತಿಳಿಸಿದೆ. ಅದನ್ನು ಅವರು ಇಷ್ಟಪಟ್ಟಂತೆ ಕಂಡಿತು.

ನಾನು ಅವರನ್ನು ಯಾವ ಪರಿಸರದಲ್ಲಿ ಮೊದಲ ಬಾರಿಗೆ ಕಂಡೆನೋ, ಆ ಪರಿಸರದಲ್ಲಿ ಅವರು ಎಷ್ಟು ಸಹಜವಾಗಿ ಕಾಣುತ್ತಿದ್ದರೆಂಬುದನ್ನು ನಾನು ಯೋಚಿಸತೊಡಗಿದ್ದು ಆಕಸ್ಮಿಕವಾಗಿರಲಿಲ್ಲ. ಎಷ್ಟಾದರೂ ಲೋಹಿಯಾಗೆ ಸಮಾಜವಾದ ಎನ್ನುವುದು ಒಂದು ಅಮೂರ್ತ ಆದರ್ಶ ಅಥವಾ ಖಯಾಲಿಯಾಗಿರಲಿಲ್ಲ. ಅದು ಅವರ ಅಸ್ತಿತ್ವದ ಅವಿಭಾಜ್ಯ ಅಂಗವಾಗಿದ್ದು, ಅದರ ಪರಿಣಾಮ ಅವರ ಹೊರನೋಟದಲ್ಲಿಯೂ ಸೂಸುತ್ತಿತ್ತು. ಡಾ॥ ಲೋಹಿಯಾ, ಜೀವಂತವಾದ ಸಾದಾ ಜೀವನವನ್ನು–ಹಳೆಯ ಜಡ ಪ್ರಶಾಂತತೆಯ ಬದುಕನ್ನಲ್ಲ–ಪ್ರತಿಪಾದಿಸಿದವರು. ಯಾವುದನ್ನು ಸಮಾಜವಾದಿ ಸಮಾಜವೊಂದು ಜನತೆಯ ಬಳಕೆಗಾಗಿ

ಪ್ರಸ್ತುತಪಡಿಸುವುದೋ, ಅಂತಹ ಆಧುನಿಕ ವಿಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಕೃತಿಯ ಹೊಸ ಹೊಸ ಸಾಧನೆಗಳ ಮೂಲಕ ದುಡಿವ ಮತ್ತು ಶೋಷಿತ ಜನರಿಗೆ ಒಳ್ಳೆಯ ಬದುಕನ್ನು ಒದಗಿಸುವಂತಹ ಸಾಮಾಜಿಕ ಏಳಿಗೆಗಾಗಿ ಅವರು ದುಡಿಯುತ್ತಿದ್ದವರು. ಶ್ರೀಮಂತರ ವೈಭವದ ಜೀವನದ ಬಗ್ಗೆ ಅವರಿಗೆ ಜಿಗುಪ್ಸೆಯಿತ್ತು. ಅದು ಅಶ್ಲೀಲವೆಂದು ಮಾತ್ರವಲ್ಲ; ಅದು ರಾಷ್ಟ್ರೀಯ ಆರ್ಥಿಕ ವಿಕಾಸಕ್ಕಾಗಿ ಸಂಪನ್ಮೂಲ ಕ್ರೋಢೀಕರಣಕ್ಕೆ ಅಡ್ಡಿಯಾಗುತ್ತದೆಂದು ಕೂಡಾ. ನಮ್ಮ ಮಾತುಕತೆಯಲ್ಲಿ ಗೊತ್ತಾದುದೇನೆಂದರೆ, ತಾವು ಬಹುವಾಗಿ ಮೆಚ್ಚಿದ ಜಗತ್ತಿನ ಮೊದಲ ಸಮಾಜವಾದಿ ದೇಶ ಕ್ರಮಿಸಿದ್ದ ಆರ್ಥಿಕ ಅಭಿವೃದ್ಧಿಯ ದಾರಿಯನ್ನು ಅವರು ತತ್ವಶಃ ಒಪ್ಪಿದ್ದರೆಂಬುದು.

ಡಾ॥ ಲೋಹಿಯಾರೊಂದಿಗೆ ಮತ್ತೆ ೧೯೬೬ರಲ್ಲಿ, ಅವರ ದೆಹಲಿ ಮನೆಯಲ್ಲಿ ಹಲವಾರು ಬಾರಿ ಮಾತನಾಡುವ ಸೌಭಾಗ್ಯ ನನ್ನದಾಗಿತ್ತು. ಹೌದು, ಅವರು ನಾನು ಮಾಸ್ಕೋದಲ್ಲಿ ಭೇಟಿ ಮಾಡಿದ ಮನುಷ್ಯರೇ ಆಗಿದ್ದರು! ಸ್ಪಷ್ಟ ಮನಸ್ಸಿನ, ಹರಿತ ಬುದ್ಧಿಯ ಆ ಚೈತನ್ಯಶೀಲ ಬಹುಮುಖಿ ವ್ಯಕ್ತಿತ್ವದ ಮನುಷ್ಯನೊಂದಿಗೆ ಮಾತನಾಡುತ್ತಾ ನಾನು ಕಳೆದ ಪ್ರತಿ ಕ್ಷಣವೂ ಆನಂದದಾಯಕವಾಗಿತ್ತು. ಈ ರಾಜಕೀಯ ಹೋರಾಟಗಾರನ ವಿಶಿಷ್ಟ ವ್ಯಂಗ್ಯ ಮತ್ತು ಸವಾಲು ಹಾಕುವ ಹುರುಪಿನ ಹಿಂದೆ ಒಂದು ವಿಶಾಲ ಹೃದಯವಿದ್ದುದನ್ನು ನಾವು ಗಮನಿಸಬಹುದಿತ್ತು.

ಲೋಹಿಯಾ ಏಕ ಕಾಲದಲ್ಲಿ ಅನ್ವೇಷಕರೂ, ಹೋರಾಟಗಾರರೂ ಆಗಿದ್ದರು. ಸಮಾಜವಾದಿ ಪರಿವರ್ತನೆಯ ಅಗತ್ಯವನ್ನು ಸರಿಯಾದ ತತ್ವದ ಮೂಲಕ ಗ್ರಹಿಸಬೇಬೇಕೆಂದೂ, ಅಮೂರ್ತ ಅಥವಾ ಒಣ ವಿಚಾರಗಳನ್ನು ತಾವು ಇಷ್ಟಪಡುವುದಿಲ್ಲವೆಂದೂ ಅವರು ಹೇಳುತ್ತಿದ್ದರು. ಅಂತಹ ಗುರಿಗಾಗಿ ಗಟ್ಟಿಯಾದ ಮತ್ತು ಮೂರ್ತವಾದ ಕ್ರಿಯಾಶೀಲ ರೂಪಗಳನ್ನು ಅವರು ಅರಸಿದರು. ಇಂತಹ ಅರಸುವಿಕೆಯೇ ಡಾ॥ ರಾಮಮನೋಹರ ಲೋಹಿಯಾರ ಇಡೀ ಬದುಕಿನಲ್ಲಿನ ಅರ್ಥಪೂರ್ಣ ಘಟನಾವಳಿಗಳಿಗೆ ಮತ್ತು ನಿಸ್ವಾರ್ಥ ಚಟುವಟಿಕೆಗಳಿಗೆ ಕಾರಣವಾಯಿತೆಂದು ಹೇಳಿದರೆ ತಪ್ಪಾಗಲಾರದು.

(ಕನ್ನಡಕ್ಕೆ: ಡಿಎಸ್ಸೆನ್)

■

" ಜಗತ್ತಿನ ಎಲ್ಲಿಗಾದರೂ ಪ್ರಯಾಣ ಮಾಡುವ, ಎಲ್ಲಿಯಾದರೂ ದುಡಿಯುವ ಮತ್ತು ಸಾಯುವ ಮನುಷ್ಯನ ಹಕ್ಕನ್ನು ಮಾನ್ಯ ಮಾಡಬೇಕು ಹಾಗೂ ದೇಶೀಯ ಮೂಲ ಅಥವಾ ಅಪೇಕ್ಷಣೀಯತೆಗಳ ಆಧಾರದ ಮೇಲೆ ಪ್ರಯಾಣ ಮತ್ತು ವಾಸದ ಹಕ್ಕುಗಳನ್ನು ನಿರ್ಧರಿಸುವ ಕಾನೂನುಗಳನ್ನು ರದ್ದು ಮಾಡಬೇಕು. ಪ್ರಜೆತನಕ್ಕೆ ಹುಟ್ಟು ಮತ್ತು ನಿವಾಸದ ಕಾರಣದಷ್ಟೇ ಉದ್ದೇಶ ಮತ್ತು ಸಾಂಸ್ಕೃತಿಕ ಒಲವುಗಳನ್ನು ಪರಿಗಣಿಸಬೇಕು."

–ಲೋಹಿಯಾ(ಮಾರ್ಕ್ಸ್, ಗಾಂಧಿ ಅಂಡ್ ಸೋಶಲಿಸಂ)

ಕಾಗೋಡಿನಲ್ಲಿ ಲೋಹಿಯಾ

■ ಕೇಶವ ಭಾಗ್ಯ

ಕಾಗೋಡು ಸತ್ಯಾಗ್ರಹ ಪ್ರಾರಂಭವಾಗಿ ಎರಡು ತಿಂಗಳು ಕಳೆದಿತ್ತು. ಮೈಸೂರು ರಾಜ್ಯದ ಪ್ರಮುಖ ಸಮಾಜವಾದಿ ನಾಯಕರುಗಳು ಮತ್ತು ಮಲೆನಾಡು ರೈತಪ್ರಮುಖರೆಲ್ಲಾ ಸತ್ಯಾಗ್ರಹದಲ್ಲಿ ಧುಮುಕಿ ಬಂದೀಖಾನೆ ಸೇರಿದ್ದರು. ಕಾಗೋಡಿನಲ್ಲಿ ಸತ್ಯಾಗ್ರಹವು ಪ್ರತಿದಿನವೂ ಅವಿಶ್ರಾಂತವಾಗಿ ಅಹಿಂಸಾತ್ಮಕ ರೀತಿಯಲ್ಲಿ ನಡೆಯುತ್ತಲೇ ಇದ್ದಿತು.

ಈ ಸಂದಿಗ್ಧ ಘಟ್ಟದಲ್ಲಿ ಒಡನಾಡಿಗಳಾಗಿದ್ದ ವೈ.ಆರ್. ಪರಮೇಶ್ವರಪ್ಪ, ಗರುಡಶರ್ಮ, ಎನ್. ಕೆ. ಸೀತಾರಾಮಯ್ಯಂಗಾರ್ ಮತ್ತು ಕೆಲವರು ಭೂಗತರಾಗಿ ಸತ್ಯಾಗ್ರಹವು ನಿರಂತರವಾಗಿ ನಡೆಯುವಂತೆ ನೋಡಿಕೊಳ್ಳುತ್ತಿದ್ದರು.

ಕಾಗೋಡು ರೈತ ಹೋರಾಟ ತೀವ್ರತೆ ಮುಟ್ಟಿದ ಈ ಹಂತದಲ್ಲಿ ಸಮಾಜವಾದಿ ನಾಯಕ ಡಾ.ರಾಮಮನೋಹರ ಲೋಹಿಯಾರವರ ಆಗಮನವಾಯಿತು. ಸತ್ಯಾಗ್ರಹದ ನಿರ್ದೇಶಕರಲ್ಲಿ ಒಬ್ಬರಾಗಿದ್ದ ಎನ್.ಕೆ. ಸೀತಾರಾಮಯ್ಯಂಗಾರ್‌ರವರು ಲೋಹಿಯಾರವರನ್ನು ಶಿವಮೊಗ್ಗೆಯ ರೈಲು ನಿಲ್ದಾಣದಲ್ಲಿ ಭೇಟಿ ಮಾಡಿದರು. ಲೋಹಿಯಾವರವರೊಡನೆ ಖಾದ್ರಿ ಶಾಮಣ್ಣ, ಮುಲ್ಕಾ ಗೋವಿಂದರೆಡ್ಡಿ, ಶಿವಾನಂದಸ್ವಾಮಿ, ಎಂ.ಪಿ. ಈಶ್ವರಪ್ಪ ಮತ್ತು ಲೋಕಪಾಲ್ ಮತ್ತಿತರರೂ ಬಂದಿದ್ದರು.

ಅಯ್ಯಂಗಾರ್‌ರವರು ಲೋಹಿಯಾರಿಗೆ, ಸತ್ಯಾಗ್ರಹ ಪ್ರಾರಂಭವಾದಾಗಿನಿಂದಲೂ ನಿತ್ಯ ನಡೆಯುತ್ತಿರುವ ಭೂಒಡೆಯರ ಮತ್ತು ಪೊಲೀಸ್ ದೌರ್ಜನ್ಯ, ತಂಡತಂಡವಾಗಿ ಸತ್ಯಾಗ್ರಹಿಗಳ ಬಂಧನ, ಸುಮಾರು ಮುನ್ನೂರು ಜನ ರೈತರು-ಸಮಾಜವಾದಿಗಳು ಬಂಧನಕ್ಕೊಳಗಾಗಿರುವುದನ್ನು ವಿವರವಾಗಿ ತಿಳಿಸಿದರು. 'ಇನ್ನು ನೀವು

ಬಂದಿದ್ದೀರಿ, ನಿಮ್ಮ ನಿರ್ದೇಶನದಂತೆ ನಡೆಯುತ್ತೇವೆ' ಎಂದು ಲೋಹಿಯಾರವರಿಗೆ ಹೇಳಿದರು.

ತಕ್ಷಣ ಲೋಹಿಯಾರವರು, 'ಏನು ಹೇಳಿದಿರಿ? ನಾನು ನಾಯಕನಾಗಿ ಬಂದಿಲ್ಲ. ನಾನು ಪಕ್ಷದ ಸಾಮಾನ್ಯ ಕಾರ್ಯಕರ್ತನಾಗಿ ಬಂದಿದ್ದೇನೆ. ಸತ್ಯಾಗ್ರಹ ಸಮರಕ್ಕೆ ನಾನು ಇಳಿಯಬೇಕೆಂದು ನೀವು ನಿರ್ದೇಶನ ಕೊಟ್ಟರೆ ಧುಮುಕುತ್ತೇನೆ' ಎಂದರು. ಡಾ. ಲೋಹಿಯಾರವರ ಸರಳತೆ, ಕಾರ್ಯಕರ್ತನ ಶಿಸ್ತು, ಕರ್ತವ್ಯ ನಿಷ್ಠೆ ಕಂಡು ಅಯ್ಯಂಗಾರ್ ಮೂಕರಾದರು. ಅವರಿಗೆ ಮಾತೇ ಹೊರಡಲಿಲ್ಲ. ಸಾಗರಕ್ಕೆ ಹೋದ ಮೇಲೆ ನೋಡೋಣ! ಎಂದು ಲೋಹಿಯಾವರವರಿಗೆ ಹೇಳಿದರು.

ಸಾಗರ ರೈಲು ನಿಲ್ದಾಣದ ಪ್ರವಾಸಿ ಮಂದಿರಲ್ಲಿ ಡಾ. ಲೋಹಿಯಾ ಮತ್ತು ಅವರ ಸಾಥಿಗಳು ದಿನಾಂಕ ೧೬-೬-೧೯೫೧ರ ರಾತ್ರಿ ತಂಗಿದರು. ಮಾರನೆಯ ದಿನ ದಿನಾಂಕ ೧೭-೬-೧೯೫೧ರಂದು ಮುಂಜಾನೆಯೇ ಎದ್ದು ಕಾಗೋಡಿಗೆ ಹೋಗಿ ಸತ್ಯಾಗ್ರಹಿಯಾಗಿ ಸಮರಕ್ಕೆ ಧುಮುಕಲು ನಿರ್ಧಾರ ಕೈಗೊಂಡರು. ಪೊಲೀಸ್ ವಿಭಾಗಾಧಿಕಾರಿಗಳಿಗೆ ಒಂದು ಮುನ್ನೆಚ್ಚರಿಕೆ ಪತ್ರವನ್ನು ಬರೆಸಿ ಟೈಪ್ ಮಾಡಿಸಿ ತರಲು ಹೇಳಿದರು.

ಆ ಪತ್ರದಲ್ಲಿ ಡಾ. ಲೋಹಿಯಾ, ಮೈಸೂರು ರಾಜರ ಆಳ್ವಿಕೆಯಲ್ಲಿ ೧೮೭೮ರಲ್ಲಿಯೇ ಗೇಣೀ ಕಾನೂನು ಜಾರಿಗೆ ಬಂದಿದ್ದು, ಅದರ ಪ್ರಕಾರ ಗೇಣಿದಾರರ ಉಳುಮೆಯ ಹಕ್ಕಿಗೆ ರಕ್ಷಣೆ ಇದೆ. ಹೀಗಿದ್ದೂ ಗೇಣಿದಾರ ರೈತರು ತಮ್ಮ ಉಳುಮೆಯ ಹಕ್ಕಿನ ಭೂಮಿಯ ಮೇಲೆ ಪ್ರವೇಶಿಸಿದರೆ ಅತಿಕ್ರಮಣವೆಂದು ಪೊಲೀಸರು ರೈತರ ಮೇಲೆ ಕೇಸು ಹಾಕುತ್ತಿರುವುದು ವಿಪರ್ಯಾಸದ ಸಂಗತಿ. ನಾನು ಗೇಣಿದಾರ ಉಳುಮೆಯ ರೈತರ ಹಕ್ಕಿನ ರಕ್ಷಣೆಗಾಗಿ ಕಾಗೋಡು ರೈತರ ಗೇಣಿ ಭೂಮಿಯಲ್ಲಿ ಅವರ ಬೆಂಬಲಿಗನಾಗಿ ಇಳಿಯುತ್ತೇನೆ. ಈವರೆವಿಗೂ ನಡೆದಿರುವ ವಿದ್ಯಮಾನ ನೋಡಿದರೆ. ಗೇಣಿದಾರ ರೈತರ ಉಳುಮೆಯ ಹಕ್ಕಿನ ಭೂಮಿಯ ಮೇಲೆ, ಭೂಮಾಲೀಕರು ಮತ್ತು ಪೋಲೀಸರ ಅತಿಕ್ರಮಣ ನಡೆಯುತ್ತಿದೆ. ಕಾನೂನು ರಕ್ಷಕನಾಗಿ ನಾನು ಬಂದಿದ್ದೇನೆ. ಸರ್ಕಾರ, ಪೊಲೀಸರು ಇನ್ನು ಮುಂದೆ ಹಕ್ಕಿನ ಭೂಮಿಗೆ ಪ್ರವೇಶವನ್ನು ತಡೆದರೆ, ಕಾನೂನು ರೀತಿಯಲ್ಲಿ ತಪ್ಪಿತಸ್ಥರಾಗುತ್ತೀರಿ ಎಂದು ಬರೆದು, ಹೋರಾಟದ ಕಹಳೆಯನ್ನು ಮೊಳಗಿಸಿದರು. ಅಯ್ಯಂಗಾರ್ ಈ ಪತ್ರವನ್ನು ಸಾಗರ ಪೊಲೀಸ್ ವಿಭಾಗಾಧಿಕಾರಿಗಳಿಗೆ ತಲುಪಿಸಿದರು.

ದಿನಾಂಕ ೧೬-೬-೧೯೫೧ರಂದು ಲೋಹಿಯಾರವರು ಸಾಗರದ ಜೈಲಿಗೆ ಭೇಟಿ ಕೊಟ್ಟು ಸತ್ಯಾಗ್ರಹಿಗಳನ್ನೆಲ್ಲಾ ಕಂಡು ಧೈರ್ಯ ಹೇಳಿದರು. ಅಂದೇ ಸಾಗರದ ಗಾಂಧೀ ಮೈದಾನದಲ್ಲಿ ಭಾರಿ ಸಭೆಯನ್ನುದ್ದೇಶಿಸಿ ಭಾಷಣ ಮಾಡಿ ರೈತರ ಮೇಲೆ

ನಡೆಯುತ್ತಿರುವ ದೌರ್ಜನ್ಯವನ್ನು ಖಂಡಿಸಿದರು. ರೈತಸಮೂಹದೊಡನೆ ಕಾಗೋಡಿಗೆ ಹೊರಟರು. ಅಷ್ಟರಲ್ಲಾಗಲೇ ಕಾಗೋಡು ಭೂಮಿಯ ಸುತ್ತ ಸಾವಿರಾರು ರೈತರು ನೆರೆದಿದ್ದರು.

ಡಾ. ಲೋಹಿಯಾ ಕಾಗೋಡು ಗ್ರಾಮದ ಅಶ್ವತ್ಥಮರದ ಕಟ್ಟೆಯ ಮೇಲೆ ನಿಂತು ನೆರೆದಿದ್ದ ರೈತರನ್ನುದ್ದೇಶಿಸಿ ಗುರಿಮುಟ್ಟುವ ತನಕ ಹೋರಾಟ ನಡೆಯಲಿ. ನಿಮ್ಮ ಬೆಂಬಲಿಗನಾಗಿ ನಾನು ಸಮರಕ್ಕೆ ಇಳಿಯುತ್ತೇನೆ. ಎಂದು ರೈತರ ಉಳುಮೆ ಹಕ್ಕಿನ ಭೂಮಿಯ ಕಡೆ ನಡೆದರು. ರೈತ ಸಮುದಾಯ ಮಹಾನಾಯಕನನ್ನು ಹಿಂಬಾಲಿಸಿತು. 'ಡಾ. ಲೋಹಿಯಾ ಜಿಂದಾಬಾದ್-ಕ್ರಾಂತಿ ಚಿರಾಯುವಾಗಲಿ' ಎಂದು ಸಹಸ್ರ ಕಂಠದಿಂದ ಘೋಷಣೆ ಮೊಳಗಿತು.

ಡಾ.ಲೋಹಿಯಾ ಗೋವಾ ಸತ್ಯಾಗ್ರಹದಲ್ಲಿ ಬಂದೂಕಿನೊಂದಿಗೆ ಸಜ್ಜಾಗಿ ನಿಂತಿದ್ದ ಪೋರ್ಚುಗೀಸ್ ಸೈನಿಕರನ್ನೇ ಲೆಕ್ಕಿಸದೇ ತಳ್ಳಿಕೊಂಡು ಮುನ್ನುಗ್ಗಿದ ಧೀರ. ಅದೇ ರೀತಿ ಕಾಗೋಡಿನಲ್ಲೂ ಅವರು ಪೋಲೀಸ್ ರಿಸರ್ವ್ ಪಡೆಯನ್ನು ಗಣನೆಗೂ ತೆಗೆದುಕೊಳ್ಳದೆ ಭೂಮಿಯ ಸುತ್ತ ಹಾಕಿದ್ದ ಬೇಲಿಯನ್ನು ಕಿತ್ತೊಗೆದು, ರೈತರ ಹಕ್ಕಿನ ಭೂಮಿಯಲ್ಲಿ ಪದಾರ್ಪಣೆ ಮಾಡಿದರು. ಎತ್ತು ಕಟ್ಟಿ ಸಿದ್ಧವಾಗಿದ್ದ ನೇಗಿಲನ್ನು ಭೂಮಿಗೆ ಹೂಡಿದರು. ಜೊತೆಯಲ್ಲಿ ಸೋಷಲಿಸ್ಟ್ ಗೆಳೆಯರೂ ನಾಯಕನನ್ನೇ ಹಿಂಬಾಲಿಸಿ ಮಣ್ಣಿನ ಮಕ್ಕಳೊಡನೆ ಕೂಡಿದರು. ಭೂಒಡೆಯನ ರಕ್ಷಣೆಗಾಗಿ ಸಿದ್ಧವಿದ್ದ ಪೋಲೀಸ್ ಪಡೆ ಏನೂ ಮಾಡಲು ತೋಚದೆ, ದಸರಾ ಗೊಂಬೆಗಳಂತೆ ನಿಂತಿದ್ದರು.

ಕಾಗೋಡು ಸಮರ ಭೂಮಿಯಲ್ಲಿ ಡಾ. ಲೋಹಿಯಾ ತಂಡದವರನ್ನು ಬಂಧಿಸಲು ಪೋಲೀಸರಿಗೆ ಧೈರ್ಯ ಬಂದಿರಲಿಲ್ಲ. ಅಂದೇ ರಾತ್ರಿ ರೈಲ್ವೆ ನಿಲ್ದಾಣದಲ್ಲಿ ತಂಗಿದ್ದ ಡಾ. ಲೋಹಿಯಾ ಮತ್ತು ಅವರೊಂದಿಗೆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಖಾದ್ರಿ ಶಾಮಣ್ಣ, ಮುಲ್ಕಾ ಗೋವಿಂದ ರೆಡ್ಡಿ, ಎಂ.ಪಿ. ಈಶ್ವರಪ್ಪ, ಬಿ. ಶ್ರೀಕಂಠಪ್ಪ ಮೊದಲಾದ ಸಮಾಜವಾದಿ ನಾಯಕರನ್ನು ಬಂಧಿಸಿ ಸಾಗರದ ತಾಲ್ಲೂಕು ಕಛೇರಿ ಪಕ್ಕದ ಲಾಕಪ್ಪಿನಲ್ಲಿ ಇಟ್ಟರು.

ಈ ಬಂಧನ ಕಾಲಕ್ಕೆ ಅವರೊಡನಿದ್ದ ಎನ್. ಕೆ. ಸೀತರಾಮಯ್ಯಂಗಾರ್ ಮತ್ತು ಲೋಕಪಾಲ್ ಅವರು ರೈಲ್ವೇ ನಿಲ್ದಾಣದ ಮೇಲುಗಡೆ ಇದ್ದ ನೀರಿನ ಟ್ಯಾಂಕ್ ಮೇಲಕ್ಕೆ ಹತ್ತಿ, ಪೋಲೀಸರ ಕಣ್ಣುತಪ್ಪಿಸಿ ಉಳಿದುಕೊಂಡರು. ಡಾ. ಲೋಹಿಯಾ ಬಂಧನವಾದ ಮೇಲೆ ಸತ್ಯಾಗ್ರಹ ತೀವ್ರಗೊಳಿಸುವ ಜವಾಬ್ದಾರಿಯನ್ನು ಅವರು ಹೊರಬೇಕಾಗಿತ್ತು.

ಸೀತರಾಮಯ್ಯಂಗಾರ್ ಮತ್ತು ಲೋಕಪಾಲ್ ಮಾರನೆ ದಿನ ಬೆಳಿಗ್ಗೆ (ದಿನಾಂಕ ೧೪-೬-೧೯೫೧)ಲೋಹಿಯಾರವರನ್ನು ಇಟ್ಟಿದ್ದ ಜೈಲಿನ ಬಳಿ ಹೋಗಿ, ಅಲ್ಲಿದ್ದ

ಸೆಂಟ್ರಿಯ ಮನವೊಲಿಸಿ ಲೋಹಿಯಾರವರನ್ನು ಕಂಡು ಮಾತನಾಡಲು ಒಳಗೆ ಹೋದರು. ಲಾಕಪ್‌ನಲ್ಲಿ ಮಲಗಿದ್ದ ಖಾದ್ರಿ ಶಾಮಣ್ಣನವರನ್ನು ಎಚ್ಚರಿಸಿದರು. ಅಲ್ಲಿಯೇ ನೆಲದ ಮೇಲೆ ಮಲಗಿದ್ದ ಲೋಹಿಯಾರವರಿಗೆ ಇವರ ಪಿಸು ಮಾತು ಕೇಳಿ ಎಚ್ಚರವಾಯಿತು. "ಯಾರವರು? ಅಯ್ಯಂಗಾರ್ ನಿಮ್ಮನ್ನೂ ಬಂಧಿಸಿದ್ದಾರಾ?" ಎಂದರು. ಅಯ್ಯಂಗಾರರು, "ಇಲ್ಲ, ನಾವು ಸೆಂಟ್ರಿಯನ್ನು ಒಲಿಸಿ ಒಳಗೆ ಬಂದಿದ್ದೇವೆ. ಮುಂದೆ ಏನು ಮಾಡಬೇಕು! ನಿಮ್ಮ ಆದೇಶ, ಆಶೀರ್ವಾದ ಬೇಕು' ಎಂದರು.

ಡಾ. ಲೋಹಿಯಾ ಎದ್ದು "ಅದು ಸರಿ" ಎಂದು ಕೆಲವು ತುರ್ತು ಕೇಬಲ್‌ಗಳನ್ನು ಜರ್ಮನಿ ಮತ್ತು ಅಮೆರಿಕಾಗೆ ಕಳುಹಿಸಲು ವಿವರ ಹೇಳಿ, ವಿಳಾಸಗಳನ್ನು ತಿಳಿಸಿದರು. ಖಾದ್ರಿ ಶಾಮಣ್ಣನವರು ಕೇಬಲ್ ವಿವರಗಳನ್ನು ಅಲ್ಲಿಯೇ ಬರೆಸಿದರು.ವಿದೇಶಗಳಲ್ಲಿ ಕೆಲವು ಕಡೆ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದ ಲೋಹಿಯಾ, ಅದನ್ನೆಲ್ಲಾ ಗೌಣವನ್ನಾಗಿಸಿ, ಸತ್ಯಾಗ್ರಹದಲ್ಲಿ ಭಾಗವಹಿಸಿ ಲಾಕಪ್‌ನಲ್ಲಿ ನೆಲದ ಮೇಲೆ ನಿರ್ಲಿಪ್ತನಾಗಿ ಸ್ಥಿತಪ್ರಜ್ಞನಂತೆ ಮಲಗಿದರು.

ಇದರಿಂದಾಗಿ ಕಾಗೋಡು ಸತ್ಯಾಗ್ರಹ ಅಂತಾರಾಷ್ಟ್ರೀಯ ಸುದ್ದಿಯಾಗುವ ಮಟ್ಟ ತಲುಪಿತು.

(ಕೃಪೆ: 'ಶಾಂತವೇರಿ ಗೋಪಾಲಗೌಡರ ನೆನಪಿನ ಸಂಪುಟ' ಸಂ: ಕಾಳೇಗೌಡ ನಾಗವಾರ, ಜಿ.ವಿ. ಆನಂದಮೂರ್ತಿ, ಪ್ರ: ಕನ್ನಡ ವಿಶ್ವವಿದ್ಯಾನಿಲಯ, ಹಂಪಿ)

■

" ಮೂಲಭೂತ ಸಮಸ್ಯೆ ಆಸ್ತಿಯದ್ದು; ಆಸ್ತಿಯ ಆಸೆಯದ್ದು ಮತ್ತು ಆಸ್ತಿಯ ವ್ಯವಸ್ಥೆಯದ್ದು, ಆಸ್ತಿಯ ವ್ಯವಸ್ಥೆಯ ರೂಪಕ್ಕೆ ಸಂಬಂಧಪಟ್ಟಂತೆ ಈ ಸಮಸ್ಯೆಗೆ ಮಾರ್ಕ್ಸ್ ಒಂದು ಪರಿಹಾರ ಪ್ರತಿಪಾದಿಸಿದರೆ, ಆಸ್ತಿಯ ಆಸೆಯ ಸಮಸ್ಯೆಗೆ ಸಂಬಂಧಪಟ್ಟಂತೆ ಉಪನಿಷತ್ತುಗಳು ಪರಿಹಾರ ಸೂಚಿಸುತ್ತವೆ. ಆದರೆ ನಮಗೀಗ ಬೇಕಾಗಿರುವುದು ಈ ಎರಡೂ ರೂಪಗಳನ್ನು ಎದುರಿಸುವಂತಹ ಒಂದು ರಾಜಕೀಯ ತತ್ವಜ್ಞಾನ. ನನ್ನ ಪ್ರತಿಪಾದನೆ ಆಸ್ತಿಯ ಈ ಎರಡೂ ರೂಪಗಳನ್ನು ಕದಲಿಸುವ ಗುರಿ ಹೊಂದಿದೆ.

–ಲೋಹಿಯಾ(ಲೋಕಸಭಾ ಭಾಷಣ, ೧೯೬೭)

ಕಾಗೋಡು ಸತ್ಯಾಗ್ರಹಿಯಾಗಿ ಲೋಹಿಯಾ

■ ಜಿ. ರಾಜಶೇಖರ್

೧೯೫೧ರ ಜೂನ್ ೧೪ರಂದು ರಾಮಮನೋಹರ ಲೋಹಿಯಾ ಕಾಗೋಡಿಗೆ ಬಂದು ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಆ ಬಗ್ಗೆ ಪ್ರಜಾವಾಣಿಯ ತಾ. ೧೬ರ ವರದಿಯ ಪ್ರಕಾರ ಕಾಗೋಡಿನಲ್ಲಿ ಲೋಹಿಯಾರವರ ಮೆರವಣಿಗೆಯಲ್ಲಿ ೨೦೦೦ ಜನರಿದ್ದರು. ಕಾಗೋಡಿನ ದೀವರು, ಈಗಲೂ ಕಾಗೋಡಿಗೆ ಲೋಹಿಯಾ ಬಂದದ್ದನ್ನು ತಮ್ಮ ಜೀವಮಾನದಲ್ಲೇ ತಾವು ಕಂಡಂತಹ ಒಂದು ಅದ್ಭುತವೆಂಬಂತೆ ಬಣ್ಣಿಸುತ್ತಾರೆ: ಲೋಹಿಯಾ ಬಗ್ಗೆ ಆತ ದೇವರೇನೋ ಎಂಬಷ್ಟು ಗೌರವದಲ್ಲಿ ಮಾತಾಡುತ್ತಾರೆ. ಅಷ್ಟು ದೊಡ್ಡ ಮನುಷ್ಯ ಪಾಪ ಡಿಲ್ಲಿಯಿಂದ ಇಲ್ಲಿಯವರೆಗೆ ಬಂದು ನಮಗೋಸ್ಕರ ಸತ್ಯಾಗ್ರಹ ಮಾಡಿ ಅರೆಸ್ಟ್ ಆದದ್ದು, ಸ್ವತಃ ನೆಹ್ರೂನೇ ಅವರನ್ನು ಬಿಡಿಸಿದ್ದು, ಅವರು ಬಂದ ದಿನ ಕಾಗೋಡಿನಲ್ಲಿ ಸೇರಿದ್ದ ಜನ, ಅವತ್ತು ರಾತ್ರಿ ಪೊಲೀಸರು ಮನೆಮನೆಗೆ ನುಗ್ಗಿ ಹೊಡೆದದ್ದು–ಎಲ್ಲವನ್ನೂ ಈಗಷ್ಟೇ ಅವನ್ನು ಕಂಡೆವೇನೋ ಎಂಬಷ್ಟು ತುರ್ತಿನಿಂದ ಉತ್ಸಾಹದಿಂದ ವಿವರಿಸುತ್ತಾರೆ. ಲೋಹಿಯಾ ಬಗ್ಗೆ ಕಾಗೋಡು ದೀವರಂತಹ ಅನಕ್ಷರಸ್ಥ ಮುಗ್ಧ ಬಡ ರೈತರಿಗೆ ಇರುವ ಗೌರವ ಹೃದಯಸ್ಪರ್ಶಿಯಾದುದು; ನಿಜಕ್ಕೂ ಇಂತಹ ಜನರೇ ಅಲ್ಲವೆ ಲೋಹಿಯಾ ಬಗ್ಗೆ ಮಾತನಾಡಬೇಕಾದವರು? ಆದರೆ ಕಾಗೋಡು ದೀವರಲ್ಲಿ ಯಾರಿಗೂ ತಮ್ಮಂತಹ ಜನಗಳಿಗೆ ಭಾರತದ ಸಂಸ್ಕೃತಿ ಏನು ಮಾಡಿದೆ ಎಂಬುದರ ಬಗ್ಗೆ ಲೋಹಿಯಾ ಹೇಗೆ ಯೋಚಿಸುತ್ತಿದ್ದರು ಎನ್ನುವುದು ಏನೇನೂ ತಿಳಿಯದು. ಅವರಿಗೆ ಅದನ್ನು ತಿಳಿಸುವ ಪ್ರಯತ್ನವನ್ನು ಒಬ್ಬ ಸೋಷಲಿಸ್ಟ್ ಕಾರ್ಯಕರ್ತನೂ ಮಾಡಿಲ್ಲ, ಸ್ವತಃ ಲೋಹಿಯಾರೇ, ನಮ್ಮ ದೇಶದ ಬುದ್ಧಿಜೀವಿಗಳ ಚಿಂತನೆ ಜನಸಾಮಾನ್ಯರಿಂದ ದೂರ ಉಳಿದು ಶುಷ್ಕ ಸಿದ್ಧಾಂತಗಳಾಗುವ ದುರಂತದ ಬಗ್ಗೆ ಹೇಳಿದ್ದಾರೆ.

ಜೂನ್ ೧೪ರ ರಾತ್ರಿ ಒಂದು ಘಂಟೆಯ ಸುಮಾರಿಗೆ ಸಾಗರ ರೈಲ್ವೇ ನಿಲ್ದಾಣದಲ್ಲಿ ಕಾಗೋಡಿನಿಂದ ವಾಪಸ್ಸಾಗಿದ್ದ ಲೋಹಿಯಾರನ್ನು,

ಅವರ ಜೊತೆ ಇದ್ದ ಖಾದ್ರಿ ಶಾಮಣ್ಣ, ಮುಲ್ಲಾ ಗೋವಿಂದರೆಡ್ಡಿ, ಈಶ್ವರಪ್ಪ, ಗುರುರಾಜ್(ಸಾಗರದ ಒಬ್ಬ ಸೋಷಲಿಸ್ಟ್ ಕಾರ್ಯಕರ್ತ) ಅವರನ್ನೂ ಪೊಲಿಸರು ಬಂಧಿಸಿದರು. ಲೋಹಿಯಾ ಬಂಧನದ ಬಗ್ಗೆ ಮೈಸೂರು ಸರ್ಕಾರ ಕೊಟ್ಟ ಹೇಳಿಕೆ ಪ್ರಕಾರ, "ಡಾ.ಲೋಹಿಯಾರವರು ತಮ್ಮ ಹಿಂದಿನ ಘೋಷಣೆಗೆ ಅನುಸಾರವಾಗಿ, ತಮ್ಮ ಒಂಬತ್ತು ಮಂದಿ ಸಂಗಡಿಗರುಗಳೊಂದಿಗೆ ಮತ್ತು ನೂರಾರು ಮಂದಿ ಇತರರೊಂದಿಗೆ, ಶ್ರೀ ಗುರುವೇಗೌಡರ ಜಮೀನಿನ ಅತಿಕ್ರಮ ಪ್ರವೇಶ ಮಾಡಿ, ಬೇಲಿಯನ್ನು ಕಿತ್ತರೆಂದೂ ಕಾನೂನು ವಿರುದ್ಧ ಸಭೆ ನಡೆಸಿದರೆಂದೂ ಪೊಲೀಸು ವರದಿಯಿಂದ ತಿಳಿದುಬರುತ್ತದೆ. ಇದರಿಂದ ಕಾನೂನು ಪಾಲಕರ ಕಣ್ಣಿಗೆ ಬಿದ್ದು ಅವರನ್ನು ಅವರ ಕೆಲವು ಮಿತ್ರರನ್ನು ಗಣನೀಯ ಅಪರಾಧಕ್ಕಾಗಿ ಬಂಧಿಸಲಾಯಿತು." (ಪ್ರಜಾವಾಣಿ ೨೧-೬-೧೯೫೧ ಮತ್ತು ೨೩-೬-೧೯೫೧).

ಪೊಲೀಸರು ಲೋಹಿಯಾರನ್ನು ಸಾಗರದ ಕೋರ್ಟಿನಲ್ಲಿ ಹಾಜರುಪಡಿಸಿ, ರೈಲಿನಲ್ಲಿ ಮೂರನೇ ದರ್ಜೆಯ ಬೋಗಿಯಲ್ಲಿ ಬೆಂಗಳೂರಿಗೆ ಒಯ್ದು, ಕ್ರೆಸೆಂಟ್ ಹೌಸಿನಲ್ಲಿ ಬಂಧನದಲ್ಲಿಟ್ಟರು. ಆ ಭವ್ಯ ಸೆರೆಮನೆಯನ್ನು ತಾನೊಲ್ಲೆ ಎಂದು ಲೋಹಿಯಾ ಪ್ರತಿಭಟಿಸಿದಾಗ ಅವರನ್ನು ಸೆಂಟ್ರಲ್ ಜೈಲಿನಲ್ಲಿಟ್ಟರು. ಜೂನ್ ಇಪ್ಪತ್ತೆರಡರಂದು ಮತ್ತೆ ಸಾಗರದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಲೋಹಿಯಾರನ್ನು ಹಾಜರುಪಡಿಸಿದರು. ತಮ್ಮ ಕೇಸಿನ ವಿಚಾರಣೆಗೆ ತಮ್ಮನ್ನು ಸಾಗರಕ್ಕೆ ಒಯ್ಯಬಾರದು ಎಂಬ ಲೋಹಿಯಾರ ಮನವಿಯನ್ನು ಹೈಕೋರ್ಟ್ ನಿರಾಕರಿಸಿತು. ಜಾಮೀನಿನ ಮೇಲೆ ಬಿಡುಗಡೆಯಾಗಲು ಲೋಹಿಯಾ ನಿರಾಕರಿಸಿದರು. ಲೋಹಿಯಾರವರ ಜೊತೆ, ಇಪ್ಪತ್ತಾರು ಜನ ಸತ್ಯಾಗ್ರಹಿಗಳ ಮೇಲೆ ಕೇಸು ಹಾಕಲಾಗಿತ್ತು: ಅದರಲ್ಲಿ ಕೋರ್ಟಿಗೆ ಒಂಬತ್ತು ಜನ ಮಾತ್ರ ಹಾಜರಾಗಿದ್ದರು. 'ಮಿಕ್ಕವರು ತಲೆತಪ್ಪಿಸಿಕೊಂಡಿದ್ದಾರೆ' ಎಂದು ಪೋಲೀಸರು ವರದಿ ಮಾಡಿದ್ದರಿಂದ ಸಾಗರ ಕೋರ್ಟಿನಲ್ಲಿ ಇದೇ ಮೊಕದ್ದಮೆಯನ್ನು ಜುಲೈ ಮೂರಕ್ಕೆ ಮುಂದೆ ಹಾಕಿದರು. ಲೋಹಿಯಾರನ್ನು ಮತ್ತೆ ಬೆಂಗಳೂರಿನ ಸೆಂಟ್ರಲ್ ಜೈಲಿಗೆ ಕರೆತಂದರು.(ಪ್ರಜಾವಾಣಿ ೨೧-೬-೧೯೫೧) ಜೂನ್ ಇಪ್ಪತ್ತೆರಡರಂದು ಸರಕಾರ ಲೋಹಿಯಾರ ಮೇಲೆ ಇದ್ದ ಎಲ್ಲಾ ಕೇಸುಗಳನ್ನು ಹಿಂದಕ್ಕೆ ತೆಗೆದುಕೊಂಡು ಜೈಲಿನಿಂದ ಬಿಡುಗಡೆ ಮಾಡಿತು. ಬಿಡುಗಡೆಯಾದ ಮೇಲೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಲೋಹಿಯಾ, "ಕಾಗೋಡು ಪ್ರಕರಣದಲ್ಲಿ ಭೂಮಿಯ ಒಡೆತನದ ಪ್ರಶ್ನೆ ಅಡಕವಾಗಿರಲಿಲ್ಲವೆಂದೂ, ಅದರ ಸ್ವಾಧೀನ ಪ್ರಶ್ನೆ ಮಾತ್ರವೆಂದೂ, ಅಕ್ರಮವಾಗಿ ಹೊರದೂಡಲ್ಪಟ್ಟಿರುವ ರೈತರಿಗೆ ಭೂಮಿ ಸೇರಿರುವುದರಲ್ಲಿ ಯಾವ ಸಂದೇಹವೂಇಲ್ಲವೆಂದು ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿನ ೭೯ನೇ ವಿಧಿ ತಮ್ಮ ನಿಲುವನ್ನು ಪೂರ್ಣವಾಗಿ ಸಮರ್ಥಿಸುವುದಾಗಿಯೂ ತಿಳಿಸಿದರು. ವಿವಾದ ಆರಂಭವಾದಾಗ ರೈತರು ಹಾಗೂ ಭೂಮಾಲೀಕರ ಮಧ್ಯೆ ಸರಕಾರ ತಟಸ್ಥವಾಗಿರಬೇಕಿತ್ತೆಂದೂ, ಸಿವಿಲ್ ದಾವಾದ ಮೂಲಕ ಪ್ರಶ್ನೆ ಇತ್ಯರ್ಥಗೊಳ್ಳುತ್ತಿತ್ತೆಂದೂ ತಿಳಿಸಿದರು. ತಾವು ಹಿಂದೆ ಅನೇಕ ಬಾರಿ ಕಾನೂನನ್ನು ಉಲ್ಲಂಘಿಸಿರುವುದಾಗಿಯೂ, ಮುಂದೆಯೂ ಉಲ್ಲಂಘಿಸಬೇಕಾಗಿ ಬರಬಹುದಾಗಿಯೂ ತಿಳಿಸಿ ನ್ಯಾಯ ಹಾಗೂ

ಸಮಾಜದ ಅವಶ್ಯಕತೆಗಳಿಗೆ ವಿರುದ್ಧವಾಗಿರುವ ಕಾನೂನುಗಳನ್ನು ಉಲ್ಲಂಘಿಸಲೇಬೇಕು ಎಂದು ತಿಳಿಸಿದರು" (ಪ್ರಜಾವಾಣಿ ೨೪-೬-೧೯೫೧).

ಲೋಹಿಯಾ ಬೆಂಗಳೂರಿನಿಂದ ರಾಂಚಿಗೆ ತೆರಳುವ ಮುನ್ನ, ಸತ್ಯಾಗ್ರಹದಲ್ಲಿ ತಾವು ಭಾಗವಹಿಸಿದ್ದರ ಬಗ್ಗೆ ಹೇಳಿದರು: 'ಸಣ್ಣದಾಗಲಿ ದೊಡ್ಡದಾಗಲೀ, ಎಲ್ಲ ರೀತಿಯ ಅನ್ಯಾಯ ಕೃತ್ಯಗಳನ್ನೂ ವಿರೋಧಿಸಬೇಕೆಂದು ನಾನು ಜೂನ್ ೩ನೇಯ ತಾರೀಖು ರಾಜಘಾಟಿನಲ್ಲಿ ಜನಗಳಿಗೆ ಬೋಧಿಸಿದ ನಂತರ, ಅಂತಹ ಕಾರ್ಯವನ್ನು ನಾವೇ ನಿರ್ವಹಿಸಬೇಕಾದ ಪ್ರಸಂಗ ಬಂದೀತೆಂದು ಸ್ವಲ್ಪವೂ ಯೋಚಿಸಿರಲಿಲ್ಲ, ಶತಮಾನಗಳಿಂದ ಜಡಾವಸ್ಥೆಗೆ ತಳ್ಳಲ್ಪಟ್ಟಿರುವ ಭೂಮಿ ಕಾಣಿಗಳಿಗೆ ನೇರವಾಗಿ ಸಂಬಂಧಿಸಿದ ಚಳುವಳಿಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟ ಈ ಸುಂದರ ಮೈಸೂರು ನಾಡಿಗೆ ನಾನು ಕೃತಜ್ಞ. ಕಾಗೋಡಿನ ಮಾಸ್ತಿಗಳು ಮತ್ತು ಕೆಂಚಪ್ಪಗಳು ಮಾತ್ರವಲ್ಲ ಭಾರತದ ಎಲ್ಲರೂ ತಮ್ಮ ಹಕ್ಕು ತಮಗೆ ದೊರೆಯಬೇಕೆಂದು ಒತ್ತಾಯಪಡಿಸುತ್ತಿದ್ದಾರೆ. ರಾಷ್ಟ್ರ ಬೆಳೆಯಬೇಕಾದರೆ ಇಂತಹವರ ಆತ್ಮಕ್ಕೆ ಸ್ವಾತಂತ್ರ್ಯ ದೊರೆಯಬೇಕು. ಆದರೆ ಕಾಲ ಮಿಂಚಿನ ವೇಗದಿಂದ ಸಾಗುತ್ತಿದೆ. ಅಭಾವ, ಹಸಿವುಗಳ ಪ್ರಕೃತ ವರ್ಷದಲ್ಲಿ ಕಾಗೋಡಿನ ಮುನ್ನೂರು ಎಕರೆ ಜಮೀನು ಸಾಗಾಗದೆ ಉಳಿಯಕೂಡದು. ಇನ್ನೊಂದೆರಡು ದಿನಗಳಲ್ಲಿ ಈ ಜಮೀನುಗಳನ್ನು ಸಾಗು ಮಾಡಲು ರೈತರಿಗೆ ಅವಕಾಶ ಮಾಡಿಕೊಡಬೇಕು. ನೆರೆಯ ಗ್ರಾಮದವರು ಸಸಿಗಳನ್ನು ಉಚಿತವಾಗಿ ಕೊಡಬೇಕು. ನನ್ನ ಮೇಲಿನ ಮೊಕದ್ದಮೆಯನ್ನು ವಾಪಸು ಪಡೆದು ನನ್ನನ್ನು ಮಾತ್ರ ಬಿಟ್ಟು ನನ್ನಂತಹದ್ದೇ ಆಪಾದನೆಗಳಿಗೆ ಗುರಿಯಾಗಿರುವ ಇತರರನ್ನು ಸೆರೆಮನೆಯಲ್ಲಿ ಉಳಿಸುವುದು ಪ್ರಜಾಸತ್ತೆಗೆ ಅಥವಾ ಕಾನೂನಿನ ಮುಂದೆ ಎಲ್ಲರೂ ಸಮನೆಂಬ ತತ್ವಕ್ಕೆ ಸಲ್ಲದು" (ಪ್ರಜಾವಾಣಿ ೨೬-೬-೧೯೫೧).

ರೈತರು ಎಂದೂ ತಾವೇ ತಾವಾಗಿ ಸಾಗುವಳಿಯನ್ನು ನಿಲ್ಲಿಸಿರಲಿಲ್ಲ. ಗೇಣಿ ಕೊಡುವುದಿಲ್ಲ ಎಂದೂ ಹೇಳಿರಲಿಲ್ಲ. ಜಮೀನ್ದಾರರೇ ಅವರನ್ನು ಗದ್ದೆಗೆ ಇಳಿಯದಂತೆ ಮೊದಲು ತಡೆದರು ಎಂಬ ಸತ್ಯವನ್ನು ಸರ್ಕಾರ ಸಾರ್ವಜನಿಕರಿಗೆ ತಿಳಿಸಲೇ ಇಲ್ಲ.

ಲೋಹಿಯಾ ಕಾಗೋಡಿಗೆ ಬಂದ ದಿನ, ಅಲ್ಲಿಯ ಒಕ್ಕಲುಗಳ ನೆನಪಿನಲ್ಲಿ ಮಾಸದೆ ಇರುವುದಕ್ಕೆ ಇನ್ನೂ ಒಂದು ಕಾರಣವಿದೆ. ಆ ದಿನ ರಾತ್ರಿ ಪೊಲೀಸರು ಕಾಗೋಡಿನಲ್ಲಿ ನಡೆಸಿದಷ್ಟು ಹಿಂಸಾಚಾರ, ಸತ್ಯಾಗ್ರಹದಲ್ಲಿ ಹಿಂದೆಂದೂ ನಡೆದಿರಲಿಲ್ಲವಂತೆ. ಲೋಹಿಯಾ ಕಾಗೋಡಿನಿಂದ ತೆರಳಿದ ಮೇಲೆ ಪೋಲೀಸರು ಕಾಗೋಡಿನಲ್ಲಿ ಸಿಕ್ಕಸಿಕ್ಕವರಿಗೆಲ್ಲ ಲಾಠಿಯಲ್ಲಿ ಬಾರಿಸಿದರಂತೆ. ದೀವರ ಕೇರಿಯಲ್ಲಿ ಆ ರಾತ್ರಿ, ಪೊಲೀಸರು ಮನೆಮನೆಗೂ ನುಗ್ಗಿ, ಹೆಂಗಸರು, ಮಕ್ಕಳು, ಮುದುಕರು ಎಂದು ನೋಡದೆ ಹೊಡೆದರು. ಗಂಡಸರು ರಾತ್ರೋರಾತ್ರಿ "ಪಂಚೇಲಿ ಹೇಲು ಕಟ್ಟಿಕೊಂಡು" ಹಳ್ಳಿಯನ್ನು ಆವರಿಸಿದ್ದ ಕಾಡಿಗೆ ಓಡಿ ಹೋದರು ಎಂದು ಒಬ್ಬ ದೀವರವ ನನಗೆ ಹೇಳಿದ.

(ಇದೇ ಲೇಖಕರ 'ಕಾಗೋಡು ಸತ್ಯಾಗ್ರಹ' ಪುಸ್ತಕದಿಂದ ಆಯ್ದ ಭಾಗಗಳು)

■

ಸಮಾಜವಾದಿ ಪಕ್ಷದ ಬ್ರಾಹ್ಮಣರು ಮತ್ತು ಭಾರತದ ಮಾರ್ಕ್ಸ್‌ವಾದಿಗಳು*

ಲೋಹಿಯಾ ನಿಧನಾನಂತರ ಸಮಾಜವಾದಿ ಆಂದೋಳನವು ಹಲವಾರು ವಿಧಗಳಾಗಿ ಒಡೆದಿದೆ. ಈ ಪಕ್ಷ ಒಡೆಯಲು ಈವರೆಗೆ ಯಾರೂ ಸೈದ್ಧಾಂತಿಕ ತಳಹದಿಯನ್ನಾಗಲಿ ತಾತ್ವಿಕ ನೆಲೆಗಟ್ಟನ್ನಾಗಲಿ ಮೂಲವೆಂದು ತೋರಿಸಿಲ್ಲ. ಕೊನೆಯ ಪಕ್ಷ ಈ ಒಳಜಗಳಗಳು ಯಾವುದೇ ಕಾರ್ಯಕ್ರಮ ಮೂಲವಾದವೂ ಕೂಡ ಅಲ್ಲ. ಈ ಎಲ್ಲ ನಾಯಕರುಗಳೂ ಕೂಡ ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಇಂದಿರಾ ರಾಜಕಾರಣದಕ್ಕಿಂತ ಭಿನ್ನರೀತಿಯಲ್ಲಿ ವರ್ತಿಸುತ್ತೇವೆಂದು ಜನತೆಗೆ ಮನವರಿಕೆ ಮಾಡಿಕೊಡಲು ಸಂಪೂರ್ಣ ಸೋತಿದ್ದಾರೆ. ಲೋಹಿಯಾ ನಿಧನಾನಂತರ ಸಮಾಜವಾದಿ ಆಂದೋಳನ ಭಾರತದ ಪುಢಾರಿ ರಾಜಕಾರಣದ ಒಂದು ಅವಿಭಾಜ್ಯ ಅಂಗದಂತೆ ವರ್ತಿಸಿದೆಯೇ ಹೊರತು ಕ್ರಾಂತಿಕಾರಿ ರಾಜಕೀಯ ಪಕ್ಷದಂತೆ ಅಲ್ಲ.

ಮೈಸೂರಿನ ರಾಜಕಾರಣ ಈ ಅಸಂಬದ್ಧ ಘಟನಾವಳಿಗಳ ಸಚಿತ್ರ ದರ್ಪಣವಾಗಿದೆ. ಕಾಂಗ್ರೆಸ್ ಇಬ್ಭಾಗವಾದೊಡನೆ ಈ ಪಕ್ಷದ ಅಧ್ಯಕ್ಷರೇ ಲೀಲಾಜಾಲವಾಗಿ ಪಕ್ಷಾಂತರ ಮಾಡಿ ಸಚಿವರಾದರು. ಚುನಾಯಿತರಾಗುತ್ತಿದ್ದಂತೆಯೇ ಪಕ್ಷದ ಶಾಸಕರೊಬ್ಬರು ಪಕ್ಷತ್ಯಾಗ ಮಾಡಿ ಬೇರಾದರು. ರಾಜ್ಯ ಸಮ್ಮೇಳನವನ್ನು ಅನಿರ್ದಿಷ್ಟ ಅವಧಿಯವರೆಗೆ ನಿಷ್ಕಾರಣವಾಗಿ ಮುಂದೂಡಲಾಯ್ತು. ಸಮಾಜವಾದಿ ಯುವಜನಸಭಾದ ಕಾರ್ಯಕಲಾಪಗಳಲ್ಲಿ, ಧ್ಯೇಯ–ಧೋರಣೆಗಳಲ್ಲಿ ಹಾಗೂ ರಾಜ್ಯ ಸಮ್ಮೇಳನ–ಸಮಾವೇಶಗಳಲ್ಲಿ ಪಕ್ಷದ ನಾಯಕರು ಅನಗತ್ಯ ಹಸ್ತಕ್ಷೇಪ

*** ೧೯೭೩ರಲ್ಲಿ ಸಮಾಜವಾದಿ ಯುವಜನ ಸಭಾ ಗುಂಪು ಶ್ರೀ ಪೂರ್ಣಚಂದ್ರ ತೇಜಸ್ವಿ ಅವರ ಹೆಸರಿನಲ್ಲಿ ಹೊರಡಿಸಿದ ಒಂದು ಕೆಂಪು ಕಾಗದ.**

ಮಾಡಿ ಗುಂಪುಗುಳಿತನವನ್ನು ಪ್ರಚೋದಿಸುತ್ತಿದ್ದಾರೆ. ಈ ನಡುವೆ ತಾತ್ಕಾಲಿಕ ನಾಮಕರಣಗೊಂಡ ಅಧ್ಯಕ್ಷರೂ ಕಾರ್ಯದರ್ಶಿಗಳೂ ಹಾಗೂ ರಾಜ್ಯ ಸಮಿತಿ ಸದಸ್ಯರೂ, ಅನೇಕ ಅತ್ಯಂತ ಮುಖ್ಯ ವಿಚಾರಗಳನ್ನು ಕಾರ್ಯಕರ್ತರ, ಸದಸ್ಯರ ಹಾಗೂ ಸಹೋದ್ಯೋಗಿಗಳ ಸಮಾಲೋಚನೆ-ಅನುಮತಿಗಳನ್ನು ಪಡೆಯದೆ ಕೈಗೊಂಡಿದ್ದಾರೆ. ಮೈತ್ರಿಕೂಟ, ಕಮ್ಯೂನಿಸ್ಟ್ ಮಾರ್ಕಿಸ್ಟ್‌ರೊಡನೆ ಸಹಕರಿಸುವ ಸಹಯೋಗ ಇವು ಮುಂತಾದವು ಕೆಲವನ್ನು ಇಲ್ಲಿ ನಾವು ಹೆಸರಿಸಬಹುದು.

ಪಕ್ಷ ಒಡೆಯುವ ಅಥವಾ ಬೇರೆ ಪಕ್ಷ ಕಟ್ಟಿಕೊಳ್ಳುವ ಯಾವುದೇ ಪುಢಾರಿ ಚಪಲವೂ ನಮಗೆ ಇಲ್ಲ. ನಾವು ಯಾರಿಗೂ ಚೇಲಾಗಳಲ್ಲ. ಯಾರಿಗೂ ನಾಯಕರಲ್ಲ. ಈ ಘಟನಾವಳಿಗಳ ನಡುವೆಯೇ ಸಮಾಜವಾದಿ ಆಂದೋಳನ ಹೇಗೆ ಲೋಹಿಯಾವಾದದಿಂದ ಹಂತಹಂತವಾಗಿ ದೂರ ಸರಿಯುತ್ತಿದೆ ಎಂಬುದನ್ನು ಗುರುತಿಸಿದ್ದೇವೆ. ಈ ಬಗ್ಗೆ ಯಾವುದೇ ಸಮಜಾಯಿಷಿಯನ್ನೂ ನಾವು ಬಯಸಿಲ್ಲ. ಏಕೆಂದರೆ, ಲೋಹಿಯಾರೊಡನೆ ಸಹಚರರಾಗಿದ್ದವರು ಅನೇಕರು ಇನ್ನೂ ನಮ್ಮಲ್ಲಿದ್ದಾರೆ. ಅವರಿಗೆ ಲೋಹಿಯಾ ಸಿದ್ಧಾಂತದ ಬಗ್ಗೆ ಚರ್ಚಿಸಹೊರಟರೆ ತಲೆಹರಟೆಯಂತೆ ಕಾಣುತ್ತದೆ.

ಕಾರ್ಲ್ಸ್ ಮಾರ್ಕ್ಸ್‌ನಂತೆ ಲೋಹಿಯಾವಾದವು ಕೂಡ ಇಷ್ಟು ಬೇಗ ಹಲವು ಹದಿನೆಂಟು ವ್ಯಾಖ್ಯಾನಗಳಿಗೆ ಒಗ್ಗುವ ಅಮೂರ್ತ ಸಿದ್ಧಾಂತವಾದುದು ಒಂದು ಸೋಜಿಗದ ಸಂಗತಿಯಾಗಿದೆ.

ಈಚೆಗೆ ನಮ್ಮ ಪಕ್ಷದ ಕಾರ್ಯದರ್ಶಿ ಹಾಗೂ ಅಧ್ಯಕ್ಷರು ನಮ್ಮ ರಾಜ್ಯಕ್ಕೆ ನಂಬೂದಿರಿಪಾದರು ಬಂದಾಗ ಲಗುಬಗೆಯಿಂದ ಪತ್ರಿಕಾಹೇಳಿಕೆಯೊಂದನ್ನು ಕೊಟ್ಟು ಇನ್ನು ಮುಂದೆ ಮಾರ್ಕ್ಸ್‌ವಾದಿಗಳೊಡನೆ ಸಮಾಜವಾದೀ ಪಕ್ಷ ಮೈತ್ರಿಯನ್ನು ಏರ್ಪಡಿಸಿಕೊಳ್ಳುತ್ತದೆಂದು ಹೇಳಿಕೆ ಕೊಟ್ಟರು. ಅವರು ಕಾರ್ಯಕರ್ತರ ಯಾವುದೇ ಅನುಮತಿ ಪಡೆಯದೇ ಇದ್ದರೂ ಕೂಡ ಈ ಹೇಳಿಕೆ ಕೊಟ್ಟು ಲೋಹಿಯಾವಾದಿಗಳ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಕೃತಜ್ಞತೆಗಳು.

ಲೋಹಿಯಾರವರ ಸಿದ್ಧಾಂತ, ಮಾರ್ಕ್ಸ್ ಅನಂತರದ ಸಮಾಜವಾದೀ ಆಲೋಚನೆಗೆ ಅತಿ ಮಹತ್ತರ ಕೊಡುಗೆ ಎಂದು ನಾವೇಕೆ ಪರಿಗಣಿಸಿದ್ದೇವೆಂದರೆ, ಬಂಡವಾಳಶಾಹಿ ಮತ್ತು ಕಮ್ಯುನಿಸಂ ಬಗ್ಗೆಯ ಅವರ ಕ್ರಾಂತಿಕಾರಿ ವಿಶ್ಲೇಷಣೆಗಾಗಿ, ತನ್ನ ಚೈತನ್ಯಶಕ್ತಿ, ಮೂಲ ಅಂತಃಸ್ಸತ್ವ ಇತ್ಯಾದಿಗಳಿಗಾಗಿ ಬಂಡವಾಳಶಾಹಿ ಮತ್ತು ಕಮ್ಯುನಿಸಂ–ಇವೆರಡೂ ವ್ಯತ್ಯಾಸವೇ ಇಲ್ಲದ ಪಂಥಗಳಾಗಿವೆ ಎಂದು ಲೋಹಿಯಾ ತೋರಿಸಿದರು. ವೈಯಕ್ತಿಕವಾಗಿ ಸ್ವಂತ ಸ್ವತ್ತನ್ನು ತಿರಸ್ಕರಿಸಿದ ಮಾರ್ಕ್ಸ್‌ವಾದ, ಜನಾಂಗೀಯವಾಗಿ ಮತ್ತು ರಾಷ್ಟ್ರೀಯವಾಗಿ ಅಸಮಾನತೆ ತಾರತಮ್ಯಗಳನ್ನು ಹೋಗಲಾಡಿಸಲು ಸಂಪೂರ್ಣ ಸೋತಿದೆ. ಈ ಎರಡೂ ಸಿದ್ಧಾಂತಗಳೂ ಜಗತ್ತಿಗೆ

ಸರಕಾರಗಳಾಗಿ ಹಲವು ದಶಕಗಳಿಂದ ಅಸ್ತಿತ್ವದಲ್ಲಿದ್ದರೂ ಯುದ್ಧ ಮತ್ತು ಬಡತನದ ಸಮಸ್ಯೆಗಳನ್ನು ದ್ವಿಗುಣಗೊಳಿಸುತ್ತಲೇ ಹೋಗುತ್ತಿವೆ. ಇವೆರಡೂ ತ್ಯಾಜ್ಯ. ಮಾರ್ಕ್ಸ್‌ವಾದ ವಸಾಹತುಶಾಹಿಯನ್ನು ಗಣಿಸದೆ ಒಂದು ರಾಷ್ಟ್ರದ ಪರಿಧಿಯೊಳಗೆ ತನ್ನ ವಿಶ್ಲೇಷಣೆ ನಡೆಸಿದುದರಿಂದ ಇದು ಯುರೋಪಿಯನ್ ಜನಾಂಗದ ಮೋಸಭರಿತ ವಿಶ್ಲೇಷಣೆ ಎಂದು ಲೋಹಿಯಾ ತಿರಸ್ಕರಿಸಿದರು.

ಈಗ ನಮ್ಮ ಪಕ್ಷದಲ್ಲಿ ಮಾರ್ಕ್ಸ್‌ವಾದಿಗಳೊಡನೆ ಸ್ನೇಹಾಕಾಂಕ್ಷೆ ಇರುವವರ ಮಾತು ಬಲವಾಗುತ್ತಿದೆ. ನಾವು ಈಗ ರಾಜ್ಯದಲ್ಲಿ ಗೆದ್ದಿರುವ ಎರಡು ಸ್ಥಾನಗಳಲ್ಲಿ ಒಂದನ್ನು ಮಾರ್ಕ್ಸ್‌ವಾದಿಗಳೊಡೆ ಕಾದಾಡಿ ಪಡೆಯಬೇಕಾಯಿತು ಎಂಬುದನ್ನು ಇವರು ಮರೆತಿದ್ದಾರೆ. ಈಗ ನಿರ್ಮಾಣವಾಗುತ್ತಿರುವ ಹೊಸ ಮೈತ್ರಿಕೂಟ ಕೇವಲ ನಾವು ಬಂಡವಾಳಶಾಹಿ ಮತ್ತು ಮಾರ್ಕ್ಸ್‌ವಾದದ ಬಗೆಗಿನ ಲೋಹಿಯಾ ವಿಶ್ಲೇಷಣೆಯನ್ನು ಮರೆತೆವೆಂದು ಮಾತ್ರ ತೋರಿಸುತ್ತಿಲ್ಲ! ಲೋಹಿಯಾವಾದಕ್ಕೇ ಸಮಗ್ರವಾಗಿ ತಿಲಾಂಜಲಿ ಕೊಡಲು ತಯಾರಾಗುತ್ತಿದ್ದೇವೆಂಬುದನ್ನು ಸೂಚಿಸುತ್ತದೆ.

ಕಮ್ಯುನಿಸ್ಟರು ರಾಜಕೀಯ ಸಮಾನತೆ ಮತ್ತು ಆರ್ಥಿಕ ಸಮಾನತೆಯೊಂದಿಗೆ ಜಾತೀಯ ಅಸಮಾನತೆಯೂ ಅನಾಯಾಸವಾಗಿ ತನ್ನಿಂದ ತಾನೇ ತೊಲಗುತ್ತದೆಂದು ನಂಬುತ್ತಾರಾದುದರಿಂದ ಹಿಂದುಳಿದವರಿಗೆ, ತುಳಿಯಲ್ಪಟ್ಟವರಿಗೆ ವಿಶೇಷಾವಕಾಶ ಕೊಡಬೇಕೆಂದು ನಂಬುವುದಿಲ್ಲ. ಎಂತಲೇ ಸಮಾನಾವಕಾಶ ಕಲ್ಪಿಸಿ ಸಮರ್ಥರೆನ್ನಿಸಿದವರಿಗೆ ಉಚ್ಚಸ್ಥಾನ ಕೊಡುತ್ತಾರೆ. ಎಂತಲೇ ಕಮ್ಯೂನಿಸ್ಟ್ ಪಕ್ಷದ ನಾಯಕವರ್ಗ ವಿಪ್ರವರೇಣ್ಯರಿಂದ ತುಂಬಿದೆ. ನಾಳೆ ಈ ಪಕ್ಷ ಅಧಿಕಾರಕ್ಕೆ ಬಂದಾಗಲೂ ಈ ಶ್ರೇಷ್ಠ ಜನರೇ ಸುಪ್ರೀಂ ಪ್ರಿಸಿಡಿಯಂನಲ್ಲೂ ಬಂಡುಕೋರ ಶೂದ್ರಸ್ತೋಮವು ಕಾಂಸಂಟ್ರೇಷನ್ ಕ್ಯಾಂಪುಗಳಲ್ಲೂ ಇರುತ್ತಾರೆ.

ತಾವೇ ಶ್ರೇಷ್ಠರೆನ್ನಿಸುವಂಥ, ತಮಗೇ ಹೊಂದುವಂಥ ನಾಗರಿಕತೆಯನ್ನೂ ನಿರ್ಮಿಸುತ್ತಾ ಸಮರ್ಥರಿಗೇ ಮೊದಲ ಸ್ಥಾನವೆಂದು ಹೇಳಿ ಈ ನಾಗರಿಕತೆಯ ಸವಲುತ್ತುಗಳನ್ನೆಲ್ಲಾ ತಾನೇ ಹೊಡೆದುಕೊಳ್ಳುತ್ತಾ ಸಾಗಿ ಬಂದಿರುವ ಭಾರತೀಯ ಇತಿಹಾಸದ ಪುನಾರವರ್ತನೆ ನಮಗೆ ಬೇಡ. ಜಗತ್ತಿನ ಬ್ರಾಹ್ಮಣರಾದ ಯುರೋಪಿಯನ್ನರು ನಿರ್ಮಿಸಿದ ಈ ಕುತಂತ್ರವನ್ನು ಭಾರತದ ಯುರೋಪಿಯನ್ನರಾಗಿರುವ ಬ್ರಾಹ್ಮಣರು ನಮಗೆ ಬೋಧಿಸುವುದು ಬೇಡ.

ನಮ್ಮಲ್ಲಿ ಕಮ್ಯುನಿಸ್ಟರೊಡನೆ ನಿಕಟಸ್ನೇಹಕ್ಕೆ ಹಾತೊರೆಯುತ್ತಿರುವವರಲ್ಲಿ ಬಹುಪಾಲು ಬ್ರಾಹ್ಮಣರಿದ್ದಾರೆ. (ಇವರಲ್ಲಿ ವೆಂಕಟರಾಮ್ ಮುಖ್ಯರು. ವೈಯಕ್ತಿಕವಾಗಿ ಸಮಾಜವಾದಿ ಪಕ್ಷ ಕೊನೆಗೆ ಮಾರ್ಕ್ಸ್‌ವಾದಿ ಪಕ್ಷದಲ್ಲೇ ವಿಲೀನವಾಗಬೇಕಾದುದು ತರ್ಕಪೂರ್ಣ ಇತ್ಯರ್ಥ ಎಂದೆನ್ನುತ್ತಾರೆ ಇವರು. ಮೈಸೂರು ನಗರದಲ್ಲಿ ಲೋಹಿಯಾರವರ ಪ್ರತಿಪಾದಕರೆಂದು ಹೇಳಿಕೊಳ್ಳುವ ಅನಂತಮೂರ್ತಿ ಈಚೆಗೆ

ಮಾರ್ಕ್ಸ್‌ವಾದಿ ಪಕ್ಷದ ಬಗೆಗೆ ತೋರಿಸುತ್ತಿರುವ ಒಲವು ಮತ್ತು ಮಾರ್ಕ್ಸ್‌ವಾದಿ ವಿದ್ಯಾರ್ಥಿ ಫೆಡರೇಷನ್‌ಗೆ ಅವರು ಸೂಚಿಸುತ್ತಿರುವ ಬೆಂಬಲ ಬಹಳ ಆತಂಕಕಾರಿಯಾದುದು) ಸಮಾಜವಾದಿ ಪಕ್ಷದ ರಾಷ್ಟ್ರೀಯ ಮಟ್ಟದ ಬ್ರಾಹ್ಮಣನಾಯಕರುಗಳೂ ಇನ್ನಿತರ ಮಾರ್ಕ್ಸ್‌ವಾದಿ ಪರ ವ್ಯಕ್ತಿಗಳೂ ತಮ್ಮ ಒಲವಿನ ಮೂಲ ಎಲ್ಲಿಂದ ಬಂದುದೆಂದು ಪರೀಕ್ಷಿಸಿಕೊಳ್ಳಬೇಕು. ಇವರೆಲ್ಲಾ ಕಟ್ಟಾ ಬ್ರಾಹ್ಮಣವಾದಿಗಳೆಂದೂ ಇವರು ಕಣ್ಣು ಮಿಟುಕಿಸಿಕೊಂಡು ವ್ಯೂಹರಚನೆ ಮಾಡಿದ್ದಾರೆಂದೂ ನಾವು ಹೇಳುವುದಿಲ್ಲ. ಆದರೆ ಭಾರತದ ಚಾರಿತ್ರಿಕ ಹಾಗೂ ಸಾಮಾಜಿಕ ಒತ್ತಡಗಳು ಸಮಾಜವಾದಿ ಪಕ್ಷದ ಬ್ರಾಹ್ಮಣ ವರ್ಗವನ್ನು ಅಪ್ರಜ್ಞಾಪೂರ್ವಕವಾಗಿ ಅತ್ತ ತಳ್ಳುತ್ತಿರಬಹುದು.

ಮಾರ್ಕ್ಸ್‌ವಾದಿ ಪಕ್ಷದಲ್ಲಿ ವೈದಿಕನಿಗೆ ಅಥವಾ ಬ್ರಾಹ್ಮಣನಿಗೆ ಅಪ್ಯಾಯಮಾನವಾಗುವ ಇನ್ನೊಂದು ಅಂಶವೆಂದರೆ ಆ ಪಕ್ಷದ ಕೇಂದ್ರೀಕರಣ ನೀತಿ. ಎಂದರೆ ಮಾರ್ಕ್ಸ್‌ವಾದಿಗಳ ವಿಕೇಂದ್ರೀಕರಣ-ವಿರೋಧಿ ನೀತಿಯು ಅಖಂಡ ಭಾರತದ ವೈದಿಕ ಕಲ್ಪನೆಗೆ ಅಂತರ್ಗಾಮಿಯಾದ ಸಂಬಂಧ ಹೊಂದಿದೆ. ಇಂದು ಭಾರತದಲ್ಲಿ ಇಡೀ ಭರತಖಂಡದ ವ್ಯಾಪ್ತಿಯನ್ನು ಹೊಂದಿರುವ ಕೆಲವೇ ವರ್ಗಗಳಲ್ಲಿ ಅತ್ಯಂತ ಬಲಿಷ್ಠ ವರ್ಗದವರೇ ಬ್ರಾಹ್ಮಣ ವರ್ಗ. ಪ್ರಾದೇಶಿಕ ಮತ್ತು ರಾಜ್ಯಮಟ್ಟದಲ್ಲಿ ಏನು ಮಾಡಿದರೂ ಶೂದ್ರರೊಡನೆ ಸೆಣೆಸಲಾರದ ಬ್ರಾಹ್ಮಣರು ಇಂದು ಅಧಿಕಾರವನ್ನು, ಬಂಡವಾಳವನ್ನು ಹೊಂದಬೇಕಾದರೆ ಭಾರತದ ಅಧಿಕಾರ, ಅರ್ಥವ್ಯವಸ್ಥೆ ಮುಂತಾದವನ್ನು ಅಖಂಡ ಭಾರತ ವ್ಯಾಪ್ತಿಯ ಕೇಂದ್ರೀಕರಣಕ್ಕೆ ಒಳಪಡಿಸದೆ ಬೇರೆ ವಿಧಿಯೇ ಇಲ್ಲವಾಗಿದೆ. ಆದ್ದರಿಂದಲೇ ವೈದಿಕರ ಕಾಶೀ ರಾಮೇಶ್ವರ ಪರ್ಯಂತದ ಅಖಂಡ ಭಾರತ ಕಲ್ಪನೆಯೂ ಮಾರ್ಕ್ಸ್‌ವಾದಿ ಬ್ರಾಹ್ಮಣರ ಅಧಿಕಾರ ಮತ್ತು ಬಂಡವಾಳ ಕೇಂದ್ರೀಕರಣದ ಕಲ್ಪನೆಯೂ ಒಂದೇ ಸ್ಫೂರ್ತಿಮೂಲದಿಂದ ಉದ್ಭವಿಸದಂಥವು. ಕೇಂದ್ರದ ಅಧಿಕಾರವರ್ಗವೆಲ್ಲಾ ಭಾರತದ ವೈದಿಕರಿಂದ ತುಂಬಿದೆ. ಹಾಗೂ ಭಾರತದ ಆರ್ಥಿಕ ಚಟುವಟಿಕೆಗಳನ್ನು ವಿಕೇಂದ್ರೀಕರಿಸದೆ ಹಂತಹಂತವಾಗಿ ರಾಷ್ಟ್ರೀಕರಿಸಿ, ರಾಜ್ಯಗಳ ಶೂದ್ರ ಆಡಳಿತದಿಂದ ಹತೋಟಿಯಿಂದ ಬಂಡವಾಳವನ್ನೂ ಅಧಿಕಾರವನ್ನೂ ಸ್ಥಳಾಂತರಿಸಲಾಗುತ್ತಿದೆ. ಕೇಂದ್ರದ ಅಧಿಕಾರ ವರ್ಗಕ್ಕೇ ಒಂದು ಬಗೆಯ ಭತ್ಯ, ರಾಜ್ಯದ ಅಧಿಕಾರಿಗಳಿಗೆ ಒಂದು ಭತ್ಯ; ಕೇಂದ್ರದ ಅಧಿಕಾರ ವರ್ಗಕ್ಕೇ ಒಂದು ಸಂಬಳ, ಬಡ್ತಿ ಸವಲತ್ತುಗಳು; ರಾಜ್ಯದ ಅಧಿಕಾರ ವರ್ಗಕ್ಕೇ ಒಂದು ಸಂಬಳ, ಬಡ್ತಿ, ಸವಲತ್ತುಗಳನ್ನು ಕೊಡಲಾಗುತ್ತಿದೆ. ಕೇಂದ್ರದ ಅಧಿಕಾರ ಸಂಬಂಧಗಳು ರಾಜ್ಯದೊಡನೆ ಸಾಮ್ರಾಜ್ಯಶಾಹಿ ಸ್ವರೂಪವನ್ನು ತಳೆಯಲಾರಂಭಿಸಿವೆ. ಕೇಂದ್ರದ ಅಧಿಕಾರ ವರ್ಗದಲ್ಲಿ ಬಹುಸಂಖ್ಯೆಯಲ್ಲಿರುವ ಬ್ರಾಹ್ಮಣವರ್ಗ ಭಾರತದ ಯುರೋಪಿಯನ್ನರಾಗಿ ರೂಪಾಂತರಗೊಳ್ಳುತ್ತಿದ್ದಾರೆ.

ಲೋಹಿಯಾವಾದ ತನ್ನ ಜಾತಿ ನೀತಿಯಿಂದ, ತನ್ನ ವಿಕೇಂದ್ರೀಕರಣ ನೀತಿಯಿಂದ ಭಾರತದ ಪ್ರಸ್ತುತ ರಾಷ್ಟ್ರೀಯ ರಾಜಕಾರಣದಿಂದ ಅತ್ಯಂತ ಭಿನ್ನವಾಗಿ ಕ್ರಾಂತಿಕಾರಿಯಾಗಿತ್ತು. ಭೂಸುಧಾರಣೆ, ಸಣ್ಣ ಪ್ರಮಾಣದ ಕೈಗಾರಿಕೆ ಮುಂತಾದವು ಅದರ ವಿಕೇಂದ್ರೀಕರಣ ನೀತಿಯ ಅಭಿನ್ನ ಅಂಗವಾಗಿತ್ತು.

ಭೂಸುಧಾರಣೆಗೆ ಬೆಂಬಲಿಸಿದ್ದಾರೆಂದು ಕಮ್ಯುನಿಸ್ಟರನ್ನು ಸಮಾಜವಾದಿಗಳು ಪ್ರಶಂಸಿಸಿದರು. ಆದರೆ ಕಮ್ಯುನಿಸ್ಟರು ಭೂಸುಧಾರಣೆಯ ಸೈದ್ಧಾಂತಿಕ ಪರಿಣಾಮಗಳನ್ನು ಆಲೋಚಿಸಿದ್ದಾರೆಯೇ ಮತ್ತು ತಮ್ಮ ಸಿದ್ಧಾಂತವನ್ನು ಯಾವ ರೀತಿ ಇದಕ್ಕಾಗಿ ಮಾರ್ಪಡಿಸದ್ದಾರೆ ಎಂದು ಯಾರೂ ತಿಳಿಯಲಿಲ್ಲ. ಜಾಗತಿಕ ಕಲ್ಯಾಣಕ್ಕಾಗಿ ಅನೇಕ ವೇಳೆ ದೇಶದ್ರೋಹ, ಸುಳ್ಳು, ವಂಚನೆಗಳನ್ನೂ ಕೊಲೆಗಳನ್ನೂ ಮಾಡಿರುವ ಚಾರಿತ್ರ್ಯವಿರುವ ಪಕ್ಷವೊಂದು ಭೂಸುಧಾರಣೆಯನ್ನು ಬೆಂಬಲಿಸಿದರೆ ಅದನ್ನು ಪರ್ಯಾಲೋಚನೆ ಮಾಡದೆ ಒಪ್ಪಿರುವುದು ಸರಿಯೆ? ಭೂಸುಧಾರಣೆಯಲ್ಲಿ ಪ್ಲಾಂಟೇಷನ್ ವಲಯಕ್ಕೆ ವಿನಾಯಿತಿ ಕೊಟ್ಟಾಗ ಆ ಬಗ್ಗೆ ಕಮ್ಯುನಿಸ್ಟರು ಚಕಾರ ಎತ್ತದಿದ್ದುದು ಏಕೆ? ಸಣ್ಣ ಪ್ರಮಾಣದ ಯಂತ್ರಗಳ ಬಗ್ಗೆ ಯಾವ ಬೆಂಬಲವನ್ನೂ ಕಮ್ಯುನಿಸ್ಟರು ಏಕೆ ಸೂಚಿಸಿಲ್ಲ? ಭೂಸುಧಾರಣೆಯನ್ನು ಸೈದ್ಧಾಂತಿಕವಾಗಿ ಒಪ್ಪಿದರೆ ಉದ್ಭವಿಸುವ ಅನಿವಾರ್ಯ ಇತ್ಯರ್ಥಗಳಲ್ಲವೇ ಇವೆಲ್ಲಾ? ಕಮ್ಯೂನಿಸ್ಟರ ನಿಲುವು ಈ ರೀತಿ ಇರುವಾಗ ಅವರ ಸದ್ಯದ ಧ್ಯೇಯ ಧೋರಣೆಗಳೆಲ್ಲಾ ಅಧಿಕಾರಕ್ಕೆ ಬರಲು ಹೇಳುವ ಚಾಣಾಕ್ಷ ರಾಜಕಾರಣ ಮಾತ್ರವಾಗಿರಲು ಸಾಧ್ಯವಲ್ಲವೆ?

ಇದೆಲ್ಲವನ್ನೂ ಭಾರತದ ಸಮಾಜವಾದಿಗಳು ಯಾವುದೇ ಜಾತಿಗೆ ಸಂಬಂಧಿಸಿದವರಾಗಿರಲಿ ಕೂಲಂಕಷವಾಗಿ ಸಮಚಿತ್ತದಿಂದ ಆಲೋಚಿಸಬೇಕು. ಅದರಲ್ಲೂ ಸಮಾಜವಾದಿ ಪಕ್ಷದಲ್ಲಿನ ಬ್ರಾಹ್ಮಣವರ್ಗ ಆಳವಾಗಿ ವಿವೇಚಿಸಬೇಕೆಂದು ಕೇಳುತ್ತೇವೆ.

–ಲೋಹಿಯಾ ವಿಚಾರ ಮಂಚ, ಕರ್ನಾಟಕ

■

“ಪಾಂಡಿತ್ಯ ಎಂಬುದು ಸಂಪ್ರದಾಯಶೀಲವೂ ಪುನರವತರಣೀಯವೂ ಆಗಿದ್ದು ಸಾಮ್ರಾಜ್ಯಶಾಹೀಯನ ಪಾಂಡಿತ್ಯವನ್ನು ನೆಲೆಯೂರಿಸಿಕೊಳ್ಳುವ ದೇಶೀಯನ ಪ್ರಯತ್ನ ಮಾನವ ಜನಾಂಗದ ಒಂದು ದೊಡ್ಡ ದುರಂತವಾಗಿದೆ”

–ಲೋಹಿಯಾ (‘ರಾಜಕೀಯದ ಮಧ್ಯೆ ಬಿಡುವು’)

ಲೋಹಿಯಾ ಅವರ ಮಹಿಳಾ ಚಿಂತನೆ

■ ಡಾ. ಎಂ.ಎಸ್. ಆಶಾದೇವಿ

ಈ ಶೀರ್ಷಿಕೆಯೇ ವಿಲಕ್ಷಣ ಮತ್ತು ಕುತೂಹಲಕಾರಿ. ನಿರ್ದಿಷ್ಟವಾಗಿ ಮಹಿಳೆಯರನ್ನು ಉದ್ದೇಶಿಸಿದ ಲೋಹಿಯಾ ಬರವಣಿಗೆ ಅತ್ಯಲ್ಪ ಎನ್ನುವುದು ನಿಜ. ಆದರೆ ಮಹಿಳೆಯರನ್ನು ಕುರಿತ ಲೋಹಿಯಾ ನಿಲುವುಗಳನ್ನು ಗ್ರಹಿಸುವುದಕ್ಕಾಗಲೀ, ಚರ್ಚಿಸುವುದಕ್ಕಾಗಲಿ ಇದರಿಂದ ತೊಂದರೆಯಾಗುವುದಿಲ್ಲ ಎನ್ನುವುದೂ ಅಷ್ಟೇ ನಿಜ. ಅವರ ದೃಷ್ಟಿಕೋನ ಮತ್ತು ವಿಚಾರಗಳಲ್ಲಿ ಮಹಿಳೆಯ ಪ್ರಶ್ನೆ ಅಖಂಡವಾಗಿ ಬೆರೆತು ಹೋಗಿದೆ. ಇದು ತುಂಬ ಮಹತ್ವದ ಸಂಗತಿಯಾಗೇ ಕಾಣಿಸುತ್ತದೆ. ಈ ಮಾತನ್ನು ಜಾಗತಿಕ ಮಟ್ಟದಲ್ಲಿಯೂ ಕೆಲವೇ ಕೆಲವರ ಮಟ್ಟಿಗೆ ಮಾತ್ರ ಹೇಳಲು ಸಾಧ್ಯ. ಲೋಹಿಯಾ ಅವರ ಒಟ್ಟೂ ಚಿಂತನೆಯ ಮೂಲ ಸಂಗತಿ ಅಥವಾ ತಿರುಳು ಏನೆಂದು ಕೇಳಿದರೆ, 'ಮಾನವ ಘನತೆಯ ಪ್ರತಿಪಾದನೆ' ಎನ್ನುವ ಉತ್ತರವೇ ಬಹುಸಂಖ್ಯಾತರಿಂದ ಬರುತ್ತದೆ ಎನ್ನುವುದರ ಬಗ್ಗೆ ನನಗಂತೂ ಅನುಮಾನವಿಲ್ಲ ಮತ್ತು ಈ 'ಮಾನವ ಘನತೆ'ಯ ಪ್ರತಿಪಾದನೆಯನ್ನು ಲೋಹಿಯಾ ಹಠವಾದಿ ಯೋಗಿಯ ಪರಿಣಿತ ಕಸರತ್ತಿನ ನೆಲೆಯಲ್ಲಿ ಮಾಡುವುದಿಲ್ಲ ಎನ್ನುವುದೂ ಅಷ್ಟೇ ಮಹತ್ವದ ಸಂಗತಿಯಾಗಿ ಕಾಣಿಸುತ್ತದೆ. ಜಿನುಗುವ ಮಾನವ ಪ್ರೀತಿಯು ಲೋಹಿಯಾ ಅವರ ಬರವಣಿಗೆ ಮತ್ತು ಚಿಂತನೆಗಳನ್ನು ವಿಚಾರ, ತರ್ಕ ಮತ್ತು ತಾತ್ವಿಕತೆಗಳ ಜಡತ್ವ ಮತ್ತು ಶುಷ್ಕತೆಗಳಿಂದ ಬಿಡುಗಡೆಗೊಳಿಸಿ ಸದಾ ತೇವವಾಗಿರಿಸುತ್ತದೆ. ಚೂರು ಭಾವುಕವಾಗಿ ಕಂಡರೂ ಈ ಮಾತುಗಳನ್ನು ಹೇಳಲು ನನಗೆ ಸಂಕೋಚವಿಲ್ಲ. ಲೋಹಿಯಾ ಬಗೆಗಲ್ಲದೆ ಇನ್ನಾರ ಬಗೆಗೆ ಭಾವುಕರಾಗುವುದು?

ಮಹಿಳೆಯರನ್ನು ಕುರಿತ ಲೋಹಿಯಾ ನಿಲುವುಗಳನ್ನು ಮುಖ್ಯವಾಗಿ ಎರಡು ಮೂಲಗಳಿಂದ ಸಂಗ್ರಹಿಸಿ ಚರ್ಚಿಸಬಹುದು.

ಒಂದು ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಕುರಿತ ಅವರ ಚಿಂತನೆಗಳಿಂದ. ಎರಡು, ದ್ರೌಪದಿಯನ್ನು ಕುರಿತಂತೆ ಅವರ ನಿಲುವುಗಳನ್ನು ಚರ್ಚಿಸುವುದರಿಂದ. 'ಸಮಾನತೆಯ ಅರ್ಥ' ಎನ್ನುವ ಲೋಹಿಯಾ ಲೇಖನ ಈ ದೃಷ್ಟಿಯಿಂದ ತುಂಬ ಮುಖ್ಯವಾದದ್ದು. ಸಮಾನತೆಯನ್ನು ಕುರಿತ ಹೋರಾಟದ ಸ್ವರೂಪವನ್ನೂ, ಸಮಾನತೆಯನ್ನೂ ಗುರುತಿಸಬಹುದಾದ ಮೂಲಾಂಶಗಳಿಂದ ಲೋಹಿಯಾ ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಎಲ್ಲ ದಮನಿತರನ್ನು ಈ ಲೇಖನ ಸಮಾನವಾಗಿ ಉದ್ದೇಶಿಸಿದೆ. ದಮನಿತರೆಂದು ಗುರುತಿಸುವವರನ್ನು, ಒಪ್ಪಿರುವವರನ್ನು ಮಾತ್ರವಲ್ಲ, ದಮನಿತರೆಂದು ಗುರುತಿಸಿಯೇ ಇಲ್ಲದವರನ್ನೂ ಗ್ರಹೀತ ಹಿಡಿದು ಇಲ್ಲಿ ಲೋಹಿಯಾ ಚರ್ಚಿಸುತ್ತಾರೆ. ಇದನ್ನು ಅವರು ಮಾಡುವುದು ಸಮಾನತೆಯ ಲಕ್ಷಣಗಳನ್ನು ಗುರುತಿಸುವುದರ ಮೂಲಕ.

ಲೋಹಿಯಾ ಗುರುತಿಸುವ ನಾಲ್ಕು ಅಂಶಗಳೆಂದರೆ (ಅವುಗಳನ್ನು ಪ್ರಕ್ರಿಯೆಯ ಅಂಶಗಳಾಗಿಯೂ ನೋಡಲು ಸಾಧ್ಯ, ಸಮಾನತೆಯ ಮಾನದಂಡಗಳಾಗಿಯೂ ನೋಡಲು ಸಾಧ್ಯ.) ೧. ಹೊರ ಆಯಾಮ, ೨. ಒಳ ಆಯಾಮ, ೩. ಲೌಕಿಕ ಮತ್ತು ೪. ಆಧ್ಯಾತ್ಮಿಕ. ಸಮಾನತೆಯ ಹೊರ ಆಯಾಮ ಮತ್ತು ಲೌಕಿಕ ನೆಲೆಗಳಿಗೆ ಸಿಕ್ಕಿರುವ ಪ್ರಾಮುಖ್ಯತೆಯು ಒಳ ಆಯಾಮ ಮತ್ತು ಆಧ್ಯಾತ್ಮಿಕ ನೆಲೆಗೆ ಸಿಕ್ಕದಿರುವುದೇ ಸಮಾನತೆಯ ಹೋರಾಟ ಎದುರಿಸುತ್ತಿರುವ ಮುಖ್ಯ ತೊಡಕು ಎಂದು ಲೋಹಿಯಾ ಗುರುತಿಸುತ್ತಾರೆ. ಈ ನಾಲ್ಕು ಅಂಶಗಳು ಸಾಧಿತವಾದಾಗ ಮಾತ್ರ ಅದನ್ನು ಸಮಾನತೆ ಎಂದು ನಿಜವಾದ ಅರ್ಥದಲ್ಲಿ ಒಪ್ಪಿಕೊಳ್ಳಬಹುದು ಎನ್ನುತ್ತಾರೆ. ಈ ಘಟ್ಟದಲ್ಲಿ 'ಭಾರತೀಯ ಭಾಷೆ'ಗೆ ಮಾತ್ರ ವಿಶಿಷ್ಟವಾದ ಪದ ಪರಿಕಲ್ಪನೆಯೊಂದಿದೆ ಎಂದು ಹೇಳುತ್ತಾ, 'ಸಮತ್ವ' ಎಂದು ಅದನ್ನು ಗುರುತಿಸುತ್ತಾರೆ. ಭಾರತೀಯ ಭಾಷೆಗಳಿಗಲ್ಲದೆ ಇತರ ಭಾಷೆಗಳಲ್ಲಿ ಬಹುಶಃ ಸಮತ್ವ ಎನ್ನವ ಪದವು ಒಳಗೊಳ್ಳುವ ಅರ್ಥ ಸಾಧ್ಯತೆಗಳು ಇಲ್ಲವೇನೋ ಎಂದೂ ಹೇಳುವಾಗ ಬಹುಶಃ ಲೋಹಿಯಾ ಅವರ ಮನಸ್ಸಿನಲ್ಲಿ ಸಮತ್ವ ಪದವು ಒಳಗೊಳ್ಳುತ್ತಿರುವ ಆಧ್ಯಾತ್ಮಿಕ ಮತ್ತು ಒಳ ಆಯಾಮಗಳಿವೆ ಎಂದು ಕಾಣುತ್ತದೆ.

ಇದನ್ನು ಮಹಿಳೆಯರ ವಿಷಯಕ್ಕೆ ನಿರ್ದಿಷ್ಟವಾಗಿ ಅನ್ವಯಿಸಿಕೊಂಡು ಹೇಳುವುದಾದರೆ, ಈ ಎರಡೂ ಅಂಶಗಳು ಹೆಣ್ಣಿನ ಬದಲಾಗಬೇಕಾದ ಸ್ವಗ್ರಹಿಕೆಗಳನ್ನು ಕುರಿತಾಗಿವೆ ಎನಿಸುತ್ತದೆ. ಸಮಾನತೆಯ ಪ್ರಕ್ರಿಯೆಯು ಹೊರ ಆಯಾಮದಿಂದ ಅದು ಕೊಡಬಹುದಾದ ಸಾರಸ್ಮಿಕ ಬೆಂಬಲದಿಂದ ಮಾತ್ರವೇ ಸಾಧಿತವಾಗುವುದಿಲ್ಲ. ಸಾಧಿತವಾದ ಹಾಗೆ ಕಂಡರೂ ಅದು ತಾತ್ಕಾಲಿಕವಾದದ್ದು. ಮಾತ್ರವಲ್ಲ, ಭ್ರಮಾತ್ಮಕವಾದದ್ದೂ ಹೌದು ಎನ್ನುವ ಲೋಹಿಯಾ ಅವರ ಮಾತು ಮಹಿಳಾ ಹೋರಾಟದ ಮಟ್ಟಿಗಂತೂ ನಿಜವೇ ಆಗಿದೆ. ಪಲ್ಲಟವೊಂದು ಶಾಶ್ವತವಾಗುವ ದಾರಿಯೆಂದರೆ ಅದು ಒಳ ಆಯಾಮವನ್ನು ಮತ್ತು ಆಧ್ಯಾತ್ಮಿಕ ನೆಲೆಯೊಂದನ್ನು

ಕಂಡುಕೊಂಡಾಗ ಮಾತ್ರ ಎನ್ನುವುದನ್ನು ಇವತ್ತಿನ ಮಹಿಳಾ ಹೋರಾಟ ಮನಗಂಡಿದೆ. ಈ ತನಕ ಬದಲಾಗಬೇಕಾದ 'ಲೋಕಗ್ರಹಿಕೆ'ಯ ಕಡೆಗೆ ಗಮನ ಹರಿಸಿದ್ದ ಹೋರಾಟಗಳು, ಈ ದಿನಗಳಲ್ಲಿ ಬದಲಾಗಬೇಕಾದ ಸ್ವಗ್ರಹಿಕೆಯ ಕಡೆಗೆ ಚಲಿಸುತ್ತಿವೆ ಎನ್ನುವುದನ್ನು ಗಮನಿಸಿದಾಗ ಲೋಹಿಯಾ ಅವರ ಮಹಿಳೆಯರು ಮತ್ತು ದಲಿತಪರವಾದ ಕಾಳಜಿ, ದೂರದರ್ಶಿತ್ವ ಎಂದು ಕರೆಯಬಹುದಾದ ಅಸಾಧಾರಣ ಮನೋಚೈತನ್ಯಗಳ ಅರಿವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ಪಲ್ಲಟದ ಪ್ರಕ್ರಿಯೆಯ ಸಂಕಟ ಮತ್ತು ಉಲ್ಲಾಸ ಎರಡರ ಬಗೆಗೂ ಲೋಹಿಯಾ ಅವರಿಗೆ ಸ್ಪಷ್ಟವಾದ ತಿಳುವಳಿಕೆಯಿದೆ. 'ಅರಿವಿನ ಹಿಂಸೆ'ಯಿಲ್ಲದೆ ಇದು ಸಾಧಿತವಾಗದು ಎನ್ನುವುದನ್ನೂ ಲೋಹಿಯಾ ಹೇಳುತ್ತಾರೆ.

ಈ ಹಿನ್ನೆಲೆಯಲ್ಲಿ 'ಸೌಂದರ್ಯ ಮತ್ತು ಮೈಬಣ್ಣ' ಲೇಖನವು ತುಂಬ ಮುಖ್ಯವಾಗುತ್ತದೆ. ಈ ಲೇಖನದ ಮುಖ್ಯ ಸಾಂಸ್ಕೃತಿಕ ಪ್ರಮೇಯಗಳನ್ನು ಈಗಾಗಲೇ ಸಾಕಷ್ಟು ಚರ್ಚಿಸಲಾಗಿದೆ. ಸೌಂದರ್ಯ ಮತ್ತು ಮೈಬಣ್ಣದಂತಹ ಶುದ್ಧ ಸಾಂಸ್ಕೃತಿಕ ಮತ್ತು ರಾಜಕೀಯ ಪ್ರಶ್ನೆಯೊಂದು ಲೋಹಿಯಾ ಅವರಲ್ಲಿ ಹೆಣ್ಣಿನ ಅಸ್ಮಿತೆಯ ಚರ್ಚೆಯಾಗಿಯೂ ವಿಸ್ತೃತಗೊಂಡಿದೆ. ದ್ರೌಪದಿಯ ಸೌಂದರ್ಯದ ಮೂಲವನ್ನು ಆತ್ಮಸೌಂದರ್ಯದಲ್ಲಿ ಸ್ಥಾಪಿಸುವ ಲೋಹಿಯಾ, ಈ ಆತ್ಮ ಸೌಂದರ್ಯದ ಕೇಂದ್ರವಾಗಿ ಆತ್ಮಘನತೆಯನ್ನು ಗುರುತಿಸುತ್ತಾರೆ.

ದ್ರೌಪದಿಯ ವ್ಯಕ್ತಿತ್ವವನ್ನು ಇಲ್ಲಿಯ ತನಕ ಹಲವು ಸ್ತ್ರೀ ಮಾದರಿಗಳಲ್ಲಿ ನೋಡಲಾಗಿದೆ. ಹೊರಗೆ ಗಟ್ಟಿ ವ್ಯಕ್ತಿತ್ವದವಳಾಗಿ ಕಾಣಿಸುತ್ತಲೇ ಒಳಗೇ ಅಪರಿಹಾರ್ಯವಾದ ಅಸಹಾಯಕತೆಯಲ್ಲಿ ಒದ್ದಾಡುತ್ತಾ, ಸದಾ ಪುರುಷ ಶಕ್ತಿಯ ಅವಲಂಬನಕ್ಕಾಗಿ ಹೊತೊರೆಯುವ ಮಾದರಿ ಒಂದಾದರೆ, ಬದುಕಿನ ಸವಾಲುಗಳನ್ನೆಲ್ಲ ಗೆಲ್ಲಲು ಅವಳು ಬಳಸುವ ಒಳದಾರಿಗಳು ಮತ್ತು ಆ ಒಳದಾರಿಗಳನ್ನು ಲೋಕದ ಕಣ್ಣಿಗೆ ಅಸಹಾಯಕತೆಯ ರೂಪಾಂತರಗಳಲ್ಲಿ ಪ್ರಸ್ತುತಪಡಿಸುವ ಮಾದರಿ ಇನ್ನೊಂದು. ಈ ಎರಡೂ ನಿರ್ವಚನಗಳು ಪುರುಷಪ್ರಧಾನ ವ್ಯವಸ್ಥೆಯನ್ನು ಪ್ರತಿವಾದಿಯಾಗಿ ಇಟ್ಟುಕೊಂಡು ಹೊರಟಂತಹವು.

ಆದರೆ ಲೋಹಿಯಾ ಹಿಡಿಯುವುದು ತೀರ ಭಿನ್ನವಾದ ದಾರಿಯನ್ನು. ಪುರುಷ ಪ್ರಧಾನ ವ್ಯವಸ್ಥೆಯು ಇಲ್ಲಿ ಪ್ರತಿವಾದಿಯಾಗಿ ಕಾಣಿಸುವುದಿಲ್ಲ. ಅದರೊಂದಿಗೆ ಅನುಸಂಧಾನ ನಡೆಸುವ ಪ್ರಯತ್ನವೂ ಇಲ್ಲಿಲ್ಲ. ಬದಲಿಗೆ ತನ್ನ ಆತ್ಮಘನತೆಯಲ್ಲಿ ಶಂಕೆಯಿಲ್ಲದ ನಂಬಿಕೆಯಿರುವ ಹೆಣ್ಣೊಬ್ಬಳ ಬದುಕು ಮತ್ತು ವ್ಯಕ್ತಿತ್ವಗಳ ಸಹಜಾತಿಸಹಜ ಎನ್ನುವ ಅಸಾಧಾರಣ ಆಯಾಮವೊಂದು ಇಲ್ಲಿ ಸೃಷ್ಟಿಯಾಗಿದೆ. ಈ ದ್ರೌಪದಿ, ಲೋಹಿಯಾ ಪ್ರತಿಪಾದಿಸುವ 'ಸಮತ್ವ'ದ ಅಂಶಗಳನ್ನೆಲ್ಲ ಹೊಂದಿರುವ ಹಾಗೆ ಕಾಣಿಸುತ್ತಾಳೆ. ಅವರು ಹೇಳುವ ಒಳ ಆಯಾಮ ಮತ್ತು ಆಧ್ಯಾತ್ಮಿಕ ನೆಲೆ, ಎರಡೂ

ಅವಳಲ್ಲಿ ದಟ್ಟವಾಗಿವೆ. ಎಂತಲೇ ತನ್ನ ವ್ಯಕ್ತಿತ್ವಕ್ಕೆ ಅಧಿಕೃತತೆಯನ್ನು, ಮನ್ನಣೆಯನ್ನು ಅವಳು ಆಯಾಚಿತವಾಗಿ ಎಂಬಂತೆ ಪಡೆದುಕೊಳ್ಳುತ್ತಾಳೆ. ಕೃಷ್ಣ, ದ್ರೌಪದಿಗೆ ಬೇಕಾದ ಹೊರ ಮತ್ತು ಲೌಕಿಕ ನೆಲೆಗೆ ಬೆಂಬಲವಾಗಿ ನಿಲ್ಲುತ್ತಾನೆ, ನಿಜ. ಆದರೆ ಅವಳ ಒಳ ಮತ್ತು ಆಧ್ಯಾತ್ಮಿಕ ನೆಲೆಗಳು ಸಂಪೂರ್ಣವಾಗಿ ದ್ರೌಪದಿಯ ಆಸೆ ಮತ್ತು ಪ್ರಯತ್ನದಿಂದಲೇ ರೂಪುಗೊಂಡವು. ಲೋಹಿಯಾ ಅವರ ಒತ್ತು ಸಹಜವಾಗಿಯೇ ಈ ಕಡೆಗಿದೆ. ನನಗೆ ಇಲ್ಲಿ ಮುಖ್ಯ ಅನ್ನಿಸುತ್ತಿರುವುದು, ಲೋಹಿಯಾ, ದ್ರೌಪದಿಯನ್ನು ಈ ತನಕದ 'ಕಾಲಬದ್ಧತೆ' ಮತ್ತು 'ಅಪವಾದ' ವ್ಯಕ್ತಿತ್ವಗಳಿಂದ ಬಿಡುಗಡೆಗೊಳಿಸಿ, ಎಲ್ಲ ವರ್ಗದ, ಎಲ್ಲ ಕಾಲದ ಮಹಿಳೆಯರ ಅಪೇಕ್ಷಿತ ವ್ಯಕ್ತಿತ್ವವಾಗಿ ರೂಪಿಸಿರುವುದು.

ಇನ್ನೊಂದು ಲೇಖನದಲ್ಲಿ ಭಾಷಣವೊಂದನ್ನು ಮಾಡುತ್ತ, ಲೋಹಿಯಾ, ಎದುರಿಗಿದ್ದ ಪಾಶ್ಚಾತ್ಯ ಮಹಿಳೆಯರನ್ನು ಉದ್ದೇಶಿಸಿ, ಪಾಶ್ಚಾತ್ಯ ಮಹಿಳೆಯರೆಲ್ಲ ರಾಣಿಯರಿದ್ದ ಹಾಗೆ ಎಂದು ಹೇಳುತ್ತಾರೆ. ಈ ತನಕ ಅವರು ಗಮನಿಸದಿದ್ದ ಭಾರತೀಯ ಮಹಿಳೆಯರೂ ಆ ಸಭೆಯಲ್ಲಿದ್ದರು. ಪ್ರತ್ಯುತ್ಪನ್ನಮತಿಯಾದ ಲೋಹಿಯಾ, ತಕ್ಷಣವೇ ಭಾರತೀಯ ಮಹಿಳೆಯರು ದೇವಿಯರಿದ್ದ ಹಾಗೆ ಎನ್ನುತ್ತಾರೆ. ಲೋಹಿಯಾಗೆ ಹೆಣ್ಣನ್ನು ರಾಣಿ ಮತ್ತು ದೇವಿಯಾಗಿ ನೋಡಲು ಸಾಧ್ಯವಿತ್ತೆಂದೇ ನಾನು ತಿಳಿದಿದ್ದೇನೆ.

■

"ಪುರುಷನು ಪರಸ್ಪರ ಎರಡು ವಿರುದ್ಧ ಕಾಮನೆಗಳಿಂದ ತುಯ್ಯಲ್ಪಟ್ಟಿದ್ದಾನೆ. ಅವನಿಗೆ ಆತನ ಹೆಣ್ಣು ತೇಜೋಮಯಿಯಾಗಿ, ಬುದ್ಧಿವಂತೆಯಾಗಿ, ಸುಂದರಿಯಾಗಿ, ಒಟ್ಟಿನಲ್ಲಿ ಚೈತನ್ಯಮಯಿಯಾಗಿ ಇರಬೇಕೆಂದಾಸೆ. ಇದರೊಡನೆಯೇ ಆಕೆ ಸಂಪೂರ್ಣ ತನ್ನವಳೇ ಆಗಬೇಕೆಂಬ ಆಸೆ. ಆದರೆ ಆಕೆಯಾಗಲೀ, ಆತನೇ ಆಗಲಿ, ಒಂದು ಮರವೋ ಕಲ್ಲೋ ಆದಂತಹ ಜಡಮನಸ್ಥಿತಿಗೆ ದೂಡದೆ ಸಂಪೂರ್ಣ ಇನ್ನೊಬ್ಬರವಳಾಗಲು ಸಾಧ್ಯವೇ ಇಲ್ಲ. ಮನುಷ್ಯ ಆಕೆ ಚೈತನ್ಯಪೂರ್ಣಳು, ತೇಜೋಮಯಿಯೂ ಎಂದರೆ, ಸ್ವತಂತ್ರಳೂ ಆಗಬೇಕೆಂದು ಬಯಸುತ್ತಾ ಅದೇ ಸಮಯದಲ್ಲಿ ಅದಕ್ಕೆ ಸಂಪೂರ್ಣ ತದ್ವಿರುದ್ಧವಾಗಿ ಆಕೆ ತನ್ನವಳು, ಅಸ್ವತಂತ್ರಳು, ಶರಣಾಗತಳೂ ಆಗಬೇಕೆಂದು ಬಯಸುತ್ತಾನೆ."

–ಲೋಹಿಯಾ (ಮಾರ್ಕ್ಸ್, ಗಾಂಧಿ, ಸೋಶೀಯಲಿಸಂ)

ಕನ್ನಡ ಸಾಹಿತ್ಯ-ಸಂಸ್ಕೃತಿ: ಲೋಹಿಯಾ ಪ್ರಶ್ನೆಗಳು

■ ಡಾ. ರಾಜೇಂದ್ರ ಚೆನ್ನಿ

ಕನ್ನಡ ಸಾಹಿತ್ಯ ವಿಮರ್ಶೆಯ ಮೇಲೆ ಲೋಹಿಯಾರ ಚಿಂತನೆಯ ಪ್ರಭಾವವನ್ನು ಎರಡು ನೆಲೆಗಳಲ್ಲಿ ನೋಡಬಹುದೆಂದು ಕಾಣುತ್ತದೆ. ಒಂದು ಚರಿತ್ರೆಯಲ್ಲಾಗುವ ಅನಿವಾರ್ಯ ಬದಲಾವಣೆಗಳಿಂದಾಗಿ ಸಮಾಜದಲ್ಲಿರುವಂಥ ಬೇರೆಬೇರೆ ಸಮುದಾಯಗಳು ಬೇರೆ ಬೇರೆ ರೀತಿಯ ಅನುಭವಗಳಿಗೆ ಎದುರಾಗುತ್ತವೆ. ಮುಖ್ಯವಾಗಿ ಚರಿತ್ರೆಯಲ್ಲಿ ಬಹುದೊಡ್ಡ ಶಕ್ತಿಗಳಿಂದ ನಡೆಯುವಂಥ ಪಲ್ಲಟಗಳು ಇದಕ್ಕೆ ಕಾರಣ. ಆ ಬದಲಾವಣೆಗಳಿಂದ ಸಮುದಾಯಗಳು ಹೊಸ ಅನುಭವಗಳನ್ನು ಎದುರಿಸುತ್ತವೆ ಅಥವಾ ಮೊದಲಿನಿಂದಲೂ ಇದ್ದ ತಮ್ಮ ಅನುಭವಗಳಿಗೆ ಹೊಸ ಅರ್ಥಗಳನ್ನು ಕಟ್ಟಿಕೊಳ್ಳುತ್ತವೆ. ಆದರೆ, ಸಾಹಿತ್ಯ ವಿಮರ್ಶೆಯ ಸಂಸ್ಥೆಯು ಈ ಅನುಭವಗಳು ಅಭಿವ್ಯಕ್ತವಾಗದಂತೆ ತನ್ನ ನಿರ್ದೇಶನಗಳನ್ನು ಕೊಡುತ್ತಾ ಇರುತ್ತವೆ.

ಒಂದು ಸಂಸ್ಕೃತಿ ಲೋಕವನ್ನು ಗಮನಿಸಿದರೆ ಈ ಸಮುದಾಯಗಳ ಹೊಸ ಅನುಭವಗಳ ಜಗತ್ತು ಭಾಷೆಯ ಮೂಲಕ, ಸಾಹಿತ್ಯ ಪ್ರಕಾರಗಳ ಮೂಲಕ ಅಭಿವ್ಯಕ್ತ ಮಾಡಬೇಕೆನ್ನುವ ಪ್ರಯತ್ನ ನಡೆಯುತ್ತಾ ಇರುವಾಗಲೇ ವಿಮರ್ಶೆ ಎನ್ನುವ ಸಂಸ್ಥೆ ಆ ಅನುಭವಗಳಿಗೆ ಆ ಸಾಹಿತ್ಯ ಪ್ರಕಾರಗಳು ಹಾಗೂ ಭಾಷೆ ತೆರೆದುಕೊಳ್ಳದಂತೆ ನಿರ್ದೇಶನ ಕೊಡುತ್ತಾ ಇರುತ್ತದೆ. ಆ ರೀತಿಯ ಯಜಮಾನಿಕೆಯ ಕೆಲಸವನ್ನು ಸಾಹಿತ್ಯ ವಿಮರ್ಶೆ ಸೂಕ್ಷ್ಮವಾಗಿ ಮಾಡುತ್ತಿರುತ್ತದೆ.

ಇದು ಭಾರತದ ಸಂದರ್ಭದಲ್ಲಿ ಅತ್ಯಂತ ನಿಜ ಎನ್ನಬಹುದು. ಕೇವಲ ಯಾವುದೋ ಒಂದೆರಡು ದಶಕಗಳ ಬಗ್ಗೆ ನಾನು ಈ ಮಾತನ್ನು ಹೇಳುತ್ತಿಲ್ಲ. ಒಟ್ಟಾರೆಯಾಗಿ ನಾವು ನಮ್ಮ ಚರಿತ್ರೆಯಲ್ಲೇ ನೋಡುತ್ತಾ

ಬಂದಿರುವ ಸತ್ಯ ಅದು. ಒಂದು ಸಂದರ್ಭದಲ್ಲಿ ನಮ್ಮ ಸಾಹಿತ್ಯ ವಿಮರ್ಶೆ ಇಂಥದ್ದೇ ಕೆಲಸವನ್ನು ಮಾಡ್ತಾ ಇದ್ದಾಗ, ಲೋಹಿಯಾ ಚಿಂತನೆ ಸಾಹಿತ್ಯ ವಿಮರ್ಶೆ ಎನ್ನುವ ಸಂಸ್ಥೆಯ ಮೂಲದಲ್ಲೇ ಇರುವಂಥ, ಅದಕ್ಕೆ ಆಧಾರವೇ ಆದಂಥ ಹಲವಾರು ವೈಚಾರಿಕ ಆಕೃತಿಗಳನ್ನು ಭಗ್ನಗೊಳಿಸಿತು. ಲೋಹಿಯಾವಾದ ನಮಗೆ ಅತ್ಯಂತ ಮುಖ್ಯವಾದ ಒಂದು ಕಾಲಘಟ್ಟದಲ್ಲಿ ಮುನ್ನೆಲೆಗೆ ಬಂತು ಎನ್ನುವುದು ನಾನು ಮೊದಲನೆಯದಾಗಿ ಹೇಳಬೇಕಾದ ಮಾತು. ಲೋಹಿಯಾ ಚಿಂತನೆಯಿಂದ ವಿಮರ್ಶೆಯ ಮೇಲೆ ಆಗಿರುವ ಪ್ರಭಾವ ಏನೆಂದರೆ ಒಂದು ಕಾಲಘಟ್ಟದಲ್ಲಿ, ಅಂದರೆ, ನವ್ಯ ವಿಮರ್ಶೆಯ ಕಾಲ ಎಂದು ಕರೆಯುವ ಕಾಲಘಟ್ಟದಲ್ಲಿ, ಸಾಹಿತ್ಯ ವಿಮರ್ಶೆ ಯಾವ ತಾತ್ವಿಕ ಆಧಾರಗಳನ್ನ, ವೈಚಾರಿಕ ಆಧಾರಗಳನ್ನ ಇಟ್ಟುಕೊಂಡಿತ್ತೋ, ಯಾವ ಬಗೆಯ ಸಾಂಸ್ಕೃತಿಕ ರಾಜಕೀಯ ಮಾಡ್ತಾ ಇತ್ತೋ ಮತ್ತು ಆ ಸಾಂಸ್ಕೃತಿಕ ರಾಜಕೀಯದ ಮೂಲಕ ಹಲವಾರು ಸಮುದಾಯಗಳು ತಮ್ಮ ಮೂಕ ಅನುಭವಗಳನ್ನು ವ್ಯಕ್ತ ಮಾಡದ ಹಾಗೆ ಮಾಡ್ತೋ, ಆ ಆಕೃತಿಗಳನ್ನ ಭಗ್ನ ಮಾಡೋದರಲ್ಲಿ ಈ ಲೋಹಿಯಾವಾದ ಬಹಳ ಸಹಾಯ ಮಾಡಿತು ಎನ್ನುವುದು ನಾನು ಹೇಳಬೇಕಾದ ಮುಖ್ಯ ಸಂಗತಿ.

ಇನ್ನೊಂದು ಸಂಗತಿಯನ್ನು ನಾನು ಇಲ್ಲಿ ಹೇಳಬೇಕಾದದ್ದು ಏನೆಂದರೆ, ಲೋಹಿಯವಾದ ಒಟ್ಟಾರೆಯಾಗಿ ನಮ್ಮ ಸಮಾಜ ಮತ್ತು ಚಿಂತನೆಯಲ್ಲಿ ಮಾಡಿರುವಂತಹ ಪ್ರಭಾವವನ್ನು ನೇರವಾಗಿ ಇಲ್ಲಿ, ಇಷ್ಟು ಪ್ರಮಾಣದಲ್ಲಿ, ಹೀಗೆ ಅಂತ ಗುರುತಿಸುವ ಪ್ರಯತ್ನ ಉಪಯುಕ್ತವಲ್ಲ. ಅದು ಒಂದು ವಿಶಿಷ್ಟ ರೀತಿಯಲ್ಲಿ ನಮ್ಮ ಪ್ರಜ್ಞೆಯೊಳಗೆ ಹೊಕ್ಕು ನಮ್ಮ ಮೂಲಭೂತ ಚಿಂತನಾ ಕ್ರಮಗಳನ್ನು ಬಹಳ ಮಟ್ಟಿಗೆ ಪಲ್ಲಟಗೊಳಿಸಿಕೊಂಡು ಬಂತು. ಆ ದೃಷ್ಟಿಯಲ್ಲಿ ನಾವು ಅದನ್ನ ಗುರುತಿಸಬೇಕೇ ಹೊರತು, ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಎಲ್ಲೆಲ್ಲಿ ಲೋಹಿಯಾ ಇದ್ದಾರೆ ಎಂಬ ಅಸೂಕ್ಷ್ಮ ಪ್ರಶ್ನೆಗಳನ್ನು ಕೇಳಬಾರದು. ಅಲ್ಲದೇ, ಲೋಹಿಯಾ ಚಿಂತನೆ ಅತ್ಯಂತ ಸಂಕೀರ್ಣ, ಅದಕ್ಕೆ ಸಾಕಷ್ಟು ಮಗ್ಗಲುಗಳಿವೆ. ಅದಕ್ಕೆ ಒಂದು ತುದಿಯಲ್ಲಿ ಡಿ. ಎಸ್. ನಾಗಭೂಷಣ್ ಹೇಳಿದಂತೆ ಆಧ್ಯಾತ್ಮವಿದ್ದರೆ ಇನ್ನೊಂದು ತುದಿಯಲ್ಲಿ ಹೋರಾಟದ ಪ್ರಣಾಳಿಕೆಯ ರೀತಿಯಲ್ಲಿ ಅದು ಕೆಲಸ ಮಾಡುತ್ತದೆ. ಹೀಗಾಗಿ ಸಂಕೀರ್ಣವಾದ, ಪ್ರಧಾನವಾದ ಪ್ರಶ್ನೆಗಳನ್ನ ಲೋಹಿಯಾವಾದ ಎತ್ತಿದೆ.

ಆ ಪ್ರಶ್ನೆಗಳು ನನ್ನ ದೃಷ್ಟಿಯಲ್ಲಿ ಸ್ವಾತ್ಯಂತ್ರ ಪೂರ್ವದಲ್ಲಿ ಮುನ್ನೆಲೆಗೆ ಬಂದಂತಹ ಪ್ರಶ್ನೆಗಳೇ. ಸ್ವಾತ್ಯಂತ್ರ್ಯಪೂರ್ವ ಕಾಲಘಟ್ಟದಲ್ಲಿ ಈ ಪ್ರಶ್ನೆಗಳು ಬೇರೆ ಬೇರೆ ವಲಯದಲ್ಲಿ ಅಂಬೇಡ್ಕರ್ ಅವರಿಗಿಂತ ಮೊದಲು ಫುಲೆ ಮತ್ತು ಆಮೇಲೆ ನಡೆದಿರುವ ಹೋರಾಟಗಳ ಮೂಲಕ ಮುನ್ನೆಲೆಗೆ ಬಂದಿದ್ದವು. ಯಾವುದನ್ನು ಲೋಹಿಯಾ ಎತ್ತಿದ ಪ್ರಶ್ನೆಗಳು ಅಂತಾ ನಾವು ಗುರುತಿಸುತ್ತೇವೋ ಅವು, ಆ ಕಾಲದಲ್ಲಿಯೇ ಬಹಳ ಪ್ರಧಾನವಾಗಿ

ಬಂದಿದ್ದವು. ಆದರೆ ಮುಂದೆ ಬಂದಂತಹ ಕಾಲಘಟ್ಟದಲ್ಲಿ ಈ ಪ್ರಶ್ನೆಗಳು ತೆರೆಯ ಹಿಂದೆ ಸರಿಯುವಂತಾಯ್ತು. ಹೀಗಾಗಲು ನನಗೆ ತೋಚುತ್ತಿರುವ ಎರಡು ಕಾರಣಗಳನ್ನು ನಾನು ಹೀಗೆ ವಿಶ್ಲೇಷಿಸುತ್ತೇನೆ: ಒಂದು, ರಾಷ್ಟ್ರೀಯವಾದಿ ಚಳವಳಿಯ ಆ ಚಳವಳಿಯ ಪ್ರಭಾವ ಹೇಗಿತ್ತು ಅಂದರೆ ಒಂದು ಕಾಲಘಟ್ಟದಲ್ಲಿ ಅಂಬೇಡ್ಕರ್, ಫುಲೆಯವರು ಎತ್ತಿದ ಪ್ರಶ್ನೆಗಳನ್ನು ಅಪ್ರಧಾನವನ್ನಾಗಿ ಮಾಡುವ ಕೆಲಸದಲ್ಲಿ ಅದು ತೊಡಗಿತು. ಗಾಂಧಿ ನೇತೃತ್ವದಲ್ಲಿ ಇದ್ದಂತಹ ರಾಷ್ಟ್ರೀಯವಾದಿ ಚಳವಳಿ ಕೂಡ ಸಾಂಸ್ಕೃತಿವಾಗಿ ಆ ಕೆಲಸವನ್ನು ಮಾಡುತ್ತಾ ಇತ್ತು.

ಉದಾಹರಣೆಗೆ, ಜಾತಿ ಮತ್ತು ಜಾತಿ ಆಧರಿಸಿದ ಸಮಾಜದ ರಚನೆಯನ್ನು ಪ್ರಧಾನವಾಗಿ ಅಂಬೇಡ್ಕರ್ ಚರ್ಚೆಗೆ ತರುವಂತಹ ಕೆಲಸವನ್ನು ಮಾಡುತ್ತಾ ಇದ್ದರು. ಈ ಚಿಂತನೆಯ ಮಹತ್ವ ಏನೆಂದರೆ, ಸಾಂಸ್ಕೃತಿಕ ಲೋಕದಲ್ಲಿಯೂ–ಧರ್ಮ, ಸಾಹಿತ್ಯ ಇವುಗಳು ಸೇರಿದ ಹಾಗೆಯೇ– ಕೂಡ ನಾವು ಜಾತಿಯನ್ನು ಕ್ರೈಟೇರಿಯಾ ಆಗಿ ಇಟ್ಟುಕೊಂಡು ಸಂಸ್ಕೃತಿಯ ಇತಿಹಾಸವನ್ನು, ಸಂಸ್ಕೃತಿಯ ವರ್ತಮಾನವನ್ನು ಪ್ರಶ್ನೆ ಮಾಡಬಹುದು. ಅದರ ಜೊತೆ ೧೯ನೆ ಶತಮಾನದಲ್ಲಿ ನಡೆದಂತಹ ಸಮಾಜ ಸುಧಾರಕ ಚಳವಳಿಗಳು, ಧರ್ಮ ಸುಧಾರಕ ಚಳವಳಿಗಳು ಕೂಡ ಇಂತಹುದೇ ಪ್ರಶ್ನೆಗಳನ್ನು ಎತ್ತಿದ್ದವು. ಒಂದು ಕಾಲದಲ್ಲಿ ಮುನ್ನೆಲೆಗೆ ಬಂದಂತಹ ಈ ಪ್ರಶ್ನೆಗಳು ರಾಷ್ಟೀಯವಾದಿ ಚಳುವಳಿಯಿಂದಾಗಿ ಹಿನ್ನಲೆಗೆ, ತೆರೆಮರೆಗೆ ಹೋಗಲು ಕಾರಣವಾಗಿತ್ತು.

ರಾಷ್ಟ್ರವಾದಿ ಚಳುವಳಿ ಇಂಡಿಯಾದಲ್ಲಿ ಯಾವ ರೀತಿಯಲಿ ಸಾಂಸ್ಕೃತಿಕ ರಾಷ್ಟ್ರವಾದವನ್ನು ತರುವುದಕ್ಕೆ ಪ್ರಯತ್ನ ಪಟ್ಟಿತೋ, ಅದನ್ನು ಗಾಂಧಿಯವರ ನೇತೃತ್ವದ ರಾಷ್ಟ್ರವಾದಿ ಚಿಂತನೆಯಲ್ಲಿ ಕೂಡ ನಾವು ನೋಡಬಹುದು. ಈ ಸಾಂಸ್ಕೃತಿಕ ರಾಷ್ಟ್ರವಾದ ಜಾತಿಯ ಕುರಿತು ಮೊನಚಾದ ಪ್ರಶ್ನೆಗಳನ್ನ 'ಮಾಸ್ಕ್' ಮಾಡುವ ಪ್ರಯತ್ನ ಮಾಡಿತು. ಇಲ್ಲಿ ಅದರ ಬಗ್ಗೆ ಹೆಚ್ಚು ವಿಸ್ತರಿಸುವ ಅಗತ್ಯವಿಲ್ಲ.

ಒಟ್ಟಾರೆಯಾಗಿ ಸಾಂಸ್ಕೃತಿಕ ರಾಷ್ಟ್ರವಾದಕ್ಕೆ ಬೇಕಾದಂತಹ ಒಂದು ರಾಷ್ಟ್ರ, ಏಕರೂಪಿಯಾದ, ಹೋಮೊಜಿನಿಯಸ್ ಆದ ರಾಷ್ಟ್ರದ ಕಲ್ಪನೆ ಮತ್ತು ಒಂದೇ ಸಂಸ್ಕೃತಿಯನ್ನು ಕಟ್ಟಿಕೊಳ್ಳಬೇಕಾದಂತಹ ಸಂದರ್ಭದಲ್ಲಿ ದಲಿತತ್ವ, ದಲಿತ ಭಾಷೆಗಳು ಇಂತಹ ಪ್ರತ್ಯೇಕತೆಯ ಪ್ರಶ್ನೆಗಳು ಕೇಳುವುದು ಸರಿಯಲ್ಲ ಎಂಬ ರಾಜಕೀಯ ಆಗಿನ ಕಾಲದಲ್ಲಿ ಇದ್ದುದರಿಂದ, ಆ ಪ್ರಶ್ನೆಗಳು ಹಿನ್ನೆಲೆಗೆ ಸರಿದುವೆಂದು ಹೇಳಬಹುದು. ಮುಂದೆ ಇನ್ನು ಕೆಲವು ಸಂಗತಿಗಳು ಇದಕ್ಕೆ ಸೇರಿಕೊಂಡವು. ಮುಖ್ಯವಾಗಿ, ಜಾತಿಯ ಮೊನಚು ಪ್ರಶ್ನೆಗಳನ್ನು ಸ್ವಲ್ಪ ಹಿನ್ನೆಲೆಗೆ ತಳ್ಳುವಂತಹ ಕೆಲಸ ನಡೆಯಿತು. ಹಾಗಾಗಿ, ಸ್ವಾತಂತ್ರ್ಯಾನಂತರದ ಸನ್ನಿವೇಶದಲ್ಲಿ ನಾವು ಕೇಳಿಕೊಳ್ಳಬೇಕಾದಂತಹ ಪ್ರಶ್ನೆಯೆಂದರೆ, ಭಾರತದ ಸಾಹಿತ್ಯ ಕೃತಿಗಳಲ್ಲಿ ಕೂಡ ಸ್ವಾತಂತ್ರ್ಯದ ಪೂರ್ವದಲ್ಲಿ ಯಾವುವು ಮುನ್ನೆಲೆಯ ಪ್ರಶ್ನೆಯಾಗಿದ್ದವೊ ಅವು ಸಾಹಿತ್ಯದಲ್ಲಿ ಕೂಡ ಮುನ್ನಲೆಯಲ್ಲಿದ್ದವೋ ಎಂಬುದು.

ಕನ್ನಡದ ಬಗ್ಗೆ ಹೇಳುವುದಾದರೆ, ಕುವೆಂಪು ತಮ್ಮ ಸೃಜನಶೀಲ ಚಿಂತನೆಗಳಿಂದ, ಸಾಹಿತ್ಯದ ಮೂಲಕ ಈ ಪ್ರಶ್ನೆಗಳಿಗೆ ಒಂದು ವೇದಿಕೆಯನ್ನು ಸೃಷ್ಟಿ ಮಾಡಿದ್ದರು. ಈ ರೀತಿಯಲ್ಲಿ ಅಂಬೇಡ್ಕರ್‌ರ ಪ್ರಶ್ನೆಗಳನ್ನು ಅವರು ತಮ್ಮ ಕೃತಿಗಳಲ್ಲಿ, ಕಥನಗಳಲ್ಲಿ ಕೇಳುವುದರ ಮೂಲಕ ಕನ್ನಡ ಸಾಹಿತ್ಯದಲ್ಲಿ ಈ ಪ್ರಶ್ನೆಗಳು ಮುನ್ನಲೆಯಲ್ಲಿಯೇ ಇದ್ದವು ಎನ್ನುವುದನ್ನು ಸಾಬೀತು ಮಾಡಿದ್ದರು. ಕಾರಂತರೂ ಕೂಡ ತಮ್ಮದೆ ರೀತಿಯಲ್ಲಿ ತಮ್ಮ ಸಾಹಿತ್ಯದಲ್ಲಿ ಲೋಹಿಯಾ ಎತ್ತಿದ ಪ್ರಶ್ನೆಗಳನ್ನು ಎತ್ತಿದ್ದರು. ನಾವು ಸಂಪೂರ್ಣವಾಗಿ ಒಪ್ಪಿಕೊಳ್ಳದೆ ಇರುವ ಚೋಮನದುಡಿಯಲ್ಲಿ ಮತ್ತು ಅವರ ಇತರ ಸಾಮಾಜಿಕ ಬರಹಗಳಲ್ಲಿ ಈ ಪ್ರಶ್ನೆಗಳನ್ನು ಎತ್ತಿದ್ದರು. ಈಗ ನಮ್ಮೆದುರಿಗಿರುವ ಪ್ರಶ್ನೆಯೆಂದರೆ, ಮುನ್ನಲೆಗೆ ಬಂದಂಥ ಪ್ರಶ್ನೆಗಳು ಒಂದು ಘಟ್ಟದಲ್ಲಿ ಸಾಂಸ್ಕೃತಿಕ ರಾಷ್ಟ್ರವಾದದಿಂದಾಗಿ ಹಿಂದೆ ಹೋದ ಹಾಗೆ, ಇನ್ನೊಂದು ಘಟ್ಟದಲ್ಲಿ ನಮ್ಮಲ್ಲಿನ ನವ್ಯ ವಿಮರ್ಶೆ ಅದೇ ಕೆಲಸವನ್ನು ಬೇರೆ ರೀತಿಯಲ್ಲಿ ಏಕೆ ಮಾಡಿತು? ಹೊಸ ಅನುಭವ ಲೋಕಗಳನ್ನು ಅಭಿವ್ಯಕ್ತ ಮಾಡದಂತಹ ಸ್ಥಿತಿ ನಿರ್ಮಾಣವಾದ ಹಾಗೆಯೇ ಇನ್ನೊಂದು ಕಡೆಗೆ ಸಾಹಿತ್ಯ ವಿಮರ್ಶೆಯು ಮುನ್ನೆಲೆಗೆ ಬಂದ ಪ್ರಶ್ನೆಗಳನ್ನ ಹಿನ್ನಲೆಗೆ ತಳ್ಳುವಂತಹ ಕೆಲಸ ನವ್ಯ ವಿಮರ್ಶೆಯ ಕಾಲದಲ್ಲಿ ಏಕೆ ಆಯಿತು ಎನ್ನುವುದನ್ನು ನಾವು ಗಮನಿಸಬೇಕು.

ನವ್ಯದ ಭರಾಟೆಯ ಕಾಲದಲ್ಲಿ ಲೋಹಿಯಾ ಚಿಂತನೆ ಹೊಸ ರೀತಿಯಲ್ಲಿ ಸಾಹಿತ್ಯದ ಬಗ್ಗೆ, ಕೃತಿಗಳ ಬಗ್ಗೆ ಯೋಚನೆ ಮಾಡಿ ಸಾಹಿತ್ಯ ವಿಮರ್ಶೆಯ ನೆಲೆಗಳನ್ನು ಬದಲಾಯಿಸಲು ಸಹಾಯ ಮಾಡಿತು. ಲೋಹಿಯಾವಾದವು ಇಂಥ ಪ್ರೇರಣೆ ಕೂಡ ಆಗಲು ಕಾರಣವೇನು ಎನ್ನುವುದನ್ನು ನಾವು ಯೋಚಿಸಬೇಕು. ನಾನು ಇದನ್ನು ಸೂತ್ರ ರೂಪದಲ್ಲಿ ನಾಲ್ಕು ಅಂಶಗಳಲ್ಲಿ ಹೇಳಲು ಇಚ್ಛಿಸುತ್ತೇನೆ: ಮೊದಲನೆಯದು, ಕೃತಿನಿಷ್ಠೆ, ಕೃತಿನಿಷ್ಠ ಓದು, ಕೃತಿಬಂಧ, ರೂಪ ಇತ್ಯಾದಿ ಏಸ್ತಟೀಕ್ ಕೆಟಗೆರಿಗಳು ಶುದ್ಧ, ಶುದ್ಧಾಂಗ ಸಾಹಿತ್ಯದ ಪರಿಕಲ್ಪನೆಗಳು ಅಂತ ನವ್ಯ ವಿಮರ್ಶೆ ಒಪ್ಪಿಕೊಂಡಿದ್ದು ಕೇವಲ ಮುಖವಾಡ ಮಾತ್ರ ಆಗಿತ್ತು. ಆ ಮುಖವಾಡದ ಒಳಗೆ ಇದ್ದದ್ದು ಒಂದು ರೀತಿಯ ನಿರ್ದೇಶನ ಕೊಡುವುದೇ ಆಗಿತ್ತು. ಯಾವುದು ಸಾಹಿತ್ಯ ಆಗಬೇಕು, ಯಾವುದು ಸಾಹಿತ್ಯ ಆಗಲಾರದು, ಯಾವುದು ಸಾಹಿತ್ಯದ ವಸ್ತು, ಯಾವುದು ಸಾಹಿತ್ಯದ ವಸ್ತು ಆಗಲಾರದು ಎನ್ನುವ ನಿರ್ದೇಶನವನ್ನು ನವ್ಯ ವಿಮರ್ಶೆ ನೀಡುತ್ತಾ ಇತ್ತು. ತೇಜಸ್ವಿಯವರು ೧೯೭೩ರಲ್ಲಿ ಬಹಳ ತೀಕ್ಷ್ಣವಾಗಿ ತಮ್ಮ ಬರಹಗಳಲ್ಲಿ ಈ ಬಗ್ಗೆ ಪ್ರಶ್ನೆಗಳನ್ನ ಎತ್ತಿದ್ದರು. ನವ್ಯ ವಿಮರ್ಶೆ ಮೊದಲನೆಯದಾಗಿ ಶುದ್ಧಾಂಗ ಸಾಹಿತ್ಯ ವಿಮರ್ಶೆಯ ಹೆಸರಿನಲ್ಲಿ, ನ್ಯಾಯ ತೀರ್ಮಾನದಂತೆ; ಯಾವುದು ಮಾಡಬೇಕು, ಯಾವುದು ಮಾಡಬಾರದು ಎಂದು ಹೇಳತೊಡಗಿತ್ತು. ಉದಾಹರಣೆಗೆ ಮಲೆಗಳಲ್ಲಿ ಮದುಮಗಳು ಕಾದಂಬರಿಯ ಕಥನದ ಸ್ವರೂಪ ಏನು ಎಂದು ಅರ್ಥ ಮಾಡಿಕೊಳ್ಳದೆ ಇದ್ದದ್ದು. ಕಾನೂರು ಹೆಗ್ಗಡತಿ ಏನನ್ನು ಹೇಳಲು ಪ್ರಯತ್ನ ಮಾಡುತ್ತಿದೆ ಎನ್ನುವುದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳದೆ ಇದು ಕಾದಂಬರಿಯೇ ಅಲ್ಲ, ಕಲಾಕೃತಿಯೇ

ಅಲ್ಲ ಎನ್ನುವಂತಹ ವಿಮರ್ಶೆಯನ್ನು ನಾವು ಗಮನಿಸಬೇಕು. ಶುದ್ಧಾಂಗ ಸಾಹಿತ್ಯ ಪರಿಕಲ್ಪನೆಯ ವಿಮರ್ಶೆ ಎಂದು ಹೇಳುವ ನವ್ಯ ವಿಮರ್ಶೆ ಸಾಂಸ್ಕೃತಿಕವಾದಂತಹ ನಿರ್ದೇಶನವನ್ನು ಆ ಹೊತ್ತಿನಲ್ಲಿ ನೀಡುತ್ತಿತ್ತು. ಇದರಿಂದಾಗಿ ತಳ ಸಮುದಾಯಗಳಿಗೆ ಹಿಂದುಳಿದ ಜಾತಿಗಳ ಅನುಭವಗಳಿಗೆ ಅಭಿವ್ಯಕ್ತಿ ಕಷ್ಟವಾಗುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಅದರೆ ಸಮರ್ಥವಾದ ಕೃತಿಗಳು ಇಂತಹ ಅಡಚಣೆಗಳ ನಡುವೆಯೂ ಬಂದೇ ಬರುತ್ತವೆ ಎಂಬುದು ಬೇರೆ ಮಾತು. ಹೀಗಾಗಿಯೇ ಕುವೆಂಪು ಅವರ ಕೃತಿಗಳು ಬರಲು ಸಾಧ್ಯವಾಯಿತು.

ಎರಡನೆಯದನ್ನು, ನಾನು ಒಂದು ಪರಿಭಾಷೆ ಬಳಸಿಕೊಂಡು ಹೇಳಲು ಪ್ರಯತ್ನಿಸುತ್ತೇನೆ. ನವ್ಯ ವಿಮರ್ಶೆ ಎನ್ನುವುದು 'ಸಾಂಸ್ಕೃತಿಕ ಬಂಡವಾಳ'ವನ್ನು ಬಳಸಿಕೊಂಡು ತನ್ನ ಅಧಿಕಾರವನ್ನು ಚಲಾಯಿಸಿತು. ಒಂದು ಸಣ್ಣ ಗುಂಪು, ಕೆಲವೇ ಕೆಲವು ಜನರನ್ನು ಒಳಗೊಂಡಿದ್ದಂತಹ–ಹೆಚ್ಚು ಕಡಿಮೆ ಪರಸ್ಪರ ಸುಪರಿಚಿತವಾದ ಕರುಳುಬಳ್ಳಿ ಆಗಿರುವಂತಹ–ಸೀಮಿತ ವರ್ಗದ ಕೈಯಲ್ಲಿ ಇದ್ದಂಥ ಆ ವಿಮರ್ಶೆ ಅಧಿಕಾರದ ಸ್ಥಾನವನ್ನು ಪಡೆದುಕೊಳ್ಳಲು ಹೇಗೆ ಸಾಧ್ಯವಾಯಿತು ಎನ್ನುವುದು ಇಲ್ಲಿ ಮುಖ್ಯ ಪ್ರಶ್ನೆ. ಅದನ್ನು ನಾನು 'ಕಲ್ಚರಲ್ ಕ್ಯಾಪಿಟಲ್' ಎಂದು ಕರೆಯುತ್ತೇನೆ. (ಈ ಪರಿಕಲ್ಪನೆಯನ್ನು ಬಳಕೆಗೆ ತಂದವನು ಪಿಯರ್ ಬೂರ್‌ದಿನು ಎನ್ನುವ ಫ್ರೆಂಚ್ ಚಿಂತಕ) ಸಾಂಸ್ಕೃತಿಕ ಅಧಿಕಾರವನ್ನು ಒಂದು ರೀತಿಯಲ್ಲಿ ಬಂಡವಾಳ ಮಾಡಿಕೊಂಡು ಯಜಮಾನಿಕೆಯನ್ನು ಅದು ಸ್ಥಾಪಿಸಿತ್ತು. ಅದನ್ನು ಕೂಡ ನಾವು ನವ್ಯ ವಿಮರ್ಶೆಗೆ ಅನ್ವಯಿಸಿ ನೋಡುವ ಅವಶ್ಯಕತೆ ಇದೆ.

ಮೂರನೆಯ ಅಂಶ, ಲೋಹಿಯಾ ಪ್ರಶ್ನೆಗಳನ್ನು ಕುವೆಂಪುರವರು ತಮ್ಮ ಶೂದ್ರ ತಪಸ್ವಿಯಲ್ಲಿ ಕೇಳಿದ್ದಕ್ಕೆ ಸಂಬಂಧಿಸಿದ್ದು. ಇಡೀ ಸಂಸ್ಕೃತಿ ವ್ಯಾಪಾರದಲ್ಲಿ ಬರುವ ಪುರಾಣಗಳು, ಸಂಸ್ಕೃತಿಯ ರೂಪಗಳು, ಕಲ್ಪನೆಗಳು, ಪಡಿಯಚ್ಚುಗಳು, ಪರಿಕಲ್ಪನೆಗಳು ಇವುಗಳ ಮೇಲೆ ಹಕ್ಕು ಯಾರಿಗಿದೆ? ಇವುಗಳ ಸ್ವಾಮ್ಯ ಯಾರಿಗಿದೆ? ಇದು ಕುವೆಂಪು ಪ್ರಶ್ನೆ. ಇದು ಮೂಲತಃ ಇಡೀ ಇಂಡಿಯಾದ ಸಂಪ್ರದಾಯಗಳ ಬಗ್ಗೆ, ತತ್ವ ಪರಂಪರೆಯ ಬಗ್ಗೆ, ಧರ್ಮ ಪರಂಪರೆಗಳ ಬಗ್ಗೆ ಲೋಹಿಯಾ ಎತ್ತಿರುವ ಪ್ರಧಾನವಾದ ಪ್ರಶ್ನೆಯೇ. ಈ ಮೂಲಕ ಲೋಹಿಯಾ ಶೂದ್ರ ಪರವಾದಂತಹ ಪ್ರಶ್ನೆಗಳನ್ನು ಎತ್ತಿದ್ದರು. ಮುಖ್ಯವಾಗಿ ಯಾರ ಸ್ವಾಮಿತ್ವ, ಯಾರ ಹಕ್ಕುಗಳು? ಈ ಸಮುದಾಯಗಳಿಗೆ ಇವುಗಳ ಜೊತೆ ಯಾವ ರೀತಿಯ ಸಂಬಂಧ ಇದೆ ಎನ್ನುವುದನ್ನು ಲೋಹಿಯಾ ಕೇಳಿದ್ದರು.

ಇಲ್ಲಿ ನಾವು ಗಮನಿಸಬೇಕಾದದ್ದು, ನವ್ಯ ವಿಮರ್ಶೆಗೆ ಈ ಹಕ್ಕುಗಳ ಪ್ರಶ್ನೆ ಇಷ್ಟವಾಗಲೇ ಇಲ್ಲ. ಇದು ಅದನ್ನ ಹೆಚ್ಚಾಗಿ ಗಮನಿಸದೆ ಅದನ್ನ ಅಲಕ್ಷ್ಯ ಮಾಡುತ್ತ ಅದರ ಬಗ್ಗೆ ಚರ್ಚೆಯಾಗದೇ ಇರುವ ಹಾಗೆ ಮಾಡಿತು. ಅಂದರೆ ಸಾಮಾಜಿಕ

ವಾಸ್ತವವಾಗಿ ಈ ಚರ್ಚೆ ಆಗುತ್ತಿತ್ತು. ಶೂದ್ರ ಸಮುದಾಯಗಳು ತಮ್ಮ ಹಕ್ಕುಗಳ ಪ್ರಶ್ನೆಯನ್ನು ಪ್ರಧಾನವಾಗಿ ಕೇಳುತ್ತ ಇದ್ದವು. ಇದಕ್ಕೆ ಚರಿತ್ರೆಯ ಕಾರಣಗಳು ಸ್ಪಷ್ಟವಾಗಿ ಕಾಣುತ್ತವೆ. ಅದರೆ ಸಾಂಸ್ಕೃತಿಕ ವಲಯದಲ್ಲಿ ತನ್ನದೇ ಅಧಿಕಾರ ಸ್ಥಾನವನ್ನು ಇಟ್ಟುಕೊಂಡ ನವ್ಯ ವಿಮರ್ಶೆ ಈ ಚರ್ಚೆ ಆಗದಿರುವ ಹಾಗೆ ನೋಡಿಕೊಳ್ಳುತ್ತಿತ್ತು. ಆದರೆ ಅಷ್ಟೇ ಮುಖ್ಯವಾದದ್ದು, ನವ್ಯದ ವಿಮರ್ಶೆಯಲ್ಲಿ ತೊಡಗಿದ ಕೆಲವರು ಸ್ವಲ್ಪವಾದರೂ ಭಿನ್ನವಾಗಿ ಬರೆಯಲು ಆರಂಭಿಸಿದ್ದರು ಎಂಬುದು ನಾಲ್ಕನೆಯ ಅಂಶ. ಲೋಹಿಯಾ ಮತ್ತು ಗಾಂಧಿಯವರನ್ನು ಭಿನ್ನವಾಗಿ ಓದುವುದಕ್ಕೆ ಅರ್ಥ ಮಾಡಿಕೊಳ್ಳುವುದಕ್ಕೆ ಸಿದ್ಧವಾಗಿದ್ದ ಮತ್ತು ಎಲ್ಲದಕ್ಕಿಂತ ಮುಖ್ಯವಾಗಿ ಒಂದು ಬೇರೆಯೇ ಸಾಮಾಜಿಕ ಸ್ತರದಿಂದ ಬಂದವರಿಂದಾಗಿ ಇಲ್ಲಿ ನಡೆದ ಚಳುವಳಿಗಳಿಂದಾಗಿ ಈ ರೀತಿಯ ಪ್ರಶ್ನೆಗಳನ್ನು ಮತ್ತೆ ಮತ್ತೆ ಕೇಳಲು ಸಾಧ್ಯವಾಯಿತು. ಉದಾಹರಣೆಗೆ ಒಂದು ದಲಿತ ಕೃತಿ ಬಂದಾಗ ಇದು ಕೃತಿ ಹೌದಾ ಅಲ್ಲವಾ ಎಂಬ ಪ್ರಶ್ನೆ ಕೇಳುವ ಸ್ಥಿತಿ ನಿರ್ಮಾಣವಾಯಿತು. ಅಲ್ಲಿ ದಲಿತ ತನ್ನ ಅನುಭವದ ಭಾಷೆಯನ್ನು ಬಳಸಬೇಕೊ ಬೇಡವೊ ಎನ್ನುವ ಪ್ರಶ್ನೆಗಳೂ ಹುಟ್ಟಿಕೊಂಡವು. ಅಂದರೆ ನವ್ಯದ ಅಧಿಕಾರವನ್ನು ಒಡೆದು ನಾವು ಈ ರೀತಿಯ ಚರ್ಚೆ ಮಾಡಲು ಸಾಧ್ಯ ಎನ್ನುವುದಕ್ಕೆ ಲೋಹಿಯಾ ಚಿಂತನೆ ಪ್ರೇರಣೆಯಾಗಿ ಕೆಲಸ ಮಾಡಿತು.

ಆದರೆ, ಇದು ಕೇವಲ ಲೋಹಿಯಾ ಚಿಂತನೆಯಿಂದ ಮಾತ್ರ ಎಂದು ಹೇಳಲು ಸಾಧ್ಯವಿಲ್ಲ. ಲೋಹಿಯಾ ಚಿಂತನೆಯಿಂದ ಹುಟ್ಟಿಕೊಂಡ ಬಹುಸ್ತರೀಯ ವಿಚಾರಗಳು ಇದಕ್ಕೆ ಕಾರಣವಾಗಿಬಹುದು. ಇದಕ್ಕೆ ಕರ್ನಾಟಕದ ರಾಜಕೀಯ ಸ್ಥಿತಿ ಮತ್ತು ನಾವು ಡಾಮಿನೆಂಟ್ ಕ್ಯಾಸ್ಟ್ಸ್ ಎನ್ನುತ್ತೇವೆಯೊ ಅವುಗಳ ಪ್ರಗತಿಪರತೆಯೂ ಕಾರಣವಾಗಿರಬಹುದು. ಇದೆಲ್ಲದರ ಹಿಂದೆ ಲೋಹಿಯಾ ಚಿಂತನೆಯಿಂದಾಗಿ ಸೃಷ್ಟಿಯಾದ ಸಾಂಸ್ಕೃತಿಕ ಪಡಿಯಚ್ಚುಗಳನ್ನು ಒಡೆಯುವ, ಭಗ್ನಗೊಳಿಸುವ, ವಿಸ್ತರಿಸುವ ಚೈತನ್ಯಶೀಲತೆ ಇದೆ ಎನ್ನುವುದನ್ನು ನಾವು ಗಮನಿಸಬಹುದು. ಇದರ ದಾಖಲೆಗಳಾಗಿ, ನಾಗಭೂಷಣ್ ನೋಡಿರುವ ಹಾಗೆ ಕುವೆಂಪು, ತೇಜಸ್ವಿಯವರ ಆಗಿನ ಬಹು ಮುಖ್ಯ ಬರಹಗಳನ್ನು ನೋಡುತ್ತ ಹೋದರೆ ಇದು ನಮಗೆ ಸ್ಪಷ್ಟವಾಗಿ ಕಂಡುಬರುತ್ತೆ. ತೇಜಸ್ವಿ ನೋಡುವ ಕ್ರಮ ಹೇಗಿತ್ತೆಂದರೆ, ಅದು ಅವರ ಪ್ರಕಾರ ಶೂದ್ರ ಲೋಕಗಳ ಮೂಕ ಅನುಭವಗಳು ಗಮ್ಯವಾಗುತ್ತಿದ್ದ ಸಂದರ್ಭ. ಇದಕ್ಕೆ ಒಂದು ಸೂಕ್ಷ್ಮ ಮಗ್ಗಲನ್ನು ಸೇರಿಸಬೇಕಿದೆ. ರಾಜಕೀಯ ಅಧಿಕಾರದ ಹಸ್ತಾಂತರದ ಸಂದರ್ಭದಲ್ಲಿ; ಸಮಾಜದಲ್ಲಿ ಆಗುತ್ತಿರುವ ರಾಜಕೀಯ ಅಧಿಕಾರ ಹಸ್ತಾಂತರದ ಬದಲಾವಣೆಯೊಂದಿಗೆ ಸಾಂಸ್ಕೃತಿಕ ಲೋಕದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಸಮೀಕರಿಸಿ ನೋಡುವುದಕ್ಕೆ ಆಗುವುದಿಲ್ಲವೇನೋ ಎಂಬ ಅನುಮಾನದ ನಡುವೆಯೇ ನಾವು ಇದನ್ನು ನೋಡಬೇಕು ಎಂಬುದು. ಒಟ್ಟಿನಲ್ಲಿ, ಇಡೀ ಕನ್ನಡವೇ ಒಟ್ಟಾರೆಯಾಗಿ ಶೂದ್ರ ಲೋಕಗಳ ಅನುಭವದ ಅಭಿವ್ಯಕ್ತಿ ಆಗುತ್ತಾ ಹೋದ ಹಾಗೆಯೇ ಈ ರೀತಿಯ ಬದಲಾವಣೆ ನಡೆಯಿತು

ಎನ್ನುವ ಒಂದು ದೊಡ್ಡ ಕಥಾನಕ ಕಟ್ಟಿಕೊಳ್ಳುವ ಹಾಗೆ ಅಲ್ಲಿರುವ ವಾಸ್ತವಗಳನ್ನ ನೋಡಿ, ಆ ಬಗ್ಗೆ ಚರ್ಚೆ ಮಾಡಬೇಕು.

ಲೋಹಿಯಾ ಚಿಂತನೆ, ಸಾಹಿತ್ಯ ವಿಮರ್ಶೆಯಲ್ಲಿ ತಂದ ಬದಲಾವಣೆಯ ಒಂದು ಚಿಕ್ಕ ಪಟ್ಟಿ ಮಾಡಬಹುದು. ಒಂದು, ಶುದ್ಧಾಂಗ ಸಾಹಿತ್ಯ ಅನಾವಶ್ಯಕ. ಇಲ್ಲಿ ಸಂಸ್ಕೃತಿಯ ಸಂಕೀರ್ಣವಾದ ಸಂದರ್ಭದಲ್ಲಿ ಸಮಾಜದ ತಳ ಸಮುದಾಯಗಳು ಯಾವ ರೀತಿಯಲ್ಲಿ ನಿವೇದನೆ ಮಾಡಿಕೊಳ್ಳುತ್ತವೆ ಎನ್ನುವುದು ಮುಖ್ಯ. ಈ ಅಂಶ ಲೋಹಿಯಾ ಚಿಂತನೆಯ ಪ್ರಭಾವದಿಂದ ನಮಗೆ ದಕ್ಕಿದ್ದು. ಅವರು ನಮ್ಮ ಕತೆಗಳನ್ನು, ದೇವಾಲಯ, ಪುರಾಣ, ಸಂಸ್ಕೃತಿಯ ಸಂಕೇತವಾದ ರಾಮನನ್ನು ನೋಡುವ ಕ್ರಮದಲ್ಲಿ ಒಂದು ದೊಡ್ಡ ಪಲ್ಲಟ ಮಾಡಿದ್ದನ್ನು ನಾವು ನೋಡಬಹುದು. ಲೋಹಿಯಾ ಸಂಸ್ಕೃತಿಯನ್ನು ನೀವು ಬರೀ ನಿಮ್ಮದೇ ಸೀಮಿತ ಅರ್ಥದಲ್ಲಿ ನೋಡಬಾರದು; ಹಾಗೆಯೇ ಯುನಿರ್ವಸಲ್ ಆಗಿಯೂ ನೋಡಬಾರದು ಎಂದರು. ಬಹಳ ಮೂರ್ತವಾಗಿ, ಇಲ್ಲಿಯ ಜಾತಿ ವ್ಯವಸ್ಥೆ, ವರ್ಗ, ಹಾಗೂ ಪ್ರಾದೇಶಿಕತೆಗಳನ್ನು ಖಚಿತವಾದ ದೃಷ್ಟಿಕೋನದಲ್ಲಿ ನೋಡಬೇಕು ಎನ್ನುವುದನ್ನು ಅವರು ಹೇಳಿದರು. ಇದು ನಮ್ಮ ಸಾಹಿತ್ಯ ವಿಮರ್ಶೆಗೂ ಮಾದರಿಯಾಯಿತು.

ಉದಾಹರಣೆಗೆ ಮಲೆಗಳಲ್ಲಿ ಮದುಮಗಳು ಸಾಹಿತ್ಯ ಕೃತಿಗಿಂತ ಬದಲಾಗಿ ಅದೊಂದು ಸಂಸ್ಕೃತಿ ಪಠ್ಯ ಆಗುವುದರ ಹಿಂದೆ ನಮ್ಮ ಪರಂಪರೆಯನ್ನ, ಸಂಸ್ಕೃತಿಯನ್ನ ಅರ್ಥಮಾಡಿಸುವ ಹಿಂದೆ ಲೋಹಿಯಾವಾದ ಇದೆ ಎಂದುಕೊಳ್ಳಬಹುದು. ಸಾಹಿತ್ಯ ವಿಮರ್ಶೆ ಎನ್ನುವುದು ಕೇವಲ ಸಾಹಿತ್ಯ ನಿಷ್ಠೆ ಮಾತ್ರ ಆಗಿರದೆ, ಎಲ್ಲ ಸಮುದಾಯಗಳ ಬದುಕಿನ ರೀತಿಗೆ ಸಂಬಂಧಪಟ್ಟಿದ್ದು ಎನ್ನುವುದನ್ನ ಲೋಹಿಯಾ ಕಲಿಸಿದರು ಮತ್ತು ಆ ಮೂಲಕ ಕನ್ನಡ ವಿಮರ್ಶೆಗೆ ಸಹಾಯ ಮಾಡಿದರು. ಇದರಿಂದಾಗಿ ಸಾಹಿತ್ಯಿಕ ಪಠ್ಯ ಎಂಬುದರ ಕಲ್ಪನೆಯಿಂದ ಹೊರಬಂದು ಸಂಸ್ಕೃತಿಯ ವ್ಯಾಪಾರಗಳನ್ನು ನೋಡುವುದನ್ನು ಕನ್ನಡ ವಿಮರ್ಶೆಗೆ ಸಾಧ್ಯವಾಯಿತು.

ಯಾವುದನ್ನು ಕುವೆಂಪು ಹಕ್ಕಿನ ಮತ್ತು ಸ್ವಾಮ್ಯದ ಪ್ರಶ್ನೆಗಳಾಗಿ ಕೇಳಿದ್ದರೋ ಅಂತಹ ಪ್ರಶ್ನೆಗಳ ವಿಸ್ತಾರ ಕೂಡ ಲೋಹಿಯಾ ಚಿಂತನೆಯಿಂದಾಯಿತು. ಸಂಸ್ಕೃತಿಯ ಲೋಕದೊಳಗಿನ ಅಧಿಕಾರದ ಪ್ರಶ್ನೆ, ಹಕ್ಕು-ಸ್ವಾಮ್ಯದ ಪ್ರಶ್ನೆಗಳನ್ನು ನಾವು ನಮ್ಮ ಸಾಹಿತ್ಯದಲ್ಲಿ ಕೇಳಲು ಸಾಧ್ಯವಾಯಿತು. ಹೀಗಾಗಿಯೇ ಬಹಳ ಆರೋಗ್ಯಕರವಾದ ರೀತಿಯಲ್ಲಿ ಸಾಹಿತ್ಯ ವಿಮರ್ಶೆ ಬೆಳೆಯಲು ಆರಂಭಗೊಂಡಿತು ಎಂದು ಹೇಳಬಹುದು. ಹಾಗಾಗಿ, ಈ ವಾಗ್ವಾದಗಳಿಂದ ಜಾತಿಯೆನ್ನುವ ಪ್ರಧಾನ ಪ್ರಶ್ನೆಯನ್ನು ಮುನ್ನೆಲೆಗೆ ಬಾರದಂತೆ ಮಾಸ್ಕ್ ಮಾಡಿದ್ದುದು, ಈ ಚರ್ಚೆಯಿಂದ ಜಾತಿಯ ಪ್ರಶ್ನೆ ತೆರೆದುಕೊಳ್ಳುತ್ತ ಹೋಯಿತು. ಅಲ್ಲಿಂದ ಆಚೆಗೆ ಜಾತಿಯ ಪ್ರಶ್ನೆ ಪ್ರಧಾನವಾಗಿ ಎಲ್ಲ ಕಡೆಗಳಲ್ಲೂ ಚರ್ಚೆಗೆ ಒಳಪಟ್ಟಿತು.

ಪ್ರಾದೇಶಿಕತೆ ಎನ್ನುವುದು ಕೇವಲ ಪ್ರಾದೇಶಿಕ ಶ್ರೀಮಂತಿಕೆ ಎಂಬ ತೆಳುತೆಳುವಾದ ನಿಷ್ಪ್ರಯೋಜಕ ರೀತಿಯಲ್ಲಿ ಚರ್ಚೆಯಾಗುತ್ತಿದ್ದಾಗ, ಲೋಹಿಯಾ ಚಿಂತನೆಯಿಂದಾಗಿ ಪ್ರಾದೇಶಿಕ ಭಾಷೆ, ಸಂಸ್ಕೃತಿಗಳು ಮುನ್ನೆಲೆಗೆ ಬಂದವು. ಉದಾಹರಣೆಗೆ ಭಾರತೀಯ ಸಂಸ್ಕೃತಿ ಎಂಬ ಲೇಖನವನ್ನು ಅನಂತಮೂರ್ತಿಯವರು ಬರೆದಾಗ ತೇಜಸ್ವಿಯವರು ನೀಡಿದ ಪ್ರತಿಕ್ರಿಯೆ ಗಮನಿಸಬೇಕು. ಅಖಿಲ ಭಾರತವೆಂದರೆ ಕೇವಲ ಕೆಲವು ಅಖಿಲ ಭಾರತ ರಿಚುಯಲ್‌ಗಳಿಗೆ ಸೇರಿದ ಸಂಸ್ಕೃತಿ. ಆದರೆ ಶೂದ್ರ ನೆಲೆಯಿಂದ ನಾವು ಸಂಸ್ಕೃತಿಯನ್ನು ನೋಡಿದರೆ ಅಲ್ಲಿ ಅಖಿಲ ಭಾರತ ಎನ್ನುವುದೇ ಇರುವುದಿಲ್ಲ ಎಂದು ಅವರು ವಾದಿಸಿದರು. ಇದರಿಂದಾಗಿ ಎಲ್ಲೋ ಒಂದು ಕಡೆ ಕನ್ನಡ ಸಾಹಿತ್ಯವನ್ನು ನಮ್ಮ ನೆಲೆಯಲ್ಲಿ, ನಮ್ಮ ನೆರೆಹೊರೆಯವರ ನೆಲೆಯಲ್ಲಿ ನೋಡಲು ಸಾಧ್ಯವಾಯಿತು.

ಆದರೆ ನಾವು ಯಾವುದನ್ನು ಲೋಹಿಯಾ ಪ್ರಶ್ನೆಗಳು ಎನ್ನುತ್ತೇವೆಯೊ ಅವು ಹಾಗೆ ಉಳಿದು ಇಂದು ಮತ್ತೆ ಮಾಸ್ಕ್ ಆಗಿವೆ. ನಾವು ಇಂದು ಅಖಿಲ ಭಾರತದಿಂದ ಅಖಿಲ ಜಗತ್ತಿನ ಕಡೆಗೆ ಚಲಿಸುತ್ತಿರುವ ಈ ಸಂದರ್ಭದಲ್ಲಿ ಆ ಪ್ರಶ್ನೆಗಳಿಗೆ ಪರಿಹಾರ ಇಲ್ಲವೇನೊ ಎಂಬ ಭಾವನೆ ಬರುತ್ತಿದೆ. ಮುಂದೆ ಸಾಹಿತ್ಯ ವಿಮರ್ಶೆ ಇದನ್ನೆಲ್ಲ ಹೇಗೆ ನೋಡುತ್ತೆ ಎನ್ನುವುದು ಕುತೂಹಲದ ಪ್ರಶ್ನೆ.

(ಲಿಪೀಕರಣ: ಎಚ್.ಬಿ.ರಾಘವೇಂದ್ರ)

■

"ನನ್ನ ಜೀವನ ವಿಧಾನವನ್ನು ಗ್ರಹಿಸುವ ಕ್ರಮವನ್ನು, ಆಲೋಚನೆಯನ್ನು, ಅಭಿವ್ಯಕ್ತಿ ವಿಧಾನವನ್ನು ಒಟ್ಟಿನಲ್ಲಿ ಇಡೀ ಸಮಗ್ರ ವ್ಯಕ್ತಿತ್ವವನ್ನು ಸಂಪೂರ್ಣ ಬದಲಿಸಿ ಹಾಕಿದ್ದು ಲೋಹಿಯಾರ ತತ್ವಚಿಂತನೆ. ಸದ್ಯದ ಭಾರತೀಯ ಸಂದರ್ಭದಲ್ಲಿ ಲೋಹಿಯಾ ಒಬ್ಬರೇ ಒರಿಜಿನಲ್ ಎನ್ನಿಸುವ ತತ್ವಮೀಮಾಂಸಕರು. ಲೋಹಿಯಾರವರ ಆಲೋಚನೆಗಳನ್ನು ವಿಶ್ವವಿದ್ಯಾಲಯದ ಒಳಕ್ಕೆ ಅವರ ಜೀವಿತ ಕಾಲದಲ್ಲಿ ಬರದಂತೆ ನೋಡಿಕೊಂಡ ನಮ್ಮ ಬುದ್ಧಿಜೀವಿಗಳ ಸಮೂಹವು ಒಂದು ನೀಚರ ವ್ಯೂಹ. ನಮ್ಮ ಭಾರತದಲ್ಲಿ ಬೇರೂರಿರುವ ಗುಲಾಮಶಾಹಿಯ ಸ್ವರೂಪವನ್ನು ಇದು ಶ್ರುತಪಡಿಸುತ್ತದೆ. ಲೋಹಿಯಾರವರ ಆಲೋಚನೆಗೆ ಪ್ರತಿಸ್ಪಂದಿಸದ ಚೇತನ ಭಾರತದ ಯಾವುದಕ್ಕೂ ಸ್ಪಂದಿಸಲಾರದು. ಅಂತೆಯೇ ಹೊಸ ಸಾಹಿತ್ಯ ಕೂಡಾ."

–ಕೆ.ಪಿ. ಪೂರ್ಣಚಂದ್ರ ತೇಜಸ್ವಿ

('ಅಬಚೂರಿನ ಪೋಸ್ಟಾಫೀಸು' ಮುನ್ನುಡಿಯಲ್ಲಿ)

ಲೋಹಿಯಾ ನೆನಪಿನ ಸುತ್ತಮುತ್ತ

■ ದೇವನೂರ ಮಹಾದೇವ

ದಲಿತ ಸಂಘರ್ಷ ಸಮಿತಿ ಹುಟ್ಟಿದ ಗಳಿಗೆ ಈಗ ನೆನಪಾಗುತ್ತಿದೆ. ಮುಖ್ಯವಾಗಿ ಮೂರು ಜನರ ಕಡೆ –ಬಿ. ಕೃಷ್ಣಪ್ಪ, ಸಿದ್ದಲಿಂಗಯ್ಯ ಮತ್ತು ನನ್ನ ಕಡೆ– ಎಲ್ಲರೂ ನೋಡುತ್ತಿದ್ದರು. ಬಿ.ಕೃಷ್ಣಪ್ಪನವರು ಕಟ್ಟಾ ಅಂಬೇಡ್ಕರ್‌ವಾದಿ ಎಂದೂ, ಹಾಗೆಯೇ ಸಿದ್ದಲಿಂಗಯ್ಯ ಮಾರ್ಕ್ಸ್‌ವಾದಿ ಎಂದೂ, ನಾನು ಲೋಹಿಯಾವಾದಿ ಎಂದು ಗುರುತಿಸಲಾಗುತ್ತಿತ್ತು. ಕೃಷ್ಣಪ್ಪನವರ ಬಗ್ಗೆ ಸಂಘಟನೆಯಲ್ಲಿ ಅಪಾರವಾದ ನಂಬಿಕೆ ಇತ್ತು, ಸಿದ್ದಲಿಂಗಯ್ಯನವರ ಬಗ್ಗೆ ಅಪಾರವಾದ ಪ್ರೀತಿ ಇತ್ತು. ನನ್ನ ಬಗ್ಗೆ ಹೆಚ್ಚು ಗೌರವವಿತ್ತು, ಇದರೊಳಗೊಂದು ಸೂಕ್ಷ್ಮವಾದ ವಿದ್ಯಮಾನ ಗಮನಿಸಿದರೆ ಕಾಣುತ್ತಿತ್ತು. ಒಂದು ಬಾಲಸೈನ್ಯವನ್ನು ಕಟ್ಟಿಕೊಂಡು ಓಡಾಡುತ್ತಿದ್ದ ಸಿದ್ದಲಿಂಗಯ್ಯನವರ ಬಗ್ಗೆ ಇದ್ದ ಪ್ರೀತಿಯ ಒಳಗೆ ಸಖತ್ತು ಗುಮಾನಿಯೂ ಇತ್ತು! ಅವರು ಮಾರ್ಕ್ಸ್‌ವಾದದ ಕಡೆ ದಲಿತ ಸಂಘರ್ಷ ಸಮಿತಿಯನ್ನು ಸೆಳೆದುಕೊಂಡು ಹೋಗಿಬಿಡಬಹುದು ಅಂತ. ಏನೂ ಸೈನ್ಯವಿಲ್ಲದ ನನ್ನ ಬಗ್ಗೂ ಗುಮಾನಿ ಇತ್ತು, ಆದರೆ ಸಖತ್ತಲ್ಲ! ನಾನು ಲೋಹಿಯಾವಾದಕ್ಕೆ ದಸಂಸವನ್ನು ಪ್ರಭಾವಿಸಿಬಿಡಬಹುದು ಅಂತ. ನಾವು ಸೈದ್ಧಾಂತಿಕವಾಗಿ ಭಿನ್ನವಾಗಿದ್ದೆವು, ನಿಜ, ವೇದಿಕೆಯ ಮೇಲೆ ಸಿದ್ಧಾಂತಗಳ ಹೆಸರಿನಲ್ಲಿ ಜಗಳವಾಡುತ್ತಿದ್ದೆವು, ಆದರೆ ನಾವು ಹುಡುಕಿಕೊಂಡು ಹೋಗುತ್ತಿದ್ದುದು, ನಾನು ಕೃಷ್ಣಪ್ಪನವರ ಬಳಿಗೆ, ಕೃಷ್ಣಪ್ಪನವರು ನನ್ನ ಬಳಿಗೆ, ಸಿದ್ದಲಿಂಗಯ್ಯನವರು ನಮ್ಮಿಬ್ಬರ ಬಳಿಗೆ – ಹೀಗೆ ಪರಸ್ಪರ ಹುಡುಕಿಕೊಂಡುಹೋಗುತ್ತಿದ್ದೆವು. ಸೈದ್ಧಾಂತಿಕವಾಗಿ ಭಿನ್ನತೆ ಇದ್ದರೂ ಆಗ ನಾವು ಭಿನ್ನವಾಗಿರಲಿಲ್ಲ. ಯಾಕೆ? ನಮ್ಮ ಸಿದ್ಧಾಂತಗಳು ಅದು ಏನಿದ್ದರೂ ಬದುಕನ್ನು ಹಸನು ಮಾಡಲು ಬೇಕಾದ ಹತಾರಗಳು ಎಂದು ನಾವು ಅಂದುಕೊಂಡಿದ್ದರಿಂದ ಇರಬಹುದು. ದಾರುಣವಾದ ದಲಿತರ ಬದುಕು ಹಸನಾಗಲು ಮತ್ತಷ್ಟು ಪ್ರೀತಿ ಸಮಾನತೆ ಸ್ವಾವಲಂಬನೆಯ ಹತಾರಗಳು ಬೇಕಾಗಿವೆಯೇನೋ.

ಇರಲಿ, ಪಿಯುಸಿ ಫೇಲಾಗಿದ್ದ ನಾನು ಲೋಹಿಯಾ ಅವರು ತೀರಿಕೊಂಡ ದಿನ ಅವರ ಬಗ್ಗೆ ಬಂದಿದ್ದ ಸುದ್ದಿ ಲೇಖನ ಓದಿ ಲೋಹಿಯಾ ಬಗ್ಗೆ ಸೆಳತಕ್ಕೊಳಗಾದೆ– ಅವರ ಭೌತಿಕ ಶರೀರ ಗತಿಸಿದ ದಿನವಾದ್ದರಿಂದ ಬಹುಶಃ ಅವರ ಪ್ರಜ್ಞೆಯೊಡನೆ.

ಈಗ ಲೋಹಿಯಾ ಅವರ ನೆನಪನ್ನು ದಸಂಸದ ಒಂದು ಬಣ ಆಚರಿಸುವಷ್ಟಕ್ಕೆ ಬಂದಿದೆ! ನನಗೆ ಇಂದು ಇಲ್ಲಿ ಅನಿಸುತ್ತಿದೆ– ಇದು ಸಾಲದು! ಗಾಂಧಿಯನ್ನು ಎಷ್ಟು ಕತ್ತರಿಸಿ ಎಷ್ಟು ಉಳಿಸಿಕೊಳ್ಳಬೇಕು ಎಂಬುದಕ್ಕೆ ಲೋಹಿಯಾ, ಯಾರ ನಾಯಕತ್ವ, ಯಾರಿಗೆ ತಲುಪಿಸಬೇಕು ಎಂಬುದಕ್ಕೆ ಅಂಬೇಡ್ಕರ್–ಹೀಗೆ ಈ ಮೂವರ ಸಾರವನ್ನೂ ಕರಗಿಸಿ ಒಂದು ಹೊಸ ನಾಣ್ಯವನ್ನು ತಯಾರಿಸಿದರೆ ಇದು ನಡೆಯಬಹುದೇನೋ ಎಂಬ ಆಸೆಯಾಗುತ್ತಿದೆ.

ಲೋಹಿಯಾ ಅವರ 'ಜಾತಿ ಪದ್ಧತಿ' ಹಾಗೂ 'ರಾಜಕೀಯದ ಮಧ್ಯೆ ಬಿಡುವು' ಈ ಎರಡೂ ಕೃತಿಗಳು ಕನ್ನಡದ ಲೇಖಕರ, ಚಿಂತಕರ ಹಾಗೂ ಆಸೆಗಣ್ಣಿನ ಯುವಕರ ಮನಗೆದ್ದಿದ್ದವು. ಇವುಗಳ ಪ್ರಭಾವ ನಾಡಿನ ಉದ್ದಗಲಕ್ಕೂ ಹಬ್ಬಿತ್ತು.– 'ಜಾತಿ ಪದ್ಧತಿ' ಚರ್ಚಿತವಾಗುತ್ತಿದ್ದರೆ, 'ರಾಜಕೀಯದ ನಡುವೆ ಬಿಡುವು' ಒಬ್ಬ ಮಹಾನ್ ಕಲಾವಿದನ ಅಂತರಂಗದ ಅಭಿವ್ಯಕ್ತಿಯಾಗಿ ಮನಸೂರೆಗೊಂಡಿತ್ತು. ಒಳಗಾದವರಲ್ಲಿ ನಾನೂ ಒಬ್ಬನಾಗಿದ್ದೆ.

ಜಾತಿ ಪದ್ಧತಿಯ ನಾಶ– ಜಾತ್ಯತೀತ ಮನೋಭೂಮಿಕೆ ಇತ್ಯಾದಿಗಳಿಗಾಗಿನ ಅಂದು ನಡೆದ ಅನಿವಾರ್ಯವೂ ಅಗತ್ಯವೂ ಆದ ಆ ಆಂದೋಲನದಲ್ಲಿ ಒಂದು ವಿವೇಕದ ಎಚ್ಚರದ ಎಳೆ ಸೇರಿಸಿ ನಾವು ನಡೆಯಬೇಕಾಗಿತ್ತೇನೋ–ಎಂದು ಈಗ ಯೋಚಿಸುತ್ತಿರುವೆ. ಈ ವಿವೇಕದ ಎಚ್ಚರ ಈಗಲೂ ನಮಗೆ ಬೇಕಾಗಿದೆ. ಏಕೆಂದರೆ ಜಾತಿವ್ಯವಸ್ಥೆಯಲ್ಲಿ ಮುಳುಗಿದರೆ ನೀರಲ್ಲಿ ಮುಳುಗಿ ಮೂರ್ಛಾವಸ್ಥೆಯಲ್ಲಿ ಇದ್ದಂತೆ. ಜಾತಿ ವಿರುದ್ಧ ಹೋರಾಡುವುದೆಂದರೆ, ಒಂದು ಕಾಲು ಜಾತಿಯಲ್ಲೂ ಇನ್ನೊಂದು ಕಾಲು ಜಾತ್ಯತೀತತೆಯ ಮೇಲೂ ಇಟ್ಟ ನಡಿಗೆ ಅಥವಾ ತುಂಬಾ ಕಷ್ಟಪಟ್ಟರೆ ತಂತಿ ಮೇಲೆ ನಡೆದಂತೆ. ಇದನ್ನು ಹೇಗೆ ನಿಭಾಯಿಸಬೇಕಿತ್ತು ಎಂದು ತುಂಬಾ ಚಿಂತೆ ಮಾಡಿದ್ದೇನೆ. ದ್ವೇಷದ ಸೋಂಕಿಲ್ಲದೆ ಇದನ್ನು ಪ್ರೀತಿಯ ಕ್ರಿಯೆ ಮಾಡುವುದಾದರೂ ಹೇಗೆ ? ತುಂಬಾನೇ ಚಿಂತೆ ಮಾಡಿದ್ದೇನೆ.

ಸುಸ್ತಾಗಿ ನನಗೆ ಕೊನೆಗೂ ಕಂಡದ್ದು: ಕರ್ನಾಟಕ ನೆಲದಲ್ಲಿ ಮಾತ್ರ ಸಂಭವಿಸಿರುವ ಬೆರಗು– ವಚನಕಾರರ ೧೨ನೇ ಶತಮಾನದ ಆ ಒಂದೆರಡು ದಶಕಗಳು– '*ಕೀಳಿಂಗಲ್ಲದೆ ಹಯನು ಕರೆಯದು,*' '*ತಾನುಂಬ ಊಟವನು.*' '*ನಿಮ್ಮ ನಿಮ್ಮ ತನುಮನವ ಸಂತೈಸಿಕೊಳ್ಳಿ*' '*ಎನಗಿಂತ ಕಿರಿಯರಿಲ್ಲ*' ಇತ್ಯಾದಿ, ಹಾಗೆ ತನ್ನ ಒಡನಾಡಿಯಿಂದಾಗಿ ತಾನು ಉದ್ಧಾರವಾದೆ ಮುಂತಾಗಿ ತನ್ನ ಬಿಡುಗಡೆಗಾಗಿಯೇ ಈ ಕ್ರಿಯೆ ಎಂಬಂತೆ ನಾವು ನಮ್ಮನ್ನೇ ರೂಪಿಸಿಕೊಳ್ಳುತ್ತ ಜಾತಿ ಮೀರುವ ಆಂದೋಲನ ನಡೆದಿದ್ದರೆ...

ಇದಕ್ಕೆ ಮೊದಲಾಗಿ ಗಾಂಧಿ ಅಂಬೇಡ್ಕರ್ ಲೋಹಿಯಾ ಕರಗಿಸಿ ನಾಣ್ಯ

ಮಾಡಿ ಚಲಾವಣೆಗೆ ತರುವ ಬಗ್ಗೆ ಪ್ರಸ್ತಾಪಿಸಿದ್ದೆ. ಇಲ್ಲಿ ಲೋಹಿಯಾ ಸ್ವಚ್ಛಂದತೆಗೆ ಮಿತಿಹಾಕುವುದೂ, ಕಮ್ಯುನಿಸ್ಟ್ ಸಂಘಟನೆಯ ಬಿಗಿ ರಚನೆಯನ್ನು ಉದಾರಗೊಳಿಸಿ ಸ್ವೀಕರಿಸುವುದೂ ಅಗತ್ಯವಿದೆ. ಇದನ್ನು ಹೇಗೆ ಮಾಡಬೇಕು? ಯಾರು ಮಾಡಬೇಕು? ಉದಾಹರಣೆಗೆ ಹೇಗೆ ಎಂಬುದಕ್ಕೆ ಹೀಗೂ ಇರಬಹುದೇ ಅಂತ ಒಂದು ಉದಾಹರಣೆ ಕೊಡುವೆ. ಹಿಂದ್ ಸ್ವರಾಜ್ ಬಗ್ಗೆ ಓದುತ್ತೇವೆ, ಚರ್ಚಿಸುತ್ತೇವೆ, ವಾದಿಸುತ್ತೇವೆ. ವಿವಾದವೂ ಆಗುತ್ತದೆ. ಇದರ ಬದಲಾಗಿ ಹಿಂದ್ ಸ್ವರಾಜ್‌ನ್ನು ರೂಪಕವಾಗಿ ಒಳಗಿಟ್ಟುಕೊಂಡು, ಆ ಒಳ ನಸುಬೆಳಕಿನಲ್ಲಿ ಹೊರಜಗತ್ತಿನ ಕತ್ತಲನ್ನು ಬೆಳಕಾಗಿಸಲು ಸ್ವಾವಲಂಬನೆ ಸಮಾನತೆ ಸ್ವಾತಂತ್ರ್ಯವ ಹೆಚ್ಚಿಸಲು ಒದ್ದಾಡಬಹುದಲ್ಲವೇ? ಈ ಒದ್ದಾಟದಲ್ಲಿ ನಾಗಾರ್ಜುನನ ಬೌದ್ಧಿಕ ಪ್ರಖರತೆಯ ಅಭಿವ್ಯಕ್ತಿಗೆ ಬದಲಾಗಿ ಬುದ್ಧನ ಹೃದಯ ಮಿಡಿತವು ಮಾತುಗಳಾದ ಪರಿಯು ಹೆಚ್ಚು ಮುಟ್ಟಬಹುದಲ್ಲವೇ?

ಹಾಗೇ ಈ ನಾಣ್ಯವನ್ನು ಯಾರು ಮಾಡುತ್ತಾರೆ ಎಂಬುದಕ್ಕೂ, ಒಬ್ಬ ಚಕ್ರವರ್ತಿಗೆ ಕಾಣುವಂತೆ ನನಗೆ ಸದ್ಯಕ್ಕೆ ಕಾಣುವುದು ಡಿ.ಎಸ್. ನಾಗಭೂಷಣ! ಒಮ್ಮೆ ನಾಗಭೂಷಣ ನನ್ನ ಜತೆ "ಅಯ್ಯೋ ಈ ಸಂಕೀರ್ಣ ಸಿದ್ಧಾಂತಗಳು, ಜೀವನ, ಅಸಮಾಧಾನಕ್ಕಿಂತ ಎಲ್ಲೋ ಒಂದುಕಡೆ ನನ್ನ ಕುಲಕಸುಬು ಚಿನ್ನಬೆಳ್ಳಿ ಕೆಲಸ ಮಾಡಿಕೊಂಡು ಸರಳವಾಗಿ ನೆಮ್ಮದಿಯಿಂದಾದರೂ ಇರಬಹುದಾಗಿತ್ತು" ಎಂದಿದ್ದರು! ನಾಗಭೂಷಣ ಆ ಚಿನ್ನಬೆಳ್ಳಿ ಕೆಲಸಮಾಡಿಕೊಂಡೇ ಇರಬಹುದಾಗಿತ್ತು ಎಂದುಕೊಂಡಿರುವ ಆ ಚಿನ್ನಬೆಳ್ಳಿ ಕೆಲಸದ ಜೀವನದಲ್ಲೂ, ಸುತ್ತಮುತ್ತಲಿನ ಕುಲಕಸುಬಿನವರ ಜತೆ ನಮ್ಮಲ್ಲಿ, 'ಅವರು ಅಪ್ರಾಮಾಣಿಕರೆಂದೂ ತಾನು ಪ್ರಾಮಾಣಿಕನೆಂದೂ' ತೀವ್ರತರವಾದ ಜಗಳಗಳು ಆಗಿ ಬೆಳಗ್ಗೆ ಎದ್ದು ರಾತ್ರಿ ಮಲಗುತ್ತಿದ್ದವು. ಅಷ್ಟೇಕೆ, ನಾಗಭೂಷಣ ಲೋಹಿಯಾ ಅವರ ಸಮಕಾಲೀನರಾಗಿದ್ದರೂ ಅವರಿಗೆ ಲೋಹಿಯಾ ಜತೆಯೂ ಜಗಳವಾಗುತ್ತಿತ್ತು. ಬೇಸತ್ತ ಲೋಹಿಯಾ "ಯಾರ್ರೀ ಆ ಕರ್ನಾಟಕ್‌ಕೀ ಬ್ಲಾಕ್ ಬಾಯ್! ಏನೇನೋ ಪ್ರಶ್ನೆ ಕೇಳ್ತಾನಲ್ಲ. ನನ್ನನ್ನು ಗಾಂಧಿ ಅಂದ್ಕಂಡಿದ್ದಾನಾ, ಹೇಗೆ? ಮೊದಲು ಅವನನ್ನು ಕರ್ನಾಟಕಕ್ಕೆ ಒಗಾಯಿಸಿ" ಅನ್ನುತ್ತಿದ್ದರು. ಇಂಥ ಮಾತಿಗೇ ಕಾಯುತ್ತಿದ್ದ ರಾಜನಾರಾಯಣ್‌ರು ನಾಗಭೂಷಣರನ್ನು ಕಂಕುಳಲ್ಲಿ ಇರುಕಿ ಹಾರುತ ಬಂದು ಕರ್ನಾಟಕದಲ್ಲಿ ಇಳಿಸಿ ಹೋಗುತ್ತಿದ್ದರು.

ಆದ್ದರಿಂದ ಹೀಗೆಲ್ಲ ಯೋಚಿಸುವುದನ್ನು ಬಿಟ್ಟು, ನಮ್ಮ ನಾಗ್ ತಮ್ಮ ಕುಲಕಸುಬೇ ಇದು ಎಂದು ಭಾವಿಸಿ – ಗಾಂಧಿ ಅಂಬೇಡ್ಕರ್ ಲೋಹಿಯಾರನ್ನು ಕರಗಿಸಿ ನಾಣ್ಯ ಮಾಡುವ ಕಾಯಕಕ್ಕೆ ಕೈಹಾಕಲಿ ಎಂದೂ, ಇಲ್ಲಿ ಅಂಬೇಡ್ಕರ್‌ಗೆ ಅನ್ಯಾಯವಾಗದಂತೆ ಎಚ್ಚರ ವಹಿಸಲಿ ಎಂದೂ, ಈ ಕಾರ್ಯದಲ್ಲಿ ರವಿವರ್ಮಕುಮಾರ್, ನಟರಾಜ್ ಹುಳಿಯಾರ್ ಜತೆಗೂಡಿದರೆ, ತಾವು ಜತೆಗೂಡುವುದನ್ನು ನೆನಪಿಸಿಕೊಂಡೇ ಈ ಮೂವರು ತಮಗೆ ತಾವೇ 'ಅಯ್ಯಯ್ಯಪ್ಪ' ಅಂದುಕೊಳ್ಳದೆ ಕೂಡಿದರೆ, ಇಲ್ಲಿ ಸಮಾಜವಾದಕ್ಕೂ ಸೂಲು ಕೂಡಬಹುದು.

■

ಮರಳಿ ಬರಲಿದೆ ಸಮಾಜವಾದ

■ ಡಿ.ಎಸ್. ನಾಗಭೂಷಣ

೨೦೧೦ ಮಾರ್ಚ್ ೨೩, ಡಾ॥ ರಾಮ ಮನೋಹರ ಲೋಹಿಯಾ ಅವರ ೧೦೦ನೇ ಹುಟ್ಟುಹಬ್ಬದ ದಿನ. ಲೋಹಿಯಾ ನಿಧನರಾಗಿ ೪೦ ವರ್ಷಗಳಾಗುತ್ತಾ ಬಂದರೂ, ಲೋಹಿಯಾ ಎಂಬ ಹೆಸರು ಈಗಲೂ ಕರ್ನಾಟಕದ ಸಾಮಾನ್ಯ ಜನತೆಗೂ - ಅವರು ಕರ್ನಾಟಕದವರಲ್ಲವಾದರೂ-ಚಿರಪರಿಚಿತವಾದ ಹೆಸರಾಗಿ ಉಳಿದಿದೆ. ಇದಕ್ಕೆ ಕಾರಣ, ಕರ್ನಾಟಕದ ಅನೇಕ ಪ್ರಮುಖ ರಾಜಕಾರಣಿಗಳು (ದಿ. ಶಾಂತವೇರಿ ಗೋಪಾಲ ಗೌಡ, ದಿ. ಜೆ.ಎಚ್. ಪಟೇಲ್, ಎಸ್. ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಕೋಣಂದೂರು ಲಿಂಗಪ್ಪ, ಎಂ.ಪಿ. ಪ್ರಕಾಶ್, ಸಿದ್ಧರಾಮಯ್ಯ, ವೈಜನಾಥ ಪಾಟೀಲ್, ಎಂ.ನಾಗಪ್ಪ ಇತ್ಯಾದಿ), ಪ್ರತಿಭಾವಂತ ಲೇಖಕ-ಕಲಾವಿದ-ಪತ್ರಕರ್ತರು (ದಿ. ಪಿ.ಲಂಕೇಶ್, ದಿ. ಬೆಸಗರಹಳ್ಳಿ ರಾಮಣ್ಣ, ದಿ. ಶ್ರೀಕೃಷ್ಣ ಆಲನಹಳ್ಳಿ, ದಿ.ಖಾದ್ರಿ ಶಾಮಣ್ಣ, ದಿ. ಕೆ.ವಿ.ಸುಬ್ಬಣ್ಣ, ಯು.ಆರ್.ಅನಂತಮೂರ್ತಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ದೇವನೂರ ಮಹಾದೇವ, ರಾಜಶೇಖರ ನೀರಮಾನ್ವಿ, ಚಂದ್ರಶೇಖರ ಪಾಟೀಲ, ಕಾಳೇಗೌಡ ನಾಗವಾರ, ಕೆ.ಟಿ. ಶಿವಪ್ರಸಾದ್, ಟಿ.ಎನ್. ಸೀತಾರಾಂ, ಕೆ.ಸತ್ಯ, ರಾಜಶೇಖರ ಕೋಟಿ ಇತ್ಯಾದಿ) ಹಾಗೂ ಪ್ರಖ್ಯಾತ ಸಾಮಾಜಿಕ ಚಳುವಳಿಗಾರರು (ದಿ. ಸಿ.ಜಿ.ಕೆ. ರೆಡ್ಡಿ, ದಿ.ಪ್ರೊ॥ ಎಂ.ಡಿ.ನಂಜುಂಡಸ್ವಾಮಿ, ದಿ. ಎನ್.ಡಿ.ಸುಂದರೇಶ್, ಕಡಿದಾಳು ಶಾಮಣ್ಣ, ಪ್ರೊ॥ ಕೆ.ರಾಮದಾಸ್, ಪ್ರೊ॥ ರವಿವರ್ಮ ಕುಮಾರ್ ಇತ್ಯಾದಿ) ಲೋಹಿಯಾವಾದಿಗಳೆಂದೇ ಹೆಸರಾದವರು. ಹಾಗಾಗಿಯೇ, ಇವರಲ್ಲಿ ಕೆಲವರು ದಾರಿ ತಪ್ಪಿದಾಗಲೆಲ್ಲ, ಲೋಹಿಯಾವಾದಿ ಎನಿಸಿಕೊಂಡೂ ಹೀಗೆ ಮಾಡುವರಲ್ಲ ಎಂದು ಜನರಿಂದ ಆಕ್ಷೇಪಣೆ, ಟೀಕೆ ಹಾಗೂ ಛೀಮಾರಿ ಎದುರಿಸಿದವರು! ಈಚಿನ ದಿನಗಳಲ್ಲಿ ಲೋಹಿಯಾವಾದಿಗಳು

ಹೀಗೆ ಛೀಮಾರಿ ಹಾಕಿಸಿಕೊಳ್ಳುವ ಮೂಲಕವೇ, ಲೋಹಿಯಾ ಹೆಸರನ್ನು ಕರ್ನಾಟಕದ ಜನಮನದಲ್ಲಿ ಉಳಿಸುತ್ತಾ ಹೋಗುತ್ತಿರುವುದು ವಿಪರ್ಯಾಸವೆನಿಸುವುದಾದರೂ, ಇದರ ಹಿಂದೆ ಲೋಹಿಯಾ ಬದುಕಿ ಪ್ರತಿನಿಧಿಸುತ್ತಿದ್ದ ಮೌಲ್ಯಗಳ ಬಗ್ಗೆ ಜನಮನದಲ್ಲಿ ಇನ್ನೂ ಉಳಿದಿರುವ ಪ್ರೀತಿ-ಗೌರವಗಳನ್ನು ನಾವು ಗಮನಿಸದೇ ಇರಲಾಗದು.

ಮಾರ್ಚ್ ೨೩, ಕ್ರಾಂತಿವೀರ ಭಗತ್‌ಸಿಂಗ್‌ರನ್ನು ಬ್ರಿಟಿಷ್ ಸರ್ಕಾರ ನೇಣು ಹಾಕಿದ ದಿನ. ಹಾಗಾಗಿ, ಲೋಹಿಯಾ ತಾವು ಬದುಕಿರುವರೆಗೂ ಅಂದು ತಮ್ಮ ಜನ್ಮದಿನವನ್ನು ಆಚರಿಸಿಕೊಳ್ಳುತ್ತಿರಲಿಲ್ಲ ಹಾಗೂ ತಮ್ಮ ಅನುಯಾಯಿಗಳು ಆಚರಿಸಲೂ ಅವಕಾಶ ನೀಡುತ್ತಿರಲಿಲ್ಲ. ಆದರೆ, ತಮ್ಮ ೫೭ನೇ ವಯಸ್ಸಿನಲ್ಲಿ ತೀವ್ರ ಅಸ್ವಸ್ಥರಾಗಿದ್ದಾಗ, ದೇಶದ ಸಾಮಾನ್ಯ ಜನತೆಗೆ ಪ್ರವೇಶವಿರುವಂತಹ ಆಸ್ಪತ್ರೆಯಲ್ಲಿ ಮಾತ್ರ ಚಿಕಿತ್ಸೆ ಪಡೆಯುವ ಹಠ ಮಾಡಿ, ಈಗ ರಾಮ ಮನೋಹರ ಲೋಹಿಯಾ ಆಸ್ಪತ್ರೆ ಎಂದೇ ಹೆಸರಾಗಿರುವ ಸರ್ಕಾರಿ ಆಸ್ಪತ್ರೆ ಸೇರಿ, ಅವರು ೧೯೬೭ರ ಅಕ್ಟೋಬರ್ ೧೨ ರಂದು ನಿಧನರಾದ ನಂತರ, ಪ್ರತಿ ಮಾರ್ಚ್ ೨೩ ರಂದು ರಾಷ್ಟ್ರಾದ್ಯಂತ ಅನೇಕ ಕಡೆ ಮತ್ತು ಕರ್ನಾಟಕದಲ್ಲಿ ಒಂದಲ್ಲ ಒಂದು ಕಡೆ ಅವರ ಹುಟ್ಟು ಹಬ್ಬದ ನೆಪದಲ್ಲಿ ಲೋಹಿಯಾ ನೆನಪು ಕಾರ್ಯಕ್ರಮ ನಡೆಯುತ್ತಲೇ ಬಂದಿದೆ. ದೇಶಾದ್ಯಂತ ಹರಡಿ ಹೋಗಿದ್ದ ತನ್ನ ಅನುಯಾಯಿಗಳ ಹೊರತಾಗಿ, ತನ್ನದೆನ್ನುವ ಒಂದು ಕುಟುಂಬವನ್ನಾಗಲಿ, ತಲೆಯ ಮೇಲೆ ಒಂದು ಸೂರನ್ನಾಗಲಿ, ಒಂದು ನಿರ್ದಿಷ್ಟ ಅಂಚೆ ವಿಳಾಸವನ್ನಾಗಲಿ ಅಥವಾ ಒಂದು ಬ್ಯಾಂಕ್ ಅಕೌಂಟನ್ನಾಗಲಿ ಹೊಂದಿರದಿದ್ದ ಈ ಸಮಾಜವಾದಿ, ಸಮಾಜವಾದದ ಹೆಸರೇ ಹಿನ್ನೆಲೆಗೆ ಸರಿದುಹೋಗುತ್ತಿರುವ ಈ ಕಾಲದಲ್ಲಿ? ಇನ್ನೇನು ಹೋರಾಟಗಾರನ ಬಗ್ಗೆ ಇನ್ನೂ ಹೀಗೆ, ಏಕೆ ಆಕರ್ಷಣೆ ಉಳಿದಿದೆ? ಅದೂ, ರಾಜಕೀಯವಾಗಿ ನಿವೃತ್ತರಾದಂತೆಯೇ ಎಂದು ತೋರುತ್ತಿರುವ ಜಾರ್ಜ್ ಫರ್ನಾಂಡಿಸ್, ರಬಿರಾಯ್ ಹೊರತಾಗಿ ಅವರ ಪ್ರಮುಖ ಶಿಷ್ಯರೆಲ್ಲರೂ ಕಣ್ಮರೆಯಾಗಿದ್ದಾರೆ. ಆದರೂ, ಹೊಸ ಹೊಸ ತಲೆಮಾರುಗಳ ಜನ-ಅವರೆಷ್ಟು ಕಡಿಮೆ ಸಂಖ್ಯೆಯವರಾದರೂ-ಏಕೆ ಈ ಚಳುವಳಿಕಾರನ ಬಗ್ಗೆ ಪ್ರತಿ ವರ್ಷ ಸಮಾಜವಾದಿ ಸಮಾವೇಶಗಳನ್ನೋ, ಅಧ್ಯಯನ ಶಿಬಿರಗಳನ್ನೋ ಪುಸ್ತಕ ಬಿಡುಗಡೆ ಸಮಾರಂಭಗಳನ್ನೋ ಆಯೋಜಿಸುವ ಮೂಲಕ ಇನ್ನೂ ಆಸಕ್ತಿ ತಳೆಯುತ್ತಿದ್ದಾರೆ? ಅದೂ, ಹೋರಾಟ, ಚಳುವಳಿ ಎಂಬುವವೆಲ್ಲ ಇತಿಹಾಸಕ್ಕೆ ಸೇರಿದ ವಿದ್ಯಮಾನಗಳೆಂದು ಹೇಳುತ್ತ, ಇನ್ನು ಮುಂದೆ ಇತಿಹಾಸವಿಲ್ಲವೆಂದು ಏಕಪಕ್ಷೀಯವಾಗಿ ಇತಿಹಾಸದ ಸಾವನ್ನು ಘೋಷಿಸುತ್ತಿರುವ ಜಾಗತೀಕರಣದ ಈ ದಿನಗಳಲ್ಲಿ?

ಕಾರಣವಿದೆ. ಈಗ ಜಗತ್ತಿನಾದ್ಯಂತ ಜಾಗತೀಕರಣದ ವಿವಿಧ ಆವೃತ್ತಿಗಳು ಕಾರ್ಯನಿರತವಾಗಿವೆ. ಅಭಿವೃದ್ಧಿಶೀಲ ದೇಶಗಳಲ್ಲಿ ನವ ಶ್ರೀಮಂತಿಕೆಯ ಹಪಾಹಪಿಗೆ ಸಿಕ್ಕಿರುವ ಹೊಸ ಮಧ್ಯಮ ವರ್ಗದ ದಲ್ಲಾಳಿತನದಲ್ಲಿ, ಅವು ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಯೂ, ಬಡವರನ್ನು ಮತ್ತಷ್ಟು ಬಡವರನ್ನಾಗಿಯೂ ಮಾಡುತ್ತಿರುವುದು

ಈಗ ಎದ್ದು ಕಾಣತೊಡಗಿದೆ. ಜಾಗತೀಕರಣದ ಪರಿಣಾಮವಾಗಿ ಈಗ ೫೦೦ ಬಹುರಾಷ್ಟ್ರೀಯ ಕಂಪನಿಗಳ ಜಗತ್ತಿನ ಶೇ. ೭೦ರಷ್ಟು ವಾಣಿಜ್ಯವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿವೆ. ೩೦೫ ಶ್ರೀಮಂತ ಕುಟುಂಬಗಳು ಜಗತ್ತಿನ ಸಂಪತ್ತಿನ ಶೇ. ೪೦ ರಷ್ಟರ ಮೇಲೆ ಒಡೆತನ ಸಾಧಿಸಿವೆ. ಜಗತ್ತಿನ ಅರ್ಧದಷ್ಟು ಜನಸಂಖ್ಯೆ ಅಂತಾರಾಷ್ಟ್ರೀಯ ಬಡತನ ರೇಖೆ ಕೆಳಗೇ ಬದುಕುತ್ತಿದೆ. ಐದನೇ ಒಂದು ಭಾಗದ ಜನತೆ ದಿನವಹಿ ೪೦ ರೂ. ಗಳಿಗೂ ಕಡಿಮೆ ಆದಾಯದಲ್ಲಿ, ದಟ್ಟ ದಾರಿದ್ರ್ಯವನ್ನು ಎದುರಿಸುತ್ತಿದೆ. ಜಾಗತಿಕ ನಿರುದ್ಯೋಗ ದರ ಹಿಂದೆಂದಿಂಗಿಂತ ಕಡಿದಾಗಿ ಏರುತ್ತಿದೆ. ಇದರಿಂದಾಗಿ ಅಭಿವೃದ್ಧಿಗೊಂಡವೆಂದು ಹೇಳಲಾಗುವ ದೇಶಗಳಲ್ಲೂ, ವಲಸೆ ಹಾಗೂ ಹೊರ ಗುತ್ತಿಗೆ ಕಾನೂನುಗಳ ವಿರುದ್ಧ ಹಿಂಸಾತ್ಮಕ ಪ್ರತಿಭಟನೆಗಳು ಮತ್ತು ಜನಾಂಗೀಯ ಚಳುವಳಿಗಳ ರೂಪದಲ್ಲಿ ಸಾಮಾಜಿಕ ಅಶಾಂತಿ ಆರಂಭವಾಗಿದೆ. ಜಗತ್ತಿನಲ್ಲಿ ಹೆಚ್ಚುವರಿ ಆಹಾರೋತ್ಪಾದನೆ ಆಗುತ್ತಿದ್ದರೂ, ಏಳೂವರೆ ಕೋಟಿ ಮಕ್ಕಳು ಸರಿಯಾದ ಆಹಾರವಿಲ್ಲದೆ ವಿವಿಧ ರೋಗಗಳಿಗೆ ತುತ್ತಾಗಿ ಸಾಯುತ್ತಿದ್ದಾರೆ. ಹತ್ತು ಕೋಟಿ ಮಕ್ಕಳು ಶಾಲೆಯ ಮುಖವನ್ನೇ ಕಂಡಿಲ್ಲವೆಂದು ವಿಶ್ವ ಸಂಸ್ಥೆಯ ವರದಿಯೇ ಹೇಳುತ್ತಿದೆ.

ಇಂತಹ ಅಭಿವೃದ್ಧಿ ಆರ್ಥಿಕತೆಯಿಂದಾಗಿಯೇ, ಜಗತ್ತಿನ ವಾತಾವರಣದ ಶಾಖ ಒಂದೇ ಸಮನೆ ಏರುತ್ತಿದ್ದು (ಕಳೆದ ಐವತ್ತು ವರ್ಷಗಳಲ್ಲಿ ವಾತಾವರಣದ ಶಾಖ ಏರಿಕೆ ಕಳೆದ ನೂರು ವರ್ಷಗಳ ಏರಿಕೆಗೆ ಹೋಲಿಸಿದರೆ ದುಪ್ಪಟ್ಟಾಗಿದೆ), ಅಕಾಲಿಕ ಹಾಗೂ ಹುಚ್ಚು ಮಳೆ, ಪ್ರವಾಹ, ಭೂಕುಸಿತ, ಕಡಲ ಕೊರೆತ ಹಾಗೂ ಉಬ್ಬರ ಮತ್ತು ಜಲಚರ ಜೀವಿಗಳ ಅನೇಕ ರೀತಿಯ ಸಂಕಷ್ಟಗಳಿಗೆ ಕಾರಣವಾಗಿದೆ. ಅಲ್ಲದೆ, ಜಗತ್ತಿನಲ್ಲಿ ಇಂದು ಮಾನವ ವಿಕಾಸದ ಇತಿಹಾಸದಲ್ಲಿಯೇ ಕಂಡರಿಯದ ಗತಿಯಲ್ಲಿ ಜೀವ ಪ್ರಭೇದಗಳು ನಾಶವಾಗುತ್ತಿದೆ. ಈ ಮೊದಲು, ಅಂದರೆ ಈರೋಪಿನ ಪುನರುಜ್ಜೀವನ ಯುಗದಿಂದಾರಂಭವಾದ ವೈಜ್ಞಾನಿಕ ಆವಿಷ್ಕಾರಗಳಿಂದ ಸ್ಫೂರ್ತಿಗೊಂಡ 'ಆಧುನಿಕ' ಎಂದು ಕರೆಯಲಾದ ಜೀವನ ದೃಷ್ಟಿ ಹಾಗೂ ಶೈಲಿಗಳು ಜಗತ್ತಿನಾದ್ಯಂತ ರೂಢಿಗೊಳ್ಳುವವರೆಗೆ; ಮಾನವ ಅಭಿವೃದ್ಧಿಗೆ ಸಿಕ್ಕಿ ಐದು ವರ್ಷಗಳಿಗೊಂದು ಜೀವ ಪ್ರಭೇದ ನಾಶವಾಗುತ್ತಿದ್ದರೆ, ಈಗ ದಿನವೊಂದಕ್ಕೆ ೧೦೦ ಪ್ರಭೇದಗಳು ನಾಶವಾಗುತ್ತಿವೆಯಂತೆ! ಅಪಾರ ಹಣದ ಬೆಂಬಲ ಪಡೆದ ಗೂಢಚರ್ಯೆ ಹಾಗೂ ಪ್ರಚಾರ ರಾಜಕೀಯದ ಮೂಲಕ ಇತರ ಎಲ್ಲ ಅಭಿವೃದ್ಧಿ ಪರ್ಯಾಯಗಳ ವಿಶ್ವಾಸಾರ್ಹತೆಯನ್ನೂ ನಾಶ ಮಾಡಿರುವ ಈ ಮುಕ್ತ ಬಂಡವಾಳವಾದವು, ೧೯೮೯ರಲ್ಲಿ ಸೋವಿಯತ್ ಒಕ್ಕೂಟ ಕುಸಿದು ಬಿದ್ದ ನಂತರ, ಜನಪದ ವಿವೇಕದ ಬಹುಮುಖಿ ಜಗತ್ತನ್ನು ಸರ್ವಜ್ಞ ಗರ್ವದ ಏಕ ಸಂಸ್ಕೃತಿಯ ಆಡಳಿತಕ್ಕೆ ಒಳಪಡಿಸುವ ತನ್ನ ಜಾಗತಿಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.

ಈ ಕಾರ್ಯಕ್ರಮದ ಅಂಗವಾಗಿ, ಈವರೆಗೆ ಜಗತ್ತು ಅನಿಷ್ಟಗಳೆಂದು ಭಾವಿಸುತ್ತಿದ್ದ ಮನುಷ್ಯ ಪ್ರವೃತ್ತಿಗಳಿಗೆ ಹೊಸ ಮಾನ್ಯತೆಯೂ, ಪಾವಿತ್ರ್ಯವೂ ದೊರಕತೊಡಗಿದೆ. ಈ

ಪ್ರವೃತ್ತಿಗಳೆಂದರೆ, ಕೆಲವರ ಕೊನೆ ಮೊದಲಿಲ್ಲದ ಭೋಗಕ್ಕೆ ಎಡೆ ಮಾಡಿಕೊಡುತ್ತಿರುವ ಎಣೆಯಿಲ್ಲದ ಲೌಕಿಕ ಶ್ರೀಮಂತಿಕೆ;ಇದಕ್ಕೆ ಅಗತ್ಯವಾದ ಹೆಚ್ಚುವರಿ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ರೂಪುಗೊಳ್ಳುತ್ತಿರುವ ಅನ್ಯ ಸಮಾಜಗಳ ಮೇಲಿನ ದುರಾಕ್ರಮಣದ ರಾಜಕಾರಣ; ಹಾಗೂ ಇಂತಹ ದುರಾಕ್ರಮಣಗಳನ್ನೆದುರಿಸಲು, ದುರಾಕ್ರಮಣಕ್ಕೊಳಗಾದ ಸಮುದಾಯಗಳು ತಮ್ಮ ಐಕ್ಯತೆಯನ್ನು ಪುರ್ನಸಂಘಟಿಸಿಕೊಳ್ಳಲು ಮತವನ್ನು ಬಳಸಿಕೊಳ್ಳುವ ಮೂಲಕ ಬೆಳೆಸುತ್ತಿರುವ ಮೂಲಭೂತವಾದದ ವಿವಿಧ ಅವತಾರಗಳು. ಇವೆಲ್ಲವೂ ಕ್ರಮವಾಗಿ; ಮನುಷ್ಯನ ಅದಮ್ಯ ಕ್ರಿಯಾಶೀಲತೆಯ ಅನಾವರಣ, ಈ ಅನಾವರಣಕ್ಕೆ ಅಗತ್ಯವಾದ ಮುಕ್ತ ವಾತಾವರಣಕ್ಕೆ ಅಡ್ಡಿ ಮಾಡುತ್ತಿರುವ ಸಮಾಜಗಳನ್ನು ಆಧುನಿಕ ಪ್ರಜಾಪ್ರಭುತ್ವಗಳಾಗಿ ಪುನರ್ರೂಪಿಸುವ ಪವಿತ್ರ ಕೆಲಸ ಹಾಗೂ ಲೌಕಿಕ ಶ್ರೀಮಂತಿಕೆಯಲ್ಲಿ ಕಳೆದುಹೋಗುತ್ತಿರುವ ಮನುಷ್ಯನಲ್ಲಿ ಅಲೌಕಿಕ ಶ್ರದ್ಧೆಯ ಪುನಃಸ್ಥಾಪನೆಯ ಘನ ಕಾರ್ಯದ ಹೆಸರಿನಲ್ಲಿ ಮಾನ್ಯತೆ ಹಾಗೂ ಪಾವಿತ್ರ್ಯಗಳನ್ನು ಪಡೆಯುತ್ತಿವೆ. ಆದರೆ ಇವು ಹುಟ್ಟು ಹಾಕುತ್ತಿರುವ ವಿವಿಧ ರೂಪದ ಹಿಂಸಾಚಾರಗಳು, ಜಗತ್ತನ್ನು ಜನಸಾಮಾನ್ಯರ ಪಾಲಿಗೆ ನರಕವನ್ನಾಗಿಸುತ್ತಿವೆ. ಚಿಲಿ ಮೊದಲ ನರಕವಾದರೆ, ಇರಾಕ್ ಇತ್ತೀಚಿನ ನರಕವಷ್ಟೇ. ಆಫ್ಘಾನಿಸ್ಥಾನ ಮುಂದಿನ ನರಕವಾಗುವ ಎಲ್ಲ ಸಾಧ್ಯತೆಗಳಿವೆ.

ಬೇರು ಮಟ್ಟದ ಪ್ರಜಾಪ್ರಭುತ್ವಕ್ಕಾಗಿ ಬೆಳೆದು ಉಳಿದಿರುವ ಭಾರತಕ್ಕೆ ಇಂತಹ ಅಪಾಯವೇನೂ ಹತ್ತಿರದಲ್ಲಿದ್ದಂತಿಲ್ಲ. ಆದರೆ ಬಡತನವೆಂಬ 'ವ್ಯಸನ'ಕ್ಕೆ ಸಿಕ್ಕಿರುವ ಭಾರತ, ತನ್ನದೇ ದೇಶೀ ಉದ್ಯೋಗ ನಿರ್ಮಾಣದ ಅಭಿವೃದ್ಧಿ ಮಾದರಿಗೆ ಬದಲಾಗಿ, ಎಲ್ಲೆಗಳಿಲ್ಲದ ಸಂಪದಭಿವೃದ್ಧಿಯ ಪಾಶ್ಚಾತ್ಯ ಮಾದರಿಯ ಮೂಲಕ ಬಡತನ ನಿವಾರಿಸಲು ಹೊರಟಿದೆ. ಹಾಗೂ ತನ್ನ ಈ ಅಭಿವೃದ್ಧಿಯ ಅವಸರದಲ್ಲಿ ಅದು ವಿದೇಶಿ ಸಾಲದ ಸುಳಿಗೆ ಸಿಕ್ಕುವ ಅಪಾಯವನ್ನು ಎದುರಿಸುತ್ತಿದೆ. ಈಗ ದೇಶದಲ್ಲಿ ಪಕ್ಷ ಹಾಗೂ ತತ್ವ ಭೇದವಿಲ್ಲದೆ ವಿದೇಶಿ ಬಂಡವಾಳದ ದೊಡ್ಡ ಪ್ರಚಾರಾಂದೋಲನವೇ ನಡೆಯುತ್ತಿದ್ದು; ಅದೀಗ ಸಗಟು ವಲಯಗಳಾಚೆ ಬೆಳೆದು, ಚಿಲ್ಲರೆ ವಲಯಕ್ಕೂ ಪ್ರವೇಶ ಪಡೆಯುವ ಹಂತ ತಲುಪಿದೆ. ಅಂದರೆ ಈ ದೇಶದ ಚಿಲ್ಲರೆ ಅಂಗಡಿಗಳೂ ವಿದೇಶಿ ಬಂಡವಾಳದ ವಶವಾಗುವ ನಿಚ್ಚಳ ಸಾಧ್ಯತೆ ಕಂಡುಬರುತ್ತಿದೆ. ಆದರೆ, ಜಾಗತೀಕರಣ ಸೃಷ್ಟಿಸಿರುವ ಮಾರುಕಟ್ಟೆ ವೈವಿಧ್ಯದ ಹೊಸ ಫಲಾನುಭವಿಗಳಾದ ಈ ದೇಶದ ಮಧ್ಯಮ-ಬುದ್ಧಿಜೀವಿ-ವರ್ಗ, ಈ ಸಾಧ್ಯತೆಯ ದೂರಗಾಮಿ ಪರಿಣಾಮಗಳ ಬಗ್ಗೆ ಚಿಂತಿಸುತ್ತಲೇ ಇಲ್ಲ.(ಭಾರತದಲ್ಲಿ ಬುದ್ಧಿಜೀವಿಗಳು ಜನಸಾಮಾನ್ಯರ ಬಗ್ಗೆ ಚಿಂತಿಸುವ ಪರಂಪರೆಯೇ ಇಲ್ಲವೆಂದು ಭಾರತದಲ್ಲಿ ಅಮೆರಿಕಾದ ರಾಯಭಾರಿಯಾಗಿದ್ದ ಚಿಂತಕ-ಅರ್ಥಶಾಸ್ತ್ರಜ್ಞ ಗುನ್ನರ್ ಮಿರ್ಡಾಲ್ ಈಗಾಗಲೇ ಹೇಳಿದ್ದಾರೆ) ಬದಲಿಗೆ ಅದು, ಈ ಬೆಳವಣಿಗೆಗೆ ಕುಮ್ಮಕ್ಕು ಕೊಡುವಂತೆ ವರ್ತಿಸುತ್ತಿರುವುದು ಈ ದೇಶದ ನಿಜವಾದ ದುರಂತವಾಗಿದೆ.

ಈ ಸಾಲದ ಹಣಕಾಸಿನ ಹೊರೆಗಿಂತ, ಅದು ಒತ್ತಾಯಿಸುವ ಅಭಿವೃದ್ಧಿ ಮಾದರಿ ಹಾಗೂ ಆ ಮೂಲಕ ರೂಢಿಗೊಳಿಸುವ ಆಧುನಿಕ ಎಂದು ಕರೆಯಲಾಗುವ ಜೀವನಶೈಲಿ ನಮ್ಮ ಸ್ವಾತಂತ್ರ್ಯವನ್ನೇ ಕಸಿಯಬಲ್ಲ ಅಪಾಯವನ್ನು ಒಳಗೊಂಡಿದೆ. ಜಾಗತೀಕರಣ ಸೃಷ್ಟಿ ಮಾಡುತ್ತಿರುವ ಅತಿ ಸಮೃದ್ಧಿಯ ದ್ವೀಪಗಳ ಮೂಲಕ ಜನಸಾಮಾನ್ಯರಲ್ಲಿ ಹೆಚ್ಚಿಸಲಾಗುತ್ತಿರುವ ಲೌಕಿಕ ನಿರೀಕ್ಷೆಗಳು, ನಮ್ಮ ಸಮಾಜವನ್ನು ಉಳ್ಳವರ ತೀರದ ದಾಹ ಹಾಗೂ ವಂಚಿತರ ತಣಿಯದ ಹಪಾಹಪಿಯ ನಿತ್ಯದ ರಣರಂಗವನ್ನಾಗಿ ಮಾಡುವ ಎಲ್ಲ ಸಾಧ್ಯತೆಗಳಿವೆ. ಏಕೆಂದರೆ, ಈಗ ಸೃಷ್ಟಿಸಲಾಗುತ್ತಿರುವ ಸಮೃದ್ಧಿಯ ಮಾದರಿ ನಮ್ಮ ಇಡೀ ಸಮಾಜಕ್ಕೆ ವ್ಯಾಪಿಸುವಂತೆ ಮಾಡಲು, ಜಗತ್ತಿನ ಎಲ್ಲ ಪ್ರಾಕೃತಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಖಾಲಿ ಮಾಡಿದರೂ ಸಾಕಾಗದಾಗುತ್ತದೆ. ಹಾಗಾಗಿ ನಾವು ಸಂಪನ್ಮೂಲಗಳನ್ನು ಸೂರೆ ಮಾಡಲು ಹೊಸ ವಸಾಹತುಗಳನ್ನು ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಮೊದಲು ನಮ್ಮ ದೇಶವೇ, ಒಳಗಿನ ಉಳ್ಳವರ ಸುಪರ್ದಿಯಲ್ಲಿನ ಹೊರಗಿನವರ ವಸಾಹತಾಗಿರುತ್ತದೆ – ಈಗಾಗುತ್ತಿರುವಂತೆ.

ಈ ಅರ್ಥದಲ್ಲೇ ಗಾಂಧೀಜಿ, ಜಾಗತೀಕರಣಕ್ಕೆ ಚಾಲನೆ ನೀಡುತ್ತಿರುವ– ಈಗ ಹೈಟೆಕ್ ಎನ್ನಿಸಿರುವ – ಪಶ್ಚಿಮದ ಆಧುನಿಕತೆಯನ್ನು ವಸಾಹತುಶಾಹಿಯ ಸಾಧನ ಎಂದು ಎಚ್ಚರಿಸಿದ್ದುದು. ನೋಬೆಲ್ ಪ್ರಶಸ್ತಿ ವಿಜೇತ ಅಭಿವೃದ್ಧಿ ಅರ್ಥಶಾಸ್ತ್ರಜ್ಞ ಅಮರ್ತ್ಯಸೇನರು, ಅಭಿವೃದ್ಧಿ ಹೆಸರಿನಲ್ಲೀಗ ಭಾರತದ ಅರ್ಧ ಭಾಗ ಕ್ಯಾಲಿಫೋರ್ನಿಯಾ ಆಗು ಅತುರದಲ್ಲಿದ್ದರೆ, ಇನ್ನರ್ಧ ಭಾಗ ಇಥಿಯೋಪಿಯಾ ಆಗುವ ದುರಂತವನ್ನೆದುರಿಸುತ್ತಿದೆ ಎಂದು ಹೇಳಿರುವುದೂ ಅದನ್ನೇ. ಗಾಂಧೀಜಿಯ ಈ ಎಚ್ಚರಿಕೆಯ ಹಿಂದಿನ ಒಳನೋಟವನ್ನು ವಿಸ್ತರಿಸಿಕೊಂಡು, ಭಾರತದ ಸಮಾಜವಾದಿ ಚಳುವಳಿಯು ತನ್ನ ತತ್ವವನ್ನು ರೂಪಿಸಿಕೊಂಡಿತ್ತು. ಹಾಗಾಗಿ, ಈ ದೇಶದ ಮನಸ್ಸಾಕ್ಷಿಯಂತಿದ್ದ ಸಮಾಜವಾದಿ ಚಳುವಳಿಯು ಗಾತ್ರದಲ್ಲಲ್ಲದಿದ್ದರೂ, ಗುಣದಲ್ಲಾದರೂ ಕ್ರಿಯಾಶೀಲವಾಗಿರುವವರೆಗೆ; ಈ ಪಶ್ಚಿಮದ ಆಧುನೀಕರಣವೇ ಅಭಿವೃದ್ಧಿ ಎಂಬ, ನಮ್ಮ ಆಡಳಿತಗಾರರಲ್ಲಿ ಬಿತ್ತಲ್ಪಟ್ಟಿದ್ದ ಮೂಢನಂಬಿಕೆ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿರಲಿಲ್ಲ. ನೆಹರೂ ಕಾಲದಿಂದ ನರಸಿಂಹರಾವ್ ಪ್ರಧಾನಿಯಾಗುವವರೆಗೆ ನಮ್ಮ ಅಭಿವೃದ್ಧಿ ಆಡಳಿತವು ಮಿಶ್ರ ಎಂಬ ಗೊಂದಲಮಯ ಅರ್ಥ ವ್ಯವಸ್ಥೆಯ ಆಧಾರದ ಮೇಲೆಯೇ ನಡೆಯುತ್ತಿತ್ತು. ಆದರೆ ಅದನ್ನು ಈಗ ತಪ್ಪಾಗಿ ಮತ್ತು ಉದ್ದೇಶಪೂರ್ವಕವಾಗಿ ಸಮಾಜವಾದಿ ವ್ಯವಸ್ಥೆ ಎಂದು ಕರೆದು, ಸಮಾಜವಾದದ ವಿಶ್ವಾಸಾರ್ಹತೆಯನ್ನೇ ಹಾಳು ಮಾಡುವ ಪ್ರಯತ್ನ ಮಾಡಲಾಗುತ್ತಿದೆ.

ಅದೇನೇ ಇರಲಿ, ಅಷ್ಟು ದೀರ್ಘಕಾಲದವರೆಗೆ ಜಾರಿಯಲ್ಲಿದ್ದ ಅತ್ತ ಸರಿಯಾದ ಸಮಾಜವಾದವೂ ಇಲ್ಲ, ಇತ್ತ ಸರಿಯಾದ ಬಂಡವಾಳವಾದವೂ ಇಲ್ಲ ಎಂಬ

ಅಭಿವೃದ್ಧಿಯ ದ್ವಂದ್ವ ನೀತಿಯಿಂದಾಗಿ, ಈ ಎರಡರ ಮಧ್ಯೆ ಭಾರತ ಕುಸಿದು ಬಿದ್ದುದಂತೂ ಸತ್ಯ. ಆದರೆ ಇದಕ್ಕೋಸ್ಕರವೇ ಕಾಯುತ್ತಿದ್ದಂತೆ, ಭಾರತವನ್ನು ಕೈಹಿಡಿದೆತ್ತಲು ನರಸಿಂಹರಾವ್ ಕಾಲದಿಂದೀಚೆಗೆ ವಿಶ್ವಬ್ಯಾಂಕ್, ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಆಡಳಿತ ಹಾಗೂ ವಿಶ್ವ ವ್ಯಾಪಾರ ಸಂಸ್ಥೆಗಳ ವಕ್ತಾರರಾದ ಜಾಗತೀಕರಣವಾದಿಗಳು ಮುಂದೆ ಬಂದಿರುವುದು ಮಾತ್ರ ಅನೇಕ ಪ್ರಶ್ನೆಗಳನ್ನು ಎತ್ತಿದೆ. ಈ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಆಡಳಿತ ಮತ್ತು ನೀತಿ ನಿರೂಪಣೆಯಲ್ಲಿ ಬಹು ವರ್ಷಗಳ ಕಾಲ ಭಾಗಿಯಾಗಿದ್ದ ಡಾ॥ ಮನಮೋಹನಸಿಂಗ್ ಆ ಬಿಕ್ಕಟ್ಟಿನ ಸಮಯದಲ್ಲಿ ಭಾರತಕ್ಕೆ ಮುಕ್ತಿ ದೊರಕಿಸಿಕೊಡುವ ಅರ್ಥಮಂತ್ರಿಯಾಗಿ, ಮೊಂಟೆಕ್ ಸಿಂಗ್ ಅಹ್ಲುವಾಲಿಯ ಮುಂತಾದ ಮುಕ್ತ ಬಂಡವಾಳವಾದಿ ಅರ್ಥಶಾಸ್ತ್ರಜ್ಞರ ಪರಿವಾರದೊಂದಿಗೆ ಬಂದು ಭಾರತದ ಆರ್ಥಿಕ ಪುನಾರಚನೆಯಲ್ಲಿ ತೊಡಗಿಕೊಂಡಿದ್ದಾರೆ. ಆಗಿನಿಂದ ಭಾರತ ಪೂರ್ಣವಾಗಿ ಮುಕ್ತ ಬಂಡವಾಳವಾದದ ಪ್ರಭಾವಕ್ಕೆ ಸಿಕ್ಕಿದೆ. ಈ ಮಧ್ಯೆ ಬಂದು ಹೋದ, ಎಲ್ಲ ರಂಗಗಳಲ್ಲೂ ಅಪ್ಪಟ 'ಭಾರತೀಯತೆ'ಯನ್ನು ಪ್ರತಿಪಾದಿಸುತ್ತಿದ್ದ ಪಕ್ಷದ ನೇತೃತ್ವದ ಸರ್ಕಾರವೂ ಈ ಮುಕ್ತ ಬಂಡವಾಳವಾದದ ಬೆಂಬಲಕ್ಕೆ ನಿಂತು, ತನ್ನ ಅಪ್ಪಟ ಭಾರತೀಯತೆಯ ಬಣ್ಣವನ್ನು ಬಯಲು ಮಾಡಿಕೊಂಡದ್ದೂ ಆಗಿದೆ.

ಈ ಮುಕ್ತ ಬಂಡವಾಳದ ಯಶಸ್ಸು ಅಡಗಿರುವುದೇ ಲಾಭಾಧಾರಿತವಾದ ಕೈಗಾರಿಕಾ ಸಮಾಜದ ನಿರ್ಮಾಣದಲ್ಲಿ. ಅದೀಗ ಭಾರತದಲ್ಲಿ ಆರಂಭವಾಗಿದೆ. ಪ್ರಧಾನವಾಗಿ ಕೃಷಿ ಸಮಾಜವಾಗಿ ತನ್ನ ಕಷ್ಟ ಸುಖಗಳನ್ನು ತನ್ನ 'ಮರ್ಯಾದೆ'ಯ ಪರಿಮಿತಿಯಲ್ಲೇ ಹೇಗೋ ನಿರ್ವಹಿಸಿಕೊಳ್ಳುತ್ತಿದ್ದ ಭಾರತವೀಗ ವಿದೇಶಿ ಬಂಡವಾಳದ ಆಧುನೀಕರಣದ ಆಧಾರದ ಮೇಲೆ ಕೈಗಾರಿಕಾ ಸಮಾಜವಾಗ ಹೊರಟಿದೆ. ಇದರ ಪರೋಕ್ಷ ಒತ್ತಡಗಳು ರೈತರನ್ನು ಆತ್ಮಹತ್ಯೆಗೆ ದೂಡುತ್ತಿದ್ದರೆ, ಪ್ರತ್ಯಕ್ಷ ಒತ್ತಡಗಳು ಅವನನ್ನು ನಿರ್ವಸಿತನನ್ನಾಗಿ ಮಾಡುತ್ತಿವೆ. ಈಗ ಎಲ್ಲೆಡೆ ಚಾಲ್ತಿಗೆ ಬರುತ್ತಿರುವ ವಿಶೇಷ ಆರ್ಥಿಕ ವಲಯಗಳ ಯೋಜನೆಯು ಕೃಷಿ ಸಮಾಜದ ಗೋರಿಯ ಮೇಲೆ ಕೈಗಾರಿಕಾ ಸಮಾಜದ ನಿರ್ಮಾಣಕ್ಕೆ ಹಾಕಲಾಗುತ್ತಿರುವ ಅಸ್ತಿವಾರವೇ ಆಗಿದೆ. ತೆರಿಗೆ ರಿಯಾಯಿತಿಯ ಬೃಹತ್ ಖಾಸಗಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ರೈತರ ಸಾವಿರಾರು ಎಕರೆ ಭೂಮಿಯನ್ನು ಖಾಸಗಿ ಬಂಡವಾಳಗಾರರಿಗೊಪ್ಪಿಸುವುದೇ ಈ ಯೋಜನೆಯ ಮೊದಲ ಹೆಜ್ಜೆಯಾಗಿದೆ. ಖಾಸಗಿ ಬಂಡವಾಳಗಾರರು ಈ ಭೂಮಿಯ ಒಂದು ಭಾಗವನ್ನು ರಿಯಲ್ ಎಸ್ಟೇಟ್ ವ್ಯಾಪಾರಕ್ಕೆ ಬಳಸಿಕೊಳ್ಳಲು ಈ ಯೋಜನೆಯಲ್ಲಿ ಅವಕಾಶವಿದೆ! ಮನುಷ್ಯ ಮತ್ತು ಭೂಮಿಯ ಸಂಬಂಧವನ್ನು ಪೂರ್ಣವಾಗಿ ವಾಣಿಜ್ಯೀಕರಿಸುತ್ತಿರುವ ಈ ಯೋಜನೆ, ಗ್ರಾಮ ಸಂಸ್ಕೃತಿಯ ಆಧಾರದ ಮೇಲೆ ತನ್ನ ವ್ಯಕ್ತಿತ್ವವನ್ನು ಕಟ್ಟಿಕೊಂಡಿರುವ ಸಾಮಾನ್ಯ ಭಾರತೀಯನ–ಆತ ಗ್ರಾಮ ನಿವಾಸಿಯಾಗಿರದಿದ್ದರೂ–ಮಾನಸಿಕತೆಯನ್ನೇ ಬುಡಮೇಲುಗೊಳಿಸುವಂತಹುದಾಗಿದೆ.

ಹಾಗೆ ನೋಡಿದರೆ, ಭಾರತಕ್ಕೆ ಇದೊಂದು ಮಾನಸಿಕ ಪ್ರಳಯವೇ ಆಗಲಿದೆ. ಈ ಪ್ರಳಯದ ಮೊದಲ ಕಂಪನಗಳು ಈಗ ಹರ್ಯಾಣ-ಪಂಜಾಬ್-ಪ.ಬಂಗಾಳ-ಒರಿಸ್ಸಾ-ಜಾರ್ಖಂಡ್-ಚತ್ತೀಸ್‌ಗಡ್ ಮಹಾರಾಷ್ಟ್ರ-ಕರ್ನಾಟಕಗಳಲ್ಲಿ ರೈತರ ಆತ್ಮಹತ್ಯೆ ಮತ್ತು ಆದಿವಾಸಿಗಳ ಬಂಡಾಯಗಳ ರೂಪಗಳಲ್ಲಿ ಮೆಲ್ಲಗೆ ಕೇಳಲಾರಂಭಿಸಿದೆ.

ಭಾರತೀಯ ಸಮಾಜವಾದಿ ಚಳುವಳಿಗೆ ಒಂದು ಸ್ಪಷ್ಟ ತಾತ್ವಿಕ ರೂಪ ನೀಡಿದ್ದ ಡಾ॥ ರಾಮಮನೋಹರ ಲೋಹಿಯಾ ಈ ಪ್ರಳಯವನ್ನು ಮುನ್ನೋಡಿದ್ದರು. ಬಂಡವಾಳ ಬೆಳೆಯುವುದೇ ಅನ್ಯಾಕ್ರಮಣ ಮತ್ತು ಮೂಲನಿವಾಸಿಗಳ ನಿರ್ವಸತೀಕರಣಗಳ ಮೂಲಕ ಎಂಬುದು ಅವರ ವಾದವಾಗಿತ್ತು. (ರೆಡ್ ಇಂಡಿಯನ್ನರು ಕಾಪಾಡಿಕೊಂಡು ಬಂದಿದ್ದ ಸಮೃದ್ಧ ಪ್ರಾಕೃತಿಕ ಸಂಪನ್ಮೂಲಗಳ ಅಮೆರಿಕಾ, ಆಧುನಿಕ ಅಮೆರಿಕಾ ಹೇಗಾಯಿತೆಂಬುದನ್ನು ನೆನಪಿಸಿಕೊಳ್ಳಿ) ಹಾಗಾಗಿ ಬಂಡವಾಳವಾದವು ಒಂದು ಘಟ್ಟದವರೆಗೆ ಪ್ರಗತಿಶೀಲವಾಗಿದ್ದು, ನಂತರ ತಾನೇ ಸೃಷ್ಟಿಸಿಕೊಳ್ಳುವ ವೈರುಧ್ಯಗಳಿಂದಾಗಿ ಸಾಮ್ಯವಾದ (ಕಮ್ಯುನಿಸಂ)ಕ್ಕೆ ದಾರಿ ಮಾಡಿಕೊಡುತ್ತದೆ ಎಂಬ ಮಾರ್ಕ್ಸ್‌ವಾದಿ ವಿಶ್ಲೇಷಣೆಯನ್ನು ಅವರು ತಿರಸ್ಕರಿಸಿದ್ದರು. ಬಂಡವಾಳವಾದವು ಜಗತ್ತಿನ ಒಂದು ಭಾಗವನ್ನು ಶೋಷಿಸುತ್ತಾ, ಇನ್ನೊಂದು ಭಾಗವನ್ನು ಸಮೃದ್ಧಗೊಳಿಸುತ್ತಾ ಹೋಗುತ್ತದೆ. ಅಲ್ಲದೆ, ಶೋಷಿತ ಪ್ರದೇಶಗಳಲ್ಲಿ ತನ್ನ ಚೇಲಾ ಬಂಡವಾಳವಾದಿಗಳ ಮೂಲಕ ಬಂಡವಾಳವಾದದ ಪ್ರಗತಿಶೀಲತೆಯ ಪ್ರಚಾರ ಮಾಡುತ್ತಾ ತನ್ನ ಶೋಷಣೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ ಎಂಬುದು ಲೋಹಿಯಾ ಅವರ ವಿಶ್ಲೇಷಣೆಯಾಗಿತ್ತು. ಬಂಡವಾಳವಾದದ ಆಧಾರವಾದ ಸಮೂಹ (ಸಾಮೂಹಿಕ ಅಲ್ಲ) ಮತ್ತು ಗ್ರಾಹಕವಾದಿ (ಅಂದರೆ, ಅಗತ್ಯವಲ್ಲದ ಆದರೆ ಶೋಕಿಯ) ಉತ್ಪಾದನೆಯನ್ನು ಪ್ರಚೋದಿಸುವ ತಂತ್ರಜ್ಞಾನವನ್ನೇ ನಂಬಿದ ಸಾಮ್ಯವಾದ ಕೂಡಾ ಪಶ್ಚಿಮದ ಆಧುನೀಕರಣದ ಮಾದರಿಯನ್ನೇ ಅವಲಂಬಿಸಿದೆ. ಆದುದರಿಂದ ಅದು ಕೂಡಾ ವಸಾಹತುಗಳನ್ನು ಸೃಷ್ಟಿಸಿಕೊಂಡೇ ಬದುಕುಬೇಕಾಗುತ್ತದೆ. ಇಲ್ಲವೇ ತನ್ನ ಜನವನ್ನೇ ವಸಾಹತುದಾರರಂತೆ ದುಡಿಸಿಕೊಳ್ಳಬೇಕಾಗುತ್ತದೆ ಮತ್ತು ಆ ಮೂಲಕ ತನ್ನ ಆತ್ಯಂತಿಕ ಆದರ್ಶವಾದ ಸಮಾನತೆಯನ್ನು ಧಿಕ್ಕರಿಸಬೇಕಾಗುತ್ತದೆ ಎಂಬುದು ಅವರ ಕಾಣ್ಕೆಯಾಗಿತ್ತು. ಈ ಕಾಣ್ಕೆ ನಿಜವಾಗಿ, ಸೋವಿಯತ್ ಒಕ್ಕೂಟ ಪ್ರತಿನಿಧಿಸುತ್ತಿದ್ದ ಸಾಮ್ಯವಾದ (ಸಾಮ್ಯವಾದದ ಇನ್ನೊಂದು ರೂಪದ ಪ್ರತಿನಿಧಿಯಂತಿದ್ದ ಚೀನಾ ಬಹು ಹಿಂದೆಯೇ-ಮಾವೋ ನಂತರದಲ್ಲೇ-ಬಹಿರಂಗವಾಗಿ ಘೋಷಿಸಿಕೊಳ್ಳದೆ, ತನ್ನ ಸಾಮ್ಯವಾದಿ ಪ್ರಯೋಗವನ್ನು ಕೈಬಿಟ್ಟಿರುವುದು ಎಲ್ಲರಿಗೆ ಗೊತ್ತಿದೆ.) ವಿಫಲವಾಗಿದೆ ಮತ್ತು ಅದು ಬಂಡವಾಳವಾದದ ದಿಗ್ವಿಜಯಕ್ಕೆ ಕಾರಣವಾಗಿದೆ. ಈ ದಿಗ್ವಿಜಯದ ಇನ್ನೊಂದು ಹೆಸರೇ ಜಾಗತೀಕರಣವಾಗಿದೆ.

ಭಾರತ ಈ ದಿಗ್ವಿಜಯಕ್ಕೆ ಬಲಿಯಾಗಬಾರದೆಂದೇ ಲೋಹಿಯಾ, ಹೊಸ ಉತ್ಪಾದನಾ ಸಂಸ್ಕೃತಿಯನ್ನು ಪ್ರತಿಪಾದಿಸಿದ್ದರು. ಅಷ್ಟೇ ಅಲ್ಲ, ಇಡೀ ಜಗತ್ತು ಈ

ಸಂಸ್ಕೃತಿಯನ್ನು ಅಳವಡಿಸಿಕೊಂಡು ಬಂಡವಾಳವಾದ ಹಾಗೂ ಸಾಮ್ಯವಾದಗಳ ಅಪಾಯಗಳನ್ನು ಮೀರಿನಿಂತು, ಶೋಷಣೆಯಿಂದ ಮುಕ್ತಗೊಳ್ಳಬಹುದೆಂದು ಭಾವಿಸಿದ್ದರು. ಸ್ವಾತಂತ್ರ್ಯ, ಸಮಾನತೆ ಮತ್ತು ಸಂಪದಭಿವೃದ್ಧಿಗಳ ಅವಿಭಾಜ್ಯತೆಯೇ (ಒಂದನ್ನು ಬಿಟ್ಟು ಇನ್ನೊಂದು ಇರಲಾಗದ್ದು) ಲೋಹಿಯಾ ಪ್ರತಿಪಾದಿಸಿದ ಸಮಾಜವಾದದ ಹೆಗ್ಗುರುತಾಗಿದ್ದು, ಇದಕ್ಕಾಗಿ ಅವರು ಗಾಂಧೀಜಿಯ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆ ಹಾಗೂ ಜರ್ಮನಿಯ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ಷುಮೇಕರ್‌ನ 'ಸಣ್ಣದು ಸುಂದರ' ಪರಿಕಲ್ಪನೆಗಳನ್ನು ಬೆಸೆದು, ವಿಸ್ತರಿಸಿದರು. ಈ ಸಂಬಂಧವಾಗಿ, ಹಬೆ ಅಥವಾ ಸ್ಥಳೀಯ ವಿದ್ಯುತ್ತಿನ ಮೇಲೆ ಚಲಿಸುವ ಹಾಗೂ ಸ್ಥಳೀಕರ ನಿಯಂತ್ರಣ ದಾಟಿ ಹೋಗದಂತಹ ಸಣ್ಣ ಘಟಕಗಳ ಯಂತ್ರ ವ್ಯವಸ್ಥೆಯ ಆವಿಷ್ಕಾರಕ್ಕಾಗಿ ಅವರು ಜಾಗತಿಕ ಸಮಾಜವಾದಿ ವೇದಿಕೆಗಳಲ್ಲಿ ಕರೆಕೊಟ್ಟಿದ್ದರು. ಈ ಕರೆಯ ಹಿಂದೆ ಬೃಹತ್ ಉತ್ಪಾದನಾ ತಂತ್ರಜ್ಞಾನವು ಸ್ಥಳೀಯ ಜೀವನ ಕ್ರಮವನ್ನು ಹೊರಗಿನಿಂದ ಬುಡಮೇಲುಗೊಳಿಸಿ, ಸಮುದಾಯಗಳನ್ನು ಕ್ರಮೇಣ ಅವರಿಗೇ ಗೊತ್ತಿಲ್ಲದ ರೀತಿಗಳಲ್ಲಿ ಎಲ್ಲ ರೀತಿಯ ದುರಾಕ್ರಮಣಕ್ಕೆ ಈಡು ಮಾಡುವಂತಹದ್ದು ಎಂಬ ಒಳನೋಟವಿತ್ತು. ಹಾಗಾಗಿಯೇ, ವಿಜ್ಞಾನ-ತಂತ್ರಜ್ಞಾನಗಳ ನಿರಂತರ ಅನ್ವಯ ಹಾಗೂ ಆವಿಷ್ಕಾರಗಳನ್ನು ಆಧರಿಸಿದ ಸದಾ ಏರುತ್ತಾ ಹೋಗುವ ಜೀವನಮಟ್ಟದ ಆಸ್ಫೋಟನಕಾರಿ ಸಂಸ್ಕೃತಿಗೆ ಬದಲಾಗಿ ಸ್ಥಳೀಯ ಇತಿ ಮಿತಿಗಳುಳ್ಳ ಒಂದು ಸಭ್ಯ ಜೀವನಮಟ್ಟದ ಸಂಸ್ಕೃತಿಯನ್ನಾಧರಿಸಿದ ಹೊಸ ಸಮಾಜವಾದಿ ನಾಗರೀಕತೆಯ ಕನಸನ್ನು ಲೋಹಿಯಾ ಜಗತ್ತಿನ ಮುಂದಿಟ್ಟಿದ್ದರು. ಬಂಡವಾಳವಾದಿ ಸರಕು ಉತ್ಪಾದನಾ ತಂತ್ರವನ್ನೇ ಅನುಸರಿಸುತ್ತಾ, ವಿತರಣೆಯಲ್ಲಿ ಮಾತ್ರ ಸಮಜವಾದಿ ತತ್ವವನ್ನು ಅಳವಡಿಸಿಕೊಳ್ಳುವ ಐರೋಪ್ಯ ಸಮಾಜವಾದ, ಒಂದಲ್ಲ ಒಂದು ದಿನ ಬಂಡವಾಳವಾದಕ್ಕೆ ಶರಣಾಗುವುದೆಂದು ಅವರು ಎಚ್ಚರಿಸಿದ್ದರು. ಅವರ ಮಾತು ಇಂದು, ಐರೋಪ್ಯ ದೇಶಗಳಲ್ಲಿ ಸಮಾಜವಾದಿ ಚಳುವಳಿಯೇ ಅವಶೇಷ ರೂಪ ತಾಳಿ, ಜಾಗತೀಕರಣಕ್ಕೆ ಅವಕಾಶ ಮಾಡಿಕೊಡುವ ಮೂಲಕ ನಿಜವಾಗಿದೆ.

ಭಾರತದಲ್ಲಿಯೂ ಸಮಾಜವಾದಿ ಚಳುವಳಿಯು ಅವಶೇಷ ರೂಪದಲ್ಲಿದ್ದರೆ ಅದಕ್ಕೆ ಮುಖ್ಯ ಕಾರಣ, ಸ್ವಾತಂತ್ರ್ಯ ಹೋರಾಟದಲ್ಲಿ ಸಮೂಹ ನಾಯಕರಂತೆ ಪ್ರತಿಬಿಂಬಿಸಲ್ಪಟ್ಟಿದ್ದ ನೆಹರೂರ ವರ್ಚಸ್ಸಿಗೆ ಬೆರಗಾಗಿದ್ದ ದೇಶಕ್ಕೆ, ಅವರು ಪ್ರತಿಪಾದಿಸಿದ ಪಶ್ಚಿಮದ ಆಧುನೀಕರಣದ ಸಂಭ್ರಮ-ಸಡಗರಗಳಲ್ಲಿ, ಲೋಹಿಯಾ ಇರಲಿ; ಗಾಂಧಿ ದರ್ಶನವನ್ನೂ ಅರ್ಥ ಮಾಡಿಕೊಳ್ಳುವ ವ್ಯವಧಾನವಾಗಲೀ, ಸಂಘಟಿತ ವಿವೇಕವಾಗಲೀ ಇಲ್ಲದಿದ್ದುದು. ಇದಕ್ಕಾಗಿ ದನಿ ಎತ್ತಬೇಕಾಗಿದ್ದ ಗಾಂಧಿವಾದಿಗಳನ್ನು ನೆಹರೂ, ಖಾದಿ-ಗ್ರಾಮೋದ್ಯೋಗಗಳಿಗೂ ಒಂದಷ್ಟು ಹಣ ನೀಡಿ ಸಂತುಷ್ಟಗೊಳಿಸಿದ್ದರು. ಸ್ವಾತಂತ್ರ್ಯಾನಂತರದ ಗಾಂಧಿವಾದಿಗಳಲ್ಲಿ, ನೆಹರೂ ಅನುಯಾಯಿಗಳನ್ನು ಸರ್ಕಾರಿ ಗಾಂಧಿವಾದಿಗಳೆಂದು, ವಿನೋಬಾ ಅನುಯಾಯಿಗಳನ್ನು ಆಶ್ರಮ ಗಾಂಧಿವಾದಿಗಳೆಂದು,

ಸಮಾಜವಾದಿಗಳನ್ನು ಬಂಡುಕೋರ ಗಾಂಧಿವಾದಿಗಳು ಎಂದು ವಿಂಗಡಿಸಿದ್ದ ಲೋಹಿಯಾ; ಮೊದಲಿಬ್ಬರ ಒಕ್ಕೂಟದಲ್ಲಿ ಗಾಂಧಿವಾದ ನಿಂತ ನೀರಾಗಿದ್ದು, ಅದನ್ನು ಚಲನಶೀಲಗೊಳಿಸುವ ಹೊಣೆ ಮೂರನೇ ಗುಂಪಿನದಾಗಿದೆ ಎಂದು ಭಾವಿಸಿದ್ದರು. ಆದರೆ ಸಮಾಜವಾದಿ ಚಳುವಳಿಯ ದುರಂತವೆಂದರೆ, ೧೯೫೨ರ ಮೊದಲ ಮಹಾ ಚುನಾವಣೆಯಲ್ಲಿ ಅನುಭವಿಸಿದ ದೊಡ್ಡ ಸೋಲಿನ ನಂತರ ಈ ಬಂಡುಕೋರ ಸಮಾಜವಾದಿಗಳಲ್ಲನೇಕರು ಹಂತಾನುಹಂತವಾಗಿ, ಒಂದಲ್ಲ ಒಂದು ವೈಯಕ್ತಿಕ ಅಥವಾ ತಾತ್ವಿಕ ಕಾರಣ ಅಥವಾ ನೆಪವೊಡ್ಡಿ, ಸರ್ಕಾರಿ ಮತ್ತು ಆಶ್ರಮವಾಸಿ ಗಾಂಧಿವಾದಿಗಳ ಒಕ್ಕೂಟದೊಡನೆ ಸಂಪರ್ಕವೇರ್ಪಡಿಸಿಕೊಂಡು, ಸಮಾಜವಾದಿ ಚಳುವಳಿಯ ಅನನ್ಯತೆ–ವಿಶ್ವಾಸಾರ್ಹತೆಗಳಿಗೆ ಧಕ್ಕೆ ತರತೊಡಗಿದರು. ಇವರಲ್ಲಿ ಭಾರತೀಯ ಸಮಾಜವಾದಿ ಚಳುವಳಿಯ ಮೂಲ ಕರ್ತೃಗಳಲ್ಲೊಬ್ಬರೂ ಮತ್ತು ಮುಂದೆ ೧೯೭೫ರಲ್ಲಿ ಸಂಪೂರ್ಣ ಕ್ರಾಂತಿಯ ನಾಯಕತ್ವ ವಹಿಸಿಕೊಂಡ ಜೆ.ಪಿ. ಕೂಡಾ ಸೇರಿದ್ದರೆಂದಮೇಲೆ ಈ ಆಘಾತದ ಪರಿಣಾಮಗಳನ್ನು ಊಹಿಸಿಕೊಳ್ಳಬಹುದಾಗಿದೆ. ಇದರ ಜೊತೆಗೆ ಲೋಹಿಯಾ ಅವರ ತಾತ್ವಿಕ ಹಠಮಾರಿತನವೂ ಮತ್ತು ಅವರ ಬೆಂಬಲಿಗರ ಅನಿರ್ಬಂಧಿತ ಅಶಿಸ್ತೂ ಸೇರಿಕೊಂಡಿತ್ತು. ಹೀಗಾಗಿ ಮುಖ್ಯವಾಹಿನಿ ರಾಜಕಾರಣದೊಂದಿಗೆ ಅಲ್ಲದೆ, ತನ್ನವರೊಡನೆ ಕೂಡಾ ಹೋರಾಡಬೇಕಾಗಿ ಬಂದ ಲೋಹಿಯಾ ಒಂಟಿಯಾಗಿ ಹೋದರು.

ಸ್ವಾತಂತ್ರ್ಯ ಹೋರಾಟದಲ್ಲಿ, ವಿಶೇಷವಾಗಿ ೧೯೪೨ರ 'ದೇಶ ಬಿಟ್ಟು ತೊಲಗಿ' ಚಳುವಳಿಯ ಸಂದರ್ಭದಲ್ಲಿ; ಆ ನಂತರ ದೇಶ ವಿಭಜನೆ ಸಂದರ್ಭದ ಕೋಮು ದಳ್ಳುರಿಯ ಕಾಲದಲ್ಲಿ ತಮ್ಮ ಉಜ್ವಲ ಬೌದ್ಧಿಕ ಸಂವಾದಗಳ ಮೂಲಕ ಹಾಗೂ ವಿರೋಚಿತ ಸಾಹಸಗಳ ಮೂಲಕ ಲೋಹಿಯಾ ಗಾಂಧೀಜಿಯ ಮೆಚ್ಚಿನ ಕಿರಿಯ ಶಿಷ್ಯರಾಗಿದ್ದರು. (ಸ್ವಾತಂತ್ರ್ಯಾನಂತರ ದೇಶ ಹಿಡಿದಿರುವ ದಾರಿ ಬಗ್ಗೆ ಬಹು ಚಿಂತಿತರಾಗಿದ್ದ ಗಾಂಧೀಜಿ, ತಾವು ಕೊಲೆಯಾಗುವ ಒಂದೆರಡು ದಿನಗಳ ಮುನ್ನು ಲೋಹಿಯಾರೊಂದಿಗೆ ಆಪ್ತ ಸಮಾಲೋಚನೆ ನಡೆಸಿ, ಬಹುಮುಖ್ಯ ಮಾತುಕತೆಗಾಗಿ ಅವರನ್ನು ಜನವರಿ ೩೦ ರಂದು ತಮ್ಮಲ್ಲಿಗೆ ಆಹ್ವಾನಿಸಿದ್ದರು.) ಆದರೆ ಗಾಂಧೀಜಿಯ ರಾಜಕೀಯ ಉತ್ತರಾಧಿಕಾರಿಯೆನಿಸಿದ್ದ ನೆಹರೂ ಬದುಕಿರುವವರೆಗೆ ಅವರು ಸಂಸತ್ತನ್ನು ಪ್ರವೇಶಿಸಲಾಗಲಿಲ್ಲ ಎಂಬ ಸಂಗತಿ, ಒಂದು ಕಾಲದಲ್ಲಿ ಆಪ್ತ ಸಂಗಾತಿಗಳಾಗಿದ್ದ ನೆಹರೂ–ಲೋಹಿಯಾ ನಡುವಣ ಸಂಬಂಧ ಎಷ್ಟು ವಿಷಮಿಸಿತ್ತು ಮತ್ತು ಸರ್ಕಾರಿ ಗಾಂಧಿವಾದ ಹಾಗೂ ಆಶ್ರಮ ಗಾಂಧಿವಾದಿಗಳ ಒಕ್ಕೂಟ ಲೋಹಿಯಾ ನೇತೃತ್ವದ ಸಮಾಜವಾದಿ ಚಳುವಳಿಯನ್ನು ಹೇಗೆ ಹತ್ತಿಕ್ಕಿತ್ತು ಎಂಬುದನ್ನು ಸೂಚಿಸುತ್ತದೆ.

ಇದೆಲ್ಲದುದರಿಂದಾಗಿ ಹತಾಶರಾದಂತೆ ತೋರಿದ ಲೋಹಿಯಾ, ತಮ್ಮ ಕೊನೆಯ ದಿನಗಳಲ್ಲಿ 'ಕಾಂಗ್ರೆಸ್ಸೇತರವಾದ'ವೊಂದೇ ದೇಶಕ್ಕೆ ಸದ್ಯದ ಪರಿಹಾರವೆಂದು ತೀರ್ಮಾನಿಸಿ,

ಅದಕ್ಕಾಗಿ ತಮ್ಮೆಲ್ಲ ಶಕ್ತಿಯನ್ನು ವಿನಿಯೋಗಿಸಿ ಯಶಸ್ವಿಯೂ ಆದರು.(ಆ ಪ್ರಯತ್ನಕ್ಕಾಗಿ ಅವರು ದೇಶಾದ್ಯಂತ 'ಶ್ರೀಮಾನ್ ವಿರೋಧ ಪಕ್ಷ' ಎಂದೇ ಪ್ರಸಿದ್ಧರಾಗಿದ್ದರು!) ೧೯೬೭ರ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ ಅನೇಕ ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡಿತಲ್ಲದೆ, ಕೇಂದ್ರದಲ್ಲೂ ಬಲ ಕಳೆದುಕೊಂಡಿತು. ಆದರೆ, ಕಾಂಗ್ರೆಸ್ಸೇತರವಾದದ ಈ ಯಶಸ್ಸನ್ನು ಅವರು ಸಮಾಜವಾದಿ ತತ್ವದ ಯಶಸ್ಸಿಗಾಗಿ ಬಳಸಿಕೊಳ್ಳುವ ಮತ್ತು ತಮ್ಮ ಅನುಯಾಯಿಗಳನೇಕರು ಅಧಿಕಾರ ರಾಜಕಾರಣಕ್ಕೆ ಸಿಕ್ಕಿ ದಾರಿ ತಪ್ಪುತ್ತಿರುವುದನ್ನು ತಡೆಯುವ ಪ್ರಯತ್ನಗಳಲ್ಲಿದ್ದಾಗಲೇ ಅಸ್ವಸ್ಥರಾಗಿ ಅಸು ನೀಗಿದರು. ನಂತರ ಅಳಿದುಳಿದಿದ್ದ ಸಮಾಜವಾದಿಗಳು ನಾಯಕತ್ವವಿಲ್ಲದೆ ಹಲವು ಪಕ್ಷಗಳಲ್ಲಿ ಹರಿದು ಹಂಚಿಹೋಗುತ್ತಾ, ಕೊನೆಗೆ ೧೯೭೭ರಲ್ಲಿ ಜೆ.ಪಿ.ಯವರ ಸಂಪೂರ್ಣ ಕ್ರಾಂತಿಯ ಪ್ರಯೋಗದಲ್ಲಿ ಹುಟ್ಟಿದ ಜನತಾ ಪಕ್ಷದಲ್ಲಿ ತಮ್ಮ ಪಕ್ಷವನ್ನು ಲೀನಗೊಳಿಸಿದರು. ಈ ಪ್ರಯೋಗದ ವೈಫಲ್ಯದ ನಂತರವೂ ಸಮಾಜವಾದದ ಹೆಸರಿನಲ್ಲಿ ಒಂದೆರಡು ಪಕ್ಷಗಳು ಕಾಣಿಸಿಕೊಂಡಿವೆಯದರೂ, ಅವು ಲೋಹಿಯಾ ಸಮಾಜವಾದದ ಅಣಕಗಳಿಂತಿವೆಯಷ್ಟೆ.

ಜಾಗತೀಕರಣದ ಭರಾಟೆಯ ಇಂದಿನ ದಿನಗಳಲ್ಲಿ ಕೆಲವರಿಗಾದರೂ ಇನ್ನೂ ಲೋಹಿಯಾ ನೆನಪಾಗುತ್ತಿದ್ದರೆ ಅದಕ್ಕೆ ಮುಖ್ಯ ಕಾರಣ, ಭಾರತದ ಸ್ಮೃತಿಪಟಲದಲ್ಲಿ ಅಚ್ಚೊತ್ತಿರುವ ಪ್ರತಿಭೆ ಮತ್ತು ಪ್ರತಿಭಟನೆಗಳ ಸಂಗಮವಾಗಿದ್ದ ಅವರ ಉಜ್ವಲ ವ್ಯಕ್ತಿತ್ವ. ಈಗಿನ ಉತ್ತರ ಪ್ರದೇಶದ ಸಾಮಾನ್ಯ ವ್ಯಾಪಾರಿ ಕುಟುಂಬದಲ್ಲಿ ಸ್ವಾತಂತ್ರ್ಯ ಹೋರಾಟಗಾರನೊಬ್ಬನ ಮಗನಾಗಿ ಹುಟ್ಟಿ, ೨೩ನೇ ವಯಸ್ಸಿಗೇ ಬರ್ಲಿನ್ ವಿಶ್ವವಿದ್ಯಾಲಯದಿಂದ ರಾಜಕೀಯ ಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದ ಲೋಹಿಯಾ ; ತಮ್ಮ ಮುಂದೆ ತೆರೆದಿಟ್ಟಿದ್ದ ಆರಾಮದಾಯಕ ಜೀವನವನ್ನು ತೊರೆದು, ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ತಮ್ಮ ಇಡೀ ಜೀವನವನ್ನು ಸಮಾಜವಾದಿ ಚಿಂತನೆ ಹಾಗೂ ಹೋರಾಟಕ್ಕೆ ಮೀಸಲಿಟ್ಟರು. ವ್ಯವಸ್ಥೆಯ ವಿರುದ್ಧದ ಹೋರಾಟದ ಅಂಗವಾಗಿ ಅವರು ನಿರಂತರ ನಾಗರಿಕ ಸತ್ಯಾಗ್ರಹ, ಸಣ್ಣ ಘಟಕ ತಂತ್ರಜ್ಞಾನ ಹಾಗೂ ಭಾರತೀಯ ಪರಂಪರೆಯ ಪರಿಕಲ್ಪನೆಗಳನ್ನು ಕುರಿತ ಸಂಶೋಧನೆಗಾಗಿ 'ಖೋಜ್ ಪರಿಷತ್' ಎಂಬ ಅಧ್ಯಯನ ಸಂಸ್ಥೆ, ಕೃಷಿ ಮತ್ತು ಕೈಗಾರಿಕಾ ಬೆಲೆಗಳ ಸಮನ್ವಯ ಹಾಗೂ ಬೆಲೆ ನಿಯಂತ್ರಣ ಆಯೋಗ, ವರಮಾನ ಹಾಗೂ ಖರ್ಚಿನ ಮೇಲೆ ಮಿತಿ, ನಾಲ್ಕು ಹಂತಗಳಲ್ಲಿನ ಅಧಿಕಾರ ವಿಕೇಂದ್ರೀಕರಣವನ್ನಾಧರಿಸಿದ ಚತುಸ್ತಂಭ ರಾಷ್ಟ್ರ, ವಿಶ್ವಸಂಸ್ಥೆಗೆ ಪರ್ಯಾಯವಾಗಿ ಜಾಗತಿಕ ಸರ್ಕಾರ ಮುಂತಾದ ನವನವೀನ ತತ್ವ–ಪರಿಕಲ್ಪನೆಗಳನ್ನೂ ಮತ್ತು ಗೋವಾ ವಿಮೋಚನೆ, ನೇಪಾಳದ ಪ್ರಜಾಪ್ರಭುತ್ವೀಕರಣ, ಜಾತಿ ವಿನಾಶ ಸಮ್ಮೇಳನ, ಇಂಗ್ಲಿಷ್ ವಿರೋಧಿ–ಭಾರತೀಯ ಭಾಷಾ ಸಮ್ಮೇಳನ, ಹಿಮಾಲಯ ರಕ್ಷಿಸಿ ಸಮ್ಮೇಳನ ಇತ್ಯಾದಿ ರಾಜಕೀಯ ಕಾರ್ಯಕ್ರಮಗಳನ್ನೂ ಆವಿಷ್ಕರಿಸಿಕೊಟ್ಟಿದ್ದರು.

ಸಮಾಜವಾದಿ ಭಾರತದಲ್ಲಿ ರೈತನೇ ಪ್ರಗತಿ ಚಿತ್ರದ ಕೇಂದ್ರಬಿಂದುವಾಗಬೇಕು ಎಂದು ನಂಬಿದ್ದ ಲೋಹಿಯಾ, ಐವತ್ತರ ದಶಕದಲ್ಲೇ ಒಂದು ಲಕ್ಷ ಜನ ರೈತರ ಜಾಥಾ ಸಂಘಟಿಸಿ ಸಂಸತ್ತಿನ ಮುಂದೆ ಮತ ಪ್ರದರ್ಶನ ನಡೆಸಿದ್ದರು. ಕರ್ನಾಟಕದಲ್ಲಿ ಭೂ ಸುಧಾರಣೆ ಕಾರ್ಯಕ್ರಮಕ್ಕೆ ಅಸ್ತಿವಾರ ಹಾಕಿದ ಕಾಗೋಡು ಸತ್ಯಾಗ್ರಹಕ್ಕೆ ಬೆಂಬಲವಾಗಿ ಬಂದು ಭಾಗವಹಿಸಿ, ಬಂಧಿತರಾದದ್ದೂ ಉಂಟು. ಹೊರಗಿನ ಆಳುಗಳಿಲ್ಲದೆ ಐದು ಮಂದಿ ಸದಸ್ಯರ ಕುಟುಂಬವೊಂದು ಬೇಸಾಯ ಮಾಡಬಹುದಾದ ಭೂಮಿಯ ಮೂರರಷ್ಟಕ್ಕೆ ಭೂಪರಿಮಿತಿಯನ್ನು ನಿಗದಿಪಡಿಸಬೇಕೆಂದು ಅವರು ಪ್ರತಿಪಾದಿಸಿದ್ದರು. ಎಲ್ಲ ಖಾಸಗಿ ವಲಯದ ಬೃಹತ್ ಕಾರ್ಖಾನೆಗಳನ್ನು ಸರ್ಕಾರ ವಶಪಡಿಸಿಕೊಂಡು ಸಹಕಾರಿ ತತ್ವದ ಆಡಳಿತಕ್ಕೆ ಒಳಪಡಿಸಿ ಸಾಮಾಜೀಕರಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ವಿಶೇಷ ಪ್ರಾಶಸ್ತ್ಯವನ್ನು ಒತ್ತಾಯಿಸಿದ ಅವರು, ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿಗೆ ವಿರೋಧ ವ್ಯಕ್ತಪಡಿಸಿದ್ದರು. ನಮ್ಮ ಹೆಣ್ಣು ಮಕ್ಕಳಿಗೆ ಕೆಚ್ಚು ಮತ್ತು ವಿವೇಕಗಳ ದ್ರೌಪದಿ ಮಾದರಿಯಾಗಬೇಕೇ ಹೊರತು, ಪತಿ ವಿಧೇಯತೆಯ ಸೀತೆ–ಸಾವಿತ್ರಿಯರಲ್ಲ ಎಂದಿದ್ದ ಅವರು, ಹೆಣ್ಣು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಒದಗಿಸುವುದರೊಂದಿಗೆ ತಂದೆ ತಾಯಿಯರ ಕರ್ತವ್ಯ ಮುಗಿದು, ಮುಂದೆ ಅವರಿಗೆ ತಮ್ಮ ಜೀವನಕ್ಕೆ ತಾವೇ ಜವಾಬ್ದಾರರಾಗುವ ಅವಕಾಶವಿರಬೇಕು ಎಂದು ಅಭಿಪ್ರಾಯ ಪಟ್ಟಿದ್ದರು.

ಇಡೀ ದೇಶಕ್ಕೆ ಸಾಮಾನ್ಯ ನಾಗರಿಕ ಸಂಹಿತೆ ಇರಬೇಕೆಂದು ನಂಬಿದ್ದ ಲೋಹಿಯಾ, ಮುಸ್ಲಿಮರ ಬುರ್ಖಾ, ಹಿಂದೂಗಳ ಪರದಾಗಳಂತಹ ಮಧ್ಯಯುಗೀನ ಸ್ತ್ರೀ ನಿರ್ಬಂಧ ಪದ್ಧತಿಗಳನ್ನು ನಿಷೇಧಿಸಬೇಕೆಂದರು. ನೈತಿಕ ತರಬೇತಿ ಹಾಗೂ ಧ್ಯಾನ–ಪ್ರಾರ್ಥನೆಗಳಂತಹ ಅತೀತದೊಡನೆಯ ಸಂವಾದದ ರೂಪಗಳಲ್ಲಿ ಮಾತ್ರ ಧರ್ಮವನ್ನು ಮಾನ್ಯಮಾಡಬಹುದಾಗಿದೆ ಎಂದ ಅವರು, ಆಸ್ತಿ ಮತ್ತು ಹೆಣ್ಣಿಗೆ ಸಂಬಂಧಪಟ್ಟ ಕಾನೂನು ಕಟ್ಟಳೆಗಳಿಗೆ ಸಂಬಂಧಿಸಿದಂತೆ ಧರ್ಮವನ್ನು ದೂರವಿಡಬೇಕೆಂದು ಸೂಚಿಸಿದರು. ಸ್ವತಃ ತಾವೇ ಭಾರತೀಯ ಪುರಾಣಗಳ ವಿಶಿಷ್ಟ ವ್ಯಾಖ್ಯಾನ ಮಾಡಿ, ರಾಮ–ಕೃಷ್ಣ–ಶಿವ ಹೇಗೆ ತಮ್ಮ ವೈವಿಧ್ಯಮಯ ಆವೃತ್ತಿಗಳಲ್ಲಿ ಭಾರತೀಯ ಜನಜೀವನದ ಅಂತರಂಗಿಕ ಮೂರ್ತಿಗಳಾಗಿ ಕ್ರಿಯಾಶೀಲರಾಗಿದ್ದಾರೆ ಎಂಬುದನ್ನು ನಿರೂಪಿಸಿದ್ದರು. ದೇವರು ಮತ್ತು ಹೆಣ್ಣು ತಮ್ಮ ಬದುಕಿನ ಮುಖ್ಯ ಅನ್ವೇಷಣೆಗಳಾಗಿದ್ದು; ದೇವರು ಸಿಕ್ಕಿಲ್ಲ, ಹೆಣ್ಣು ದಕ್ಕಿಲ್ಲ ಎಂದು ತಮ್ಮ ಜೀವನ ದರ್ಶನವನ್ನು ಲಘು–ಲಲಿತವಾಗಿ ಹೇಳಿದ್ದ ಲೋಹಿಯಾ ಕೆಲವರು ತಿಳಿದಂತೆ ನಾಸ್ತಿಕರಾಗಿರದೆ, ಬುದ್ಧನಂತೆ ಆಜ್ಞೇಯತಾವಾದಿಯಾಗಿದ್ದರು. ಹಿಂದು–ಮುಸ್ಲಿಂ ಏಕತೆಯನ್ನು, ಇತಿಹಾಸ ಕಲಿಕೆಯ ಪರಿಷ್ಕಾರ ಹಾಗೂ ಇಬ್ಬರೂ ಪರಸ್ಪರ ಅನುಮಾನಗಳನ್ನು ಹುಟ್ಟಿಸದ ರೀತಿಯಲ್ಲಿ ಪ್ರಜ್ಞಾಪೂರ್ವಕ ಬಾಳುವೆ ಮಾಡುವಂತಹ ವಾತಾವರಣ ನಿರ್ಮಾಣ ಮಾಡುವ ಮೂಲಕ ಮಾತ್ರ ಸಾಧಿಸಬಹುದೆಂದು ಭಾವಿಸಿದ್ದರು. ರಾಷ್ಟ್ರ ವಿಭಜನೆಯನ್ನು ಕಾಂಗ್ರೆಸ್

ಕಾರ್ಯಕಾರಿಣಿಯಲ್ಲಿ ಗಡಿನಾಡ ಗಾಂಧಿಯೊಂದಿಗೆ ವಿರೋಧಿಸಿ ಗಾಂಧೀಜಿಯ ಏಕಾಕಿತನದ ಭಾರವನ್ನು ಕಡಿಮೆಗೊಳಿಸಿದ್ದ ಲೋಹಿಯಾ, ಒಂದಲ್ಲ ಒಂದು ದಿನ ಭಾರತ–ಪಾಕಿಸ್ತಾನಗಳು ಒಂದಾಗುತ್ತವೆಂದು ನಂಬಿದ್ದರು. ತಾವು ಸಂಪಾದಿಸುತ್ತಿದ್ದ ಮ್ಯಾನ್‌ಕೈಂಡ್ ಎಂಬ ಇಂಗ್ಲಿಷ್ ತ್ರೈಮಾಸಿಕದ ಮೂಲಕ ಅವರು ಜಾಗತಿಕ ಮಟ್ಟದಲ್ಲಿ ಸಮಾಜವಾದಿ ಜಿಜ್ಞಾಸೆಗೆ ವೇದಿಕೆ ಸೃಷ್ಟಿಸಿದ್ದರು.

ಸಮಾನತೆಯ ಮುಖ್ಯ ಆಶಯವನ್ನಾಧರಿಸಿದ ತಮ್ಮ ಸಮಾಜವಾದಿ ತತ್ವದ ವಿಷದೀಕರಣಕ್ಕಾಗಿ ಅವರು ೧೯೬೭ರ ಲೋಕಸಭಾ ಚುನಾವಣೆಯಲ್ಲಿ ಗ್ವಾಲಿಯರ್‌ನ ರಾಣಿ ವಿರುದ್ಧ ಸುಖೋರಾಣಿ ಎಂಬ ಪೌರ ಕಾರ್ಮಿಕ ಮಹಿಳೆಯೊಬ್ಬಳನ್ನು ತಮ್ಮ ಪಕ್ಷದ ಅಭ್ಯರ್ಥಿಯನ್ನಾಗಿ ನಿಲ್ಲಿಸಿದ್ದರು. ಜಾಗತಿಕ ಸರ್ಕಾರದ ಕನಸಿನ ಪ್ರತೀಕವಾಗಿ ಪಾಸ್‌ಪೋರ್ಟ್ ಇಲ್ಲದೆ–ಕಲ್ಕತ್ತದಿಂದ ರಂಗೂನ್‌ಗೆ–ವಿದೇಶ ಪ್ರಯಾಣದ ಪ್ರಯೋಗ ಮಾಡಿದರು. ಅಮೆರಿಕಾ ಪ್ರವಾಸದ ಸಂದರ್ಭದಲ್ಲಿ ವರ್ಣಭೇದ ನೀತಿಯ ವಿರುದ್ಧ ಪ್ರತಿಭಟನಾರ್ಥವಾಗಿ ವರ್ಣೀಯರಿಗೆ ಪ್ರವೇಶವಿಲ್ಲದ ಉಪಹಾರ ಗೃಹವನ್ನು ಪ್ರವೇಶಿಸಿ ಬಂಧಿತರಾಗಿ, ಅಮೆರಿಕಾ ಸರ್ಕಾರ ಕ್ಷಮೆ ಕೇಳುವಂತೆ ಮಾಡಿದರು. ಹೀಗಾಗಿ, ರಾಮಮನೋಹರ ಲೋಹಿಯಾ ವ್ಯವಸ್ಥೆಯ ವಿರುದ್ಧದ ನಿರಂತರ ಹೋರಾಟದ ಉಜ್ವಲ ಸಂಕೇತವಾಗಿ ರಾಷ್ಟ್ರದ ಅನೇಕ ಲೇಖಕ–ಕಲಾವಿದ–ಚಿಂತಕರ ಗಮನ ಸೆಳೆದಿದ್ದರು. ಕನ್ನಡದ ಮಟ್ಟಿಗೆ ಮುಖ್ಯವಾಗಿ, ಕುವೆಂಪು, ಪು.ತಿ.ನ., ಅಡಿಗ ಹಾಗೂ ಜಿ.ಎಸ್. ಶಿವರುದ್ರಪ್ಪನವರು ಒಂದಲ್ಲ ಒಂದು ಕಾರಣಕ್ಕೆ ಲೋಹಿಯಾರಿಂದ ಸೆಳೆಯಲ್ಪಟ್ಟಿದ್ದರು. ಈ ಹೋರಾಟದಲ್ಲಿ ಅವರು ಸ್ವತಂತ್ರ ಭಾರತದಲ್ಲಿ ಯಾರೂ ಅನುಭವಿಸದಷ್ಟು ಅನೇಕ ಬಾರಿ ಬ್ರಿಟಿಷರ ಕಾಲದಲ್ಲೂ ಒಳಗಾಗದಿದ್ದಂತಹ ಪೋಲೀಸ್ ದೌರ್ಜನ್ಯಕ್ಕೂ ಒಳಗಾಗಿದ್ದರು.

ಇಂತಹ ಲೋಹಿಯಾ, ಜಾಗತೀಕರಣ ತಂದೊಡ್ಡುತ್ತಿರುವ ಅಪಾಯಗಳ ವಿರುದ್ಧದ ಆಂದೋಲನಕ್ಕೆ ಭಾರತದ ಮಟ್ಟಿಗಾದರೂ, ಸ್ಫೂರ್ತಿಕೇಂದ್ರವಾಗದೆ, ಇನ್ನಾರಾದರು? ನಾವು ಹೈ–ಟೆಕ್ ಆಧುನಿಕತೆಯ ಹಾದಿಯಲ್ಲಿ ಎಷ್ಟು ಮುಂದೆ ಹೋಗಿಬಿಟ್ಟಿದ್ದೇವೆಂದರೆ, ಹಿಂದೆ ಬರುವುದು ಅಸಾಧ್ಯ ಎನ್ನುವವರು, ಈ ಹಾದಿ ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಿದೆ ಎಂಬುದನ್ನು ವ್ಯವಧಾನದಲ್ಲಿ ಆಲೋಚಿಸಬೇಕು; ಈ ಅಭಿವೃದ್ಧಿ ಎಂತಹದು, ಎಷ್ಟು, ಏಕೆ ಮತ್ತು ಯಾರಿಗಾಗಿ ಎಂಬ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕು, ನಾವು ನಮ್ಮ ಮಕ್ಕಳು ಮತ್ತು ಮೊಮ್ಮಕ್ಕಳ ಭವಿಷ್ಯದ ಮಟ್ಟಿಗೆ ಮಾತ್ರ ಆಲೋಚಿಸುವ ಸಮೀಪ ದೃಷ್ಟಿಯ ಸಮಾಜ, ಅವನತಿಯ ಕಡೆಗೆ ಮಾತ್ರ ನಡೆಯಬಲ್ಲದು. ಇಂದಿನ 'ಅಭಿವೃದ್ಧಿ' ಹುಟ್ಟು ಹಾಕುತ್ತಿರುವ ಸಾಮಾಜಿಕ ಅಶಾಂತಿ ಹಾಗೂ ಜೀವ ಪರಿಸರ ನಾಶ ನಮ್ಮಲ್ಲಿ ಆತ್ಯಂತಿಕ ಆತಂಕ ಹುಟ್ಟಿಸದಿದ್ದಲ್ಲಿ, ನಾವು ನಾಗರಿಕ ಜಗತ್ತಿನ ಅಲ್ಲ, ಜೀವಜಗತ್ತಿನ ಪ್ರಜೆಗಳಾಗಿ ಉಳಿಯುವ ಎಲ್ಲ ಅರ್ಹತೆಗಳನ್ನೂ ಕಳೆದುಕೊಂಡು,

ಆಧುನಿಕ ಭಸ್ಮಾಸುರರಾಗುತ್ತಿದ್ದೇವೆ ಎಂದೇ ಅರ್ಥ. ಇದರರ್ಥ, ನಾವು ಕಾಲದಲ್ಲಿ ಹಿಂದಕ್ಕೆ ಹೋಗಬೇಕು ಎಂಬುದಲ್ಲ. ಅದು ಸಾಧ್ಯವೂ ಆಗದು. ಬದಲಿಗೆ, ಹಾದಿಯ ದಿಕ್ಕನ್ನು ಕ್ರಮೇಣ ಬದಲಿಸುವ ಸಂಕಲ್ಪ ಮಾಡಿ, ಅದಕ್ಕೆ ಅಗತ್ಯವಾದ ಮೂಲಭೂತ ತಾಂತ್ರಿಕ ಹಾಗೂ ಆಡಳಿತಾತ್ಮಕ ಬದಲಾವಣೆಗಳಿಗಾಗಿ, ಕಾರ್ಯಕ್ರಮಗಳನ್ನು ಆರಂಭಿಸಲು ಸರ್ಕಾರಗಳ ಮೇಲೆ ಒತ್ತಡ ತರಬೇಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಜೀವನ ಕ್ರಮವನ್ನು ಮಿತಿಗಳುಳ್ಳ ಬದುಕಿನ ಶೈಲಿಗೆ ಪರಿವರ್ತಿಸಿಕೊಳ್ಳಬೇಕಾಗಿದೆ.

ಈ ದಿಕ್ಕಿನಲ್ಲಿ ಈಗಾಗಲೇ ಜಗತ್ತಿನಾದ್ಯಂತ ಒಂದು ದೊಡ್ಡ ಆಂದೋಲನವೇ ಆರಂಭವಾಗಿದೆ. ಜಾಗತೀಕರಣದ ಚಾಲಕಶಕ್ತಿಯಾಗಿರುವ ಅಮೆರಿಕಾದ ರಾಜಕೀಯ ಪಿತೂರಿ ದಬ್ಬಾಳಿಕೆಗಳಿಂದ ಬಸವಳಿದು ಹೋಗಿರುವ ಲ್ಯಾಟಿನ್ ಅಮೆರಿಕಾದಿಂದಲೇ 'ವಿಶ್ವ ಸಾಮಾಜಿಕ ವೇದಿಕೆ'ಯಡಿ ಇನ್ನೊಂದು ಜಗತ್ತು ಸಾಧ್ಯ' ಎಂಬ ಆಂದೋಲನ ಆರಂಭವಾಗಿದೆ. ೨೦೦೧ರಲ್ಲಿ ಜಿ–೮ ಗುಂಪಿನ ಶ್ರೀಮಂತ ದೇಶಗಳು ಜಾಗತೀಕರಣವನ್ನು ಅಧಿಕೃತಗೊಳಿಸುವ 'ವಿಶ್ವ ಆರ್ಥಿಕ ಶೃಂಗಸಭೆ'ಯನ್ನು ಸ್ವಿಟ್ಜರ್‌ಲ್ಯಾಂಡ್‌ನ ಡಾವೋಸ್‌ನಲ್ಲಿ ಆಯೋಜಿತಗೊಳಿಸಿದ್ದ ಸಂದರ್ಭದಲ್ಲೇ, ಅದಕ್ಕೆ ಪರ್ಯಾಯವೆಂಬಂತೆ ಬ್ರೆಜಿಲ್‌ನ ಪೊರ್ತೊ ಅಲೆಗ್ರೆಯಲ್ಲಿ ರೂಪುಗೊಂಡ 'ವಿಶ್ವ ಸಾಮಾಜಿಕ ವೇದಿಕೆ' ಈಗ ಅಮೆರಿಕಾ, ಬ್ರಿಟನ್, ಫ್ರಾನ್ಸ್ ಸೇರಿದಂತೆ ಜಗತ್ತಿನ ಬಹುಪಾಲು ದೇಶಗಳ ಜನಗಳ ಬೆಂಬಲ ಗಳಿಸಿದೆ. ಈ ಆಂದೋಲನ ಆರಂಭವಾದಾಗಿನಿಂದ ಲ್ಯಾಟಿನ್ ಅಮೆರಿಕಾದ ಮೂರು ರಾಷ್ಟ್ರಗಳಲ್ಲಿ–ಬೊಲಿವಿಯಾ, ವೆನಿಜೂಲ ಹಾಗೂ ನಿಕಾರುಗುವಾ–ಸಮಾಜವಾದಿ ಸರ್ಕಾರಗಳು ಸ್ಥಾಪಿತವಾಗಿರುವುದು ಈ ಆಂದೋಲನದ ಯಶಸ್ಸಿನ ಸಂಕೇತವಾಗಿದೆ. ಇತ್ತೀಚೆಗೆ ತಾನೇ ಮೆಕ್ಸಿಕೋದಲ್ಲಿ ನಡೆದ ಚುನಾವಣೆಗಳಲ್ಲಿ ಸಮಾಜವಾದಿ ಸರ್ಕಾರ ಸ್ಥಾಪಿತವಾಗುವ ಅವಕಾಶ ಕೂದಲೆಳೆ ಅಂತರದಲ್ಲಿ– ಮತ ಎಣಿಕೆ ಕಾಲದಲ್ಲಿ ಗಣಕ ಯಂತ್ರಗಳು ಕೈಕೊಟ್ಟು–ಸಮಾಜವಾದಿಗಳ ಮುನ್ನಡೆ ಆಶ್ಚರ್ಯಕರವಾಗಿ ಹಿನ್ನಡೆಯಾಗಿ ಪರಿವರ್ತಿತವಾಗಿ–ತಪ್ಪಿ ಹೋಗಿದೆ.

ಇದೆಲ್ಲದರ ಪರಿಣಾಮ ನಮ್ಮ ದೇಶದ ರಾಜಕೀಯದ ಮೇಲೆ ಆಗದೇ ಇಲ್ಲ. ಜಾಗತೀಕರಣದಿಂದ ಆರ್ಥಿಕವಾಗಿ 'ಹೊಳೆಯುತ್ತಿದ್ದ ಭಾರತ', ಕಳೆದ ಚುನಾವಣೆಗಳಲ್ಲಿ ಸಾಮಾಜಿಕ ವಲಯಕ್ಕೂ ಆದ್ಯತೆ ನೀಡುವುದಾಗಿ ಘೋಷಿಸಿಕೊಂಡ ಸರ್ಕಾರವನ್ನು ಆಯ್ಕೆ ಮಾಡಿಕೊಂಡಿದೆ. ಆದರೆ ಬರೀ ಆದ್ಯತೆಯಲ್ಲ, ಸಾಮಾಜಿಕ ವಲಯವೇ ಮೂಲ ಕಾಳಜಿಯಾಗಿರುವ ಜನತಾ ಅರ್ಥಶಾಸ್ತ್ರದ ದಿನಗಳು ಚಾಲ್ತಿಗೆ ಬರಬೇಕಿದೆ. ಆ ಮುನ್ನ, ಈ ಜನತಾ ಅರ್ಥಶಾಸ್ತ್ರ ತನ್ನ ದೌರ್ಬಲ್ಯಗಳನ್ನು ಗುರುತಿಸಿಕೊಂಡು ಮತ್ತು ತನ್ನ ಅತಿಗಳನ್ನು ಕಳೆದುಕೊಂಡು (ಅಂದರೆ, ಅದಕ್ಷತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಮುಷ್ಕರ–ಚಳುವಳಿ ಇತ್ಯಾದಿ) ಈಗ ಚಾಲ್ತಿಯಲ್ಲಿರುವ ಸರಕು ಅರ್ಥಶಾಸ್ತ್ರದ ಅಶ್ಲೀಲತೆಯನ್ನು ಎತ್ತಿ ತೋರಿಸುವ ನೈತಿಕ ಸ್ಥೈರ್ಯವನ್ನು ರೂಢಿಸಿಕೊಳ್ಳಬೇಕಿದೆ.

ಹಾಗೆ ನೋಡಿದರೆ, ಇಂದು ಮಹಾರಾಷ್ಟ್ರ ಮಾದರಿ ಗ್ರಾಮ ಆಂದೋಲನದ ಅಣ್ಣಾ ಹಜಾರೆ, ಪರ್ಯಾಯ ತಂತ್ರಜ್ಞಾನದ ಪ್ರಯೋಗಶೀಲ ವಿಜ್ಞಾನಿ ಪಿ.ವಿ. ಶೇಷಾದ್ರಿ ಮತ್ತು ಗ್ರಾಮ ಆಂದೋಲನದ ಇಳಂಗೋವನ್ ಭಾರತೀಯ ಸಮಾಜವಾದಿ ಚಳುವಳಿಯಲ್ಲಿ ಕಾಣೆಯಾಗಿದ್ದ ರಚನಾತ್ಮಕತೆಯ ಮೂರು ಮುಖಗಳಂತಿದ್ದರೆ; ನರ್ಮದಾ ಆಂದೋಲನದ ಮೇಧಾ ಪಾಟ್ಕರ್, ಮಾನವಹಕ್ಕುಗಳ ಹೋರಾಟಗಾರ್ತಿ ಅರುಣಾರಾಯ್, ಪ್ರಭುತ್ವ ಭಯೋತ್ಪಾದನೆ ವಿರುದ್ಧದ ಚಳುವಳಿಕಾರ್ತಿ ಅರುಂಧತಿ ರಾಯ್–ಈ ಮಹಿಳಾ ತ್ರಿಮೂರ್ತಿಗಳ ಪ್ರತಿಭಟನೆ, ಸಮಾಜವಾದಿ ಚಳುವಳಿಯ ಪ್ರತಿರೋಧಮುಖದ ಮುಂದುವರಿಕೆಯೇ ಆಗಿದೆ. ಲೋಹಿಯಾ ನೆನಪು ನೆನಪು ಅರ್ಥಪೂರ್ಣವೆನ್ನಿಸುವು ಇಂತಹವರ ಮೂಲಕವೇ.

ಹೀಗಾಗಿ, ಹೇಗೆ ನಂಬುವುದು ಸಮಾಜವಾದದ ಕಾಲ ಮುಗಿಯಿತೆಂದು? ಹಾಗೆ ನೋಡಿದರೆ, ಭವಿಷ್ಯವಿರುವುದು ಸಮಾಜವಾದಕ್ಕೇ ಎನಿಸುತ್ತದೆ. ಆದರೆ, ಇತಿಹಾಸದಿಂದ ಪಾಠ ಕಲಿತು ರೂಪುಗೊಳ್ಳುವ ಹೊಸ ಸಮಾಜವಾದಕ್ಕೆ. ಏಕೆಂದರೆ, ಅದು ಕರುಣೆ ಮತ್ತು ಕೆಚ್ಚುಗಳು ಸಂಗಮಿಸಿದ ಮೂಲ ಮನುಷ್ಯ ಧರ್ಮವೇ ಆಗಿರುತ್ತದೆ. ಬಹುಶಃ ಹಾಗಾಗಿಯೇ ಈಚೆಗೆ ನಿಧನರಾದ, ಲೋಹಿಯಾ ಪರಂಪರೆಯ ಕೊನೆಯ ಕೊಂಡಿಯಂತಿದ್ದ ಕಿಷನ್ ಪಟ್ನಾಯಕರು ತಮ್ಮ ಕೊನೇ ದಿನಗಳ ಭಾಷಣಗಳಲ್ಲಿ ಈಶೋಪನಿಷತ್ತಿನ ಅಪರಿಗ್ರಹ ಹಾಗೂ ಬೌದ್ಧ ಧರ್ಮದ ಕರುಣಾ ಬಗ್ಗೆ ಪದೇ ಪದೇ ಪ್ರಸ್ತಾಪಿಸುತ್ತಿದ್ದುದು.

■

"ದೇಶ, ರಾಷ್ಟ್ರ, ಜನಾಂಗ, ಮಾತೃಭೂಮಿ ಈ ಕಲ್ಪನೆಗಳಂತೆ ನಮ್ಮ ಕಾಲದಲ್ಲಿ ಬೇರೆ ಯಾವುದೂ ರೂಪುಗೊಳ್ಳಲಿಲ್ಲ. ಇನ್ನೊಂದು ದೇಶವನ್ನು ತುಳಿದಾಳುವುದು, ಯುದ್ಧ ಮಾಡಿ ಗೆಲ್ಲುವುದು, ಅವುಗಳಿಂದ ಕಪ್ಪ ಕಾಣಿಕೆಗಳನ್ನು ವಸೂಲು ಮಾಡುವುದು–ಇವುಗಳೆಲ್ಲ ದೊಡ್ಡ ಸೈನ್ಯಗಳ ಗತಕಾಲದ ಕಥೆಯಾಗಿ ಹೋಗಿವೆ.

ಹೊಸ ಬಗೆಯ ಅನೇಕ ನಿಗೂಢ ಸಾಮ್ರಾಜ್ಯಶಾಹಿಗಳು ಈಗ ಕಾಣಿಸಿಕೊಳ್ಳುತ್ತಿವೆ. ಇದರಲ್ಲಿ ಬಹುಮುಖ್ಯವಾದುದು ಉತ್ಪಾದನೆಯ ಮತ್ತು ಬಳಕೆಯ ಸಾಮ್ರಾಜ್ಯಶಾಹಿ. ಚರಿತ್ರೆಯ ಕೆಲವು ಆಕಸ್ಮಿಕಗಳ ದೆಸೆಯಿಂದ ಕೆಲವು ದೇಶಗಳು ಇತರ ದೇಶಗಳಿಗಿಂತ ಹೆಚ್ಚು ಸಂಪನ್ಮೂಲಗಳನ್ನೂ ಉತ್ಪಾದನಾ ಸಾಮರ್ಥ್ಯವನ್ನೂ ಪಡೆದಿರುವುದರಿಂದ ಇದು ಸಾಧ್ಯವಾಗಿದೆ.

ನಮ್ಮ ಪ್ರಪಂಚವು ಈ ಎಲ್ಲಾ ಬಗೆಯ ಸಾಮ್ರಾಜ್ಯಶಾಹಿಗಳನ್ನು ನಮ್ಮ ಎಲ್ಲಾ ರಂಗಗಳಿಂದಲೂ ಹೊಡೆದಟ್ಟುವವರೆಗೆ ಈ ಭೂಮಿಯಲ್ಲಿ ಯಾರಿಗೂ ನಿಜವಾದ ಸ್ವಾತಂತ್ರ್ಯವಾಗಲೀ, ಶಾಂತಿಯಾಗಲೀ ಸಿಗಲಾರದು.

–ಲೋಹಿಯಾ('ಮಾರ್ಕ್ಸ್, ಗಾಂಧಿ ಅಂಡ್ ಸೋಶಲಿಸಂ')

ಲೋಹಿಯಾ:
ನಾ ಕಂಡಂತೆ

ಡಾ. ಲೋಹಿಯಾ ನಿಧನರಾಗಿ ೪೩ ವರ್ಷಗಳೇ ಸಂದಿದ್ದರೂ, ಅವರ ತಲೆಮಾರಿನ ಬಹಳಷ್ಟು ಜನ ಗತಿಸಿ ಹೋಗಿದ್ದರೂ, ಲೋಹಿಯಾ ವ್ಯಕ್ತಿಯಾಗಿ, ತತ್ವಶಾಸ್ತ್ರಜ್ಞರಾಗಿ ಹಾಗೂ ರಾಜಕೀಯ ಹೋರಾಟಗಾರರಾಗಿ ಜನರನ್ನು ಸೆಳೆಯುತ್ತಲೇ ಇದ್ದಾರೆ; ಕುತೂಹಲ ಹುಟ್ಟಿಸುತ್ತಲೇ ಇದ್ದಾರೆ. ಕರ್ನಾಟಕಲ್ಲಿ ಲೋಹಿಯಾರ ಅಂತಹ ಪ್ರಭಾವಕ್ಕೆ ಒಳಗಾದ ಕೆಲವರು ಇಲ್ಲಿ ಆ ಪ್ರಭಾವದ ಬಗ್ಗೆ ಬರೆದಿದ್ದಾರೆ.



ಉತ್ಕಟ ಸೃಜನಶೀಲ ಮನಸ್ಸು

ಡಾ. ರಾಮಮನೋಹರ ಲೋಹಿಯಾ ಅವರು ಆಧುನಿಕ ಭಾರತವು ಕಂಡ ಅಪ್ರತಿಮ ಸಮಾಜವಾದಿ ಚಿಂತಕ. ಕರ್ನಾಟಕದ ಬರೆಹಗಾರರ ಮೇಲೆ ಮತ್ತು ಪ್ರಜ್ಞಾವಂತರ ಮೇಲೆ–ಗಾಂಧಿಯವರನ್ನು ಹೊರತುಪಡಿಸಿ–ಅವರಷ್ಟು ಪ್ರಭಾವ ಬೀರಿದವರು ಮತ್ತೊಬ್ಬರಿರಲಾರರು. ಕರ್ನಾಟಕದ ಹಲವಾರು ಜನಪರ ಚಳುವಳಿಗಳ ಹಿಂದೆ ಲೋಹಿಯಾ ಅವರ ಪ್ರೇರಣೆಗಳಿವೆ. ಭಾಷಾ ಚಳುವಳಿ, ಜಾತಿ ವಿನಾಶ ಚಳುವಳಿ, ದಲಿತ ಚಳುವಳಿ, ರೈತ ಚಳುವಳಿ ಈ ಕೆಲವನ್ನು ಹೆಸರಿಸಬಹುದು. ಮನುಷ್ಯರೆಲ್ಲರ ಸಮಾನತೆಯ ಪರವಾದ ಕಾಳಜಿಗಳಿಂದ ಬದುಕಿನುದ್ದಕ್ಕೂ ಕ್ರಿಯಾಶೀಲರಾಗಿದ್ದ ಲೋಹಿಯಾ ಅವರು, ಸಮಾನತೆಗೆ ವಿರೋಧಿಯಾಗಿದ್ದ ವರ್ಣ–ವರ್ಗ–ಜಾತಿ–ಲಿಂಗ–ಅಸ್ಪೃಶ್ಯತೆ ಇತ್ಯಾದಿಗಳ ವಿರುದ್ಧ ನಿರಂತರವಾಗಿ ಹೋರಾಟ ಮಾಡಿದವರು. ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯವರ ಅಚ್ಚುಮೆಚ್ಚಿನ ಶಿಷ್ಯರಾಗಿ ಭಾಗವಹಿಸಿದರೂ. ಸ್ವಾತಂತ್ರ್ಯೋತ್ತರ ಭಾರತೀಯ ರಾಜಕಾರಣದ ಸಂದರ್ಭದಲ್ಲಿ ಯಾವುದೇ ಅಧಿಕಾರಕ್ಕೆ ಜೋತು ಬೀಳದೆ ಇಡೀ ದೇಶದ ಬದುಕಿನ ವಿಮರ್ಶಕರೂ ಹಾಗೂ ಚಿಕಿತ್ಸಕರಂತೆ ವರ್ತಿಸುತ್ತಾ, ಜೆಪಿಯವರ ಸಮಗ್ರ ಕ್ರಾಂತಿಯ ಸ್ಫೂರ್ತಿಯಾದರು.

ಈ ದೇಶದ ಭಾಷೆ, ಸಂಸ್ಕೃತಿ, ಇತಿಹಾಸ, ಕಾವ್ಯ, ಧರ್ಮ, ರಾಜಕಾರಣ, ಕಲೆ– ಈ ಎಲ್ಲವನ್ನೂ ಕುರಿತ ಅವರ ಚಿಂತನೆಗಳು, ಅಪೂರ್ವವಾದ ಒಳನೋಟಗಳಿಂದ ಆರೋಗ್ಯಪೂರ್ಣವಾದ ಚರ್ಚೆಯನ್ನು ಮಂಡಿಸುವ ಕ್ರಮ ಚೇತೋಹಾರಿಯಾಗಿದೆ. ಒಟ್ಟಾರೆಯಾಗಿ, ಅದೊಂದು ಉತ್ಕಟವಾದ ಸೃಜನಶೀಲ ಮನಸ್ಸು. ಲೋಹಿಯಾ ಅವರ ಬರಹಗಳನ್ನು ಓದುವುದೆಂದರೆ, ಅದೊಂದು ಹೊಸ ಧೀಮಂತ ಅನುಭವ ಪ್ರಪಂಚವನ್ನು ಪ್ರವೇಶಿಸಿದಂತೆ. ಬೇರೊಂದು ಮಾತಿನಲ್ಲಿ ಹೇಳುವುದಾದರೆ, ಕವಿಯ ಹೃದಯ, ವಿಜ್ಞಾನಿಯ ಬುದ್ಧಿ, ಸುಧಾರಕನ ಕೆಚ್ಚು ಮತ್ತು ಪಾರವಾದ ಜೀವನ ಪ್ರೀತಿ ಇವುಗಳು ಅವರ ವ್ಯಕ್ತಿತ್ವದಲ್ಲಿ ಮೇಳವಿಸಿವೆ.

– ಡಾ. ಜಿ.ಎಸ್.ಶಿವರುದ್ರಪ್ಪ

ದೀವರಿಗೆ ಜೀವದಾನ ನೀಡಿದ ಲೋಹಿಯಾ

ತಾ.೪.೧.೧೯೪೮ರಂದು ಮರತ್ತೂರು ಗ್ರಾಮದಲ್ಲಿ ಜನ್ಮತಳೆದ ಸಾಗರ ತಾಲೂಕು ರೈತಸಂಘ ಅವಿಶ್ರಾಂತವಾಗಿ ಹಗಲೂರಾತ್ರಿ ತಾಲೂಕಿನಾದ್ಯಂತ ರೈತರ ಸಂಘಟನೆ ಮಾಡಿ ಹೋರಾಟಕ್ಕೆ ಅಣಿಗೊಳಿಸಿತ್ತು. ೧೬.೪.೫೧ರಂದು ತಡಗಳಲೆ ಗ್ರಾಮದಲ್ಲಿ ಭೂಮಾಲೀಕರ ವಿರೋಧವನ್ನು ತಿರಸ್ಕರಿಸಿ ಜಮೀನು ಉಳುಮೆಗೆ ಇಳಿದ ೫–೬

ಜನ ಗೇಣಿದಾರರನ್ನು ಅಲ್ಲಿಯ ಭೂ ಒಡೆಯರು ದೊಣ್ಣೆಗಳಿಂದ ಬಡಿದರು,ಉಳುಮೆಗೆ ಕಟ್ಟಿದ್ದ ನೇಗಿಲು-ನೊಗ ಹಗ್ಗಗಳನ್ನು ತುಂಡರಿಸಿದರು, ಎತ್ತುಗಳನ್ನು ಸಾಗರದ ದೊಡ್ಡಿಗೆ ಸೇರಿಸಿದರು. ಅನಿರೀಕ್ಷಿತವಾಗಿ ನಡೆದ ಈ ಘಟನೆ ಮುಂದಿನ ಹೋರಾಟಕ್ಕೆ ನಾಂದಿ ಹಾಡಿತು.

ತಾ.೧೭.೪.೫೧ರಂದು ಸಾಗರದ ಗಾಂಧಿ ಮೈದಾನದಲ್ಲಿ ತಾಲೂಕಿನ ರೈತರ ಬೃಹತ್ ಸಭೆ ಸೇರಿತು. ಅದಕ್ಕೆ ಮೊದಲು ನಗರದ ಮುಖ್ಯ ಬೀದಿಗಳಲ್ಲಿ ದೌರ್ಜನ್ಯಕ್ಕೆ ಒಳಗಾದ ರೈತರ ಜೊತೆಗೆ ಕಡಿದು ಹಾಕಲಾಗಿದ್ದ ನೇಗಿಲು-ನೊಗ ಮೊದಲಾದ ಉಪಕರಣಗಳೊಂದಿಗೆ ಬೃಹತ್ ಮೆರವಣಿಗೆಯಲ್ಲಿ ಹೋಗಿ ತಹಶೀಲ್ದಾರ್‌ರವರಿಗೆ ಮನವಿ ಸಲ್ಲಿಸಲಾಗಿತ್ತು. ಅಂದಿನ ಸಭೆಯಲ್ಲಿ ನಾಳೆ ೧೮.೪.೫೧ರಿಂದಲೇ ಸತ್ಯಾಗ್ರಹ ಚಳುವಳಿ ಪ್ರಾರಂಭಿಸಬೇಕೆಂದು ಸರ್ವಾನುಮತದಿಂದ ಜಯಘೋಷಗಳೊಂದಿಗೆ ತೀರ್ಮಾನಿಸಲಾಯಿತು. ಅಂದಿನ ಸಭೆಯ ಅಧ್ಯಕ್ಷತೆಯನ್ನು ನಾನೇ ವಹಿಸಿದ್ದೆ ಮತ್ತು ಮುಂದಿನ ತೀರ್ಮಾನ ಘೋಷಿಸುವ ಹೊಣೆಗಾರಿಕೆಯು ನನ್ನದೇ ಆಗಿತ್ತು.

ಮರುದಿನ ೧೮.೪.೫೧ರಿಂದ ಕಾಗೋಡು ಒಡೆಯರ ಭೂಮಿಯಲ್ಲಿ ನಾನು ತಿಳಿಸಿದ ಪ್ರಕಾರ ೫-೧೦ ಜನರು ನೇಗಿಲು ಕಟ್ಟಿಕೊಂಡು ಉಳುಮೆಗೆ ಜೈಕಾರಗಳೊಂದಿಗೆ ಹೋಗುತ್ತಿದ್ದರು. ಸಾಗರದ ಸಭೆಯ ತೀರ್ಮಾನವನ್ನು ತಿಳಿಸದ ಸರ್ಕಾರ ರಾತ್ರೋರಾತ್ರಿ ಒಡೆಯರ ಭೂಮಿಗೆ ಸುತ್ತುವರೆದು ನೂರಾರು ಜನ ಪೋಲೀಸ್ ಕಾವಲು ಹಾಕಿತ್ತು. ರೈತರು ಹೊಲಕ್ಕೆ ಇಳಿಯುತ್ತಿದ್ದಂತೆ ಅವರನ್ನು ಬಂಧಿಸಿ ಅವರು ಕಟ್ಟಿದ್ದ ಎತ್ತುಗಳನ್ನು ಬಿಚ್ಚಿ ನೇಗಿಲು ನೊಗ ಹಗ್ಗಗಳನ್ನು ಅ ರೈತರ ಮೇಲೆಯೇ ಹೊರಿಸಿಕೊಂಡು ಸಾಗರದ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹಾಜರು ಪಡಿಸುತ್ತಿದ್ದರು. ಸತ್ಯಾಗ್ರಹಿಗಳನ್ನು ಜಾಮೀನು ಮೇಲೆ ಹೋಗುವಂತೆ ಹೇಳಿದರು. ತಿರಸ್ಕರಿಸಿ ಜೈಲಿಗೆ ಹೋಗುತ್ತಿದ್ದ ಅಂದಿನ ರೈತರ ಪೌರುಷ ನೆನೆದರೆ ಈಗಲೂ ರೋಮಾಂಚನವಾಗುತ್ತದೆ.

ಮಾನ್ಯ ಗೋಪಾಲಗೌಡರಾದಿಯಾಗಿ ಅನೇಕ ಸಮಾಜವಾದಿ ನಾಯಕರುಗಳನ್ನೂ, ಕಡಿದಾಳ್ ಮಂಜಪ್ಪನವರಾದಿಯಾಗಿ ಮಲೆನಾಡು ರೈತ ಸಂಘದ ನಾಯಕರುಗಳನ್ನೂ, ಕಮ್ಯೂನಿಸ್ಟ್ ಪಕ್ಷದ ಕೋಲಾರದ ವೆಂಕಟಾಲಗಿರಿಯಪ್ಪ ಮತ್ತು ರೈತರ ಬಗ್ಗೆ ಈ ಚಳವಳಿಯ ಉದ್ದೇಶದ ಬಗ್ಗೆ ಸಹಾನುಭೂತಿ ಹೊಂದಿದ್ದ ಆ ಕಾಲದ ಪ್ರಮುಖರನ್ನು ರೈತರ ಸಭೆಗಳಿಗೆ ಅಹ್ವಾನಿಸಿ ಭಾಷಣ ಮಾಡಿಸುತ್ತಿದ್ದೆ. ಅದರಲ್ಲಿ ಎಲ್ಲರಿಗಿಂತಲೂ ಗೋಪಾಲಗೌಡರು ಭಾಷಣಕ್ಕೆ ಬರುತ್ತಾರೆಂದು ಪ್ರಕಟಿಸಿದರೆ ಸಾಕು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನ ಸೇರಿ ಮೈದಾನ ತುಂಬಿಹೋಗುತ್ತಿತ್ತು. ಆಗಷ್ಟೇ ಕಾಂಗ್ರೆಸ್‌ನಿಂದ ಹೊರಬಿದ್ದ ಸಮಾಜವಾದಿ ನಾಯಕರು ಸಂಘಟನೆಯಲ್ಲಿ ತೊಡಗಿದ್ದ ಕಾಲ ಆದಾಗಿತ್ತು. ಇಂತಹದೊಂದು ಸಂದರ್ಭ ಅವರಿಗೂ ಅವಶ್ಯವಿತ್ತು. ಆಗಲೇ ಸತ್ಯಾಗ್ರಹಕ್ಕೆ ಮುಂದಾಳ್ತನ ವಹಿಸಲು ನಮ್ಮ ರೈತ ಸಂಘಕ್ಕೂ ಕೊರತೆಯಿತ್ತು. ಕಡಿದಾಳ್ ಮಂಜಪ್ಪನವರ

7AF

ನಾಯಕತ್ವದಲ್ಲಿ ಸರ್ಕಾರದೊಂದಿಗೆ ನಡೆದ ಮಾತುಕತೆಯಿಂದಾಗಿ ಸದಾಶಿವರಾಯರು,ಅಣ್ಣಯ್ಯ ಮೊದಲಾದವ ಸಮಾಜವಾದಿ ನಾಯಕರರು ನಮ್ಮೊಂದಿಗೆ ಸೇರಲು ಉತ್ಸುಕರಾದರು. ನಾವೂ ಒಪ್ಪಿದೆವು. ಸತ್ಯಾಗ್ರಹ ಚಳವಳಿಗೆ ಹೊಸಕಳೆ,ಅಬ್ಬ ದೊರೆಯಿತು ಇಡೀ ರಾಷ್ಟ್ರದಲ್ಲಿ ಡಾ॥ ರಾಮ ಮನೋಹರ ಲೋಹಿಯಾರವರ ಬಿರುಸಿನ ಚಟುವಟಿಕೆ ಎಲ್ಲ ಮಾಧ್ಯಮಗಳಲ್ಲೂ ಭರದಿಂದ ಪ್ರಕಟವಾಗುತ್ತಿತ್ತು. ಅವರನ್ನು ಇಲ್ಲಿಗೆ ಕರೆಸಬೇಕೆಂದು ರೈತಸಂಘ, ಸಮಾಜವಾದಿ ಪಕ್ಷಗಳು ಸೇರಿ ಒಮ್ಮತದ ತೀರ್ಮಾನ ಮಾಡಿ ಆಹ್ವಾನ ನೀಡಿದೆವು. ಲೋಹಿಯಾ ಗೆಳೆಯರೊಂದಿಗೆ ಬಂದರು. ಒಣಗಿದ ಗುಡ್ಡಕ್ಕೆ ಬೆಂಕಿ ಬಿದ್ದ ಹಾಗಾಯಿತು. ನಂತರ ಜೆ.ಪಿ. ಪತ್ನಿಯೊಂದಿಗೆ ಬಂದರು. ಅವರೆಲ್ಲಾ ಬಾರದೇ ಹೋಗಿದ್ದರೆ ನಮ್ಮನ್ನು ಇಂದಿನ ನಕ್ಸಲರಂತೆ ಕೊಂದುಹಾಕುತ್ತಿದ್ದರು.

ಇದು ನನ್ನ ಸ್ಪಷ್ಟ ಅಭಿಪ್ರಾಯ ಅಂದು ಸತ್ಯಾಗ್ರಹಕ್ಕೆ ಧುಮುಕಿದ ಒಂದೇ ಜಾತಿಗೆ ಸೇರಿದ ದೀವರ ಜನಾಂಗ ಮತ್ತು ಗೇಣಿ ರೈತವರ್ಗ ಇಂದು ಜೀವಂತ ಉಳಿದು ಬೆಳೆಯುತ್ತಿರುವುದಕ್ಕೆ ರಾಮ ಮನೋಹರ ಲೋಹಿಯಾ ಅವರ ಅಂದಿನ ಪ್ರಭಾವ ಪೂರ್ಣ ವ್ಯಕ್ತಿತ್ವದ ನೆರವು ಎಂದು ಅತಿಶಯೋಕ್ತಿಯಲ್ಲ.

–ಎಚ್. ಗಣಪತಿಯಪ್ಪ

ನಾಗರಿಕನ ತಿಳುವಳಿಕೆ, ನಿಸರ್ಗ ಮಾನವನ ತೀವ್ರತೆ

ಲೋಹಿಯಾ ಅವರನ್ನು ತಿಳಿಯಬೇಕಾದರೆ ರಾಜಕೀಯದ ಬೇರೆ ಬೇರೆ ಅರ್ಥದ ಪ್ರತಿಗಾಮಿಗಳನ್ನು ಮೊದಲು ನೋಡಬೇಕು; ರಾಜಕೀಯ ಚದುರಂಗವನ್ನು ಮಾತ್ರವಲ್ಲ, ಚದುರಂಗದ ಆಟಗಾರರನ್ನು ಅವರು ಪ್ರತಿನಿಧಿಸುವ ಮೌಲ್ಯಗಳನ್ನು ನೋಡಬೇಕು. ನಮ್ಮ ಕರ್ನಾಟಕದ ರಾಜಕೀಯವನ್ನು ಕಂಡು ಅದರ ದೋಷಗಳನ್ನು, ಜನರ ಸಂಕಷ್ಟಗಳನ್ನು ಬಗೆಹರಿಸುವುದು ಹೇಗೆ ನಡೆಯದ ವಿಷಯವೋ ಹಾಗೆ, ಬರೀ ಭಾರತವನ್ನು ನೋಡಿ ಅದರ ಸಂಕಷ್ಟಗಳ ನಿವಾರಣೆಗೆ ಶ್ರಮಿಸುವುದೂ ಅಸಾಧ್ಯ. ಹೀಗೆ ರಾಜಕೀಯವನ್ನು ಜಗತ್ತಿನ ದೃಷ್ಟಿಯಿಂದ ನೋಡಿ ರಾಜಕೀಯಕ್ಕೂ ಜಗತ್ತಿನ ಇತಿಹಾಸ, ಸಂಸ್ಕೃತಿಗೂ ಇರುವ ಸಂಬಂಧವನ್ನು ಕಂಡುಕೊಂಡವರಲ್ಲಿ ಲೋಹಿಯಾ ಮುಖ್ಯರು. ಈ ವಿಷಯದಲ್ಲಿ ಲೋಹಿಯಾ ಅವರಿಗೆ ನೆರವಾದವರು ಗಾಂಧಿ. ತಮ್ಮ ರಾಜಕೀಯ ಜೀವನವನ್ನು ಪರದೇಶದಲ್ಲಿ ಆರಂಭಿಸಿದ ಗಾಂಧೀಜಿ ಮೊಟ್ಟಮೊದಲಿಗೆ ಕಂಡುಕೊಂಡ ಸತ್ಯ ಕುತೂಹಲಕರವಾಗಿದೆ. ಎಲ್ಲ ನಾಡಿನಲ್ಲೂ ಜನ ತಾವೇ ಸೃಷ್ಟಿಸಿಕೊಂಡ ಪಂಜರದಲ್ಲಿ ನರಳುತ್ತಿರುವುದು ಅವರಿಗೆ ಕಂಡುಬಂತು. ದಕ್ಷಿಣ ಆಫ್ರಿಕಾದ ಭಾರತೀಯರು ಮಾತ್ರವಲ್ಲ; ಕಪ್ಪು ಜನರು ಕೂಡ ದಲಿತರಾಗಿ ದಮನಕ್ಕೊಳಗಾದವರಾಗಿ ಅವರಿಗೆ ಕಂಡುಬಂದರು: ಇದರಷ್ಟೇ ಮುಖ್ಯವಾಗಿ ಬಿಳಿಯರು

ತಮ್ಮ ದಬ್ಬಾಳಿಕೆಯಿಂದಾಗಿಯೇ ತಮ್ಮ ವ್ಯಕ್ತಿತ್ವವನ್ನೂ ಸಂಸ್ಕೃತಿಯನ್ನೂ ನಾಶ ಮಾಡಿಕೊಳ್ಳುತ್ತಿರುವುದೂ ಅವರಿಗೆ ತಿಳಿದಿತ್ತು. ಮನುಷ್ಯ ಯಾತಕ್ಕಾಗಿ ಯಾವ ಮೌಲ್ಯಗಳಿಗಾಗಿ, ಯಾವ ಬಗೆಯ ಸುಖಕ್ಕಾಗಿ ಬದುಕುತ್ತಾನೆ? ಎಂಬ ಪ್ರಶ್ನೆಯನ್ನು ಗಾಂಧೀಜಿ ಕೇಳಿಕೊಂಡರು. ಆ ಪ್ರಶ್ನೆಗಳಿಗೆ ಉತ್ತರವಾಗಿಯೇ ತಮ್ಮ ಸ್ವಾತಂತ್ರ್ಯ ಚಳವಳಿಯನ್ನು ನಡೆಸಿದರು.

ಈ ರಾಜಕೀಯ, ನೈತಿಕ ಪ್ರಶ್ನೆಗೆ ಆಳ ಚಿಂತನೆಯ ರೂಪ ಕೊಟ್ಟವರು ಲೋಹಿಯಾ. ಅವರು ಜಾತಿ, ಆಸ್ತಿ, ಭಾಷೆಯ ಬಗ್ಗೆ ಮಾತನಾಡುವಾಗ ಹೇಗೆ ಅಂತಾರಾಷ್ಟ್ರೀಯ ಜಾತಿ ಪದ್ಧತಿ, ಆಸ್ತಿ ಪದ್ಧತಿ ಮತ್ತು ಭಾಷಾ ಪದ್ಧತಿ ಅತಿ ಚಿಕ್ಕ ದೇಶಗಳ ಜೀವನವನ್ನು ಕೂಡಾ ನಿಯಂತ್ರಿಸುತ್ತವೆ ಎಂಬುದನ್ನು ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸುತ್ತಾರೆ. ಪಶ್ಚಿಮದ ಬಂಡವಾಳಶಾಹಿಯು ಫ್ಯಾಸಿಸ್ಟ್ ವ್ಯವಸ್ಥೆಯನ್ನು ಸೃಷ್ಟಿಸಿದಂತೆಯೇ ಕಮ್ಯೂನಿಸ್ಟ್ ವ್ಯವಸ್ಥೆಯನ್ನೂ ಹುಟ್ಟಿಸಿತು. ಇವೆರಡೂ ಲೋಹಿಯಾ ಕನಸಿನ ಸಮಾಜವಾದಿ ಜೀವನಕ್ರಮಕ್ಕೆ ಮಾರಕವಾದ ವ್ಯವಸ್ಥೆಗಳು; ವ್ಯಕ್ತಿಯಿಂದ ಆರಂಭವಾಗಿ ಅಂತರ್‌ರಾಷ್ಟ್ರೀಯ ಸಮಾನತೆಯನ್ನು ಮುಟ್ಟಬೇಕಾದ ವ್ಯವಸ್ಥೆ ತಲೆ-ಕೆಳಗು ರೀತಿಯಲ್ಲಿ ಬೆಳೆಯುತ್ತದೆ. ಈ ರೀತಿಯನ್ನು ಅರಿಯದೆ ಬಂಡವಾಳಶಾಹಿ ಅಥವಾ ಕಮ್ಯುನಿಷ್ಟ್ ವ್ಯವಸ್ಥೆಯ ವಿವಿಧ ರೂಪಗಳನ್ನು ಆರಿಸಿಕೊಳ್ಳುವ ತೃತೀಯ ಜಗತ್ತಿನ ದೇಶಗಳು ಕತ್ತಲಲ್ಲಿ ಬಹುಪಾಲು ತಡಕಾಡಿ ಸತ್ಯವನ್ನು ಅರಿಯಬೇಕಾಗುತ್ತದೆ.

ಲೋಹಿಯಾ ರೂಪಿಸುವ ಸಮಾನತೆಯನ್ನವಲಂಬಿಸಿದ ವ್ಯವಸ್ಥೆಯ ಮನುಷ್ಯನ ಬಗ್ಗೆ ಅವರ ನಿಲುವು ಅರ್ಥವತ್ತಾಗಿದೆ. ಶೋಷಣೆ, ಜಾತೀಯತೆ, ನಿಷ್ಕ್ರಿಯಗೊಳಿಸಬಲ್ಲ ಒಣ ಬೌದ್ಧಿಕತೆಯ ಮಾರ್ಗ ತೊರೆದ ಈ ಮನುಷ್ಯ ಅತ್ಯಂತ ಕ್ರಿಯಾಶಾಲಿಯೂ ಸಹಜನೂ ಕ್ರೂರ ಬಂಡವಾಳಶಾಹಿ ಅಥವಾ ಕಮ್ಯುನಿಸ್ಟ್ ಕೋಳಗಳಿಂದ ಮುಕ್ತನಾದವನೂ ಆಗಿದ್ದಾನೆ. ಈತನ ಘನತೆಯಲ್ಲಿ ನಾಗರಿಕನ ತಿಳುವಳಿಕೆಯೂ ನಿಸರ್ಗ ಮಾನವನ ತೀವ್ರತೆಯೂ ಸೇರಿವೆ.

ಹೀಗೆ ಲೋಹಿಯಾ ಚಿಂತಿಸಿದ ಲೋಕ ಆವೃತವೂ ಒಂದರೊಡನೊಂದು ಸಂಬಂಧ ಪಡೆದ ಜೀವಂತ ಅಸ್ತಿತ್ವವುಳ್ಳದ್ದೂ ಆಗಿದೆ.

–ಪಿ.ಲಂಕೇಶ್

ಮೂರ್ತಿ ಭಂಜಕ: ದೇಶ ನಿರ್ಮಾಣ

ಪ್ರೊ. ನಂಜುಂಡಸ್ವಾಮಿ, ತೇಜಸ್ವಿ, ಲಂಕೇಶ ಮುಂತಾದವರ ಒಡನಾಟದಿಂದ ಲೋಹಿಯಾ ವಿಚಾರಧಾರೆ ನನ್ನನ್ನು ದಟ್ಟವಾಗಿ ಆವರಿಸಿಕೊಂಡದ್ದು ೧೯೭೩ರ ನಂತರ. ಆದರೆ ಅದಕ್ಕೂ ಎಷ್ಟೋ ವರುಷಗಳ ಹಿಂದೆ–ನಾನು ೧೯೭–೧೮

ವರ್ಷದವನಿದ್ದಾಗ-ಧಾರವಾಡದ ವಿದ್ಯಾವರ್ಧಕ ಸಂಘದ ಹತ್ತಿರದ ಕೂಟದಲ್ಲಿ ಕಾರೊಂದರ ಮಬ್ಬು ಬೆಳಕಿನಲ್ಲಿ ಕಂಡ ಕೆದರು ತಲೆಯ ಲೋಹಿಯಾ ಚಿತ್ರ ಇನ್ನೂ ನೆನಪಿದೆ.

೧೯೭೩ರ ಈಚೆಗೆ ಅಧ್ಯಯನ ಶಿಬಿರಗಳ ಮೂಲಕ ಎಷ್ಟೋ ಅದಕ್ಕೂ ಹೆಚ್ಚಿಗೆ ಅನೇಕ ಆಂದೋಲನಗಳ ಮೂಲಕವೇ ಲೋಹಿಯಾ ನನ್ನಂಥ ಅನೇಕರಿಗೆ ಸ್ಪಷ್ಟವಾಗುತ್ತ ಹೋದರು. ಬಹಿರಂಗ ವಿಚಾರ ಕೂಟ. ಸಮಾಜವಾದಿ ಯುವಜನ ಸಭಾ, ವಿಚಾರವಾದಿಗಳ ಒಕ್ಕೂಟ, ಬರಹಗಾರರ ಮತ್ತು ಕಲಾವಿದರ ಒಕ್ಕೂಟ, ನವನಿರ್ಮಾಣ ಸಮಿತಿ-ಎಲ್ಲವುಗಳ ಆಳದಲ್ಲಿ ಅಂತರಗಂಗೆಯಾಗಿ ಲೋಹಿಯಾ ಹರಿದಿದ್ದರು. ಸದ್ಯದ ಬಂಡಾಯ ಸಾಹಿತ್ಯ ಸಂಘಟನೆಯಲ್ಲೂ ಗಣನೀಯ ಸಂಖ್ಯೆಯಲ್ಲಿ ಲೋಹಿಯಾವಾದಿಗಳು ಪಾಲುಗೊಂಡಿದ್ದಾರೆ.

ಇತ್ತೀಚೆಗೆ ಕಮ್ಯುನಿಸ್ಟ್ ಸ್ನೇಹಿತರೊಂದಿಗಿನ ಕೊಡ-ಕೊಳ್ಳುವಿಕೆ ಹೆಚ್ಚಾದ ಮೇಲಂತು ನನ್ನ ಲೋಹಿಯಾವಾದಕ್ಕೆ ಇನ್ನೂ ಹೆಚ್ಚಿನ ಖಚಿತತೆ ಬರತೊಡಗಿದೆ. 'ಜಾತಿ' ಅಂದೊಡನೆ ಮಡಿ ಮಡಿ ಎಂದು ಮೈಲು ದೂರ ಹಾರುತ್ತಿದ್ದ ಕಮ್ಯುನಿಸ್ಟರು ಈಗ ಅದನ್ನು ಇಂಡಿಯಾದ 'ವಾಸ್ತವ' ವೆಂದು ಒಪ್ಪಿಕೊಂಡು ತುಂಬ ಸೀರಿಯಸ್ಸಾಗಿಯೇ ಅಧ್ಯಯನ ಮಾಡುತ್ತಿದ್ದಾರೆ. ಲೋಹಿಯಾ ಅಂದರೆ "ಕಮ್ಯುನಿಸ್ಟ್ ವಿರೋಧಿ" ಎಂಬ ಗುಂಗೀಹುಳವನ್ನು ತಲೆಯಲ್ಲಿ ಹಾಕಿಕೊಂಡು ಕೆಲ ಹಸಿ-ಬಿಸಿ ಕಮ್ಯುನಿಸ್ಟರು ಏನಕೇನ ಪ್ರಕಾರೇಣ ಲೋಹಿಯಾರನ್ನು 'ಖಂಡಮ್' ಮಾಡುವ ಸಾಹಸದಲ್ಲೂ ಇದ್ದಾರೆ. ಲೋಹಿಯಾರ ವಿಶ್ಲೇಷಣೆಯನ್ನು ಕೆಲವರು ಗಂಟಲಲ್ಲಿಯೇ ಇರಿಸಿಕೊಂಡು ನೀಲಕಂಠರಾಗಿದ್ದರೆ, ಮತ್ತೆ ಹಲವರು ತಮ್ಮ ವಾತಾಪಿ ಗರ್ಭದಲ್ಲಿ ಜೀರ್ಣಿಸಿಕೊಳ್ಳುವ ಕಸರತ್ತಿನಲ್ಲಿದ್ದಾರೆ. ಇನ್ನೊಂದು ಕಡೆ, ನಾನು ಬ್ರಾಹ್ಮಣ್ಯ ಬಿಟ್ಟರೂ ಬ್ರಾಹ್ಮಣ್ಯ ನನ್ನನ್ನು ಬಿಡಲಿಲ್ಲ ಎಂದು ಗೋಳಾಡುತ್ತ, ಸೋಶಲಿಸ್ಟ್ ನಾಮ ಹೊತ್ತ ಪ್ರಚ್ಛನ್ನ ಜನಸಂಘೀ ದ್ವಂದ್ವಾಚಾರಿಗಳು ಒಂದೊಂದಾಗಿ ತಮ್ಮ ಅನಂತ ಮುಖ(ವಾಡ)ಗಳನ್ನು ಕಳಚುತ್ತಿದ್ದಾರೆ.

ಈ ಎಲ್ಲ ಸಂಕೀರ್ಣ ಪರಿಸರಕ್ಕೆ ಒಂದು ಅರ್ಥ ಕೊಡಬಲ್ಲದ್ದು ಲೋಹಿಯಾ ವಿಚಾರಧಾರೆ. ಲೋಹಿಯಾರನ್ನು ಅರ್ಥ ಮಾಡಿಕೊಳ್ಳುವುದೆಂದರೆ ಇಂಡಿಯಾದ ಭೂತ ವರ್ತಮಾನ ಭವಿಷ್ಯದ ಒಟ್ಟು ನಕಾಶವನ್ನೇ ಅರ್ಥ ಮಾಡಿಕೊಳ್ಳುವುದು. ಬದುಕಿನುದ್ದಕ್ಕೂ ಬಂಡಾಯವನ್ನೇ ಉಸಿರಾಡಿ ಇಂಡಿಯಾದ ಸಮಾಜವಾದಕ್ಕೆ ಒಂದು ಗಟ್ಟಿಮುಟ್ಟಾದ ತಾತ್ವಿಕ ನೆಲೆಗಟ್ಟನ್ನು ಹಾಕಿಕೊಟ್ಟ ಈ ಮಹಾ ಮೂರ್ತಿಭಂಜಕನನ್ನು ಅರ್ಥ ಮಾಡಿಕೊಳ್ಳುವ ಮೂಲಕ ಮಾತ್ರವೇ ನಾವು ನಮ್ಮನ್ನು ಕಟ್ಟಿಕೊಳ್ಳಬಲ್ಲೆವು, ದೇಶವನ್ನೂ ಕಟ್ಟಬಲ್ಲೆವು.

-ಚಂದ್ರಶೇಖರ ಪಾಟೀಲ

ಭಾಷಿಕ ಆಕರ ಮಾತ್ರವಾಗುತ್ತಿರುವ ಲೋಹಿಯಾ

ಕನ್ನಡ ಚಿಂತನೆಯನ್ನು ಒಂದು ಹಂತದಲ್ಲಿ ಹಿಡಿದಿಟ್ಟಿದ್ದ ಕಟ್ಟಾ ಮಾರ್ಕ್ಸ್‌ವಾದಿ ವಿಚಾರಗಳು, ಬರಹಗಾರರನ್ನು ಯಾವ ಇಕ್ಕಟ್ಟಿಗೆ ತಳ್ಳಬಹುದೆಂಬುದನ್ನು ಅರಿತು ಆತಂಕದಲ್ಲಿದ್ದ ಕನ್ನಡ ಸಾಹಿತ್ಯ ಲೋಕಕ್ಕೆ ಲೋಹಿಯಾ ಚಿಂತನೆಗಳು ಬಿಡುಗಡೆಯ ಹಾದಿಯನ್ನು ತೋರಿಸಿದಂತೆ ಈಗ ಅನಿಸುತ್ತಿದೆ. ಲೋಹಿಯಾ ಹೇಳಿದ ಸಮಾಜವಾದಿ ಚಿಂತನೆಗಳಲ್ಲಿ ಬರಹಗಾರರು ಕಲಾವಿದರು ಸಿದ್ಧಾಂತದ ಕುರುಡು ಅನುಯಾಯಿಗಳಾಗಿ ಇರಬೇಕಿಲ್ಲ ಎನ್ನುವ ಅರಿವು ನಮ್ಮ ಹಲವು ಬರಹಗಾರರಿಗೆ ಹೊಸ ಹಾದಿ ದೊರೆತಂತಾಯ್ತು. ಅಲ್ಲದೆ ಕರ್ನಾಟಕದ ರಾಜಕಾರಣದಲ್ಲಿ ಮತ್ತು ಸಾಮಾಜಿಕ ಬೆಳವಣಿಗೆಯ ವಿನ್ಯಾಸದಲ್ಲಿ ಆ ಹೊತ್ತಿಗೆ ತಲೆ ಎತ್ತ ತೊಡಗಿದ್ದ, ನೆಲೆ ಕಂಡುಕೊಳ್ಳ ತೊಡಗಿದ್ದ ಅವೈದಿಕ ಚಿಂತನೆಗಳನ್ನು ಒಂದು ಚೌಕಟ್ಟಿಗೆ ತಂದುಕೊಳ್ಳಲು ಲೋಹಿಯಾ ವಿಚಾರಗಳು ನೆರವಿಗೆ ಬಂದವೆಂದು ತೋರುತ್ತದೆ.

೧೯೭೫ರ ತುರ್ತು ಪರಿಸ್ಥಿತಿಯ ವಾತಾವರಣ ಕಟ್ಟಿಕೊಳ್ಳುವ ಹೊತ್ತಿಗೆ ಕರ್ನಾಟಕದಲ್ಲಿ ಏನೆಲ್ಲ ಬದಲಾವಣೆಗಳು ನಡೆದುಹೋಗಿದ್ದವೆಂಬುದನ್ನು ಈಗ ನೋಡಬೇಕಿದೆ. ಭೂ ಹಿಡುವಳಿಗಳ ಸಮಸ್ಯೆ, ಮೀಸಲಾತಿಯ ಸಮಸ್ಯೆ, ಹಿಂದುಳಿದ ವರ್ಗಗಳಿಗೆ ದೊರೆಯ ಬೇಕಾದ ಪ್ರಾತಿನಿಧ್ಯದ ಪ್ರಶ್ನೆ, ಶಿಕ್ಷಣ ವಲಯದ ವಿಸ್ತರಣೆ ಇವೆಲ್ಲವೂ ಇಡಿಯಾಗಿ ಲೋಹಿಯ ವಿಚಾರಗಳನ್ನು ಕರ್ನಾಟಕದಲ್ಲಿ ಮತ್ತೊಮ್ಮೆ ಪರಿಶಿಲಿಸಲು ಬೇಕಾದ ಅವಕಾಶಗಳನ್ನು ೧೯೭೫ರ ಹೊತ್ತಿಗೆ ತೆರೆದಿಟ್ಟಿದ್ದವು. ಇದರ ಅರ್ಥ ಲೋಹಿಯಾ ಚಿಂತನೆಗಳು ಆ ವೇಳೆಗೆ ಇಲ್ಲಿ ನಿರುಪಯುಕ್ತವಾಗಿದ್ದವು ಎಂದಲ್ಲ.ಆದರೆ ಹೊಸ ಪ್ರಶ್ನೆಗಳು ಹೊಸ ಉತ್ತರಗಳನ್ನು ಬಯಸುತ್ತವೆ ಎಂಬುದನ್ನು ಮರೆಯಬಾರದಲ್ಲ.

ಲೋಹಿಯಾ ಕೆಂಪು ಪುಸ್ತಕ ಕನ್ನಡದಲ್ಲಿ ಪ್ರಕಟಗೊಂಡ ಮೇಲೆಯೂ ಹೊಸ ತಲೆಮಾರಿನ ಎಳೆಯರು ಲೋಹಿಯಾ ಚಿಂತನೆಗಳ ಸೆಳವಿಗೆ ಸಿಗುವುದು ಕಡಿಮೆಯಾದುದೇಕೆ ಎನ್ನುವುದನ್ನು ಕುರಿತು ಈಗ ಯೋಚಿಸಬೇಕಿದೆ. ಈ ಮಾತನ್ನು ಎಲ್ಲರೂ ಒಪ್ಪದೆಯೂ ಇರಬಹುದು. ೧೯೮೦ರ ಬಳಿಕ ಲಂಕೇಶ್ ಪತ್ರಿಕೆಯ ಮೂಲಕ ಬಳಸುದಾರಿಯಿಂದ ಲೋಹಿಯಾ ವಿಚಾರಗಳಿಗೆ ತೆರೆದುಕೊಂಡ ಹೊಸ ತಲೆಮಾರೊಂದು ಸಿದ್ಧಗೊಂಡಿತು ಎಂದು ವಾದಿಸಲೂ ಬಹುದು. ಆದರೆ ಈ ಹೊಸ ತಲೆಮಾರಿನ ರಾಜಕೀಯ ಚಿಂತನೆಗಳು ಅಧಿಕಾರ ಹಂಚಿಕೆಯ ನೆಲೆಗಳಲ್ಲಿ ಬೇರುಬಿಟ್ಟಷ್ಟು ಪ್ರಜಾಪ್ರಭುತ್ವದ ನೆಲೆಗಟ್ಟನ್ನು ಲೋಹಿಯಾ ಮಂಡಿಸಿದ ರೀತಿಯಲ್ಲಿ ನೆಲೆಗೊಳಿಸುವ ಕಡೆಗೆ ಹೋಗಲಿಲ್ಲ ಎನ್ನುವುದನ್ನು ಕೂಡ ಮರೆಯಬಾರದು. ಇದೆಲ್ಲವೂ ಆಗಿ ಹೋದ ಕತೆಗಳು.

ಕಳೆದ ಶತಮಾನದ ಕೊನೆ ದಶಕದಿಂದ ಈಚೆಗೆ ಗಾಂಧಿಯಾಗಲೀ ಲೋಹಿಯಾ

ಆಗಲೀ ಕನವರಿಕೆಗಳ ಹಂತವನ್ನು ದಾಟುತ್ತಿಲ್ಲ. ಮರಳಿ ಆ ಚಿಂತನೆಗಳ ಪ್ರಸ್ತುತತೆಯನ್ನು ನೆಲೆಗೊಳಿಸಲು ಆಗುತ್ತಿಲ್ಲ. ಇದಕ್ಕೆ ನಮ್ಮ ಪ್ರತಿಭಟನೆಯ ರಾಜಕಾರಣವೂ ಕಾರಣವಾಗಿದೆ. ನಾವೀಗ ಭಿನ್ನಾಭಿಪ್ರಾಯಗಳನ್ನು ಹೊಂದುವುದರಲ್ಲಿ ತೋರುವಷ್ಟು ಆಸಕ್ತಿಯನ್ನು ತಾತ್ವಿಕ ಚರ್ಚೆಗಳ ವಿನ್ಯಾಸವನ್ನು ರೂಪಿಸುವುದರಲ್ಲಿ ತೋರುತ್ತಿಲ್ಲ. ಹೀಗಾಗಿ ದೂರಗಾಮಿಯಾದ ಪರಿಣಾಮವನ್ನು ಬೀರಲು ಶಕ್ತವಾಗಿರುವ ಲೋಹಿಯಾ ಚಿಂತನೆಗಳನ್ನು ಕಾರ್ಯಕ್ರಮಗಳನ್ನಾಗಿ ರೂಪಿಸುವ ಕಡೆಗೆ ಹೆಚ್ಚು ಯತ್ನಗಳು ನಡೆಯುತ್ತಿಲ್ಲ.

ಯಾವ ಕಾರಣದಿಂದ ಲೋಹಿಯಾ ಮೊದಲು ಕನ್ನಡ ಬರಹಗಾರರಿಗೆ ಹೊಸ ದಿಕ್ಕನ್ನು ತೆರದು ತೋರಿಸಿದರೋ ಆ ಕಾರಣವೀಗ ನಮ್ಮ ಬರಹಗಾರರ ಮುಖ್ಯ ಕಾಳಜಿ ಆಗಿಯೇ ಇಲ್ಲ. ತಾತ್ವಿಕ ಚೌಕಟ್ಟುಗಳು ಎನ್ನುವುದನ್ನೇ ದೂರ ಒಗೆಯಲು ಮುಂದಾಗುತ್ತಿರುವ ಹೊಸ ತಲೆಮಾರಿನ ಬರಹಗಾರರಿಗೆ ಲೋಹಿಯಾ ಆಗಲೀ ಯಾರೇ ಆಗಲೀ ಕೇವಲ ಭಾಷಿಕ ಆಕರಗಳು ಮಾತ್ರ. ಇದೊಂದು ಹತಾಶೆಯ ಮಾತೆಂದು ತೋರಬಹುದು. ಆದರೆ ಹಾಗನ್ನಿಸುತ್ತಿರುವುದಂತೂ ದಿಟ.

–ಡಾ. ಕೆ.ವಿ.ನಾರಾಯಣ

"ನೀರೆಲ್ಲವೂ ತೀರ್ಥ-ತೀರ್ಥವೆಲ್ಲವೂ ನೀರು"

ರಾಮ ಮನೋಹರ ಲೋಹಿಯಾರ ವ್ಯಕ್ತಿತ್ವದಲ್ಲಿ ಮುಖ್ಯವಾಗಿ ತೋರಿ ಬರುವ ಗುಣ ಅವರ "ಜೀವಂತಿಕೆ". ಅದೇ ಅವರ ಆಕರ್ಷಣೆ. ತನ್ನ ನಾಯಕತ್ವವನ್ನು ತಾನೇ ಒಪ್ಪದಿರುವಷ್ಟು ಜೀವಂತವಾಗಿದ್ದವರು ಲೋಹಿಯಾ ಮಾತ್ರ. ಅವರ ತಲೆಮಾರಿನ, ಹಳೆಯ ಮತ್ತು ಸಮಕಾಲೀನ – ರಾಜಕಾರಣಿಗಳನ್ನು ನೋಡಿ. ಎಲ್ಲರೂ ನಾಯಕತ್ವದ ಭಾರದಿಂದ ತಮ್ಮ ಜೀವಂತಿಕೆಯನ್ನು ಸ್ವಲ್ಪವಾದರೂ ಊನಗೊಳಿಸಿಕೊಂಡವರೇ, ಗಾಂಧಿಯವರನ್ನು ಹೊರತುಪಡಿಸಿ. ಗಾಂಧಿಯವರಿಗೆ ಬದುಕೇ ಒಂದು ಪ್ರಯೋಗವಾದುದರಿಂದ, ಆ ಪ್ರಯೋಗದಲ್ಲಿ ಅವರ ಆತ್ಮಸಾಕ್ಷಿಯ ಪಾತ್ರ ಮಹತ್ವದ್ದಾದುದರಿಂದ, ಜನರ ಸಾಮೂಹಿಕ ಭಾವನೆಗಳಿಗೆ ಪ್ರತಿಯಾಗಿ ಗಾಂಧಿಯವರು ತಮ್ಮ ಆತ್ಮಸಾಕ್ಷಿಯ ಮಾತು ಕೇಳುತ್ತಿದ್ದುದರಿಂದ, ಅವರ ನಾಯಕತ್ವ ಸಾಂಪ್ರದಾಯಿಕ ಕಲ್ಪನೆಯ ನಾಯಕತ್ವಕ್ಕಿಂತ ಭಿನ್ನವಾಗಿತ್ತು. ಆದುದರಿಂದಲೇ ಗಾಂಧಿಯವರನ್ನು ಒಪ್ಪುವುದು ಯಾರಿಗೂ ಸುಲಭವಾಗಿರಲಿಲ್ಲ. ಒಪ್ಪುವುದು ಸುಲಭವಾಗುವಂಥ ಮಾತನ್ನು ಅವರು ಆಡುತ್ತಲೂ ಇರಲಿಲ್ಲ. ಇದೇ ಗಾಂಧಿಯವರ ವ್ಯಕ್ತಿತ್ವದ ನಿಜವಾದ ಔನ್ನತ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ಗಾಂಧಿಯವರು, ಮೊದಲಿನಿಂದಲೂ ಹುತಾತ್ಮನಾಗುವುದರ ಕಡೆಗೆ ಸಾಗುತ್ತಿರುವಂತೆ ಕಂಡರೆ ಅದನ್ನು ತಪ್ಪೆನ್ನಲಾಗದು. ಅಂದರೆ ಜನನಾಯಕನಾದರೂ, ಜನರಂಜನೆಯ ಅಂಶ

ಗಾಂಧಿಯವರ ವ್ಯಕ್ತಿತ್ವದಲ್ಲಿರಲಿಲ್ಲ. "ರಾಜ" ಎಂಬ ಪದಕ್ಕೆ "ಪ್ರಜಾರಂಜಕ" ಎನ್ನುವುದು ನಿಜವಾದ ಅರ್ಥ. "ರಾಜಾ ಪ್ರಕೃತಿ ರಂಜನಾತ್". ("ಪ್ರಕೃತಿ" ಎಂದರೆ ಪ್ರಜಾ ಸಮುದಾಯ) "ರಂಜನ" ಎಂದಾಗ ಕಳಪೆಯ ಅರ್ಥವೇನೂ ಇಲ್ಲ. 'ರಾಜ' ನನ್ನು ಕಂಡಾಗ, ಇವನು ನಮ್ಮವನೇ, ನಮ್ಮ ಮನೋಭಿಲಾಷೆಗಳನ್ನು ಈಡೇರಿಸತಕ್ಕವನೇ, ತನಗೆ ಬೇಕಾದಂತೆ ನಮ್ಮನ್ನು ತಿದ್ದತಕ್ಕವನಲ್ಲ ಎಂಬ ಭಾವ. ರಾಜನ ಹಿಂದೆ ನಾವು ಹೋಗುವುದೆಂದರೆ, ಇನ್ನೊಂದು ಅರ್ಥದಲ್ಲಿ ಅವನು ನಮ್ಮ ಹಿಂದೆ ಬಂದಂತೆಯೇ ಎಂದು ಭಾವ. ಈ ಭಾವಗಳೆಲ್ಲ "ರಂಜನೆ" ಎಂಬ ಪದದ ಅರ್ಥದಲ್ಲಿದೆ. ರಂಜನೆಯ ಅಂಶ ಗಾಂಧಿಯವರಲ್ಲಿರಲಿಲ್ಲ. ಅವರು ಪ್ರಶಸ್ತ ಜೀವ. ಆದುದರಿಂದಲೇ ಜನರ ಹಿಂದೆ ಹೋಗತಕ್ಕವರಲ್ಲ. ಒಂದು ಕೊರತೆಯಂತೆ ಕಾಣುವ ಈ ರಂಜನೆಯ ಅಂಶವನ್ನು ತುಂಬಿಸಿದವರು ನೆಹರೂ. ನೆಹರೂ ಅವರಲ್ಲಿ ರಂಜನೆಯ ಅರ್ಥ ಬಣ್ಣಗಾರಿಕೆಯಂತೆ ಕಂಡು ಬಂತು. ಕೆಂಪು ಗುಲಾಬಿಯ ಒಟ್ಟಿಗೆ ತನ್ನನ್ನು ತಾನು ತೋರಿಸಿಕೊಳ್ಳ ಬಯಸುವ ನಾಯಕ ನೀತ. ಎಲ್ಲಿಯ ಚರಕಾ –ಎಲ್ಲಿಯ ಕೆಂಪು ಗುಲಾಬಿ ? ಎಲ್ಲಿಗೆ ಬಂತು ! ಈ ವಿಪರ್ಯಾಸವನ್ನು ಎತ್ತಿ ಹಿಡಿದವರು ಲೋಹಿಯಾ. ಬದಲಾಗಬೇಕಾದ್ದು ನಾಯಕತ್ವದ ಜೀವನ ಶೈಲಿ ಎಂದು ಗಾಂಧಿಯ ಅನಂತರ ತೀವ್ರವಾಗಿ ಕಂಡುಕೊಂಡವರು ಲೋಹಿಯಾ. ಜೆ.ಪಿ. ಯವರಿಗೆ ಈ ಕಾಣ್ಕೆ ಇತ್ತು. ಆದರೆ ಅವರನ್ನು ವಿನೋಬಾ ಕಬಳಿಸಿದ್ದರು. ಗಾಂಧಿಗೆ ನೆಹರೂ ಇದ್ದಂತೆ ವಿನೋಬಾಗೆ ಒಬ್ಬರು ಬೇಕಿತ್ತು. ಆದರೆ ಗಾಂಧಿ ಯಾರನ್ನೂ ಕಬಳಿಸುವವರಾಗಿರಲಿಲ್ಲ. ಎಲ್ಲರಲ್ಲೂ ಅವರವರ ಕ್ರಿಯಾಶೀಲತೆಯನ್ನು ಗಾಂಧಿ ಬೆಳೆಸುತ್ತಿದ್ದರು. ವಿನೋಬಾಗೆ ಗಾಂಧಿಯವರೇ ಸರಿಯಾಗಿ ಅರ್ಥವಾಗಿರಲಿಲ್ಲ. ಕೊನೆಗೂ ವಿನೋಬಾರನ್ನು ಬಿಟ್ಟುಕೊಟ್ಟೇ ಜೆ.ಪಿ. ತಮ್ಮ ಕ್ರಿಯಾಶೀಲತೆಯನ್ನು ಕಾಣಬೇಕಾಯಿತು.

ಗಾಂಧಿಯ ಅನಂತರ ಯಾರ ತೆಕ್ಕೆಗೂ ಬೀಳದಿದ್ದುದೇ ಲೋಹಿಯಾರ ವಿಶಿಷ್ಟತೆ. ಗಾಂಧಿಯ ಅನಂತರದ ಎರಡು ದಶಕಗಳ ಕಾಲದ ಲೋಹಿಯಾರ ನಿಬಿಡ ರಾಜಕೀಯ ಜೀವನ, ಬದಲಾದ ಪರಿಸ್ಥಿತಿಯಲ್ಲಿ ಗಾಂಧಿಯನ್ನು ಇಟ್ಟು ನೋಡುವ ಪ್ರಯತ್ನದಂತೆ ಇತ್ತು. ಚುನಾವಣಾ ಕೇಂದ್ರಿತ ರಾಜಕೀಯದಲ್ಲಿರುವ ನಿಹಿತ ದ್ವಂದ್ವ ಲೋಹಿಯಾಗೆ ತಾತ್ವಿಕವಾಗಿಯೇ ಅರ್ಥವಾಗಿತ್ತು. "ನನಗೆ ಓಟು ಕೊಡಿ; ನನಗೆ ಒಳ್ಳೆಯದು ಮಾಡಿ, ಅಂದರೆ ನಾನು ನಿಮಗೆ ಒಳ್ಳೆಯದು ಮಾಡುತ್ತೇನೆ." ಎನ್ನುವಲ್ಲಿನ ದ್ವಂದ್ವ. ಇದು ಅರ್ಥವಾಗಿ, ಜನತೆಯಲ್ಲಿ ಸೂಕ್ಷ್ಮತೆಯನ್ನೂ ಸಂವೇದನೆಯನ್ನೂ ಬೆಳೆಸುವ ದಾರಿಯತ್ತ, ಪ್ರಜಾತಂತ್ರವನ್ನು ನಿಜವಾಗಿ ಸಫಲವಾಗಿಸುವ ದಾರಿಯತ್ತ, ಚುನಾವಣಾ ರಾಜಕೀಯವನ್ನು ಬಿಡದೆ–ಅವರು ಯೋಚಿಸಬಲ್ಲವರಾಗಿದ್ದರು. ಅರಿವಿನತ್ತ ತಿರುಗದ ಎಲ್ಲವೂ ಬರಿಯ ಕರ್ಮಕಾಂಡವಾಗಿ ಬಿಡುತ್ತದೆ ಎನ್ನುವ ಈ ಒಳನೋಟ, ಜಾಗತೀಕರಣದ ಈ ದಿನಗಳಲ್ಲಿ ಎಷ್ಟು ಮಹತ್ವದ್ದೆಂದು ಬೇರೆ ಹೇಳಬೇಕಿಲ್ಲ.

ಗಂಗೆಯ ಮಾಲಿನ್ಯದ ಬಗ್ಗೆ ಚಿಂತಿಸುವಾಗ ಇದು "ಧರ್ಮ" ಚಿಂತಿಸಬೇಕಾದ ವಿಷಯ ಎಂದು ಲೋಹಿಯಾಗೆ ಮಾತ್ರ ಹೊಳೆಯಬಲ್ಲುದು. ಕೈಗಾರಿಕೀಕರಣ, ಅದಕ್ಕೆ ಅನುವಾಗುವ ವಿಜ್ಞಾನ, ಮತ್ತು ಬಂಡವಾಳ ಷಾಹಿಗಳಿಗೆ ಪ್ರತಿಪ್ರಸ್ಥಾನವಾಗುವಂತೆ "ಧರ್ಮ" ಬೆಳೆಯದಿದ್ದರೆ ಇವುಗಳ ಜತೆ ಸೇರಿ "ಧರ್ಮ" ಮತಾಂಧವಾಗಬಲ್ಲುದೆನ್ನುವ ಒಳನೋಟವಿದು. Strategy ಮತ್ತು ಒಳನೋಟ ಬೆರೆತ ರಾಜಕಾರಣವಿದು. ಆದುದರಿಂದಲೇ ಕೃಷ್ಣ ಪ್ರಜ್ಞೆ ಅಂತಾರಾಷ್ಟ್ರೀಯವಾಗುವಲ್ಲಿ ಅವರು ರೋಮಾಂಚನವನ್ನು ಅನುಭವಿಸುವಂಥವರಾಗಿರಲಿಲ್ಲ. ಕೃಷ್ಣನ ಬಗ್ಗೆ ಒಂದು ಮಾತು. ಕೃಷ್ಣನದು ಸಮೃದ್ಧ ವ್ಯಕ್ತಿತ್ವ ಎಂದು ಲೋಹಿಯಾ ಬಣ್ಣಿಸುತ್ತಾರೆ. ಆದರೆ ಅವನ ಬದುಕಿನ ಸಾಧನೆಯನ್ನು ನೋಡಿದರೆ "ಸೀಮಿತ ವ್ಯಕ್ತಿತ್ವ"ದ ರಾಮನ ಸಾಧನೆಯು ಹೆಚ್ಚು ಮಹತ್ವದ್ದೆನ್ನುತ್ತಾರೆ. ಕೌರವರಿಂದ ಪಾಂಡವರಿಗೆ–ದಾಯಾದಿಗಳ ನಡುವೆ–ಅಧಿಕಾರ ಹಸ್ತಾಂತರವಾಗುವಂತೆ ನೋಡಿಕೊಂಡ ನೀರಸ ಸಾಧನೆ ಕೃಷ್ಣನದು ಎನ್ನುತ್ತಾರೆ. ಇದು ರಾಜಕೀಯದಲ್ಲಿ ತೊಡಗಿಸಿಕೊಂಡ ಸೂಕ್ಷ್ಮಜ್ಞನಿಗೆ ಮಾತ್ರ ಹೊಳೆಯಬಹುದಾದುದು. ಕೃಷ್ಣನನ್ನು ಬಣ್ಣಿಸುವ ಹೊತ್ತಿನಲ್ಲಿ ನೆಹರೂರವರ ಚಿತ್ರ ಲೋಹಿಯಾ ಮನಸ್ಸಿನಲ್ಲಿತ್ತೆ ? ಭಾರತೀಯರ ಸಂವೇದನೆ ಜಡಗೊಳ್ಳುವುದಕ್ಕೆ "ಜಾತಿ" ಕಾರಣ ಎಂದು ಲೋಹಿಯಾ ನಂಬಿದ್ದರು. ಹೌದೆನ್ನಿಸುತ್ತದೆ. ಶೂದ್ರ ಶಂಬೂಕನನ್ನು ರಾಮ ವಧೆ ಮಾಡಿದುದನ್ನು ಸಮರ್ಥಿಸುವಾಗ, ನಮ್ಮ ದೊಡ್ಡ ಲೇಖಕರಿಗೂ ಕೂಡ, ತಮ್ಮ ಮುಂದೆಯೇ ಇರುವ ಶೂದ್ರರಿಗೆ ಹೇಗೆ ಅನ್ನಿಸಬಹುದೆಂದು ತೋರಲೇ ಇಲ್ಲ. ತಾವು "ಪವಿತ್ರ" ಎಂದು ನಂಬಿದುದನ್ನು ಸಮರ್ಥಿಸಬೇಕೆನ್ನುವ ಉತ್ಸಾಹ ಮಾತ್ರ. ಲೋಹಿಯಾ ಪಾವಿತ್ರ್ಯವನ್ನು ಪ್ರಶ್ನಿಸುವ ಮೂಲಕ ನಂಬಿಕೆಯು ಜೀವನದ ಕಡೆಗೆ ಹೊರಳುವಂತೆ ಮಾಡಬಲ್ಲವರಾಗಿದ್ದರು. ಕುವೆಂಪು, "ನೀರೆಲ್ಲವೂ ತೀರ್ಥ" ಎಂದು ಬರೆದರು. ಇಲ್ಲೂ "ಪಾವಿತ್ರ್ಯ" ಇದೆ. ಅದು ಸರ್ವವ್ಯಾಪಿಯಾಗಿದೆ. ಸರ್ವವ್ಯಾಪಿ ಎಂದ ಮೇಲೆ ಅದನ್ನು ಜೀವನ ಎನ್ನುವುದೇ ಸೂಕ್ತ. ಆದುದರಿಂದ "ತೀರ್ಥವೆಲ್ಲವೂ ನೀರು" ಎನ್ನುವುದೇ ಸಮಂಜಸ. ಲೋಹಿಯಾ ಹೀಗೆ ಹೇಳಬಲ್ಲವರಾಗಿದ್ದರು.

– **ಲಕ್ಷೀಶ ತೋಳ್ಪಾಡಿ**

ಕನಸಿನ ಲೋಕದೆದುರು ವಾಸ್ತವತೆಯ ಬೆಂಗಾಡು

ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯದಲ್ಲಿ ಧರ್ಮ ನಿರಪೇಕ್ಷತೆ, ಸಮಾನತೆ, ಸಮಾಜವಾದ ಮುಂತಾದ ಶಬ್ದಗಳು ಭಾರತೀಯನನ್ನು ಕನಸಿನ ಸುಂದರ ಲೋಕಕ್ಕೆ ಕೊಂಡೊಯ್ದಿವೆ. ಈ ಶಬ್ದಜಾಲದ ಗುಂಗಿನಿಂದ ನಾವು ಇಂದಿಗೂ ಎಚ್ಚರಗೊಂಡಿಲ್ಲ. ನೆಹರೂ ಅವರ ಆಳ್ವಿಕೆಯಲ್ಲಿ ಪ್ರಾರಂಭವಾದ ಈ ಕಲ್ಪನಾ ವಿಹಾರ ಲಹರಿ ನೆಹರೂ ನಂತರವೂ ಯಜಮಾನೀ ರಾಜಕೀಯವನ್ನು ಮುಂದುವರೆಸಿಕೊಂಡು ಬಂದಿರುವುದೇ

ಇದಕ್ಕೆ ಸಾಕ್ಷಿ. ಈ ಸುಂದರ ಕನಸಿನ ಲೋಕದ ಎದುರು ವಾಸ್ತವತೆಯ ಬೆಂಗಾಡಿನ ಚಿತ್ರವನ್ನು ಕಣ್ಣೆದುರಿಗಿಟ್ಟು ಬೆಚ್ಚಿ ಬೀಳುವಂತೆ ಮಾಡುತ್ತಿದ್ದ ವ್ಯಕ್ತಿ, ಲೋಹಿಯಾ. ನೆಹರೂ ವ್ಯಕ್ತಿತ್ವದ, ಯುಗದ ಸಂಮೋಹಿನಿಯಲ್ಲಿದ್ದವರೆಲ್ಲರಿಗೂ ಇವರೊಬ್ಬ ತಲೆತಿರುಕರಂತೆ ಕಂಡಿದ್ದರೆ ಅಚ್ಚರಿಯಿಲ್ಲ.

ವಾಸ್ತವತೆಯ ಝಳ ಸ್ವಪ್ನ ಸಾಮ್ರಾಜ್ಯವನ್ನು ಭಗ್ನಗೊಳಿಸುವುದನ್ನು ಕಂಡಾಗ; ನೆಹರೂ ಮತ್ತು ಲೋಹಿಯಾ ಇಬ್ಬರೂ ನಮ್ಮಿಂದ ಮರೆಯಾದಾಗ ಹೆಚ್ಚು ಹೆಚ್ಚು ಅರ್ಥವಾಗತೊಡಗಿದರು. ನಿರುದ್ಯೋಗ ಸೃಷ್ಟಿಸುವ ಗುಮಾಸ್ತಶಾಹಿ ಶಿಕ್ಷಣ ಪದ್ಧತಿ; ದುಡಿಯುವ ಕೈಗಳ ಅವಕಾಶಗಳನ್ನು ಕಿತ್ತುಕೊಳ್ಳುವ ಪಾಶ್ಚಿಮಾತ್ಯ ಮಾದರಿಯ ಕೈಗಾರಿಕೀಕರಣ; ಕೃಷಿ ಪ್ರಧಾನ ದೇಶದಲ್ಲಿ ಅತ್ಯಂತ ಕಡೆಗಣಿಸಲ್ಪಟ್ಟ ಕೃಷಿ ಮತ್ತು ಗೃಹ ಕೈಗಾರಿಕೆಗಳು–ಇವು ನೆಹರೂ ಪಂಚವಾರ್ಷಿಕ ಯೋಜನೆಯ ವೈಶಿಷ್ಟ್ಯಗಳು. ಇದರ ಪರಿಣಾಮ ವರ್ಷವರ್ಷವೂ ಲಕ್ಷಗಟ್ಟಲೆ ಹೊರಬೀಳುತ್ತಿರುವ ನಿರುದ್ಯೋಗಿ ಪದವೀಧರರ ಸೈನ್ಯ, ಬೃಹತ್ ಕೈಗಾರಿಕೆಗಳೊಂದಿಗೆ ಸೆಣಸಲಾಗದೆ ನೆಲಸಮವಾದ ಗುಡಿಕೈಗಾರಿಕೆಗಳು, ಅಶಿಕ್ಷಿತ ಮತ್ತು ಕುಶಲಕಾರ್ಮಿಕರ ನಿರುದ್ಯೋಗಿ ದಂಡು; ಅಗತ್ಯ ಹಣ ಪೂರೈಕೆಯ ಅಭಾವದಿಂದಾಗಿ ಸೇಠ್‌ಗಳ, ಮಾರವಾಡಿಗಳ ಅಡಿಯಾಳಾಗಿ, ಬೃಹತ್ ನೀರಾವರಿ ಸೌಕರ್ಯವಿದ್ದರೂ ಅದರ ಫಲವನ್ನು ಭೋಗಿಸಲಾಗದ, ದೇಶಕ್ಕೆ ಮುಟ್ಟಿಸಲಾಗದ ಒಕ್ಕಲಿಗರ ಸಮೂಹ; ಇವೆಲ್ಲವುಗಳ ಒಟ್ಟಂದದ ಪರಿಣಾಮ ನಮ್ಮ ಅಪಾರ ಮಾನವಶಕ್ತಿ, ಬುದ್ಧಿಶಕ್ತಿ ಮತ್ತು ಸಾವಿರಾರು ವರ್ಷಗಳಿಂದ ಮೈಗೂಡಿಸಿಕೊಂಡು ಬಂದ ಕುಶಲತೆಯ ಅಳಿವಿಗೆ, ಅಪವ್ಯಯಕ್ಕೆ ಕಾರಣವಾಗಿದೆ.

ಸದಾ ವಿವಾದಗಳ ಕೇಂದ್ರವಾಗಿದ್ದ, ಪಾದರಸ ಸದೃಶ ವ್ಯಕ್ತಿತ್ವವುಳ್ಳ ಲೋಹಿಯಾ ಇಂದಿನ ಪರಿಸ್ಥಿತಿಯಲ್ಲಿ ನಮಗೆ ಹೆಚ್ಚು ಅರ್ಥವಾಗುತ್ತಾರೆ. ಹತ್ತಿರವಾಗುತ್ತಾರೆ. ಗಾಂಧಿ, ನೆಹರೂ ಮತ್ತಿತರರು, ಸಾಮಾಜಿಕ, ರಾಜಕೀಯ ಕಾರಣಗಳಿಂದ ಮಹತ್ವದ ವ್ಯಕ್ತಿಗಳೇ ಹೊರತು ಮಾನವತೆಗೆ ಅವರ ಕೊಡುಗೆ ಅತ್ಯಲ್ಪ. ಭಾರತದ ಬಗ್ಗೆ, ಭಾರತೀಯರ ಬಗೆಗೆ ಮೂಲಭೂತವಾಗಿ ಅಭ್ಯಾಸ ಮಾಡಿ ನಮ್ಮಲ್ಲಿ ತಾಂಡವವಾಡುತ್ತಿರುವ ಸರ್ವತ್ರ ಅಸಮಾನತೆಯ ನಿವಾರಣೆಗಾಗಿ ಚಿಂತಿಸಿದವರು ಲೋಹಿಯಾ ಒಬ್ಬರೇ.

ಬಂಡವಾಳಶಾಹಿ ಪದ್ಧತಿ ಸಂಪತ್ತಿನ ವೃದ್ಧಿಯೊಂದನ್ನೇ ಗುರಿಯಾಗಿಟ್ಟುಕೊಂಡು ಈ ಮಾರ್ಗದಲ್ಲಿನ ಅಡಚಣೆಗಳನ್ನು ಸಮೂಲವಾಗಿ ನಾಶ ಮಾಡುವದಾದ್ದರಿಂದ ಶೋಷಣೆಯೇ ಅದರ ಮೂಲತತ್ವ. ಹಾಗಾಗಿ ಈ ಪದ್ಧತಿಯಲ್ಲಿ 'ಸಮಾನತೆ' ಎನ್ನುವ ಪದಕ್ಕೆ ಸ್ಥಾನವಿಲ್ಲ. ಅನಕ್ಷರತೆ, ಬಡತನ ಮತ್ತು ಅಸಮಾನತೆ ತಾಂಡವವಾಡುತ್ತಿರುವ ನಮಲ್ಲಿ ಇದು ಹೊಂದುವುದಿಲ್ಲವೆನ್ನುವುದು ಅವರ ಖಚಿತ ನಂಬಿಕೆ.

ವೈಯಕ್ತಿಕ ಸ್ವಾತಂತ್ರ್ಯ ಆಚರಣೆಯಲ್ಲಿಲ್ಲದ ಕಮ್ಯುನಿಸ್ಟ್ ಪದ್ಧತಿ ಎಲ್ಲರಿಗೂ ಅನ್ನ ನೀಡುವ ಹೆಸರಿನಲ್ಲಿ ಮನುಷ್ಯರ ಸಹಿತ ಎಲ್ಲವನ್ನೂ ರಾಷ್ಟ್ರೀಕರಿಸಿ, ವ್ಯಕ್ತಿಯನ್ನು

ಆಡಳಿತದ ಗುಲಾಮನನ್ನಾಗಿಸುತ್ತದೆ. ಲೋಹಿಯಾ ದೃಷ್ಟಿಯಲ್ಲಿ ಬಂಡವಾಳಶಾಹಿ ಪದ್ಧತಿಗಿಂತಲೂ ಅಪಾಯಕಾರಿಯಾದದ್ದು ಕಮ್ಯೂನಿಸಂ. ಕೇಂದ್ರೀಕರಣ ಕೆಲವೇ ವ್ಯಕ್ತಿಗಳ ತೆಕ್ಕೆಯಲ್ಲಿದ್ದರ ಅವರು ಸರಕಾರಕ್ಕೆ ಅತೀತರಲ್ಲ. ಸರಕಾರವೇ ಈ ಪಾತ್ರ ವಹಿಸಿದಾಗ ಶೋಷಣೆ ಕಾನೂನುಬದ್ಧವಾಗುತ್ತದೆ. ಬಂಡವಾಳಶಾಹಿ ಪರಾಕಾಷ್ಠೆ ಮುಟ್ಟಿದ್ದೇ ಕಮ್ಯೂನಿಸಂ ಎಂದು ಅವರ ವಿಚಾರ.

ಜಗತ್ತಿನ ಬೇರೆಲ್ಲಿಯೂ ಇರದ, ಭಾರತಕ್ಕೆ ಸೀಮಿತವಾದ ಸಮಸ್ಯೆಯೆಂದರೆ ನಮ್ಮ ಜಾತಿ ಪದ್ಧತಿ. ಧರ್ಮದ ಹೆಸರಿನಲ್ಲಿ ಎಷ್ಟೆಲ್ಲ ಶೋಷಣೆ ನಡೆಯಬಹುದೆಂಬುದಕ್ಕೆ ಅವರು ಒಂದು ಉದಾಹರಣೆ ನೀಡುತ್ತಾ ಹೇಳುತ್ತಾರೆ. "ಅರವತ್ತು ಕೋಟಿ ಜನತೆಯ ಅತ್ಯುನ್ನತ ಮಟ್ಟವನ್ನು ಪ್ರತಿನಿಧಿಸುವ ರಾಷ್ಟ್ರಪತಿಯವರು ಧರ್ಮದ ನೆಪದಲ್ಲಿ ಗಂಗಾನದಿಯಲ್ಲಿ ಯಃಕಶ್ಚಿತ್ ಮನುಷ್ಯನೊಬ್ಬನ ಪಾದ ತೊಳೆಯುವುದು ಇಡೀ ಮಾನವತೆಗೇ ಅವಮಾನ" ಜಾತ್ಯತೀತತೆಯ ಬಗೆಗೆ ನಾವು ಎಷ್ಟು ಬಾಯಿ ಬಡಿದುಕೊಂಡರೂ ಭಾರತೀಯನ ಹಣೆಬರಹವೂ ಅವನ ಜಾತಿಯಿಂದಲೇ ನಿರ್ಧಾರವಾಗುತ್ತದೆ. ಅದನ್ನು ಅರಿತ ಅವರು ನಮ್ಮ ದೇಶದಲ್ಲಿ ಉತ್ತಮ ಜಾತಿ, ಶ್ರೀಮಂತಿಕೆ ಮತ್ತು ಇಂಗ್ಲಿಷ್ ಜ್ಞಾನ ಈ ಮೂರರಲ್ಲಿ ಎರಡನ್ನು ಯಾರು ಪಡೆದಿರುತ್ತಾರೋ ಅವರು ಮುಂದೆ ಬರುತ್ತಾರೆ ಎಂದಿದ್ದಾರೆ. ಜಾತಿಯೊಂದಿಗೆ ಶ್ರೀಮಂತಿಕೆ, ಶ್ರೀಮಂತಿಕೆಯ ಹಿಂದೆ ಇಂಗ್ಲಿಷ್ ಜ್ಞಾನ. ಹಿಂದೂ ಧರ್ಮದ ಜಾತಿಯ ಸ್ತರಗಳಲ್ಲಿ ಕೆಳಗಿಳಿಯುತ್ತಾ ಹೋದಂತೆ ಶ್ರೀಮಂತಿಕೆ, ಇಂಗ್ಲಿಷ್ ಜ್ಞಾನಗಳೆರಡೂ ಹೇಗಿರುತ್ತವೆಯೆನ್ನುವುದಕ್ಕೆ ನಿದರ್ಶನಗಳೇ ಬೇಕಿಲ್ಲ.

ಇತ್ತೀಚೆಗೆ ಕೆಲವು ಬದಲಾವಣೆಗಳು ಕಣ್ಣಿಗೆ ಹೊಡೆಯುವಷ್ಟು ಹೊಂದಿವೆ. ಬಾಟಾ ಕಂಪನಿಯಲ್ಲಿ ನೌಕರಿ ಮಾಡುವ ಬ್ರಾಹ್ಮಣರೂ ಇದ್ದಂತೆ, ಪ್ರಥಮ ದರ್ಜೆ ಅಧಿಕಾರಿಗಳಾದ ಶೂದ್ರರೂ ಇದ್ದಾರೆ. ಇದು ಮೇಲ್ನೋಟಕ್ಕೆ ಕಂಡರೂ ಬದಲಾವಣೆ ಮೂಲಭೂತವಾಗಿ ಇಲ್ಲವೇ ಇಲ್ಲ ಎನ್ನುವಷ್ಟು. ಏಕೆಂದರೆ ಈ ಜಾತಿಪದ್ಧತಿ ಇಂದು ಅಧಿಕಾರಶಾಹಿ ಮತ್ತು ರಾಜಕೀಯ ಯುಗಗಳಲ್ಲಿಯೂ ಬೇರೂರಿಬಿಟ್ಟಿವೆ. ದೈಹಿಕ ಸಂಕಷ್ಟವನ್ನೇ ಅರಿಯದ ಕಾರ್ಮಿಕ ನಾಯಕರು ಶ್ರೀಮಂತ ಕುಟುಂಬದಿಂದ ಬಂದ ಕಮ್ಯುನಿಷ್ಟ್ ಲೀಡರುಗಳು ಸದಾ ವಿದೇಶಿ ಕಾರಿನಲ್ಲೇ ಓಡಾಡುವ ಸಮಾಜವಾದಿಗಳು ಈ ಹೊಸ ಬೆಳವಣಿಗೆಯ ಪೈರುಗಳು. ಕ್ರಾಂತಿ ಉತ್ಕ್ರಾಂತಿಗಳೆಲ್ಲವೂ ಹುಟ್ಟುವ ಮುನ್ನವೇ ಸಾಯುವಂತೆ ನೋಡಿಕೊಳ್ಳುವವರೂ ಇವರೆ. ಏಕೆಂದರೆ ಮೇಲೆ ಹೇಳಿದ ಜಾತಿ, ಹಣ, ಶಿಕ್ಷಣ ಮುಂತಾದವುಗಳೊಂದಿಗೆ ಬಿಡಲಾಗದ ಯಾವುದೋ ಒಂದು ನಂಟು ವ್ಯವಸ್ಥೆಯೊಂದಿಗೆ ಇವರನ್ನು ಬೆಸೆದಿರುತ್ತದೆ. ಈ ಕಾರಣಕ್ಕಾಗಿಯೇ ಕೇಂದ್ರೀಕೃತ ಆಡಳಿತ ವ್ಯವಸ್ಥೆ, ಕೇಂದ್ರೀಯ ಸೇವಾ ವ್ಯವಸ್ಥೆಗಳು ದಿನದಿನಕ್ಕೂ ಪ್ರಬಲಗೊಂಡು ಮಣ್ಣಿನ ಮಕ್ಕಳೆಲ್ಲರೂ ಮಣ್ಣು ತಿನ್ನುವ ಪರಿಸ್ಥಿತಿ ಬಂದಿರುವುದು. ಬದಲಾವಣೆ

ಬವಣೆಗೊಳಗಾದವರಲ್ಲಿ ಉಂಟಾಗಬೇಕೇ ಹೊರತು, ತತ್ವದ ನಾಯಕತ್ವದ ಹೆಸರಿನಲ್ಲಿ ಮೊಸಳೆ ಕಣ್ಣೀರು ಸುರಿಸುವವರಿಂದಲ್ಲ. ಪ್ರತಿಯೊಂದು ಸಿದ್ಧಾಂತದಲ್ಲಿ ಪರಿಗಣಿತರಾದವರು ಕೆಲವೇ ಜನರಿದ್ದರೆ ಮತ್ತು ಯಾವುದೋ ವೈಯಕ್ತಿಕ ಆಮಿಷ ಅವರನ್ನು ಕಾಡುತ್ತಿದ್ದಾಗ ಈ ಪರಿಸ್ಥಿತಿಗಳು ಕಾಣಿಸಿಕೊಳ್ಳುತ್ತವೆ. ಇಂಥ ಬಿಡಿಸಲಾಗದ ಬಂಧನದಿಂದ ಹೊರಬರಬೇಕಾದರೆ ಲೋಹಿಯಾ ವಿಚಾರಧಾರೆಯ ಬೆಳಕಿನಲ್ಲಿ ನಮ್ಮ ಬಾಳಿನ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳಬಹುದಾಗಿದೆ.

–ರಾಜಶೇಖರ ನೀರಮಾನ್ವಿ

ಸಮುದಾಯದ ನೋವಿನಾಳದ ಕನಸುಗಳು

ಕನ್ಯೆಯೊಬ್ಬಳ ಪ್ರೇಮಕ್ಕೆ ಕಾರಣ ಕೇಳುವುದು ಬಹುಶಃ ಕಟುಕತನವಾಗಬಹುದು; ಏಕೆಂದರೆ ಅದು ಅತ್ಯಂತ ಪ್ರಿಯವಾದ ಗುಟ್ಟೊಂದರ ಮೇಲೆ ನಡೆಯಬಹುದಾದ ದಾಳಿ; ಇಷ್ಟಕ್ಕೂ ಬದುಕಿನ ಉದ್ದಗಲಗಳಲ್ಲಿ ಕಾಣದಂತೆ ಕರಗಿರುವ ಸಂಗತಿಯೊಂದಕ್ಕೆ ಆಕೃತಿ ನೀಡುವ ಕಷ್ಟದ ಕೆಲಸ ಅದಾಗಿರುತ್ತದೆ. ಹಾಗೆಯೇ 'ನಾನೇಕೆ ಲೋಹಿಯಾವಾದಿ?' ಎಂಬ ಪ್ರಶ್ನೆ ನನಗೆ ಎದುರಾದಾಗ ಒಂದು ಕ್ಷಣ ಅನಿರ್ವಚನೀಯ ಅನ್ನುವಂಥ ಮಧುರಯಾತನೆಯ ಅನುಭವವಾಯ್ತು. ಅದೇ ಕ್ಷಣವು ಸಂಕೋಚ ನಾಚಿಕೆಗಳ ಇತರ ಎಷ್ಟೋ ಕ್ಷಣಗಳನ್ನು ನನಗರಿವಿಲ್ಲದಂತೆಯೇ ಹುಟ್ಟು ಹಾಕಿತು. ನಾನು ಯಾವ ಪ್ರಮಾಣದಲ್ಲಿನ ಲೋಹಿಯಾವಾದಿಯೋ ನನಗೆ ಗೊತ್ತಿಲ್ಲ; ಈ ಮಾತು ಕೂಡ ನನ್ನ ಪಾಲಿಗೆ ಎರಡು ಕಾರಣಗಳಿಗಾಗಿ ಅಭಿಮಾನದ ಸಂಗತಿಯಾಗಿದೆ. ೧. ಲೋಹಿಯಾ ಚಿಂತನೆಯನ್ನೆಲ್ಲಾ ಸಂಪೂರ್ಣ ಗ್ರಹಿಸಿಕೊಂಡಿದ್ದೇನೆನ್ನುವ, ಆ ಥರ ಬದುಕುತ್ತಿದ್ದೇನೆನ್ನುವ ಅಹಂಕಾರದಲ್ಲಿ ಮುಳುಗುವುದರಿಂದ ಪಾರಾಗುವುದು; ಈ ಲೋಹಿಯಾವಾದ ನನಗೆ ಇದನ್ನೆಲ್ಲಾ ಕಲಿಸಿದೆ ಅಥವಾ ನಾನು ನುಡಿದದ್ದು, ನಡೆದದ್ದೇ ಲೋಹಿಯಾವಾದದ ಹೆದ್ದಾರಿ ಅನ್ನುವ ಭ್ರಮೆಯಿಂದ ಹುಟ್ಟಬಹುದಾದ ಅಪಚಾರದೊಡನೆ ಕೈ ಜೋಡಿಸದಿರುವುದು ೨. ಲೋಹಿಯಾವಾದ ಅನ್ನುವುದೊಂದೇ ಬದುಕಿನಲ್ಲಿ ಪರಮಗಂತವ್ಯವಲ್ಲ ಅಥವಾ ಅದು ಸರ್ವರುಜಾಪಹಾರಿಣಿಯೂ ಅಲ್ಲ ಅಥವಾ ಅದು ಬೆಳವಣಿಗೆಯುಳ್ಳದದ್ದು. ಅಂದರೆ ಈ ಚಿಂತನೆಯ ಬೆಳಕಿನಲ್ಲಿ– ನಾವೇ ಉಣ್ಣುವ ಊಟ ಮತ್ತು ಅನುಭವಿಸುವ ರತಿಸುಖದ ಥರ ಖುಷಿಯ, ದಣಿವಿನ ದಾರಿಯನ್ನು ನಾವೇ ಖುದ್ದಾಗಿ ಸವೆಸಬೇಕಾಗುತ್ತದೆ.

ಆರಂಭದಲ್ಲಿ ಹೀಗೆ ಯಾಕೆ ಹೇಳಬೇಕಾಯಿತೆಂದರೆ, ನಮ್ಮ ನಡುವೆ ಲೋಹಿಯಾ ಇಲ್ಲದಿರುವ ಈ ದಿನಗಳಲ್ಲಿ ಮಾರ್ಕ್ಸ್, ಗಾಂಧಿ ಮತ್ತಿತರ ಕೆಲವು ವಾದಿಗಳಿಗೆ

ಮಾಹೇಶ್ವರ ಸ್ಥಲದ ಅಂಧಭಕ್ತರು ಹುಟ್ಟಿಕೊಂಡಿರುವಂತೆ ಈ ವಾದಕ್ಕೂ ಕೆಲವರಾದರೂ ಅಂಥವರು ಬೆನ್ನು ಹತ್ತಬಹುದೆಂಬ ಗುಮಾನಿ ಹಾಗೂ ಭಯ ನನ್ನನ್ನು ಆಗಾಗ ಕಲಕಿದೆ. ಅದರ ಜೊತೆಗೆ ಇನ್ನೂ ತೀವ್ರವಾಗಿ ನನಗೆ ಅನ್ನಿಸಿರುವುದು– ಸದಾ ಸಮುದಾಯದ ನೋವು ಹಾಗೂ ನೋವಿನಾಳದ ಕನಸುಗಳನ್ನು ಹುಡುಕಿ ಅರ್ಥೈಸುವ ಅದಮ್ಯ ಹಣಗಾಟದ ಲೋಹಿಯಾ ಅನ್ನುವ ಚೈತನ್ಯವನ್ನು ಗುರು ಅಥವಾ ಅಧ್ವರ್ಯು ಅನ್ನುವಂತೆ ಒಂದು ಮಡಿವಸ್ತು ಮಾಡಿ ಮೂಲೆಗೆಸೆಯದೆ–ಆ ವ್ಯಕ್ತಿಯನ್ನು ನಮ್ಮ ನಡುವಣ ಅನ್ಯಾಯಗಳ ಬೇರು ಹುಡುಕಿ ಬಿಸಿ ನೀರೆರೆಯುವ ಬಿಟ್ಟಿ ಚಾಕರಿಗೆ ಅಂಟಿಕೊಂಡಿದ್ದ ದಟ್ಟವಾದ ಜೀವನ ಪ್ರೀತಿಯ ಹರಿಕಾರ ಮಿತ್ರನನ್ನಾಗಿ ಮಾತ್ರ ಕಂಡು ಆತನನ್ನು ನಮ್ಮ ಬಾಳ್ವೆಯ ನಿರಂತರ ಎಚ್ಚರದ ಒರೆಗಲ್ಲಾಗಿಸಿಕೊಳ್ಳಬೇಕಾಗಿದೆ.

ಮನುಷ್ಯಜೀವಿಯ ಹದಿಹರೆಯ ಪ್ರೇಮ, ಆದರ್ಶ ಹಾಗೂ ಆ ಕಾಲದ ಮತ್ತಾವುದೇ ಉತ್ಕಟ ಗಳಿಗೆಗಳು ಆ ವ್ಯಕ್ತಿಯು ಮಣ್ಣಿಗೆ ಮರಳುವ ತನಕವೂ ಗಾಢವಾಗಿ ಕಾಡುವ ಸಮ್ಮೋಹನ ಶಕ್ತಿಯನ್ನು ಹೊಂದಿರುತ್ತವೆ. ನನ್ನ ಇಪ್ಪತ್ತರ ಹರೆಯಲ್ಲಿ ಈ ಲೋಹಿಯಾ ನನ್ನನ್ನು ಹೊಕ್ಕಿದ್ದು; ಇಂಡಿಯಾದ ವರ್ಗ, ವರ್ಣ, ಜಾತಿ, ಲಿಂಗಭೇದ ನೀತಿಯ ಸೂಕ್ಷ್ಮಗಳ ಬಗ್ಗೆ; ಅಸ್ಪೃಶ್ಯತೆ, ಮೌಢ್ಯ, ಕೀಳರಿಮೆಗಳು ಯಾವುದೇ ರಾಷ್ಟ್ರವನ್ನು ಅವನತಿಗೆ ತಳ್ಳಬಹುದಾದ ಭಯಂಕರ ಸ್ಥಿತಿಯ ಬಗ್ಗೆ ಸ್ಪಷ್ಟವಾಗಿ ಕಣ್ತೆರೆಯಲು ನನಗಂತೂ ಸಾಧ್ಯವಾದದ್ದು ಅಲ್ಲಿಂದಲೇ. ಪ್ರಜಾಪ್ರಭುತ್ವ, ವಿಕೇಂದ್ರೀಕರಣ ಹಾಗೂ ಅಹಿಂಸೆಯ ದಾರಿಯನ್ನು ಆಯ್ಕೆ ಮಾಡಿಕೊಂಡು ಮಾನವೀಯ ಮೌಲ್ಯಗಳಿಗಾಗಿ ನಾವು ಕೆಚ್ಚಿನಿಂದ ಹೋರಾಡುವುದು ಅತ್ಯಂತ ಪ್ರಿಯ ಕಾಯಕವಾಗಬೇಕೆನ್ನುವ ಮನೋಧರ್ಮ ಅಲ್ಲಿಂದಲೇ ಸಿಕ್ಕಿದ್ದು. ಜನಸಮಯಯದಾದಯ ಒಟ್ಟು ಬದುಕಿನ ಬತ್ತಿದ ಆಸೆಗಳು, ಕೊರತೆಗಳು, ಕನಸುಗಳು ಹಾಗೂ ಎಲ್ಲ ಬಗೆಯ ತೀವ್ರಾನುರಾಗದ ಬಗ್ಗೆ ಲೋಹಿಯಾಗೆ ಇದ್ದ ಅರಿವು, ಸೂಕ್ಷ್ಮಜ್ಞತೆ–ನಿಜಕ್ಕೂ ದಂಗುಗೊಳಿಸುವಂಥವುಗಳು. ಎಲ್ಲ ಸತ್ಯಗಳಿಗು ತೆರೆದುಕೊಳ್ಳಬೇಕೆಂದು ನಿರಂತರವಾಗಿ ಹಾತೊರೆಯುತ್ತಿದ್ದ ಶ್ರೇಷ್ಠ ಕಲಾವಿದ ಮನಸ್ಸು ಆತನದು. ನಮ್ಮ ಸುತ್ತಣ ಯಾವುದೇ ಪ್ರಮಾಣದ ಅನ್ಯಾಯದ ವಿರುದ್ಧ ಸೆಣಸಾಡುವ ಉತ್ಕಟವಾದ ಬಯಕೆ ತಂತಾನೆ ಆರೋಗ್ಯಪೂರ್ಣವೂ ಅದಮ್ಯ ಶಕ್ತಿಶಾಲಿಯೂ ಆಗಿದ್ದೇ ತೀರುತ್ತದೆನ್ನುವ ನೆಮ್ಮದಿಯ, ಜೀವಪ್ರೀತಿಯ ಕ್ಷಣಗಳ ಆರಂಭ ನನ್ನಂಥವನ ಪಾಲಿಗೆ ದೊರೆತಿದ್ದು ಈ ವ್ಯಕ್ತಿಯಿಂದಲೇ ಸರಿ. ಈ ಬಗೆಯ ಜೀವನೋತ್ಸಾಹ ಹಾಗೂ ಕರ್ತವ್ಯಪ್ರಜ್ಞೆಯ ಹೊಳಹುಗಳನ್ನು ನೀಡಿದ ಹಿರಿಯ ಸಂಗಾತಿ ಈ ಲೋಹಿಯಾ.

–ಕಾಳೇಗೌಡ ನಾಗವಾರ

ರಾಷ್ಟ್ರದ ಪುನಾರಚನೆಗೆ ಪ್ರೇರಕ ಶಕ್ತಿ

ಡಾ. ರಾಮಮನೋಹರ ಲೋಹಿಯಾರವರು ೧೯೪೭ರಿಂದ ೧೯೬೭ರವರೆಗೆ ಅಖಂಡ ೨೦ ವರ್ಷಗಳವರೆಗೆ, ಭಾರತದ ರಾಜಕೀಯ ಜೀವನದಲ್ಲಿ ಏಕಾಕಿಯಾಗಿ ಅದಮ್ಯ ಉತ್ಸಾಹದಿಂದ, ಇಡೀ ಮಾನವ ಸಮಾಜದ ಪುನಾರಚನೆಯ ಸ್ಪಷ್ಟವಾದ ಧ್ಯೇಯ ಧೋರಣೆಯೊಂದಿಗೆ ಹೋರಾಡಿದವರು. ಅವರು ಮಹಾನ್ ಕ್ರಾಂತಿಕಾರಿ ಕಾರ್ಲ್ ಮಾರ್ಕ್ಸ್‌ನ ನಂತರದ ಜಗತ್ತಿನ ಶ್ರೇಷ್ಠ ರಾಜಕೀಯ ಸಿದ್ಧಾಂತಿ.

ಲೋಹಿಯಾರವರು ಭಾರತದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪುನಾರಚನೆಯ ಮುಖಾಂತರ ಜಗತ್ತಿನ ಕಡುಬಡ ರಾಷ್ಟ್ರಗಳಾದ ಏಶಿಯಾ, ಆಫ್ರಿಕಾ ಖಂಡಗಳ ಬದುಕಿಗೆ ನಿರ್ದಿಷ್ಟ ಮಾರ್ಗ ತೋರಿಸಿದರು.

ಅವರ ರಾಜಕೀಯ ವಿರೋಧಿಗಳು ಅವರ ವಿಚಾರಗಳನ್ನು ವಿಕೃತಗೊಳಿಸಿ ಅವರನ್ನು ಒಬ್ಬ 'ಅವ್ಯವಹಾರಿಕ ವಿಚಿತ್ರ ವ್ಯಕ್ತಿ' ಎಂದು ಚಿತ್ರಿಸಲು ಬುಧ್ಯಾಪೂರ್ವಕ ಯತ್ನಿಸಿದರು. ಆದರೆ ಭಾರತದ ಮತ್ತು ಜಗತ್ತಿನ ಇಂದಿನ ಹಂತದಲ್ಲಿ ಡಾ. ಲೋಹಿಯಾರ ದೃಷ್ಟಿಕೋನ, ವಿಚಾರಗಳು, ಅದರಲ್ಲೂ ಅವರು ತೋರಿದ ಕ್ರಾಂತಿವಿಧಾನ ಮಾತ್ರವೇ ನೊಂದ ಮಾನವಕೋಟಿಗೆ ನಂದಾದೀಪವಾಗಬಲ್ಲದು, ನಾಡಿನ ರಾಜಕೀಯ ಪ್ರಜ್ಞಾವಂತರು ಈ ಕಡೆಗೆ ತಮ್ಮ ಲಕ್ಷ ಹೊರಳಿಸಿ ಕ್ರಿಯಾಶೀಲರಾಗಬೇಕು.

–ಗಂಗಾಧರ ಪದಕಿ

ಸಮಾಜವಾದಿ ಸ್ಫೂರ್ತಿ....

ಒಬ್ಬ ವ್ಯಕ್ತಿ ಸಮಾಜವಾದಿ ಎಂದೆನ್ನಿಸುವುದಕ್ಕೆ ಅವನ ಜೀವನ ಕ್ರಮ ಹೇಗಿರಬೇಕು, ಏನೆಲ್ಲ ಇರಬೇಕು ಎಂದು ಯೋಚಿಸುವಾಗಲೆಲ್ಲ ಮೊದಲು ಶಾಂತವೇರಿ ಗೋಪಾಲಗೌಡರು, ಶ್ರೀಮತಿ ಪೊನ್ನಮ್ಮಾಳ್, ಶಂಕರನಾರಾಯಣ ಭಟ್ಟರು, ತೀರ್ಥಹಳ್ಳಿ ಕಾರ್ ಡ್ರೈವರ್ ತಿಮ್ಮಣ್ಣ, ಕೆಂಪು ಟೋಪಿ ನರಸಿಂಹ, ಆರಗದ ಮಿಣಕಮ್ಮ, ಸದಾಶಿವರಾವ್, ಹೆಗ್ಗೋಡು ಸುಬ್ಬಣ್ಣ, ಯು.ಆರ್.ಅನಂತಮೂರ್ತಿಯವರು, ದೇವನೂರು ಮಹಾದೇವ, ಕಿಷನ್ ಪಟ್ನಾಯಕ್, ನಿಸಾರ್ ಅಹಮದ್, ಲಂಕೇಶ್, ತೇಜಸ್ವಿ, ರಾಜೀವ ತಾರಾನಾಥ್, ಈ ರೀತಿ ತುಂಬಾ ಜನರು ನಮ್ಮ ಹತ್ತಿರವೇ ತುಂಬಾ ಸಮಾಜವಾದಿ ಗಳೆನ್ನಿಸಿಕೊಂಡವರಿದ್ದಾರೆ (ಗಾಂಧಿವಾದಿಗಳೆಂದ ಹಾಗೆ). ಹಾಗೆಂದು ಸಮಾಜವಾದಿಗಳೆಂದರೆ ಯಾವ ರೀತಿ ಇರಬೇಕೆಂದು ಏಕ್ ದಂ ಕೇಳಿದರೆ ಹೇಳಲಾರೆ. ಅದು ಜೀವನಾನುಭವದಿಂದ ಉತ್ತರ ಕೊಡುವ ಅಥವಾ ಹೆಸರಿಸುವ ವಿಷಯವಾಗಿರುತ್ತದೆ.

'ಹೋರಾಟ-ಜೈಲು-ಅನ್ಯಾಯ ಬಯಲು.... ಏನೇ ಬರಲಿ ಒಗ್ಗಟ್ಟಿರಲಿ...' ಎನ್ನುವವರಲ್ಲಿ ನಂಬಿಕೆ ಉಳಿಸಿಕೊಂಡವರೂ ಸಮಾಜವಾದಿಗಳ ಗುಂಪಿಗೆ ಸೇರುತ್ತಾರೆ. ಕೋವಿಯ ತುದಿಯಲ್ಲಿ ಅನ್ಯಾಯಕ್ಕೆ ಉತ್ತರ ಹುಡುಕುವವರು, ಆಸ್ತಿ-ಅಂತಸ್ತಿನಲ್ಲೇ ಜೀವನ ಇರುವು ದು ಎಂದು ನಂಬಿಕೆ ಹೊಂದಿರುವವರು, ದೇವರ ಹೆಸರಿನಲ್ಲಿ ಮೂಢ ನಂಬಿಕೆಯನ್ನು ಬಿತ್ತಿ ಬೆಳೆಯುವವರು, ಹಿಂಸೆಯಿಂದಲೇ ಸಮಸ್ಯೆಗಳಿಗೆ ಪರಿಹಾರ ಹುಡುಕುವವರು ಅವರು ಸಮಾಜವಾದಿಗಳು ಅಲ್ಲವೇ ಅಲ್ಲ. ಮನುಷ್ಯನಿಗೆ ಆಹಾರ-ವಿದ್ಯೆಗಳ ಜೊತೆ ಸ್ವಾತಂತ್ರ್ಯವೂ ಬಹು ಮುಖ್ಯವೆಂದು ಸಮಾಜವಾದಿಗಳು ನಂಬುತ್ತಾರೆ. ತನ್ನ ಸುತ್ತಮುತ್ತಲಿನ ಒತ್ತಡಗಳಿಂದ ವ್ಯಕ್ತಿಗಳು ಪರಿವರ್ತನೆಗೊಳ್ಳುತ್ತಾರೆ ಎಂಬ ವಿಶ್ವಾಸವನ್ನು ಹೊಂದಿರುವವರೂ ಸಮಾಜವಾದಿಗಳೆನಿಸಿಕೊಳ್ಳುತ್ತಾರೆ. ರಾಮಾಯಣವನ್ನು ಸೀತಾಯಣವೆಂದು ಹೇಳಿದ ಮಾತ್ರಕ್ಕೆ, ಹಾಗೆ ಹೇಳಿದವರ ಮೈ ಮೇಲೆ ಬಿದ್ದು ಉಗುರಿನಿಂದ ಪರಚುವವರ, ಸಮಯ ಸಿಕ್ಕರೆ ಚಾಕುವಿನಿಂದ ತಿವಿಯುವವರು, ಧರ್ಮ-ದೇವರು ದಿಂಡಿರೆಂದು ಶಾಸ್ತ್ರ ಪುರಾಣಗಳನ್ನು ನಾಲ್ಕು ಗೋಡೆಗಳ ಮಧ್ಯೆ ಸಿಕ್ಕಿಸಿಕೊಂಡು ತಾವು ಅದರೆಲ್ಲದರ ಮಾಲೀಕರೆಂದುಕೊಂಡು; ರಾಜಕೀಯ ತಮ್ಮ ಮೂಗಿನ ನೇರಕ್ಕೆ ಬರುವುದನ್ನು ಕಾದಿದ್ದು, ಬಂದಾಗ ಚೆಂಗನೆ ಮೆಟ್ಟಿಲೇರಿ ಗದ್ದುಗೆಯನ್ನು ಹಿಡಿದು ಬೇಕಾದ ಶಾಸನಗಳನ್ನು ಬರೆಸುವವರು ಎಂದೂ ಸಮಾಜವಾದಿಗಳೆಂದು ಕರೆಸಿಕೊಳ್ಳಲು ಅರ್ಹರೆನಿಸಿಕೊಳ್ಳುವುದಿಲ್ಲ.

ಈ ಸಂದರ್ಭದಲ್ಲಿ ನನಗೆ ಸುಬ್ಬಣ್ಣ ಆರಂಭಿಸಿದ ಸಮಾಜವಾದಿ ಧೋರಣೆಯ ನೀನಾಸಂ ಸಂಸ್ಕೃತಿ ಶಿಬಿರದ ಸಮಯದಲ್ಲಿ, ಅನಂತಮೂರ್ತಿಯವರು ತಮ್ಮ ರೂಂ ಬಾಯ್ ಆಗಿದ್ದ ಹರಿಜನ ಹುಡುಗ ತಮ್ಮನ್ನು ಪ್ರೀತಿಯಿಂದ ತನ್ನ ಮನೆಗೆ ಆಹ್ವಾನಿಸಿದ್ದನ್ನು ನೆನಪಿನಲ್ಲಿಟ್ಟುಕೊಂಡು, ಹೆಗ್ಗೋಡಿನಲ್ಲಿ ಒಂದು ಬೆಳಿಗ್ಗೆ ವಾಕಿಂಗ್ ಹೊರಟಿದ್ದ ನನ್ನನ್ನೂ ಕರೆದುಕೊಂಡು ಆ ಹುಡುಗನ ಮನೆಗೆ ಹೋಗಿಬಂದದ್ದು; ಅಪ್ಪಿ ಎಂಬ ನನ್ನ ದಲಿತ ಶಿಷ್ಯನ 'ಮಂತ್ರ ಮಾಂಗಲ್ಯ' ಮದುವೆಗಾಗಿ ತೇಜಸ್ವಿ ಕಟ್ಟೇಹಕ್ಕಲು ಹರಿಜನ ಕಾಲೋನಿಗೆ ಬಂದಿದ್ದಾಗ, ಅವರ ಜಾತ್ಯಸ್ಥ ಬಂಧುಗಳೆಲ್ಲ ಬಂದು ಕರೆದರೂ 'ನೀವು ಸುಮ್ನೆ ಹೋಗ್ರಯ್ಯಾ, ನಾನು ಬಂದಿರೋದು ಶಾಮಣ್ಣನ ಶಿಷ್ಯನ ಮದುವೆ ಮಾಡಿಸೋಕೆ' ಎಂದು ಅವರನ್ನೆಲ್ಲ ಸಾಗ ಹಾಕಿ ಅಲ್ಲೇ ಉಳಕೊಂಡಿದ್ದು; ಮತ್ತು ಲಂಕೇಶ್ ತಮ್ಮ ಪತ್ರಿಕೆ ಆರಂಭಿಸಿದಾಗ ಸಕಲೆಂಟು ಜಾತಿಗಳಿಗೂ ಬರೆಯಲು ಅವಕಾಶ ಮಾಡಿಕೊಟ್ಟು ಅವರನ್ನು ಉತ್ತಮ ಬರಹಗಾರನ್ನಾಗಿ ಮಾಡಿ ಬೆಳಕಿಗೆ ತಂದದ್ದು ನನಗೆ ಸಮಾಜವಾದಿ ನಡೆನುಡಿಗಳಾಗಿ ನೆನಪಿಗೆ ಬರುತ್ತಿವೆ.

ಈ ಬರಹದ ಹಿಂದೆ ಶಾಂತವೇರಿ ಗೋಪಾಲಗೌಡರು ಶಾಸಕರಾಗಿದ್ದ ಕಾಲದಲ್ಲಿ, ಸಮಾಜವಾದಿ ಯುವಜನ ಸಭಾ ತುಂಬ ಪ್ರಬಲವಾಗಿದ್ದಾಗ ನಾನು ನೋಡಿದ ಕೆಲವು ಘಟನೆಗಳ ನೆನಪಿನ ಸ್ಫೂರ್ತಿ ಇದೆ. ಹಾಗೇ, ದಲಿತ-ರೈತ ಚಳುವಳಿಯ

ಇತ್ತೀಚಿನ ನೆನಪುಗಳು ಕೂಡಾ. ತೀರ್ಥಹಳ್ಳಿಯ ಮುಡುಬಾ-ಸೇತುವೆ ಉದ್ಘಾಟನೆಗೆ ಆಗಿನ ಮುಖ್ಯಮಂತ್ರಿ ಗುಂಡೂರಾಯರು ಬರಬೇಕಿತ್ತು. ಇದಕ್ಕೆ ಮೂರೂವರೆ ಲಕ್ಷಗಳ ರೂಪಾಯಿಗಳ ಖರ್ಚಾಗುತ್ತದೆಂದು ತಿಳಿದ ನಾವು. ಅವರಿಗೆ ‘ ಇಷ್ಟೆಲ್ಲ ಖರ್ಚು ಮಾಡಿಕೊಂಡು ನೀವು ಬರುವ ಅಗತ್ಯವಿಲ್ಲ; ನಿಮಗಿಂತ ಒಳ್ಳೆಯ ಅಮೃತ ಹಸ್ತ ಹೊಂದಿರುವ ಮಂಡಗದ್ದೆ ಕೂಲಿಕಾರ ಮಲ್ಲಣ್ಣನವರಿಂದ ಉದ್ಘಾಟನೆ ಮಾಡಿಸುತ್ತೇವೆ’ ಎಂದು ಹೇಳಿ ಕಳುಹಿಸಿ ಅವರು ಬರುವ ಮುನ್ನವೇ ಮಲ್ಲಣ್ಣನವರಿಂದ ಉದ್ಘಾಟನೆ ಮಾಡಿಸಿಯೇ ಬಿಟ್ಟೆವು. ಅಧಿಕಾರಿಗಳ ಮೂಲಕ ಇದನ್ನು ತಿಳಿದ ಗುಂಡೂರಾಯರು ‘ನಾನು ಬರುವುದಿಲ್ಲ. ನಿಮ್ಮ ಕಾರ್ಯಕ್ರಮಕ್ಕೆ ಒಳಿತಾಗಲಿ’ ಎಂದು ಶುಭ ಸಂದೇಶವನ್ನೂ ಕಳಿಸಿದ್ದರು!

ಇವೆಲ್ಲವೂ ನಡೆದದ್ದು. ನಮಗೆ ಸ್ಫೂರ್ತಿ ನೀಡಿದ ಲೋಹಿಯಾ ಅವರ ಸಮಾಜವಾದಿ ಸಿದ್ಧಾಂತ ಮತ್ತು ಕಾರ್ಯಕ್ರಮಗಳ ಪ್ರಭಾವದಿಂದಲೇ. ಈ ಲೋಹಿಯಾ ಸಮಾಜವಾದ ಗಾಂಧೀವಾದದ ಮುಂದುವರಿಕೆ ಎಂದೂ ಈ ಸಂದರ್ಭದಲ್ಲಿ ಹೇಳಬೇಕು.

–ಕಡಿದಾಳು ಶಾಮಣ್ಣ

ಕನಸುಗಳನ್ನು ಜಾಗೃತಗೊಳಿಸಿದ ಲೋಹಿಯಾ

ಡಾ॥ ರಾಮಮನೋಹರ ಲೋಹಿಯಾ ಅವರ ಪ್ರಭಾವಕ್ಕೆ ಒಳಗಾಗಿದ್ದು ನಾನು ವಿದ್ಯಾರ್ಥಿಯಾಗಿದ್ದಾಗ. ಗುಲಬರ್ಗಾದ ಎಸ್.ಎಸ್.ಎಲ್.ಲಾ ಕಾಲೇಜ ವಿದ್ಯಾರ್ಥಿಯಾಗಿದ್ದೆ. ಕಾಲೇಜಿನ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷನಾಗಿ, ಅಧ್ಯಕ್ಷನಾಗಿ ಕಾಲೇಜಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದೆ. ಆ ದಿನಗಳಲ್ಲಿ ಜೆ.ಪಿ.ಯವರ ನೇತೃತ್ವದಲ್ಲಿ ಗುಜರಾತ ಮತ್ತು ಬಿಹಾರ ರಾಜ್ಯಗಳಲ್ಲಿ ಯುವಕರು ನವನಿರ್ಮಾಣ ವೇದಿಕೆಯಡಿಯಲ್ಲಿ ವಿದ್ಯಾರ್ಥಿ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ಮಾಡುತ್ತಿದ್ದರು. ಇದನ್ನೆಲ್ಲ ಪತ್ರಿಕೆಗಳಲ್ಲಿ ಓದಿ ಜಯಪ್ರಕಾಶ ನಾರಾಯಣರ ಅಭಿಮಾನಿಯಾದೆ. ಗುಲಬರ್ಗಾದಲ್ಲಿಯೂ ಕೂಡ ಹೋಟೆಲ ಚಹಾ ತಿಂಡಿಗಳ ಬೆಲೆಯೇರಿದಾಗ, ಶಾಲಾ ಕಾಲೇಜುಗಳಲ್ಲಿ ಫೀ ಹೆಚ್ಚಾದಾಗ, ಮಹಾಜನ ವರದಿ ಜಾರಿ ಚಳುವಳಿ ಮುಂತಾದ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಹೋರಾಟ ಮಾಡುತ್ತಿದ್ದರು. ನಾನು ವಿದ್ಯಾರ್ಥಿ ಚಳುವಳಿಗಳಲ್ಲಿ ಸಕ್ರಿಯವಾಗಿದ್ದು, ಅನೇಕ ಹೋರಾಟಗಳಲ್ಲಿ ಪಾಲ್ಗೊಂಡಿದ್ದೆ. ಈ ಸಂದರ್ಭದಲ್ಲಿ ಅಪ್ಪಟ ಲೋಹಿಯಾವಾದಿಯಾಗಿದ್ದ ಹೋರಾಟಗಾರ ದಿವಂಗತ ವೀರಣ್ಣ ತಿಮ್ಮಾಜಿಯವರು ನನಗೆ ಪರಿಚಯವಾದರು. ಪಾನ್ ಬೀಡಾ ಅಂಗಡಿಯಿಟ್ಟುಕೊಂಡು ಜೀವನ ನಡೆಸುತ್ತ ಚುನಾವಣೆ ರಾಜಕಾರಣ ಮಾಡುತ್ತ ಪರಿವರ್ತನೆಯ ಹಾದಿಯಲ್ಲಿ ನನ್ನಂಥ ಯುವಕರಿಗೆ ಮಾರ್ಗದರ್ಶನ ಮಾಡುತ್ತಿದ್ದರು.

ತಿಮ್ಮಾಜಿಯವರು ಸರಳ ಮತ್ತು ಸಜ್ಜನ ವ್ಯಕ್ತಿಗಳು. ಗುಲಬರ್ಗಾದಲ್ಲಿ ಲೋಹಿಯಾರವರ ವಿಚಾರಗಳನ್ನು ಪ್ರಸಾರ ಮಾಡಲು ಹಗಲಿರಳು ಶ್ರಮಿಸುತ್ತಿದ್ದರು. ಸಾಮಾಜಿಕ ಹೋರಾಟಗಳಲ್ಲೂ ಸಕ್ರಿಯವಾಗಿದ್ದು 'ಶೋಷಿತರ ಕೂಗು' ಎಂಬ ಪ್ರತಿಕೆಯನ್ನು ಮತ್ತು ಲೋಹಿಯಾರವರ ವೈಚಾರಿಕ ಸಾಹಿತ್ಯ ಕನ್ನಡಕ್ಕೆ ಅನುವಾದಿಸಿ, ಮುದ್ರಿಸಿ ಹೊಸ ಪೀಳಿಗೆಗೆ ಓದಲು ಅನುವು ಮಾಡಿಕೊಡುತ್ತಿದ್ದರು. ಇಳಿ ವಯಸ್ಸಿನಲ್ಲಿಯೂ ಗುಲಬರ್ಗಾ ನಗರದಲ್ಲಿ ಗಲ್ಲಿ ಗಲ್ಲಿಗಳಲ್ಲಿ ತಿರುಗಿ ಅವನ್ನು ಮಾರಾಟ ಮಾಡುತ್ತಿದ್ದ ದೃಶ್ಯ ಇಂದಿಗೂ ಕಣ್ಮುಂದೆ ಕಟ್ಟಿದಂತಿದೆ. ನಮ್ಮನೆಲ್ಲ ಹೈದ್ರಾಬಾದ, ಸಿಕಂದರಾಬಾದಗಳಲ್ಲಿ ನಡೆಯುತ್ತಿದ್ದ 'ಲೋಹಿಯಾ ವಿಚಾರ ಮಂಚ'ದ ಸಭೆ ಸಮಾರಂಭಗಳಿಗೆ ಕರೆದೊಯ್ದು ಡಾ॥ ರಾಮಮನೋಹರ ಲೋಹಿಯಾರ ಹೋರಾಟ ಮತ್ತು ಅವರ ಚಿಂತನೆಗಳ ಪರಿಚಯ ಮಾಡಿಕೊಟ್ಟರು. ಇಂಥ ಸಭೆಗಳಲ್ಲಿ ಕಿಶನ್ ಪಟ್ನಾಯಕರ ಗಂಭೀರ ವೈಚಾರಿಕ ಭಾಷಣ ನನ್ನ ಮೇಲೆ ಗಾಢವಾದ ಪರಿಣಾಮ ಬೀರಿತು. ಜಾರ್ಜ್ ಫರ್ನಾಂಡಿಸರ ಸ್ಫೂರ್ತಿದಾಯಕ ಮಾತುಗಳು, ಕೇಶವರಾವ ಜಾಧವ ಮುಂತಾದವರ ವಿಚಾರ ಕೇಳಲು ಅವಕಾಶ ದೊರೆಯಿತು. ಲೋಹಿಯಾ ವಿಚಾರ ಮಂಚದ ಕಾರ್ಯಕ್ರಮಗಳಲ್ಲಿಯೇ ಪಟ್ನಾಯಕರ, ಫರ್ನಾಂಡಿಸರ, ನಂಜುಂಡಸ್ವಾಮಿಯವರ ಪರಿಚಯವಾಯಿತು. ಮುಂದೆ ಸಂಪರ್ಕವೂ ಬೆಳೆಯಿತು.

ಡಾ॥ ವ್ಹಿ.ಪಿ.ದೇವುಳ ಗಾಂವಕರ್, ಶಿವಶರಣಪ್ಪಾ ಜವಳಿ, ಮತ್ತು ನನ್ನ ಮಾವನವರಾದ ಶರಣಪ್ಪಾ ಪಾಟೀಲ ಕೇಶಗಾಂವ ಇವರ ಸಹವಾಸದಿಂದ ನನ್ನಲ್ಲಿ ಗಟ್ಟಿತನ ಬೆಳೆಯಿತು. ಇವರು ಲೋಹಿಯಾರ ಹೋರಾಟ ವಿಚಾರಗಳ ಕುರಿತು ಚರ್ಚಿಸುತ್ತಿದ್ದರು. ಅವರ ಸಾಹಿತ್ಯ ಓದಲು ಪ್ರೇರೇಪಿಸಿದರು. *ಭಾರತ ಕಿ ಕಿಸಾನ, ಖರ್ಚ್ ಪರ್ ಸೀಮಾ* ಮುಂತಾದ ಹಿಂದಿ ಮತ್ತು ಕನ್ನಡ ಪುಸ್ತಕಗಳನ್ನು ಓದಿದ ಮೇಲಂತೂ ಪೂರ್ತಿಯಾಗಿ ಲೋಹಿಯಾವಾದಿಯಾಗಿ ಬಿಟ್ಟೆ, ಲೋಹಿಯಾ ಅವರ ನಿಷ್ಠುರ ಮಾತು, ಕಠೋರ ನಿಲುವು, ದಿಟ್ಟ ನಿರ್ಧಾರ ನನ್ನಲ್ಲಿ ರೋಮಾಂಚನವನ್ನುಂಟು ಮಾಡಿದವು. ಸಂಕೀರ್ಣ ಮತ್ತು ಗೊಂದಲಮಯ ವಾತವರಣದಲ್ಲಿ ಲೋಹಿಯಾರಂಥ ನೇರ ನಿಷ್ಠುರವಾದಿಗಳು ಸಮಾಜಕ್ಕೆ ಬೇಕಾಗಿದ್ದಾರೆಂದು ಅನಿಸತೊಡಗಿತ್ತು. ಅವರ ಸರಳ ಬದುಕು, ಕ್ರಿಯಾಶೀಲ ವ್ಯಕ್ತಿತ್ವ, ದೇಶಾಭಿಮಾನ, ಬಡವರ ಬಗೆಗಿನ ಕಾಳಜಿ, ಅವರ ಹೋರಾಟದ ಗಟ್ಟಿತನ; ವೈಚಾರಿಕ ಬದ್ಧತೆ ನನ್ನನ್ನು ಹೊಸ ವ್ಯಕ್ತಿಯನ್ನಾಗಿ ಮಾರ್ಪಡಿಸಿದವು ಸದಾ ಅನ್ಯಾಯವನ್ನು ವಿರೋಧಿಸುವ ಸ್ವಭಾವದವನಾದ ನನಗೆ ಲೋಹಿಯಾರ ವಿಚಾರಗಳು ಹೆಚ್ಚಿನ ಶಕ್ತಿಯನ್ನು ತುಂಬಿದವು. ನನ್ನಲ್ಲಿ ವೈಚಾರಿಕ ಸ್ಪಷ್ಟತೆ, ಗಟ್ಟಿತನ ಬಂದಿತು.

–೨–

ವೀರಣ್ಣ ತಿಮ್ಮಾಜಿಯವರು ಕೊಟ್ಟ ಪುಸ್ತಕ ಓದಿ, ಲೋಹಿಯಾರ ವಿಚಾರಗಳ ಪ್ರಸಾರ ಮಾಡುವ ಉತ್ಸಾಹ, ಹುಮ್ಮಸ್ಸು, ಮತ್ತು ಲೋಹಿಯಾ ವಿಚಾರ ಮಂಚದಲ್ಲಿ

ಕೇಳಿದ ಭಾಷಣ, ವಿಚಾರ ಸಂಕಿರಣಗಳು ಅಲ್ಲಿ ನಡೆಯುವ ಚರ್ಚೆಗಳು ನನ್ನನ್ನು ಲೋಹಿಯಾರ ವೈಚಾರಿಕ ವಲಯಕ್ಕೆ ಸೇರುವಂತೆ ಮಾಡಿದವು ತಿಮ್ಮಾಜಿಯವರಲ್ಲದೆ ಡಾ॥ ಜಮಹುರ್, ಎಸ್.ಕೆ.ಕಾಂತಾ, ವೈಜನಾಥ ಪಾಟೀಲರು ಲೋಹಿಯಾರ ಚಿಂತನೆಗಳಿಗೆ ಸದಾ ಸ್ಪಂದಿಸುತ್ತಿದ್ದರು. ಅನಂತರದ ದಿನಗಳಲ್ಲಿ ಬಸಯ್ಯ ಗುತ್ತೆದಾರ ಗಾರಂಪಳ್ಳಿ ಮತ್ತು ಪ್ರಭು ಖಾನಪುರೆ ನಮ್ಮ ಜೊತೆಗೂಡಿದರು.

ಜಾಗತೀಕರಣ ಮತ್ತು ಉದಾರೀಕರಣದಿಂದಾಗಿ ದೇಶದಲ್ಲಿ ಬಡವರ ಮತ್ತು ಶ್ರೀಮಂತರ ನಡುವೆ ಹೆಚ್ಚುತ್ತಿರುವ ಅಂತರ ಆತಂಕವನ್ನು ಹುಟ್ಟಿಸಿದೆ. ಲೋಹಿಯಾರು ಈ ಮೊದಲೆ ಗಮನಿಸಿದ್ದ ಅಸೂಕ್ಷ್ಮತೆ, ಅಸಮಾನತೆ ಇಂದು ಎದ್ದು ಕಾಣುತ್ತಿದೆ. ಈ ಅಂತರ ಮುಂದೊಂದು ದಿನ ಹೆಮ್ಮರವಾಗಿ ಬೆಳೆದು ಹಿಂಸೆಗೂ ಕಾರಣವಾಗಬಹುದೆಂಬ ಅನುಮಾನ ಹೆಚ್ಚುತ್ತಿದೆ. ಜಾಗತಿಕ ಮಟ್ಟದಲ್ಲಿ ಜನಾಂಗವಾದ, ಭಾರತದಲ್ಲಿ ಕೋಮುವಾದ ಮತ್ತು ಜಾತಿವಾದ ಬಹು ದೊಡ್ಡ ಸಮಸ್ಯೆಯನ್ನು ಹುಟ್ಟುಹಾಕುತ್ತಿವೆ. ಸಮಾಜಗಳಲ್ಲಿ, ವ್ಯಕ್ತಿ ವ್ಯಕ್ತಿಗಳಲ್ಲಿ ಅಪನಂಬಿಕೆಗಳು ಮನೆ ಮಾಡಿಕೊಳ್ಳುತ್ತಿವೆ. ಸಹನಾ ಪ್ರವೃತ್ತಿಗೆ ಮತ್ತು ಸಹೋದರ ಭಾವಕ್ಕೆ ದೊಡ್ಡ ಗಂಡಾಂತರ ಎದುರಾಗಿದೆ. ವಸ್ತುಸ್ಥಿತಿ ಹೀಗಿರುವಾಗ ಗಾಂಧೀ ಮತ್ತು ಲೋಹಿಯಾರಲ್ಲಿಯೇ ಇದಕ್ಕೆ ಉತ್ತರ ಕಂಡುಕೊಳ್ಳಬಹುದೆಂದು ನನ್ನ ಸ್ಪಷ್ಟ ಅಭಿಪ್ರಾಯ. ಉಪಭೋಗ ಸಂಸ್ಕೃತಿಯ ವಿರುದ್ಧ ಸರಳತೆ, ಕೋಮುವಾದದ ವಿರುದ್ಧ ಅಹಿಂಸಾ ತತ್ವ ದೇಶಕ್ಕೆ ಪರಿಹಾರವಾಗಬಲ್ಲದು. ಜಾತಿ ತೋಡೋ ಆಂದೋಲನ ಪ್ರಾರಂಭಮಾಡಿ ಜಾತಿ ವಿನಾಶದ ವಿಚಾರವನ್ನು ಪ್ರಚುರ ಪಡಿಸಿದ ಲೋಹಿಯಾರ ಸಿದ್ಧಾಂತದ ಅರಿವು ಮಾಡಿಕೊಡುವುದು ಮತ್ತು ಅದನ್ನು ಜಾರಿಗೊಳಿಸುವುದು ಈಗ ಅತ್ಯಂತ ಅವಶ್ಯವೆಂದು ನನಗೆನಿಸುತ್ತದೆ. ಈಗ ಜಾತಿಗೊಂದೊಂದು ಪಕ್ಷ ಕಟ್ಟಿಕೊಂಡು ಜಾತಿಗಳ ಆಧಾರದ ಮೇಲೆ ಮಠಗಳು ಹುಟ್ಟಿಕೊಳ್ಳುತ್ತಿವೆ. ಇಡಿ ಸಮಾಜ ಒಡೆದು ಹಂಚಿ ಹೋಗುತ್ತಿರುವಾಗ ಅಂದು ಲೋಹಿಯಾ ಹೇಳಿದ ಜಾತಿ ವಿನಾಶದ ಮತ್ತು ಸಹೋದರತೆಯ ಸಂದೇಶ ಸೆಕ್ಯುಲರ್ ಸಮಾಜ ಕಟ್ಟಲು ಎಂದಿಗಿಂತಲೂ ಇಂದು ಹೆಚ್ಚು ಅವಶ್ಯವಿದೆ ಎಂದೆನಿಸುತ್ತಿದೆ.

'ಲೋಗ್ ಮೇರೆ ಬಾತ್ ಮಾನೇಂಗೆ ಜರೂರ್... ಲೇಕಿನ್ ಮೇರೆ ಮರನೇಕೆ ಬಾದ್'- ಜನ ನನ್ನ ಮಾತನ್ನು ನಂಬುತ್ತಾರೆ, ಆದರೆ ನಾನು ಸತ್ತ ಮೇಲೆ ಮಾತ್ರ ಎಂದು ಪದೆ ಪದೆ ಹೇಳುತ್ತಿದ್ದ ಲೋಹಿಯಾರವರ ಮಾತು ಇಂದು ಸತ್ಯವಾಗುತ್ತಿವೆ. ಭಾರತೀಯ ಸಮಾಜದ ನರನಾಡಿಗಳನ್ನು ಅರಿತಿದ್ದ ಲೋಹಿಯಾರು ಸೂಕ್ತ ವಿಚಾರಗಳನ್ನು ಜನತೆಯ ಮುಂದಿಟ್ಟರು. ನಾನು ಸತ್ತ ಮೇಲೆ ನನ್ನ ಮಾತು ನಂಬುತ್ತಾರೆಂದು ಹೇಳಿದ್ದನ್ನು ಮಾರ್ಕ್ಸವಾದಿ ಕಮ್ಯೂನಿಷ್ಟ ಪಕ್ಷ ಸಾಬೀತು ಪಡಿಸಿದೆ. ಸಾಮ್ಯವಾದಿಗಳು ಸಮಾಜದಲ್ಲಿ ಆರ್ಥಿಕ ಸಮಾನತೆ ಬಂದರೆ ಜಾತಿ ಪದ್ಧತಿ ತನ್ನಷ್ಟಕ್ಕೆ ತಾನೆ ಹೋಗುತ್ತದೆಯೆಂದು ವಾದಿಸುತ್ತಿದ್ದಾಗ ಡಾ॥ ಲೋಹಿಯಾ ವರ್ಗ ಮತ್ತು ವರ್ಣ ಹೋರಾಟ ಏಕಕಾಲದಲ್ಲಿ ನಡೆಯಬೇಕೆಂದು ಹೇಳಿದ್ದು, ಅಂದು

ಮಾರ್ಕ್ಸ್‌ವಾದಿಗಳು ಒಪ್ಪಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದು ೬೦ ವರ್ಷಗಳ ನಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಘಟಕಗಳನ್ನು ಇತ್ತೀಚಿಗೆ ಪಕ್ಷ ಪ್ರಾರಂಭಿಸಿದೆ.

'ಜನತೆಯ ಕನಸುಗಳನ್ನು ಜಾಗ್ರತಗೊಳಿಸಿ' ಎಂದು ಲೋಹಿಯಾರವರು ಹೇಳಿದ ಮಾತು ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರ ಕೊಡಬಲ್ಲದು. ಜನರು ಎದುರಿಸುತ್ತಿರುವ ಸಮಸ್ಯೆಗಳು ಅವರಿಗೆ ಅರಿವು ಮಾಡಿಕೊಡಬೇಕು ಮತ್ತು ಅವರ ಸಮಸ್ಯೆಗಳಿಗೆ ಅವರೆ ಉತ್ತರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಜಾಗ್ರತಿ ಮೂಡಿಸುವ ಕಾರ್ಯ ನಡೆಯಬೇಕು. ಜನತೆಯ ಕನಸುಗಳು ಜಾಗ್ರತಗೊಂಡರೆ ಭೂತಾಕಾರವಾಗಿ ಬೆಳೆಯುತ್ತಿರುವ ಸಮಸ್ಯೆಗಳಿಗೆ ಸರಿಯಾದ ಮತ್ತು ಸೂಕ್ತವಾದ ಪರಿಹಾರ ದೊರೆಯುತ್ತದೆಂಬುದು ನನ್ನ ಬಲವಾದ ನಂಬಿಕೆ.

ಈ ನಿಟ್ಟಿನಲ್ಲಿ ಲೋಹಿಯಾವಾದಿಗಳಾದ ನಾವು ಜನತೆಯ ಕನಸುಗಳನ್ನು ಜಾಗ್ರತಗೊಳಿಸುವ ಕಾರ್ಯಕ್ರಮ ಹಾಕಿಕೊಳ್ಳುವುದು ನಮ್ಮ ಮುಂದಿರುವ ಸವಾಲು.

– ಬಿ.ಆರ್. ಪಾಟೀಲ

ಬಂಡಾಯಗಾರ ಲೋಹಿಯಾ

ಡಾ. ರಾಮಮನೋಹರ ಲೋಹಿಯಾ ಒಬ್ಬ ಬಂಡಾಯಗಾರನಾಗಿ ನನಗೆ ಹೆಚ್ಚು ಇಷ್ಟವಾಗಿರುವ ವ್ಯಕ್ತಿ. ಅವರ ಬಹುಮುಖ ಪ್ರತಿಭೆಯ ಆಯಾಮಗಳ ನಿಚ್ಚಳ ತಿಳಿವಳಿಕೆ ನನಗಿದ್ದರೂ ಬಹಳ ಇಷ್ಟವಾದದ್ದು ಅವರ ಬಂಡಾಯ ಪ್ರವೃತ್ತಿ. 'ಸಿಟ್ಟು ಮತ್ತು ಪ್ರೀತಿಯ' ಅವಿನಾಭಾವ ಸಂಗಮದಲ್ಲಿ ಸತ್ಯದ ಸಾಕ್ಷಾತ್ಕಾರಕ್ಕೆ ಆತ ಹಪಹಪಿಸುತ್ತಿದ್ದ ರೀತಿಯೂ ಬಂಡಾಯದ್ದೆ. ಭಾರತದ ಮಾನವನ–ಬದುಕಿನ ಜೊತೆಗೆ ಅವಿರತವಾಗಿ ನಡೆಸಿದ ಅನುಸಂಧಾನ ಸಮಾಜವಾದದ ಸಿದ್ಧಾಂತಕ್ಕೆ ಒಂದು ಹೊಚ್ಚಹೊಸ ಬೆಳಕನ್ನೇ ಹೊದಿಸಿದ್ದು ಲೋಹಿಯಾ 'ಸಿಟ್ಟು ಮತ್ತು ಪ್ರೀತಿ'ಯ ಹೂರಣ. ಅನ್ಯಾಯ ಕಂಡಲ್ಲಿ ಸಿಡಿದೇಳುವ ಮತ್ತು ಎಂತಹ ಸಂದರ್ಭದಲ್ಲೂ ಹೊಂದಾಣಿಕೆಯನ್ನು ಸಾರಾಸಗಟಾಗಿ ತಿರಸ್ಕರಿಸುವ ವೈಚಾರಿಕ ನಿಖರತೆಯೂ ಕೂಡ ಬಂಡಾಯದ ಗಟ್ಟಿತನದಿಂದ ಹೆಪ್ಪುಗಟ್ಟಿದ್ದು. ಅವರ ಸಮಾಜವಾದಿ ದಂಗೆಕೋರ ಮನಸ್ಸು, ಸಾತ್ವಿಕ ಸಿಟ್ಟು, ಕ್ರಿಯಾಶೀಲ ಸಂಘಟನೆ, ವೈಚಾರಿಕ ಎದೆಗಾರಿಕೆ, ಸದಾ ಎಚ್ಚರಿಕೆಯಿಂದ ಪ್ರತಿಕ್ರಿಯಿಸುವ ಬುದ್ಧಿಮತ್ತೆ ಮತ್ತು ಮುತ್ಸದ್ಧಿತನ ಭಾರತದ ರಾಜಕೀಯ ಇತಿಹಾಸದಲ್ಲಿ ಬೇರಾರಲ್ಲೂ ಕಾಣುವುದಿಲ್ಲ. ಆಧುನಿಕ ಭಾರತದ ಸಮಾಜವಾದಿ ಚಿಂತನೆಗೆ ಡಾ. ಲೋಹಿಯಾ ಅವರ ಕೊಡುಗೆ ಅನನ್ಯವಾದದ್ದು.

ಕನ್ನಡದಲ್ಲಿ ಒಂದು ಮಾತಿದೆ. 'ಅಜ್ಜನ ಹೆಗಲ ಮೇಲೆ ಕೂತ ಮೊಮ್ಮಗ ಜಾತ್ರೆಯನ್ನು ಅಜ್ಜನಿಗಿಂತ ಜಾಸ್ತಿ ನೋಡ್ತಾನೆ' ಎನ್ನುವುದು. ಗಾಂಧಿಯ ಸಿದ್ಧಾಂತಕ್ಕೆ ಹೆಗಲೆಣೆಯಾಗಿ ನಿಂತ ಲೋಹಿಯಾ ದೇಶದ ಸಾಂಕ್ರಾಮಿಕ ರೋಗವಾದ 'ಜಾತಿ

ವ್ಯವಸ್ಥೆ'ಯ ವಿರುದ್ಧ ನಡೆಸಿದ ಗಧಾಪ್ರಹಾರ ಅಂತಿಂಥದಲ್ಲ. ಬಂಡವಾಳಶಾಹಿಗೂ ಜಾತಿ ವ್ಯವಸ್ಥೆಗೂ ಇರುವ ಸಂಕೀರ್ಣ ಸಂಬಂಧವನ್ನು ಬಯಲಿಗೆಳೆದು ಅವರು ಭಾರತವ ಹಿಂದುಳಿದ ಸಮಾಜಕ್ಕೆ ಆಗಿರುವ ಅನ್ಯಾಯವನ್ನು ಪ್ರತಿಪಾದಿಸಿದರು. ಗಾಂಧೀ ತಮ್ಮ ಹೋರಾಟಕ್ಕೆ ಉಪ್ಪು ಮತ್ತು ಚರಕಾಗಳನ್ನು ಬಳಸಿಕೊಂಡಂತೆ ಲೋಹಿಯಾ ಸೆರೆಮನೆ-ಗುದ್ದಲಿ ಹಾಗೂ ಮತಪೆಟ್ಟಿಗೆಗಳನ್ನು ಕ್ರಿಯಾತ್ಮಕವಾಗಿ ಪ್ರಯೋಗಿಸುವುದನ್ನು ಭಾರತಕ್ಕೆ ಕಲಿಸಿಕೊಟ್ಟರು. ಸೆರೆಮನೆಯು ವ್ಯಕ್ತಿ ಮತ್ತು ಸಮಷ್ಠಿಯ ಹಕ್ಕು, ನ್ಯಾಯ, ಘನತೆ ಮುಂತಾದವುಗಳನ್ನು ದಕ್ಕಿಸಿಕೊಡುವ ಸಂಕೇತವಾದರೆ, ಗುದ್ದಲಿ ರಚನಾತ್ಮಕ ಬದುಕಿನ ಮತ್ತು ಕ್ರಿಯಾಶೀಲ ರಾಜಕಾರಣದ ಗುಣಾತ್ಮಕ ಸಂಕಲ್ಪಗಳನ್ನು ತಂದುಕೊಡುತ್ತದೆ. ಸಂವಿಧಾನಾತ್ಮಕ ಪರಿಕಲ್ಪನೆಯಲ್ಲಿ ಒಟ್ಟಾರೆ ಸಮಾಜದ ಒಳಿತಿಗೆ ರಾಜ್ಯವ್ಯವಸ್ಥೆಯನ್ನು ಕಟ್ಟಿಕೊಡುವ ಪರಿಕರವಾಗಿ ಮತಗಟ್ಟೆ ಕೆಲಸ ಮಾಡುತ್ತದೆ. ಭಾರತದಲ್ಲಿ ಚಳುವಳಿ ಎಂಬ ಸಾಮಾಜಿಕ ಪ್ರಶ್ನೆಯ ಮೂಲದ್ರವ್ಯಗಳನ್ನಾಗಿ ಮೇಲಿನ ಮೂರು ಮಜಲುಗಳನ್ನು ಕೊಟ್ಟಿದ್ದು ಲೋಹಿಯಾ.

ಆಧುನಿಕ ಭಾರತ ಕಂಡ ಅತ್ಯಂತ ಪ್ರತಿಭಾವಂತ ಚಿಂತಕ ಮತ್ತು ಲೇಖಕ ಲೋಹಿಯಾ. ಅವರ ಅನೇಕ ಗ್ರಂಥಗಳಲ್ಲಿ ಪರಿಭಾವಿಸಿರುವ ಸಮಷ್ಠಿ ಪ್ರಜ್ಞೆ, ಸಾಂಸ್ಕೃತಿಕ ಒಳನೋಟ, ಜಾತಿ-ಬಂಡವಾಳ-ಧರ್ಮಗಳ ಪ್ರಜ್ಞಾಪೂರ್ವಕ ವಿಶ್ಲೇಷಣೆ, ಚಳುವಳಿಗಳು, ಮೂಲಭೂತ ಸಮಸ್ಯೆಗಳಿಗೆ ಪರಿಹಾರಗಳು, ರಾಜಕಾರಣ-ಇಂದಿನ ಯುವಪೀಳಿಗೆಯ ನಿದ್ದೆಗೆಡಿಸಲು ಸಾಕು. Intervel During Politics, Marx, Gandhi and Socialisom ನಂತಹ ಗ್ರಂಥಗಳಲ್ಲಿ ಒಬ್ಬ ಶ್ರೇಷ್ಠ ಸಾಹಿತಿಯನ್ನು, ಕಾಲ,ದೇಶ ಮೀರಿ ನಿಲ್ಲಬಲ್ಲ ಚಿಂತಕನನ್ನು ಕಾಣುತ್ತೇವೆ.

-ಪ. ಮಲ್ಲೇಶ್

ನಿರ್ಭಯತೆಯ ನಿರಂತರ ಸ್ಫೂರ್ತಿ

ಸರಿಯಾಗಿರಬೇಕಾದ್ದನ್ನು ಇರುವಂತೆ ಮಾಡಿ, ಸರಿ ಇಲ್ಲದ್ದನ್ನು ಸರಿಪಡಿಸಲು ನಿರಂತರ ಅಹಿಂಸಾತ್ಮಕ ಪ್ರಬಲ ಹೋರಾಟ ನಡೆಸುವುದರ ಪ್ರಬಲ ಸಂಕೇತ-ಲೋಹಿಯಾ.

ಅಸಾಮಾನ್ಯವಾದ 'ಸಾಮಾನ್ಯರಿಗಾಗಿಯೇ ಚಿಂತನ-ಬಾಳುವೆ'-ಇದರ ಪ್ರತ್ಯಕ್ಷ ಪಾಠವೇ -ಲೋಹಿಯಾ.

'ನಿರಂತರ ಜನಜಾಗೃತಿ ಜನಸಂಘಟನೆ' ಗುರಿಯೆಡೆ ಸ್ಪಷ್ಟತೆಯ ಸಾಕಾರವೇ ಲೋಹಿಯಾ.

ವ್ಯಕ್ತಿ ಜೀವನದಲ್ಲಂತೂ ತುಂಬಾ ನೀತಿಯ ಬಾಳುವೆಯ ಲೆಕ್ಕದ ಅಚ್ಚುಕಟ್ಟೇ

ಲೋಹಿಯಾ. ಹಣಕಾಸಿನ ಲೆಕ್ಕ ಮಾತ್ರದಲ್ಲೂ, ಚಿಂತನದಲ್ಲೂ ನಿರ್ಭಿಡೆಯಿಂದ ನೀತಿ ನೀತಿ ನೀತಿಗಾಗಿ ನಡೆದು ಸತ್ತ ಧೀರ-ಲೋಹಿಯಾ. ನಿರ್ಭಯತೆಯ ನಿರಂತರ ಸ್ಫೂರ್ತಿಯೇ ಲೋಹಿಯಾ.

ಜಾತಿ ವರ್ಗ ಬಣ್ಣ ಮೊದಲಾದ ಮಹಾಪಿಡುಗುಗಳ ಅತ್ಯಂತ ಕರಾಳ ರಾಕ್ಷಸನ ವಿರುದ್ಧ ಹೋರಾಟದ ಹೆಸರೇ-ಲೋಹಿಯಾ.

ಮಹಾತ್ಮ ಗಾಂಧೀಜಿಯವರ ಪೂರ್ಣ ದೃಷ್ಟಿ ತಿಳಿದು ತನ್ನನ್ನೇ ಅದಕ್ಕಾಗಿ ತೇದ ಮಹಾಶಕ್ತಿ-ಲೋಹಿಯಾ.

ತನ್ನ ಹತ್ತಿರದವರೂ ಸರಿಯಾಗಿ ಅರ್ಥ ಮಾಡಿಕೊಳ್ಳದೆ ಸಕಾಲಿಕವಾದರೂ ಅಕಾಲಿಕವೆನ್ನಿಸಿಕೊಂಡ ಹಿರಿಜೀವ-ಲೋಹಿಯಾ.

ಒಂದಲ್ಲ ಒಂದು ರೀತಿ ಪ್ರಾಮಾಣಿಕವಾಗಿ ಅವರ ದಾರಿ ಹಿಡಿಯದೆ ರಾಷ್ಟ್ರದ ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಪರಿಹಾರ ಅಸಾಧ್ಯವೇ.

–ಟಿ.ಎಸ್. ಅನಂತರಂಗಾಚಾರ್

ಎಲ್ಲ ಕಡೆ ಲೋಹಿಯಾ...

ಶಾಲೆ ಕಾಲೇಜಿನ ಅಂದಿನ ದಿನಗಳಲ್ಲಿ ಲೋಹಿಯಾ ಎಂದರೆ ಗಾಳಿಯ ಕೂಡ ಗುದ್ದಾಡಿ ಮೈ ನೋಯಿಸಿಕೊಳ್ಳುವ ಮೂರ್ಖ ರಾಜಕಾರಣಿ-ಪ್ರಿನ್ಸ ಪ್ರಪೊಟಕಿನ್‌ನಂತ ಯುಟೋಪಿಯನ್ ಎಂದು ಗೈಡು ಓದಿ ಅರ್ಥಶಾಸ್ತ್ರ ಹೇಳುವ ಮಾಸ್ತರರನ್ನು ನಂಬಿ ಭವ್ಯ ದಿವ್ಯ ಭಾರತ ಕಟ್ಟುವ ನೆಹರೂರ ಭಾಷಣ ಕೇಳಲು ರೈಲ್ವೆ ಡಬ್ಬಿಯ ಮೇಲೆ ಕುಳಿತು ಪಟ್ಟಣಕ್ಕೆ ಹೋಗಿ ಸಮೀಪದಿಂದ ಅವರ ಕೋಟಿನ ಮೇಲೆ ಗುಲಾಬಿ ಹೂ ಹಾಗೂ ಮೂಸಂಬಿಯಂತೆ ಮಿಂಚುವ ಗಲ್ಲ ಕಣ್ತುಂಬ ನೋಡಿ, ನೂಕು ನುಗ್ಗಲಿನಲ್ಲಿ ಚಪ್ಪಲಿ ಕಳೆದುಕೊಂಡು ಕೃತಾರ್ಥನಾಗಿದ್ದೆ. ಭಾರತ ಭವ್ಯವೂ ಆಗಲಿಲ್ಲ; ದಿವ್ಯವೂ ಆಗಲಿಲ್ಲ; ಭಾರತ ಇಂಡಿಯಾ ಹೋಗಿ ಇಂದಿರಾ ಆಯಿತು.

ಬ್ರಿಟಿಷರನ್ನು ರಾಕ್ಷಸರಿಗೆ ಹೋಲಿಸಿ ಅವರು ತೊಲಗಿದೊಡನೆ ಸುಭಿಕ್ಷ ಬರುತ್ತದೆಂದು ಶೂದ್ರರನ್ನು ಸಂಘಟಿಸಿದ ಗಾಂಧೀಜಿ ಅವರನ್ನು ಬ್ರಾಹ್ಮಣರ ಊಳಿಗಕ್ಕೆ ಹಚ್ಚಿ ಯಮುನಾ ನದಿಯ ದಂಡೆಯ ಮೇಲೆ ಮೋಕ್ಷ ಪಡೆದ.

ಬ್ರಾಹ್ಮಣರ ಹೆಗಲ ಮೇಲೆ ಹತ್ತಿ ಇಂಡಿಯಾಕ್ಕೆ ಬಂದ ಮಾರ್ಕ್ಸ್, ಡಾಂಗೆ, ನಂಬುದಿರಿ, ಜ್ಯೋತಿಗಳ ಮನೆಯಲ್ಲಿ ಮೃಷ್ಟಾನ್ನ ಭೋಜನ ಉಣ್ಣುತ್ತ ಕುಳಿತ.

ಜೆ.ಪಿ.ಯವರ ಸಮಗ್ರ ಕ್ರಾಂತಿ ಲಂಡ ಚೆಡ್ಡಿ ಹಾಕಿಕೊಂಡು ಕೈಯಲ್ಲಿ ಬಡಿಗೆ ಹಿಡಿಯಿತು. ಪುಣ್ಯಕೋಟಿ ಭರತಭೂಮಿಯ ಅರವತ್ತಾರು ಕೋಟಿ ಭಕ್ತರ ಜವಾಬು

ದಾರಿಯನ್ನು ಮೂವತ್ಮೂರು ಕೋಟಿ ದೇವತೆಗಳಿಗೆ ವಹಿಸಿ ಮೋಕಳೀಕ ಆಗುವುದು ಸೂಕ್ತವೆನ್ನುವಾಗಲೇ ಎಲ್ಲ ಕಡೆಗೂ ಲೋಹಿಯಾ ಕಾಣುತ್ತಿದ್ದಾನೆ.

ಇಂಡಿಯಾದ ಯಾವುದೇ ಸಮಸ್ಯೆಗಳಿಗೆ–ರೈತನದೇ ಇರಲಿ, ದಲಿತನದೇ ಇರಲಿ, ಬಡವನದೇ ಇರಲಿ–ಸೂಕ್ತ ಪರಿಹಾರ ಕಾಣುತ್ತಿದ್ದರೆ ಅವುಗಳ ಹಿಂದೆ ಲೋಹಿಯಾ ಕಾಣುತ್ತಿದ್ದಾನೆ.

ಇಂಡಿಯಾದ ಪರಿಸರಕ್ಕೆ ಲೋಹಿಯಾ ಇಂದು ಅನಿವಾರ್ಯವಾಗಿದ್ದಾನೆ.

–ಕುಂದರನಾಡ ಪಾಟೀಲ

ವಿಶ್ವಬಂಧುತ್ವದ ಪ್ರತಿಪಾದಕ

ಪ್ರಾಯ ಬಂದರೂ ಅಭಿಪ್ರಾಯ ಬರುವುದಿಲ್ಲ. ಭಾರತದಂಥ ದೇಶದಲ್ಲಿ ಯೌವ್ವನ ಬಹುವಾಗಿ ನಷ್ಟವಾಗುವ ಪ್ರಶಸ್ತ ವಸ್ತು. ಅದು ದುಡಿತದಲ್ಲೋ ಮದುವೆಯಲ್ಲೋ ಸೋಮಾರಿತನದಲ್ಲೋ ಸೋರಿಹೋಗುವ ಸಂಪತ್ತು. ಹಾಗಾಗಿ ಗಂಭೀರ ಕಾಳಜಿಯಿರುವ ತರುಣರು ಸಿಗುವುದು ತೀರಾ ದುರ್ಲಭ.

ನನ್ನ ವಿದ್ಯಾರ್ಥಿದೆಸೆಯಲ್ಲಿ(ಪದವಿ ಶಿಕ್ಷಣ; ೧೯೬೩–೬೮) ನಾರಾಯಣ ಗುರು, ಪೆರಿಯಾರ್, ಅಂಬೇಡ್ಕರ್ ಅಥವಾ ಲೋಹಿಯಾ ಅವರ ಹೆಸರಾಗಲೀ ವಿಷಯವಾಗಲೀ ಕಿವಿಯ ಮೇಲೆ ಬಿದ್ದದ್ದು ನೆನಪಿಲ್ಲ. ಸಾಮಾಜಿಕ ಕಳಕಳಿ ನನ್ನಲ್ಲಿ ಬೆಳೆದಂತೆ ಈ ಧೀರ ವ್ಯಕ್ತಿಗಳು ಮತ್ತು ಅವರ ಆಲೋಚನೆಯ ಪರಿಚಯ ಹೆಚ್ಚಿತ್ತು. ಇವರ್‍ಯಾರನ್ನೂ ನಾನು ಕಣ್ಣಾರೆ ಕಂಡವನಲ್ಲ; ಅವರ ವಾಣಿಯನ್ನು ಕಿವಿಯಾರೆ ಕೇಳಿದವನಲ್ಲ.

ನಾರಾಯಣಗುರು ಹೆಚ್ಚಾಗಿ ಧಾರ್ಮಿಕ ಕ್ಷೇತ್ರದಲ್ಲಿ ಕೆಲಸ ಮಾಡಿದರು. ಶೂದ್ರರೆಂದು ಹೀನಾವಸ್ಥೆಗೆ ಗುರಿಯಾಗಿ ಕಡೆಗಣಿಸಲ್ಪಟ್ಟ ಜನರಿಗೆ ಆತ್ಮಪ್ರತ್ಯಯ ತಂದುಕೊಡುವುದರಲ್ಲಿ ಜಯಶೀಲರಾದರು. ಬ್ರಾಹ್ಮಣರಿಗೆ ಶೂದ್ರ ಜನಾಂಗ ಯಾವುದರಲ್ಲೂ ಕಡಿಮೆಯಿಲ್ಲವೆಂದು ತಮ್ಮ ಪರಿಶುದ್ಧ ಜೀವನ ಮತ್ತು ಕೆಲಸಗಳಿಂದ ತೋರಿಸಿದರೂ ಶೋಷಣೆಯ ಮಾಧ್ಯಮವಾದ ಧರ್ಮಕ್ಕೆ, ದೇವಸ್ಥಾನ ಸ್ಥಾಪನೆಗೆ ಅವರು ಜೋತುಬಿದ್ದರು.

ಪೆರಿಯಾರ್ ರಾಮಸ್ವಾಮಿ ಅವರು ಪುರೋಹಿತಶಾಹಿಯ ಪ್ರಾಬಲ್ಯವನ್ನು ಹುಟ್ಟಡಗಿಸಲು ನಡುಕಟ್ಟಿ ನಿಂತರು. ವಿಚಾರವಾದದ ಮೂಲಕ ಜನರಲ್ಲಿದ್ದ ಮೂಢ ನಂಬಿಕೆ, ಅಜ್ಞಾನ ಮುಂತಾದ ವಿನಾಶಕಾರಿ ಕೆಡಕುಗಳನ್ನು ಬೇರುಸಹಿತ ಕಿತ್ತು ಹಾಕಿದರು. ದೇವರು, ದೇವಸ್ಥಾನ, ಧರ್ಮ–ಇವುಗಳೆಲ್ಲ ಶೋಷಣೆಯ ಸಾಧನಗಳೆಂದು ಸ್ಪಷ್ಟವಾಗಿ ಗುರುತಿಸಿಕೊಂಡರು; ತಮ್ಮ ಶಕ್ತಿಮೀರಿ ಹೋರಾಡಿದರು. ಜೀವಿತ ಕಾಲದಲ್ಲೇ ಧ್ಯೇಯ ಈಡೇರಿದ್ದನ್ನು ಕಂಡರು.

ಡಾ. ಅಂಬೇಡ್ಕರ್ ಈ ಇಬ್ಬರು ಮಹಾನುಭಾವರಿಗಿಂತ ಸಾಮಾಜಿಕವಾಗಿ ಭಾರಿ ನೋವನ್ನು ಉಂಡರು. ಹೆಜ್ಜೆ ಹೆಜ್ಜೆಗೂ ಅಪಮಾನದ ಬೆಂಕಿಯಲ್ಲಿ ಬೆಂದರು. ಜಾತಿಪದ್ಧತಿಯನ್ನು ಅವರಷ್ಟು ಉಗ್ರವಾಗಿ ಖಂಡಿಸಿದವರು ಸಿಗುವುದು ವಿರಳ. "ಬ್ರಾಹ್ಮಣಿಕೆ ಹಿಂದೂ ಧರ್ಮದ ವಿಷ" ಎಂದು ದಿಟ್ಟವಾಗಿ ಘೋಷಿಸಿದರು. ಅವರದು ಸಂಕುಚಿತ ಪಂಥಾಭಿಮಾನ ಎನ್ನುವವರೆಗೂ ತಮ್ಮ ಜನತೆಯ ಉದ್ಧಾರಕ್ಕೆ ದೃಢವ್ರತರಾದರು. ಅವರಿಗೆ ಅಂಥ ಉಜ್ವಲ ಪಂಥಾಭಿಮಾನ ಇಲ್ಲದಿದ್ದರೆ ಇಂದು ದಲಿತರಿಗೆ ಈ ಮಟ್ಟದಲ್ಲಿ ಮಾನತ್ಯೆ ಮತ್ತು ಸವಲತ್ತುಗಳು ದಕ್ಕುತ್ತಿರಲಿಲ್ಲವೆಂಬುದು ಚಾರಿತ್ರಿಕ ಸಂಗತಿ.

ಈ ಮೂವರು ಮಹನೀಯರಿಗಿಂತ ಡಾ.ಲೋಹಿಯಾ ಹೆಚ್ಚು ಸಮಾಧಾನ ಚಿತ್ತದಿಂದ ವ್ಯಾಪಕವಾಗಿ, ಸಮಗ್ರವಾಗಿ ಯೋಚಿಸಬಲ್ಲ ವ್ಯಕ್ತಿ. ಅವರಲ್ಲಿ ಕಾಣದ ಆರ್ಥಿಕ ಕಾರ್ಯಕ್ರಮ ಲೋಹಿಯಾವಾದದಲ್ಲಿ ನಿಖರವಾಗಿ ಹೊಳೆಯುತ್ತದೆ. ಬಡವರು, ಹರಿ–ಗಿರಿಜನರು, ಮುಸ್ಲಿಮರು, ಕ್ರಿಸ್ತರು, ಸ್ತ್ರೀಯರು, ಅಲ್ಪಸಂಖ್ಯಾತರು, ಮುಂತಾದವರ ಏಳಿಗೆಯ ಬಗ್ಗೆ ಲೋಹಿಯಾ ಅವರ ಖಚಿತ ಆಲೋಚನೆ ಅವರು ರಚಿಸಿರುವ ಸಾಹಿತ್ಯದಲ್ಲಿ, ನಡೆಸಿರುವ ಚಳುವಳಿಗಳಲ್ಲಿ ಅವರ ರಾಜಕೀಯ ಪಕ್ಷದ ಪ್ರಣಾಳಿಕೆಗಳಲ್ಲಿ ಮನಮುಟ್ಟುವಂತೆ ದಾಖಲಾಗಿದೆ. ಹಿಂದೂ ಸಮಾಜದ ವಿಷಮತೆಗಳು ಮತ್ತು ವಿರೋಧಾಭಾಸಗಳ ಬಗ್ಗೆ ತೀರಾ ತಲೆ ಕೆಡಿಸಿಕೊಂಡ ಮನುಷ್ಯ ಲೋಹಿಯಾ. ಬಡತನ, ಅಜ್ಞಾನ, ಭಾಷೆ, ಜಾತಿ, ಹಳ್ಳಿ ಪಟ್ಟಣಗಳ ಅಂತರ, ಮೇಲು–ಕೀಳು ಭಾವ, ಸಾಹಿತ್ಯ, ಸಂಸ್ಕೃತಿ ಇತ್ಯಾದಿ ಮಾನವ ಜೀವನದ ಎಲ್ಲಾ ವಿಷಯಗಳನ್ನು ಕುರಿತು ಆಳವಾಗಿ ಯೋಚಿಸಬಲ್ಲವರಾಗಿದ್ದರು. ಯಾವುದರ ಮೇಲೆ ಬರೆಯಲಿ, ಮಾತನಾಡಲಿ ತಮ್ಮ ಅಪೂರ್ವ ಸ್ವಂತಿಕೆಯನ್ನು ಮೆರೆಯುವ ಅಗಾಧ ಬುದ್ಧಿಶಕ್ತಿಯಿತ್ತು. ಪಾಂಡಿತ್ಯವಿತ್ತು. ಬಹುಶಃ ಆಧುನಿಕ ಭಾರತದ ಮಹಾ ಮೇಧಾವಿ ಡಾ. ರಾಮಮನೋಹರ ಲೋಹಿಯಾ.

ಮಹಾತ್ಮಗಾಂಧೀಜಿಯ ಚಿಂತನೆಯನ್ನು ನಿಜವಾಗಿ ಬೆಳೆಸಿದವರು ಹಾಗೂ ರಾಜಕೀಯಪಕ್ಷದ ಅಡಿಪಾಯವಾಗಿ ಅದನ್ನು ಅಂಗೀಕರಿಸಿದವರೆಂದರೆ ಲೋಹಿಯಾ ಒಬ್ಬರೇ. ದಿವಂಗತ ನೆಹರೂ ಮಹಾತ್ಮರ ಉತ್ತರಾಧಿಕಾರಿ ಎನ್ನಿಸಿಕೊಂಡರೂ ಗಾಂಧಿತತ್ವದ ಅವಸಾನ ಅವರ ಆಳ್ವಿಕೆಯಲ್ಲೇ ಆರಂಭವಾಗಿತ್ತು. ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಹೋರಾಡುವ ಚೈತನ್ಯವಾಗಲೀ ಕೆಚ್ಚಿನ ಮನವರಿಕೆಯಾಗಲೀ ಜವಾಹರಲಾಲರಿಗೆ ಇದ್ದಂತೆ ಕಾಣಲಿಲ್ಲ. ಗಾಂಧಿ ಮೌಲ್ಯಗಳ ಪತನವನ್ನು ಕಂಡು ಅವುಗಳ ಉಳಿವಿಗಾಗಿ ವೀರಾವೇಶದಿಂದ ಹೋರಾಟ ನಡೆಸಿದ ಡಾ.ಲೋಹಿಯಾರನ್ನು ಹುಚ್ಚನೆಂದು ಕರೆದರು. ಲೋಹಿಯಾ ಎಂದೂ ಅನುಕೂಲಕ್ಕಾಗಿ ಅಧಿಕಾರಕ್ಕಾಗಿ ತತ್ವಗಳೊಡನೆ ರಾಜಿ ಮಾಡಿಕೊಂಡವರಲ್ಲ. ನಿಸ್ವಾರ್ಥಿಗೆ ಜನ ಸಂತೋಷದಿಂದ ಕೊಡುವ ಬಿರುದು 'ಹುಚ್ಚ' ಎಂದು! ಇಂಥ ಹುಚ್ಚರು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಉದ್ಭವಿಸಿದರೆ

ಅಷ್ಟರಮಟ್ಟಿಗೆ ರಾಷ್ಟ್ರಕ್ಕೆ ಹಿತ ಹಾಗೂ ಲಾಭ. ಲೋಹಿಯಾವಾದದಲ್ಲಿ ಭೌತಿಕ ಬದುಕಿನ ಮೇಲಷ್ಟೇ ಒತ್ತಿಲ್ಲ; ಆಧ್ಯಾತ್ಮ ಜೀವನದ ಮೇಲೂ ಒತ್ತಿದೆ. ಮಾನವನ ಐಹಿಕ ಜೀವನ ಸುಖಮಯವಾದರೆ ಸಾಲದು. ಹಿಟ್ಟು ಬಟ್ಟೆ ವಸತಿ ದೊರಕಿದೊಡನೆ ಮನುಷ್ಯ ಸಂತೃಪ್ತನಾದರೆ ಮೃಗವಾಗುತ್ತಾನೆ. ಈ ಮೃಗೀಯತೆಯನ್ನು ಗೆಲ್ಲುವ, ಆಳುವ ಶಕ್ತಿ ಕಲಾಸಾಹಿತ್ಯಗಳಿಂದ ಬರುತ್ತದೆ, ಆಗ ಯಾರು ಯಾರನ್ನೂ ನಿಯಂತ್ರಿಸುವುದಿಲ್ಲ. ಸ್ವಾತಂತ್ರ್ಯ ಇರುತ್ತದೆ; ಸಮಾನತೆ ಬರುತ್ತದೆ. ಸ್ವಾತಂತ್ರ್ಯ ಮತ್ತು ಸಮಾನತೆ ಸಂಯಮದಿಂದ ಹುಟ್ಟುತ್ತವೆ. ಅದು ಬುದ್ಧ, ಸಾಕ್ರೇಟಿಸ್, ಕ್ರಿಸ್ತ, ಗಾಂಧಿ ಮುಂತಾದ ಮಹಾತ್ಮರು ಮುಟ್ಟಿದ ಮನಃಸ್ಥಿತಿ.

ಅಂತರ್ಜಾತಿ ವಿವಾಹವಾಗಿ ಜಾತಿಪದ್ಧತಿ ನಾಶವಾಗಬೇಕೆಂದು ಲೋಹಿಯಾ ಹೇಳುತ್ತಾರೆ. ಇದನ್ನು ಮುಂದುವರೆಸಿ ಎಲ್ಲಾ ದೇಶಗಳ ಜನರಲ್ಲಿ ಮದುವೆಯಾಗಬೇಕೆಂದು ಬಯಸುತ್ತಾರೆ. ಇದರಿಂದ ವಿಶ್ವಬಂಧುತ್ವ ಬೆಳೆಯುತ್ತದೆ. ರಾಷ್ಟ್ರ-ರಾಷ್ಟ್ರಗಳ ಜನಾಂಗ-ಜನಾಂಗಗಳ ನಡುವೆ ಅಂತರ ಮತ್ತು ಅನ್ಯತನ ಕಡಿಮೆಯಾಗಿ ಕಾಲಾಂತರದಲ್ಲಿ ಮಾನವ ಸಮುದಾಯವೆಲ್ಲ ಒಂದು ಎಂಬ ಭಾವನೆ ಅನುಭವಕ್ಕೆ ಬರುತ್ತದೆಂದು ಲೋಹಿಯಾ ಕನಸು ಕಾಣುತ್ತಾರೆ. ಇದು ನಿಜಕ್ಕೂ ಅನುಷ್ಠಾನ ಯೋಗ್ಯವಾದ ಅರ್ಥಗರ್ಭಿತ ದರ್ಶನ. ಅನೇಕ ಭಾರತೀಯ ಯುವಜನರು ಅಮೇರಿಕಾ ಮುಂತಾದ ಹೊರದೇಶಗಳಿಗೆ ಹೋಗಿದ್ದಾರೆ. ಹೋಗುತ್ತಿದ್ದಾರೆ ಹಣ ಸಂಪಾದನೆಗಾಗಿ. ಸಂಪತ್ತು ಗಳಿಸಿದ ಮೇಲೆ ಸ್ವದೇಶಕ್ಕೆ ಮರಳಿ ಸ್ವಜಾತಿಯಲ್ಲೇ ಮದುವೆಯಾಗಿ ಹಣ ಗಳಿಕೆಗಾಗಿ ಅಥವಾ ಅಲ್ಲೇ ನೆಲೆಸುವ ಉದ್ದೇಶದಿಂದ ವಾಪಸ್ಸು ಹೋಗುತ್ತಾರೆ. ಇವರಿಗೆ ಹೊರದೇಶದ ಹಣ ಬೇಕು. ಆದರೆ ಅಲ್ಲಿಯ ಜನ ಬೇಕಿಲ್ಲ;ಆ ಹೆಣ್ಣು ಅಥವಾ ಗಂಡಿನ ಜೊತೆ ಬೆರೆತು ಬದುಕುವ ಮನಸ್ಸಿಲ್ಲ; ಅಲ್ಲಿನ ನೆಲಕ್ಕ ನಿಷ್ಠೆಯಿಲ್ಲ. ಇಂಥ ವಿದೇಶಿಯರ ಸಂಖ್ಯೆ ಹೆಚ್ಚಿದಂತೆ ದೇಶದ ಸಂಪನ್ಮೂಲಗಳು ಮುಗಿದಂತೆ "ವಿದೇಶಿಯರೇ ತೊಲಗಿ!' ಎಂಬ ಚಳುವಳಿ ಶುರುವಾಗಬಹುದು.-ಅಸ್ಸಾಂ, ಉಗಾಂಡ, ಇಂಗ್ಲೆಂಡ್, ಸಿಲೋನ್ ಮುಂತಾದ ದೇಶಗಳಲ್ಲಿ ಆದಂತೆ. ಆದ್ದರಿಂದ ಲೋಹಿಯಾವಾದದ ಶ್ರೇಷ್ಠತೆಯನ್ನು ಅರಿಯಬೇಕು, ವಿಶ್ವಬಾಂಧವ್ಯ ಮೂಡಿಸಲು ನೆರವಾಗಬೇಕು, ಆಟಂ ಬಾಂಬ್ ಮುಂತಾದ ಮಾರಕಾಸ್ತ್ರಗಳಿಂದ ಮಾನವ ಜನಾಂಗ ಉಳಿಯಬೇಕಾದರೆ ಇದೊಂದೇ ಉಪಾಯ; ಏಕೆಂದರೆ ರಕ್ತ ಸಂಬಂಧ ಎಲ್ಲಕ್ಕಿಂತ ದೊಡ್ಡದು.

– ಕೆ.ಎಸ್.ಭಗವಾನ್

ಮಣ್ಣಿನ ಸಮಸ್ಯೆಗಳಿಗೆ ಪರಿಹಾರ

ನಾನು ಹುಟ್ಟುವ ಮೊದಲೇ ಧರ್ಮಾಂಧನೊಬ್ಬ ಗಾಂಧಿಯನ್ನು ಕೊಂದು ಹಾಕಿದ್ದ. ನಾನು ವಿದ್ಯಾರ್ಥಿಯಾಗಿದ್ದಾಗ ಲೋಹಿಯಾ ಅಸುನೀಗಿದ್ದರು. ನನ್ನ ತಾರುಣ್ಯದ

ತುತ್ತತುದಿಯಲ್ಲಿ ಮೊನ್ನೆ ತಾನೆ ಜಯಪ್ರಕಾಶ ನಾರಾಯಣರು ಸತ್ತರು. ಈ ಮಹನೀಯರು ಎಂದೂ ಅಧಿಕಾರಕ್ಕೆ ಆಸೆಪಟ್ಟವರಲ್ಲ; ನಾಡಿಗಾಗಿ ಒಂದಲ್ಲ ಒಂದು ರೀತಿಯಲ್ಲಿ ತಮ್ಮ ದೇಹ ಮನಸ್ಸುಗಳನ್ನು ಸವೆಸಿಕೊಂಡವರು.

ಗಾಂಧಿ ನಮ್ಮ ಸಮಾಜದ ಕೆಳಜಾತಿಯ ಬಗ್ಗೆ ಅನುಕಂಪ ತೋರಿದ್ದರೂ ಪುರೋಹಿತಶಾಹಿಯ ಪರವಾಗಿ, ವರ್ಣಾಶ್ರಮದ ಪ್ರತಿಪಾದಕರಾಗಿ ಕಂಡುಬಿಡುವುದರಿಂದ ಅವರನ್ನು ಮೂಲಭೂತವಾಗಿ ಒಪ್ಪಿಕೊಳ್ಳುವುದು ಕಷ್ಟವಾಗಿಬಿಡುತ್ತದೆ. ಜಯಪ್ರಕಾಶರು ಜೀವನದುದ್ದಕ್ಕೂ ತತ್ವಾನ್ವೇಷಕರಾಗಿಯೇ ನಿಂತು, ವೈಚಾರಿಕ ಗೊಂದಲದಲ್ಲಿ ಉಳಿಯುವುದರಿಂದ ತಾತ್ವಿಕವಾಗಿ ಸ್ವೀಕರಿಸಲಾಗುವುದಿಲ್ಲ. ಡಾ. ರಾಮಮನೋಹರ ಲೋಹಿಯಾ ಸ್ಪಷ್ಟ ಸೈದ್ಧಾಂತಿಕ ನೆಲೆಯಲ್ಲಿ ನಿಂತು ಈ ಮಣ್ಣಿನ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು ಪ್ರಯತ್ನಿಸಿದ ಏಕೈಕ ವ್ಯಕ್ತಿಯಾದ್ದರಿಂದ ನಾನು ಅವರಿಂದ ಪ್ರಭಾವಿತನಾಗಿದ್ದೇನೆ.

ನಾನೊಬ್ಬ ರೈತನ ಮಗ. ಲೋಹಿಯಾ ಗ್ರಾಮೀಣ ಸಮಸ್ಯೆಗಳ ಬಗ್ಗೆ ನಡೆಸಿರುವ ವಿಚಾರಧಾರೆಗಳು ನನ್ನ ಆಲೋಚನೆಗೆ ಪ್ರಚೋದನೆ ನೀಡಿವೆ. ನೆಹರೂ ಮತ್ತು ನೆಹರೂ ನಂತರದ ಈ ದೇಶದ ಅಧಿಕಾರಶಾಹಿ ಹಾಗೂ ಬಂಡವಾಳಶಾಹಿ ಪ್ರಜಾಪ್ರಭುತ್ವದಲ್ಲಿ ಬದಲಾವಣೆ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯಿಂದ ಮಾತ್ರ ಸಾಧ್ಯ. ಹಳ್ಳಿಗಳ ಉದ್ಧಾರವಾಗದೆ ಭಾರತ ಎಂದೂ ಉದ್ಧಾರವಾಗದೆಂಬುದು ಲೋಹಿಯಾ ಅವರ ಸ್ಪಷ್ಟ ನಿಲುವು. ರೈತನ ಏಳಿಗೆಯನ್ನು ಕುರಿತ ಲೋಹಿಯಾ ಚಿಂತನೆ ನನಗೆ ಅತಿ ಮುಖ್ಯ ಅನ್ನಿಸಿದೆ.

ತಾತ್ಕಾಲಿಕ ಅನ್ಯಾಯವನ್ನು ಸಹಿಸಿಕೊಳ್ಳಿ ಎಂದು ಡಾ. ಲೋಹಿಯಾ, ಬ್ರಾಹ್ಮಣ ಪುರೋಹಿತಶಾಹಿಗೆ ತಿಳಿಹೇಳುವ ಮೂಲಕ, ಈ ದೇಶದ ಶೇಕಡಾ ೯೦ಕ್ಕೂ ಹೆಚ್ಚುಮಂದಿ ಇರುವ ಶೂದ್ರರ ಪ್ರಜ್ಞೆಯನ್ನು ಜಾಗೃತಗೊಳಿಸಿದ್ದುಬಹಳ ಮುಖ್ಯ ಅಂಶ. ತುಂಬಾ ವೈಜ್ಞಾನಿಕವಾಗಿ ಜಾತಿವ್ಯವಸ್ಥೆಯನ್ನು ವಿಶ್ಲೇಷಿಸಿ, ಜಾತಿ ವರ್ಗವಾಗುವ-ವರ್ಗ ಜಾತಿಯಾಗುವ ಚಕ್ರಸ್ಥಿತಿಯನ್ನು ತೋರಿಸಿಕೊಟ್ಟ ಲೋಹಿಯಾ ಜಾತಿವ್ಯವಸ್ಥೆಯನ್ನು ಒಡೆಯುವ ಕ್ರಮವನ್ನು ಹೇಳಿದ್ದಾರೆ. ಅಂತರ್‌ಜಾತಿ ಮದುವೆ ಮತ್ತು ಅಂತರ್‌ಜಾತಿ ಭೋಜನಕೂಟಗಳು ಮಾಡಬಹುದಾದ ಸಾಮಾಜಿಕ ಪ್ರಕ್ರಿಯೆಯಲ್ಲಿನ ತಿರುವು ಸಣ್ಣದೇನಲ್ಲ. ಪುರೋಹಿತಶಾಹಿ ಈ ದೇಶದ ಆರ್ಥಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ಮಾಡಿರುವ ಅನ್ಯಾಯವನ್ನು ಲೋಹಿಯಾ ಐತಿಹಾಸಿಕವಾಗಿ ವಿಶ್ಲೇಷಣೆ ನಡೆಸಿದ್ದಾರೆ.

ಗಾಂಧಿ ಮತ್ತು ಮಾರ್ಕ್ಸ್‌ರನ್ನು ಅರ್ಥ ಮಾಡಿಕೊಂಡು, ಜೀರ್ಣಿಸಿಕೊಂಡು ಭಾರತೀಯ ನೆಲಕ್ಕೆ ಒಗ್ಗುವಂಥ ಸಿದ್ಧಾಂತವನ್ನು ಮಂಡಿಸಿದವರು ಡಾ.ಲೋಹಿಯಾ. ಲೋಹಿಯಾವಾದದಲ್ಲಿ ಕಮ್ಯುನಿಸ್ಟರಲ್ಲಿರುವಂಥ ಬರಡು ತಟಸ್ಥತೆಯಿಲ್ಲ. ಕಮ್ಯುನಿಸಂ ಸಮತಾವಾದವನ್ನೇ ಹೇಳಿದ್ದರೂ ಅದು ಕೊನೆಗೆ ಸೃಷ್ಟಿಸುವುದು ಮಾವೋ, ಸ್ಟಾಲಿನ್‌ರಂಥ

ಸರ್ವಾಧಿಕಾರಿಗಳನ್ನು. ಲೋಹಿಯಾವಾದದಲ್ಲಿ ವಿಚಾರಗಳ ಬೆಳವಣಿಗೆಗೆ ಅವಕಾಶವಿದೆ; ನಿಜವಾದ ಪ್ರಜಾಪ್ರಭುತ್ವದ ನೆಲೆಯಿದೆ.

ಶೂದ್ರರೆಂದು ಪರಿಗಣಿಸಲ್ಪಟ್ಟಿದ್ದ ಹೆಂಗಸರಿಗೆ ಲೋಹಿಯಾವಾದ ಕೊಟ್ಟಿರುವ ಸಮಾನತೆ, ಸ್ವಾತಂತ್ರ್ಯ, ಗೌರವಗಳು ಬೇರೆ ಯಾವುದೇ ವಾದದಿಂದ ಬಯಸುವುದು ಅಸಾಧ್ಯ ಮಾತು. ಇಂಥ ಸೃಷ್ಟಿ ಪುರೋಗಾಮಿ ತಾತ್ವಿಕ ನೆಲೆಯುಲ್ಲಿರುವ ಲೋಹಿಯಾವಾದದಲ್ಲಿ ನನಗೆ ನಂಬಿಕೆ ಇದೆ.

–ಶಿವರಾಮು ಕಾಡನಕುಪ್ಪೆ

ಈ ಕ್ಷಣದ ಸತ್ಯವಾಗಿ ಲೋಹಿಯಾ...

ಎಪ್ಪತ್ತರ ದಶಕದ ಆರಂಭ, ನಾನೂ ಕಾಲೇಜಿನ ಪದವಿ ತರಗತಿಯ ಆರಂಭದಲ್ಲಿದ್ದೆ, ಆರೆಸೆಸ್‌ನ 'ಸೇನಾನಿ' ಕೂಡ ಆಗಿದ್ದೆ, ಕೋಲಾರದ 'ಕಠಾರಿಪಾಳ್ಯ' ಎಂಬ ಅತ್ಯಂತ ನಟೋರಿಯಸ್ ಎನಿಸಿಕೊಂಡ ರೌಡಿ, ಗೂಂಡಾಗಳ ಏರಿಯಾದಲ್ಲಿ ಹುಟ್ಟಿ ಬಂದ ನನ್ನನ್ನು ಆರೆಸೆಸ್‌ನ 'ವಿಪ್ರ' ಸಂಚಾಲಕರು ಅಪ್ಪಿಮುದ್ದಾಡುತ್ತಿದ್ದರು, ನನ್ನನ್ನು ಪೂರ್ಣಾವಧಿ ಕಾರ್ಯಕರ್ತನನ್ನಾಗಿಸಲು ಮನೆ ಬಿಡಿಸುವ ಆಲೋಚನೆಯಲ್ಲಿದ್ದರು, ಕೋಟಿಗಾನಹಳ್ಳಿ ರಾಮಯ್ಯ ಸಿಕ್ಕಿ ಅತ್ಯಂತ ಶ್ರಮಪಟ್ಟು ನನ್ನನ್ನು ಸಂಘ ಪರಿವಾರದ ಸಹವಾಸ ಬಿಡಿಸಿ ದಲಿತ ಚಳುವಳಿಗೆ ಎಳೆತಂದರು.

ಆಂಧ್ರದ ಸೆರಗಿನಲ್ಲಿದ್ದ ನನ್ನೂರಿಗೆ ನಕ್ಸಲೀಯ ಚಳುವಳಿಯು ಅಷ್ಟೇ ಹತ್ತಿರದಲ್ಲಿತ್ತು. ವಯೋಮಾನಕ್ಕೆ ತಕ್ಕಂತೆ ನಾನು ಅತ್ತ ಆಕರ್ಷಿತನಾಗಿದ್ದೆ. ದಲಿತ ಚಳುವಳಿಯಿಲ್ಲಿದ್ದುಕೊಂಡೇ ನಕ್ಸಲೀಯನಾಗಲು ಹವಣಿಸುತ್ತಿದ್ದೆ. ಓದಬೇಕೆಂಬ ಹುಚ್ಚು ಇದ್ದುದ್ದರಿಂದ ಬೆಂಗಳೂರಿನ ಕ್ರಿಯಾ ಪುಸ್ತಕಾಲಯದಿಂದ ತಂದ ಮಾರ್ಕ್ಸ್, ಲೆನಿನ್ ಪುಸ್ತಕಗಳು ನನ್ನ ತಲೆಗೆ ಹೋಗಲೇ ಇಲ್ಲ, ಆ ಸಂದರ್ಭದಲ್ಲಿ ಅಂಬೇಡ್ಕರ್ ಬಗ್ಗೆ ಹೇಳುವವರು ಹೆಚ್ಚಿರಲಿಲ್ಲ.

ನನ್ನ ತಲೆ ಗೊಂದಲದ ಗೂಡಾಗಿತ್ತು. ಇಂತಹ ಸಂಕಷ್ಟದಲ್ಲಿದ್ದಾಗ 'ಲಂಕೇಶ್ ಪತ್ರಿಕೆ' ಯ ಲಿಂಕ್ ಸಿಕ್ಕಿತು. ಲೋಹಿಯಾ ಬಗೆಗಿನ ಮಾತುಗಳು ಕಿವಿಗೆ ಬೀಳಲಾರಂಭಿಸಿದವು. ಸಿಕ್ಕ ಪ್ರತಿ ಸಾಹಿತಿಯನ್ನು, ಪ್ರತಿ ಚಿಂತಕನನ್ನು ಮಾರ್ಕ್ಸ್‌ವಾದಿಯೋ, ಲೋಹಿಯಾವಾದಿಯೋ ಎಂದು ವಿಭಾಗಿಸಲೇಬೇಕಿದ್ದ ಕಾಲವದು.

ಮಾರ್ಕ್ಸ್‌ವಾದಿಗಳು ತೀರಾ ಗಂಭೀರವಾಗಿರುತ್ತಿದ್ದರು. ಅವರು ಮಂಡಿಸುವ ವಿಚಾರಗಳು ಅಷ್ಟೇ ಗಾಂಭೀರ್ಯದಿಂದ ಇರುತ್ತಿದ್ದುದ್ದರ ಪರಿಣಾಮವಾಗಿ ನನ್ನ ಮೆದುಳಿಗೆ ಅವ್ಯಾವುವು ಹೋಗುತ್ತಲೇ ಇರಲಿಲ್ಲ. ಆದರೆ ಲೋಹಿಯಾವಾದಿಗಳು ತೀರಾ ಸರಳವಾಗಿ ವಿಷಯ ಮಂಡಿಸುತ್ತಿದ್ದರು, ನಗುತ್ತಿದ್ದರು, ನಗಿಸುತ್ತಿದ್ದರು, ಜಗಳವಾಡುತ್ತಿದ್ದರು. ಕಾವ್ಯ,

ಹೆಣ್ಣು ಮತ್ತು ಹೆಂಡದ ಬಗ್ಗೆ ವ್ಯಾಮೋಹಿಗಳಾಗಿರುತ್ತಿದ್ದರು. ಈ ಎಲ್ಲಾ ಕಾರಣಕ್ಕೆ ಸಹಜವಾಗಿಯೇ ಲೋಹಿಯಾವಾದಿಗಳು ಆಕರ್ಷಿತರಾಗುತ್ತಿದ್ದರು.

ಪ್ರೊ. ನಂಜುಂಡಸ್ವಾಮಿ, ಲಂಕೇಶ್, ತೇಜಸ್ವಿ, ಚಂಪಾ, ರಾಮದಾಸ್ ಎಲ್ಲರೂ ಜಗಳಗಂಟರಾದರೂ ಎಲ್ಲೋ ಒಂದು ಕಡೆ ಪ್ರೀತಿಯಿಂದ್ದಿರುವಂತೆ ಕಾಣುತ್ತಿದ್ದರು. ಇವರ ಅಪಾರವಾದ ಅಹಂ, ಸಣ್ಣತನಗಳೂ ಕೂಡ ಇವರ ಮನುಷ್ಯ ಸಹಜ ಪ್ರೀತಿಯ ಮುಂದೆ ಸಹನೀಯವೆನಿಸಿಬಿಡುತ್ತಿತ್ತು. ಇಂತಹ ಲೋಹಿಯಾವಾದಿಗಳಿಂದಾಗಿ ಲೋಹಿಯಾ ಇಷ್ಟವಾಗತೊಡಗಿದರು. ಈ ಮಧ್ಯೆ 'ಸಮಾಜವಾದಿ ಅಧ್ಯಯನ ಕೇಂದ್ರ'ದೊಂದಿಗೆ ಸಂಪರ್ಕವಾಗಿ ಅಲ್ಲಿಗೂ ಹೋದೆ. ಅಲ್ಲಿ ಲೋಹಿಯಾರನ್ನು ಹೊರತುಪಡಿಸಿ ಬೇರೆಲ್ಲಾ ಸಮಾಜವಾದಿಗಳ ಬಗ್ಗೆ ಹಾಗೂ ಸಮಾಜವಾದದ ಬಗ್ಗೆ ಮಾತನಾಡುತ್ತಾ, ನನಗರ್ಥವಾಗದ ಪರಿಭಾಷೆಯಲ್ಲಿ ವಿಷಯ ಮಂಡಿಸುತ್ತಿದ್ದರು, ಅಲ್ಲಿಂದಲೂ ಕಾಲ್ಕಿತ್ತೆ. ಅ ಸಂದರ್ಭದಲ್ಲಿ ಆಗಾಗ ಸಿಗುತ್ತಿದ್ದ ಸಾಕೇತ್ ರಾಜನ್ ನನ್ನನ್ನು ಕಾಡಿಗೆಳೆಯಲು ಯತ್ನ ಮಾಡುತ್ತಿದ್ದರೆ, ನಾನು ಆತನನ್ನು ನಾಡಿಗೆಳೆಯಲು ಯತ್ನಿಸುತ್ತಿದ್ದೆ.

ಈ ಮಧ್ಯೆ ಲೋಹಿಯಾರನ್ನು ಅಷ್ಟಿಷ್ಟು ಓದಿಕೊಂಡೆ, ಲೋಹಿಯಾ ನಿಧಾನಕ್ಕೆ ನನ್ನೊಳಕ್ಕೆ ಇಳಿಯತೊಡಗಿದರು. ಡಾ. ಕಾಳೇಗೌಡ ನಾಗವಾರ ಹಾಗೂ ಡಾ॥ ನಟರಾಜ ಹುಳಿಯಾರ್‌ರವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಾಗಿ ಸಂಪಾದಿಸುತ್ತಿದ್ದ ಲೋಹಿಯಾ ಸಂಪುಟಗಳಿಗೆ ಲೋಹಿಯಾರ ಬರಹಗಳನ್ನು ಅನುವಾದ ಮಾಡಬೇಕೆಂದು, ಲೋಹಿಯಾರ ಇಂಗ್ಲೀಷ್ ಮೂಲ ಕೃತಿಗಳನ್ನು ನನಗೆ ನೀಡಿದಾಗ ಲೋಹಿಯಾರನ್ನು ಅಮೂಲಾಗ್ರವಾಗಿ ಗ್ರಹಿಸಲು ಸಾಧ್ಯವಾಯಿತು. ಕರ್ನಾಟಕದಲ್ಲಿ ರೈತ ಚಳುವಳಿ, ದಲಿತ ಚಳುವಳಿ ಮತ್ತು ಭಾಷಾ ಚಳುವಳಿಗಳ ಮೇಲೂ ಲೋಹಿಯಾರ ಪ್ರಭಾವ ಇದ್ದದ್ದು ನನಗೆ ಕಾಣಿಸುತ್ತಿತ್ತು.

ರಾಷ್ಟ್ರಪತಿ ರಾಜೇಂದ್ರಪ್ರಸಾದ್‌ರವರು ನೂರಒಂದು ಜನ ಬ್ರಾಹ್ಮಣರ ಕಾಲು ತೊಳೆದಾಗ ಲೋಹಿಯಾ ಇದನ್ನು ಪ್ರತಿಭಟಿಸಿ "ಬ್ರಾಹ್ಮಣರ ಕಾಲುಗಳನ್ನು ಸಾರ್ವಜನಿಕವಾಗಿ ತೊಳೆಯುವ ಕೈಗಳು ಶೂದ್ರರನ್ನು, ದಲಿತರನ್ನು ಒದೆಯಬಲ್ಲ ಕಾಲುಗಳ ಜೊತೆಗೆ ಇರುತ್ತವೆ" ಎಂಬ ವಿಶ್ಲೇಷಣೆಯನ್ನು ಓದಿ ನಾನು ದಂಗುಬಡಿದುಹೋದೆ. ಈ ದೇಶದ ಜಾತಿಯ ಬಗ್ಗೆ ಮಾತನಾಡುತ್ತಾ ಲೋಹಿಯಾರವರ 'ಈ ದೇಶದಲ್ಲಿ ವರ್ಗ ಎನ್ನುವುದು ಚಲನೆ ಇರುವ ಜಾತಿ, ಜಾತಿ ಎನ್ನುವುದು ಚಲನೆ ಇಲ್ಲದ ವರ್ಗ' ಎಂದದ್ದು, ಉಗ್ರ ನಾಸ್ತಿಕನಾಗಿದ್ದ ನಾನು ಎಲ್ಲಾ ದೇವರ ಫೋಟೋಗಳನ್ನು ಚರಂಡಿಗೆ ಎಸೆಯಬೇಕೆಂದು ಪ್ರತಿಪಾದಿಸುತ್ತಿದ್ದಾಗ, "..... ಸೀಮಿತ ವ್ಯಕ್ತಿತ್ವದ ರಾಮ, ಅಖಂಡ ವ್ಯಕ್ತಿತ್ವದ ಕೃಷ್ಣ ಹಾಗೂ ನಿರಾಕಾರ ವ್ಯಕ್ತಿತ್ವದ ಶಿವ"ನ ಬಗ್ಗೆ, ಗೊಂದಲದ ಗೂಡಾಗಿದ್ದ ನನ್ನಂತವನಲ್ಲಿ 'ರಾಮಕೃಷ್ಣಶಿವ'ರ ಸಾಂಕೇತಿಕ ಅರ್ಥವಂತಿಕೆಯನ್ನು ಮಾಡಿಸಿದ್ದು ಲೋಹಿಯಾ.

ಗಂಡು ಹೆಣ್ಣುಗಳ ಸಂಬಂಧದ ಬಗ್ಗೆ ಅನೇಕ ಗೊಂದಲಗಳಿದ್ದ ನನ್ನಂತವನಲ್ಲಿ "ಗಂಡು ಮತ್ತು ಹೆಣ್ಣಿನ ನಡುವಿನ ಸಂಬಂಧದಲ್ಲಿ ಅಪದ್ಧ ಮತ್ತು ಬಲಾತ್ಕಾರಗಳೆರಡೆ ಅಪರಾಧಗಳು; ಅಲ್ಲಿ ಮೂರನೆಯದೂ ಇದೆ. ಅದೇನೆಂದರೆ ಸಾಧ್ಯವಾದಷ್ಟು ಒಬ್ಬರನೊಬ್ಬರು ನೋಯಿಸದೆ ಇರುವುದು" ಎಂದ ಲೋಹಿಯಾ ಮುಂದುವರೆದು "ವಿವಾಹದ ಚೌಕಟ್ಟಿನೊಳಗೆ ಜನಿಸುವ ಅರ್ಧ ಡಜನ್ ತಂಟೆಕೋರ ಮಕ್ಕಳಿಗಿಂತ, ವಿವಾಹದ ಚೌಕಟ್ಟಿನಾಚೆಗೆ ಹುಟ್ಟುವ ಒಂದು ಸಭ್ಯ ಮಗು ಲೇಸು" ಎಂದದ್ದು ನನ್ನಲ್ಲಿನ ಅನೇಕ ಪೂರ್ವಾಗ್ರಗಳನ್ನು ಹೊಡೆದೊಡಿಸಿತು. ಇದೇ ರೀತಿ ಈ ಮಣ್ಣಿನ ಕಪ್ಪು ಸೌಂದರ್ಯದ ಬಗ್ಗೆ, ಶಿಲ್ಪಕಲೆಯ ಬಗ್ಗೆ, ಪ್ರಾದೇಶಿಕ ಭಾಷೆಯ ಬಗ್ಗೆ, ಸ್ತ್ರೀ ಪುರುಷ ಸಮಾನತೆಯ ಬಗ್ಗೆ ಬ್ರಾಹ್ಮಣ್ಯದ ಅಪಾಯಗಳು, ಶೂದ್ರರ ಮೌಢ್ಯ, ಹಿಂದುಳಿದವರ್ಗಗಳ ಯಾತನೆ ಮುಂತಾಗಿ ಲೋಹಿಯಾರ ಸಪ್ತ ಕ್ರಾಂತಿಯ ಪರಿಕಲ್ಪನೆಗಳನ್ನು ಗ್ರಹಿಸಿದಂತೆಲ್ಲ ನನ್ನಲ್ಲಿನ ಅಸ್ಪಷ್ಟಗೊಂದಲಗಳು ಮಾಯವಾಗಿ ಸ್ಪಷ್ಟ ಸೈದ್ಧಾಂತಿಕ ತಳಹದಿ ಮೂಡತೊಡಗಿತು. ಈ ಹಿನ್ನಲೆಯಲ್ಲಿ ಅಂಬೇಡ್ಕರ್ ಮತ್ತು ಗಾಂಧಿಯನ್ನು ಕೂಡ ಒಂದಿಷ್ಟು ಓದಿಕೊಂಡೆ, ಕಡೆಗೆ ಅಂಬೇಡ್ಕರ್ ಮೆದುಳು, ಲೋಹಿಯಾರ ಹೃದಯ ಹಾಗೂ ಗಾಂಧೀಜಿಯ ದೇಹ ನನ್ನಲ್ಲಿರಲಿ ಎಂದು ಬಯಸಲಾರಂಭಿಸಿದೆ. ಈ ಮೂವರು ನನ್ನೊಳಗಿನ ಅರಿವನ್ನು ಹೆಚ್ಚಿಸಿದರಲ್ಲದೆ ಈ ಕ್ಷಣದ ಸತ್ಯವಾಗಿಯೂ ಸದಾ ಎಚ್ಚರವಾಗಿಟ್ಟಿರುತ್ತಾರೆ.

–ಡಾ. ಸಿ ಎಸ್. ದ್ವಾರಕಾನಾಥ್

'ಮನೋಹರ' ಲೋಹಿಯಾ

ಒಬ್ಬ ರಾಜಕೀಯ ಮುಖಂಡ ಇರಬಹುದಾದ ರೀತಿ ಹೇಗಿರಬೇಕು ಎಂಬ ಯೋಚನೆ ಬಂದಾಗಲೆಲ್ಲಾ ನನಗೆ ರಾಮಮನೋಹರ ಲೋಹಿಯಾ ನೆನಪಾಗುತ್ತಾರೆ. ನಾನು ಸ್ನಾತಕೋತ್ತರ ಪದವಿ ಓದುತ್ತಿರುವಾಗ ಲೋಹಿಯಾ ಅವರ ಪುಸ್ತಕವನ್ನು ಮೊದಲ ಬಾರಿಗೆ ಓದಿದೆ. ರೈತ ಸಂಘ ಆಯೋಜಿಸಿದ್ದ ವಿಚಾರ ಸಂಕಿರಣವೊಂದರಲ್ಲಿ ಭಾರತದ ವ್ಯವಸಾಯದ ಪರಿಸ್ಥಿತಿಗಳ ಬಗ್ಗೆ ನಾನು ಮಂಡಿಸಬೇಕಾಗಿದ್ದ ಪ್ರಬಂಧದ ತಯಾರಿಗಾಗಿ 'ರಾಜಕೀಯದ ಮಧ್ಯೆ ಬಿಡುವು' ಕೃತಿಯನ್ನು ಓದಿದೆ. ಆ ಹೊತ್ತಿಗಾಗಲೇ ನನಗೆ ರಾಜಕೀಯ ಚಿಂತಕರ ಬರಹಗಳನ್ನು ಓದಿ ಗೊತ್ತಿತ್ತು. ಆದರೆ ಲೋಹಿಯಾ ಚಿಂತನೆಗಳನ್ನು ಓದಿದಾಗ ಒಂದು ಬೆಚ್ಚನೆಯ ಜೀವಸ್ಪರ್ಶದ ಅನುಭವ ಉಂಟಾಯಿತು.

ಒಂದು ರೀತಿಯಲ್ಲಿ ಆ ಕೃತಿಯಲ್ಲಿ ಇದ್ದ ಬರಹಗಳು ಒಂದು ನಿರ್ದಿಷ್ಟ ವಿಷಯ ಕೇಂದ್ರಿತವಾದ ಸೈದ್ಧಾಂತಿಕ ಲೇಖನಗಳಲ್ಲ. ಆದರೆ ಅವುಗಳಲ್ಲಿ ಸಿದ್ಧಾಂತವಿರಲಿಲ್ಲ ಎಂದಲ್ಲ. ಅವು ಅಂದಿನ ಜನಜೀವನದ ಹಲವು ಸಮಸ್ಯೆಗಳನ್ನು ಪರಿಶೀಲಿಸುತ್ತಾ ನಡೆಸಿದ ಚಿಂತನೆಗಳಾಗಿದ್ದವು. ಅವುಗಳನ್ನು ನಿರೂಪಿಸುವ ಧೋರಣೆ ಮತ್ತು ಶೈಲಿ

ಚಿತ್ತಾಕರ್ಷಕವಾಗಿದ್ದವು. ಆ ಬರಹಗಳ ಹಿಂದಿನ ಕಳಕಳಿ ಮತ್ತು ಪ್ರಾಮಾಣಿಕತೆಗಳು ಅತ್ಯಂತ ಪಾರದರ್ಶಕವಾಗಿದ್ದವು. ತನ್ನ ವರ್ತಮಾನದ ವಿದ್ಯಮಾನಗಳ ಬಗ್ಗೆ, ಅವುಗಳಲ್ಲಿ ಇರಬೇಕಾದ ಸಾರ್ವಜನಿಕ ಶೀಲದ ಬಗ್ಗೆ ಲೋಹಿಯಾ ಪ್ರತಿಪಾದಿಸುತ್ತಿದ್ದ ನಿಲುವುಗಳು ಮನಮುಟ್ಟುವಂತಿದ್ದವು.

ರಾಜಕೀಯ ಚಿಂತನೆ ಎಂದರೆ ಅತ್ಯಂತ ಗಂಭೀರವಾದ 'ಘನ' ಬರಹಗಳು ಎಂದುಕೊಂಡಿದ್ದ ನನಗೆ ಅವುಗಳಲ್ಲಿದ್ದ ಚೇತೋಹಾರಿ ಗುಣ ತುಂಬಾ ಇಷ್ಟವಾಯಿತು. 'ಸೌಂದರ್ಯ ಮತ್ತು ಮೈ ಬಣ್ಣ' ಎಂಬ ಲೇಖನದ ವಿವರಗಳು ನನಗಿಲ್ಲಿ ನೆನಪಿಗೆ ಬರುತ್ತಿವೆ. ಬಿಳಿ ಮೈ ಬಣ್ಣ ಸುಂದರವಾದುದು ಎಂದು ಭಾವಿಸುವುದು ಅತ್ಯಂತ ಸಹಜವಾದುದು ಹಾಗೂ ಅದು ಸೌಂದರ್ಯದ ಬಗೆಗಿನ ಅಭಿರುಚಿ ಎಂದು ನಾನು ಭಾವಿಸಿದ್ದೆ. ಆದರೆ ಆ ಅಭಿರುಚಿಯೊಳಗೊಂದು 'ದಾಸ್ಯ ಮನೋಭಾವ' ಅಡಗಿದೆ ಎಂಬುದು ಅರ್ಥವಾದಾಗ ನಾನು ಬೆಚ್ಚಿದೆ. ಆಳುವವರ ಮೌಲ್ಯಗಳು ಮತ್ತು ಮಾದರಿಗಳು ಆಳಿಸಿಕೊಳ್ಳುವವರ ಮನಸ್ಸಿನಲ್ಲಿ ಆದರ್ಶಗಳಾಗಿ ನೆಲೆಗೊಳ್ಳುವ ವಿಧಾನ, ಅದು ಈ ಬಗೆಯ ವರ್ಗ ದಮನ ಒಂದು ಸಾಧನವಾಗಿ ಇದೆ ಎಂಬುದು ಕೂಡ ಗೋಚರವಾಗದ ಹಾಗೆ ಆಲೋಚನೆಗಳಲ್ಲಿ ಮನೋಗತವಾಗಿಬಿಟ್ಟಿರುವ ಬಗ್ಗೆ ಆ ಲೇಖನ ಮೂಡಿಸಿದ ಎಚ್ಚರ ಈಗಲೂ ನನ್ನಲ್ಲಿ ಕ್ರಿಯಾಶೀಲವಾಗಿದೆ.

ಇಂಗ್ಲಿಷ್ ಭಾಷೆಯ ಬಗ್ಗೆ ಭಾರತೀಯರಲ್ಲಿ ಇರುವ ವ್ಯಾಮೋಹ ಮತ್ತು ಆಳದಲ್ಲಿರುವ ಭಯ, ಅವಲಂಬನೆ ಇವುಗಳ ಬಗ್ಗೆಯೂ ಲೋಹಿಯಾ ಅವರಿಗಿದ್ದ ತಿಳಿವಳಿಕೆ ಈಗಲೂ ನಮ್ಮ ಕಣ್ತೆರೆಸುವಷ್ಟು ಪರಿಣಾಮಕಾರಿಯಾಗಿದೆ. ಭಾರತದ ಪೋಲೀಸ್ ಸ್ಟೇಷನ್‌ಗಳಲ್ಲಿ ಸಾಮಾನ್ಯವಾಗಿ ನಾಗರಿಕ ನಡವಳಿಕೆ ಇರುವುದಿಲ್ಲವೆಂಬುದನ್ನು ಅವರು ಹೇಳುತ್ತಾ, ಅಂತಹ ಜಾಗಗಳಲ್ಲಿ ಕೂಡ ನೀವು ಇಂಗ್ಲಿಷ್ ಭಾಷೆ ಬಳಸಿದೊಡನೆ ಕುಳಿತುಕೊಳ್ಳಲು ಖುರ್ಚಿ ಸಿಗುತ್ತದೆ ಎಂದು ಅವರು ಹೇಳಿದ ವಿಧಾನ ನನಗೆ ಯಾವಾಗಲೂ ನೆನಪಾಗುತ್ತದೆ. ಬದುಕಿನ ಅನುಭವಗಳ ಆಧಾರದಲ್ಲಿ ಸಾಮಾನ್ಯ ಓದುಗರಿಗೂ ಅರ್ಥವಾಗುವಂತೆ ಇಂತಹ ವಿಷಯಗಳನ್ನು ಅವರು ನಿರೂಪಿಸುತ್ತಾ ರಾಜಕೀಯ ಜೀವನದಲ್ಲಿ ಯಾವುದೂ ಅಮುಖ್ಯವಲ್ಲ ಎಂಬ ನಂಬಿಕೆಯಿಂದ ಅವರು ಚಿಂತಿಸಿದ್ದು, ಅವರ ಕಾಲದಲ್ಲಿ ಬಹುಶಃ ಗಾಂಧೀಜಿಯವರ ಚಿಂತನೆಯ ಪ್ರಭಾವದಿಂದಲೇ ಇರಬಹುದು.

ಗಾಂಧೀಜಿಯವರನ್ನು ಸಂದರ್ಶಿಸಲು ವಿದೇಶಿ ಪತ್ರಕರ್ತೆಯೊಬ್ಬಳು ಬಂದಿದ್ದಾಗ ನಡೆಯಿತೆನ್ನಲಾದ ಘಟನೆ ಇದಕ್ಕೊಂದು ಪೂರಕ ನಿದರ್ಶನವಾಗಿದೆ. ಅತ್ಯಂತ ಗಂಭೀರವಾದ ರಾಜಕೀಯ ನಿಲುವುಗಳ ಬಗ್ಗೆ ಸಂದರ್ಶನದಲ್ಲಿ ವಿವರಿಸುತ್ತಿದ್ದ ಗಾಂಧೀಜಿ, ತಟಕ್ಕನೆ ಎದ್ದು ಹೋಗಿ ತಾವು ಆರೈಕೆ ಮಾಡುತ್ತಿದ್ದ ಅನಾರೋಗ್ಯಪೀಡಿತ ಮೇಕೆಯ ಯೋಗಕ್ಷೇಮ ಗಮನಿಸಿ ಬರುತ್ತಿದ್ದರೆಂಬುದು ಆ ಸನ್ನಿವೇಶದ ಸ್ಥೂಲ ನಿರೂಪಣೆ.

ಆಕೆಗಿದು ಆಶ್ಚರ್ಯ. ಭಾರತೀಯ ಸ್ವಾತಂತ್ರ್ಯಂದೋಲನದ ಮೇರು ನಾಯಕ ತನ್ನ ಬಿಡುವಿಲ್ಲದ ದಿನಚರಿಯ ನಡುವೆ ಇಂತಹ ಸಣ್ಣಪುಟ್ಟ ವಿಷಯಗಳನ್ನು ನೆನಪಿಟ್ಟುಕೊಂಡು ಅವುಗಳ ಬಗ್ಗೆ ಗಮನ ಹರಿಸುವ ರೀತಿ ಆಕೆಗೆ ಅಚ್ಚರಿಯುಂಟುಮಾಡಿರುವುದರಲ್ಲಿ ವಿಶೇಷವೇನಿಲ್ಲ.

ಐರೋಪ್ಯ ಸಮಾಜದ ರೀತಿ ರಿವಾಜುಗಳಲ್ಲಿ ಉನ್ನತ ದರ್ಜೆಯಲ್ಲಿರುವ, ಸ್ಥಾನಮಾನದಲ್ಲಿರುವ ಯಾವ ವ್ಯಕ್ತಿಯೂ ಈ ಬಗೆಯಲ್ಲಿ ವರ್ತಿಸಲು ಸಾಧ್ಯವಿಲ್ಲ. ಅವರ ಕೆಲಸ ಕಾರ್ಯಗಳನ್ನು ಮಾಡಿಕೊಡಲು ಸಹಾಯಕರ ತಂಡವಿರುತ್ತದೆ. ಅವರೇ ಕೈಯಾರೆ ಮಾಡಬಹುದಾದ ಕೆಲಸಗಳ ಮಹತ್ವವೇ ಬೇರೆಯಿರುತ್ತದೆ. ಆದರೆ ಭಾರತೀಯ ಜೀವನ ಶೈಲಿ ಇದಕ್ಕೆ ಭಿನ್ನ. ಮಹಾನ್ ಸಂತನಾದ ಕಬೀರ ಕಡೆಯ ಕಾಲದವರೆಗೂ ನೇಯ್ಗೆ ಮಾಡುವ ಕೆಲಸವನ್ನು ನಿಲ್ಲಿಸಿರಲೇ ಇಲ್ಲ. ನಿಮಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸಲು ನಾವೆಲ್ಲ ಅನುಯಾಯಿಗಳಿರುವಾಗ ನಿಮ್ಮಂತಹ ಮಹಾತ್ಮರು ಹೀಗೆ ನೇಯ್ಗೆ ಕೆಲಸ ಮಾಡುವುದು ಚೆನ್ನಾಗಿ ಕಾಣುವುದಿಲ್ಲ ಎಂದು ಅವರ ಶಿಷ್ಯ ಸಮೂಹದಲ್ಲಿದ್ದ ಶ್ರೀಮಂತರು ಹೇಳುತ್ತಿದ್ದರಂತೆ. ಆದರೆ ಕಬೀರ ಈ ಮಾತಿಗೆ ಸಮ್ಮತಿಸದೆ "ನೇಕಾರನಾದ ಕಬೀರನಿಗೂ ದೇವರನ್ನು ದರ್ಶಿಸಲು ಸಾಧ್ಯವಾಯಿತು ಹಾಗೂ ದೇವರ ದರ್ಶನಕ್ಕೆ ನೇಕಾರಿಕೆ ಅಡ್ಡ ಬರಲಿಲ್ಲ" ಎಂಬುದನ್ನು ಜಗತ್ತಿಗೆ ತೋರಿಸಲಿಕ್ಕಾಗಿ ತಾನು ನೇಕಾರಿಕೆ ಮಾಡುತ್ತಿದ್ದೇನೆಂದು ಕಬೀರ ಅವರಿಗೆ ಉತ್ತರಿಸುತ್ತಿದ್ದನಂತೆ.

ಲೋಹಿಯಾ ಅವರಿಗೆ ಭಾರತೀಯ ಪರಂಪರೆಯ ಈ ಬಗೆಯ ಅನುಭಾವಿ ಮಾದರಿಯ ತಾತ್ವಿಕತೆಯೊಂದು ಅವರ ಸಾರ್ವಜನಿಕ ಜೀವನದಲ್ಲಿ ಮಾರ್ಗದರ್ಶನ ಮಾಡುತ್ತಿತ್ತೇನೋ ಎಂದು ಅನಿಸುತ್ತದೆ. ಕಂದಾಚಾರ ಹಾಗೂ ಮೌಢ್ಯಗಳ ಕಟು ಟೀಕಾಕಾರರಾಗಿದ್ದರೂ ಲೋಹಿಯಾ ತೀರ್ಥಕ್ಷೇತ್ರಗಳ ಬಗ್ಗೆ ತಳೆದ ನಿಲುವು ಇಂತಹ ಅನುಭಾವಿ ಪಂಥಗಳ ನೆಲೆಗಟ್ಟಿನಿಂದ ರೂಪುಗೊಂಡಿರಬಹುದೇ ಎಂದು ನಾನು ಯೋಚಿಸುತ್ತಿದ್ದೇನೆ. " ಈ ತನಕವೂ ನನಗೆ ಪೂಜೆ ಮಾಡುವುದು ಸಾಧ್ಯವಾಗಿಲ್ಲ ಮತ್ತು ಮುಂದಕ್ಕೂ ನಾನು ಹಾಗೇ ಉಳಿದಿರುತ್ತೇನೆ. ಕಾಲಾಂತರದ ಪ್ರಭಾವಳಿಯಿಂದ ಬೆಳಗುವ ಈ ಒಂದೊಂದೂ ಸ್ಥಳದಲ್ಲಿ ನಿಂತು ಪೂಜೆಗೈಯುವುದನ್ನು ಮತ್ತು ಆ ಮೂಲಕ ದೇಶದ ಯಾವುದೇ ಭಾಗವನ್ನೂ ಬಿಡದೆ ಇಡಿಯಾಗಿ ಹೆಜ್ಜೆಗಳಲ್ಲಳೆಯುವುದನ್ನು ನೋಡುವ ತವಕವಿದೆ ನನಗೆ".

ಪೂಜೆಯನ್ನು, ದೇವರನ್ನು ನಂಬದಿದ್ದರೂ ಅದರಿಂದ ಸಾಮಾನ್ಯ ಜನರು ಪಡೆಯುವ ನೆಮ್ಮದಿ ಮತ್ತು ಶಾಂತಿಯ ಅವಕಾಶವನ್ನು ನಿರಾಕರಿಸಬಾರದೆನ್ನುವ ಲೋಹಿಯಾ ಅವರ ನಿಲುವು ಅವರ ವಾಸ್ತವ ಪ್ರಜ್ಞೆಯನ್ನು ಸೂಚಿಸುತ್ತದೆ. ಅನುಭಾವಿಗಳು ಮತ್ತು ಸಂತರು ಹೀಗೆಯೇ ಜ್ಞಾನ ಸಾಕ್ಷಾತ್ಕಾರದಲ್ಲಿ ದೇವರ ಸ್ವರೂಪದ ಬಗ್ಗೆ

ತಮಗಿರುವ ನಿಲುವು ಏನೇ ಆಗಿದ್ದರೂ ಸಾಮಾನ್ಯ ಜನರ ಭಕ್ತಿ ಶ್ರದ್ಧೆಗಳನ್ನು ಅಲ್ಲಗಳೆಯದ ಮಹಾತ್ಮರು ಅವರು. ತಮಗಿರುವ ವಿದ್ವತ್ತು, ಪಾಂಡಿತ್ಯ, ಸೃಜನಶೀಲ ಹವ್ಯಾಸಗಳ ನೆಲೆಯಲ್ಲಿ ನಿಂತು ಜನಸಾಮಾನ್ಯರ ಅಗತ್ಯಗಳನ್ನು ಅಳೆಯುವವರು ಅಥವಾ ಖಂಡಿಸುವವರು ವೈಚಾರಿಕರಾಗಬಹುದು. ಸಿದ್ಧಾಂತಿಗಳಾಗಬಹುದು. ಆದರೆ ಕ್ರಿಯಾಶೀಲ ಸಮೂಹ ನಾಯಕರಾಗಲು ಸಾಧ್ಯವಿಲ್ಲ.

ಅದರ ಇನ್ನೊಂದು ಮುಖದಲ್ಲಿ ಜನರಲ್ಲಿರುವ ಭಕ್ತಿ, ಶ್ರದ್ಧೆಗಳನ್ನು ದುರುಪಯೋಗಪಡಿಸಿಕೊಂಡು, ಕಂದಾಚಾರಕ್ಕೆ ಪ್ರೋತ್ಸಾಹ ನೀಡುತ್ತಾ ಜನರನ್ನು ಅಂಧಕಾರದಲ್ಲುಳಿಸಲು ಪ್ರಯತ್ನಿಸುವವರು ಜನದ್ರೋಹಿ ನಾಯಕರಾಗಿರುತ್ತಾರೆ. ಇವತ್ತಿನ ಬಹುಪಾಲು ರಾಜಕೀಯ ನಾಯಕರು ಮತ್ತು ಪಕ್ಷಗಳು ಮಾಡುತ್ತಿರುವುದು ಇದನ್ನೇ. ಲೋಹಿಯಾ ಅವರಿಗಿರುವ ವಿಮರ್ಶಾ ಪ್ರಜ್ಞೆ ಹಾಗೂ ವಾಸ್ತವತೆಗಳನ್ನು ಅರ್ಥಮಾಡಿಕೊಳ್ಳುವ ಸಂವೇದನೆ, ಆ ಮುಖಾಂತರವಾಗಿ ಶ್ರದ್ಧಾ ಕೇಂದ್ರಗಳ ಯಾತ್ರೆಗಳೂ ಕೂಡ ಪಂಗಡ ಪ್ರದೇಶ ಪ್ರಜ್ಞೆಯನ್ನು ಮೀರಿದ ರಾಷ್ಟ್ರ ಪ್ರಜ್ಞೆ ರೂಪಿಸುವ ಸಾಧನಗಳಾಗಬಹುದೆಂಬ ಒಳನೋಟದ ಚಿಂತನೆಗಳೇ ಅವರನ್ನು ಅತ್ಯಂತ ಅಪರೂಪದ ರಾಜಕೀಯ ತಾತ್ವಿಕನನ್ನಾಗಿಸಿದೆ.

ಸಾರ್ವಜನಿಕ ಹುದ್ದೆಗಳಲ್ಲಿರುವ ಪ್ರಧಾನಿ ಅಥವಾ ರಾಷ್ಟ್ರಾಧ್ಯಕ್ಷ ತಮ್ಮ ಸಾರ್ವಜನಿಕ ನಡಾವಳಿಯಲ್ಲಿ ಹೊಂದಿರಬೇಕಾದ ಹೊಣೆಗಾರಿಕೆಯ ಬಗ್ಗೆ ಅತ್ಯಂತ ಎಚ್ಚರದ ಟೀಕಾಕಾರರಾಗಿದ್ದ ಲೋಹಿಯಾ ತಮ್ಮ ಜೀವನದಲ್ಲಿ ಅಂತಹ ಮೌಲ್ಯಗಳನ್ನು ಅಳವಡಿಸಿಕೊಂಡವರಾಗಿದ್ದರು. ಬದುಕಿನ ಪ್ರೀತಿ, ಸಮಾನತೆಯ ಆಕಾಂಕ್ಷೆ, ಸಂಪತ್ತಿನ ಬಯಕೆ ಇವು ಸಾರ್ವಜನಿಕ ಶೀಲವನ್ನು, ನೈತಿಕ ಪ್ರಜ್ಞೆಯನ್ನು ಹಾಗೂ ಸೃಜನಶೀಲ ಚೈತನ್ಯವನ್ನು ಗಮನದಲ್ಲಿಟ್ಟುಕೊಂಡೇ ನಡೆಯಬೇಕೆಂಬ ಲೋಹಿಯಾ ಅವರ ನಿಲುವು ಮತ್ತು ನಡೆ ಅವರೊಂದಿಗಿನ ನಮ್ಮ ಸೈದ್ಧಾಂತಿಕ ಚರ್ಚೆಗಳ ಹೊರತಾಗಿಯೂ ಸ್ವೀಕಾರಾರ್ಹವಾಗಿದೆ.

ಅಧಿಕಾರವನ್ನು ಪಡೆಯುವುದೇ ರಾಜಕಾರಣ, ಸಂಪತ್ತನ್ನು ಯಾವ ಹಾದಿಯಿಂದಲಾದರೂ ಶೇಖರಿಸಿಕೊಳ್ಳುವುದೇ ಸಾಮಾಜಿಕ ನ್ಯಾಯದ ಸಾಧನೆ ಎಂಬಂತಹ ಧೋರಣೆಯ ರಾಜಕೀಯ ನಾಯಕರೆದುರು ಲೋಹಿಯಾ ಒಬ್ಬ ಅಪ್ರತಿಮ ಪ್ರಜಾತಾಂತ್ರಿಕ ಜನನಾಯಕನಿರಬೇಕಾದ ರೀತಿಗೆ ಅತ್ಯುತ್ತಮ ಮಾದರಿಯಂತಿದ್ದಾರೆ. ಅವರಿಗೆ ರಾಜಕಾರಣವೆನ್ನುವುದು ಜನರ ಬದುಕನ್ನು ಹಸನುಗೊಳಿಸಲು ಬೇಕಾದ ಕಾರ್ಯಕ್ಷೇತ್ರದಂತಿತ್ತು. ಹೋರಾಟವೆನ್ನುವುದು ಬೀದಿಯಲ್ಲಿರುವ ಶಾಸನ ಸಭೆಯಾಗಿತ್ತು. ಜೈಲು ಎನ್ನುವುದು ಗುರಿ ಸಾಧನೆಯೆಡೆಗೆ ನಮಗಿರುವ ಬದ್ಧತೆಯನ್ನು ಒರೆಗೆ ಹಚ್ಚುವ ಸಾಧನವಾಗಿತ್ತು. ಇಂತಹ ಬದ್ಧತೆ ಮತ್ತು ಕಾಳಜಿ ಹೊಂದಿರುವ ಎಷ್ಟು ಜನ ಇಂದು ಸಾರ್ವಜನಿಕ ಜೀವನದಲ್ಲಿದ್ದಾರೆ

ಎಂಬುದನ್ನು ಗಮನಿಸಿದರೆ ಲೋಹಿಯಾ ಯಾಕೆ ದಂತಕತೆ ಸದೃಶ ಸಮ್ಮೋಹಕತೆ ಹುಟ್ಟಿಸುವ ವ್ಯಕ್ತಿತ್ವದವರಾಗಿ ಕಾಣುತ್ತಾರೆ ಎಂಬುದು ಅರ್ಥವಾಗುತ್ತದೆ.

–ಡಾ.ಬಂಜಗೆರೆ ಜಯಪ್ರಕಾಶ

ಸ್ತ್ರೀ ಅನನ್ಯತೆಯ ಶೋಧಕ

ಲೋಹಿಯಾ ಒಬ್ಬ ವಸಾಹತೋತ್ತರ ಚಿಂತಕ. ವಸಾಹತೋತ್ತರ ಚಿಂತನೆಯಲ್ಲಿ ಕಾಣುವಂತೆ ಅಂತರ್‌ಶಿಸ್ತೀಯ ಅಲೋಚನಾಕ್ರಮವೊಂದು ಲೋಹಿಯಾ ಅವರಲ್ಲಿ ಆಗಲೇ ಕಾಣಿಸಿಕೊಂಡಿತ್ತು. ವಸಾಹತುಶಾಹಿ ಅನುಸರಿಸಿದ ವ್ಯವಸ್ಥೆಯ ವಿರುದ್ಧ ನಿಲ್ಲುವುದಷ್ಟೇ ಈ ಚಿಂತಕನಿಗೆ ಮುಖ್ಯವಾಗಿರಲಿಲ್ಲ. ವರ್ತಮಾನದಲ್ಲಿ ಚರಿತ್ರೆಯ ಪುನಾರವಲೋಕನ ಮಾಡಿಕೊಳ್ಳದಿದ್ದರೆ ಏನೂ ಪ್ರಯೋಜನವಿಲ್ಲವೆಂಬ ನಿಲುವು ಅವರದು. ಹೀಗಾಗಿ ವಸಾಹತುಶಾಹಿಯಷ್ಟೇ ಭ್ರಷ್ಟಗೊಂಡಿರುವ ಸ್ಥಳೀಯ ರಾಜಕಾರಣ ಮತ್ತು ವಸಾಹತುಶಾಹಿ ನೀತಿಗಳನ್ನು ಯಥಾವತ್ತಾಗಿ ಎಂಬಂತೆ ಮುಂದುವರೆಸುವ ನಮ್ಮದೇ ಸರ್ಕಾರಗಳ ವಿರುದ್ಧ ದನಿ ಝಳಪಿಸಿದರು ಅವರು. ಪ್ರಭುತ್ವ ಮತ್ತು ಯಜಮಾನ ಸಂಸ್ಕೃತಿಗಳ ವಿರುದ್ಧ ನಿಲ್ಲುವ ಲೋಹಿಯಾ ಅವರ ಈ ಧೋರಣೆಗಳೇ ನನಗೆ ಹೆಚ್ಚು ಆಪ್ತವಾಗಿವೆ.

ಲೋಹಿಯಾಗೆ ನಿಜಕ್ಕೂ ಶಾಕ್ ನೀಡಿದ್ದು ವಸಾಹತುಶಾಹಿಯ ಮುಂದುವರೆದ ಭಾಗವೆಂಬಂತೆ ಕಾಣುತ್ತಿದ್ದ ವಸಾಹತೋತ್ತರ ಭಾರತೀಯ ಸರ್ಕಾರಗಳು ಮತ್ತು ಮನಸ್ಸುಗಳು. ವಸಾಹತು ಕಾಲದಲ್ಲಿದ್ದ ಸಂರಚನೆಗಳು ದೇಶೀಯ ಮತ್ತು ಆಧುನಿಕತೆಗಳ ಕೌದಿಯಲ್ಲಿ ಅವಿತುಕೊಂಡಂತೆ ಕಾಣುತ್ತಿದ್ದವು. ವಸಾಹತು ಕ್ರಿಯೆ ಎನ್ನುವುದು ಬರಿಯ ರಾಜಕೀಯ ಪ್ರಕ್ರಿಯೆ ಆಗಿರಲಿಲ್ಲ. ಅದು ಮನುಷ್ಯರ ಮನಸ್ಸನ್ನೂ ತಿನ್ನುತ್ತಾ ಬಂದಿದ್ದವು. ಓರಿಯಂಟಲ್ ಗ್ರಹಿಕೆಗಳ ಭಾಗವಾಗಿ ಬಂದ ಜ್ಞಾನಶಿಕ್ಷಣಗಳು ಸಂದಿಗ್ಧತೆಯನ್ನು ಸೃಷ್ಟಿಸುತ್ತಿದ್ದವು. ಇಂತಹ ಸಮಕಾಲೀನ ವಿನಾಶಗಳಿಗೆ ಸ್ಪಂದಿಸಿದ ಮನಸ್ಸು ಲೋಹಿಯಾ

(ಅ)

ಲೋಹಿಯಾ ಚಿಂತನೆಗಳಲ್ಲಿ ಪ್ರಮುಖ ಸ್ಥಾನ ಪಡೆದಿರುವುದು ಸ್ತ್ರೀಯರನ್ನು ಕುರಿತಾದ ಚಿಂತನೆಗಳು. ವಾಸ್ತವವಾಗಿ ಲೋಹಿಯಾ ಚಿಂತನೆಗಳಲ್ಲಿ ದಲಿತಪರ, ಸ್ತ್ರೀಪರ ಎಂಬ ವಿಭಾಗಗಳೆಲ್ಲ ವಿಂಗಡಿಸಿ ನೋಡಲಾಗದಷ್ಟು ಆಂತರಿಕವಾಗಿ ಬೆಸೆದುಕೊಂಡಿವೆ. ಲೋಹಿಯಾ ಅವರ ಪ್ರಕಾರ ಜಾತಿ ಮತ್ತು ಸ್ತ್ರೀಯರನ್ನು ಕುರಿತ ಪ್ರತ್ಯೇಕತಾವಾದಿ ಮನೋಭಾವವೇ ಭಾರತೀಯ ಚೇತನದ ಅಧೋಗತಿಗೆ ಮೂಲಕಾರಣ.

ರಾಷ್ಟ್ರೀಯತೆಯ ಜೊತೆಜೊತೆಗೆ ಬೆಳೆದ ಸುಧಾರಣಾವಾದಿ ಜಾಗೃತಿ, ಜಾತಿ

ಮತ್ತು ಲಿಂಗ ತಾರತಮ್ಯದ ಬಗ್ಗೆ ಗಮನಹರಿಸಬೇಕಾದ ಅನಿವಾರ್ಯತೆಯನ್ನು ಮನಗಂಡಿತಷ್ಟೇ. ರಾಮ್‌ಮೋಹನ್ ರಾಯ್ ಮತ್ತು ಈಶ್ವರ ವಿದ್ಯಾಸಾಗರರ ವಿಮೋಚನೆಯ ಮಾದರಿಗಳು ಆರಂಭಿಕ ಹಂತದಲ್ಲಿ ಆಂದೋಲನಾ ಸ್ವರೂಪವನ್ನು ಕಂಡುಕೊಂಡವೇನೋ ನಿಜ. ಅವರು ಸ್ತ್ರೀಯನ್ನು ಆಗತಾನೇ ಉದಯವಾಗುತ್ತಿದ್ದ ರಾಷ್ಟ್ರದಲ್ಲಿ ಪ್ರಜೆಯನ್ನಾಗಿ ರೂಪಿಸುವ ಪ್ರಯತ್ನಗಳೆಂದು ಹೇಳಲಾಗುತ್ತದೆ. ಆನಂತರದಲ್ಲಿ ಗಾಂಧಿ ಮತ್ತು ಅಂಬೇಡ್ಕರ್ ಚಿಂತನೆಗಳಲ್ಲಿ ಅವರದ್ದು ತಾತ್ವಿಕ ರೂಪದಲ್ಲಿಯೂ ಪ್ರಕಟಗೊಳ್ಳುತ್ತಾ ಬಂದಿರುವುದನ್ನು ಗಮನಿಸಬಹುದು.

ಪಿತೃ ಪ್ರಧಾನತೆಯ ಯಜಮಾನಿಕೆಯನ್ನು ಅಂಬೇಡ್ಕರ್ ವೈದಿಕಶಾಹಿ ಧೋರಣೆಗಳಿಗೆ ಸಮಾನಾಂತರವಾಗಿ ನೋಡುತ್ತಾರೆ. ಮನುವಿನ ಹುನ್ನಾರವನ್ನು ಒತ್ತಿ ಹೇಳುತ್ತಾರೆ. ಆಧುನಿಕ ಸಮಾಜದಲ್ಲಿ ಮಹಿಳೆಯರ ಪ್ರತಿನಿಧೀಕರಣದ ಅಗತ್ಯವನ್ನು ಅವರು ಬಲವಾಗಿ ಪ್ರತಿಪಾದಿಸುತ್ತಾರೆ. ಶಾಸನಸಭೆಗಳಲ್ಲಿ ಆಕೆಯ ಪ್ರತಿನಿಧೀಕರಣ ನಾಗರಿಕ ಪ್ರಜಾಪ್ರಭುತ್ವ ಸಮಾಜಕ್ಕೆ ಬೇಕು ಎಂಬುದು ಅವರ ನಿಲುವಾಗಿತ್ತು. ನೈತಿಕ ತಳಹದಿಯೇ ಮುಖ್ಯವಾಗಿರುವ ಗಾಂಧಿಗೆ ಹೆಣ್ಣಿನ ಪ್ರತಿನಿಧೀಕರಣವನ್ನು ನೈತಿಕ ತಳಹದಿಯಲ್ಲಿಯೇ ವಿಶ್ಲೇಷಿಸಬಯಸುತ್ತಾರೆ. ಅವರ ಮಾದರಿಗಳು ಪರಿಶುದ್ಧ ರೂಪದ ಧಾರ್ಮಿಕತೆ ಮತ್ತು ಧಾರ್ಮಿಕ ಪಠ್ಯಗಳಿಂದ ಹುಟ್ಟುತ್ತವೆ. 'ಸ್ತ್ರೀಯರ ಪುನರುಜ್ಜೀವನದ ಸಾಧಕ ಪ್ರಯತ್ನಗಳನ್ನು ಮಾಡುವುದಕ್ಕಾಗಿ ನಾವು ಪರಿಶುದ್ಧರೂ ದೃಢಮನಸ್ಕರೂ, ಜಿತೇಂದ್ರಿಯರೂ ಆದ ಸೀತಾ, ದಮಯಂತಿ ಮತ್ತು ದ್ರೌಪದಿಯರಂಥ ಮಹಿಳೆಯರನ್ನು ಸೃಷ್ಟಿಸಬೇಕಾಗುತ್ತದೆ ಎನ್ನುವುದು ನನ್ನ ನಮ್ರ ಅಭಿಪ್ರಾಯ' (*ನನ್ನ ಕನಸಿನ ಭಾರತ: ಪು. ೨೪೦*)

ಗಾಂಧಿ ಮತ್ತು ಅಂಬೇಡ್ಕರ್ ಅವರ ಮಧ್ಯದ ನಿಲುವು ಲೋಹಿಯಾ ಅವರದು ಅನ್ನಿಸುತ್ತೆ. ಸ್ತ್ರೀ ಅಸ್ಮಿತೆಯ ಅನನ್ಯತೆಯನ್ನು ಗಾಂಧಿಯಂತೆ ಪುರಾಣಗಳ ಮೂಲಕವೂ ಅಂಬೇಡ್ಕರ್ ಅವರಂತೆ ಪ್ರಜಾ ಪ್ರತಿನಿಧೀಕರಣದ ತತ್ವಗಳ ಮೂಲಕವು ಗ್ರಹಿಸುತ್ತಾರೆ ಲೋಹಿಯಾ. ಆದರೆ ಬಹುಪಾಲು ಲೋಹಿಯಾ ಅವರ ವಿಶಿಷ್ಟತೆ ಇರುವುದು ಅವರು ಸ್ತ್ರೀ ಅನನ್ಯತೆಯನ್ನು ಗುರುತಿಸಬಯಸುವುದು ಬಹುತ್ವದಲ್ಲಿ. ಮತ್ತು ಲೋಹಿಯಾ ಅವರಿಗೆ ಇದೇ ಮುಖ್ಯವಾದುದು. ಸಮಕಾಲೀನ ಸ್ತ್ರೀವಾದ ಎತ್ತುವ ಸಂಕೀರ್ಣತೆಗಳು ಮತ್ತು ಅನನ್ಯತೆಗಳ ಪ್ರಶ್ನೆಯನ್ನು ಲೋಹಿಯಾ ಆಗಲೇ ಎತ್ತಿದವರಾಗಿದ್ದಾರೆ. ವಸಿಷ್ಠರು ಮತ್ತು ವಾಲ್ಮೀಕಿಯರು ಇರುವ ವ್ಯವಸ್ಥೆಯ ಒಳಸುಳಿಗಳನ್ನು ಹೊರತುಪಡಿಸಿ, ಸ್ತ್ರೀ ಅಸ್ಮಿತೆಗಳನ್ನು ಚರ್ಚಿಸಲು ಸಾಧ್ಯವಿಲ್ಲ ಎನ್ನುವುದನ್ನು ಅವರು ತೋರಿಸುತ್ತಾರೆ. ನಾಗರಿಕ ಹಕ್ಕು ಪ್ರತಿಪಾದನೆಯಲ್ಲಿ ಹೆಣ್ಣಿನ ಪ್ರತಿನಿಧೀಕರಣ ಕೂಡ ಎಚ್ಚರದಿಂದ ಕೂಡಿರಬೇಕು ಎಂಬ ನಿಲುವು ಲೋಹಿಯಾ ಅವರದು. ಇಂದಿರಾಗಾಂಧಿಯ ಉದಾಹರಣೆಯನ್ನೇ ತೆಗೆದುಕೊಂಡರೆ. ಪ್ರತಿನಿಧೀಕರಣ ಎನ್ನುವುದು ಆಕೆಗೆ ಸಂಘರ್ಷದ

ಸಂಗತಿಯಲ್ಲ. ಅಲ್ಲಿ ಆಕೆ ಮಹಿಳಾ ಪ್ರತಿನಿಧಿಯಂತೆ ಕಾಣುತ್ತಿದ್ದರೂ ಅದು ನಿಜವಾದ ರೀತಿಯಲ್ಲಿ ಅಲ್ಲ. ನೆಹರೂ ಪುತ್ರಿಯಾದ ಇಂದಿರಾಗೆ ಅಧಿಕಾರ ಸಿಕ್ಕುವುದು ಆಶ್ಚರ್ಯದ ಸಂಗತಿಯಲ್ಲ. ಅದಕ್ಕಾಗೇ ಆಕೆ ಕಷ್ಟಪಟ್ಟು ಹಾದಿ ನಿರ್ಮಿಸಿಕೊಳ್ಳಬೇಕಾದ ಅಗತ್ಯವೂ ಇಲ್ಲ. ಆಕೆಯ ಯಶಸ್ಸು ಎಲ್ಲ ಹೆಂಗಸರ ಯಶಸ್ಸೆಂದು ಬಿಂಬಿಸಬಾರದು. ಮನೆಯಿಂದ ಹೊರಗೆ ಬರಲಾಗದ ಎಷ್ಟೋ ಮಹಿಳೆಯರು ಇರುವಾಗ ಈ ರೀತಿಯ ಉಚ್ಚ ಜಾತಿ/ವರ್ಗದ ಹೆಣ್ಣುಗಳು ಲಿಂಗ ಸಮಾನತೆಯ ಸಂಕೇತವಾಗಲಾರರು. ಆಗಬಾರದು ಕೂಡ. ಲೋಹಿಯಾ ಪ್ರಕಾರ ಲಿಂಗತಾರತಮ್ಯದ ಜೊತೆ ಜಾತಿ, ವರ್ಗ ಇತ್ಯಾದಿ ನಿಶ್ಚಿತತೆಗಳನ್ನು ಮಾನದಂಡವಾಗಿ ತೆಗೆದುಕೊಳ್ಳಬೇಕು. 'ಸುಖೋರಾಣಿ ಮತ್ತು ಗ್ವಾಲಿಯರ್ ರಾಣಿ' ಲೇಖನದಲ್ಲಿ ಲೋಹಿಯಾ ಪ್ರತಿಪಾದಿಸುವುದು ಅದನ್ನೇ. ಇಂಗ್ಲಿಷ್ ಬಲ್ಲ, ಯಜಮಾನಿಕೆಯ ಸಂಕೇತವಾಗಿರುವ ಗ್ವಾಲಿಯರ್ ರಾಣಿಗೆ ತಕ್ಕ ಪ್ರತಿಸ್ಪರ್ಧಿ ಎಂದರೆ ಝಾಡಮಾಲಿಯಾದ ಸುಖೋರಾಣಿ. ಇದರಿಂದ ಲೋಹಿಯಾರಿಗೆ ಲಿಂಗ ತಾರತಮ್ಯದ ಮೇಲ್ಪದರದ ಸಮಾನತೆ ಮುಖ್ಯವಾಗಿರಲಿಲ್ಲ ಎನ್ನುವುದು ತಿಳಿಯುತ್ತದೆ. ಅವರು ಒಂದೇ ಬಾರಿಗೆ ವೈದಿಕಶಾಹಿ, ಇಂಗ್ಲಿಷ್ ಭಾಷೆಯ ಯಜಮಾನಿಕೆ, ಆಧುನಿಕತೆ, ಜಾತಿ ಮತ್ತು ಬಣ್ಣ-ಈ ಎಲ್ಲದರ ವಿರುದ್ಧ ನಿಲ್ಲುತ್ತಾರೆ. ಆದುದರಿಂದಲೇ ಮಹಿಳೆಯ ಸಮಾನತೆಯ ಚರ್ಚೆ ಅವರಲ್ಲಿ ಸಂಕೀರ್ಣ ಸ್ವರೂಪದ್ದಾಗಿದೆ.

ಸ್ತ್ರೀ ಅನನ್ಯತೆಗಾಗಿ ಲೋಹಿಯಾ ಎದುರು ನೋಡುವುದು ಪುರಾಣ ಪಾತ್ರವಾದ ದ್ರೌಪದಿಯನ್ನು. ತನ್ನ ಇಚ್ಛೆಗೆ ಬೇಕಾದ್ದನ್ನು ಪಡೆಯಬಲ್ಲ ವಿವೇಕಿಯಾದ ದ್ರೌಪದಿ ತನ್ನ ಹಕ್ಕುಗಳ ಬಗ್ಗೆ ಮತ್ತು ತನ್ನ ವ್ಯಕ್ತಿತ್ವದ ಅನನ್ಯತೆಯ ಬಗ್ಗೆ ಅರಿವುಳ್ಳವಳಾಗಿದ್ದಳು. ಗಂಡಸರೆಲ್ಲ ಸುಮ್ಮನೆ ಕುಳಿತಿರುವ ಸಂದರ್ಭದಲ್ಲಿ ಅವಳು ಧೃತಿಗೆಡದೆ ಸಭೆಯಲ್ಲಿ ನ್ಯಾಯಗಳನ್ನು ಪ್ರಶ್ನಿಸುತ್ತಾಳೆ. ಸೀತೆ, ಸಾವಿತ್ರಿಯರು ನಮಗೆ ಬೇಕೆ ಎನ್ನುವ ಮೂಲಕ ದ್ರೌಪದಿಯ ಸ್ವಯಂಪೂರ್ಣ ವ್ಯಕ್ತಿತ್ವವನ್ನು ಲೋಹಿಯಾ ನಮ್ಮ ಮುಂದಿಡುತ್ತಾರೆ.

ಬಣ್ಣ ಕುರಿತಾದ ಪೂರ್ವಗ್ರಹಗಳನ್ನು ಕುರಿತು ಇಲ್ಲಿಯೇ ಹೇಳಬಹುದಾದರೆ, ಬಣ್ಣ ಕೂಡ ಯಜಮಾನ ಸಂಸ್ಕೃತಿಯ ಪೋಷಕ ಅಂಶವಾಗಿದೆ. ಕಪ್ಪು ಬಣ್ಣವನ್ನು ಬಲವಾಗಿ ಪ್ರತಿಪಾದಿಸುವ ಮೂಲಕ ಲೋಹಿಯಾ ತಾವು ಇಲ್ಲಿಯೂ ಯಜಮಾನಿಕೆಯ ವಿರುದ್ಧ ಇರುವುದನ್ನು ಸ್ಪಷ್ಟಪಡಿಸುತ್ತಾರೆ. ಲೋಹಿಯಾ ಉದಾಹರಿಸುವ ಮಿಥ್‌ಗಳಲ್ಲಿ ಗೌರಿ ಮತ್ತು ಸೀತೆಯರು ಬಿಳಿ ಬಣ್ಣದವರಾಗಿದ್ದು ಪಿತೃಪ್ರಧಾನ ಮೌಲ್ಯಗಳ ಮುಂದುವರಿಕೆಯಾಗಿರುವಂತೆ ಕಂಡರೆ, ಕಪ್ಪು ಬಣ್ಣದ ದ್ರೌಪದಿ ಆಲೋಚನೆ ಮಾಡುವ ಸ್ವಂತ ವ್ಯಕ್ತಿತ್ವವುಳ್ಳವಳಾಗಿದ್ದಾಳೆ. ಇದು ಲೋಹಿಯಾ ಪುರಾಣಗಳ ಮೂಲಕ ಕಾಣುವ ಹೆಣ್ಣಿನ ವಿಮೋಚನಾ ಚಿತ್ರ. ಅದು ಅವರಿಗೆ ಮೇಲ್ಪದರದ ಆಶಯವಾಗಿರದೇ ಜೀವನ್ಮರಣದ ಪ್ರಶ್ನೆಯಾಗಿದೆ.

ಬಹುಶಃ ಲೋಹಿಯಾ ಹುಟ್ಟು ಹಾಕಿದ ಸ್ತ್ರೀಅನನ್ಯತೆಯ ಚರ್ಚೆ ನನ್ನಲ್ಲಿ ಕೂಡ ಆರೋಗ್ಯಕರ ಸಮಾಜಕ್ಕೆ ಬೇಕಾದ ಅಂಶಗಳನ್ನು ಕುರಿತು ಚಿಂತಿಸಲು ಪ್ರೇರಣೆ ನೀಡಿತು. ಹಾಗೆಯೇ ಮಾನವೀಯ ನೆಲೆಯುಳ್ಳ ದೃಷ್ಟಿ ಧೋರಣೆಗಳನ್ನು ಬೆಳೆಸಿಕೊಳ್ಳುವಂತೆ ಒತ್ತಾಯಿಸಿದವು ಕೂಡ.

–ಆರ್. ತಾರಿಣಿ ಶುಭದಾಯಿನಿ

ಪ್ರಾಮಾಣಿಕ ಹೊಸ ಚಿಂತನೆಗಳ ಆವಿಷ್ಕಾರ

ಸಂಪೂರ್ಣವಾಗಿ ಪಾಶ್ಚಿಮಾತ್ಯ ಚಿಂತನೆಗಳಿಂದ ಅಥವಾ ವರ್ಣಾಶ್ರಮ ಮೌಲ್ಯಗಳನ್ನು ಎತ್ತಿ ಹಿಡಿಯುವ ಪುನರುತ್ಥಾನವಾದಿ ಚಿಂತನೆಗಳಿಂದ ಪ್ರೇರಿತರಾಗಿ, ಇಂಡಿಯಾದ ರಾಜಕಾರಣದಲ್ಲಿ ಪಕ್ಷ ರೂಪದಲ್ಲಿ ಕೆಲಸ ಮಾಡುತ್ತಿರುವ ಪ್ರತಿಗಾಮಿ ಶಕ್ತಿಗಳು, ಈ ದೇಶದ ಪ್ರಗತಿಯನ್ನು ಸ್ಥಗಿತಗೊಳಿಸಿ, ಕ್ರಾಂತಿಗೆ ಎಲ್ಲ ರೀತಿಯಲ್ಲೂ ಅಡ್ಡಿಯೊಡ್ಡುತ್ತಿರುವುದು ಸರ್ವೇ ಸಾಮಾನ್ಯ ವಿಷಯವಾಗಿದೆ.

ಕ್ರಾಂತಿಕಾರಿ ಸ್ವರೂಪ ಹೊಂದಿದೆ ಎನ್ನಲಾಗುವ ಇಂಡಿಯಾದ ಕಮ್ಯೂನಿಸ್ಟ್ ಪಕ್ಷಗಳು ಪ್ರಜಾಪ್ರಭುತ್ವದ ಬಗ್ಗೆ ಉದ್ದುದ್ದ ಮಾತನಾಡುತ್ತ ಅದರ ಜೊತೆಯಲ್ಲಿ ಚಾರಿತ್ರಿಕ ಭೌತಿಕವಾದ, ವರ್ಗ ಸಂಘರ್ಷ ಮತ್ತು ಕೂಲಿಕಾರರ ಸರ್ವಾಧಿಕಾರದ ಮಂತ್ರಗಳನ್ನು ಪಠಿಸುತ್ತ ಸೈದ್ಧಾಂತಿಕ ಗೊಂದಲಗಳನ್ನು ಸೃಷ್ಟಿಸುತ್ತಿವೆ. ಇಂತಹ ಶಕ್ತಿಗಳು ಒಮ್ಮೆ ಕೇಂದ್ರದಲ್ಲಿ ಮತಪೆಟ್ಟಿಗೆಯಿಂದೇನಾದರೂ ಗದ್ದುಗೆಯನ್ನೇರಿದರೆ, ಇಂಡಿಯಾ ಮತ್ತೆಂದಿಗೂ ಚುನಾವಣೆಗಳು ನಡೆಯಲಾರದಂತಹ ಏಕಪಕ್ಷ ಪ್ರಭುತ್ವಕ್ಕೊಳಗಾಗಿ, ರಷ್ಯಾ ಸಾಮ್ರಾಜ್ಯಶಾಹಿಗಳ ಕ್ರೂರ ಮುಷ್ಟಿಯಲ್ಲಿರಬೇಕಾಗುತ್ತದೆ. ರಷ್ಯಾದ ವಿಸ್ತರಣಾಷಾಹಿ ತಂತ್ರಗಳು ಫಲಿಸುವಂತೆ ಒಳಗೊಳಗೆ ಕೆಲಸ ಮಾಡುತ್ತ ಮೇಲೆ ಪ್ರಜಾಪ್ರಭುತ್ವ, ಹೊಸ ಸಮಾಜ ನಿರ್ಮಾಣ ಎಂದು ಡಂಗೂರ ಹೊಡೆಯುತ್ತಿರುವುದು ಕಮ್ಯೂನಿಸ್ಟ್ ಸೋಗಲಾಡಿತನವಾಗಿದೆ.

ಅರಿಸ್ಟಾಟಲ್‌ನಿಂದ ಆಡಮ್‌ಸ್ಮಿತ್ ಮತ್ತು ಮಾರ್ಕ್ಸ್‌ನವರೆಗು ಹಂತಹಂತವಾಗಿ ಬೆಳೆದು ರೂಪುಗೊಂಡಿರುವ ಯುರೋಪ್ ವಿಚಾರಧಾರೆಯ ಮೂಲ ಉದ್ದೇಶ, ನಾಗರಿಕತೆಯ ಗರಿಷ್ಠ ಸಾಮರ್ಥ್ಯದ ಪ್ರತಿಪಾದನೆ. ಇಂತಹ ತತ್ವಕ್ಕೆ ಬದ್ಧರಾದಂಥ ಕಮ್ಯೂನಿಸ್ಟರು ಇಲ್ಲಿನ ಜಾತಿಪದ್ಧತಿಗಿಂತ ಭಿನ್ನವಾದ ಪದ್ಧತಿಯನ್ನು (ಹೊಸ ನಾಗರಿಕತೆ) ಸೃಷ್ಟಿಸಲು ದುಸ್ಸಾಧ್ಯವಾಗಿ; ಪರೋಕ್ಷವಾಗಿ ಯಥಾಸ್ಥಿತಿವಾದವನ್ನೇ ಪ್ರತಿಪಾದಿಸುವುದರಿಂದ, ಇವುಗಳ ಸಂಕೇತವಾದ ಬ್ರಾಹ್ಮಣ ಮತ್ತು ಇನ್ನಿತರ ಮೇಲ್ಜಾತಿ ಶಕ್ತಿಗಳು ಕಮ್ಯೂನಿಸ್ಟ್ ಚಳವಳಿಯ ಮುಂಚೂಣಿಯಲ್ಲಿರುವುದು ಒಂದು ಸೈದ್ಧಾಂತಿಕ

ಸರಿತನವೇ ಆಗಿದೆ ಎಂಬುದನ್ನೂ ಗಮನಿಸಬೇಕು. ಜಾತಿಯಿಂದ ವರ್ಗಕ್ಕೆ ವರ್ಗದಿಂದ ಜಾತಿಗೆ ನಡೆಯುತ್ತಿರುವ ಆಂತರಿಕ ಚಲನೆಯೇ ವ್ಯವಸ್ಥೆಯ ಎಲ್ಲ ಅನಿಷ್ಟಗಳಿಗೆ ಕಾರಣವಾಗಿರುವಾಗ, ಇದನ್ನು ನಾಶಪಡಿಸದೇ, ನಾಗರಿಕತೆಯ ಸಂಪೂರ್ಣ ಸಾಮರ್ಥ್ಯದ ಕಡೆಗೆ ನಡೆವುದಾದರೂ ಹೇಗೆ? ಹೊಸ ನಾಗರಿಕತೆಯ ಹುಟ್ಟಿನ ಸಾಧ್ಯತೆಗಳ ಬಗ್ಗೆ ಆಶಾವಾದಿಗಳಾಗುವುದಾದರೂ ಹೇಗೆ? ಇತ್ಯಾದಿ ಕಮ್ಯೂನಿಸ್ಟ್ ಚಳುವಳಿಯ ಬಗ್ಗೆ ಯೋಚಿಸುವಾಗ ಕಾಡುವ ಪ್ರಶ್ನೆಗಳು. ಉತ್ಪಾದನಾ ಸಂಬಂಧಗಳ ಬದಲಾವಣೆಯಿಂದ ಮಾತ್ರ ಬಂಡವಾಳಶಾಹಿ ಪದ್ಧತಿಯಿಂದ ಭಿನ್ನರಾಗುವ ಕಮ್ಯುನಿಸ್ಟರು ಬಂಡವಾಳಶಾಹಿ ಪದ್ಧತಿ ವಿರುದ್ಧ ಯಾವುದೇ ಸೈದ್ಧಾಂತಿಕ ಸಮರ ಹೂಡುವ ಅಗತ್ಯತೆಯಿಲ್ಲ. ಆದರೆ ವಿಶ್ವಮಟ್ಟದಲ್ಲಿ ಇವೆರಡು ನಾಗರಿಕತೆಗಳ ಮಧ್ಯೆ ನಡೆಯುತ್ತಿರುವ ಸ್ಪರ್ಧೆ, ಸಮರ, ಇವುಗಳ 'ವಿಸ್ತರಣಾಶಾಹಿ' ನೀತಿಯಿಂದ ಪ್ರೇರಿತವಾಗಿದೆಯೇ ಹೊರತು ಮತ್ತಾವುದರಿಂದಲ್ಲ. ಆದ್ದರಿಂದ ಇಂಡಿಯಾದಲ್ಲಿ ಬಲಪಂಥೀಯ (ಬಂಡವಾಳಶಾಹಿ ಅಮೆರಿಕವನ್ನು ಸಮರ್ಥಿಸುವ) ಮತ್ತು ಎಡಪಂಥೀಯರೆಂದು ಬ್ರ್ಯಾಂಡ್ ಮಾಡಿಕೊಂಡಿರುವವರ ನಡುವೆ ನಡೆಯುತ್ತಿರುವ ಘರ್ಷಣೆ (ಸೈದ್ಧಾಂತಿಕವಲ್ಲ) ಮೇಲೆ ಹೇಳಿದ ಹಿನ್ನೆಲೆಯಲ್ಲಿ 'ಪ್ರಗತಿಪರ' ನಿಲುವುಗಳ ಮೂಲಕ ಪರಿಶೀಲಿಸಿದಾಗ ಗಮನಾರ್ಹವೆನ್ನಿಸುವುದಿಲ್ಲ.

ಈ ಹಿನ್ನೆಲೆಯಲ್ಲಿ ನಮಗೆ ತಿಳಿದುಬರುವುದೇನೆಂದರೆ, ರಷ್ಯಾ ಕ್ರಾಂತಿಯನ್ನೇ ಮಾದರಿಯಾಗಿಟ್ಟುಕೊಂಡಿರುವ ಕಮ್ಯುನಿಸ್ಟರಿಂದಾಗಲಿ, ಅಮೆರಿಕದ ಬಂಡವಾಳಶಾಹಿ ವ್ಯವಸ್ಥೆಯನ್ನು ಮಾದರಿಯಾಗಿಟ್ಟುಕೊಂಡಿರುವ ಬೂರ್ಜ್ವಾ ಪಕ್ಷಗಳಿಂದಾಗಲೀ ಅಥವಾ ಭಾರತದ ಜಾತಿಪದ್ಧತಿಯನ್ನು ಮಾದರಿಯಾಗಿಟ್ಟುಕೊಂಡಿರುವ ಪುನರುತ್ಥಾನವಾದಿ ಜನಸಂಘಗಳಿಂದಾಗಲೀ ಹೊಸ ನಾಗರಿಕತೆಯ ಸೃಷ್ಟಿ ದುಸ್ಸಾಧ್ಯ. ಈ ಶಕ್ತಿಗಳೆಲ್ಲಾ ಅರಿತೋ ಅರಿಯದೆಯೋ ಇಂಡಿಯಾದ ವಾಸ್ತವದಿಂದ ದೂರ ನಿಂತು ಜಿಡ್ಡುಗಟ್ಟಿದ ವ್ಯವಸ್ಥೆಯ ಬದಲಾವಣೆಯ ಬಗ್ಗೆ ಚಿಂತಿಸುತ್ತಿವೆ. ಆದರೆ ಇಂಡಿಯಾದ ವಾಸ್ತವ ಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಇಂತಹ ಚಿಂತನೆಗಳಿಂದ ಹೊರತಾಗಿ, ಪ್ರಾಮಾಣಿಕವಾಗಿ ಹೊಸ ಚಿಂತನೆಗಲ ಆವಿಷ್ಕಾರದಲ್ಲಿರುವವರು, ಲೋಹಿಯಾ ಮತ್ತು ಅವರ ಸಿದ್ಧಾಂತಗಳನ್ನು ಗುರುತಿಸಿದೇ ಹೋದಲ್ಲಿ, ಒಂದು ಕ್ರಾಂತಿಕಾರಿ ಚಳುವಳಿಯನ್ನು ದಾರಿತಪ್ಪಿಸುವ ದುರಂತಕ್ಕೆ ಹೊಣೆಯಾಗಬೇಕಾಗುತ್ತದೆ.

ಇಂತಹ ಜವಾಬ್ದಾರಿಯುತವಾದ ಅರಿವಿನಿಂದಾಗಿ; ಜಿಡ್ಡುಗಟ್ಟಿದ ವ್ಯವಸ್ಥೆಯನ್ನು ಬದಲಿಸಬೇಕೆಂಬ ಛಲವಿರುವ ನನಗೆ ಲೋಹಿಯಾ ಮತ್ತು ಅವರ ಸಿದ್ಧಾಂತಗಳು ಅತಿಮುಖ್ಯವಾಗುತ್ತವೆ.

–ಹ. ಸೋಮಶೇಖರ

ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಿದ ದೂರದೃಷ್ಟಿ

ಭಾರತದ ಸ್ವಾತಂತ್ರ್ಯಾನಂತರದ ಕೆಲವೇ ವರ್ಷಗಳಲ್ಲಿ ಮಲೆನಾಡಿನ ಕುಗ್ರಾಮವಾದ ಕಾಗೋಡು ಎಂಬ ಊರಲ್ಲಿ ರೈತರ ಸತ್ಯಾಗ್ರಹ ನಡೆದದ್ದು ಚರಿತ್ರೆ, ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಕಾಂಗ್ರೆಸ್ ಹಾಗೂ ಅದರ ಮುಖಂಡರು ಪ್ರಶ್ನಾತೀತವಾಗಿದ್ದ ಕಾಲವದು. ಸ್ವಾತಂತ್ರ್ಯಚಳುವಳಿಯ ಜನಪ್ರಿಯತೆಯನ್ನೇ ಬಂಡವಾಳ ಮಾಡಿಕೊಂಡು ಬಹಳ ಜನ ಭೂಮಾಲೀಕರು ಅಧಿಕಾರ ರಾಜಕಾರಣದಲ್ಲಿ ಮೇಲೆ ಬಂದಿದ್ದ ಕಾಲ, ಅಂತಹ ಪ್ರಬಲ ಭೂಮಾಲೀಕರ ವಿರುದ್ಧ ದೀನಾವಸ್ಥೆಯಲ್ಲಿದ್ದ, ರಾಜಕೀಯ ನಾಯಕತ್ವವಿಲ್ಲದ ಹಿಂದುಳಿದ ವರ್ಗಗಳ ಗೇಣಿ ರೈತರು ಸಂಘಟಿತ ಹೋರಾಟವೊಂದನ್ನು ಅಹಿಂಸಾತ್ಮಕ ದಾರಿಯಲ್ಲಿ ಮಾಡಿದ್ದರು. ಇಂತಹ ರೈತರನ್ನು ಬೆಂಬಲಿಸಿ ರಾಷ್ಟ್ರೀಯ ನಾಯಕರಾಗಿದ್ದ, ಸಮಾಜವಾದಿ ಚಿಂತಕ ರಾಮಮನೋಹರ ಲೋಹಿಯಾ ಅಂದು ಭಾಗವಹಿಸಿ ಬಂಧನಕ್ಕೊಳಗಾಗಿದ್ದರು ಎಂಬುದು ನನ್ನಂತಹ ಯುವಕರಿಗೆ ಲೋಹಿಯಾ ಬಗ್ಗೆ ಸಹಜ ಕುತೂಹಲ, ಅಚ್ಚರಿ ಮೂಡಲು ಕಾರಣವಾಗಿತ್ತು.

೧೯೫೧-೫೨ರಲ್ಲಿ ನಡೆದ ಕಾಗೋಡು ಚಳುವಳಿಗೆ ಲೋಹಿಯಾ ಬಂದು ಹೋದ ನಂತರ ಶಿವಮೊಗ್ಗ ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ ಗೋಪಾಲಗೌಡರು ಹಾಗೂ ಅವರ ಸಂಗಾತಿಗಳು, ಸಮಾಜವಾದಿ ಚಳುವಳಿಯನ್ನು ವಿಸ್ತರಿಸಿದ್ದರು. ಅವರಿಂದ ಪ್ರಭಾವಿತಗೊಂಡ ಹಿಂದುಳಿದ ವರ್ಗದ ಅನೇಕ ವಿದ್ಯಾವಂತ ಯುವಕರು ಗೇಣಿ ರೈತರ ಚಳುವಳಿಯಲ್ಲಿ ಮುಂಚೂಣಿಗೆ ಬಂದರು. ಲೋಹಿಯಾ ಬಂದು ಹೋಗಿ ೨ ದಶಕಗಳೇ ಕಳೆದಿದ್ದರೂ ಅವರ ಸ್ಫೂರ್ತಿಯಿಂದ ಅನೇಕ ಚಳುವಳಿಗಳು, ರೈತ ಹೋರಾಟಗಳು ನಡೆಯುತ್ತಿದ್ದವು. ಆ ಚಳುವಳಿಗಳಲ್ಲಿ ನಮ್ಮ ಸಹೋದರರು ಇರುತ್ತಿದ್ದರು. ಆ ಪ್ರದರ್ಶನಗಳಲ್ಲಿ, ಕೂಗುತ್ತಿದ್ದ ಘೋಷಣೆಗಳು ನಮ್ಮನ್ನು ಆಕರ್ಷಿಸುತ್ತಿದ್ದವು. ಒಂದು ರೀತಿಯ ರೋಮಾಂಚನ ಉಂಟು ಮಾಡುತ್ತಿದ್ದವು. 'ಉಳುವವನೇ ಹೊಲದೊಡೆಯ', 'ರಾಮಮನೋಹರ ಅಮರ್ ರಹೇ', 'ಯಾರದು ಭೂಮಿ? ರೈತರ ಭೂಮಿ'-ಹೀಗೆ ಘೋಷಣೆಗಳು ನಮ್ಮ ಹಳ್ಳಿಗಳಲ್ಲಿ ಮನೆಮಾತಾಗಿದ್ದವು. ಆಗಿನ್ನೂ ಪ್ರೌಢ ವ್ಯಾಸಂಗದಲ್ಲಿದ್ದ ನನಗೆ ಲೋಹಿಯಾ ಎಂಬ ಹೆಸರೇ ಒಂದು ಭಾವತರಂಗಗಳಿಗೆ ಕಾರಣವಾಗಿತ್ತು. ಅವರ ಬಗ್ಗೆ ನಮ್ಮ ಸಹೋದರರು ಮಾತಾಡುತ್ತಿದ್ದುದನ್ನು ನಾನು ಕೇಳುತ್ತಿದ್ದೆ. ಅಂದಿನ ಸಂಸತ್ ಸಭೆಯಲ್ಲಿ ಪ್ರಧಾನಿ ಜವಾಹರಲಾಲ್ ನೆಹರೂರವರಿಗೆ ಸಮರ್ಥವಾಗಿ ಟೀಕೆ ಮಾಡುತ್ತಿದ್ದವರೆಂದರೆ ಅದು ಲೋಹಿಯಾ ಮಾತ್ರ ಎಂದು. ಮಹಾತ್ಮಗಾಂಧಿಯವರನ್ನು ಇಡೀ ದೇಶದ ಜನ ಒಪ್ಪಿಕೊಂಡಿದ್ದರು. ಗಾಂಧೀಜಿಯರ ಜೊತೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಜೊತೆ ಜೊತೆಗೆ ಬೆಳೆದ ಲೋಹಿಯಾ ದೊಡ್ಡ ವಿದ್ವಾಂಸರೂ ಆಗಿದ್ದರೆಂದು ತಿಳಿದಿದ್ದೆ.

ಪಶ್ಚಿಮದ ಮಾರ್ಕ್ಸ್‌ವಾದದ ಸಂಘರ್ಷ, ಭಾರತದ್ದೇ ನೆಲದ ಗಾಂಧೀಜಿಯವರ ಅಹಿಂಸೆ, ಸತ್ಯಾಗ್ರಹ, ಅಸಹಾಕಾರದ ಮಾರ್ಗಗಳ ಸಮನ್ವಯದ ಹೊಸದೊಂದು ದಾರಿ ಲೋಹಿಯಾ ಸಮಾಜವಾದವಾಗಿತ್ತು ಎಂದು ನನ್ನ ಅರಿವಿಗೆ ನಂತರದ ದಿನಗಳಲ್ಲಿ ಬರತೊಡಗಿತ್ತು. ಅಧಿಕಾರ ವಿಕೇಂದ್ರೀಕರಣ, ಉಳುವವನ ಕೈಗೆ ಭೂಮಿ, ಭೂಸುಧಾರಣೆಯ ಅನುಷ್ಠಾನ, ಪ್ರತಿಯೊಬ್ಬನಿಗೂ ಉದ್ಯೋಗದ ಭರವಸೆಯಂತಹ ಲೋಹಿಯಾ ಪ್ರಣೀತ ವಿಚಾರಗಳು ನನ್ನಂತಹವನನ್ನು ಸಹಜವಾಗಿ ಪ್ರಭಾವಿತಗೊಳಿಸಿದವು. ಅಂದು ಲೋಹಿಯಾ ಪ್ರತಿಪಾದಿಸಿದ ಹಲವಾರು ಸಮಾಜವಾದಿ ಕಾರ್ಯಕ್ರಮಗಳನ್ನು ಹಂತಹಂತವಾಗಿ, ವಿವಿಧ ಸರ್ಕಾರಗಳು ಜಾರಿಗೊಳಿಸಿವೆ. ಅದರಿಂದಾಗಿ ದೇಶದ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ಕಾರಣವಾದ ದೂರದೃಷ್ಟಿ ಲೋಹಿಯಾ ವಿಚಾರಗಳಲ್ಲಿ ಇತ್ತು, ಆದ್ದರಿಂದ ಲೋಹಿಯಾವಾದದ ಪ್ರಸ್ತುತತೆ ನನ್ನಂತಹ ಸಾಮಾಜಿಕ ಕಾರ್ಯಕರ್ತನನ್ನು ಪ್ರಭಾವಿತಗೊಳಿಸಲು ಕಾರಣವಾಗಿದೆ.

–ಎನ್. ಶಿವಾನಂದ ಕುಗ್ವೆ

ಮಹಾ ಮಾನವತಾವಾದಿ ಚಿಂತಕ

ಲೋಹಿಯ ಎಂಬ ಮೂರಕ್ಷರದ ಮುಷ್ಟಿ ಗಾತ್ರದ ಮನುಷ್ಯ ಅರ್ಧ ಶತಮಾನದ ಹಿಂದೆ ಭಾರತದ ಜನತೆಗೆ ಭವಿಷ್ಯದಲ್ಲಿ ಒದಗಬಹುದಾದ ಅಪಾಯಗಳ ಬಗ್ಗೆ ಎಚ್ಚೆತ್ತುಕೊಳ್ಳುವಂತೆ ನೀಡಿದ ಎಚ್ಚರಿಕೆಯನ್ನು ಸರಿಯಾಗಿ ಗ್ರಹಿಸದೇ ಉಪೇಕ್ಷಿಸಿ ಇಂದು ಅಪಾಯದ ಅಂಚಿನಲ್ಲಿರುವ ಭಾರತೀಯ ಜನತೆ ಆ ಮಹಾ ಮಾನವತಾವಾದಿ ಚಿಂತಕನ ವಿಚಾರಧಾರೆಯನ್ನು ಅಪ್ಪಿಕೊಳ್ಳದೇ ಅನ್ಯ ಮಾರ್ಗವಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು.

ಇಂದು ಆದರ್ಶಗಳು ಅಪಹಾಸ್ಯಕ್ಕೀಡಾಗಿ, ಒಳಿತು–ಕೆಡುಕುಗಳ ಮಧ್ಯದ ಅಂತರ ಮಾಯವಾಗಿ, ಸಾರ್ವಜನಿಕ ಕ್ಷೇತ್ರದಲ್ಲಿರುವ ಮುಂದಾಳುಗಳಿಗೆ ಸ್ವಹಿತಾಸಕ್ತಿ ಮತ್ತು ಸಂಪತ್ತಿನ ಕ್ರೋಢೀಕರಣವೇ ಪರಮ ಸಿದ್ಧಾಂತವಾಗಿ ಮಾನ್ಯತೆ ಪಡೆದು ವಿಜೃಂಭಿಸುತ್ತಿದೆ. ಸ್ವಾತಂತ್ರ್ಯಾನಂತರದ ಸಂದರ್ಭದಲ್ಲಿ ಮುಂದಾಲೋಚನೆಯಿಂದ ಇದರ ಆತಂಕಕಾರಿ ಬೆಳವಣಿಗೆಯನ್ನು ಗ್ರಹಿಸಿದ ಲೋಹಿಯಾ, ನಿಸರ್ಗದ ಕೂಸಾದ ಮಾನವ ತನ್ನ ಪರಿಸರದ ಸಮಾಜದಿಂದ ಆಕಾರ ಪಡೆದು ಮೌಲ್ಯರಹಿತ ಧನದಾಹಿಯಾದರೆ ನಿಸರ್ಗ ಹಾಗೂ ಸಮಾಜಕ್ಕೆ ಹೇಗೆ ಕಂಟಕನಾಗುತ್ತಾನೆ ಎಂಬುದನ್ನು ಮಾರ್ಮಿಕವಾಗಿ ದಾಖಲಿಸಿದ್ದಾರೆ. ಅದರ ವಿರುದ್ಧ ಜೀವನದುದ್ದಕ್ಕೂ ಹೋರಾಟ ಮಾಡಿದ ಈ ಜನಪರ ಹೋರಾಟಗಾರನನ್ನು ನಿರ್ಲಕ್ಷಿಸಿದ ಭಾರತೀಯ ಸಮಾಜ ಇಂದು ನಾಯಕನಿಲ್ಲದ ಹಡಗಿನಂತಾಗಿದೆ.

ಆರೋಗ್ಯಕರ ಸಮಾಜ ನಿರ್ಮಾಣದಲ್ಲಿ ಪ್ರಮುಖ ಕರ್ತವ್ಯ ನಿರ್ವಹಿಸಬೇಕಾದ ಧಾರ್ಮಿಕ ಕ್ಷೇತ್ರ, ಶಿಕ್ಷಣ ಕ್ಷೇತ್ರ, ಸಾರ್ವಜನಿಕ ಕ್ಷೇತ್ರ, ನ್ಯಾಯಾಂಗ ವ್ಯವಸ್ಥೆ ಇಂದು

ಸ್ವಹಿತಾಸಕ್ತಿಯ ಹಾಗು ಅಧಿಕಾರದಾಹಿ ಜನರ ಕೈಯಲ್ಲಿ ಸಿಲುಕಿ ಭಾರತದ ಬಹುಪಾಲು ಜನತೆ ಬವಣೆ ಪಡುವಂತಾಗಿ, ಧರ್ಮ-ಬಂಡವಾಳಶಾಹಿಗಳ ತಲೆದಿಂಬಾಗಿದೆ. ಹಾಗೇ ಅಧ್ಯಾತ್ಮ, ಯೋಗ ಒಂದು ಕಾಲದಲ್ಲಿ ವ್ಯಕ್ತಿಯ ಮನಸ್ಸನ್ನು ಎಲ್ಲ ಸ್ವಾರ್ಥಬಂಧನಗಳಿಂದ ಮುಕ್ತಗೊಳಿಸಿ ನಿಸರ್ಗದ ಅಧ್ಯಯನಕ್ಕೆ ಸಹಕಾರಿಯಾಗಿ ಪರಮಶಾಂತಿ ಮುಕ್ತತೆಯನ್ನು ಪಡೆಯುವ ಸಾಧನವಾಗಿತ್ತು. ಆದರೆ ಜಾಗತಿಕ ಮಟ್ಟದಲ್ಲಿ ಶಾಂತಿ ಬಯಸುವ ಮನಸ್ಸುಗಳಿಗೆ ಆಶಾಕಿರಣವಾಗಿದ್ದ ಭಾರತದ ಈ ಯೋಗ ಇಂದು ಢೋಂಗಿ ಬಾಬಾಗಳ ಕೈಯಲ್ಲಿ ಔಷಧಿ ಅಂಗಡಿಯ ವ್ಯಾಪಾರವಾಗಿ ಮಾರ್ಪಟ್ಟಿರುವುದು ಖೇದದ ಸಂಗತಿ. ಶಿಕ್ಷಣ ಕ್ಷೇತ್ರವು ಬಹುಪಾಲು ಖಾಸಗೀಕರಣಗೊಂಡು ಹಣ ಗಳಿಸುವ ದಂಧೆಯಾಗಿ ಪರಿವರ್ತನೆಗೊಂಡಿದೆ. ಬೌದ್ಧಿಕ ವಿಕಸನಕ್ಕೆ ಪೂರಕವಾಗಿ ಸಮಾಜಕ್ಕೆ ದಾರಿದೀಪವಾಗಬೇಕಾದ ಈ ಕ್ಷೇತ್ರ ಇಂದು ಹೊಟ್ಟೆ ಹೊರೆಯಲು ಕೂಲಿಗಾಗಿ ಅವಶ್ಯಕ ಸಾಧನವಾಗಿರುವುದು ಆತಂಕದ ಸಂಗತಿ.

ಇನ್ನು ಸಾರ್ವಜನಿಕ ಸೇವಾಕ್ಷೇತ್ರ ಹಾಗೂ ರಾಜಕೀಯ ಕ್ಷೇತ್ರಗಳು ಅಪಮೌಲ್ಯಗೊಂಡು ಕೊಲೆಗಡುಕರ, ಹಣವಂತರ ಹಾಗೂ ಧನದಾಹಿಗಳು ಪ್ರವೇಶಿಸಿ ಪ್ರಜಾಪ್ರಭುತ್ವದ ಮೌಲ್ಯಗಳನ್ನೇ ಅಪಮೌಲ್ಯಗೊಳಿಸಿ ತಮ್ಮ ಅಧಿಕಾರದಾಹ ಹಾಗೂ ಧನದಾಹಗಳಿಗೆ ಇಡೀ ನಾಡಿನ ಸಂಪತ್ತನ್ನೇ ಲೂಟಿ ಮಾಡಿ ನಿರಾತಂಕವಾಗಿ ವೈಭವದಿಂದ ಬದುಕಿ, ದೇಶದ ಬಹುಪಾಲು ಬಡವ, ಕೂಲಿಕಾರ, ರೈತಾಪಿ ಜನಾಂಗದ ಬದುಕನ್ನು ಅಪಮಾನಿತಗೊಳಿಸಿ ಆತ್ಮಹತ್ಯೆಗೆ ಪ್ರೇರೇಪಿಸುತ್ತಿದ್ದಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮಾನ್ಯ ಜನತೆಗೆ ಅತೀ ಭರವಸೆಯ ಆಶಾಕಿರಣವಾದ ನ್ಯಾಯಾಂಗ ವ್ಯವಸ್ಥೆಯಲ್ಲಿ ಕೂಡ ಬಹುಪಾಲು ಸ್ವಹಿತಾಸಕ್ತಿಯ ಜನ ಪ್ರವೇಶಿಸಿದ್ದು, ಪಕ್ಷಪಾತತನ ಮೀರುವ ಸಂಕೇತವಾಗಿ ಕಣ್ಣುಪಟ್ಟಿಯ ಸಂಕೇತದ ನ್ಯಾಯದೇವತೆಯನ್ನು ತಮ್ಮ ಕುಟಿಲ ಬುದ್ಧಿವಂತಿಕೆಯಿಂದ ಶಾಶ್ವತ ಕುರುಡಳನ್ನಾಗಿಸುವ ಅಪಾಯದ ಸನ್ನಿವೇಶ ತಲುಪಿರುವುದು ಆತಂಕಕಾರಿ ಸಂಗತಿ.

ಇಂತಹ ಆತಂಕಿತ ಸನ್ನಿವೇಶದಲ್ಲಿ ನಾವು ಮರಳಿ ಲೋಹಿಯಾ ವಿಚಾರಧಾರೆಗೆ ಅರ್ಪಿಸಿಕೊಳ್ಳದೇ ಬೇರೆ ದಾರಿಯಿಲ್ಲ. ತಮ್ಮ ಜೀವನದುದ್ದಕ್ಕೂ ಸ್ವಹಿತಾಸಕ್ತಿಯನ್ನು ಬದಿಗೊತ್ತಿ ಈ ದೇಶದ ಬಹುಪಾಲು ಜನತೆಯ ಬದುಕಿಗೆ ಆತಂಕಕಾರಿಯಾದ ಜಾತಿಯತೆ, ಲಿಂಗಬೇಧ ಹಾಗೂ ಬೌದ್ಧಿಕ ವಲಯದ ಅಪಾಯಕಾರಿ ನಡೆಯನ್ನು ನಿರ್ಭೀತಿಯಿಂದ ವಿರೋಧಿಸಿ ಕೊನೆಯ ಹಂತದವರೆಗೂ ಹೋರಾಡಿ ಮಾನವ ಘನತೆಯಿಂದ ಬದುಕುವುದು ಹೇಗೆ ಎಂಬುದನ್ನು ಸಂದಿಗ್ಧತೆಗೆ ಎಡೆಯಿಲ್ಲದಂತೆ ಸರಳ ಹಾಗೂ ನೇರವಾಗಿ ನಮ್ಮ ಬರಹ, ಭಾಷಣ, ಹೋರಾಟಗಳ ಮೂಲಕ ಅಚ್ಚಳಿಯದಂತೆ ದಾಖಲಿಸಿರುವ ಮಾನವತಾವಾದಿ. ಹಿಂದಿನಿಂದಲೂ ಈ ದೇಶದ ಅಧಿಕಾರ ಕೇಂದ್ರಗಳು ಅಲ್ಪಸಂಖ್ಯಾತರಾದ ಕುಟಿಲ ನೀತಿಯ ಜನರ ಕೈಯಲ್ಲಿ ಸಿಲುಕಿ ಬಹುಸಂಖ್ಯಾತ ಜನತೆ ಮೇಲೇರದಂತೆ ಅಡೆತಡೆಗಳನ್ನು ನಿರ್ಮಿಸಿರುವುದನ್ನು ಮನಗಂಡ ಲೋಹಿಯಾ ಅಧಿಕಾರಕೇಂದ್ರಗಳ ನಿರ್ವಹಣೆಗೆ ಹೃದಯಹೀನ

ಜಣಪಾಂಡಿತ್ಯಕ್ಕಿಂತ ಈ ದೇಶದ ಮಣ್ಣಿನ ವಾಸನೆಯನ್ನು ಬಲ್ಲ ಹೃದಯವಂತರಿಗೆ ಅಧಿಕಾರ ಸೂತ್ರ ವಹಿಸಲು ಬಿಡುವಿಲ್ಲದೆ ಹೋರಾಟ ಕೈಗೊಂಡು ಅದರಲ್ಲಿ ಕೆಲಮಟ್ಟಿಗೆ ಯಶಸ್ಸನ್ನು ಪಡೆದವರು. ಸೋಲನ್ನು ಒಪ್ಪಿಕೊಳ್ಳದೇ ಸಾವನ್ನು ಬರಮಾಡಿಕೊಂಡ ಧೀಮಂತ ನಾಯಕ ಲೋಹಿಯಾ.

ಇಂತಹ ನಾಯಕನ ಜನ್ಮಶತಮಾನೋತ್ಸವ ಇಂದಿನ ಸಂದರ್ಭದಲ್ಲಿ ಸಮಾಜವಾದಿಗಳಿಗೆ ಉಳಿದಿರುವ ದಾರಿ ಎಂದರೆ, ತಮ್ಮ ಬದುಕನ್ನು ಸರಳ, ನೇರ ಪ್ರಾಮಾಣಿಕತೆಯಿಂದ ರೂಪಿಸಿಕೊಳ್ಳುವುದು. ಹಾಗೇ ತನ್ನ ಪರಿಸರದ ಸಹಮಾನವರ ಬದುಕಿಗೆ ಮಾದರಿಯಾಗಿ, ಅನ್ಯಾಯ, ಅತ್ಯಾಚಾರದಂತಹ ಸಮಾಜ ಕಂಟಕ ಕ್ರಿಯೆಗಳ ವಿರುದ್ಧ ಜನಾಂದೋಲನ ಕ್ರೋಢೀಕರಿಸಿ ವೈಚಾರಿಕತೆಯನ್ನು ಬೆಳೆಸುವ ಕೆಲಸವನ್ನು ಕೈಗೊಳ್ಳುವುದು. ಇವು ಮಾತ್ರ ಅಪರೂಪದ ದಾರ್ಶನಿಕ ಹೋರಾಟಗಾರ ಲೋಹಿಯಾರವರಿಗೆ ಸಲ್ಲಿಸುವ ಗೌರವವಾಗಿದೆ.

–ಅಜ್ಜಪ್ಪ ಬಿರಡಿ

ಪರಿಪೂರ್ಣ ವ್ಯಕ್ತಿ

ಹುಣಸೀಕೋಟಿ ಶೇಷಗಿರಿಯಪ್ಪನ ಹಗಲು ಕೊಲೆ ಬಗ್ಗೆ ನ್ಯಾಯ ಕೇಳಲು ಕರ್ನಾಟಕ ದಲಿತ ಸಂಘರ್ಷ ಸಮಿತಿ ಒಂದು ಉತ್ಕಟ ಜಾಥಾವನ್ನು ಶೇಷಗಿರಿಯಪ್ಪ ಕೊಲೆಯಾದ ಸ್ಥಳದಿಂದ ಪ್ರಾರಂಭಿಸಿ ಬೆಂಗಳೂರಿನ ವಿಧಾನಸೌಧದ ತನಕ ಏರ್ಪಡಿಸಿತ್ತು. ೧೨ ಜೂನ್ ೧೯೮೦ರಂದು ಕಾಲುನಡಿಗೆಯಲ್ಲಿ ವಿಧಾನಸೌಧಕ್ಕೆ ಬಂದ ಜಾಥಾ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲು ತವಕಿಸಿತು. ಮುಖ್ಯಮಂತ್ರಿಗಳಿರಲಿ, ಅವರ ಅನುಯಾಯಿಗಳು ಹೋಗಲಿ, ವಿರೋಧ ಪಕ್ಷದ ಸದಸ್ಯರೂ ಕೂಡ ಅಂದು ಅವರಿಗೆ ಕಾಣಸಿಗಲಿಲ್ಲ. ಇವರೆಲ್ಲರೂ ಅಂದು ವಿಧಾನಸೌಧದೊಳಗೆ ಬಸವರಾಜೇಶ್ವರಿ ಉತ್ಸವದಲ್ಲಿ ಮುಳುಗಿದ್ದರು. ಹೊರಗೆ ಕತ್ತಲಿನ ಜನ ಬೆಳಕಿಗೆ ಹಾತೊರೆಯುತ್ತಿರುವಾಗ ಈ ಬೆಳಕಿನ ಜನ "ಇನ್ನೂ ಬೆಳಕಾಗಲು' ನಾಕು ಗೋಡೆಗಳೊಳಗೆ ಹುಸಿ ನಗುವ ಸಾಹಸದಲ್ಲಿದ್ದುದು ಕಂಡು ಬಂತು. ೧೪೪ನೇ ಸೆಕ್ಷನ್ ವಿಧಾನಸೌಧದ ಸುತ್ತಲೂ ಹಾಜರಿತ್ತು. ಮನವಿ ಸಲ್ಲಿಸುವ ಪ್ರಯತ್ನಗಳೆಲ್ಲವೂ ವಿಫಲವಾದ ನಂತರ ಜಾಥಾದ ಮನುಜರು ಪ್ರತಿಬಂಧಕಾಜ್ಞೆ ಮುರಿಯಲು ಮುಂದಾದರು. ಆಗ ಪೋಲೀಸರು ಲಾಠಿ ಪ್ರಹಾರ ಮಾಡಿದರು. ಬೆಂಗಳೂರಿನ ಆರೆಂಟು ಮೈಲು ನೆಲವ ಜಾಥಾದ ಜೊತೆ ತುಳಿದ ನಾನು ಈ ಸಂದರ್ಭದಲ್ಲಿ ದೂರ ನಿಂತುಬಿಟ್ಟೆ. ನನಗೆ ಇಂಡಿಯಾದ ಹೊಲಸು ರಾಜಕೀಯ ಭಯ ಹುಟ್ಟಿಸಿತ್ತು. ಯಾಕೆಂದರೆ ಈ ದೇಶದ ನೆಲದಲ್ಲಿ ಹಾಡಾಹಗಲೇ ಮನುಜರನ್ನು ಕೊಲ್ಲಬಹುದಾದ, ಕೊಂದು ರಾಜಾರೋಷು ರಸ್ತೆಗಳ ಮೇಲೆ ಓಡಾಡಬಹುದಾದ ಪರಿಸ್ಥಿತಿ ಇದೆ. ಯಾವನೇ ವ್ಯಕ್ತಿ ದುರ್ಬಲನನ್ನು ಕೊಂದು ಒಬ್ಬ ಬಲಿಷ್ಠ ರಾಜಕಾರಣಿಯ ಮೊರೆ ಹೊಕ್ಕರೆ ಮುಗಿಯಿತು. ಯಾವ ಕೋರ್ಟೂ

ಅವನನ್ನು ಏನೂ ಮಾಡದು. ಇದು ಇಂಡಿಯಾದ ರಾಜಕೀಯ ಇತಿಹಾಸದ ಪುಟಗಳನ್ನೆಲ್ಲ ತುಂಬುವಷ್ಟು ದೊಡ್ಡ ಗಾತ್ರದ್ದು. ಆ ಸಂದರ್ಭದಲ್ಲಿ (ದೂರ ನಿಂತ) ನನಗೆ ನೆನಪಾದ ವ್ಯಕ್ತಿಗಳೆಂದರೆ ಡಾ. ರಾಮಮನೋಹರ ಲೋಹಿಯಾ, ಶಾಂತವೇರಿ ಗೋಪಾಲಗೌಡರು.

ಲೋಹಿಯಾ ಒಂದು ವೇಳೆ ವಿಧಾನಸೌಧದೊಳಗೆ ಇದ್ದಿದ್ದರೆ ಅವರು ಖಂಡಿತಾ ಹೊರಬರುತ್ತಿದ್ದರು.(ಶಾಂತವೇರಿ ಕೂಡ) ಎಲ್ಲರ ಮೈದಡವಿ ನ್ಯಾಯ ಕೊಡಿಸಲು ಹೆಣಗುತ್ತಿದ್ದರು. ಯಾಕೆಂದರೆ ಲೋಹಿಯಾ ತಮ್ಮ ಜೀವನ ಪೂರ್ತ ಅಮಾನುಷಗಳ ವಿರುದ್ಧ ಹೋರಾಡಿದವರು. ಮಾನವ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಯಾವುದೇ ಆಯುಧನ್ನು ಅವರು ಹುಸಿಗೊಳಿಸಲು ಯತ್ನಿಸಿದವರು. ಹೆಣ್ಣು ಗಂಡಿನ ಸಮಾನತೆಗಾಗಿ ಹೋರಾಡಿದವರು; ಅಷ್ಟೇ ಯಾಕೆ, ಇಡೀ ಜಾಗತಿಕ ಮಟ್ಟದಲ್ಲಿ ಇಂಥದೊಂದು ಕ್ರಾಂತಿ ನಡೆಯಬೇಕೆಂದು ನಂಬಿದ್ದವರು. ಈಗಿನ ರಾಜಕಾರಣಿಗಳಲ್ಲಿ ಲೋಹಿಯಾರನ್ನು ಹುಡುಕಲು ನಾನು ಹಗಲಿನಲ್ಲಿ ಪ್ರಯತ್ನಿಸುತ್ತಿರುವೆ. ಖಂಡಿತಾ ಅವರ ಪೂರ್ಣ ಆಕಾರ ಇರಲಿ, ಅವರ ಕಿರು ಬೆರಳಿನ ಒಂಚೂರು ಉಗುರೂ ಇವರಲಿಲ್ಲ.

ಸಾಹಿತ್ಯ, ತತ್ವಶಾಸ್ತ್ರ, ಅರ್ಥಶಾಸ್ತ್ರ, ಇತಿಹಾಸ, ಭೂಗೋಳಗಳ ಬಗ್ಗೆ ಸ್ಪಷ್ಟವಿರುವ ಒಬ್ಬ ರಾಜಕಾರಣಿಯೂ ಇಂದು ಇಂಡಿಯಾ ಒಳಗೆ ಸಿಕ್ಕಲಾರ. ಅವರ ಆರ್ಥಿಕ ಚಿಂತನೆಗಳ ಪರಿಚಯ ಇಲ್ಲಿನ ಒಬ್ಬ ಅರ್ಥಶಾಸ್ತ್ರ ಬೋಧಕನಿಗೂ ಪರಿಚಯವಿಲ್ಲ. ನಾನು ಲೋಹಿಯರನ್ನು ಖುದ್ದು ನೋಡಿಲ್ಲ. ಅವರ ಕೆಲವು ಪುಸ್ತಕಗಳಲ್ಲಿ ಅವರನ್ನು ಈ ಎಲ್ಲಾ ಅಂಶಗಳೊಡನೆ ಕಂಡಿರುವೆ. ಅವರ ಭಾಷೆಯ ಬಳಕೆ, ವಿಚಾರ ಸೂಕ್ಷ್ಮತೆ, ಅಗಾಧ ವಿಶ್ಲೇಷಣ ಶಕ್ತಿ ಬೆರಗುಗೊಳಿಸುವಂಥದು. ತತ್ವಶಾಸ್ತ್ರದ ಬಗೆಗೆ ಅದರಲ್ಲೂ ಭಾರತೀಯ ತತ್ವಶಾಸ್ತ್ರದ ಬಗೆಗೆ, ಅವರು ತುಂಬಾ ತಿಳಿದವರಿದ್ದರು. ಪುರಾಣಗಳನ್ನು ಅವರಂತೆ ವಿಶ್ಲೇಷಿಸಿದವರು ಬೇರೆ ಯಾರೂ ಇಲ್ಲ. ಅಂತೆಯೇ ಈ ನೆಲದ ಗುಣ ಅವರಿಗೆ ನಿಖರವಾಗಿ ಗೊತ್ತಿತ್ತು. ಯಾವನೇ ರಾಜಕಾರಣಿ ಅಥವಾ ಲೇಖಕ ಅಥವಾ ಅಧ್ಯಾಪಕ ಇಂಡಿಯಾದ ತತ್ವಶಾಸ್ತ್ರ ಅರಿಯಲೇಬೇಕಾದ್ದು ಅನಿವಾರ್ಯ. ಇಲ್ಲದಿದ್ದರೆ ಜನಜೀವನದೊಳಗೆ ಗೊತ್ತಿಲ್ಲದಂತೆ ರಕ್ತವಾಗಿ ಹೋಗಿರುವ ಅದರ ವೈಷಮ್ಯ ಗುಣಗಳು ಅವನ ಸ್ಪಷ್ಟತೆಗೆ ಬರುವುದಿಲ್ಲ. ಈ ಕೊರತೆಯಿಂದ ಇಂಡಿಯಾದ ಯಾವೊಬ್ಬನೂ ಪೂರ್ಣಗೊಳ್ಳಲಾರ. ಆದರೆ ಲೋಹಿಯಾ ಈ ಪೂರ್ಣತೆಯನ್ನು ಪಡಕೊಂಡಿದ್ದರು. ಆದ್ದರಿಂದಲೇ ಅವರ 'ರಾಜಕೀಯದ ಮಧ್ಯೆ ಬಿಡುವು', 'ಜಾತಿಪದ್ಧತಿ', 'ಇತಿಹಾಸಚಕ್ರ', ಮಾರ್ಕ್ಸ್‌ನ ಬಗೆಗಿನ ಲೇಖನಗಳು ಅತ್ಯಂತ ಮುಖ್ಯವಾಗುವುದು. ಆದ್ದರಿಂದಲೇ ಲೋಹಿಯಾ ಹೆಚ್ಚು ಜನಕ್ಕೆ ಕಹಿಯಾಗಿ ಕಾಣುತ್ತಿದ್ದಿರಬಹುದು. ಆದರೆ ಲೋಹಿಯಾರನ್ನು ನಾವು ಒಂದಲ್ಲ ಒಂದು ದಿನ ಅಪ್ಪಿಕೊಳ್ಳಬೇಕಾಗುತ್ತದೆ. ಒಪ್ಪಿಕೊಳ್ಳಬೇಕಾಗುತ್ತದೆ.

–ಚಂದ್ರಶೇಖರ ತಾಳ್ಯ

ಬೆಳಕಿನ ದಾರಿ

ನನಗೆ ಶಾಲಾ ಕಾಲೇಜುಗಳಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ದೊರೆತದ್ದು ವಿದ್ಯೆಯ ಮೊಗವಾಡ. ಬರಿಯ ಪದವಿಯ ಪತ್ರ ಎಂದು ಸ್ಪಷ್ಟವಾದದ್ದು; ನಮ್ಮ ಸಮಾಜದ ಪ್ರತಿಷ್ಠಿತರು ನಮ್ಮನ್ನು ಎಷ್ಟು ನಯವಂಚಕರನ್ನಾಗಿ ಬೆಳೆಸಿದ್ದಾರೆ ಎಂದು ಅರಿವಾದದ್ದು; ದೀನ ದಲಿತರ ಉದ್ಧಾರಕ್ಕೆ ದೇಶದ ಉದ್ದಗಲ ನಾಲಗೆ ಚಾಚುವ ದೇಶಭಕ್ತರ ಹುಂಬತನ ಅರ್ಥವಾದದ್ದು; ಧರ್ಮದ ಮಾನವ ಕಲ್ಯಾಣದ ಹೆಸರಿನಲ್ಲಿ ಜಾತಿಯ ವಿಷಬೀಜ ಬಿತ್ತುತ್ತ ಮಾನವತೆಯನ್ನು ವಿನಾಶದೆಡೆಗೆ ಒಯ್ಯುತ್ತಿರುವ ಮತಮಾನ್ಯಗಳ, ಮಠಾಧೀಶರ, ಮಸೀದಿ, ಚರ್ಚುಗಳ, ರಾಜಕೀಯ ಪಕ್ಷಗಳ ಅಂತರಂಗದ ಅರಿವಾದದ್ದು; ಬರವಣಿಗೆ, ಭಾಷಣ, ಚರ್ಚೆ, ಗೋಷ್ಠಿ, ವಿಚಾರ ಸಂಕಿರಣ ಇತರ ತೀಟೆ ತೀರಿಸಿಕೊಳ್ಳುವ ಕೋಣೆಯೊಳಗಿನ ಕಾದಾಟಕ್ಕಿಂತ ನಾಡಿನ ಮೂಲೆಮೂಲೆಯಲ್ಲಿ ಮಾಡಬೇಕಾಗಿರುವ ಅಗತ್ಯ ಕೆಲಸದತ್ತ ದೃಷ್ಟಿ ಹರಿದದ್ದು; ಸತ್ಯ, ಧರ್ಮ, ಪ್ರಾಮಾಣಿಕತೆ ಎಂದರೆ ಗಾಂಧಿ, ನೆಹರೂ ಎಂದು ತಿಳಿದಿರುವ ಶೇ.೯೯ ಜನರೊಳಗೆ ಒಂದಾಗಿದ್ದ ನನಗೆ ಸತ್ಯ, ಧರ್ಮ, ಪ್ರಾಮಾಣಿಕತೆಯ ವಾಸ್ತವ ಸ್ವರೂಪದ ಅರಿವಾದದ್ದು; ಸಾಮಾಜಿಕವಾಗಿ, ರಾಜಕೀಯವಾಗಿ ಯಾರೊಬ್ಬರ ಪ್ರಭಾವಕ್ಕೂ ಒಳಗಾಗದೆ ಮತ್ತೊಬ್ಬನ ನೆರಳಾಗಿದೆ, ಬಾಲಬಡುಕನಾಗದೆ ತನ್ನ ಚೈತನ್ಯದ ಜಾಗೃತಿಯಿಂದ ಸ್ವಂತ ವ್ಯಕ್ತಿತ್ವದ ದೃಷ್ಟಿ ಬೆಳೆದದ್ದು; ತನ್ಮೂಲಕ ಆಕಾಶದಲ್ಲಿ ಹಾರಾಡುತ್ತಿದ್ದ ಬದುಕು ನೆಲದಲ್ಲಿ ಬೇರು ಬಿಟ್ಟು ಹತ್ತಿರವಾಗಿ ಜೀವಂತವಾದದ್ದು ಅಲ್ಲವೇ ಪ್ರಿಯವಾದದ್ದು; ಎಲ್ಲಕ್ಕಿಂತ ಮುಖ್ಯವಾಗಿ ನಾನು ಮನುಷ್ಯನಾಗಿಯೇ ಉಳಿಯಲು ಕಾರಣವಾದದ್ದು ಲೋಹಿಯಾ ಹಾಗೂ ಬೆಳಕಿನ ದಾರಿಯಲ್ಲಿ ಕೈಹಿಡಿದು ಕರೆದುಕೊಂಡು ಹೋಗುವ ಅವರ ಬರವಣಿಗೆ.

ಅನ್ಯಾಯದ ವಿರುದ್ಧ ಸದಾ ಸ್ಫೋಟಗೊಳ್ಳುತ್ತಿದ್ದ ಸೂರ್ಯ ಲೋಹಿಯಾ; ಪ್ರಾಮಾಣಿಕತೆಯ ಸಾಕಾರಮೂರ್ತಿ ಲೋಹಿಯಾ; ಮೋಸ, ವಂಚನೆ, ಅನ್ಯಾಯ, ಅಸಮಾನತೆಗಳು ಕಂಡಲ್ಲೇ ಕಿಡಿ ತಾಗಿದ ಮದ್ದಿನಂತೆ ಸಿಡಿದ ಬಾಂಬು ಲೋಹಿಯಾ; ವಿಶ್ವಮಾನತೆಯಲ್ಲಿ ಅಗಲವರಿಯದ ಆಕಾಶ ಲೋಹಿಯಾ.

೧೯೨೯ರಲ್ಲಿ ಹೆಚ್ಚಿನ ವ್ಯಾಸಂಗಕ್ಕಾಗಿ 'ಲಂಡನ್ ಅಥವಾ ಬರ್ಲಿನ್?' ಎಂದು ಪ್ರಶ್ನೆ ಬಂದಾಗ ನಮ್ಮನ್ನು ಆಳಿದ ಲಂಡನ್ನಿನಲ್ಲಿ ಕಲಿಯುವುದೆಂದರೆ ಮಾನಸಿಕ ಗುಲಾಮೀಯತೆ ಎಂದು ತಿರಸ್ಕರಿಸಿದವರು; ನೆಹರೂ, ಸ್ತ್ರೀ ಸಮಾನತೆಯ ಕಾಯಿದೆಯನ್ನು ಲೋಕಸಭೆಯಲ್ಲಿ ಮಂಡಿಸಿದಾಗ "ಹಳ್ಳಿಗಳಲ್ಲಿ ವಾಸಿಸುತ್ತಿರುವ ಕೋಟ್ಯಂತರ ಭಾರತೀಯ ಸ್ತ್ರೀಯರ ಅಗತ್ಯ ಸಮಾನತೆಯ ಕಾಯಿದೆಯಲ್ಲ, ಬದಲಾಗಿ ಕುಡಿಯುವ ನೀರು, ಮಲಮೂತ್ರ ವಿಸರ್ಜನೆಗೆ ವ್ಯವಸ್ಥೆ" ಎಂದು ಖಂಡತುಂಡವಾಗಿ ಖಂಡಿಸಿದವರು; ದೇಶದ ಸಾಮಾನ್ಯ ಪ್ರಜೆಯೊಬ್ಬ ದಿನ ಒಂದಕ್ಕೆ ೮ ಆಣೆಯಿಂದ ೫ರೂನಲ್ಲಿ

ಬದುಕುತ್ತಿದ್ದರೆ ಅದೇ ದೇಶದ ಪ್ರಧಾನಿ ನೆಹರೂ ದಿನ ಒಂದಕ್ಕೆ ರೂ.೧೫,೦೦೦/-ದಿಂದ ರೂ. ೨೦,೦೦೦/-ದವರೆಗೆ ಖರ್ಚು ಮಾಡುವುದನ್ನು ಅನ್ಯಾಯವೆಂದು ಲೋಕಸಭೆಯಲ್ಲಿ ನೆಹರೂ ವಿರುದ್ಧ ನೆಹರು ಸಮ್ಮುಖದಲ್ಲೇ ಸಿಡಿದು ನಿಂತವರು. ಜನರನ್ನು ಸಕ್ರಿಯವಾಗಿ ತೊಡಗಿಸುವುದರ ಮೂಲಕ ಕೇವಲ ಒಂದು ಲಕ್ಷ ರೂಪಾಯಿಗಳಲ್ಲಿ ಕಾಂಗ್ರೆಸ್ಸಿಗೆ ಪ್ರತಿಯಾಗಿ ಇಡೀ ಭಾರತದಲ್ಲಿ ರಾಜಕೀಯ ಪಕ್ಷ ಕಟ್ಟಿದವರು; ಗಣರಾಜ್ಯ ಭಾರತದ ಅಧ್ಯಕ್ಷರಾದ ಡಾ. ರಾಜೇಂದ್ರಪ್ರಸಾದ್ ಕಾಶಿ ಕ್ಷೇತ್ರದಲ್ಲಿ ಸಾರ್ವಜನಿಕವಾಗಿ ೧೦೧ ಜನ ಬ್ರಾಹ್ಮಣರ ಪಾದ ಪೂಜೆ ಮಾಡುತ್ತಿದ್ದಾಗ ಈ ಜಾತೀಯ ಗುಲಾಮಗಿರಿಯ ವಿರುದ್ದ ಆಟಂ ಬಾಂಬಿನಂತೆ ಸಿಡಿದವರು; ಒಂದು ದೇಶಕ್ಕೆ ಒಂದೇ ಸಿವಿಲ್ ಕೋಡು ಇರಬೇಕೆಂದು ಹೇಳಿಕೆ ಕೊಟ್ಟಾಗ, ಈ ಹೇಳಿಕೆಯನ್ನು ಹಿಂತೆಗೆದುಕೊಳ್ಳದಿದ್ದರೆ ನಾವು ವೋಟು ಕೊಡುವುದಿಲ್ಲ ಎಂದು ಮುಸ್ಲಿಮರನ್ನು ಧಿಕ್ಕರಿಸಿ ತಮ್ಮ ನಿಲುವನ್ನು ಸಮರ್ಥಿಸಿಕೊಂಡವರು, ಗೆದ್ದು ಆಯ್ಕೆಯಾದವರು; ನೆಹರೂ ಸತ್ತ ದಿನ ಅಮೆರಿಕಾದ ಜಾಕ್‌ಸನ್‌ನ ಒಂದು ಹೋಟೆಲ್‌ನಲ್ಲಿ ಕರಿಯರನ್ನು ಒಳಬಿಡದ ಬಣ್ಣ ಮತ್ತು ಅಸಮಾನತೆಯ ವಿರುದ್ಧ ಸಿಡಿದು ದಸ್ತಗಿರಿಯಾಗಿ ಅವರ ತಪ್ಪನ್ನು ಅವರಿಗೆ ಅರಿವು ಮಾಡಿ ಕ್ಷಮಾಪಣೆ ಕೇಳುವಂತೆ ಮಾಡಿದವರು; ನಿಮ್ಮ ಮಾನವ ವಿನಾಶದ ಅಣ್ವಸ್ತ್ರಕ್ಕೆ ಬದಲಾಗಿ ಮಾನವ ಕಲ್ಯಾಣದ ಸಂಶೋಧನೆಯ ಸಿದ್ಧಿ ಏನಾದರೂ ಆಗಿದೆಯೆ ಎಂದು ಕೇಳುತ್ತಾ ಐನ್‌ಸ್ಟೈನ್‌ರನ್ನು ಆಲಂಗಿಸಿದವರು-ಲೋಹಿಯಾ. ಹೀಗೆ ಅವರ ವಿಶ್ವಮಾನವ ಹೃದಯ ತುಡಿತಮಿಡಿತಗಳು ಒಂದೇ...ಎರಡೇ...!

ಸತ್ತಾಗ(?) ಬಡವರ, ದೀನದಲಿತರ, ನೊಂದವರ, ತುಳಿತಕ್ಕೆ ಒಳಗಾದವರ ಅನಾಥರ ಹೃದಯುದಲ್ಲಿದ್ದೇನೆ ಎನ್ನುವುದನ್ನು ಬಿಟ್ಟು-ವಿಶ್ವದಗಲಕ್ಕೂ ಬೆಳೆದವರಾಗಿಯೂ-ಮನೆ ಇಲ್ಲದೆ, ಕಾರಿಲ್ಲದೆ, ಬ್ಯಾಂಕಿನಲ್ಲಿ ಪೈಸೆ ಹಣವಿಲ್ಲದೆ, ಹೆಂಡತಿ ಮಕ್ಕಳಿಲ್ಲದೆ, ಪ್ರಾಪಂಚಿಕವಾದ ಕೋರಿಕೆಗಳಾವುದೂ ಇಲ್ಲದೆ, ಮುಂದಿನ ಪೀಳಿಗೆಗೆ ಎಂದೆಂದಿಗೂ ಒರಿಜಿನಲ್ ಆಗೇ ಉಳಿಯುವ ವ್ಯಕ್ತಿಯೊಂದನ್ನೆ ಬಿಟ್ಟು ತೆರಳಿದವರು ಡಾ. ಲೋಹಿಯಾ ಒಬ್ಬರೇ.

ಹೀಗಾಗಿ ಇಂದಿನ ಯುವಜನತೆ ಡಾ. ಲೋಹಿಯಾರವರನ್ನು ಪರಿಚಯಿಸಿಕೊಳ್ಳದೆ ಹೋದರೆ ಅವರ ಬದುಕು ವ್ಯರ್ಥ. ಅಷ್ಟೇ ಅಲ್ಲ, ಅದರಿಂದಾಗಿ ವಿಶ್ವ ಅರ್ಥ ಕಳೆದುಕೊಳ್ಳುತ್ತದೆ. ಆದ್ದರಿಂದ ವಿಶ್ವದ ಮನೆಮನೆಗೆ, ಮನಮನಕ್ಕೆ ಲೋಹಿಯಾ ಹಾಗೂ ಅವರ ಚಿಂತನೆ ಇಂದಿನ ತೀವ್ರ ಅಗತ್ಯ.

-ಜ.ಹೊ. ನಾರಾಯಣಸ್ವಾಮಿ

ಲೋಹಿಯಾವಾದ: ಅನಿವಾರ್ಯ ಆದ್ಯತೆ

ಇಂಡಿಯಾದ ಪ್ರಸ್ತುತ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳು ವಿಶಿಷ್ಟ ಹಂತದಲ್ಲಿ ಸಂಕ್ರಮಣಗೊಳ್ಳುತ್ತಿರುವ ಹಾಗೂ ನೂತನ ಆಯಾಮದ ಆವಿಷ್ಕಾರಕ್ಕಾಗಿ ಪರದಾಡುವ ಸಂದರ್ಭದಲ್ಲಿ ಇಂಡಿಯಾದ ಮಣ್ಣಿನಿಂದಲೇ ಎದ್ದು ಬಂದ ರಾಜಕೀಯ ಹಾಗೂ ಸಾಮಾಜಿಕ ಸಿದ್ಧಾಂತಗಳನ್ನು ನಾವೀಗ ಸ್ವೀಕರಿಸಬೇಕಾಗಿದೆ. ಹಲವು ಬಗೆಯ 'ಇಜಂ' ಹಾಗೂ 'ವಾದ'ಗಳು ಮೂರುವರೆ ದಶಕಗಳ ಪ್ರಯೋಗದ ಕುಲುಮೆಯಲ್ಲಿ ತಮ್ಮ ನಗ್ನಸ್ವರೂಪದೊಂದಿಗೆ ಹೊರಬಿದ್ದು ತಮ್ಮ ಇತಿಮಿತಿಗಳನ್ನು ಸ್ಪಷ್ಟಪಡಿಸಿಕೊಂಡಿವೆಯಲ್ಲದೇ, ಎಡಪಂಥೀಯ ಹಲವು 'ಇಜಂ'ಗಳ ಸಂಯುಕ್ತ ಹೊಂದಾಣಿಕೆ ಹಾಗೂ ಸಂಧಾನತೆಯ ಅನಿವಾರ್ಯತೆಗಳನ್ನು ಮನಗಾಣಿಸಿವೆ. ಇಂಥ ಸಂಯುಕ್ತ ಹೊಂದಾಣಿಕೆ ಹಾಗೂ ಸಂಧಾನದಲ್ಲಿ, ನಮ್ಮ ಮಧ್ಯಮ ಹಾಗೂ ದಲಿತ ವರ್ಗದ ಬದುಕಿನ ಕೇಂದ್ರಕ್ಕೆ ನೇರವಾಗಿ ಹೆಣೆದುಕೊಂಡಿರುವ ಲೋಹಿಯಾವಾದ 'ಅನಿವಾರ್ಯ ಆದ್ಯತೆ'ಯನ್ನು ಪಡೆದುಕೊಳ್ಳುತ್ತದೆ. ಏಕೆಂದರೆ ಒಂದು ಪರಿಸರದ 'ಹೊರಗಿನಿಂದ' ಬಂದ ಸಿದ್ಧಾಂತ ಆ ಪರಿಸರದ ಮೂಲಭೂತ ಬದಲಾವಣೆಗೆ ಖಂಡಿತವಾಗಿ ಪೂರಕವಾಗಬಹುದಾದರೂ ಆ ಪರಿಸರದ 'ಮಧ್ಯ'ದಿಂದಲೇ ಹುಟ್ಟಿಕೊಂಡ ಸಿದ್ಧಾಂತದಂತೆ ಬೆನ್ನೆಲುಬು ಆಗಲಾರದು. ಸರ್ವಾಧಿಕಾರಿ ಹಾಗೂ ಪ್ರತಿಗಾಮಿ ಶಕ್ತಿಗಳ ತುಳಿತದಲ್ಲಿ ಹುಡಿಯೊಂದಿಗೆ ಸೇರಿಕೊಂಡಿರುವ ಇಂಥ ಸಿದ್ಧಾಂತದ ಪುನರ್‌ಪ್ರತಿಷ್ಠಾಪನೆಯೊಂದಿಗೆ ಜನತೆಯ ಮಧ್ಯದ ಸಂವಹನಕ್ಕೆ, ಪ್ರಬಲ ಸಂಘಟನೆಯೊಂದಿಗೆ ಪ್ರಮುಖ ಪ್ರಯೋಗದ ಭೂಮಿಕೆ ಸಿದ್ಧವಾಗುತ್ತಿದೆ...

–ರಮೇಶ ಧಾನವಾಡಕರ

ಶೂದ್ರನ ಏಳಿಗೆಗಾಗಿ ಅಪಾರ ಚಿಂತನೆ

೧೯೭೦ರಲ್ಲಿ ನನ್ನ ಕಾಲೇಜು ಜೀವನ ಮುಗಿಯಿತು. ಆ ಜೀವನದ ಕೊಡುಗೆ ಓದು ಮತ್ತು ಬರಹ ಮಾತ್ರ. ಆ ಶಿಕ್ಷಣದಿಂದ ಜೀವನದಲ್ಲಿ ಯಾವ ಕ್ರಾಂತಿಕಾರಿ ಬದಲಾವಣೆಯಾಗಿಲ್ಲ ಎಂದರೆ ತಪ್ಪಾಗಲಾರದು. ಆಗ ನಾನು ಧರ್ಮ, ಆಧ್ಯಾತ್ಮಿಕತೆ ಮತ್ತು ದೇವರ ಬಿಗಿಮುಷ್ಟಿಯಲ್ಲಿ ಬಂಧಿಯಾಗಿದ್ದೆ. ಬಡತನ ಮತ್ತು ಜಾತಿ ಪದ್ಧತಿ ನನಗೆ ಹಗಲಿರುಳು ಕಾಡುತ್ತಿದ್ದ ಸಮಸ್ಯೆ. ಪ್ರಾರ್ಥನೆ, ದೇವರು ಮತ್ತು ಧರ್ಮಗಳಿಂದ ಈ ಭೂತಗಳನ್ನು ನಿರ್ಮೂಲ ಮಾಡಲು ಸಾಧ್ಯವಿಲ್ಲ ಎಂದು ತೀರ್ಮಾನಿಸಿ ಜಿಗುಪ್ಸೆಗೊಂಡು ಬರ್ಟ್ರಂಡ್ ರಸೆಲ್ ಮತ್ತು ಕಾರ್ಲ್ ಮಾರ್ಕ್ಸ್‌ರ ಸಾಹಿತ್ಯಗಳನ್ನು ಓದಲು ಪ್ರಾರಂಭಿಸಿದ್ದೆ. ರಸೆಲ್‌ರವರ ಸಾಹಿತ್ಯದಿಂದ ನನ್ನಲ್ಲಿ ವೈಚಾರಿಕತೆ ಮೂಡಿ ಬಂತು. ಕಾರ್ಲ್ ಮಾರ್ಕ್ಸ್‌ರವರ ಸಾಹಿತ್ಯದಿಂದ ರಾಜಕೀಯ ಪ್ರಜ್ಞೆ ಬೆಳೆಯಿತು.

ಕರ್ನಾಟಕದ ಲೋಹಿಯಾ ಗೆಳೆಯರ ಪರಿಚಯವಾಗಿ ನಾನು ಲೋಹಿಯಾವಾದಿಯಾದೆ. ೫೦೦೦ ವರ್ಷಗಳಿಂದ ಶೋಷಿತನಾದ ನನ್ನಂಥ ಶೂದ್ರನ ಏಳಿಗೆಗೆ ಲೋಹಿಯಾ ಚಿಂತನೆ ಅಪಾರ.

ನಮ್ಮಲ್ಲಿ ಜಾತಿ ಒಂದು ಪ್ರಬಲವಾದ ಅಂಶ. ಕೇವಲ ವರ್ಗ ಹೋರಾಟದಿಂದ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕಲು ಅಸಾಧ್ಯ. ಅಹಿಂಸಾತ್ಮಕವಾದ ವರ್ಗ ಮತ್ತು ಜಾತಿಯ ಹೋರಾಟದಿಂದ ಮಾತ್ರ ಸಮಾನತೆಯನ್ನು ತರಲು ಸಾಧ್ಯ. ಈ ವ್ಯವಸ್ಥೆಗೆ ಲೋಹಿಯಾರವರ ಸಿದ್ಧಾಂತ ಅನಿವಾರ್ಯ.

–ನಿಸಾರ್ ಅಹಮದ್, ಭದ್ರಾವತಿ

ಲೋಹಿಯಾ ಎಂಬ ಚಿಚ್ಛಕ್ತಿ

ಡಾ॥ ರಾಮಮನೋಹರ ಲೋಹಿಯಾರ ವಿಚಾರಧಾರೆ ನನ್ನನ್ನು ಮನುಷ್ಯನಾಗಿ ಉಳಿಯಲು ಸಹಾಯ ಮಾಡಿದೆ. ಲೋಹಿಯಾರ ಪ್ರಖರ ವೈಚಾರಿಕತೆಯನ್ನು ಅವರ ಕೃತಿಗಳ ಇಷ್ಟನೇ ಪುಟದ ಇಷ್ಟನೇ ಪ್ಯಾರಾದಲ್ಲಿವೆ ಎನ್ನುವ ಪ್ರಖರ ಚಿಂತಕ ಮಿತ್ರರಿಂದ ಹಿಡಿದು, ಅಲದ ಮರದ ಪಾಲಿಟಿಕ್ಸ್ ಮಾತನಾಡುತ್ತಾ ತೂರಾಡುವ ಅಲೆಯಲ್ಲಿ ತೇಲಿ ಹೋದ ಮಿತ್ರರವರೆಗೆ ನೋಡ ನೋಡುತ್ತಾ ನಿಬ್ಬೆರಗಾಗಿದ್ದೇನೆ. ಸ್ವಾತಂತ್ರ್ಯ ಬಂದ(ಶ್ರೀರಂಗರ ಅರ್ಥದಲ್ಲಿ 'ಗಳಿಸಿದ') ಮೂರೂವರೆ ವರ್ಷದ ನಂತರ ಜನಿಸಿದ ನನ್ನ ಮನಸ್ಸಿನ ಒಳಕ್ಕೆ ಗಾಂಧಿ ಮೊದಲು ಅವರಿತರಿಸಿದರಾದರೂ, ವಾಸ್ತವವನ್ನು ಬಗೆದು ನೋಡುವ ದ್ರಷ್ಟಾರರಾಗಿ ಭೂಮ್ಯಾಕಾಶ ವ್ಯಾಪಿಸಿದ ತ್ರಿವಿಕ್ರಮನಂತೆ ಚಿತ್ತ ಭಿತ್ತಿಯಲ್ಲಿ ಉಳಿದವರು ಲೋಹಿಯಾರೇ.

ಉಳುವವನಿಗೆ ಭೂಮಿ ಕೊಡಿಸುವ, ಶ್ರಮದ ಕಲ್ಪನೆಗೆ ಖಚಿತತೆಯನ್ನು ಲೇಪಿಸಿದ ಅವರು, ಭಾರತದ ಅಸಂಘಟಿತರ ಪಾಲಿನ ಮಾಯಕಾರ. ಕಾಂಗ್ರೆಸ್ ರಾಜಕಾರಣಿಗಳು ಸಮಾಜವಾದದ ಪರಿಕಲ್ಪನೆಗಳನ್ನು ತಮ್ಮ ಭಂಡಾರದಲ್ಲಿದ್ದುವೆಂದು ಹೊರ ತೆಗೆದು ಚಲಾಯಿಸಿದಾಗ, ಈ ಕೈಚಳಕದ ರಾಜಕಾರಣ ಮೀರಿದ ಎತ್ತರಕ್ಕೇರಿದ ಲೋಹಿಯಾ, ನನ್ನ ವ್ಯಕ್ತಿತ್ವ ಹೊಲಸಾಗದಂತೆ ನೋಡಿಕೊಳ್ಳತೊಡಗಿದ್ದಾರೆಂಬ ಸಂತಸ ನನಗಿದೆ. ನಾನೇ ಸಂಬಳ ಉಳಿಸಿ ಒಂದಿಷ್ಟು ಸಾಲ ತೆಗೆದು ಒಂದು ಕಾರು ಕೊಂಡುಕೊಂಡಾಗ, ಅದೂ ಇಲ್ಲದವರ ಕಣ್ಣು ತುಸು ಹಿಗ್ಗುವಂತೆ ಮಾಡಿದೆನೇ ಎಂದು ಮುಜುಗರ ಆಗುವಷ್ಟು ವಿವೇಕವನ್ನು ಲೋಹಿಯಾ ನನಗೆ ನೀಡಿದ್ದಾರೆ. ಕನ್ನಡ ಸಾಹಿತ್ಯ ಸಂಸ್ಕೃತಿಯೊಳಗೆ ಪ್ರತ್ಯಕ್ಷ–ಪರೋಕ್ಷ ಹರಡಿಕೊಂಡಿರುವ ಅವರ ವಿಚಾರಧಾರೆ ಕೂಡಾ ಮತ್ತೊಂದು ಮಗ್ಗುಲಿನ ಗಾಂಧಿವಾದದ ಹೂರಣದಂತಿರುವುದರಿಂದ, ಅವರು ಯಾವುದಾವುದೋ ಬರಹದ ಪುಟಗಳ ಸಾಲುಗಳೊಗೆ ಮತ್ತೆ ಮತ್ತೆ ಸಿಗುತ್ತಿರುತ್ತಾರೆ.

ಇಷ್ಟಾಗಿಯೂ, ಕಳೆದೆರೆಡು ದಶಕಗಳ ಜಾಗತೀಕರಣದ ಬಿರುಗಾಳಿಯ ಉಲ್ಟಾ ಪಲ್ಟಾ ಆರ್ಥಿಕ ಬದಲಾವಣೆಗಳ ಬಿರುಗಾಳಿ ಲೋಹಿಯಾ ವಿಚಾರ ಧಾರೆಯನ್ನು ಮಬ್ಬಾಗಿಸಿರುವುದು ನಿಜ. ಅದರೂ ಸಮಾಜವಾದ ಬಡಪೆಟ್ಟುಗಳಿಗಳಿಗಾಗಲೀ. ಸುನಾಮಿ ಶಕ್ತಿಗಾಗಲೀ ಮಸಳದೆ, ತನ್ನ ಅಸ್ತಿತ್ವವನ್ನು ಜಾಗತಿಕ ನಿಯಾಮಕನಂತೆ ಈ ದೇಶದಲ್ಲಿ ಮರಳಿ ಸ್ಥಾಪಿಸಿಕೊಂಡರೆ, ಅದು ಲೋಹಿಯಾರ ಘನೀಕೃತ ವ್ಯಕ್ತಿತ್ವದಿಂದ ಮತ್ರ ಸಾಧ್ಯ. ಗಾಂಧಿಯೊಳಗಿನ ಸಮಾಜವಾದ, ಲೋಹಿಯಾರೊಳಗೆ ಗಾಂಧಿ ಇವರಿಬ್ಬರೊಳಗಿನ ಬುದ್ಧತ್ವ- ಈ ಶಕ್ತಿ ಚಿಂತನೆ, ನಾನು ವಿಚಲಿತನಾದಾಗ ನನ್ನಲ್ಲಿ ಸಮತ್ವ ತರಲು ಸಹಾಯ ಮಾಡುತ್ತವೆ. ನನ್ನ ಪರಿಮಿತ ಜ್ಞಾನದ ಪರಿಧಿಗೆ ದಕ್ಕಿದ ಲೋಹಿಯಾ ಎಂಬ ಅರಿವು ನನ್ನನ್ನು ಕಾಪಾಡಿದೆ, ನನ್ನನ್ನು ಎಚ್ಚರಿಸಿದೆ. ನಾನು ಮಾಡಬಹುದಾಗಿದ್ದ ತಪ್ಪುಗಳನ್ನು ತಡೆದಿದೆ. ನನ್ನೊಳಗಿರುವ ಅವರು ನನ್ನನ್ನು ಎಚ್ಚರಿಸುವ, ವ್ಯಕ್ತಿಗುಣ ಮೀರಿದ ಚಿಚ್ಛಕ್ತಿ!

– ಎಂ.ಚಂದ್ರಶೇಖರಯ್ಯ.

ಸಾಂತ್ವನ, ನೆಮ್ಮದಿಗಳ ದಿಕ್ಸೂಚಿ

ಭಾರತದ ಹೋರಾಟದ ಮಹಾಚೇತನವೊಂದು, ಉಳುವ ಶ್ರೀಮಾನ್ಯನನ್ನು ನೆಲೆದೊಡೆಯನನ್ನಾಗಿ ಮಾಡಿದ ಕಥೆ ಗ್ರಾಮೀಣ ಮನೆಯಿಂದ ಆರಂಭವಾಗುತ್ತದೆ. ಭಾಷೆ, ಜಾತಿ, ವರ್ಗದ ಕಪಿಮುಷ್ಠಿಯಿಂದ ಬಸವಳಿದವರಿಗೆ ಸಾಂತ್ವನದ, ನೆಮ್ಮದಿಯ ದಿಕ್ಸೂಚಿಯಾಗುತ್ತದೆ. ನನ್ನ ಮನಸ್ಸಿನ ಅನೇಕ ಪ್ರಶ್ನೆಗಳಿಗೆ ಸೂಕ್ತ ಉತ್ತರ ಲೋಹಿಯಾ ಸಮಾಜವಾದ.

ಓದು ಪ್ರಾರಂಭವಾದ ಕಾಲಕ್ಕೆ ಲೋಹಿಯಾರ 'ರಾಜಕೀಯದ ಮಧ್ಯೆ ಬಿಡುವು' ಎಂಬ ಕೆ.ವಿ.ಸುಬ್ಬಣ್ಣ ಅವರ ಸರಳ ಅನುವಾದದ ಪುಸ್ತಕ, 'ಇತಿಹಾಸ ಚಕ್ರ'ವೆಂಬ ಅಡಿಗರ ಕಷ್ಟದ ಭಾಷೆಯ ಅನುವಾದ ಪುಸ್ತಕ ಮತ್ತು 'ಲೋಹಿಯಾ ಕೆಂಪು ಪುಸ್ತಕ' ಮತ್ತು ಸಮಾಜವಾದಿಗಳು ಆಯೋಜಿಸುತ್ತಿದ್ದ ವಿಚಾರ ಸಂಕಿರಣಗಳು ಬೀಜ ರೂಪದಲ್ಲಿ ನಮಗೆ ಪ್ರವೇಶಿಕೆಯಾಗುತ್ತದೆ.

ಈ ಎಲ್ಲ ಕಾರಣಗಳಿಂದ ನಮ್ಮ ಯೋಚನೆಗಳು ಬೇರೆಯಾದ ಮಾರ್ಗಕ್ಕಿಂತಲೂ, ಹೋರಾಟ-ಚರ್ಚೆಯ ಕಡೆ ಹೊರಳುತ್ತದೆ. ವಿಚಾರವಾದ, ದಲಿತ ಹಾಗೂ ರೈತ ಚಳುವಳಿ, ಭಾಷಾ ಚಳುವಳಿ ಇವೆಲ್ಲ ಲೋಹಿಯಾ ಸಿದ್ಧಾಂತದ ಮೇಲೇ ಸಂಘಟಿಸಿದ್ದು. ಲೋಹಿಯಾ-ಗೋಪಾಲಗೌಡರ ಹಾಗೂ ಅವರ ಸಮಕಾಲೀನರ ಸಂಪರ್ಕದಿಂದ ಈ ಚಳುವಳಿಗಳು ಶಿವಮೊಗ್ಗ ಜಿಲ್ಲೆಯಲ್ಲಿ ಸಮಾಜವಾದಿ ಹೋರಾಟದ ಮಾದರಿಯೊಂದನ್ನು ಕಟ್ಟಿದ್ದು ಇಡೀ ಕನಾಟಕದಲ್ಲಿ ವಿಸ್ಮಯ ಹುಟ್ಟಿಸುವಂತಿತ್ತು.

ಅಂದಿನ ಹೋರಾಟದ ಆ ಕ್ರಿಯಾಶೀಲತೆಯೇ ಇಂದಿಗೂ ಈ ಜಿಲ್ಲೆಯ ಬೆಳವಣಿಗೆಗೆ ಸಾಕ್ಷಿಯಾಗಿದ್ದರೆ ಅರ್ಥಪೂರ್ಣವಾಗಿರುತ್ತಿತ್ತು. ಆದರೆ ಇಂದು ಇದು ಪೌರೋಹಿತ್ಯದ ರಾಜಕಾರಣದಲ್ಲಿ ಸ್ವಜನ ಪಕ್ಷಪಾತ-ಭ್ರಷ್ಟಾಚಾರಗಳ ಮಾದರಿ ಜಿಲ್ಲೆಯಾಗಿದೆ. ಇದಕ್ಕೆಲ್ಲ ಲೋಹಿಯಾ ಸಮಾಜವಾದಿ ಸಿದ್ಧಾಂತದ ನಿರ್ಲಕ್ಷ್ಯವೇ ಕಾರಣವಾಗಿದೆ. ಗಾಂಧಿ-ಲೋಹಿಯಾ ತತ್ವ ಮೀಮಾಂಸೆಯ ಆಸಕ್ತಿ, ಅದರ ಪ್ರೇರಣೆಗಳಲ್ಲಿ ಬದುಕನ್ನು ರೂಪಿಸಿಕೊಳ್ಳಲು ಹವಣಿಸುವವರಿಗೆ ಅವರೇಕೆ ಇಷ್ಟ? ಎಷ್ಟು ಇಷ್ಟ? ಎಂದು ಗುರುತಿಸಿ ಹೇಳುವುದು ಕಷ್ಟ. ಆದರೆ

'ಅಂಧೇರೇಕಿ ತೀನ್ ಪ್ರಕಾಶ್
ಗಾಂಧಿ-ಲೋಹಿಯಾ-ಜೈಪ್ರಕಾಶ್!'

ಎಂಬ ಹಿಂದಿಯ ಎರಡು ಸಾಲುಗಳು ನನ್ನನ್ನು ಸದಾ ಎಚ್ಚರದಲ್ಲಿಡಲು ಸಾಕು.

-ದಿವಾಕರ ಹೆಗಡೆ

ಯುವಕರಿಗೆ ಪ್ರೇರಕ ಶಕ್ತಿ

ಜಾತಿ ಪದ್ಧತಿಯ ಅನಿಷ್ಟದ ವಿರುದ್ಧ ಲೋಹಿಯ ಕೆರಳಿ ನಿಂತಿದ್ದು, ಭಯ ಪಡಿಸುತ್ತಿದ್ದರೂ ಅನಿವಾರ್ಯವಾಗಿ ಎದುರಿಸ ಬೇಕಾಗಿದ್ದ ಇಂಗ್ಲೀಷ್ ಭಾಷೆಯ ವಿರುದ್ಧ 'ಹಟಾವೊ' ಎಂದು ಗುಡುಗುತ್ತ, ಕಠೋರ ಸತ್ಯಗಳನ್ನು ಹೇಳುತ್ತಿದ್ದುದು, ಅಂದಿನ ಯುವಕರಿಗೆ, 'ಹೀಗೆ ಒಬ್ಬ ನಾಯಕನಾದರೂ ನಮ್ಮ ಕೊರಗಿಗೆ ಧ್ವನಿಯಾದನಲ್ಲ......!' ಎಂದೆನಿಸಿದ ಆಕರ್ಷಣೆಯಾದರು.

ಬೃಹತ್ ಬಂಡವಾಳ ಹೂಡಿಕೆಯ ವಿನಾಶಕಾರೀ ಪರಿಣಾಮಗಳು, ಮಹಿಳೆಯರ ಶಿಕ್ಷಣ-ಸಬಲೀಕರಣ, ಕಮ್ಯುನಿಸಮ್ಮಿನ ವಿಷಫಲಗಳು, ಚುನಾವಣೆ-ರಾಜಕಾರಣದ ಅನೈತಿಕ ವ್ಯವಹಾರಗಳು, ಭಾರತದ ಜಾಯಮಾನಕ್ಕೆ ವಿರುದ್ಧವಾಗಿದ್ದ ನೆಹರೂ-ಯೋಜನೆಗಳನ್ನು ಮುಲಾಜಿಲ್ಲದೆ ಖಂಡಿಸುತ್ತಿದ್ದುದು- ಹೀಗೆ ಲೋಹಿಯ ಎಂದರೆ ಅನೇಕ ವಾಸ್ತವ ವಿಚಾರಗಳ ಪ್ರತಿರೂಪವಾಗಿದ್ದರು. ಅವೆಲ್ಲ ನಿಜವೆ. ಆದರೆ, ಲೋಹಿಯಾ ಅವರು ತುಂಬಾ ಭರವಸೆಯಿಟ್ಟಿದ್ದ ಯುವ ಜನಾಂಗದ ವೇದಿಕೆ 'ಸಮಾಜವಾದಿ ಯುವಜನ ಸಭಾ' ಕಡೆಗೆ ತರುಣರು ಆಕರ್ಷಿತರಾಗುತ್ತಿದುದ್ದು ಮುಖ್ಯವಾಗಿ ಜಾತಿ ಪದ್ಧತಿ, ಇಂಗ್ಲಿಷ್ ಭಾಷಾ ವ್ಯಾಮೋಹದ ವಿರೋಧದ ಕಾರಣಗಳಿಗಾಗಿ. ಸುಮಾರು ನಲವತ್ತೂರು ವರ್ಷಗಳ ಹಿಂದಿನ ಮಾತು: ಲಕ್ಷಾಂತರ ಯುವಕರನ್ನು ಲೋಹಿಯ ಪ್ರಭಾವಗೊಳಿಸಿದರು. ಅಂತಹ ಯುವ ಸಮೂಹದಲ್ಲಿ 'ನಾನೂ ಒಬ್ಬ' ಎಂಬುದು ಒಂದು ಸಣ್ಣ ಅಂಶವಿರಬಹುದು, ಹೆಚ್ಚು ಪ್ರತಿಫಲಿಸಲಾರದ ಪ್ಲಾಸ್ಟಿಕ್ ತುಂಡಿನಂತೆ! ಆದರೆ ವೃತ್ತಿಗೊಂದು ಜಾತಿ; ಆ ಜಾತಿಗಳಲ್ಲಿ ಮೇಲು-ಕೀಳು; ವೃತ್ತಿ ಮತ್ತು ಜಾತಿ

ಎರಡನ್ನು ಮೇಲು-ಕೀಳಾಗಿ ಕಂಡು ಅಗತ್ಯವಾದಾಗ ಕೀಳು ವೃತ್ತಿಯವನು ಮಾತ್ರ ಬೇಕು, ಅವನ ಜಾತಿ ಬೇಡ-ಈ ರೀತಿಯ ದ್ವಂದ್ವ, ಸ್ವಾರ್ಥಿ ಜಾತಿ ಪದ್ಧತಿಯನ್ನು ಅನೇಕ ಯುವಕರು, ಅವರ ಹಿರಿಯುಗು ಆ ಕಾಲದಲ್ಲಿ (ಈಗ ಇನ್ನೂ ಎದುರಿಸುತ್ತಿರುವಂತೆಯೇ) ಎದುರಿಸುತ್ತಿದ್ದರು. ಇಂತಹ ಯಾತನೆಗಳಿಗೆ ಲೋಹಿಯ ಧ್ವನಿಯಾದದ್ದು ಆಗಿನ ಯುವಕರಿಗೆ ಹೊಸ ಶಕ್ತಿಯಾಯಿತು.

ಜಾತಿ-ಭಾಷೆ, ಪ್ರದೇಶ-ಭಾಷೆ, ಮಾತೃಭಾಷೆ-ಪ್ರದೇಶ ಭಾಷೆ ಈ ರೀತಿಯ ಬೇಲಿಗಳನ್ನು ದಾಟಿ, ಇಷ್ಟವಿಲ್ಲದಿದ್ದರು ಇಂಗ್ಲಿಷ್ ಸರಹದ್ದನ್ನು ಪ್ರವೇಶಿಸಬೇಕು-ಅದಕ್ಕೆ ಬೇಕಾದ ಮನೆಯ ವಾತಾವರಣ, ಹೊರ ಪರಿಸರ, ಕಲಿಸುವ ಕಲಿಯುವ ಸಮರ್ಪಕ ವಿಧಾನಗಳಿಲ್ಲದ್ದಿದ್ದರೂ.

'ಹೌದು ನಮಗಿದು ಇಂದು ಬೇಕಾಗಿದೆ; ನಿಜ ನಮ್ಮ ನಾಯಕರು ತಪ್ಪು ಮಾಡುತ್ತಿದ್ದಾರೆ, ಯಾರೂ ಅದನ್ನು ಹೇಳುತ್ತಿಲ್ಲ; ಸಣ್ಣತನ, ಮೌಢ್ಯ ಇವುಗಳನ್ನು ಮೀರಿದ ಬದುಕು ನಮ್ಮದಾಗಬೇಕು'- ಹೀಗೆ ಅನಿಸಿದಾಗೆಲ್ಲ ಪೆಡಸು ಮುಖದ ಲೋಹಿಯಾ, ನಗು ಮುಖದ ಭರವಸೆಯ ಮಾರ್ಗದರ್ಶಕನಂತೆ ಕಾಣುತ್ತಿದ್ದರು.

ನಿಜ, ಅವರ ಪ್ರಖರ ವೈಚಾರಿಕತೆ, ನೈತಿಕತೆಗಳಿಗೆ ಆಕರ್ಷಿತರಾದವರು ಎಷ್ಟೋ ಮಂದಿ. ಆದರೆ ಅವುಗಳನ್ನು ಜೀರ್ಣಿಸಿಕೊಳ್ಳಲಾರದೆ ದಿಕ್ಕೆಟ್ಟು ಭ್ರಷ್ಟ ವ್ಯವಸ್ಥೆಗೆ ಆಕರ್ಷಿತರಾಗುತ್ತಿರುವುದು ಸಹ ಇಂದಿನ ಅಷ್ಟೆ ಕ್ರೂರ ವ್ಯಂಗ್ಯ.

-ಎಂ.ಬಿ.ನಟರಾಜ್.

ನೇರವಾಗಿ ಮುಟ್ಟುವ ನಾಯಕ

ನನಗೆ ಲೋಹಿಯಾರವರು ಇಷ್ಟವಾಗಿರುವುದು ಈ ಸಂಗತಿಗಳಿಗಾಗಿ; ಜಾತಿ ವ್ಯವಸ್ಥೆಯಿಂದಾಗಿ ಅಧೋಗತಿಗಿಳಿದಿರುವ ಇಂಡಿಯಾದ ವರ್ಗ ಸ್ವರೂಪದ ಸೂಕ್ಷ್ಮಗಳನ್ನು ಅತ್ಯಂತ ಸ್ಪಷ್ಟವಾಗಿ ಗುರುತಿಸಿ, ಪಟ್ಟಭದ್ರ ಜಾತಿಗಳ, ಭಾಷೆ ಸಂಸ್ಕೃತಿಗಳ ಕಪಿಮುಷ್ಠಿಯಲ್ಲಿ ಶತ ಶತಮಾನಗಳಿಂದ ಉಸಿರುಕಟ್ಟಿ ವಂಚಿತವಾಗಿರುವ ನಮ್ಮ ಬಹುಪಾಲು ಜನ ಸಮುದಾಯದ ಬದುಕು ಎಲ್ಲ ರಂಗಗಳಲ್ಲಿ ಸಮೃದ್ಧವಾಗಿ ಅರಳಬಲ್ಲ ವಿಶಿಷ್ಟ ಹಾಗೂ ನಿಜವಾದ ಸಮಾನತೆಯ ಸಿದ್ಧಾಂತವನ್ನು ರೂಪಿಸಿ ಕೊಟ್ಟಿರುವುದಕ್ಕೆ.

ಅವರ ಚಿಂತನೆಯ ಹರವು ಇಂಡಿಯಾಕ್ಕಷ್ಟೇ ಅಲ್ಲದೆ, ದೇಶ ದೇಶಗಳ ನಡುವಿನ ವಿವಿಧ ಬಗೆಯ ಶೋಷಣಾ ಸಂಬಂಧವನ್ನು ಗುರುತಿಸಿ, ತನ್ಮೂಲಕ ಹೊಸ ವಿಶ್ವಮಾನವ ಸಂಸ್ಕೃತಿಯೊಂದರ ಕನಸನ್ನೂ ಕಂಡವರು ಅವರು.

ರಾಜಕೀಯಕ್ಕಷ್ಟೇ ಸೀಮಿತಗೊಳ್ಳದೇ, ಸಾಹಿತ್ಯ-ಕಲಾ ಪ್ರಕಾರಗಳಲ್ಲೂ ಮನಸ್ಸು ತೊಡಗಿಸಿಕೊಂಡ ಅವರ ಬರಹ ಎಂಥ ನಾಸ್ತಿಕನನ್ನೂ ತೊಡಗಿಸಿಕೊಳ್ಳಬಲ್ಲ ಶಿವ

ಶರಣರ ಭಕ್ತಿ ಭಾವದ ವಚನಗಳ ಪರಿಣಾಮದಂತೆ ನಮ್ಮನ್ನು ನೇರವಾಗಿ ಮುಟ್ಟುತ್ತದೆ. ಪ್ರೀತಿ ವಿಶ್ವಾಸಗಳಿಂದಲೇ ಎಂಥ ವಿರೋಧಿಯನ್ನೂ ಸಾರ್ವತ್ರಿಕ ನೆಲೆಯಲ್ಲಿ ಶರಾಟೆಗೆ ತೆಗೆದುಕೊಳ್ಳುವ ವಿಶಿಷ್ಟತೆ ಅವರಿಗೇ ಮೀಸಲಾದದ್ದು. ತಾವು ಖಚಿತವಾಗಿ ರೂಪಿಸಿಕೊಂಡ ಚಿಂತನೆ ವಿಚಾರಗಳನ್ನು ರಾಜಿಗೊಡ್ಡದೆ, ತಮ್ಮ ಜನಪ್ರಿಯತೆಯನ್ನೇ ಪಣವಾಗೊಡ್ಡಿ ಏಕಾಂಗ ವೀರನಂತೆ ಸೆಣಸಿ, ನಮಗೆಲ್ಲ ಒಂದು ಅಪೂರ್ವ ಪಾಠವನ್ನೇ ಬಿಟ್ಟು ಹೋಗಿದ್ದಾರೆ. ಬಹುಶಃ ಆತ ನಮ್ಮ ಠ ಛಿಚಿಟಟಜಜ 'ಬುದ್ಧಿವಂತ'ರ ವರ್ಗದಲ್ಲೇನಾದರೂ ಹುಟ್ಟಿದ್ದಿದ್ದರೆ, ಅವರಿಗೆ ನಿಜವಾಗಿ ಸಿಗಬೇಕಿದ್ದ ನ್ಯಾಯ ಸಿಗುತ್ತಿತ್ತೇನೋ ಅಂತ ಒಮ್ಮೆ ಅನ್ನಿಸುತ್ತದೆ.

"ಈ ದಿನಗಳಲ್ಲಿ" ಅವರು ನಮ್ಮ ನಡುವೆ ಇರಬೇಕಿತ್ತು; ಇಲ್ಲ, ಇದು ದೇಶದ ದೌರ್ಭಾಗ್ಯವಲ್ಲದೆ ಮತ್ತೇನು?

–ಬಿ. ರಾಜಣ್ಣ

ಯುವ ಸಮಾಜವಾದಿಗಳ ಹೊಣೆ, ಹಕ್ಕು

ಡಾ.ರಾಮಮನೋಹರ ಲೋಹಿಯಾ ಅವರ 'ಸಾಮಾಜಿಕ ಅನಿಸಿಕೆಗಳು ವೈಯಕ್ತಿಕವಾದಾಗ ಮಾತ್ರ ನಮಗೆ ನಾವು ಪ್ರಾಮಾಣಿಕರಾಗಿರಲು ಸಾಧ್ಯ' ಎಂಬ ವಾಕ್ಯ ನನ್ನನ್ನು ಮೊದಲ ಬಾರಿಗೆ ಅಂದರೆ ೧೯೭೭ರಲ್ಲಿ ಆಕರ್ಷಿಸಿದ್ದು. ನನ್ನ ಮನಸ್ಸನ್ನು ಸೆಳೆದುಕೊಂಡು ಅವರ ವಿಚಾರಗಳ ಬಗ್ಗೆ ಹೆಚ್ಚು ಆಸಕ್ತಿಯಿಂದ ಅಭ್ಯಾಸ ಮಾಡತೊಡಗಿಸಿದ್ದೂ ಅವರದೇ ಇನ್ನೊಂದು ವಿಚಾರ: 'ಅನ್ಯಾಯವನ್ನು ವಿರೋಧಿಸದಿದ್ದರೆ ಆ ಅನ್ಯಾಯಕ್ಕೆ ನಾವೂ ಕೂಡ ಜವಾಬ್ದಾರರಾಗುತ್ತೇವೆ' ಎಂಬುದು.

ಭಾರತದಲ್ಲಿ ಅತ್ಯಂತ ವಿಚಿತ್ರವೆನಿಸುವಂಥ ಸ್ಥಿತಿಯನ್ನುಂಟು ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿರುವ ಜಾತಿಪದ್ಧತಿಯ ಬಗ್ಗೆ ಅವರ ವಿಚಾರಗಳನ್ನು ತಿಳಿದುಕೊಳ್ಳಲು ಪ್ರೇರೇಪಿಸಿದ್ದು ಈ ದಿನಗಳಲ್ಲೇ. 'ಜಾತಿ: ಚಲನರಹಿತ ವರ್ಗ; ಹಾಗೂ ವರ್ಗ; ಚಲನಶೀಲ ಜಾತಿ' ಎಂಬ ಅವರ ವಿಚಾರವನ್ನು ಮನದಟ್ಟು ಮಾಡಿಕೊಳ್ಳಲು ಮುಂದಿನ ಎರಡು ವರ್ಷಗಳೇ ಹಿಡಿದವು.

ಈ ದಿನಗಳಲ್ಲೇ ನನಗೆ ಕಲಕತ್ತೆಯ 'ಚೌರಂಗಿ ವಾರ್ತಾ' ಹಾಗೂ ಹೈದರಾಬಾದಿನ 'ಡಾ. ಲೋಹಿಯಾ ಸಮತಾ ವಿದ್ಯಾಲಯ ಟ್ರಸ್ಟ್'ನ ಪ್ರಕಾಶನ ವಿಭಾಗದೊಂದಿಗೆ ಸಂಪರ್ಕ ಹೊಂದಲು ಸಾಧ್ಯವಾದದ್ದು. ಕರ್ನಾಟಕ ಲೋಹಿಯಾ ವಿಚಾರ ಮಂಚ ಪ್ರಕಟಿಸಿದ್ದ 'ಡಾ. ಲೋಹಿಯಾ' (ಕೆಂಪು ಪುಸ್ತಕ) ಮತ್ತು ಸಮಾಜವಾದಿ ಯುವಜನ ಸಭಾದ ಕೆಲವು ಗೆಳೆಯರೊಂದಿಗಿನ ಚರ್ಚೆಯಿಂದ

ಬೌದ್ಧಿಕ ಲಾಭವಾಗಿತ್ತಾದರೂ ಎಷ್ಟೋ ವಿಷಯಗಳ ಬಗ್ಗೆ ಯಾವುದೇ ನಿರ್ಧಾರಕ್ಕೆ ಬರಲಾಗಿರಲಿಲ್ಲ.

ಸಾಕಷ್ಟು ಜನ ಕಮ್ಯೂನಿಸ್ಟ್ ಗೆಳೆಯರು ವಿಕೇಂದ್ರೀಕರಣ ನೀತಿಯನ್ನು, ಉತ್ಪಾದಿತ ವಸ್ತುಗಳ ಬೆಲೆ ನಿರ್ಧರಿಸುವಿಕೆ ಹಾಗೂ ಸಮಾನ ವಿತರಣೆಯನ್ನು, ಜಾತಿ ಕುರಿತಾದ ಡಾ. ಲೋಹಿಯಾ ಅವರ ವಿಚಾರವನ್ನು ಒಪ್ಪದೇ; ಇವುಗಳೂ ಹೇಗೆ ಅವ್ಯವಾಹರಿಕ, ಬಾಲಿಶ ಎಂಬುದಾಗಿ ವಾದ ಮಾಡುತ್ತಿದ್ದಾಗ, ಅವರ ವಾದಗಳು ಒಪ್ಪಿಗೆಯಾಗುತ್ತಿರಲಿಲ್ಲವಾದ್ದರಿಂದ ಈ ಬಗ್ಗೆ ಅಭ್ಯಾಸ ಮಾಡಬೇಕಾದ ಅಗತ್ಯ ತೀವ್ರವಿದೆಯೆಂದು ಅನಿಸತೊಡಗಿತು. ಈ ನಡುವೆ ಕೆಲ ಕಮ್ಯುನಿಸ್ಟ್ ಮಿತ್ರರು ತಮ್ಮದೇ ಆದ ವಿಶೇಷ ಧ್ವನಿಯಲ್ಲಿ ಕುಹಕತನದಿಂದ ಈ ವಿಚಾರಗಳನ್ನು ಲೇವಡಿ ಮಾಡುತ್ತಿದ್ದುನ್ನು ಗಮನಿಸಿ ಹಲವು ಬಾರಿ ವಿಷಾದವೂ, ಸಿಟ್ಟೂ ಬರುತ್ತಿದ್ದವು.

ಡಾ. ಲೋಹಿಯಾ ಅವರು ನನಗೆ ಹೆಚ್ಚು ಪ್ರಿಯರಾಗಲು ಕಾರಣವೆಂದರೆ ಭಾರತದ ಚಾರಿತ್ರಿಕ ಹಿನ್ನೆಲೆಯಲ್ಲಿ ಅವರು–ಅವರ ಬರಹಗಳು, ಕೇವಲ ಆರ್ಥಿಕ–ರಾಜಕೀಯ ವಿಚಾರಗಳ ಬಗ್ಗೆ ಮಾತ್ರ ಸೀಮಿತವಾಗಿದ್ದಿರದೇ ಜನತೆಯ ದೈನಂದಿನ ಬದುಕಿನ ಹಾಗೂ ಜನತೆಯ ವೈಯಕ್ತಿಕ ಎನಿಸಬಹುದಾದ ವಿಷಯಗಳ ಬಗೆಗೂ ಇರುತ್ತಿದ್ದುದು ನನ್ನ ಗಮನಕ್ಕೆ ಬಂದಾಗ. ಜನಭಾಷೆ ಹಾಗೂ ಜನಪದ ಸಂಸ್ಕೃತಿಗಳ ಬಗೆಗಿನ ಅವರ ವಿಶೇಷ ಕಳಕಳಿ ಇತ್ಯಾದಿ ಗಮನಿಸಿದಾಗ ಈ ವಿಷಯ ಮನದಟ್ಟಾಗಲೂ ಸಾಕು.

ಅನಂತರದ ದಿನಗಳಲ್ಲಿ ಡಾ.ಲೋಹಿಯಾ ಅವರ ವಿಚಾರಗಳ ಕುರಿತಾಗಿ ಅಭ್ಯಾಸ ನಡೆಸತೊಡಗಿದಂತೆ, ಇಡೀ ಸಮಾಜವಾದೀ ಚರಿತ್ರೆಯ–ಸ್ಥೂಲವಾಗಿ ಭಾರತದ್ದಾದರೂ ಸದ್ಯಕ್ಕೆ ಅಭ್ಯಸಿಸುವ ಅಗತ್ಯತೆ ಕಾಣತೊಡಗಿತು. ಆದರೆ ಕನ್ನಡದಲ್ಲಿ ಬಹಳೇ ಕಡಿಮೆ ಸಮಾಜವಾದಿ ಚರಿತ್ರೆಯ ಬಗೆಗಿನ ಪುಸ್ತಕಗಳು ಇರುವುದರಿಂದ ಹಾಗೂ ಎಲ್ಲವನ್ನೂ ದೊರಕಿಸಿಕೊಳ್ಳಲು ಸಾಧ್ಯವಾಗದಿರುವುದರಿಂದ, ಇದು ಈತನಕ ಸಮಾಧಾನಕರವಾಗಿ ಕೈಗೂಡಿಲ್ಲವೆಂದೇ ಹೇಳುತ್ತೇನೆ. ಭಾರತದ ಚರಿತ್ರೆಯಲ್ಲಿ ಸಮಾಜವಾದಿ ಜನರು ಎಷ್ಟೇ ವಿಚಿತ್ರರಂತೆ ಕಂಡರೂ, ಅವರು ಅಸ್ವಸ್ಥತೆಯಿಂದಿರುವುದು ಕಂಡರೂ, ಅದು 'ಸಮಾಜವಾದ'ಲ್ಲಿನ ಕೊರತೆಯ ಕಾರಣದಿಂದಲ್ಲ ಎಂಬುದು ಮನವರಿಕೆಯಾಗಿ ಈಗ ಮತ್ತೆ ಯುವಜನಾಂಗ ಹೆಚ್ಚು ಜವಾಬ್ದಾರಿಯಿಂದ ಮುತುವರ್ಜಿಯಿಂದ ಗಂಭೀರವಾಗಿ ಸಂಘಟನೆಯನ್ನು ಕಟ್ಟುವುದು ಅಗತ್ಯವಿದೆ ಎನಿಸುತ್ತದೆ. ಸಮಾಜವಾದಿಗಳು ತಮ್ಮಲ್ಲಿ ಒಕ್ಕಟ್ಟನ್ನು ಕಾಪಾಡಿಕೊಂಡು ಬರುವಲ್ಲಿ ಹಾಗೂ ತಳಮಟ್ಟದಿಂದ ಸಂಘಟನೆಯನ್ನು ಕಟ್ಟುವಲ್ಲಿ

ವಿಫಲರಾಗಿರುವುದರಿಂದ ಇಂದಿಗೂ ಕೂಡ ಅನೇಕ ಸಮಾಜವಾದಿಗಳ ಶಕ್ತಿಯೂ, ಬುದ್ಧಿಯೂ ಸಮಾಜವಾದಿಗಳ ವಿರೋಧಿಗಳಿಂದ, ಜನತಾ–ಲೋಕದಳದಂಥ ಪಕ್ಷಗಳಿಂದ ಹಿಡಿದು ಎಡಪಕ್ಷವೆಂದು ಅನಿಸಿಕೊಳ್ಳುವ ಸಿಪಿಎಂ ದಂಥ ಪಕ್ಷಗಳ ಜನರಿಂದ ಕೂಡ ಉಪಯೋಗಿಸಲ್ಪಡಲಾಗುತ್ತಿದೆ. ತತ್ಪರಿಣಾಮವಾಗಿ ಎಡಪಂಥೀಯ ಶಕ್ತಿಯ–ಪ್ರಜಾಪ್ರಭುತ್ವ ಶಕ್ತಿಯ ಜಯ ಎಂಬ ಹೆಸರಿನಲ್ಲಿ ನೈಜಸಮಾಜವಾದದ ವಿರೋಧಿ ಶಕ್ತಿಗಳೇ ಬೆಳೆಯುತ್ತಲಿದೆಯೆಂಬುದನ್ನು ಸಮಾಜವಾದಿಗಳು ಬೇಗ ಅರ್ಥಮಾಡಿಕೊಂಡಷ್ಟೂ ಒಳ್ಳೆಯದು.

ನಾವು ಇಂದಿಗೂ ಕೂಡ ಡಾ. ಲೋಹಿಯಾ ಅವರ ವಿಚಾರಗಳೇ ಇರಲಿ ಕೂಲಂಕಷವಾಗಿ ವಿಚಾರ ಮಾಡಿಯೇ ಒರೆಗಲ್ಲಿಗೆ ತಿಕ್ಕಿಯೇ ಸ್ವೀಕರಿಸುವುದು ಅಗತ್ಯ ಎಂದನಿಸುತ್ತದೆ. ಶೂದ್ರ–ಬ್ರಾಹ್ಮಣ ನೀತಿ, ಅವರ ಕಾಲದಲ್ಲಿನ ಪಿಎಸ್‌ಪಿ ಹಾಗೂ ಎಸ್‌ಎಸ್‌ಪಿ ಎಂದು ಸಮಾಜವಾದಿ ಪಕ್ಷವು ಇಬ್ಭಾಗವಾದದ್ದರ ಬಗ್ಗೆ, ರೈತ–ಕೂಲಿಕಾರರ ನೀತಿ ಮುಂತಾದವುಗಳ ಬಗ್ಗೆ ಮತ್ತೊಮ್ಮೆ ಈಗ ಚರ್ಚೆ–ವಿಚಾರ ವಿನಿಮಯಗಳು ನಡೆಯಬೇಕಾದುದು ಇಂದಿನ ಅನಿವಾರ್ಯವು ಹೌದು ಎಂದನಿಸುತ್ತದೆ.

ಸಮಾಜವಾದಿಗಳು ಮತ್ತೆ ಬದಲಾದ ಮನಸ್ಸಿನಿಂದ ಹಾಗೂ ಹೆಚ್ಚು ಹುಮ್ಮಸ್ಸಿನಿಂದ ಒಂದೇ ಸಂಘಟನೆಯಡಿಯಲ್ಲಿ ಕೆಲಸ ಮಾಡುವುದು ಇಂದಿನ ಅತ್ಯವಶ್ಯಕತೆಯೂ ಅನಿವಾರ್ಯತೆಯೂ ಆಗಿವೆ ಎಂದು ನನಗೆ ತೀವ್ರವಾಗಿ ಅನಿಸುತ್ತಿದೆ. ಡಾ. ಲೋಹಿಯಾ ಅವರೂ ಸೇರಿದಂತೆ ಎಲ್ಲ ಸಮಾಜವಾದಿಗಳು ಇಟ್ಟ ಹೆಜ್ಜೆಗಳ ಬಗ್ಗೆ, ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಆಮೂಲಾಗ್ರವಾಗಿ ಶೋಧನೆ ನಡೆಸಿ, ಚರ್ಚೆಗಳನ್ನು ಮುಕ್ತವಾಗಿ ನಡೆಸಿ, ಆ ಹಿನ್ನೆಲೆಯಲ್ಲಿ ತೆಗೆದುಕೊಳ್ಳುವ ತೀರ್ಮಾನ ಮೇಲೆ ಮುಂದಿನ ಸಂಘಟನೆಯು ಪ್ರಾರಂಭವಾಗಬೇಕಾದುದು ಜರೂರು ಎಂದೂ ಅನಿಸುತ್ತದೆ. ಇಂಥ ಹೊತ್ತಿನಲ್ಲಿ ಡಾ. ಲೋಹಿಯಾ ಅವರ ಹುಮ್ಮಸ್ಸು, ನ್ಯಾಯಕ್ಕಾಗಿನ ಹೋರಾಟದ ಬಗೆಗಿನ ಛಲಗಳು ನಮಗೆ ಪ್ರೇರಕವಾಗುವುದರಲ್ಲಿ ಸಂಶಯವಿಲ್ಲ.

ವೈಯಕ್ತಿಕವಾಗಿ ಡಾ. ಲೋಹಿಯಾ ಅವರೂ ಕೂಡ ಇದ್ದಂತೆ ಇಂದಿಗೂ ಕೂಡ ನಮ್ಮ ನಡುವೆ ಅನೇಕ ಸಮಾಜವಾದಿಗಳು ಅತ್ಯಂತ ರಿಜಿಡ್ ಆಗಿರುವುದು ನಮ್ಮ ಗಮನಕ್ಕೆ ಬರುತ್ತಿವೆ. ಅವರು ತೆಗೆದುಕೊಳ್ಳುವ ತೀರ್ಮಾನಗಳು, ಹೆಜ್ಜೆಗಳು ತಮ್ಮ ಇಷ್ಟದ ಪ್ರಕಾರ ಇರುತ್ತದೆ ಎಂಬುದು ಕೂಡಾ ನಮಗೆ ಕಾಣುತ್ತಿದೆ. ಇದಕ್ಕೆ ಅಂಥವರು ಇಂದಿನ ಸಮಕಾಲೀನ ರಾಜಕಾರಣದ ಅನಿವಾರ್ಯತೆ ಎಂದು

ಕಾರಣವನ್ನೂ ಕೂಡ ಕೊಡಬಹುದೇನೋ. ಅದೇನೇ ಇರಲಿ. ಯಾವುದೇ ರಿಜಿಡಿಟಿಯನ್ನು ಮೀರಿ ಸಮಕಾಲೀನ ಪ್ರಜ್ಞೆ, ಸೀರಿಯಸ್‌ನೆಸ್‌ಗಳಿಂದ ಸುವ್ಯವಸ್ಥಿತವಾಗಿ ಸಮಾಜವಾದಿ ಆಂದೋಲನವನ್ನು ಮುಂದುವರೆಸುವುದು ಯುವ ಸಮಾಜವಾದಿಗಳ ಹೊಣೆಗಾರಿಕೆಯೂ ಹಕ್ಕೂ ಆಗಿದೆ ಎಂದು ಮಾತ್ರ ತೀವ್ರವಾಗಿ ಅನಿಸುತ್ತದೆ.

–ಮಂಗ್ಳೂರ ವಿಜಯ

ಒಬ್ಬ ಅಗದೀ ಮನುಷ್ಯ

"ಸತ್ಯಾಗ್ರಹಿಗಳು ಯಾವ ಸಂದರ್ಭದಲ್ಲೇ ಆದರೂ ಹಿಂಸೆ ಮತ್ತು ಕ್ರೌರ್ಯಗಳಿಗೆ ಇಳಿಯಬಾರದು" ಎಂದ ವ್ಯಕ್ತಿ ಮತ್ತೊಂದು ಕಡೆ "ಬರ್ಬರ ಹಿಂಸೆಯಿಂದ ನಮ್ಮನ್ನು ರಕ್ಷಿಸಿಕೊಳ್ಳಲು ನಾವು ಸಂಘಟಿತ ಹಿಂಸೆಯನ್ನೇ ಬಳಸಬೇಕಾದಾಗ ಅದನ್ನು ಪ್ರಯೋಗಿಸಲೂ ನಾನು ಇಚ್ಛಿಸುತ್ತೇನೆ" ಎಂದು ಹೇಳಿದಾಗ ಆ 'ಹುಚ್ಚು' ವ್ಯಕ್ತಿಯ ಬಗ್ಗೆ ಕುತೂಹಲವಾಗುತ್ತದೆ. ಕೆದಕುತ್ತಾ ಹೋದಂತೆ ಆ ವ್ಯಕ್ತಿ ಬತ್ತಲಾಗುತ್ತಾನೆ. ವಿಶಾಲವಾಗಿ ಅರ್ಥವಾಗುತ್ತಾನೆ.

'ಕ್ಲೋಸ್', 'ಒಳ್ಳೆಯ', 'ಗಟ್ಟಿಯ', 'ಶ್ರೇಷ್ಠ' ಇತ್ಯಾದಿ ಪದಗಳಿಗಿಂತ 'ಅಗದೀ' ಎನ್ನುವ ಪದ ನನಗೆ ಹೆಚ್ಚು ಇಷ್ಟ. ಲೋಹಿಯಾ ವಿಶ್ವದಲ್ಲೊಬ್ಬ ಅಗದೀ ಮನುಷ್ಯನಾಗಿ ಓದುತ್ತ ಹೋದಂತೆ ಅರ್ಥವಾಗುತ್ತಾ ಹೋಗಿದ್ದಾರೆ. ಅವರ ನಿಷ್ಠುರ ಚಿಂತನೆಗಳು, ಪ್ರಖರ ವಿಚಾರಧಾರೆ, ಎಲ್ಲಕ್ಕಿಂತ ಮಿಗಿಲಾಗಿ ಶತಮಾನಗಳ ಹಿಂದಿನ ಮತ್ತು ಮುಂದಿನ ಇತಿಹಾಸ ಪ್ರಜ್ಞೆ ನಿಜಕ್ಕೂ ದಂಗಾಗಿಸುವಂಥದ್ದು.

ಲೋಹಿಯಾರನ್ನು ನಾನು ನೋಡಿಲ್ಲ. ನಿಧಾನವಾಗಿಯಾದರೂ ನಾನೊಬ್ಬ ಮನುಷ್ಯನಾಗುತ್ತಿದ್ದೇನೆ ಎಂದು ನನಗನ್ನಿಸುವುದಾದರೆ ಗಾಂಧಿ, ಮಾರ್ಕ್ಸ್, ಲೋಹಿಯಾ, ಜೆ.ಪಿ. ಅವರ ವಿಚಾರಗಳಿಗಂತೂ ಕೃತಜ್ಞ. ನಾನು ಲೋಹಿಯಾವಾದಿಯಲ್ಲ. ಅಥವಾ ಯಾರ ಮತ್ತು ಯಾವ ತತ್ವಗಳ ವಾದಿಯೂ ಆಗಿಲ್ಲ. "ಗಾಂಧೀವಾದಿ ಅಥವಾ ಮಾರ್ಕ್ಸ್‌ವಾದಿ ಎಂದು ಹೇಳಿಕೊಳ್ಳುವುದು ಮಂಬತನ" ಎನ್ನುವ ಲೋಹಿಯಾ ಅವರ ಮಾತುಗಳು ಅರ್ಥಪೂರ್ಣ. ಎಲ್ಲಾ ವಾದಿಗಳ ಜತೆಗೆ "ಲೋಹಿಯಾವಾದಿ"ಗಳೆಂದುಕೊಂಡವರು ಅಥವಾ ಗುರುತಿಸಿಕೊಂಡವರು ಮೇಲಿನ ಮಾತನ್ನು ಅರಿಯಬೇಕು. ಮುಂದೊಂದು ಕಾಲಕ್ಕೆ ಕೇವಲ ಲೋಹಿಯಾ ವಾದಕ್ಕೂ ಸೀಮಿತಗೊಳ್ಳದೆ ಅದರಾಚೆಗೂ ವಿಮರ್ಶಾತ್ಮಕವಾಗೇ ಸಂಶೋಧಿಸಿ ಕಲಿಯಬೇಕಾದ್ದಿದೆ ಅಂತನ್ನಿಸುತ್ತದೆ.

ನೆಲದ ಬಗ್ಗೆ, ಮಣ್ಣಿನ ಬಗ್ಗೆ, ನದಿ ಪರ್ವತಗಳ ಬಗ್ಗೆ, ಕಲ್ಲಿನ ಬಗ್ಗೆ, ಜಾತಿ,

ವರ್ಗ, ಭಾಷೆ, ವಿದೇಶಾಂಗ ನೀತಿಯ ಬಗ್ಗೆ. ಹಿಂಸೆ, ಅನ್ಯಾಯ, ಅಸಮಾನತೆ, ಶಸ್ತ್ರಾಸ್ತ್ರಗಳ ಬಗ್ಗೆ, ಶೂದ್ರರು, ರೈತರು, ಶೋಷಿತರು, ಹಿಂದುಳಿದವರ ಮೇಲೆ, ಇಂಗ್ಲೀಷ್, ಕಮ್ಯೂನಿಸಂ, ಫ್ಯುಡಲಿಸಂ, ಕ್ರಿಕೆಟ್ ಬಗ್ಗೆ, ಮಾರ್ಕ್ಸ್, ಗಾಂಧಿ–ಹೀಗೆ ತನ್ನ ಅದ್ಭುತವಾದ ಚಿಂತನೆಗಳನ್ನು ಹರಿಸಿದ 'ಹಂತಕನ ಹಸ್ತ'ದ ಭವಿಷ್ಯಕಾರ ಲೋಹಿಯಾ ಬಗ್ಗೆ – "ಲೋಹಿಯಾ ಒಬ್ಬ ವ್ಯಕ್ತಿಯಾಗಿ" ಎಂದು ಬರೆಯಲು ಹೊರಟಾಗ ಬರೆಯುವುದೇ ಕಷ್ಟವಾಗುತ್ತದೆ. ಯಾಕೆಂದರೆ ಅವರನ್ನು ಇನ್ನೂ ಅರ್ಥ ಮಾಡಿಕೊಳ್ಳುವುದು ಅಥವಾ ಅವರ ಆಲೋಚನೆಗಳನ್ನು(ತತ್ವ) ಇನ್ನೂ ಅಧ್ಯಯನ ಮಾಡುವುದು ಬೇಕಾದಷ್ಟಿರುವುದರಿಂದಲೋ ಏನೋ. ಹಾಗಾಗಿಯೇ ಲೋಹಿಯಾರಂಥ ಒಬ್ಬ ವ್ಯಕ್ತಿಯ ಬಗ್ಗೆ ನನ್ನಲ್ಲಿ ಇನ್ನೂ ಅಳಿಸಲಾಗದ ತೀವ್ರ ಪ್ರೀತಿ–ಗೌರವ–ಕುತೂಹಲಗಳಿವೆ.

ಲೋಹಿಯಾವಾದ ಅಂದರೆ ಮತ್ತೇನೂ ಅಲ್ಲ. ಅದೊಂದು ಸೈದ್ಧಾಂತಿಕವಾದ ಮಾನವತಾವಾದ. ಲೋಹಿಯಾ ಇಂಡಿಯಾದ ನಕಾಶೆಯಲ್ಲಿ ಕಾಣುವ ಒಬ್ಬ ಅಗದೀ ಮನುಷ್ಯ.

–ಕೆ.ಎನ್. ಕೇಶವ ಪ್ರಸಾದ್

ಬೀದಿಯಲ್ಲಿ ಸಿದ್ಧಾಂತದ ಒರೆಗಲ್ಲು

ಡಾ. ಲೋಹಿಯಾ ಒಬ್ಬ ಮನುಷ್ಯರಾಗಿದ್ದರು. ದೈಹಿಕವಾಗಿ ಮನುಷ್ಯರಂತೆ ಗೋಚರಿಸುತ್ತಿರುವವರೆಲ್ಲ ಮನುಷ್ಯರಂತೆ ಬದುಕುತ್ತಿಲ್ಲ. ಮಾನವೀಯತೆಯ ಸ್ಥಾಪನೆಗಾಗಿ ಹೋರಾಡುತ್ತಿಲ್ಲ ಎಂಬ ಕರಾಳ ಸತ್ಯದ ಅಡಿಯಲ್ಲಿಯೇ ಮನುಷ್ಯ ಎಂಬ ಪರಮೋಚ್ಚ ಪದವಿಗೆ ಡಾ. ಲೋಹಿಯಾ ಅರ್ಹರಾಗಿದ್ದರು. ಮನುಷ್ಯರನ್ನು ಮನುಷ್ಯರನ್ನಾಗಿ ಬದುಕಲು ಬಿಡದಂಥ ಭ್ರಷ್ಟ ವ್ಯವಸ್ಥೆ ತನ್ನ ಅಸಮಾನ ಪರಿಸರದಿಂದಾಗಿ ವ್ಯಕ್ತಿಯ ಮೆದುಳಲ್ಲಿ ತುರುಕುವ ನಾನಾ ನಮೂನೆಯ ಹೇಯ ಅಮಾನವೀಯ ಮೌಲ್ಯಗಳನ್ನು ಎಬ್ಬಿ ಒಗೆದು ಪ್ರಾಮಾಣಿಕತೆಯ ಮೇರುಗಿರಿಯಾಗಿ ಬದುಕಿದ ಲೋಹಿಯಾ, ನೋವು ದುಃಖ ದುಮ್ಮಾನ ಅನುಭವಿಸಿದ ಬಡ ಜನಸ್ತೋಮಕ್ಕೆ ಆಪ್ತಮಿತ್ರರಾಗಿದ್ದರು; ವಿಮೋಚನಾ ಹೋರಾಟದ ಉಸಿರಾಗಿದ್ದರು.

ಆದ್ದರಿಂದಲೇ ಲೋಹಿಯಾ ಸಿದ್ಧಾಂತ ಕೂಡಾ ಮಾನವ ಪ್ರೀತಿಯ ವ್ಯವಸ್ಥೆಯೊಂದನ್ನು ತರುವ ಗುರಿಯೊಡನೆ ಜಾಗತಿಕ ಕ್ರಾಂತಿಕಾರಿ ಇತಿಹಾಸದಲ್ಲಿ ಇಟ್ಟಂತಹ ದಾಪುಗಾಲು. ಲೋಹಿಯಾ ಎಂದೂ ಯಾವುದೇ ವ್ಯಕ್ತಿಯನ್ನಾಗಲೀ, ಸಿದ್ಧಾಂತವನ್ನಾಗಲೀ ದ್ವೇಷಿಸಲಿಲ್ಲ; ವಿಶ್ಲೇಷಿಸಿದರು. ಒಳ್ಳೆಯದನ್ನು ಒಪ್ಪಿಕೊಂಡರು. ಕೆಟ್ಟದ್ದನ್ನು ಖಂಡಿಸಿದರು; ಮುಂದಿನ ದಾರಿಯನ್ನು ತೋರಿಸಿದರು.

ಬಡವರನ್ನು ಬಲಿ ತೆಗೆದುಕೊಳ್ಳುವ ಬಲಪಕ್ಷಗಳೊಡನೆ ಎಂದೂ ರಾಜಿ

ಮಾಡಿಕೊಳ್ಳದ ಆ ಮನುಷ್ಯ ಅನ್ಯಾಯ ಅಸಮಾನತೆ ಮೆಟ್ಟಲು ನಿರಂತರ ಸಮರ ಸಾರಿದ ಧೀರ. ಮಾತು ಕೃತಿಯ ಮಧ್ಯ, ದೇಹ ಮನಸ್ಸಿನ ಮಧ್ಯ ನೇರ ಸಾಂಗತ್ಯ ಸ್ಥಾಪಿಸಿಕೊಂಡ ಮಹಾವೀರ. ಅನ್ಯಾಯದ ವಿರುದ್ಧ ಪ್ರತಿಭಟಿಸಲು ಸಾವಿರಾರು ಯುವಕರನ್ನು ಮಾತಿನ ಚಾವಟಿಯಿಂದ ಬಡಿದೆಬ್ಬಿಸಿ ಕೈಯಲ್ಲಿ ಕಪ್ಪು ಬಾವುಟ ಹಿಡಿಯುವಂತೆ ಮಾಡಿದ ಲೋಹಿಯಾರಂಥವರು ಭಾಳ ಅಪರೂಪ.

ಲೋಹಿಯಾ ತಮ್ಮ ಸಿದ್ಧಾಂತವನ್ನು ಒರೆಗಲ್ಲಿಗೆ ಹಚ್ಚಿದ್ದು ಬೀದಿಯಲ್ಲಿ, ಆಸ್ಥಾನಗಳಲ್ಲಿ ಅಲ್ಲ. ಹೋರಾಟಗಳಲ್ಲಿ ಭಾಗಿಯಾಗುವುದರ ಮೂಲಕ ಅವರು ತಮ್ಮ ಸಿದ್ಧಾಂತವನ್ನು ವ್ಯಾಖ್ಯಾನಿಸಿದರು. ಬೇರೆ ಸಿದ್ಧಾಂತಗಳಿಗೂ ತಮ್ಮ ಸಿದ್ಧಾಂತಕ್ಕೂ ಇರುವ ಅಂತರವನ್ನು ಎತ್ತಿ ತೋರಿಸಿದರು. ಗಾಂಧೀಜಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವುದರಲ್ಲೇ ಮುಕ್ತಿಯನ್ನು ಕಂಡರು. ಭಾರತದ ಕಮ್ಯುನಿಷ್ಟರು ರಷ್ಯಾದ ಸಮಾಜವಾದಿ ವ್ಯವಸ್ಥೆಯನ್ನು ಕಾಪಾಡಲು ಭಾರತದ ೪೭ರ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗದೇ ಭಾರತದ ಸ್ವಾತಂತ್ರ್ಯವನ್ನು ಬಲಿಕೊಡಲು ತಯಾರಾದರು. ಲೋಹಿಯಾ ಮಾತ್ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯುವುದರ ಜೊತೆಗೆ ಅನಂತರ ಹಸಿವಿಲ್ಲದ ನಿಜವಾದ ಸ್ವಾತಂತ್ರ್ಯಕ್ಕಾಗಿ ತಮ್ಮ ಹೋರಾಟವನ್ನು ಮುಂದುವರೆಸಿದರು. ಗಾಂಧೀಜಿ ದೈಹಿಕ ಶೀಲದ ಬಗ್ಗೆ ಮಾತ್ರ ಆಸಕ್ತರಾಗಿದ್ದರೆ ಲೋಹಿಯಾ ಮಾನಸಿಕ ಶೀಲದ ಬಗ್ಗೆಯೂ ಚಿಂತಿಸಿದರು. ಜಾತಿಪದ್ಧತಿಯನ್ನು ಉಳಿಸಿಕೊಂಡೇ ಸಮಾನತೆಯ ಕನಸನ್ನು ಗಾಂಧೀಜಿ ಕಂಡರೆ, ಕಮ್ಯುನಿಷ್ಟರು ಜಾತಿ ಪದ್ಧತಿಯ ಬಗ್ಗೆ ತುಟಿ ಪಿಟ್ಟೆನ್ನದೇ ಉಚ್ಚಜಾತಿಯ ನಾಯಕತ್ವದಲ್ಲಿ ಬರೀ ವರ್ಗ ಹೋರಾಟದ ತುತ್ತೂರಿ ಊದಿ ಭಾರತದ ದಲಿತರಿಗೆ ಪರಕೀಯರಾಗೇ ಉಳಿದರು. ಆದರೆ ಲೋಹಿಯಾ ಜಾತಿಪದ್ಧತಿ ಮತ್ತು ಅರ್ಥವ್ಯವಸ್ಥೆ ಯಾವ ರೀತಿ ತಳುಕಿ ಹಾಕಿಕೊಂಡಿದೆ ಎಂಬುದನ್ನು ವಿಶ್ಲೇಷಿಸಿ ಜಾತಿ ಮತ್ತು ವರ್ಗವ್ಯವಸ್ಥೆಯ ವಿರುದ್ಧ ಏಕಕಾಲಕ್ಕೆ ಸಮರವನ್ನು ಘೋಷಿಸಿದರು.

ಆದರೆ ಲೋಹಿಯಾರ ನೆನಪಾದಾಗ, ಅವರ ಸಿದ್ಧಾಂತಕ್ಕೆ ಒದಗಿಬಂದಿರುವ ದುಃಸ್ಥಿತಿ ನೆನಿಸಿಕೊಂಡಾಗ ಕರುಳು ಚುರ್ರೆನ್ನುತ್ತದೆ. ಸಾಮಾಜಿಕ -ಆರ್ಥಿಕ-ಸಾಂಸ್ಕೃತಿಕ ವಲಯಗಳಲ್ಲಿ ಏಕಕಾಲಕ್ಕೆ ಆಗಬೇಕಾದ ಬದಲಾವಣೆ ಬಗೆಗಿನ ಲೋಹಿಯಾರ ಅಭಿಪ್ರಾಯಗಳು, ಅವರ ಸಮಗ್ರ ಸಿದ್ಧಾಂತದ ಐತಿಹಾಸಿಕ ಚೌಕಟ್ಟಿನಲ್ಲಿಟ್ಟು ವಿಶ್ಲೇಷಿಸಿದಾಗಲೇ ಮಾನವೀಯ ಮೌಲ್ಯಗಳನ್ನು ಧ್ವನಿಸಬಲ್ಲವು. ಆದರೆ ಅವರ ಅಭಿಪ್ರಾಯಗಳನ್ನು ಅವರ ಸೈದ್ಧಾಂತಿಕ ಚೌಕಟ್ಟಿನಿಂದ ಎಬ್ಬಿಕೊಂಡು ಪ್ರತ್ಯೇಕವಾಗಿ ಅರ್ಥೈಸಿ ತಮ್ಮ ತಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಂಡು ಲೋಹಿಯಾ ಸಿದ್ಧಾಂತಕ್ಕೆ ಕಪ್ಪು ಮಸಿ ಬಳಿದ, ಬಳಿಯುತ್ತಿರುವ ದುರಂತ ಉದಾಹರಣೆಗಳೇ

ಸಮಗಿಂದು ಹೆಚ್ಚಿನ ಪ್ರಮಾಣದಲ್ಲಿ ಕಾಣಸಿಗುತ್ತವೆ. ಈ ಪ್ರತ್ಯೇಕತಾ ಧೋರಣೆಯ ಕವಾಯತು ಕರ್ನಾಟಕದ ಸಂದರ್ಭದಲ್ಲಂತೂ ತನ್ನ ಪರಾಕಾಷ್ಠೆ ತಲುಪಿದೆ ಎನಿಸುತ್ತದೆ. ಇಲ್ಲಿ ಲೋಹಿಯಾವಾದ ಮಧ್ಯಮ ಜಾತಿಗಳ ತುತ್ತೂರಿಯಾಗಿ ಮಾರ್ಪಟ್ಟಿದೆ. ಆ ವಾದವನ್ನು ಬರಿ ಬ್ರಾಹ್ಮಣ ವಿರೋಧಿ, ಕಮ್ಯುನಿಷ್ಟ್ ವಿರೋಧಿ ವಾದವನ್ನಾಗಿ ಮಂಡಿಸಿ ಹೇಯ ರೀತಿಯ ಅಕರಾಳ ವಿಕರಾಳತೆಗೆ ಈಡು ಮಾಡಿದೆ.

ಇನ್ನು ಸಮಾಜವಾದಿ ನಾಯಕರಾಗಿದ್ದ ಜೆ.ಎಚ್. ಪಟೇಲ ಅರಸರ ಹಿಂಬಾಲಕರಾಗಿ, ಬಂಗಾರಪ್ಪ, ಕಾಗೋಡು ತಿಮ್ಮಪ್ಪ, ಕೋಣಂದೂರ ಲಿಂಗಪ್ಪ ಕೊಲೆಗಡುಕ ಇಂದಿರಾಳ 'ಕೈಕವಡೆ'ಯಾಗಿ 'ಸಮಾಜವಾದಿಗಳ ಹಣೆಬರಹ ಇಷ್ಟೆ' ಎಂದು ಜನ ಗಾದೆ ಕಟ್ಟಲು ಪ್ರೇರೇಪಿಸುವಂಥ ಅಸಹ್ಯಕರ ಪಕ್ಷಾಂತರ ಕೃತ್ಯ ಎಸಗಿದ್ದಾರೆ. ಹೋರಾಟದ ಫಲ ಕ್ಷೀಣಿಸಿದಾಗ ಈ ಥರದ ಹೇಯ ಬದಲಾವಣೆ ನುಗ್ಗಿ ಬಿಡುತ್ತದೆ. ಅವರೆಲ್ಲ ಆ ಥರ ಮಾಡುವುದಕ್ಕಿಂತ ಆತ್ಮಹತ್ಯೆ ಮಾಡಿಕೊಂಡಿದ್ದರೆ, ಅವರನ್ನು ಕ್ಷಮಿಸಬಹುದಿತ್ತೇನೋ!

ಇತ್ತೀಚೆಗೆ ಸಂಜಯಗಾಂಧಿ ಸತ್ತ ಸುದ್ದಿ ಎಲ್ಲ ಪತ್ರಿಕೆಗಳ ಮುಖಪುಟದಲ್ಲಿ ಬಂದಾಗ, ಆ ಸುದ್ದಿಯಲ್ಲಿ 'ರಾಮಮನೋಹರ ಆಸ್ಪತ್ರೆ' ಎಂಬುದು ೨೦-೩೦ ಸಾರಿ ಇದ್ದುದ್ದನ್ನು ನೋಡಿ ನಾನು ಒಂದು ನಮೂನೆ ನಿಟ್ಟುಸಿರುಬಿಟ್ಟೆ. ಈ ನಿಟ್ಟುಸಿರು ಲೋಹಿಯಾವಾದಕ್ಕೆ, ಲೋಹಿಯಾ ಹೆಸರಿಗೆ ಭಾರತದಲ್ಲಿ ಒದಗಿರುವ ದುರಂತದ ದಾಖಲೆಯೇನೋ!

ಸ್ವಾರ್ಥಿಗಳ, ರಕ್ತಪಿಪಾಸಿಳ ಹಿಗ್ಗಾಮುಗ್ಗಾ ಎಳೆತಕ್ಕೆ ಸಿಕ್ಕು ಚಿಂದಿ ಚಿಂದಿಯಾಗಿರುವ ಲೋಹಿಯಾ ವ್ಯಕ್ತಿತ್ವವನ್ನು, ಲೋಹಿಯಾವಾದವನ್ನು ಜೋಡಿಸುವ, ಇನ್ನಷ್ಟು ರಕ್ತಮಾಂಸ ತುಂಬಿ ಮುನ್ನಡೆಸಿಕೊಂಡು ಹೋಗುವ ಜವಾಬ್ದಾರಿ ಮತ್ತೆ ಯುವಕರ ಮೇಲಿದೆ. "ನಮ್ಮ ಜನಪ್ರಿಯತೆಯನ್ನು ಪಣಕ್ಕೊಡ್ಡಿ ಸತ್ಯವನ್ನು ಹೇಳಬೇಕು" ಮತ್ತು "ಕಣ್ಣೆದುರಿಗೆ ಅನ್ಯಾಯ ನಡೆದಾಗ ಪ್ರತಿಭಟಿಸದಿದ್ದರೆ ನಾವೂ ಆ ದುಸ್ಸಾಹಸದಲ್ಲಿ ಪಾಲುದಾರರಾಗುತ್ತೇವೆ" ಎಂಬ ಲೋಹಿಯಾರ ನೆತ್ತರ ಮಾತುಗಳನ್ನು ನೆನೆಸಿಕೊಂಡು, ಸ್ವವಿಮರ್ಶೆ ಮಾಡಿಕೊಂಡು ಲೋಹಿಯವಾದಿಗಳು ಮಾನವಪ್ರೇಮಿ ಲೋಹಿಯಾರನ್ನು ಮತ್ತೆ ಜೀವಂತ ಮಾಡಬೇಕಾಗಿದೆ. ದುಡಿಯುವ ದಲಿತ ಜನತೆಗೆ ಅವರ ವಾದವನ್ನು ತಲುಪಿಸಿ ಹೋರಾಟಕ್ಕೆ ಅಣಿಗೊಳಿಸಬೇಕಾಗಿದೆ. ಲೋಹಿಯಾ ಅಂಬೇಡ್ಕರ್ ಪೆರಿಯಾರ್ ಇವರ ತಾತ್ವಿಕ ಸಂಗಮಕ್ಕೆ ಮಾತ್ರ ಭಾರತದ ದಲಿತರಿಗೆ ವಿಮೋಚನೆಯನ್ನು ತಂದುಕೊಡುವ ತಾಕತ್ತಿದೆ.

–ವಿಜಯ ಪಾಟೀಲ

ವರ್ಗ ಹೋರಾಟದ ವೈಫಲ್ಯ ಮನದಟ್ಟು....

ಮೊದಲಿನಿಂದಲೂ ಸಮಾಜವಾದಿ ಸಿದ್ಧಾಂತದಲ್ಲಿ ಆಸಕ್ತಿಯಿರುವ ನನಗೆ ಲೋಹಿಯಾರ ವಿಚಾರಧಾರೆಗಳು ಹಿಡಿಸಿದ್ದು ಮಹತ್ವದ್ದೇನಲ್ಲ. ಆದರೆ ಮೊದಮೊದಲಿಗೆ ಮಾರ್ಕ್ಸ್‌ನ ಸಿದ್ಧಾಂತ ಆಕರ್ಷಿಸಿತ್ತಾದರೂ ನಂತರ ಇಂಡಿಯಾದ ಪರಿಸರದಲ್ಲಿ ಅದು ಹೇಗೆ ವಿಫಲಗೊಳ್ಳುತ್ತದೆ ಎಂದು ಮನವರಿಕೆಯಾಗುವ ಹೊತ್ತಿಗೆ ಲೋಹಿಯಾ ತೀರ ಹತ್ತಿರವಾಗಿದ್ದರು. ಅನೇಕ ಸಮಾಜವಾದಿಗಳಿಗೆ ಈ ರೀತಿಯ ಅನುಭವವಾಗಿರುವುದು ಬಹುಶಃ ಈ ದೇಶದಲ್ಲಿ ಸಮಾಜವಾದಿಗಳಿಗಿಂತ ಕಮ್ಯುನಿಸ್ಟರು ತಮ್ಮ ಪ್ರಚಾರ ಕಾರ್ಯದಲ್ಲಿ ಮುಂದಿರುವುದೇ ಕಾರಣವಿರಬೇಕು.

ಇಲ್ಲಿನ ಸಮಸ್ಯೆಗಳಿಗೆ ಮಾರ್ಕ್ಸ್‌ನ ಸಿದ್ಧಾಂತಕ್ಕಿಂತ ಸಮಾಜವಾದಿ ತತ್ವಗಳು ಹೇಗೆ ತೀರಾ ಹತ್ತಿರವಾಗುತ್ತವೆ ಎಂಬುದನ್ನು ಸಮಾಜವಾದಿ ಚಳುವಳಿ ಜನತೆಗೆ ಮನದಟ್ಟು ಮಾಡಿಕೊಡುವಲ್ಲೇ ಹಿಂದುಳಿದಿರುವುದೇ ಸಮಾಜವಾದೀ ಪಕ್ಷದ ಚಳವಳಿ ಕುಂಠಿತವಾಗಲು ಕಾರಣವಾಗಿರಬೇಕು. ಆದರೆ ಇಂಡಿಯಾದ ಸಮಸ್ಯೆಗಳನ್ನು ಐತಿಹಾಸಿಕ ಹಿನ್ನೆಲೆಯಲ್ಲಿ ವಿಶ್ಲೇಷಿಸಿ ಅವುಗಳಿಗೆ ಅತ್ಯಂತ ಸೂಕ್ತವಾದ ಪರಿಹಾರೋಪಾಯವನ್ನು ಸೂಚಿಸಿದವರೆಂದರೆ ಡಾ. ರಾಮಮನೋಹರ ಲೋಹಿಯಾ ಒಬ್ಬರೇ. ಇಲ್ಲಿನ ಪರಿಸರದಲ್ಲಿ ಮಾರ್ಕ್ಸ್ ಸೂಚಿಸಿದ ವರ್ಗ ಹೋರಾಟ ಹೇಗೆ ವಿಫಲವಾಗುತ್ತದೆ ಎಂಬುದನ್ನು ಮನದಟ್ಟು ಮಾಡಿಕೊಡುವಲ್ಲಿ ಡಾ.ಲೋಹಿಯಾ ಸಫಲರಾಗಿದ್ದಾರೆ.

ಭಾಷೆ, ವರ್ಗ, ಹೋರಾಟ, ವಿಕೇಂದ್ರೀಕರಣ, ಸ್ವಾತಂತ್ರ್ಯ ಇತ್ಯಾದಿಗಳ ಬಗ್ಗೆ ಡಾ. ಲೋಹಿಯಾ ವಿಚಾರಧಾರೆಗಳನ್ನು ಚರ್ಚಿಸುವುದಕ್ಕಿಂತ ಅವರು ಪ್ರತಿಪಾದಿಸಿದ ಒಂದೆರಡು ಹೊಸ ಯೋಜನೆಗಳನ್ನು ಓದುಗರ ಗಮನಕ್ಕೆ ತರುವುದು ಸೂಕ್ತವೆನ್ನಿಸುತ್ತದೆ. (ಏಕೆಂದರೆ ಡಾ. ಲೋಹಿಯಾ ವಿಚಾರಧಾರೆಗಳ ಬಗ್ಗೆ ಲೇಖನ ಬರೆಯುವುದು ಈ ಟಿಪ್ಪಣಿಯ ಉದ್ದೇಶವಲ್ಲ)

ಜಾತೀಯತೆಯ ನಿರ್ಮೂಲನಕ್ಕೆ ದಾರಿ ಮಾಡಿಕೊಡುವ ಹಿಂದುಳಿದ ವರ್ಗಗಳ ಮೀಸಲಾತಿಯ ತತ್ವವನ್ನು ಮೊದಲು ಪ್ರತಿಪಾದಿಸಿದವರು ಡಾ. ಲೋಹಿಯಾ. ಅಲ್ಲದೆ ಇಂಡಿಯಾದಲ್ಲಿ ತೀರ ಕೀಳು ದರ್ಜೆಯ ನೌಕರಿಯೆಂದು ಭಾವಿಸಿರುವ ಪೋಲೀಸ್ ಪೇದೆಗಳಿಗೆ ತಮ್ಮ ನೌಕರಿಯ ಘನತೆಯನ್ನು ಹೆಚ್ಚಿಸಿಕೊಳ್ಳಲು ಸಂಘ ಸ್ಥಾಪನೆಯ ಹಕ್ಕನ್ನು ಪ್ರತಿಪಾದಿಸಿ ಮತ್ತು ಪೋಲೀಸರನ್ನು ಈ ದಿಶೆಯಲ್ಲಿ ಸಂಘಟಿಸಿದವರು ಡಾ. ಲೋಹಿಯಾ ಒಬ್ಬರೇ.

ಎಲ್ಲ ವೈಭವ ಹಾಗೂ ವ್ಯರ್ಥತೆಗಳನ್ನು ವಿರೋಧಿಸಿದ್ದ ಅವರು ಶಾಸಕರು, ಮಂತ್ರಿಗಳು ಹಾಗೂ ಸಾರ್ವಜನಿಕ ಜೀವನದಲ್ಲಿನ ವ್ಯಕ್ತಿಗಳು ಸರಳ ಜೀವನ ನಡೆಸಲೇಬೇಕಾಗಿರುವ ಅನಿವಾರ್ಯತೆಯನ್ನು ಒತ್ತಿ ಹೇಳುತ್ತಿದ್ದರು. ಯಾವುದೇ

ಬದಲಾವಣೆಗೆ ಸಂಘಟನೆ ಎಷ್ಟು ಮುಖ್ಯ ಎನ್ನುವುದನ್ನು ಅವರ ಅನುಯಾಯಿಗಳಾದ ಸಮಾಜವಾದಿಗಳು ಇನ್ನೂ ಅರಿಯಬೇಕಾಗಿದೆ. ದೇಶದ ಉದ್ದಗಲಕ್ಕೂ ಹರಿದು ಹಂಚಿಹೋಗಿರುವ ಸಮಾಜವಾದಿಗಳು ಈ ದೇಶದ ಸಮಸ್ಯೆಗಳ ಭೀಕರತೆಯನ್ನು ಅರ್ಥ ಮಾಡಿಕೊಂಡು ಅವುಗಳ ಸಮರ್ಥ ಪರಿಹಾರಕ್ಕಾಗಿ ಸುಸಂಘಟಿತರಾಗಿ ಶ್ರಮಿಸುವುದು ಅತ್ಯಾವಶ್ಯಕವಾಗಿ ಆಗಲೇಬೇಕಾಗಿರುವ ಅಂಶ.

–ಎಂ. ಮುಕುಂದ

ಅಡಿಗರ ಮೂಲಕ ಲೋಹಿಯಾ

ಕಳೆದ ಶತಮಾನದ ಸ್ವಾತಂತ್ರ್ಯ ಪೂರ್ವ ಮತ್ತು ನೆಹರೂ ಕಾಲದ ರಾಜನೀತಿಗೆ ಪರ್ಯಾಯವಾಗಿ ಸಮಾಜವಾದದ ರಾಜನೀತಿಯನ್ನು ರೂಪಿಸಿದವರು ಲೋಹಿಯಾರವರು. ಮತ್ತು ಸಾಂಸ್ಕೃತಿಕ ನಾಯಕತ್ವದ ಮುಂಚೂಣಿಯ ಚಿಂತಕರಲ್ಲಿ ಪ್ರಮುಖರು. ಅವರ ಬದುಕು ಬರಹ ಎಬ್ಬಿಸಿದ ಸಮಾಜವಾದಿ ಅಲೆ ಅಂದಿನ ಕನ್ನಡದ ಸೃಜನಶೀಲತೆಯನ್ನು ಪ್ರಭಾವಿಸಿತು. ಅದು ನವ್ಯ ಸಂದರ್ಭದ ಸಾಹಿತ್ಯದಲ್ಲಿ ಗೋಚರವಾದದ್ದು ಇತಿಹಾಸ.

ಈ ದಿಕ್ಕಿನಲ್ಲಿ ನಾಡನ್ನು ಕಟ್ಟುವ ಸಂವೇದನೆಯನ್ನು ಪರಿಭಾವಿಸಿ ಕನ್ನಡದಲ್ಲಿ ಮೊದಲು ಕಾಣಿಸಿದ್ದು ಕವಿ ಎಂ. ಗೋಪಾಲಕೃಷ್ಣ ಅಡಿಗರು. 'ಕಟ್ಟುವೆವು ನಾವು' ಕವಿತೆಯಲ್ಲಿ:

ಇರುವೆಲ್ಲವನು ಎಲ್ಲ ಜನಕೆ ತೆರವಾಗಿಸುವ

ಸಮಬಗೆಯ ಸಮಸುಖದ ಸಮದು:ಖದ

ಸಾಮರಸ್ಯದ ಸಾಮಗಾನಲಹರಿಯ ಮೇಲೆ

ತೇಲಿಬರಲಿದೆ ನೋಡು, ನಮ್ಮ ನಾಡು

ಎಂದು ಹಾಡಿದರು. ಲೋಹಿಯರವರ ಸಮಾಜವಾದದ, ಸಮಾನತೆಯ ಪರಿಕಲ್ಪನೆಯನ್ನು ತಮ್ಮ ಕಾವ್ಯ, ಲೇಖನಗಳ ಮೂಲಕ ಯುವಜನತೆಯ ಮನಸ್ಸಿನಲ್ಲಿ ಬಿತ್ತಿದವರು ಅಡಿಗರು.

ಈ ದೇಶದ ಅರ್ಬುದ ರೋಗವಾದ ಜಾತಿಯತೆಯನ್ನು ತೊಲಗಿಸಿದಲ್ಲದೆ ಅನ್ಯಮಾರ್ಗವಿಲ್ಲ ಎಂದು, ಅದಕ್ಕಾಗಿ ಶ್ರಮಿಸಿದ ಲೋಹಿಯಾರವರ ತತ್ತ್ವ ಪ್ರಣಾಳಿಕೆಯನ್ನು ಅಡಿಗರು:

ನಾವೆಲ್ಲರು ಒಂದೇ ಜಾತಿ, ಒಂದೇ ಮತ, ಒಂದೇ ಕುಲ;

ನಾವು ಮನುಜರು;

ನರರ ನಡುವಿನಡ್ಡಗೋಡೆಗಳನು ಕುಟ್ಟಿ ಕೆಡಹುವೆವು.

ನಾವು ವಿಲಯರುದ್ರರು!

ಹೊಸ ಬಾಳಿನ ಹೊಸ ಸಮತೆಯ ಸಮರಸವನು ಸಮೆವೆವು,

ನಾವು ನವವಿಧಾತರು!

ಎಂಬುದಾಗಿ ಕರೆ ಕೊಟ್ಟರು. ಇವುಗಳ ಓದು ನನ್ನಂಥವನನ್ನು ಲೋಹಿಯ ಚಿಂತನೆಯ ಕಡೆಗೆ ಸೆಳೆದುಕೊಂಡಿತು. ಅದರ ಫಲವಾಗಿ ಸಮಾನತೆಗೆ ನಮ್ಮನ್ನು ತೆತ್ತುಕೊಂಡೆವು. ನಮ್ಮ ಮಕ್ಕಳಲ್ಲೂ ಅದರ ಬೀಜ ಬಿತ್ತಿದುದರ ಕಾರಣದಿಂದ ನಮ್ಮ ಮನೆಯಲ್ಲೂ ಅಂತರ್‌ಜಾತಿಯ ವಿವಾಹ ಸಾಧ್ಯವಾಯಿತಲ್ಲಾ ಎಂಬುದು ತೃಪ್ತಿಯನ್ನು ಕೊಟ್ಟಿದೆ. ಅಲ್ಲದೆ ನನ್ನ ಕಾವ್ಯ, ನಾಟಕಗಳಲ್ಲಿ ಲೋಹಿಯ ಕಾಣಿಸಿಕೊಂಡಿರುವುದು ಅವರ ದರ್ಶನದ ಪರಿಭಾವನೆಯಲ್ಲಿ. ಕಳೆದ ಶತಮಾನದ ಮಧ್ಯಭಾಗದ ಕಾಲ ಘಟ್ಟದಲ್ಲಿ, ಹೆಚ್ಚಾಗಿ ನವ್ಯ ಸಂದರ್ಭದ ಕನ್ನಡ ಮುಖ್ಯ ಸೃಜನಶೀಲ ಮನಸ್ಸುಗಳ ಪ್ರಮುಖ ಕಾಳಜಿಯಾಗಿತ್ತಲ್ಲಾ 'ಸಮಾಜವಾದ'; ಅದು ಲೋಹಿಯಾ ಚಿಂತನೆಗಳಿಂದ ಎಂಬುದು ಮುಖ್ಯ ಸಂಗತಿ.

–ಸತ್ಯನಾರಾಯಣರಾವ್ ಅಣತಿ

ಆಧುನಿಕ ಪುರಾಣ ಪುರುಷ

ರಾಮ ಮನೋಹರ ಲೋಹಿಯಾ ನನ್ನಂತಹ ಸಾಮನ್ಯ ಭಾರತೀಯನಿಗೆ ಯಾಕೆ ಮಹತ್ವದ ದಾರ್ಶನಿಕರಾಗಿ ಕಾಣುತ್ತಾರೆಂದರೆ,

೧. ಅವರು ಮನುಷ್ಯನ ಖಾಸಗಿ ಬದುಕನ್ನು ಗೌರವಿಸುತ್ತಿದ್ದರು. ಆದರೆ ಅದೊಂದೇ ಮನುಷ್ಯನ ಏಕೈಕ ಅಸ್ತಿತ್ವವಲ್ಲವೆಂದೂ, ಸಾರ್ವಜನಿಕ/ಸಂಘಟನಾತ್ಮಕ ಭೂಮಿಕೆಯೂ ಇದೆಯೆಂದೂ ಹೇಳಿದ್ದರು. ಇದು ವಿಕೃತ ತಾರತಮ್ಯಗಳಿಂದಾಗಿ ಏಕಾಂಗಿ ದ್ವೀಪಗಳಂತಾಗಿರುವ ವ್ಯಕ್ತಿ ಮತ್ತು ಸಮುದಾಯಗಳಲ್ಲಿ ಚಲನೆಯುಂಟು ಮಾಡಿ ಮನುಕುಲದ ವಿಶಾಲತೆಯತ್ತ ಮುನ್ನಡೆಸುತ್ತದೆ ಎಂದವರು ನಂಬಿದ್ದರು.

೨ ತಾವು ಚಿತ್ರಿಸಿದ ರಾಮ, ಕೃಷ್ಣ, ಶಿವರಂತೆ ಭಾರತದ ಭೂಗೋಳವನ್ನು ವ್ಯಾಪಕವಾಗಿ ಸಂಚರಿಸಿದ ಲೋಹಿಯಾ, ಭಾರತದ ಚರಿತ್ರೆ, ಪುರಾಣ, ಸಂಸ್ಕೃತಿ

ಎಲ್ಲವನ್ನೂ ತಮ್ಮ ಕಾಲಕ್ಕೆ ಆವಾಹಿಸಿಕೊಳ್ಳುತ್ತಾ; ಭಾರತದ ಸಾಂಸ್ಕೃತಿಕ, ಆಧ್ಯಾತ್ಮಿಕ ಏಕತೆಯ ಕಾಲಾಂತರದ ಪ್ರಯತ್ನಗಳನ್ನು ಆಧುನಿಕಕ್ಕೆ ಬೆಸೆಯುತ್ತಾ ಗಾಂಧೀಜಿ ನಂತರ ಭಾರತದ ಏಕತೆಯ ಕನಸು ಕಂಡ ಆಧುನಿಕ ಪುರಾಣ ಪುರುಷರಾಗಿದ್ದಾರೆ.

೩. 'ಗಾಂಧೀಜಿ ಭಾರತದ ಸಂಕೇತ' ಎಂಬಂಥ ವಿಶೇಷ ನೋಟಗಳ ಮೂಲಕ ಗಾಂಧೀಜಿಯವರ ಮಹತ್ವವನ್ನು ದಾಖಲಿಸುತ್ತಾ ಗಾಂಧಿ ನಂತರದ ಭಾರತಕ್ಕೆ ಗಾಂಧಿಯನ್ನು ಪರಿಚಯಿಸುವ ದರ್ಶನಾತ್ಮಕ ವಿಶ್ಲೇಷಣೆಗಳ ಮೂಲಕವೇ ತಮ್ಮ ಕಾಣ್ಕೆಯ ಸಮಾಜವಾದವನ್ನು ರೂಪಿಸುತ್ತಾ ಹೋಗುವ ಲೋಹಿಯಾ, ಜಗತ್ತಿಗೆ ರಾಜಕೀಯದ ಹೊಸ ಕಾಣ್ಕೆಯೊಂದನ್ನು ನೀಡಬಲ್ಲವರಾಗಿದ್ದರು.

೪. ಎಲ್ಲರಿಗಿಂತ ಭಿನ್ನವಾದ ಸಾಹಸೀ ಕನಸುಗಳನ್ನು ಕಾಣಬಲ್ಲವರಾಗಿದ್ದ ಲೋಹಿಯಾ, ಅಣ್ವಸ್ತ್ರ ತುಂಬಿದ ಭವಿಷ್ಯದ ವಿಶ್ವ ಕುರಿತು ಕಳವಳಗೊಂಡಿದ್ದರು. ಅದಕ್ಕೆ ವಿಶ್ವ ಸರ್ಕಾರದ ಹಾಗೂ ಗಡಿಗಳಿಲ್ಲದ ರಾಷ್ಟ್ರದ ಯಾರೂ ಕಾಣದ ಕನಸು ಕಂಡಿದ್ದರು.

೫. ಭಾರತವನ್ನೂ ಒಳಗೊಂಡು ಜಗತ್ತಿನ ವಿಭಿನ್ನ ಸಂಸ್ಕೃತಿಗಳ ಆಂತರಿಕ ಸ್ವಾಯತ್ತತೆಯನ್ನು ಅರಿಯಬಲ್ಲವರಾಗಿದ್ದ ಲೋಹಿಯಾ, ಆ ಸಂಸ್ಕೃತಿಗಳ ಬದುಕು, ಭಾಷೆ, ಜನಪದ, ಪುರಾಣ, ಮಹಾಕಾವ್ಯ, ಭೂಮಿ, ಬೆಟ್ಟ, ನದಿ, ಕಾಡುಗಳು ಈ ಎಲ್ಲವನ್ನೂ ಕಡು ಮೋಹಿಯಂತೆ ಧ್ಯಾನಿಸುತ್ತ, ಈ ಸಂಸ್ಕೃತಿಗಳ ರಾಜಕಾರಣವನ್ನಾಗಿ ರೂಪಿಸಬಲ್ಲವರಾಗಿದ್ದರು.

೬. ಗಾಂಧೀಜಿ ನಂತರ ಭಾರತೀಯ ಜನಭಾಷಾ ಆಂದೋಲನದ ಪ್ರವರ್ತಕರಾಗಿದ್ದ ಲೋಹಿಯಾ ಅವರು ಸಂಘಟಿಸಿದ್ದ 'ಇಂಗ್ಲಿಷ್ ತೊಲಗಿಸಿ' ಆಂದೋಲನ ಇಂದು ನೆಲ ಕಚ್ಚಿರುವಾಗ ಭಾರತದ ಜನಭಾಷೆಗಳ ಉತ್ಕರ್ಷದ ಕುರಿತ ಅವರ ಚಿಂತನೆ ಎಲ್ಲ ಭಾಷೆಗಳ ಕುರಿತ 'ದರ್ಶನ'ದಂತಿದ್ದು, ನಮ್ಮನ್ನು ಮತ್ತೆ ಮತ್ತೆ ಕ್ರಿಯಾಶೀಲಗೊಳಿಸುವಂತಿರುವುದು.

೭. ತಮ್ಮ 'ವಸಿಷ್ಠರು ಮತ್ತು ವಾಲ್ಮೀಕಿಯರು' ಲೇಖನದ ಮೂಲಕ ನೆಹರೂ ಪ್ರಭುತ್ವದ ಆಂತರ್ಯದ ಜಾತೀಯತೆ, ಕ್ರೌರ್ಯವನ್ನು ಬಯಗೆಳೆವ ಲೋಹಿಯಾ; ರಾಷ್ಟ್ರಹಿತವನ್ನಷ್ಟೇ ಗುರಿಯಾಗಿಟ್ಟು ಅಂಬೇಡ್ಕರರ ನಾಯಕತ್ವದಲ್ಲಿ ರಾಜಕಾರಣದ ಹೊಸ ಶಕೆಯೊಂದನ್ನು ಆರಂಭಿಸಲು ಹಾತೊರೆವ ಲೋಹಿಯಾ; ಪೆರಿಯಾರರ ಬಂಧನವಾದಾಗ ಅವರನ್ನು ಭೇಟಿ ಮಾಡಿ, ಅವರ ಚಳುವಳಿಯು 'ಹಿಂಸೆ'ಯ ಮಾರ್ಗವನ್ನು ಬಿಟ್ಟುಬಿಡಬೇಕೆಂದು ಸೂಚಿಸುವ ಲೋಹಿಯಾ, ಆಧುನಿಕ ಭಾರತ ಕಂಡ ನಿಜ ರಾಷ್ಟ್ರ ನಾಯಕರಾಗಿದ್ದಾರೆ, ದ್ರಷ್ಟಾರರಾಗಿದ್ದಾರೆ.

–ಕೆ.ಪಿ.ನಟರಾಜ

ಪದ್ಯ ಬರೆಸಿದ ಲೋಹಿಯಾ!

ಲೋಹಿಯಾ ಓದು ನನ್ನಿಂದ ಈ ಪದ್ಯವನ್ನು ಬರೆಸಿತು:

ರಾಮ ಕೃಷ್ಣ ಶಿವ
ಕಚ್ಚಿ ರುಚಿ ನೋಡಿದ
ಹಣ್ಣಿಗೆ ತುಟಿ ಹಚ್ಚಿದನಲ್ಲ
ಆ ರಾಮ
ನನಗೆ ಪ್ರಿಯನಾಗಲಿ.

ಒಂದಗಳು ಅನ್ನವನೆ
ಉಕ್ಕಿಸಿ
ಹಸಿವಿನ ಸೊಕ್ಕಡಗಿಸಿದನಲ್ಲ
ಆ ಕೃಷ್ಣ
ನನಗೆ ಪ್ರಿಯನಾಗಲಿ.

ಸತ್ತು ಒರಗಿದ ಸತಿಯ
ಹೊತ್ತು ತಿರುಗಿದನಲ್ಲ
ಅತ್ತು ಸೊರಗಿದನಲ್ಲ
ಆ ಶಿವ
ನನಗೆ ಪ್ರಿಯನಾಗಲಿ.

–ಸವಿತಾ ನಾಗಭೂಷಣ

ಅಪ್ಪನ ಮೂಲಕ ಲೋಹಿಯಾ

ವೈಚಾರಿಕತೆ ಮತ್ತು ವೈಯಕ್ತಿಕ ಬದುಕಿನ ಅಂತರವನ್ನು ಅತೀ ಕಡಿಮೆಗೊಳಿಸಿಕೊಂಡು ಬದುಕಿದ ನನ್ನ ತಂದೆ ಕೆ.ರಾಮದಾಸ್ ಮುಖೇನ ನಾನು ಲೋಹಿಯಾ ವಾದವನ್ನು ಕೇಳಿದ್ದು –ಅರಿತದ್ದು ಮತ್ತು ಕಲಿತದ್ದು.

ಭಾರತದ ಸಂವಿಧಾನ ಜಾತ್ಯತೀತತೆಯನ್ನು ಸಾರಿದರೂ, ಬಹುಪಾಲು ಅಕ್ಷರಸ್ಥ–ವಿದ್ಯಾವಂತ ಭಾರತೀಯರೂ ಅದನ್ನು ಲೆಕ್ಕಕ್ಕೇ ಇಟ್ಟುಕೊಳ್ಳುವುದಿಲ್ಲ. ಹುಟ್ಟಿನಿಂದ ಜಾತ್ಯತೀತವಾಗಿ ಬೆಳೆಯುವುದು ಈ ದೇಶದ ಮಕ್ಕಳ ಮಟ್ಟಿಗೆ ಇನ್ನೂ ಕನಸಿನ ಮಾತು. ಆದರೆ ಲೋಹಿಯಾರಿಂದ ಪ್ರಭಾವಿತರಾದ ನನ್ನ ತಂದೆ–ತಾಯಿ ನನ್ನನ್ನು ಅದೇ ಜಾತ್ಯತೀತ ಆಶಯದಿಂದ ಬೆಳೆಸಿದ್ದಕ್ಕೆ ನಾನವರಿಗೆ ಚಿರಋಣಿ.

ನನಗೆ ಯಾವುದೇ ಧರ್ಮದ-ಜಾತಿಯ ಹಂಗಿಲ್ಲದ್ದರಿಂದ ನನ್ನ ದೇಶದ ಸಂವಿಧಾನದ ಪುಟಗಳಲ್ಲಿ ದಾಖಲಾಗಿರುವ ಜಾತ್ಯತೀತತೆ-ಸಮಾನತೆ-ಭ್ರಾತೃತ್ವಗಳೇ ಆದರ್ಶಗಳಾದವು. ಹಾಗಾಗಿಯೇ ನಾನು ಭಾರತೀಯಳಾಗಿದ್ದೇನೆ. ನಿಜವಾದ ಅರ್ಥದಲ್ಲಿ ಲೋಹಿಯಾ ಹೀಗೆ ನನ್ನ ಬದುಕಿನ ಅಂಗವಾಗಿದ್ದಾರೆ.

ಅಪ್ಪ ಮತ್ತವರ ಆಪ್ತ ಗೆಳೆಯರ ಬಳಗ ಸೇರಿದಾಗಲೆಲ್ಲಾ ಜಾತಿವಿನಾಶ-ಸಮಾಜವಾದ-ಅಂತರ್ಜಾತಿ ವಿವಾಹ- ಸರಳ ಜೀವನ ಶೈಲಿ-ಮಾತೃಭಾಷಾ ಶಿಕ್ಷಣ ಹೀಗೆ ಲೋಹಿಯಾವಾದದ ಅನೇಕ ಮಜಲುಗಳನ್ನು ಕುರಿತು ಚರ್ಚಿಸುತ್ತಿದ್ದರು. ಈ ಆಶಯಗಳನ್ನೇ ಹೊತ್ತು ಅನೇಕಾನೇಕ ಚಳವಳಿಗಳನ್ನು ಕೈಗೊಳ್ಳುತ್ತಿದ್ದರು. ನಮ್ಮ ಮನೆ ಅಂತರ್ಜಾತಿ ವಿವಾಹಕ್ಕೆ ಸದಾ ವೇದಿಕೆಯಾಗಿರುತ್ತಿತ್ತು. ಹೀಗೆ ನಿರಂತರವಾಗಿ ಲೋಹಿಯಾವಾದದ ವಾತಾವರಣದಲ್ಲೇ ಬೆಳೆದ ನನಗೆ ಲೋಹಿಯಾ ಭಾರತದ ಸಂಕೀರ್ಣತೆಗೆ ಉತ್ತರವಾಗುತ್ತಾ ಹೋದರು. ಲೋಹಿಯಾವಾದ-ಗಾಂಧೀವಾದ-ಅಂಬೇಡ್ಕರ್ ಅನಿವಾರ್ಯ ಮತ್ತು ಸದಾ ಪ್ರಸ್ತುತವೆನಿಸಿದರು. ನಿಜಕ್ಕೂ, ಸಂಪೂರ್ಣ ಭಾರತೀಯತೆ-ಜಾತ್ಯತೀತತೆ ಕೊಡುವ ಅನುಭವ, ಭಾರತೀಯತೆಯ ಪುಳಕ ವಿಶಿಷ್ಟವಾದುದು. ಅದನ್ನು ಪ್ರತಿಯೊಬ್ಬರೂ ಒಮ್ಮೆ ಅನುಭವಿಸಲೇಬೇಕು ಎನ್ನಿಸುತ್ತದೆ.

ಲೋಹಿಯಾವಾದದ ಮತ್ತೊಂದು ಪ್ರಮುಖ ಮಜಲು ಸಮತಾವಾದ;ಸಮಾನತೆ. ಆರ್ಥಿಕ ಮತ್ತು ಸಾಮಾಜಿಕ ಸ್ತರಗಳಲ್ಲಿ, ಅಭಿವೃದ್ಧಿಯ ಸೋಗಿನಲ್ಲಿ ಅನುಭವಿಸುತ್ತಿರುವ ಚಿತ್ರ-ವಿಚಿತ್ರ ಸ್ಥಿತ್ಯಂತರಗಳ ಬಗ್ಗೆ ನಮ್ಮಲ್ಲಿ ಉಂಟಾಗುವ ಗೊಂದಲಗಳಿಗೆ ಲೋಹಿಯಾ ಬಹಳಷ್ಟು ಮಟ್ಟಿಗೆ ಉತ್ತರವಾಗುತ್ತಾರೆ. ದಿನೇ ದಿನೇ ಹೆಚ್ಚುತ್ತಿರುವ ನಗರ ಮತ್ತು ಗ್ರಾಮೀಣ ಬದುಕಿನ ಅಂತರವನ್ನು ಕಡಿಮೆಗೊಳಿಸುವ ಪ್ರಯತ್ನಗಳನ್ನು ಮಾಡುವಲ್ಲಿ ಲೋಹಿಯಾ ನಮ್ಮ ನೆರವಿಗೆ ಬರುತ್ತಾರೆ. ಭಾರತದ ಅಭಿವೃದ್ಧಿಯಲ್ಲಿ ನಮ್ಮ ವೈಯಕ್ತಿಕ ಜೀವನದ ಆಶಯ-ಆದರ್ಶಗಳೂ ಚಿಕ್ಕದೊಂದು ಪ್ರಯತ್ನವಾಗಬಲ್ಲವೆಂಬುದನ್ನು ನಾನು ಲೋಹಿಯಾವಾದದಿಂದಲೇ ಅರಿತದ್ದು.

ಸರಕಾರಿ ಕೆಲಸದಮೇಲೆ ದೂರದ ಹಳ್ಳಿಯೊಂದಕ್ಕೆ ಕೆಲಸಕ್ಕೆ ತೆರಳುವಾಗ ಪ್ರತಿ ದಿನ ಹುಟ್ಟುವ ಅದೆಷ್ಟೋ ಪ್ರಶ್ನೆಗಳಿಗೆ ಅವರೇ ಉತ್ತರವಾಗುತ್ತಿದ್ದಾರೆ; ಧೈರ್ಯ ತುಂಬಿ ಪ್ರೇರೇಪಿಸುತ್ತಿದ್ದಾರೆ. ಇಂದು ಗಾಂಧಿ-ಲೋಹಿಯಾ ನಮ್ಮನ್ನು ಎಚ್ಚರಿಸಲು ಜೀವಂತವಾಗಿಲ್ಲದಿದ್ದರೂ, ಅವರ ಆಶಯ-ಆದರ್ಶಗಳಂತೂ ಇದ್ದೇ ಇವೆ. ಅವುಗಳನ್ನು ಓದುವ, ಅರಿಯುವ, ಅಳವಡಿಸಿಕೊಳ್ಳುವ ಮೂಲಕ ಜೀವನಕ್ಕೆ ಹೊಸ ಅರ್ಥಗಳನ್ನು ಹುಡುಕಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರದ್ದು.

-ಎನ್.ಆರ್.ಸ್ನೇಹಾ

ಸ್ವಚ್ಛಂದ ವ್ಯಕ್ತಿತ್ವದ ಆಕರ್ಷಣೆ

ಸುರತ್ಕಲ್ ಗೋವಿಂದದಾಸ ಕಾಲೇಜಿನಲ್ಲಿ ಬಿ.ಕಾಂ. ಫೈನಲ್ ಇಯರ್ ಓದುತ್ತಿದ್ದೆ. ಅದೊಂದು ದಿನ ಕಾಲೇಜಿನ ಕಲಾಸಂಘದ ವತಿಯಿಂದ ಭಾಷಣ ಸ್ಪರ್ಧೆ ಇತ್ತು. ನಮಗೆ ಬೇಕಾದ ವಿಷಯಗಳ ಬಗ್ಗೆ ಮಾತನಾಡುವ ಸ್ವಾತಂತ್ರ್ಯವನ್ನು ಅಧ್ಯಾಪಕರು ನೀಡಿದ್ದರು. ನಾನು ಭಾಷಣಕ್ಕೆ ಆಯ್ಕೆ ಮಾಡಿಕೊಂಡ ವಿಷಯ–'ಕೋಮುಗಲಭೆಗಳನ್ನು ಇಲ್ಲವಾಗಿಸುವುದು ಹೇಗೆ?'

ಕಾಲೇಜ್ ಹಾಲ್‌ನಲ್ಲಿ ನನ್ನ ಭಾಷಣ ಕೇಳಿ ಪ್ರಿನ್ಸಿಪಾಲ್ ಗೋಪಾಲಕೃಷ್ಣರಾಯರು ಕೆಂಡಾಮಂಡಲವಾದರು. 'ಕೋಮುಗಲಭೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಆರೆಸ್ಸೆಸ್, ಜಮಾತೇ ಮುಂತಾದ ಕೋಮು ಸಂಘಟನೆಗಳನ್ನು ಬ್ಯಾನ್ ಮಾಡಬೇಕು' ಎನ್ನುವ ಸಲಹೆಯನ್ನು ನಾನು ಭಾಷಣದಲ್ಲಿ ನೀಡಿದ್ದು ಅವರ ಬೀಪಿ ಏರಿಸಿತ್ತು.

ಭಾಷಣ ಸ್ಪರ್ಧೆ ಮುಗಿದ ಬೆನ್ನಲ್ಲೇ ನನಗೆ ಪ್ರಿನ್ಸಿಪಾಲರ ಚೇಂಬರಿಗೆ ಕರೆ ಬಂತು. ಹೋದೆ, ಸಿಟ್ಟಿಗೆದ್ದು ಕೂಗಾಡಿದರು. "ಏನಂತ ತಿಳ್ಕೊಂಡಿದ್ದೀಯಾ? ಒಂದು ಜವಾಬ್ದಾರಿಯುತ ಸಂಘಟನೆಯ ಬಗ್ಗೆ ಬಾಯಿಗೆ ಬಂದಂತೆ ಮಾತನಾಡಲು ನಿನಗೆ ಅಧಿಕಾರ ಕೊಟ್ಟವರು ಯಾರು?" ಎಂದು ಕೂಗಾಡಿದರು. ದಿನವೂ ಬೆಳಿಗ್ಗೆ ಗೋಪಾಲಕೃಷ್ಣರಾಯರು ಕಾಲೇಜು ಮೈದಾನದಲ್ಲಿ ಖಾಕಿ ಚಡ್ಡಿ ಹಾಕಿಕೊಂಡು ಲಾಠಿ ಹಿಡಿದುಕೊಂಡು ಕವಾಯತು ಮಾಡುತ್ತಿದ್ದುದು ನನಗೆ ಗೊತ್ತಿತ್ತು. ಚೇಂಬರ್ ಒಳಗೆ ಕಳುಹಿಸುವಾಗಲೇ ಸೂಪರಿಂಟೆಂಡೆಂಟ್ ವಸಂತ ಅವರು 'ಅವರು ಏನು ಹೇಳಿದರೂ ಸುಮ್ಮನಿರು, ಮಾತನಾಡಬೇಡ' ಎಂದು ಸಲಹೆ ನೀಡಿದ್ದರಿಂದ ನಾನು ಸುಮ್ಮನೆ ನಿಂತೆ. ಕೊನೆಗೆ ಪ್ರಿನ್ಸಿಪಾಲರು 'ಕ್ಷಮಾಪಣೆ ಬರೆದುಕೊಡು. ಇಲ್ಲವಾದಲ್ಲಿ ಟೀಸಿ ಕೊಡುತ್ತೇನೆ' ಎಂದು ಅಬ್ಬರಿಸಿದರು.

'ಸಾರ್, ನನ್ನ ನಿಲುವು ಸ್ಪಷ್ಟವಾಗಿದೆ. ನಾನು ಕೇವಲ ಆರೆಸ್ಸೆಸ್ ಬಗ್ಗೆ ಮಾತನಾಡಿಲ್ಲ. ಎಲ್ಲ ಧರ್ಮಗಳ ಕೋಮು ಸಂಘಟನೆಗಳನ್ನೂ ಬ್ಯಾನ್ ಮಾಡಬೇಕೆಂದು ಹೇಳಿದ್ದೇನೆ. ಇದು ನನ್ನ ಈಗಿನ ನಿಲುವು. ಮುಂದೆ ಬದಲಾಗಲೂಬಹುದು. ಇದರ ಬಗ್ಗೆ ಕ್ಷಮೆ ಕೇಳೋದಿಲ್ಲ' ಎಂದು ಗೊಣಗಿದಂತೆಯೇ ಆದರೂ ದೃಢವಾಗಿ ನುಡಿದೆ. ಅವರ ಕೂಗಾಟ ಇನ್ನಷ್ಟು ಹೆಚ್ಚಾಯಿತು. ಕೊನೆಗೆ ವಸಂತ ಅವರು ಬಂದು ನನ್ನನ್ನು ಕೋಣೆಯ ಹೊರಗೆ ಕಳುಹಿಸಿದರು.

ಈ ವಿಷಯ ಸ್ಟಾಫ್ ರೂಮಿನಲ್ಲೂ ಚರ್ಚೆಯಾಯಿತು. 'ಎಬಿವಿಪಿಯ ಹುಡುಗನೊಬ್ಬ ಅಸ್ಸಾಂ ಸಮಸ್ಯೆಯ ಬಗ್ಗೆ ಭಾಷಣ ಮಾಡಿ, ಅಸ್ಸಾಂನಿಂದ ಮುಸ್ಲಿಮರನ್ನೆಲ್ಲ ಹೊರಹಾಕಿದರೆ ಅಲ್ಲಿನ ಸಮಸ್ಯೆ ಪರಿಹಾರವಾಗುತ್ತದೆ ಎಂದಿದ್ದ. ಅವನ ಬಗ್ಗೆ ಚಕಾರ ಎತ್ತದ ಪ್ರಿನ್ಸಿಪಾಲರು ಹನೀಫ್ ಬಗ್ಗೆ ಏಕೆ ಎಗರಾಡಿದ್ದು?'

ಎಂದೊಬ್ಬರು ಪ್ರಶ್ನೆ ಎತ್ತಿದರಂತೆ. ಸ್ಟಾಫ್‌ರೂಮಿನ ಚರ್ಚೆಯಲ್ಲಿ ಹಲವರು ನನ್ನ ಪರ ನಿಂತರು. ಹಾಗಾಗಿ ನನಗೆ ಟೀಸಿ ನೀಡುವ ವಿಷಯ ಅಲ್ಲೇ ನೆನೆಗುದಿಗೆ ಬಿತ್ತು.

ಕಾಲೇಜಿನಲ್ಲಿ ನನ್ನ ವಿಚಾರಗಳಿಗೆ ಸಾಕಷ್ಟು ಸ್ಪಷ್ಟತೆ ನೀಡಿದವರಲ್ಲಿ ಮೂವರು ಅಧ್ಯಾಪಕರನ್ನು ನಾನು ನೆನಪಿಸಿಕೊಳ್ಳಬೇಕು. ಡಾ.ಸಿ. ಹೊಸಬೆಟ್ಟು, ಶೇಖರ ಇಡ್ಯ ಮತ್ತು ಲೀಲಾವತಿ ಎಸ್.ರಾವ್- ಈ ಮೂವರು ವೈಚಾರಿಕ ನಿಲುವುಗಳನ್ನು ಬೆಂಬಲಿಸಿದವರು. ಅದೇ ಹೊತ್ತಿನಲ್ಲಿ ಶೇಖರ ಇಡ್ಯ ಅವರು ನನಗೆ ರಾಮಮನೋಹರ ಲೋಹಿಯಾ ಅವರ ಪುಸ್ತಕವೊಂದನ್ನು ಕಾಣಿಕೆಯಾಗಿ ನೀಡಿದ್ದರು. 'ಇದನ್ನು ಓದು, ನಿನ್ನ ವಿಚಾರಶಕ್ತಿ ಬೆಳೆಯುತ್ತದೆ' ಎಂದು ಶೇಖರ ಇಡ್ಯರು ಪ್ರೀತಿಯಿಂದ ಹೇಳಿದ್ದರು.

ಆ ಪುಸ್ತಕ 'ರಾಜಕೀಯದ ಮಧ್ಯೆ ಬಿಡುವು'. ಲೋಹಿಯಾ ಅವರ 'ಇಂಟರ್‌ವೆಲ್ ಡ್ಯೂರಿಂಗ್ ಪಾಲಿಟಿಕ್ಸ್' ಎಂಬ ಪುಸ್ತಕವನ್ನು ಕೆ.ವಿ. ಸುಬ್ಬಣ್ಣ ಅವರು ಅದ್ಭುತವಾಗಿ ಅನುವಾದ ಮಾಡಿದ್ದರು. ಅಲ್ಲಿವರೆಗೆ ನನಗೆ ಲೋಹಿಯಾ ಬಗ್ಗೆ ಏನೇನೂ ಗೊತ್ತಿರಲಿಲ್ಲ. ದಕ್ಷಿಣ ಕನ್ನಡದಲ್ಲಿ ಅದಾಗಲೇ ಸೋಶಲಿಷ್ಟರು ಕಣ್ಮರೆಯಾಗತೊಡಗಿದ್ದರು. ಯಾರೂ ಲೋಹಿಯಾ ಬಗ್ಗೆ ಮಾತನಾಡುವವರು ಇರಲಿಲ್ಲ. ಅಂತಹ ಸಂದರ್ಭದಲ್ಲಿ ನನಗೆ ಸಿಕ್ಕಿದ ಪುಸ್ತಕ ಆ ಪುಸ್ತಕ ಓದಿದ ನಂತರ ಲೋಹಿಯಾ ಓದಿನ ಹಸಿವು ಹೆಚ್ಚಿತು.

ಅದರಲ್ಲೂ ಆ ಪುಸ್ತಕದಲ್ಲಿದ್ದ 'ರಾಮ ಕೃಷ್ಣ ಶಿವ' ಎಂಬ ಅಧ್ಯಾಯ ನನಗೆ ಜಾತಿ-ಧರ್ಮಾಧಾರಿತ ಸಮಾಜವನ್ನು ಹೊಸ ದೃಷ್ಟಿಯಲ್ಲಿ ಗ್ರಹಿಸುವ ಬಗೆಯನ್ನು ಕಲಿಸಿತು. ನನಗೆ ಗೊತ್ತೇ ಇಲ್ಲದ ಪ್ರಪಂಚವನ್ನು ಹೇಗೆ ಅರಿತುಕೊಳ್ಳುವುದು ಎಂಬುದಕ್ಕೆ ದಿಕ್ಸೂಚಿಯಾಯಿತು. ಮುಸ್ಲಿಮನಾಗಿದ್ದೂ ಹೇಗೆ ಇತರ ಧರ್ಮಗ್ರಂಥಗಳನ್ನು ಓದಬೇಕು, ಗ್ರಹಿಸಬೇಕು ಎನ್ನುವದನ್ನು ನನಗೆ ಸ್ಪಷ್ಟಾಗಿ ಕಲಿಸಿದ್ದು ಲೋಹಿಯಾ. ಹಾಗೆಯೇ ಧರ್ಮದ ನಾಲ್ಕು ಮುಖಗಳ ಬಗ್ಗೆ ಅವರು ಬರೆದ ಟಿಪ್ಪಣಿ ನನ್ನ ಗ್ರಹಿಕೆಯ ಕ್ರಮವನ್ನು ಬದಲಾಯಿಸಿತು. ನಂತರದ ವರ್ಷಗಳಲ್ಲಿ ಲೋಹಿಯಾ ಅವರ ಎಲ್ಲಾ ಪುಸ್ತಕಗಳನ್ನೂ ತರಿಸಿಕೊಂಡು ಓದಿದೆ.

ಲೋಹಿಯಾ ಅವರ 'ಸ್ವಚ್ಛಂದ ವ್ಯಕ್ತಿತ್ವ' ನನಗೆ ಹೆಚ್ಚು ಇಷ್ಟವಾದದ್ದು. ಜತೆಗೆ ಅವರ 'ರಾಜಕೀಯ ಐಡಿಯಾಲಜಿಯ ಪ್ರಾಮಾಣಿಕತೆ' ಕೂಡಾ ನನ್ನನ್ನು ಪ್ರಭಾವಿತಗೊಳಿಸಿದೆ. ಪಾಸ್‌ಪೋರ್ಟ್ ಇಲ್ಲದೆ ಜಗತ್ತಿನ ಎಲ್ಲೆಡೆ ಪ್ರವಾಸ ಕೈಗೊಂಡ ಅವರ ವಿಶ್ವಪ್ರೇಮ; ಎರಡು ಸಲ ಎಂಪಿಯಾದರೂ ಬ್ಯಾಂಕ್ ಅಕೌಂಟ್ ತೆರೆಯದೇ ಇದ್ದುದು; ಕೊಚ್ಚಿಯಲ್ಲಿ ಪೊಲೀಸ್ ಗೋಲಿಬಾರ್ ಖಂಡಿಸುವಾಗ ತಮ್ಮ ಪಕ್ಷದ ಬೆಂಬಲದ ಸರಕಾರವೇ ಬೀಳುವ ಪರಿಸ್ಥಿತಿ ಬಂದಾಗಲೂ ಹಿಂಜರಿಯದೇ ಇದ್ದುದು; ಧರ್ಮವನ್ನು ಸಾರಾಸಗಟು ತಿರಸ್ಕರಿಸದೆ ಅದರ ನೈತಿಕ ಹಾಗೂ ಅಧ್ಯಾತ್ಮಿಕ ಅಂಶಗಳ ಕಡೆಗೆ ಗಮನ ಸೆಳೆದದ್ದು; ಇಡೀ ಭಾರತವೇ ನೆಹರೂ ಪರವಾಗಿ ನಿಂತಾಗಲೂ ವಂಶಾಡಳಿತ ತತ್ವದ ವಿರುದ್ಧ ಏಕಾಂಗಿಯಾಗಿ ಹೋರಾಟ ನಡೆಸಿದ್ದು-ಹೀಗೆ ಲೋಹಿಯಾ

ವ್ಯಕ್ತಿತ್ವದ ಹಲವು ಆಕರ್ಷಕ ಅಂಶಗಳನ್ನು ಇಲ್ಲಿ ಪಟ್ಟಿ ಮಾಡಬಹುದು.

ಇವತ್ತು ರಾಜಕೀಯ ಅನ್ನೋದು ಜಾತಿ-ಧರ್ಮ-ಹಣ ಎಲ್ಲದರ ಭ್ರಷ್ಟ ಅಂಶಗಳಿಂದ ಪ್ರಭಾವಿತಗೊಂಡು ಅಸಹ್ಯ ಹುಟ್ಟಿಸುವ ಮಟ್ಟಕ್ಕೆ ಬಂದು ತಲುಪಿದೆ. ಈ ಪರಿಸ್ಥಿತಿಯಲ್ಲಿ ಲೋಹಿಯಾ ಮಾದರಿಯ ರಾಜಕಾರಣಿಗಳ ಸಂಖ್ಯೆ ಹೆಚ್ಚಾಗಬೇಕಿದೆ. 'ರಾಜಕೀಯ ಅನ್ನುವುದು ದಂಧೆಯಾಗದೆ, ನಿಜಕ್ಕೂ ಜನಸಾಮಾನ್ಯರ ಬದುಕನ್ನು ಹಸನುಗೊಳಿಸುವ ಸೇವೆಯ ಅವಕಾಶ' ಎನ್ನುವುದನ್ನು ಲೋಹಿಯಾ ತಮ್ಮ ಜೀವನದಲ್ಲಿ ತೋರಿಸಿಕೊಟ್ಟಿದ್ದರು. 'ಹಿಪಾಕ್ರಸಿ' ಇಲ್ಲದ ಅವರ ನೇರ ಬದುಕು ನನ್ನನ್ನು ಬಹುವಾಗಿ ಆಕರ್ಷಿಸಿದೆ.

ಇವತ್ತು ಧರ್ಮ ಅನ್ನೋದು ಕೂಡಾ ಪ್ರದರ್ಶನ, ತೋರಿಕೆಯ ಆಡಂಬರವಾಗಿದೆ. ಭವ್ಯ ದೇವಾಲಯಗಳು, ಭವ್ಯ ಮಸೀದಿಗಳು, ಚರ್ಚ್‌ಗಳು ಎಲ್ಲೆಡೆ ರಾರಾಜಿಸುತ್ತಿವೆ. ದೇಗುಲಗಳಲ್ಲಿ, ಮಠಗಳಲ್ಲಿ, ಪ್ರಾರ್ಥನಾ ಮಂದಿರಗಳಲ್ಲಿ ಶ್ರೀಮಂತಿಕೆ ತಾಂಡವವಾಡುತ್ತಿದೆ. ಆದರೆ ಅದರೊಳಕ್ಕೆ ಭಕ್ತ ಮತ್ತು ಅವನ ಭಕ್ತಿ ಪೇಲವವಾಗಿದೆ. ಲೋಹಿಯಾ ಓದು ನನ್ನನ್ನು ಈ ವೈರುಧ್ಯಗಳ ಬಗ್ಗೆಯೂ ಚಿಂತಿಸುವಂತೆ ಪ್ರೇರಣೆ ನೀಡಿದೆ. ಜಾತಿ-ಧರ್ಮಗಳನ್ನು ಮೀರಿದ ಮನುಷ್ಯಪ್ರೀತಿಯನ್ನು ಗ್ರಹಿಸುವುದನ್ನು ಲೋಹಿಯಾ ಸಾಹಿತ್ಯ ಕಲಿಸಿಕೊಟ್ಟಿದೆ.

-ಬಿ.ಎಂ. ಹನೀಫ್

ಸಮಾಜವಾದದ ಹರಿಯುವಿಕೆ....

ಕರ್ನಾಟಕದಲ್ಲಿ ಲೋಹಿಯಾರಿಂದ ಪ್ರಭಾವಿತರಾಗಿರುವ ಬಹಳಷ್ಟು ಮಂದಿ ನಮಗೆ ಕಾಣಸಿಗುತ್ತಾರೆ. ಈ ಎಲ್ಲರಲ್ಲೂ ಭಿನ್ನ ಅಭಿರುಚಿ, ವಿಶಿಷ್ಟ ವ್ಯಕ್ತಿತ್ವ, ಭಿನ್ನಭಿಪ್ರಾಯವಿದ್ದರೂ ಒಬ್ಬರಿಗೊಬ್ಬರು ತಮ್ಮ ಮನಸ್ಸಿನಲ್ಲಿ ಗೌರವ ಭಾವ ಹೊಂದಿರುತ್ತಾರೆ. ಕರ್ನಾಟಕದಲ್ಲಿ ಹಲವು ಲೋಹಿಯಾರನ್ನು ಕಾಣಬಹುದು. ಬೌದ್ಧ ಧರ್ಮದಲ್ಲಿ 'ಹರಿಯುವಿಕೆ' ಎನ್ನುವುದಕ್ಕೆ ವಿಶೇಷ ಅರ್ಥವಿದೆ. ಅವರು ದೇಹವನ್ನು ಐದು ರಾಶಿಗಳಾಗಿ ಪರಿಗಣಿಸುತ್ತಾರೆ. ಭಾವನೆಗಳ ಹರಿಯುವಿಕೆ ಗ್ರಹಿಕೆಗಳ ಹರಿಯುವಿಕೆ, ಮಾನಸಿಕ ಸ್ಥಿತಿಯ ಹರಿಯುವಿಕೆ, ಅಂಗಾಂಗಗಳ ಹರಿಯುವಿಕೆ, ಪ್ರಜ್ಞೆಯ ಹರಿಯುವಿಕೆ. ಪ್ರಜ್ಞೆ ಒಂದನ್ನು ಬಿಟ್ಟು ಉಳಿದೆಲ್ಲವೂ ಬುದ್ಧಿಮತ್ತೆಗೆ ಸಂಬಂಧಿಸಿದ ವಿಚಾರವಾಗಿದೆ. ಪ್ರಜ್ಞೆಯ ಮೂಲಕ ಬುದ್ಧಿಯ ಯಾವುದೇ ಅವಲಂಬನೆ ಇಲ್ಲದೆ ಎಲ್ಲವನ್ನು ಎಚ್ಚರದ ಸ್ಥಿತಿಯಲ್ಲಿ ನೋಡುವ ಮೂಲಕ ಮನಸ್ಸಿನಿಂದ ಸ್ವತಂತ್ರಗೊಳ್ಳುವ ಕ್ರಮ.

ಮನಸ್ಸು ಯಾವಾಗಲೂ, ಇಲ್ಲ ಭೂತಕಾಲಕ್ಕೆ ಹೋಗುತ್ತೆ; ತಪ್ಪಿದರೆ ಭವಿಷ್ಯಕ್ಕೆ ನೆಗೆಯುತ್ತದೆ. ಮತ್ತು ನಮಗೆ ಇಷ್ಟವಿಲ್ಲದಿದ್ದರೂ ನಿರಂತರವಾಗಿ ಕಾರ್ಯ ಚಟುವಟಿಕೆ ಮಾಡುತ್ತಿರುತ್ತದೆ. ಬುದ್ಧಿಯ ಅವಲಂಬನೆ ಇಲ್ಲದೆ ಎಚ್ಚರದ ಸ್ಥಿತಿಯಲ್ಲಿ, ಪ್ರಜ್ಞಾಸ್ಥಿತಿಯಲ್ಲಿ ಮನಸ್ಸಿನ ಕಾರ್ಯ ಚಟುವಟಿಕೆಯನ್ನು ನೋಡುವ ಕ್ರಮ ರೂಪಿಸಿಕೊಂಡರೆ ಬುದ್ಧ ಹೇಳಿದ ದುಃಖ ನಿವಾರಣೆ ನಮ್ಮೊಳಗಿನ ಅನುಭವಕ್ಕೆ ಬರುತ್ತದೆ. ಲೋಹಿಯಾರನ್ನು ನಮ್ಮೊಳಗಿನ ಸತ್ಯವಾಗಿ ನಾವು ಕಂಡುಕೊಳ್ಳದೆ ಹೋದರೆ ಬರಡು ಮನಸ್ಸಿನಲ್ಲಿ ಅವರ ಬಗ್ಗೆ ಓದಿದ್ದನ್ನು ಉರುಹೊಡೆದಂತೆ ಹೇಳುತ್ತಾ ಹೋಗುತ್ತೇವೆ. ಆದರಿಂದ ಕರ್ನಾಟಕದಲ್ಲಿ ಲೋಹಿಯಾರಿಂದ ಪ್ರಭಾವಿತರಾದ ಬಹಳಷ್ಟು ಮಂದಿ ತಮಗೆ ಕಂಡ ಸತ್ಯದ ಮೂಲಕವೇ ವಿಶಿಷ್ಟ ವ್ಯಕ್ತಿತ್ವನ್ನು ರೂಪಿಸಿಕೊಂಡಿದ್ದಾರೆ. ಒಬ್ಬರಿಗಿಂತ ಒಬ್ಬರು ಭಿನ್ನ. ತಂದೆಯಂತೆಯೇ ಮಗ ಎಲ್ಲದರಲ್ಲೂ ತಂದೆಯನ್ನೆ ನಕಲು ಮಾಡುತ್ತಾ ಹೋದರೆ ಪ್ರಕೃತಿಯೇ ಆತನನ್ನು ಹೊಸಕಿ ಹಾಕಿ ಬಿಡುತ್ತೆ. ಪ್ರಕೃತಿಯೊಳಗೆ ನಾವು ಹುಟ್ಟಿರುವುದೇ ಒಬ್ಬರಿಗಿಂತ ಒಬ್ಬರು ಭಿನ್ನರಾಗಿ ನಮ್ಮ ವ್ಯಕ್ತಿ ವಿಶಿಷ್ಟತೆಯನ್ನು ತೋರಿಸಲಿಕ್ಕೆ.

ರಾಮಕೃಷ್ಣ ಪರಮಹಂಸರಿಗೆ ಜ್ಞಾನೋದಯಕ್ಕೆ ಕಾಳಿಯೇ ಅಡ್ಡಬರುತ್ತಿದ್ದಾಗ ಅವರ ಗುರುಗಳಾದ ತೋತಾಪುರಿಯವರು ಕಾಳಿಯನ್ನು ಒಡೆದು ಮುಂದೆಹೋಗು ಎನ್ನುತ್ತಾರೆ. ಆನಂದನಿಗೆ ಬುದ್ಧನ ಅವಲಂಬನೆಯೇ ದೊಡ್ಡ ತೊಡಕಾಗಿರುತ್ತದೆ. ಬುದ್ಧನೇ ಆನಂದನಿಗೆ ಒಮ್ಮೆ ಎಚ್ಚರರಿಸುತ್ತಾರೆ. ಬುದ್ಧನ ನಿರ್ಮಾಣದ ನಂತರ ಇಡೀ ಒಂದು ದಿನದ ಮೌನದಲ್ಲಿ ಆನಂದನಿಗೆ ಜ್ಞಾನೋದಯ ವಾಗುತ್ತದೆ. ಆ ಮೌನದಲ್ಲಿ ಬುದ್ಧನೂ ಇರುವುದಿಲ್ಲ without mind ಎಲ್ಲವನ್ನು ನೋಡುವ ಎಚ್ಚರದ ಸ್ಥಿತಿ ಮಾತ್ರ. ಬಹುಶಃ ಲೋಹಿಯಾ ನನ್ನನ್ನೂ ಸೇರಿ ಬಹಳಷ್ಟು ಮಂದಿಗೆ ನಮ್ಮೊಳಗೆ ಕಂಡುಕೊಳ್ಳುವ ಸತ್ಯವನ್ನು ತೋರಿಸಿ ಕೊಟ್ಟಿದ್ದಾರೆ ಎನಿಸುತ್ತದೆ. ಅವಲಂಬನೆ ಎನ್ನುವುದು ಗುಲಾಮಗಿರಿ ಎಂದು ತೋರಿಸಿಕೊಟ್ಟಿದ್ದಾರೆ. ನಮ್ಮೊಳಗಿನ ಸತ್ಯವನ್ನು ಕಂಡುಕೊಳ್ಳುವ ಮೂಲಕ ಅಲ್‌ಹಕ್ ಎಂದು ಹೇಳುತ್ತಾ ಲೋಹಿಯಾ ಈ ಕಾರಣಕ್ಕೆ ಮುಖ್ಯ ಎಂದು ಹೇಳುತ್ತೇನೆ.

ಕಡೆಯಲ್ಲಿ ಜೆನ್ ದರ್ಶನವನ್ನು ಹೇಳುವ ಮೂಲಕ ಮುಕ್ತಾಯಗೊಳಿಸುತ್ತೇನೆ. ಬಿಳಿಹಾಳೆಯಲ್ಲಿ ಜೆನ್‌ಗುರು ಮೋಡ, ಮಳೆ, ಮರವನ್ನು ಕಾಣುತ್ತಾ ಬಿಳಿ ಹಾಳೆಯಾಗಲು ಇವೆಲ್ಲಾ ಕಾರಣವಾಗಿವೆ ಎಂದು ಗುರುತಿಸುತ್ತಾನೆ. ಬಿಳಿ ಹಾಳೆಯೊಳಗಿನ ಬಯಲೊಳಗೆ ಇವೆಲ್ಲವೂ ಇದೆ ಹಾಗೆ ನೋಡಲು ಖಾಲಿಯಾಗಿಯೂ ಇದೆ. ಮನುಷ್ಯ ಮನುಷ್ಯನೊಳಗಿನ ಇಂಥ ಸಂಬಂಧ ನಮಗೆ ಗೊತ್ತಾದಾಗ ಸಮಾಜವಾದದ ಹರಿಯುವಿಕೆ ಶುರುವಾಗುತ್ತದೆ. ಇಂಥ ಸಮಾಜವಾದ ನಮ್ಮೊಳಗೆ ಹರಿಯುವಂತಾಗಲಿ.

–ಅಪೂರ್ವ ಡಿ' ಸಿಲ್ವ

'ಬಹುಮುಖಿ' ವ್ಯಕ್ತಿತ್ವದ ಸ್ಫೂರ್ತಿ ಸೆಲೆ

ನನಗಿನ್ನೂ ನೆನಪಿದೆ. ನಾವು ಸಣ್ಣ ಮಕ್ಕಳಿದ್ದಾಗ ನಮ್ಮ ಮನೆಯ ಸ್ವಲ್ಪ ದೂರದಲ್ಲಿದ್ದ ಸೋಷಲಿಸ್ಟ್ ಪಾರ್ಟಿ ಆಫೀಸಿನಲ್ಲಿ ಸದಾ ಜನಜಂಗುಳಿ. ಅಲ್ಲಿರುವ ರೈತರು, ಕೂಲಿ ಕಾರ್ಮಿಕರು ಯಾವುದೋ ಯುದ್ಧಕ್ಕೆ ಹೋಗುವ ತರಾತುರಿಯಲ್ಲಿರುವಂತೆ, ಗುಂಪಿನಲ್ಲಿದ್ದೂ, ಸ್ವಗತ ಮಾಡುತ್ತಿರುವಂತೆ ನನಗೆ ಅನ್ನಿಸುತ್ತಿತ್ತು. ಸಮಾಜವಾದಿಗಳೇ ಹಾಗೇನೋ... ಗುಂಪಿನೊಳಗಿದ್ದು ಏಕಾಂಗಿಯಾಗಿರುವ ಮನಸ್ಥಿತಿಯನ್ನು ಹೇಗೆ ಬೆಳೆಸಿಕೊಳ್ಳಲು ಸಾಧ್ಯ? ಇದೊಂದು ಪ್ರಶ್ನೆ ನನ್ನನ್ನು ಬಹಳ ವರ್ಷಗಳ ಕಾಲ ಕಾಡಿದೆ. ಆದರೆ ನಾನು ಕಾಲೇಜು ಸೇರಿದಾಗ ಸಿಗುತ್ತಿದ್ದ ಲೋಹಿಯಾರವರ ಬಿಡಿಬರಹಗಳು ನನ್ನ ಈ ಪ್ರಶ್ನೆಗೆ ಉತ್ತರ ನೀಡಿದ್ದು ಸುಳ್ಳಲ್ಲ. ಹಾಗಾಗಿಯೇ ಲೋಹಿಯಾ ನನಗೆ ಒಬ್ಬ ಗುರು, ಗೆಳೆಯ ತಂದೆ ಮತ್ತೆ ತಾಯಿ ಆಗಿ ಅರಿವಿನಲ್ಲಿ ಸದಾ ಹಸಿರಾಗಿರುತ್ತಾರೆ– ಒಂದು ಆ್ಯಂಗಲ್‌ನಲ್ಲಿ ಅಪ್ಪ ಮತ್ತು ಲೋಹಿಯಾ ನೋಡಲಿಕ್ಕೆ ಒಂದೇ ರೀತಿಯಿರುವುದೂ ಕಾರಣ. ಅದಕ್ಕೆ ಸಾಗರದ ಬಾಬಣ್ಣನ ಸ್ಟುಡಿಯೋದ ಮೂಲೆಯಲ್ಲಿ ಸಿಕ್ಕ ಲೋಹಿಯಾ ಭಾವಚಿತ್ರವನ್ನು ಬಹಳ ವರ್ಷಗಳ ಕಾಲ ಜತನವಾಗಿಟ್ಟಿದ್ದೆ.

ಅವರ ವೈಚಾರಿಕತೆಯ ನಿಷ್ಠೆ ಹಾಗೂ ದೃಢತೆ ಅವರ ವ್ಯಕ್ತಿತ್ವವನ್ನು ಅದೆಷ್ಟು ಗಟ್ಟಿಗೊಳಿಸಿತ್ತು ಎಂದರೆ ಕೆಲವು ಸಂದರ್ಭದಲ್ಲಿ ಅವರು ಗಾಂಧೀಜಿಯವರ ಕೆಲವು ವಿಚಾರಗಳನ್ನು ವಿರೋಧಿಸುತ್ತಿದ್ದರು. ಇಂದು ತಲೆ ಎತ್ತಿರುವ ಸಮಸ್ಯೆಗಳಾದ ಭೂಹಗರಣ, ಕೃಷಿ ಉತ್ಪನ್ನಗಳ ಬೆಲೆ ನಿಗದಿ, ಕೈಗಾರಿಕೆ, ಉತ್ಪಾದನಾ ಕ್ಷೇತ್ರಗಳು ಹಾಗೂ ಮೂಲಭೂತ ಸೌಕರ್ಯಗಳ ಕ್ಷೇತ್ರಗಳು ಸರ್ಕಾರಿ ಸ್ವಾಮ್ಯದಲ್ಲಿರಬೇಕೆಂಬ ಚಿಂತನೆ (ಇಂದು ಎಲ್ಲವೂ ಖಾಸಗೀಕರಣಗೊಂಡಿದೆ) ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ಸಿಗಬೇಕಾದ ಸಾಮಾಜಿಕ ನ್ಯಾಯ, ಮೀಸಲಾತಿಯ ಪ್ರಾಮಾಣಿಕ ಅನುಷ್ಠಾನದ ಅವರ ಕಾಳಜಿ ಎಂತಹ ದೂರಗಾಮಿ ಅದ್ಭುತ ದೂರಗಾಮಿ ಆಲೋಚನೆ!

'ಜಾತಿ' ಎಂಬ ಪೆಡಂಭೂತದ ಬಗ್ಗೆ ಅದರಿಂದಾಗುತ್ತಿರುವ ಅನ್ಯಾಯದ ನಿವಾರಣೆ ಬಗ್ಗೆ, ಭಾಷೆ, ಸಾಹಿತ್ಯ, ಸಂಸ್ಕೃತಿ, ಸೌಂದರ್ಯ ಮತ್ತು ಮೈಬಣ್ಣದ ಬಗ್ಗೆ ವ್ಯಕ್ತಿಯ ವೈಯಕ್ತಿಕ ಜೀವನದ ಸ್ವಾತಂತ್ರ್ಯದ ಬಗ್ಗೆ ಲಿಂಗಭೇದದಿಂದ ಸಮಾಜ ಕಳೆದುಕೊಳ್ಳುವ ಚೈತನ್ಯದ ಬಗ್ಗೆ, 'ರೋಟಿ–ಬೇಟಿ' ಸಿದ್ಧಾಂತ ಜಾತಿರಹಿತ ಸಮಾಜದ ಅವರ ಕನಸುಗಳು ಅವರ ಎಲ್ಲಾ ವಿಚಾರಗಳು ಎಂದಿಗಿಂತ ಇಂದು ಹೆಚ್ಚು ಪ್ರಸ್ತುತ ಎನ್ನುವುದರಲ್ಲಿ ಸಂಶಯವೇ ಇಲ್ಲ.

'ಮಹಿಳೆ ಎಂದಿಗೂ ಅಬಲೆ ಅಲ್ಲ, ಆದರೆ ಅದು ಆಕೆಗೆ ಗೊತ್ತಿಲ್ಲ'– ಎಂತಹ ಅದ್ಭುತ ಮಾತು! ಹೌದು ನಮ್ಮ ಸಮಾಜದ ಮಹಿಳೆಯರಲ್ಲಿ ಸಂಪೂರ್ಣ ವ್ಯಕ್ತಿತ್ವ

ವಿಕಸನವಾಗುವ ವಾತಾವರಣ ಇಲ್ಲ. ಕಾರಣ ಪುರುಷಪ್ರಧಾನ ಮೌಲ್ಯಗಳಿಂದಾಗಿ ಹೆಣ್ಣು ಸದಾ ಒಂದಿಲ್ಲೊಂದು ರೀತಿಯ ಭಯದ ನೆರಳಿನಲ್ಲಿರಬೇಕಾದ ಅನಿವಾರ್ಯತೆ. 'ಚಾರಿತ್ರ್ಯ'ದ ಬಗ್ಗೆ ಹೆಣ್ಣಿಗೆ ಮಾತ್ರ ಸೀಮಿತವಾಗಿರುವ ಕಟ್ಟಳೆಗಳು ಅಸಹ್ಯಕರ. ಅದರಿಂದಾಗಿ ಅಂತರಜಾತಿ ವಿವಾಹ, ಉದ್ಯೋಗ ಸ್ತ್ರೀ ವಿಮೋಚನೆಯ ದಾರಿ ಎನ್ನುವ ಅವರ ಮಾತು ಸ್ತ್ರೀವಾದಿ ಚಿಂತನೆಗೊಂದು ಹೊಸ ಆಯಾಮ ನೀಡುವುದರಲ್ಲಿ ಸಂಶಯವಿಲ್ಲ. ಲೋಹಿಯಾ ವಿವಾಹವಾಗಿರದ್ದರೂ ಹೆಣ್ಣಿನ ಬಗ್ಗೆ ಧ್ಯಾನಸ್ಥ ಅಂತಃಕರಣದಿಂದ ಆಲೋಚಿಸಿದ ಹೆಂಗರಳು ಆ ಕಾರಣಕ್ಕೆ ಲೋಹಿಯಾ ನನಗೆ ಅತಿ ಮೆಚ್ಚು. ಲೈಂಗಿಕ ವಿಚಾರದಲ್ಲಿ ಅವರೇ ಹೇಳುವಂತೆ 'ಎರಡು ಅಕ್ಷಮ್ಯ ಅಪರಾಧಗಳಿವೆ. ಒಂದು ಅತ್ಯಾಚಾರ. ಎರಡು ಸುಳ್ಳು. ಇನ್ನೊಂದು ಮತ್ತೊಬ್ಬರಿಗೆ ನೋವುಂಟು ಮಾಡುವುದು' ಈ ಮೂರರ ಬಗ್ಗೆ ಎಚ್ಚರವಹಿಸಬೇಕು.

ಆತ್ಮದ ಮಿಲನಕ್ಕೆ ಬದಲಾಗಿ ವೈಭವದಲ್ಲಿ ವ್ಯಕ್ತವಾಗುವ ದಾಂಪತ್ಯ ಸಂಸ್ಕೃತಿಯ ಹೆಸರಿನ ವ್ಯಾಪಾರೀಕರಣ, ಜಾಗತೀಕರಣ, ಖಾಸಗೀಕರಣ, ಸರ್ಕಾರದ ಭ್ರಷ್ಟಾಚಾರದ ಪರಮಾವಧಿ, ಭೂಮಿ ಕಳೆದುಕೊಳ್ಳುತ್ತಿರುವ ರೈತನ ಕೂಗು, ಬಂಡವಾಳಶಾಹಿಗಳ ಅಟ್ಟಹಾಸ, ಢೋಂಗಿ ಸ್ವಾಮಿಗಳ ಧಾರ್ಮಿಕ ಅಟ್ಟಹಾಸ, ಪ್ರಭುತ್ವದ ಹೆಸರಿನಲ್ಲಾಗುತ್ತಿರುವ ಪ್ರಜೆಗಳ ಕೊಲೆ, ನೈಸರ್ಗಿಕ ಸಂಪನ್ಮೂಲಗಳ ಲೂಟಿಯ ಈ ಸಂತೆಯಲ್ಲಿ ನಿಂತಿದ್ದೇನೆ ಒಂಟಿಯಾಗಿ ಧೇನಿಸುತ್ತೇನೆ ಲೋಹಿಯಾ ಎಂಬ ಏಕತಾರಿ ಹಿಡಿದು.

–ಸುಜಾತ ಕುಮಟಾ

ನಮ್ಮಂಥ ಕಡ್ಡಿಗಳನ್ನ ಗುಡ್ಡೆ ಮಾಡಿದ ಲೋಹಿಯಾ

ಹರಿದ ಗೋಣಿಯೊಳೊಬ್ಬ ಕಳವೆಯ ತುಂಬಿದ
ಇರುಳೆಲ್ಲ ನಡೆದನ ಸುಂಕಕಂಜಿ
ಕಳವೆಯೆಲ್ಲಾ ಹೋಗಿ ಬರಿ ಗೋಣಿ ಉಳಿದಿತ್ತು
ಅಳಿಮನದವನ ಭಕ್ತಿ ಇಂತಿಪ್ಪುದು ಕಾಣಾ ರಾಮನಾಥ

–ದೇವರ ದಾಸಿಮಯ್ಯ

ಯಾವುನೋ ಒಬ್ಬ ಪಾತ್ರೆ ವ್ಯಾಪಾರಿ ವೃತ್ತಿಗೂ ಮಾತಿಗೂ ಸಂಬಂಧವಿಲ್ಲದಂತೆ 'ಜಗತ್ತಿನ ವಿಸ್ಮಯ ಹಾಗೂ ಹೊಸದೆಲ್ಲವೂ ನನ್ನ ತಲೆಯ ಮೇಲೆ ಇದೆ' ಅಂತ, ಇನ್ನ್ಯಾವನೊ ಒಬ್ಬ ಟೈಲರ್ 'ಕಥೆ ಕಾದಂಬರಿ' ಅಂತ ಮತ್ತೊಬ್ಬ ಪತ್ರಿಕೆಯವ

'ನಾಟಕ, ಪದ್ಯ, ಸಂಘಟನೆ' ಅಂತ, ಮಗದೊಬ್ಬರಾದ ಮೇಷ್ಟ್ರು 'ವಚನ, ಅಲ್ಲಮ, ವಿಮರ್ಶೆ' ಅಂತ, ಎಲ್ಲರೂ ಒಮ್ಮೊಮ್ಮೆ ಒಟ್ಟಿಗೆ ಸೇರಿ ಅದು ಏನೆಂದು ಗೊತ್ತಿಲ್ಲದಿದ್ದರೂ 'ಏನಾರು ಒಂದ್ ಮಾಡ್ಬೇಕು' ಅಂತ ಎಲ್ಲರಂತೆ ನಾವಾಗದೆ ಭಿನ್ನವಾಗಿರಬೇಕು ಅಂತ ಹರಟಿಕೊಳ್ಳುವಾಗ, ಹೇಗಿರಬೇಕೆಂಬ ಅಂದಾಜಿಲ್ಲದೆ ತಡವರಿಸುತ್ತ, ನಾವು ಓದುವ ಇದೇ ಸಾಹಿತ್ಯ, ಇದೇ ಪದ್ಯ, ಇದೇ ಇತಿಹಾಸ, ಇದೇ ನಾಟಕ, ಇದೇ ಸಂಘಟನೆ, ಇದೇ ಚಳವಳಿ, ಇದೇ ವಿಜ್ಞಾನ, ಇದೇ ರಾಜಕಾರಣ ಎಂದು ಒಬ್ಬರೊಗೊಬ್ಬರು ರೋಷವೇಶವಾಗಿ ಬಡಬಡಿಸಿಕೊಳ್ಳುತ್ತಾ ರೈತಸಂಘ ಹಾಗೂ ಚಳುವಳಿಯಲ್ಲಿ ಜೀವ ಸವೆಸಿದ್ದ ಗೆಳೆಯರೊಬ್ಬರ ಮುಂದೆಯೂ ನಮ್ಮ ಅಲ್ಪ ತಿಳುವಳಿಕೆಯ ಅಗಾಧತೆಯನ್ನು ಪ್ರದರ್ಶಿಸುತ್ತ ಮತ್ತದೆ 'ಏನಾರು ಒಂದ್ ಮಾಡ್ಬೇಕು' ಅಂತ, ಮಾತು ಶುರುಮಾಡಿದ್ದೆವು. ಆಗ ಅವರ ಬಾಯಿಂದ ಸಾಹಿತ್ಯ ಅಂದ್ರೇನು, ಪದ್ಯ ಅಂದ್ರೇನು, ವಚನ ಅಂದ್ರೇನು, ಸಂಘಟನೆ ಅಂದ್ರೇನು, ಚಳವಳಿ ಅಂದ್ರೇನು, ರಾಜಕಾರಣ ಅಂದ್ರೇನು, ಗಾಂಧಿ ಅಂದ್ರೇನು, ಲೋಹಿಯಾ ಅಂದ್ರೇನು ಮಾತುಗಳು ಹೊರಬಿದ್ದವು. ಕೆಲವೊಂದಕ್ಕೆ ಪ್ರವೇಶ ಪಡೆದು ಮುಂದಿನ ಹೆಜ್ಜೆ ಇಡಬೇಕಾದರೆ ಲೋಹಿಯಾ ಓದಿನ ಅಗತ್ಯ ಇದೆ ಎಂದಷ್ಟೆ ಹೇಳಿ ಸುಮ್ಮನಾಗಿದ್ರು.

ಬೇರೆ ಎಲ್ಲದರಲ್ಲೂ ಒಂದು ಸಣ್ಣ ಓದಿನ ಅನುಭವವಿದ್ದು ಲೋಹಿಯಾ ಎಂದರೇನೆಂದು ಗೊತ್ತಿಲ್ಲದಿದ್ದ ನಾನು ವಿಚಿತ್ರ ಪೀಕಲಾಟಕ್ಕೆ ಸಿಕ್ಕಿಕೊಂಡು ಲೋಹಿಯಾ ಏಂದ್ರೇನು, ಯಾರೀ ಲೋಹಿಯಾ, ಇವರನ್ನೇ ಯಾಕೆ ಓದಬೇಕು, ಇವರ ಚಿಂತನೆಯ ಅಗತ್ಯವಿಲ್ಲದೆ ಮುಂದಿನ ಹೆಜ್ಜೆ ಸಾಧ್ಯವಿಲ್ಲವೆ ಎಂದೆಲ್ಲಾ ಪ್ರಶ್ನೆಗಳು ತಲೆಯಲ್ಲಿ ತುಂಬಿಕೊಂಡು ಲೋಹಿಯಾರನ್ನು ಓದಹತ್ತಿದೆ. ಸಾಹಿತ್ಯದ ಮೂಲಕವೆ ಎಲ್ಲವೂ ಸಾಧ್ಯ ಎಂದು ಕೊಂಡಿದ್ದ ನನಗೆ ಆ ಮಾತುಗಳು ಪೊಳ್ಳೆನಿಸಿತು. ಹೌದು ವಚನ, ಬಂಡಾಯ, ದಲಿತ, ನವ್ಯ, ನವೋದಯ ಎಲ್ಲವೂ ಬದಲಾವಣೆಯ ದಿಕ್ಕಿನ ಒಂದು ಭಾಗವಾಗುತ್ತಾ ಹೋಗುತ್ತವೆ, ಆದರೆ ಈ ಬದಲಾವಣೆಯ ಎಲ್ಲವೂ ಸಾಹಿತ್ಯವೇ ಆಗಿರುವುದಿಲ್ಲ. ಇವೆಲ್ಲವು ಸಂಪೂರ್ಣ ಭಾರತದ ಕಲ್ಪನೆಯಲ್ಲಿ ಒಂದಿಲ್ಲೊಂದು ಲಿಂಕ್ ಕಳೆದುಕೊಳ್ಳುತ್ತಾ ಹೋಗುತ್ತಿವೆ. ಈ ಕಾರಣಕ್ಕಾಗಿಯೇ ಚಾಮರಾಜ ನಗರದಲ್ಲಿ ಸಮಾಜವಾದಿ ಅಧ್ಯಯನ ಕೇಂದ್ರ ರೂಪುಗೊಂಡಿದ್ದು. ನಮ್ಮ ಕಾಲಕ್ಕೆ ಸಂಘಟನೆ, ಚಳವಳಿ ಜಾತಿಪದ್ಧತಿ, ಸ್ತ್ರೀಸಮಾನತೆ, ರಾಜಕಾರಣ ಇವೆಲ್ಲವೂ ಶೋಕಿಯ ಪದಗಳಂತೆ ಕಾಣಿಸುತ್ತಿದ್ದವು. ಎಲ್ಲರ ನಡುವೆ ಇದಾವ ಪದಗಳನ್ನು ಬಳಸದೆ ಸಹಜವಾಗಿ ಎಲ್ಲರ ಮಧ್ಯದಲ್ಲಿ ಬದುಕುವವರಿಗೆ ಈ ಮಾತುಗಳು ಬೊಗಳೆಗಳಂತೆಯೇ ಕಾಣಿಸುತ್ತಿದ್ದವು. ಸಭ್ಯಸ್ಥರಂತೆ ಕಾಣುವವರು ಈ ಪದಗಳನ್ನು ಬಳಸಿದರೆ ಪಿಚ್ಚೆನಿಸುತ್ತಿತ್ತು.

ಲೋಹಿಯಾ ಓದಿನ ನಂತರವೇ ಇವೆಲ್ಲವುಗಳ ಮಹತ್ವ ತಿಳಿಯುತ್ತಾ ಹೋದದ್ದು. ಲೋಹಿಯರ ಚಿಂತನೆ, ಚಳವಳಿ, ಸಂಘಟನೆ, ಜಾತಿಪದ್ಧತಿ, ಅದರ ನಿರ್ಮೂಲನೆ,

ಇತಿಹಾಸ, ರಾಜಕಾರಣ ಅರ್ಥವ್ಯವಸ್ಥೆ ಈ ಕುರಿತ ನಿಜವಾದ ಕಾಳಜಿ ಇರುವವನು ಉಡಾಫೆಯಾಗಿ ಮಾತನಾಡಲಾಗದ ನಡೆ ಮತ್ತು ನುಡಿ ಎರಡೂ ಒಂದೆ. ಅವು ಯಾವಾಗಲು ಬೇರೆ ಬೇರೆಯಾಗಿರದೆ ಎಲ್ಲವೂ ತನ್ನನ್ನು ಒಳಗೊಂಡತೆಯೇ ತನ್ನನ್ನು ತಾನು ಪ್ರಶ್ನಿಸಿಕೊಳ್ಳುವಂತೆ ಮಾಡುತ್ತವೆ. ಲೋಹಿಯಾರ ಚಿಂತನೆಯ ಪ್ರಭಾವಕ್ಕೊಳಗಾದವರೆಲ್ಲಾ ಇಡುವ ಒಂದೊಂದು ಹೆಜ್ಜೆಯಿಂದ ಒಬ್ಬೊಬ್ಬ ಲೋಹಿಯಾ ರೂಪುಗೊಳ್ಳುತ್ತಾ ಹೋಗುತ್ತಾರೆ. ಹೀಗೆ ಎಲ್ಲವೂ ಆಯಾ ಕಾಲಘಟಕ್ಕೆ ಬೇರೆ ಬೇರೆ ರೂಪಗಳನ್ನು ಪಡೆದುಕೊಳ್ಳುತ್ತಾ ಮತ್ತೊಂದು ತಲೆಮಾರಿನ ತನಕ ಅಂದರೆ ಭೂತ, ವರ್ತಮಾನ, ಭವಿಷ್ಯತ್‌ಕಾಲಕ್ಕೆ ತಕ್ಕಂತೆ ಲೋಹಿಯಾ ಪ್ರಸ್ತುತರಾಗುತ್ತಾ ಹೋಗುತ್ತಾರೆ, ಲೋಹಿಯಾರ ಎಲ್ಲಾ ಚಿಂತನ ಕ್ರಮಗಳು ಗಾಂಧಿಯೊಂದಿಗೆ ಮಿಳಿತಗೊಂಡಿರುವುದರಿಂದ ಲೋಹಿಯಾರ ಚಿಂತನೆಯ ದಾರಿ ಮುಳ್ಳುಗಳಿಲ್ಲದಂತೆ ಗಾಂಧಿಯೊಳಗೆ ಪ್ರವೇಶ ಮಾಡಲು ಅನುವು ಮಾಡಿಕೊಡುತ್ತವೆ.

ಎಲ್ಲೊ ಒಂದು ಪ್ರಾಂತ್ಯದಲ್ಲಿ ಬಂಜೆ ಹತ್ತಿ ಬೀಜ ನೀಡಿದ ಕಂಪನಿಯ ವಿರುದ್ಧ ಗ್ರಾಹಕರ ವೇದಿಕೆಯಲ್ಲಿ ಹೂಡುವ ವಕಾಲತ್ತು, ವಿದೇಶಿ ತಳಿ ವಿರುದ್ಧ ಬೀದಿಗಿಳಿದು ಚಳವಳಿ ಮಾಡುವ ಬದಲು ಅದರ ಸಂಪೂರ್ಣ ಅಧ್ಯಯನ ಮಾಡಿ ಆ ವಿದೇಶಿ ತಳಿಯನ್ನು ನಿರಾಕರಿಸಿ ಸಹಜವಾಗಿಯೇ ಸಹಜ ಕೃಷಿಯನ್ನು ಅನುಸರಿಸವುದು. ಭಾಷೆ ಶಿಕ್ಷಣದ ಆಶಯ ಅದಕ್ಕೆ ಇರುವ ತೊಡಕುಗಳು ಇವುಗಳು ಅಧ್ಯಯನ; ಹಾಗೆಯೇ ಅಧಿಕಾರ ಅನ್ನುವುದು ರಾಜ್ಯ ರಾಜಧಾನಿಯ ಕೇಂದ್ರ ಭಾಗವಾಗದೆ ಆಯಾ ಜಿಲ್ಲೆಯ ಆಯಾ ಗ್ರಾಮದ ಭಾಗವಾಗಿ, ಅಲ್ಲಿನ ಅರಣ್ಯ, ನೀರು, ಗಣಿ, ಬೆಳೆ, ಆಯಾ ಗ್ರಾಮ ಆಯಾ ಜಿಲ್ಲೆಯ ಅಭಿವೃದ್ದಿಗೆ ಬಳಕೆಯಗಿ ಉಳಿದ ಸಂಪತ್ತು ರಾಜಧಾನಿಗೆ ತಲುಪುವಂತೆ ಅಧಿಕಾರ ವಿಕೇಂದ್ರೀಕರಿಸುವ ಕಲ್ಪನೆ ಇವೆಲ್ಲವೂ ಲೋಹಿಯಾರ ಚಿಂತನೆಯ ಒಂದು ಭಾಗವಾದಂತೆ ಆ ಮೂಲಕ ಅದರ ಚಿಂತನೆಯು ಮುಂದಿನ ಹೆಜ್ಜೆಯನ್ನು ಮೂಡಿಸುವಂತೆ ಕಾಣಿಸುತ್ತವೆ.

–ರವಿಚಂದ್ರ ಚಿಕ್ಕೆಂಪ್ಪಿಹುಂಡಿ

ಲೋಹಿಯಾ....

ನಿನ್ನದು
ಮಾತಿನ ಕ್ರೇನುಗಳಿಂದ ಸ್ವರ್ಗವನ್ನೆ ಇಲ್ಲಿಗೆ
ಇಳಿಸಿ, ಆ ದಡಕ್ಕೂ ಈ ದಡಕ್ಕೂ–ಸೇತುವೆ ಕಟ್ಟುವೆನೆಂಬ
ಮೋಸದ ಸಮನ್ವಯದ ಸಮತಾವಾದದ
ಒಡವೆ ಬೆಡಗಾಗುವಂಥ

ಜವಹರದ ಆಡಂಬರವಲ್ಲ;ಈ ನೆಲದ
ರಸಹೀನ ಬಂಜೆತನಕ್ಕೆ ಮದ್ದಾಗುವ
ನೇಗಿಲಾಗುವ, ಚಹರೆಯಿಲ್ಲದೀ ಜನಕ್ಕೆ
ರೂಹು ಕೊಡುವ, ಸುತ್ತಿಗೆಯಾಗುವ
ಕುಡುಗೋಲಾಗುವ ಅಚ್ಚ ಕರಿ ಲೋಹ
ಕಂಡ್ಯಾ.


ಪಶ್ಚಿಮದಿಂದಾರೇನು ಪೂರ್ವದಿಂದಾರೇನು
ಕೊಡುತ್ತೇವೆಂಬ ದಿಕ್ಕಿಗೆ ಜೋಳಿಗೆ ಹಿಡಿವ ಈ ಜಂತುಹುಳು ಜೀವನಕ್ಕೆ
ವಿರೇಚಕವಾಗಿದ್ದ
ನಿನ್ನ ಮಾತು
ಅಧರಕ್ಕೆ ಕಹಿ ಉದರಕ್ಕೆ ಸಿಹಿ.


ಹೀಗಾದಾಗ
ಇರುವೆ ಆನೆಯನ್ನು ನುಂಗುವ
ಇಲಿಗೆ ಹೆದರಿ ಬೆಕ್ಕು ಓಡುವ
ಹಸು ಕಂಡು ಹುಲಿ ಹುಲ್ಲೆಯಾಗುವ
ಪವಾಡ ಕಂಡೆ,
ನಾನು.
ಅಯ್ಯಾ
ನೀನಿಲ್ಲದೀಗ, ಈ ಅಡವಿಯಲ್ಲಿ
ಮತ್ತೆ ಆನೆ ಬೆಕ್ಕು ಹುಲಿ ಓಡಾಟ
ನಿರಾಕುಳ, ಮತ್ತೊಬ್ಬನಿಲ್ಲವೆನಿಸಿ
ನಿನ್ನಂಥ ಜಾಡಮಾಲಿ,
ನೀನು ಪಂಚತ್ವವನ್ನು ಪಡೆದೀ ಸಂದರ್ಭದಲ್ಲಿ
ಎರಡು ಹನಿ ಕಣ್ಣೀರಿಟ್ಟು ಕೋಣೆಯ
ಕಸಗುಡಿಸಲು ಕೈಗೆ
ಕಸಬರಿಗೆ ತೆಗೆದುಕೊಳ್ಳುತ್ತೇನೆ
ನಾನು.

–ಎಚ್.ಎಂ.ಚನ್ನಯ್ಯ

(ಸೋಷಲಿಸ್ಟ್ ಪಾರ್ಟಿ(ಕರ್ಣಾಟಕ)ಯ ರಾಜ್ಯ ಸಮ್ಮೇಳನ–೧೯೭೩ರ ಸ್ಮರಣ ಸಂಚಿಕೆಯಿಂದ)

ಲೋಹಿಯಾ
ಚಿತ್ರಸಂಪುಟ





ಗಾಂಧೀಜಿಯೊಂದಿಗೆ ನೌಖಾಲಿಯಲ್ಲಿ.




ಜೆಪಿ, ಆಚಾರ್ಯ ನರೇಂದ್ರದೇವ ಹಾಗೂ
ಸಂಪೂರ್ಣಾನಂದರೊಂದಿಗೆ




. ಜೆಪಿ ಮತ್ತವರ ಪತ್ನಿ ಪ್ರಭಾವತಿಯವರೊಂದಿಗೆ



ಗೋವಾ ಹೋರಾಟದ ಸಂದರ್ಭದಲ್ಲಿ




ಅಶೋಕ ಮೆಹ್ತಾ ಅವರೊಂದಿಗೆ




ಪಕ್ಷದ ಕಾರ್ಯಕರ್ತರ ಸಭೆಯಲ್ಲಿ



ಯೂಸುಫ್ ಮೆಹ್ರೋಲಿಯೊಂದಿಗೆ ಲೂಯಿ
ಫಿಷರ್‌ರನ್ನು ಎದುರು ನೋಡುತ್ತಾ




ಜೆ.ಎಚ್.ಪಟೇಲ್, ರಬಿರಾಯ್, ಕಿಷನ್ ಪಟ್ನಾಯಕ್ ಹಾಗೂ
ರಾಜನಾರಾಯಣ್‌ರೊಂದಿಗೆ




ಜೆ.ಪಿಯವರ ಜೊತೆ ರೈತ ಮೆರವಣಿಗೆಯೊಂದರಲ್ಲಿ.



ರವಳಪ್ಪ, ಪೊನ್ನಮ್ಮಾಳ್ ಮತ್ತು ಗೋಪಾಲಗೌಡರೊಂದಿಗೆ.



ಗೋಪಾಲಗೌಡರೊಂದಿಗೆ.




ಜೆಪಿ., ಎಸ್.ಎಂ. ಜೋಷಿಯವರೊಂದಿಗೆ
ಪತ್ರಿಕಾಗೋಷ್ಠಿಯೊಂದರಲ್ಲಿ




ಜರ್ಮನಿಯ ಸಸ್ಯಕ್ಷೇತ್ರವೊಂದರಲ್ಲಿ ಮಧು ಲಿಮಯೆಯವರೊಂದಿಗೆ.



ಸಂಸತ್ತಿನ ಮೊಗಸಾಲೆಯಲ್ಲಿ ತಮ್ಮ ಪಕ್ಷದ ಸದಸ್ಯರೊಂದಿಗೆ.



ಕೃಷ್ಣಗೋಪಾಲ್, ಎಸ್. ವೆಂಕಟರಾಂ, ಗೋಪಾಲಗೌಡ, ಕೆ.ಜಿ. ಮಹೇಶ್ವರಪ್ಪ, ಖಾದ್ರಿ ಶಾಮಣ್ಣ, ಜೆ.ಎಚ್. ಪಟೇಲ್, ಕೋಣಂದೂರು ಲಿಂಗಪ್ಪ ಮುಂತಾದ ಕರ್ನಾಟಕದ ಸಮಾಜವಾದಿಗಳೊಂದಿಗೆ.



ಲೋಹಿಯಾರ ಶವಯಾತ್ರೆ

ಲೋಹಿಯಾ ಸಾಹಿತ್ಯ

ಇಂಗ್ಲಿಷ್‌ನಲ್ಲಿ

1. Rupees 25,000/-a day

2. Will to power

3. Guilty Men of India's partion

4. Fragments of a World Mind

5. Language

6. Caste System

7. India China and Northern Frontntiers

8. An Interval during Politics

9. Wheel of History

10. Marx, Gandhi and Socialism

11. Notes and Comments Vol. I and II

12. Foreign Policy

ಹಿಂದಿಯಲ್ಲಿ:

೧. ಖರ್ಚ್ ಪರ್ ಸೀಮಾ

೨. ಜಾತಿ–ಪ್ರಥಾ

೩. ದೇಶ್ ಗರ್ಮಾವೋ

೪. ದೇಶ–ವಿದೇಶ ನೀತಿ: ಕುಛ್ ಪಹಲೂ

೫. ನರಂ ಔರ್ ಗರಂ ಪಥ್

೬. ಭಾರತ್ ವಿಭಾಜನಕೆ ಅಪರಾಧಿ

೭. ರಾಮ ಕೃಷ್ಣ ಶಿವ

೮. ಸುಗುಣ್ ಔರ್ ನಿರ್ಗುಣ್

೯. ಸಮ ದೃಷ್ಟಿ
೧೦. ಸಮಾಜವಾದ್ ಕಿ ರಾಜನೀತಿ
೧೨. ಸುಧಾರೋ ಅಥವಾ ಟೂಟೋ
೧೩. ಸರ್ಕಾರಿ, ಮಠೀ ಔರ್ ಕುಜಾಸ್ ಗಾಂಧೀವಾದಿ
೧೪. ಹಿಂದೂ ಔರ್ ಮುಸಲ್ಮಾನ್
೧೫. ಹಿಂದ್-ಪಾಕ್, ಯುದ್ದ್ ಜಾರ್ ಏಕಾ
೧೬. ರಾಗ, ಜಿಮ್ಮೇದಾರಿ ಕೀ ಭಾವನಾ, ಅನುಪಾತ್ ಕೀ ಸಮಝ್
೧೭. ಲೋಕಸಭಾ ಮೇ ಲೋಹಿಯಾ ಭಾಗ-೧,೨,೩.

ಕನ್ನಡ ಅನುವಾದಗಳು

೧. ರಾಜಕೀಯದ ಮಧ್ಯೆ ಬಿಡುವು; ಅಕ್ಷರ ಪ್ರಕಾಶನ, ಸಾಗರ
೨. ಇತಿಹಾಸ ಚಕ್ರ; ಅಕ್ಷರ ಪ್ರಕಾಶನ, ಸಾಗರ.
೩. ಲೋಹಿಯಾ ಕೆಂಪು ಪುಸ್ತಕ: ನೆಲಮನೆ ಪ್ರಕಾಶನ, ಮೈಸೂರು.
೪. ಜಾತಿ ಪದ್ಧತಿ: ಪತ್ರಿಕೆ ಪ್ರಕಾಶನ, ಬೆಂಗಳೂರು.
೫. ಸಮಾನತೆಯ ಅರ್ಥ: ಜನಪ್ರಕಾಶನ, ಬೆಂಗಳೂರು
೬. ಲೋಹಿಯಾ ಸಾಹಿತ್ಯ ಸಂಪುಟಗಳು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಲೋಹಿಯಾ ಕುರಿತು ಸಾಹಿತ್ಯ (ಇಂಗ್ಲಿಷ್‌ನಲ್ಲಿ)

1.Lohia-Onkar Sharad, 1972
2. Lohia- A Study - N.C. Mehrothra, 1978
3. Socialist Thought in India- The contribution of Ramamanohar Lohia- M. Armugam, 1978
4. Lohia- A Biography - Indumati Kelkar (under publication)
5. 'Lohia and America Meet'- Harris Wofford Jr. 1952

■

ನಮ್ಮ ಪ್ರಕಟಣೆಗಳು

ಕಥಾ ಸಂಕಲನ

*1.	ಕರ್ಪೂರದ ಕಾಯದಲ್ಲಿ	ಡಾ. ರಾಜಶೇಖರ ನೀರಮಾನ್ವಿ	15/-
*2.	ನೀರಮಾನ್ವಿ ಕಥೆಗಳು	ಡಾ. ರಾಜಶೇಖರ ನೀರಮಾನ್ವಿ	15/-
*3.	ನಾರೀ ಹಳ್ಳದ ದಂಡೆಯಲ್ಲಿ	ಚಂದ್ರಕಾಂತ ವಡ್ಡು	15/-
*4.	ಮಣ್ಣಿನ ಬಳೆ ಮತ್ತು ಇತರ ಕತೆಗಳು	ಶಾಂತಾರಾಮ ಸೋಮಯಾಜಿ	30/-
*5.	ಹಂಗಿನರಮನೆಯ ಹೊರಗೆ	ಡಾ. ರಾಜಶೇಖರ ನೀರಮಾನ್ವಿ	60/-
*6.	ಅನಾಥ ಪಕ್ಷಿಯ ಕಲರವ	ವೀರಭದ್ರ	125/-
*7.	ಕಾಳಬೆಳುದಿಂಗಳ ಸಿರಿ	ರಾಜಶೇಖರ ಹತಗುಂದಿ	45/-
*8.	ಹುಣದಿ	ಶಿವಕುಮಾರ ನಾಗವಾರ	60/-
*9.	ಪಟ್ಟಾ	ಚಿತ್ರಶೇಖರ ಕಂಠಿ	45/-
*10.	ಉಡಿಯಲ್ಲಿಯ ಉರಿ	ಕಲಿಗಣನಾಥ ಗುಡದೂರು	45/-
*11.	ಮಣ್ಣಿನ ಕುಡಿಕೆ	ಡಾ. ಮಲ್ಲಿಕಾರ್ಜುನ ವಣೇನೂರು	50/-
*12.	ಹಂಸೆ ಹಾರಿತ್ತು	ಬಿದರಹಳ್ಳಿ ನರಸಿಂಹಮೂರ್ತಿ	75/-
*13.	ಬಾಳೆಗಿಡ ಗೊನೆಹಾಕಿತು	ಬಿ. ಎಂ. ಬಶೀರ್	30/-
*14.	ವಾಸ್ತವದ ಕನವರಿಕೆ	ಡಿ. ಬಿ. ರಜಿಯಾ	30/-
*15.	ತಪ್ಪಂಡ	ಡಾ. ಬಸವರಾಜ ಸಾದರ	45/-
*16.	ಹುಡುಕಾಟ	ಅಬ್ಬಾಸ್ ಮೇಲಿನಮನಿ	60/-
17.	ಪ್ರಕ್ಷುಬ್ಧ ಅಲೆಗಳು	ಡಾ. ಪ್ರಹ್ಲಾದ ಅಗಸನಕಟ್ಟೆ	40/-
*18.	ಲದೇಣಿಯಾ	ಕೃಷ್ಣನಾಯಕ್	50/-
*19.	ಮೀಯುವ ಆಟ	ಡಾ. ಎಚ್. ನಾಗವೇಣಿ	60/-
*20.	ಕಾಡಿನ ಬೇರು	ಡಾ. ಶಾಂತರಸ ಹೆಂಬೇರಾಳು	35/-
21.	ವಸುಂಧರೆಯ ಗ್ಯಾನ	ಡಾ. ಎಚ್. ನಾಗವೇಣಿ	40/-
22.	ಸದ್ಯಕಿದು ಹುಚ್ಚರ ಸಂತಿ	ಹಸನ್ ನಯೀಂ ಸುರಕೋಡ	50/-
23.	ಮೋಹನ ದಾಸ	ಆರ್. ಪಿ. ಹೆಗಡೆ	50/–
24.	ಬೇರುಗಳು	ವೆಂಕಟೇಶ ಮಾಚಕನೂರ	50/–
25.	ತೂತು ಬೊಟ್ಟು	ಕಲಿಗಣನಾಥ ಗುಡದೂರು	60/-

ಕಾವ್ಯ

*26.	ಹಟವಾದಿ ಮತ್ತು ಹುಡುಗಿ	ಡಾ. ಬೂದಗುಪ್ಪ ಪ್ರಹ್ಲಾದರೆಡ್ಡಿ	60/-
*27.	ಗಾಂಧಿಯೊಂದಿಗೆ	ಪ್ರಮೋದ್ ತುರ್ವಿಹಾಳ್	30/-
28.	ಆ ಅಜ್ಜ - ಈ ಮೊಮ್ಮಗ	ಮುದೇನೂರ ಸಂಗಣ್ಣ	75/-
*29.	ತಮಾಷಾ	ವಿಕ್ರಮ ವಿಸಾಜಿ	45/-
*30.	ಜಾಲಿ ಹೂಗಳ ನಡುವೆ	ಬಿ. ಪೀರ್ ಬಾಷ	45/-
*31.	ಮರಾಠಿ ದಲಿತ ಕಾವ್ಯ	ಡಾ. ಸರಜೂ ಕಾಟ್ಕರ್	75/-
*32.	ಕೆಡಹಬಲ್ಲರು ಅವರು ಕಟ್ಟಬಲ್ಲೆವು ನಾವು	ಪ್ರೊ. ಅಲ್ಲಮಪ್ರಭು ಬೆಟ್ಟದೂರು	35/-
*33.	ಗಾಂಧೀಗಿಡ	ಸತೀಶ್ ಕುಲಕರ್ಣಿ	35/-
*34.	ಕಣ್ಣಮುಂದಿನ ಬೆಳಕು	ದಸ್ತಗೀರ್‌ಸಾಬ್ ದಿನ್ನಿ	35/-
*35.	ಸಿಸಿಫಸ್‌ರ ಸುತ್ತು	ಡಾ. ಬಸರಾಜ ಸಾದರ	50/-
*36.	ಕದವಿಲ್ಲದ ಊರಲ್ಲಿ	ಜಿ. ಕೆ. ರವೀಂದ್ರಕುಮಾರ್	75/-
*37.	ಅವ್ವ	ಡಾ. ಸರಜೂ ಕಾಟ್ಕರ್	60/-
38.	ಕಣ್ಣುಮುಚ್ಚಿ ಕಂಡವರು	ಶಂಕರ ಪಾಟೀಲ	35/-
*39.	ಸುನೀತ ಸಂಪದ	ಚೆನ್ನವೀರ ಕಣವಿ	100/-
*40.	ಮಳೆಯೇ ಮಂಟಪ	ಎಚ್. ಎಸ್. ಶಿವಪ್ರಕಾಶ್	50/-
*41.	ಬಾಂಬ್ ವಿರೋಧಿ ಪಾಕಿಸ್ತಾನಿ ಕವಿತೆಗಳು	ಡಾ. ಸರಜೂ ಕಾಟ್ಕರ್	30/-
42.	ಈ ಮಣ್ಣು ಅಪ್ಪಿಕೊಳ್ಳುವ ಮುನ್ನ...	ಗವಿಸಿದ್ಧ ಎನ್. ಬಳ್ಳಾರಿ	75/-
*43.	ಮಗುಮಲಗಿದೆ ಎದೆಯಮೇಲೆ	ಎಂ. ಡಿ. ಒಕ್ಕುಂದ	35/-
44.	ಚಿತ್ತಾರ	ಡಾ. ಸಬಿಹಾ ಭೂಮಿಗೌಡ	40/-
45.	ಬಾಗಿಲಾಚೆಯ ಮೌನ	ರೂಪ ಹಾಸನ	50/-
46.	ಕಂಪನಿ ಸವಾಲ್	ಸತೀಶ ಕುಲಕರ್ಣಿ	50/-

*47. ನೂರು ಗೋರಿಯ ದೀಪ	ಡಾ. ವಿನಯಾ	35/-
*48. ಉರಿವ ಒಲೆಗಳ ಮುಂದೆ	ಆರ್. ನಿರ್ಮಲ	25/-
*49. ಗಾಂಧೀ ಟು ಗೋದ್ರಾ	ಡಾ. ಸರಜೂ ಕಾಟ್ಕರ್	35/–
50. ದರುಶನ	ಸವಿತಾ ನಾಗಭೂಷಣ	40/–
51. ಲೋಹದ ಕಣ್ಣು	ಡಾ. ಎಚ್. ಎಲ್. ಪುಷ್ಪ	50/–
52. ಪುಟಾಣಿ ಕೆಂಪು ಶೂ	ಛಾಯಾ ಭಗವತಿ	30/–
53. ಕಡಲಿಗೆಷ್ಟೊಂದು ಬಾಗಿಲು	ರೂಪ ಹಾಸನ	50/-
54. ರಜಿಯಾ ಅವರ ಕವಿತೆಗಳು	ಡಿ. ಬಿ. ರಜಿಯಾ	50/-

ಕಾದಂಬರಿ

*55. ಮಾಂಡೋವಿ	ರವಿ ಬೆಳಗೆರೆ	60/-
*56. ಶಾಮಣ್ಣ	ಕುಂ. ವೀರಭದ್ರಪ್ಪ	175/-
57. ಗಾಂಧಿ ಬಂದ	ಎಚ್. ನಾಗವೇಣಿ	175/-
58. ಬದುಕು	ಗೀತಾ ನಾಗಭೂಷಣ	216/-
59. ಹುತ್ತ	ಬಾಳಾಸಾಹೇಬ ಲೋಕಾಪುರ	100/-
*60. ಲೋಟಸ್ ಪಾಂಡ್	ತಾರಾಭಟ್	50/-
*61. ಚಾಕ್ರಿ ನಿಂಬವ್ವ	ಬ್ರಹ್ಮದೇವ್ ಹದಳಗಿ	30/-
*62. ರಂಗನೋ ಮಲೆ ಮಂಗನೋ!	ಮುಹಮ್ಮದ್ ಕುಳಾಯಿ	30//-
*63. ಕೆರೂರುನಾಮಾ	ಚಂದ್ರಕಾಂತ ಕುಸನೂರ	60/-
*64. ಅತಂತ್ರ	ಗುರುರಾಜ ಮಾರ್ಪಳ್ಳಿ	50/-
65. ಜನ್ನತ್ ಮೊಹಲ್ಲಾ	ಅಬ್ಬಾಸ್ ಮೇಲಿನಮನಿ	100/–

ಪ್ರವಾಸ ಕಥನ

66. ನನ್ನೊಳಗಿನ ಹಾಡು ಕ್ಯೂಬಾ	ಜಿ. ಎನ್. ಮೋಹನ್	50/-
*67. ಪಂಚಮುಖಿ ಪಂಜಾಬ್	ಜಿ. ಪಿ. ಬಸವರಾಜು	60/-
*68. ನಾ ಕಂಡ ಬ್ರಝಿಲ್	ಡಾ. ಸಿ. ನಾಗಭೂಷಣ	60/-
69. ಥೇಮ್ಸ್‌ದಿಂದ ಟೈಬರ್‌ವರೆಗೆ	ವೆಂಕಟೇಶ ಮಾಚಕನೂರ	50/-
70. ಆಗ್ನೇಯದಂಗಳದಲ್ಲಿ	ವೆಂಕಟೇಶ ಮಾಚಕನೂರ	60/-
71. ಕುಲು ಕಣಿವೆಯಲ್ಲಿ	ಜಿ.ಪಿ. ಬಸವರಾಜು	60/–


ವೈಚಾರಿಕ ಮತ್ತು ಇತರೆ

72. ಲೋಹಿಯಾ	ಹಸನ್‌ನಯೀಂ ಸುರಕೋಡ	120/-
*73. ಸರಳಸಿದ್ಧರಾಮ ಚರಿತೆ	ಡಾ. ಎಲ್. ಬಸವರಾಜು	60/-
*74. ಶ್ರೀ ಮಧುರಚೆನ್ನರ ಸ್ಮೃತಿಗಳು	ಡಾ. ಸಿಂಪಿ ಲಿಂಗಣ್ಣ	60/-
*75. ಕಾಡು ಮತ್ತು ತೋಪು	ವಿ. ಚಂದ್ರಶೇಖರ ನಂಗಲಿ	90/-
*76. ಅಮೃತ ಮತ್ತು ವಿಷ	ರಂಜಾನ್ ದರ್ಗಾ	75/-
*77. ಶತಮಾನ	ಮೊಗಳ್ಳಿ ಗಣೇಶ	50/-
*78. ಅಣುವೆಂಬ ಸದ್ದಿಲ್ಲದ ಸಾವ ಕುರಿತು	ಎನ್. ಜಗದೀಶ ಕೊಪ್ಪ	25/-
79. ನಿರ್‌ಬೀಜೀಕರಣದ ವಿರಾಟ್ ಸ್ವರೂಪ	ವಿ. ಚಂದ್ರಶೇಖರ ನಂಗಲಿ	12/-
*80. ಬುದ್ಧ ಚರಿತ	ಡಾ. ಎಲ್. ಬಸವರಾಜು	180/-
81. ಸೌಂದರನಂದ	ಡಾ. ಎಲ್. ಬಸವರಾಜು	150/-
*82. ನೀರದೀವಿಗೆ	ಡಾ. ಕೆ. ವೈ. ನಾರಾಯಣಸ್ವಾಮಿ	100/-
*83. ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ	ಜಸ್ಟೀಸ್ ಸಿಂಗ್	25/-
*84. ಅಲ್ಲಮ್ಮನ ವಚನ ಚಂದ್ರಿಕೆ	ಡಾ. ಎಲ್. ಬಸವರಾಜು	250/-
85. ಸೂಳೆ ಸಂಕವ್ವೆ (ನಾಟಕ)	ಮುದೇನೂರ ಸಂಗಣ್ಣ	50/-
86. ಚಾತುರ್ವರ್ಣ ಧರ್ಮದರ್ಶನ	ಕುಮಾರ ಕಕ್ಕಯ್ಯ ಪೋಳ	75/-
*87. ನಾ ನಿಮ್ಮೊಳಗು	ಪ್ರೊ. ವಿ. ಚಂದ್ರಶೇಖರ ನಂಗಲಿ	100/-
*88. ಬಗೆ	ಡಾ. ಸಬಿಹಾ ಭೂಮಿಗೌಡ	60/-
*89. ಹಣತೆ: ಜಿ.ಎಸ್.ಎಸ್. ಅಭಿನಂದನ ಗ್ರಂಥ		300/-
*90. ಎಸ್. ನಿಜಲಿಂಗಪ್ಪ : ಒಂದು ಅಧ್ಯಯನ	ಕೋ. ಚೆನ್ನಬಸಪ್ಪ	125/-
91. ಬಸವಪ್ರಜ್ಞೆ	ರಂಜಾನ್ ದರ್ಗಾ	15/-
92. ಹುತಾತ್ಮ ಭಗತ್‌ಸಿಂಗ್	ಜಿ. ಪಿ. ಬಸವರಾಜು	60/-

*93.	ಗುಣಗೌರವ	ಜಿ. ಎಚ್. ನಾಯಕ	75/-
*94.	ಜೀವನಸಂಧ್ಯಾ	ಡಾ. ಕೃಷ್ಣಮೂರ್ತಿ ಕಿತ್ತೂರ	75/-
*95.	ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ	ಡಾ. ಜೆ. ಎಂ. ನಾಗಯ್ಯ	100/-
*96.	ನೊಂದವರ ನೋವು	ಮೂಡ್ನಾಕೂಡು ಚಿನ್ನಸ್ವಾಮಿ	60/-
*97.	ಸಾಕ್ಷಿ	ಡಾ. ಸರಜೂ ಕಾಟ್ಕರ್	50/-
98.	ಸಲ್ಲಲಿತ ಸನ್ಮಾರ್ಗ	ಚೆನ್ನಬಸವಪ್ಪ ಬೆಟ್ಟದೂರು	30/-
*99.	ಪ್ರೇಮಲೋಕದ ಮಾಯಾವಿ	ಹಸನ್ ನಯೀಂ ಸುರಕೋಡ	45/-
*100.	ಶರಣ ಬಂಡಾಯ	ಡಾ. ಸರಜೂ ಕಾಟ್ಕರ್	50/-
*101.	ಜಯಪ್ರಕಾಶ್ ನಾರಾಯಣ	ಡಿ. ಎಸ್. ನಾಗಭೂಷಣ	100/-
*102.	ಬೆಳಗಿನ ಬೆರಗು	ಜಿ. ಎನ್. ಮಲ್ಲಿಕಾರ್ಜುನ	75/-
*103.	ರಸೀದಿ ತಿಕೀಟು	ಹಸನ್‌ನಯೀಂ ಸುರಕೋಡ	100/-
*104.	ನಡುಹಗಲಿನಲ್ಲಿ ಕಂದೀಲುಗಳು	ಡಾ. ರಾಜೇಂದ್ರ ಚೆನ್ನಿ	125/-
*105.	ಕುವೆಂಪು-ಒಂದು ಪುನರನ್ವೇಷಣೆ	ಡಿ.ಎಸ್. ನಾಗಭೂಷಣ	150/-
106.	ಬಸವಣ್ಣನವರ ದೇವರು	ರಂಜಾನ್ ದರ್ಗಾ	15/-
*107.	ಹಿಂದೂ ಮಂದಿರಗಳು ಹಾಗೂ ಔರಂಗಜೇಬನ ಆದೇಶಗಳು	ಹಸನ್ ನಯೀಂ ಸುರಕೋಡ	20/-
108.	ನಮ್ಮೊಡನೆ ನಮ್ಮನುಡಿ	ಡಾ. ಕೆ. ವಿ. ನಾರಾಯಣ	50/-
*109.	ಅನೇಕ	ಡಿ. ಎಸ್. ನಾಗಭೂಷಣ	125/-
*110.	ಖರೇ ಖರೇ ಸಂಗ್ಯಾ-ಬಾಳ್ಯಾ	ಡಾ. ಎಂ.ಎಂ. ಕಲಬುರ್ಗಿ	30/-
111.	ಶಿವಾಜಿ ಮೂಲ ಕನ್ನಡ ನೆಲ	ಡಾ. ಸರಜೂ ಕಾಟ್ಕರ್	100/-
*112.	ಅಯೋಧ್ಯೆ-ವಿನಾಶಕಾರಿ ವೋಟ್ ಬ್ಯಾಂಕ್ ರಾಜಕೀಯ	ಹಸನ್ ನಯೀಂ ಸುರಕೋಡ	25/-
113.	ಮನೆಯೊಡೆಯನಿದ್ದಾನೋ	ಎಸ್.ಜಿ. ಮೈಸೂರು ಮಠ	150/-
114.	ಲಿಂಗವ ಪೂಜಿಸಿ ಫಲವೇನಯ್ಯಾ?	ರಂಜಾನ್ ದರ್ಗಾ	25/–
115.	ಅರಿವಿನ ನಡೆ	ಡಾ. ಕವಿತಾ ರೈ	50/–
116.	ಬದುಕಿಗಾಗಿ ಶಿಕ್ಷಣ	ಅರವಿಂದ ಚೊಕ್ಕಾಡಿ	40/–
117.	ಕರ್ನಾಟಕ ಏಕೀಕರಣ	ಕೋ. ಚನ್ನಬಸಪ್ಪ	60/–
*118.	ಮರಳಿ ಬರಲಿದೆ ಸಮಾಜವಾದ	ಡಿ. ಎಸ್. ನಾಗಭೂಷಣ	60/–
119.	ಬಸವ ಧರ್ಮದ ವಿಶ್ವ ಸಂದೇಶ	ರಂಜಾನ್ ದರ್ಗಾ	15/–
120.	ರೈತ ಭಾರತ : ಅವಸಾನದ ಅಂಚಿನಲ್ಲಿ	ಡಿ.ಎಸ್. ನಾಗಭೂಷಣ	20/–
121.	ಆ ಗಣರಾಜ್ಯ – ಈ ಕರ್ನಾಟಕ	ಡಿ.ಎಸ್. ನಾಗಭೂಷಣ	60/–
122.	ಪಡುವಣದ ಕಡಲು	ಸುನಂದಾ ಪ್ರಕಾಶ ಕಡಮೆ	45/–
123.	ಇಸ್ಲಾಂ : ಹುಟ್ಟು ಮತ್ತು ವಿಕಾಸ	ಹನಸ್ ನಯೀಂ ಸುರಕೋಡ	125/–
124.	ವಸಿಷ್ಠರು ಮತ್ತು ವಾಲ್ಮೀಕಿಯರು	ಡಿ.ಎಸ್. ನಾಗಭೂಷಣ	150/–
125.	ಕೋಮು ಗಲಭೆಗಳು ಹಾಗೂ ಭಾರತದ ಪೋಲೀಸರು	ಹಸನ್ ನಯೀಂ ಸುರಕೋಡ	60/–
126.	ರಂಗಕೋಗಿಲೆ ಜುಬೇದಾಬಾಯಿ	ವೀಣಾ ಕುಲಕರ್ಣಿ	45/–
127.	ಪ್ರತಿಚಿಂತನೆ	ಹನಸ್ ನಯೀಂ ಸುರಕೋಡ	150/–
128.	ಇಲ್ಲದ ತೀರದಲ್ಲಿ	ಅರವಿಂದ ಚೊಕ್ಕಾಡಿ	60/–
129.	ಕರ್ಪೂರಿ ಠಾಕೂರ್ ಹಾಗೂ ಸಮಾಜವಾದ	ಹನಸ್ ನಯೀಂ ಸುರಕೋಡ	150/–
130.	ಮೂರನೆಯ ಇರವು	ಅರವಿಂದ ಚೊಕ್ಕಾಡಿ	40/–
131.	ರಾಜಕೀಯದ ಮಧ್ಯೆ ಬಿಡುವು	ಎಂ.ಪಿ. ಪ್ರಕಾಶ್	100/–
132.	ಕೌದಿ ಕಂಬಳಿ	ವೆಂಕಟೇಶ ಮಾಚಕನೂರ	50/–
133.	ನಾನು ಪಾಟೀಲ ಪುಟ್ಟಪ್ಪ	ಡಾ. ಸರಜೂ ಕಾಟ್ಕರ್	200/–
134.	ಬೆಳಗು (ನಾಟಕ)	ಡಾ. ಬಸವಪ್ರಭು ಪಾಟೀಲ ಬೆಟ್ಟದೂರು	40/–
135.	ಎರಡು ಕಿರು ನಾಟಕಗಳು	ಎಸ್. ಮಾಲತಿ	25/–
136.	ಹೊಸ ದಿಕ್ಕು	ಎಸ್. ಮಾಲತಿ	75/–
137.	ನೀಲಗಂಗಯ್ಯ ಪೂಜಾರ್	ಬಿ. ಪೀರ್‌ಬಾಷ	60/–
138.	ಲೋಹಿಯಾ : ವ್ಯಕ್ತಿ–ವಿಚಾರ–ವಿಮರ್ಶೆ	ಸಂ. : ಡಿ.ಎಸ್. ನಾಗಭೂಷಣ	150/–
139.	ನೆನಪುಗಳು : ಚಂಪಾ ಲಿಮಯೆ	ಅನು : ಡಾ. ಸರಜೂ ಕಾಟ್ಕರ್, ಪ್ರೊ. ಎ.ಬಿ. ಘಾಟಗೆ	60/–

* ಪ್ರತಿಗಳು ಮುಗಿದಿವೆ

ಪುಸ್ತಕ ಸಂಸ್ಕೃತಿಯ ಪ್ರತೀಕ



ಪಿಯುಸಿ ಫೇಲಾಗಿದ್ದ ನಾನು ಲೋಹಿಯಾ ಅವರು ತೀರಿಕೊಂಡ ದಿನ ಅವರ ಬಗ್ಗೆ ಬಂದಿದ್ದ ಸುದ್ದಿ ಲೇಖನ ಓದಿ ಲೋಹಿಯಾ ಬಗ್ಗೆ ಸೆಳತಕ್ಕೊಳಗಾದೆ, ಅವರ ಭೌತಿಕ ಶರೀರ ಗತಿಸಿದ ದಿನವಾದ್ದರಿಂದ ಬಹುಶಃ ಅವರ ಪ್ರಜ್ಞೆಯೊಡನೆ.

.....ಈಗ ಲೋಹಿಯಾ ಅವರ ನೆನಪನ್ನು ದಸಂಸದ ಒಂದು ಬಣ ಆಚರಿಸುವಷ್ಟಕ್ಕೆ ಬಂದಿದೆ! ನನಗೆ ಇಂದು ಇಲ್ಲಿ ಅನಿಸುತ್ತಿದೆ– ಇದು ಸಾಲದು! ಗಾಂಧಿಯನ್ನು ಎಷ್ಟು ಕತ್ತರಿಸಿ ಎಷ್ಟು ಉಳಿಸಿಕೊಳ್ಳಬೇಕು ಎಂಬುದಕ್ಕೆ ಲೋಹಿಯಾ, ಯಾರ ನಾಯಕತ್ವ, ಯಾರಿಗೆ ತಲುಪಿಸಬೇಕು ಎಂಬುದಕ್ಕೆ ಅಂಬೇಡ್ಕರ್ ಈ ಮೂವರ ಸಾರವನ್ನೂ ಕರಗಿಸಿ ಒಂದು ಹೊಸ ನಾಣ್ಯವನ್ನು ತಯಾರಿಸಿದರೆ ಇದು ನಡೆಯಬಹುದೇನೋ ಎಂಬ ಆಸೆಯಾಗುತ್ತಿದೆ.

ಗಾಂಧಿ ಅಂಬೇಡ್ಕರ್ ಲೋಹಿಯಾ ಕರಗಿಸಿ ನಾಣ್ಯ ಮಾಡಿ ಚಲಾವಣೆಗೆ ತರುವ ಬಗ್ಗೆ ಪ್ರಸ್ತಾಪಿಸಿದೆ. ಇಲ್ಲಿ ಲೋಹಿಯಾ ಸ್ವಚ್ಛಂದತೆಗೆ ಮಿತಿ ಹಾಕುವುದೂ, ಕಮ್ಯುನಿಸ್ಟ್ ಸಂಘಟನೆಯ ಬಿಗಿ ರಚನೆಯನ್ನು ಉದಾರಗೊಳಿಸಿ ಸ್ವೀಕರಿಸುವುದೂ ಅಗತ್ಯವಿದೆ. ಇದನ್ನು ಹೇಗೆ ಮಾಡಬೇಕು? ಯಾರು ಮಾಡಬೇಕು? ಉದಾಹರಣೆಗೆ ಹೇಗೆ ಎಂಬುದಕ್ಕೆ ಹೀಗೂ ಇರಬಹುದೇ ಅಂತ ಒಂದು ಉದಾಹರಣೆ ಕೊಡುವೆ. ಹಿಂದ್ ಸ್ವರಾಜ್ ಬಗ್ಗೆ ಓದುತ್ತೇವೆ, ಚರ್ಚಿಸುತ್ತೇವೆ, ವಾದಿಸುತ್ತೇವೆ. ವಿವಾದವೂ ಆಗುತ್ತದೆ. ಇದರ ಬದಲಾಗಿ ಹಿಂದ್ ಸ್ವರಾಜ್ ಅನ್ನು ರೂಪಕವಾಗಿ ಒಳಗಿಟ್ಟುಕೊಂಡು ಆ ಒಳ ನಸುಬೆಳಕಿನಲ್ಲಿ ಹೊರಜಗತ್ತಿನ ಕತ್ತಲನ್ನು ಬೆಳಕಾಗಿಸಲು ಸ್ವಾವಲಂಬನೆ ಸಮಾನತೆ ಸ್ವಾತಂತ್ರ್ಯವ ಹೆಚ್ಚಿಸಲು ಒದ್ದಾಡಬಹುದಲ್ಲವೇ? ಈ ಒದ್ದಾಟದಲ್ಲಿ ನಾಗಾರ್ಜುನನ ಬೌದ್ಧಿಕ ಪ್ರಖರತೆಯ ಅಭಿವ್ಯಕ್ತಿಗೆ ಬದಲಾಗಿ ಬುದ್ಧನ ಹೃದಯ ಮಿಡಿತವು ಮಾತುಗಳಾದ ಪರಿಯು ಹೆಚ್ಚು ಮುಟ್ಟಬಹುದಲ್ಲವೇ?

–ದೇವನೂರ ಮಹಾದೇವ

ಲೋಹಿಯಾ ಪ್ರಕಾಶನ

ಬಳ್ಳಾರಿ

ISBN 81-87731-08-7

9788187731085

ಬೆಲೆ ರೂ. 150